ಕೇರಳ ಜಾನಪದ

ಸಂಪಾದಕ: ಡಾ. ರಾಘವನ್ ಪಯ್ಯನಾಡ್

ಅನುವಾದ: ಡಾ. ಕೆ.ಎಂ. ರಾಘವ ನಂಬಿಯಾರ್



ಕೇರಳ ಜಾನಪದ

ಅನುವಾದ ಸಂಪಾದಕರು

ಡಾ. ಕೆ. ಪ್ರೇಮಕುಮಾರ

ಸಂಪಾದಕರು

ಡಾ. ರಾಘವನ್ ಪಯ್ಯನಾಡ್

ಮಲಯಾಳದಿಂದ ಕನ್ನಡಕ್ಕೆ

ಡಾ. ಕೆ. ಎಂ. ರಾಘವ ನಂಬಿಯಾರ್

ಪ್ರಕಾಶಕರು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾಷ್ಟ್ರೀ ಹೆದಾರಿ–೪,

ಶಿಗ್ಗಾವಿ ತಾ., ಹಾವೇರಿ ಜಿ., ೫೮೧೨೦೫

Keral Janapada (kannada version of the Malayalam book ‘Kerala Folklore’ (studies in folklore) Edited by Dr. Raghavan Payyanad, Translated by Dr. K. M. Raghava Nambiar 9483032535 published by Karnataka Janapada Vishvadyalaya, Gotagodi, National Highway No.4, Shiggavi Taluk, Haveri District, Karnataka Pin: 581205. Phone:

First Print : 2013

Copy Right :

Deitor of Translation Project : Dr.K. Premakumar

Director

Janapada Bhasantara Kendra

Pages :

Price :

Cover Design :

ಫೋಕ್‌ಲೋರ್ ಫೆಲೋಸ್ ಆಫ್ ಮಲಬಾರ್ (ಟ್ರಸ್ಟ್)

ಕಾರ್ಯಕಾರಿ ಸಮಿತಿ

ಪ್ರಕಟನೆ ಸಮಿತಿ

ಪರಿವಿಡಿ

ಅನುವಾದಕನ ಅರಿಕೆ

ಓದಿಗೆ ಮುನ್ನ

ಕೇರಳವೆಂಬ ಮಲಯಾಳಂ ಆಡುನುಡಿಯ ರಾಜ್ಯದ ಜೀವನಶೈಲಿ, ವಿವಿಧ ಆಚರಣೆ ಅನುಷ್ಠಾನಗಳನ್ನು ಆಮೋದಗಳಿಗಾಗಿ ಬೆಳೆಸಿಕೊಂಡ ರೀತಿ ಮತ್ತು ಇತಿಹಾಸದ ಕತ್ತಲಕೋಣೆಗೂ ಕಿಂಡಿತೆರೆಯುವ ಗತಕಾಲದ ರೀತಿ ರಿವಾಜಿಗಳ ನೆನಪುಗಳು ಇತ್ಯಾದಿಯ ಕುರಿತಾದ ಹತ್ತು ಹಲವು ವಿಷಯಗಳ ಮೇಲೆ ಹಲವು ತಜ್ಞರು ಬರೆದ ಲೇಖನಗಳನ್ನು ಖ್ಯಾತ ಜಾನಪದ ವಿದ್ವಾಂಸ ಡಾ. ರಾಘವನ್ ಪಯ್ಯನಾಡ್ ಅವರು ಸಂಪಾದಿಸಿಕೊಟ್ಟಿರುವ ಗ್ರಂಥ 'ಕೇರಳ ಫೋಕ್‌ಲೋರ್.' ಅದನ್ನು ಮಲಯಾಳದಿಂದ ಕನ್ನಡಕ್ಕೆ ಅನುವಾದಿಸುವ ಜವಾಬ್ದಾರಿಯನ್ನು ಈ ಲೇಖಕನಿಗಿತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅನುವಾದ ಸಂಪಾದಕರಾದ ಡಾ. ಕೆ. ಪ್ರೇಮಕುಮಾರ ಅವರು ಉಪಕರಿಸಿದ್ದಾರೆ. ಅವರಿಗೆ ಅತ್ಯಂತವಾದ ಕೃತಜ್ಞತೆ ಸಲ್ಲಿಸುತ್ತೇನೆ.

ಕನ್ಯಾಕುಮಾರಿಯಿಂದ ಗೋಕರ್ಣದ ವರೆಗಿನ ಪಡುಕರಾವಳಿ ಭೂಭಾಗದ ಜನರ ಭಾಷೆಗಳು ಹಲವಾದರೂ ಸಂಸ್ಕೃತಿ ಒಂದೇ ಎಂಬುದು ಹಳಗಾಲದಿಂದಲೂ ಇರುವ ತಿಳವಳಿಕೆ. ಇದು ಈಗಲೂ ಬ್ರಾಹ್ಮಣ ಸದಸ್ಸುಗಳಲ್ಲಿ ನಿಚ್ಚಳವಾಗಿ ಪ್ರತಿಫಲಿತವಾಗುತ್ತದೆ. ಕರಾವಳಿ ಕನ್ನಡ ಜಿಲ್ಲೆಗಳ ದೇಗುಲಗಳು ಕೇರಳ ಶೈವಾಗಮ ಪ್ರಕಾರವೆ ಆರಾಧನಾಶಿಸ್ತುಗಳನ್ನು ಕಾಣುತ್ತಿವೆ. ಕನ್ನಡ, ಕೊಂಕಣಿ, ತುಳು ಪ್ರದೇಶಗಳಲ್ಲಿರುವ ಸ್ಥಳನಾಮ, ಕುಲನಾಮ, ವಾಗ್ರೂಢಿಗಳ ನಿಖರ ಅರ್ಥ ತಿಳಿಯದಿದ್ದರೆ, ಒಮ್ಮೆ ಕೇರಳದ ಕಡೆ ಆ ಶಬ್ದ-ಅರ್ಥ ಇದೆಯೆ ಎಂದು ನೋಡುವುದರಿಂದ, ಹೊಲಬು ತಿಳಿಯಬಹುದು. ಆ ದೃಷ್ಟಿಯಲ್ಲಿ ಈ ಗ್ರಂಥ ಮಹತ್ವದ್ದು.

ಮಲಯಾಳಂ ಭಾಷೆ ಮಲನಾಟ್ಟುತಮಿಳಿನ ಪರಿವರ್ತಿತ ರೂಪ. ದ್ರಾವಿಡ ಭಾಷೆಗಳಲ್ಲೆಲ್ಲ ಅರ್ವಾಚೀನ. ಇತರ ಯಾವುದೆ ದಾಕ್ಷಿಣಾತ್ಯಾ ಬಾಷೆಗಳಿಗಿಂತ ಹೆಚ್ಚು ಸಂಸ್ಕೃತ ಶಬ್ದಗಳನ್ನು ತುಂಬಿಕೊಂಡ ಭಾಷೆ. ಗ್ರಂಥಲಿಪಿ. ತಿಗಳಾರಿ, ತುಳುಲಿಪಿ ಎಂದೆಲ್ಲ ಕರೆಸಿಕೊಂಡಿರುವ, ಜರ್ಮನ್ ಮಿಶನರಿಯಿಂದ ಉರುಟಾಗಿ ತಿದ್ದಿ ಅಚ್ಚುಮೊಳೆ ರೂಪಿಸಲ್ಪಟ್ಟ, ಇಂದಿನ ಮಲಯಾಳಂ ಲಿಪಿ ಮೂಲತಃ ಸಂಸ್ಕೃತವನ್ನು ಬರೆಯಲು ರೂಪಿತವಾಗಿತ್ತು. ಆ ಲಿಪಿಯಲ್ಲಿ ಮಲಯಾಳಂ ಓದು ಮಾತ್ರ ವಿಶಿಷ್ಟರೂಪದಲ್ಲಿದ್ದು ಇತರ ಭಾಟಿಲರಿಗೆ ಅದರ ಓದು ಅಸುಲಭವೆನಿಸುತ್ತದೆ.

ಮಲಯಾಳಂ ಓದು ತಮಿಳಿನಂತೆ ಆಗಿರುತ್ತದೆ. ಓದು ಯಥಾಕ್ಷರವಲ್ಲ. 'ನಾಡು' ಎಂದು ಓದಲು 'ನಾಟು' ಎಂದು ಬರೆಯಬೇಕು. 'ಅಗಂ' ಎಂದು ಓದಲು 'ಅಕಂ' ಎಂದು ಬರೆಯುತ್ತಾರೆ. ಬಹುವಚನವಾಚಕ 'ಗಳ್' ಪ್ರತ್ಯಯವನ್ನು 'ಕಳ್' ಆಗಿ ಬರೆಯಬೇಕು. ಎರಡು ಶಬ್ದಗಳನ್ನು ಕೂಡಿಸಿ ಹೇಳುವಾಗ ಎರಡನೆ ಶಬ್ದದ ಮೊದಲ ಅಕ್ಷರಕ್ಕೆ ದ್ವಿತ್ವ ಬರುವುದು ಪದ್ಧತಿ. ಹಾಗೆ ಕಳರಿ+ಪಯಱ್ಱು ಎಂಬುದು 'ಕಳರಿಪ್ಪಯಱ್ಱು' ಆಗುತ್ತದೆ. ಮೂರು ಶಬ್ದಗಳು ಸೇರುವಾಗ ಮೂರನೆ ಶಬ್ದದ ಪ್ರಥಮಾಕ್ಷರವೂ ದ್ವಿತ್ವ ಪಡೆಯುತ್ತದೆ. ಉದಾಹರಣೆಗೆ 'ವಾೞಪ್ಪೞಕ್ಕೊಲ' (ಬಾಳೆಹಣ್ಣಿನಗೊನೆ).

ಕನ್ನಡದಲ್ಲಿ ಬಳಕೆಯಿಂದ ಕೈಬಿಟ್ಟಿರುವ ೞ, ಱ ಅಕ್ಷರಗಳು, ತಮಿಳಿನಂತೆ ಮಲಯಾಳದಲ್ಲೂ ಪ್ರಾಧಾನ್ಯದೊಂದಿಗೆ ಉಳಿದುಕೊಂಡಿವೆ. ಉದಾಹರಣೆಗೆ ವಾೞ (ಬಾಳೆ, ವೞೆ (ದಾರಿ), ಮುಱ (ಮೊರೆ,

ತಲೆಮೊರೆ), ಕಱ (ಕಲೆ, ಬಟ್ಟೆಯಕಲೆ) ಇತ್ಯಾದಿ. ಆ ಅಕ್ಷರಗಳನ್ನು ಕ್ರಮವಾಗಿ 'ಳ' ಮತ್ತು 'ರ' ಗಳಲ್ಲಿ ಕನ್ನಡ ಅಂತರ್ಗತಗೊಳಿಸಿಬಿಟ್ಟಿದೆ. ಆದರೆ 'ಱ' ಇರುವಲ್ಲಿ 'ರ' ಹಾಕಿದರೆ ಮಲಯಾಳದ ಉಚ್ಚಾರ ಮತ್ತು ಅರ್ಥವಾಗುವಿಕೆ ಬದಲುತ್ತವೆ. ಉದಾಹರಣೆಗೆ ಮಲಯಾಳದಲ್ಲಿ 'ಕಱ' ಎಂಬುದು ಕಲೆ, ಚಿತ್ತು. 'ಕರ' ಎಂದರೆ ಅಂಚು, ಕನಾರೆ ಎಂದು ಅರ್ಥವಾಗುತ್ತದೆ. ಹಾಗಾಗಿ ಈ ಗ್ರಂಥದಲ್ಲಿ ಉಪಾಯವಿಲ್ಲದೆ ಮಲಯಾಳ ಉದ್ಧೃತಿ ನೀಡಿದಲ್ಲೆಲ್ಲ ಓದನ್ನು ಸುಗಮಗೊಳಿಸಲು ಆ ಭಾಷಿಯ ಲಿಪಿ–ಬಳಕೆ ಶಿಸ್ತಿನ ಕೆಲ ಅಂಶಗಳನ್ನು ಓದುಗರು ಗಮನಿಸುವುದು ಒಳ್ಳೆಯದು.

ಟಿ – ಇದು ಕನ್ನಡದಲ್ಲಿ ಬಳಕೆಲ್ಲಿದ್ದು, ಮಲಯಾಳದ '' ಕ್ಕೆ ಸಮನಾದ ಅಕ್ಷರ. ಇದರ ಉಚ್ಚಾರ 'ಳ' ಮತ್ತು 'ಯ'ಗಲ ನಡುವೆ ಇರುತ್ತದೆ. ಆದ್ದರಿಂದಲೆ 'ವಾಟಿ' ವನ್ನು ಉಚ್ಚರಿಸುವಾಗ ಒಂದಿಷ್ಟು ವ್ಯತ್ಯಯ ಉಂಟಾದಾಗ ಅದು ಒಂದೇ 'ವಾಳ' ಆಗುತ್ತದೆ, ಅಥವಾ 'ವಾಯ' ಆಗಿಬಿಡುತ್ತದೆ. ಇದನ್ನೆ ಕನ್ನಡದಲ್ಲಿ 'ರಳ' ಎನ್ನುವುದು. ಶಕಟರೇಫದ ಹಾಗೆ ಕಾಣುವ ಟಿ ಎಂದರ್ಥ.

ಱ – ಇದಕ್ಕೆ ಕನ್ನಡದಲ್ಲಿ ಶಕಟರೇಫ ಎನ್ನುತ್ತಾರೆ. ಮಲಯಾಳ ಲಿಪಿಯಲ್ಲಿ ಅದು 'ര', ಈ ರೇಫ ಸಾಮಾನ್ಯ 'ರ'ಕಾಲಕ್ಕಿಂತ ಬಿರುಸಾಗಿರುತ್ತದೆ. ಹಾಗೇ ನೋಡಿದರೆ ಕನ್ನಡದ ಸಾಮನ್ಯ ರೇಫದ ಉಚ್ಚಾರ ಮಲಯಾಳದೊಂದಿಗೆ ತುಲನೆ ಮಾಡಿದರೆ ಶಕಟರೇಫವೇ ಆಗಿದೆ. ಮಲಯಾಳದ ರೇಫ ' ಃ ', (ಕನ್ನಡದ 'ರ') ಒಂದಿಷ್ಟು ಕೋಮಲ. ಕನ್ನಡದಲ್ಲೂ 'ಇ'ಕಾರ, 'ಎ'ಕಾರ ಸ್ವರಸಂಯೋಗದ ವೇಳೆ ರೇಫ ಮೃದುವಾಗುವುದನ್ನು ಕಾಣಬಹುದು. ಮರಿಯಾದೆ, ಕರೆ, ಸುರಿದು ಎನ್ನುವಾಗ ರೇಫ ಮೃದುವಲ್ಲವೆ? ಆ ಮೃದುತ್ವ ಮಲಯಾಳದ ರೇಫಕ್ಕೆ ಅಕಾರ ಸಹಿತ ಎಲ್ಲ ಸ್ವರ ಸಂಯೋಗದಲ್ಲೂ ಇರುತ್ತದೆ.

ಱ್ಱ – ಮಲಯಾಳದಲ್ಲಿ ಬಿರುಸು ಉಚ್ಚಾರದ ಶಕಟರೇಫಕ್ಕೆ (രಕ್ಕೆ) ಅದೇ ಅಕ್ಷರ ಒತ್ತಕ್ಷರವಾಗಿ ಬಂದಾಗ, ಇಂಗ್ಲಿಷ್‌ನ it ಅನ್ನು ಉಚ್ಚರಿಸುವಾಗ ಬರುವ, ಮೃದು 'ಟ'ಕಾರದ ಉಚ್ಚಾರ ಬರುತ್ತದೆ. 'ಪಯಱ್ಱ್' (ವರಸೆ), 'ಮುಱ್ಱಂ (ಅಂಗಳ) ಇಲ್ಲೆಲ್ಲ ಱ್ಱ (രര) ಕ್ಕೆ ಮೃದು ಟಕಾರವೇ ಉಚ್ಚಾರ.

ನ್ಱ – 'ನ' ಕಾಲಕ್ಕೆ 'ಱ'ಕಾರ ಒತ್ತಕ್ಷರವಾಗಿ ಬಂದಾಗ ಅನುಸ್ವಾರಪೂರ್ವಕ ಅರ್ಧ ಉಚ್ಚಾರದ 'ಡ'ಕಾರ ಅಥವಾ ಮೃದು 'ಡ'ಕಾರ ಬರುತ್ತದೆ. 'ಎನ್ಱ' ( ) ಎನ್ನುವಾಗ 'ಂಡೆ' ಮತ್ತು 'ಂದೆ' ಇವುಗಳ ನಡುವಣ ಮೃದು ಡಕಾರ ವಾಗಿರುತ್ತದೆ. ಇದನ್ನು ವರ್ತ್ಸ್ಯಜನ್ಯ ಡಕಾರ ಎನ್ನಬಹುದು. ಡಕಾರವಾಗುವಾಗ ನಾಲಗೆ ತಿರುಗುವಂತೆ ಇಲ್ಲಿ ತಿರುಗದು. 'ದ'ಕಾರದ ಸ್ಥಾನಕ್ಕಿಂತ ತುಸು ಮೇಲುಗಡೆ ನಾಲಿಗೆ ತಾಗಿ 'ಡ' ಹೋಲಿಕೆಯ ವ್ಯಂಜನ ಹುಟ್ಟುವುದು ಇದು. 'ತನ್ಱ' (= ತನ್ನ) ಎಂಬುದು 'ತನ್ರೆ'ಯೂ ಅಲ್ಲ, 'ತನ್ಡೆ'ಯೂ ಅಲ್ಲ, 'ತಂದೆ'ಯೂ ಅಲ್ಲ.

ಎರಡು'ನ': ಮಲಯಾಳದಲ್ಲೂ ತಮಿಳಿನಲ್ಲೂ 'ನ' ಉಚ್ಚಾರಣೆಯಲ್ಲಿ ಎರಡು ವಿಧ. ಒಂದು ದಂತ್ಯ 'ನ'ಕಾರ. ಇನ್ನೊಂದು ವರ್ತ್ಸ್ಯ 'ನ'ಕಾರ. ಆದರೆ ಮಲಯಾಳದಲ್ಲಿ ಅಕ್ಷರ ಲಿಪಿ ಒಂದೇ. ಸಂದರ್ಭಾನುಸಾರ ಅದರ

ಉಚ್ಚಾರ. ಒಂದು ಸಾಮಾನ್ಯ ನಿಯಮದಂತೆ ಒಂದು ಶಬ್ದದ ಆರಂಭದಲ್ಲಿ ಎರಡು ನಕಾರಗಳು ಇರುವುದಾದರೆ, ಮೊದಲನೆಯದು ವರ್ತ್ಸ್ಯವೂ ಎರಡನೆಯದು ದಂತ್ಯವೂ ಆಗಿರುತ್ತದೆ. ಉದಾಹರಣೆಗೆ 'ನನವು' (ಒದ್ದೆ) ಎಂಬಲ್ಲಿ ಮೊದಲ 'ನ' ವರ್ತ್ಸ್ಯ, ಎರಡನೆಯದು ದಂತ್ಯ. 'ಕನವು' ಅಥವಾ 'ಕಿನಾವು' ಎಂಬಲ್ಲಿ ನಕಾರ ದಂತ್ಯ. ಆದರೆ ಎರಡೂ ನಕಾರಗಳು ವರ್ತ್ಸ್ಯ ಇರುವುದೂ ಉಂಟು. ಉದಾಹರಣೆಗೆ 'ನನ್ನ್' (ಒಳಿತು), 'ನಿನ್ನ' (ನಿಂದೆ) ಇವು ಎರಡೂ ವರ್ತ್ಸ್ಯ ನಕಾರಗಳು. 'ಚೆಯ್ಯುನ್ನು' (ಮಾಡುತ್ತಾನೆ), 'ತರುನ್ನು' (ಕೊಡುತ್ತಾನೆ) ಇಲ್ಲೆಲ್ಲ ಒತ್ತಕ್ಷರವಾಗಿ ಬರುವ 'ನ'ಕಾರ ವರ್ತ್ಸ್ಯವಾಗಿರುತ್ತದೆ.

ಉಚ್ಚಾರ ಪಲ್ಲಟ: ವರ್ಗಾಕ್ಷರಗಳ ಪ್ರಥಮಾಕ್ಷರ ದ್ವಿತೀಯಾಕ್ಷರಗಳು ಶಬ್ದದ ಆರಂಭದಲ್ಲಿದ್ದರೆ ಮಾತ್ರ ಯಥಾಕ್ಷರ ಓದು. ಉದಾಹರಣೆಗೆ 'ಕರ', 'ಖನನ' ಇತ್ಯಾದಿ. ಆದರೆ ಯಾವುದೆ ಅಕ್ಷರದ ಅನುಗಾಮಿ ಅಕ್ಷರವಾಗಿ ಕ, ಖ ಬಂದರೆ ಓದಿನ ಉಚ್ಚಾರ 'ಗ', 'ಘ', ಆಗಿರುತ್ತದೆ.
ಉದಾಹರಣೆಗೆ 'ಅಕಂ' ಎಂಬುದು 'ಅಗಂ' ಆಗಿಯೂ, 'ನಖಂ' ಎಂಬುದು 'ನಘಂ' ಆಗಿಯೂ ಓದಲ್ಪಡುತ್ತದೆ. ಹೀಗೆ ಇತರ ವರ್ಗಾಕ್ಷರಗಳಲ್ಲೂ. 'ತನ್ತೆ' ಎಂದು ಬರೆದರೆ ಓದು 'ತಂದೆ'. ಆದರೆ ಪ್ರಥಮಾಕ್ಷರದಂತೆ ಉಚ್ಚಾರ ಕಾಯ್ದುಕೊಳ್ಳಬೇಕಾದರೆ ಆ ಅಕ್ಷರಕ್ಕೆ ದ್ವಿತ್ವ ಹಚ್ಚಬೇಕು. 'ಉಡುಪಿ' ಎನ್ನಲು 'ಉಟುಪ್ಪಿ' ಎಂದು ಬರೆಯುತ್ತಾರೆ. 'ಟು' ಎಂಬುದು ಶಬ್ದದ ಅನುಗಾಮಿ ಅಕ್ಷರವಾದ್ದರಿಂದ ತನ್ನಂತೆ 'ಡು' ಆಗಿ ಉಚ್ಚರಿತವಾಗುತ್ತದೆ. 'ಪಿ'ಯ ಯಥಾಕ್ಷರ ಉಚ್ಚಾರಕ್ಕಾಗಿ ದ್ವಿತ್ವದಿಂದ 'ಪ್ಪಿ' ಆಗಿ ಕಾಣಿಸಲಾಗುತ್ತದೆ.

ದ್ವಿತ್ವ ಪ್ರಯೋಗ: ಅಕ್ಷರಗಳಿಗೆ ದ್ವಿತ್ವ ಬರುವ ಇನ್ನೊಂದು ಕಾರಣ ಶಬ್ದಗಳ ಜೋಡಣೆ. ಎರಡು ಶಬ್ದಗಳು ಜೋಡುವಾಗ ದ್ವಿತೀಯ ಶಬ್ದದ ಪ್ರಥಮಾಕ್ಷರ ದ್ವಿತ್ವವನ್ನು ಪಡೆಯುತ್ತದೆ. ಉದಾಹರಣೆಗೆ ಕಳರಿ+ಪಯಟ್ ∝ ಕಳರಿಪ್ಪಯಟ್. ಮೂರು ಶಬ್ದಗಳು ಸೇರುವಾಗ ಎರಡನೆ ಮತ್ತು ಮೂರನೆ ಶಬ್ದಗಳ ಪ್ರಥಮಾಕ್ಷರಗಳು ದ್ವಿತ್ವವನ್ನು ಪಡೆಯುತ್ತವೆ. ಉದಾ: ಪಾಲ್+ಕಞ್ಞಿ+ಪಾತ್ರಂ ∝ ಪಾಲ್ಕ್ಕಞ್ಞಿಪ್ಪಾತ್ರಂ. 'ಪಾಲ್ಪ್ಪಾಯಸಂ' ಎನ್ನುವಲ್ಲಿ ಪಕಾರ ದ್ವಿತ್ವ ಹೊದಿರದಿದ್ದರೆ, 'ಪಾಲ್ಪಾಯಸಂ' ಎಂದು ಬರೆದರೆ, ಅದರ ಸಹಜ ಓದು 'ಪಾಲ್ಬಾಯಸಂ' ಆಗಿಬಿಡುತ್ತದೆ.

ವ್ಯಂಜನಾಂತ: ಅನೇಕ ಶಬ್ದಗಳು ವ್ಯಂಜನಾಂತವಾಗಿ ಕಾಣುವವಾದರೂ ಅವು ವ್ಯಂಜನಾಂತವಲ್ಲ, ಸ್ವರಾಂತ ಎಂಬುದನ್ನು ಪ್ರಯೋಗದಲ್ಲಿ ಅರ್ಥಮಾಡಿಕೊಳ್ಳುತ್ತೇವೆ. 'ಉಂಡ್' ಎಂದು ಹೇಳಿದರೆ 'ಡ್' ಎಂಬುದಕ್ಕೆ ವ್ಯಂಜನದ ಹಾಗೆ ಅರ್ಧ ಮಾತ್ರಾಕಾಲ ಅಲ್ಲ, ಬದಲು ಒಂದು ಪೂರ್ತಿ ಮಾತ್ರಾಕಾಲದ ಉಚ್ಚಾರವಾಗಿರುತ್ತದೆ. 'ಡ್' ಎಂಬುದನ್ನು ಸ್ವರದ ಹಾಗೆ ಒಂದು ಮಾತ್ರಾಕಾಲಕ್ಕೆ ಒತ್ತಿ ಹೇಳಿದರೆ ಅಲ್ಲಿ 'ಅ್' ಎಂಬ ಸ್ವರ ಕಾಣಿಸುತ್ತದೆ. ಇದು ತುಳು ಭಾಷೆಯಲ್ಲೂ, ಮಲಯಾಳ, ತಮಿಳು ಭಾಷೆಗಳಲ್ಲೂ ಸ್ಫುಟವಾಗಿ ಇದೆ. ಈ ಸ್ವರ 'ಇ' ಮತ್ತು 'ಉ' ಗಳ ನಡುವಣ ಒಂದು ವಿಕಲ್ಪವಾಗಿ ತಿಳಿಯಬಹುದು. ಹಾಗಾಗಿಯೆ ಇದು 'ಉಂ'ಡು, 'ಇಂ'ಡು ಈ ಎರಡೂ ರೂಪಗಳ ಸನಿಹದ ಪ್ರಭೇದಗಳಾಗಿ ತುಳು, ಮಲಯಾಳಗಳಲ್ಲಿ ಕಾಣಿಸುತ್ತವೆ. ವಿದ್ವಂಸರು 'ಅ್' ಅನ್ನು ಅಕಾರದ ವಿಕಲ್ಪವಾಗಿ ತೆಗೆದುಕೊಳ್ಳುವುದೂ ಇದೆ. (Ref: ನಾಡೋಜ ಕೆ. ಪಿ. ರಾವ್). 'ಶೂದ್ರನ್' ಶಬ್ದದ 'ನ್' ಅನ್ನು

ಅರ್ಧಮಾತ್ರೆಯಾಗಿ ತೆಗೆದುಕೊಂಡರೆ ಪ್ರಥಮಾ ಏಕವಚನ. ಸ್ವರವಾತಗಿ ತೆಗೆದುಕೊಂಡರೆ ಅದು ಒಂದು ಮಾತ್ರಾ ಕಾಲ ಬಳಸಿಕೊಂಡು, ಚತುರ್ಥೀ ಏಕವಚನದ ಅರ್ಥ ಬರುತ್ತದೆ. (ಅಂದರೆ ಮೊದಲ ಸಂದರ್ಭದಲ್ಲಿ ಶೂದ್ರನು ಎಂದೂ ಎರಡನೆ ಸಂದರ್ಭದಲ್ಲಿ ಶೂದ್ರನಿಗೆ ಎಂದೂ ಆಗುತ್ತದೆ)

ಮಲಯಾಳ ಭಾಷೆಯಲ್ಲಿ ಬಹುವಾದ ಸಂಸ್ಕೃತಶಬ್ದಗಳಿವೆಯಾದರೂ ಅರ್ಥಗ್ರಹಣದಲ್ಲಿ ಕನ್ನಡಕ್ಕೂ ಮಲಯಾಳಕ್ಕೂ ವ್ಯತ್ಯಾಸ ಇದೆ. ಸಂಸ್ಕೃತ ಶಬ್ದವೊಂದಕ್ಕೆ ಹಲವು ಅರ್ಥಗಳು. ಬೇರೆ ಬೇರೆ ಅರ್ಥಗಳಲ್ಲಿ ಒಂದು ಶಬ್ದವನ್ನು ಬಳಸುವುದಿದೆ. ಉದಾಹರಣೆಗೆ 'ಸಂಕೇತ' ಎಂಬ ಸಂಸ್ಕೃತ ಶಬ್ದಕ್ಕೆ ಕನ್ನಡದಲ್ಲಿ sign ಅಥವಾ ಸಂಜ್ಞೆ ಎಂಬ ಅರ್ಥವಾದರೆ, ಮಲಯಾಳದಲ್ಲಿ ಅದನ್ನು ತಂತ್ರ, ತಾಂತ್ರಿಕತೆ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. 'ಪ್ರತೀಕ' ಕನ್ನಡದಲ್ಲಿ image, ಪ್ರತಿರೂಪ ಆಗಿರುವುದಾದರೆ ಮಲಯಾಳದಲ್ಲಿ ಅದು ಕನ್ನಡದ 'ಸಂಕೇತ'. ಹೀಗೆ ಅನುವಾದ ಎದುರಿಸುವ ಸವಾಲು ಅಪರಿಮಿತ.

'ನಾಡನ್‌ಕಲ' ಎಂಬುದನ್ನು ಸುಲಭವಾಗಿ 'ನಾಡಕಲೆ' ಎಂದು ಅನುವಾದಿಸಬಹುದಲ್ಲ ಎಂದರೆ ಸ್ಥಿತಿ ಹಾಗಿಲ್ಲ. 'ನಾಡಕಲೆ' ಎಂದರೆ ಕನ್ನಡದಲ್ಲಿ 'ರಾಜ್ಯದ ಕಲೆ' ಎಂಬ ಅರ್ಥ ಬರುತ್ತದೆ. 'ನಾಡನ್' ಎಂಬುದಕ್ಕೆ 'ಜಾನಪದ' ಎಂಬ ಅರ್ಥ ಇಟ್ಟುಕೊಳ್ಳಬಹುದಾದರೂ ಮಲಯಾಳ ಅದಕ್ಕೆ 'ಫೋಕ್‌ಲೋರ್' ಎಂಬ ಪ್ರತ್ಯೇಕ ಶಬ್ದವನ್ನು ಇರಿಸಿಕೊಂಡಿದೆ. ಹಾಗಾಗಿ 'ನಾಡನ್' ಎಂಬುದನ್ನು 'ಗ್ರಾಮೀಣ' ಎಂಬ ಶಬ್ದದಿಂದ ಭರ್ತಿಮಾಡಿ, ಹಾದಿಯನ್ನು ಸುಗಮ ಮಾಡಿದೆ.

ಈ ಗ್ರಂಥದಲ್ಲಿ ಒತ್ತುಕೊಟ್ಟು ಹೇಳಿರುವ ಮಲಯಾಳದ 'ಕೂಟ್ಟಾಯ್ಮ' ಎಂಬುದಕ್ಕೆ ಕೂಡುವಿಕೆ, ಸೇರಿಕೆ ಇತ್ಯಾದಿ ಯಾವುದೆ ಸಹಜ ಪ್ರತಿಶಬ್ದ ಹಾಕಿದರೂ ತಾಂತ್ರಿಕವಾಗಿ ಉದ್ದೇಶಿಸಿದ ಅರ್ಥ ಬರಲಾರದಾದ್ದರಿಂದ 'ಸಾಂಘಿಕತೆ' ಎಂಬ ಶಬ್ದವನ್ನು ಬಳಸಿದೆ.

ಮಲಯಾಳ ಭಾಷಾ ಪ್ರಯೋಗಶೀಲದಲ್ಲಿ 'ಒರು' (ಒಂದು) ಎಂಬ ಪ್ರಯೋಗ ಬಹುವಾಗಿ ಇದೆ. ಜಾನಪದ ಹಾಡುಗಳಲ್ಲಂತು 'ಅತ್' (ಅದು), ಅಜ್ಞ್ (ಆಚೆ), ಅಜ್ಞನೆ (ಹಾಗೆ), ಒರು (ಒಂದು) ಇತ್ಯಾದಿ ನಿಷ್ಕೃಷ್ಟ ಕೃತ್ಯವಿಲ್ಲದೆಯೂ, ಪಾದಪೂರಣವಾಗಿಯೂ ಬರುತ್ತವೆ. ಅವುಗಳನ್ನು ಹಾಗೆಯೆ ಅನುವಾದದಲ್ಲಿ ಉಳಿಸಿಕೊಂಡು ಭಾಷೆಯ ಬನಿಯನ್ನು ತೋರಗೊಡಲಾಗಿದೆ.

'ಆಚಾರ', ಅನುಷ್ಠಾನ' ಶಬ್ದಗಳು ವಿಶಿಷ್ಟ ಅರ್ಥಗಳಲ್ಲಿ ಈ ಗ್ರಂಥದ ಉದ್ದಕ್ಕೂ ಬಳಕೆಯಾಗಿವೆ. ಮನುಷ್ಯನ ಸಾಮಾನ್ಯ ರೂಡಿಯ ಕೆಲಸಕಾರ್ಯಗಳನ್ನು ಆಚಾರವಾಗಿಯೂ ಆರಾಧನೆ ಮೊದಲಾದ ಶ್ರದ್ಧಾಪೂರ್ವಕ ಕ್ರಿಯಾರೂಪಗಳನ್ನು 'ಅನುಷ್ಠಾನ' ಎಂದೂ ತಿಳಿಯಲಾಗಿದೆ. 'ಅನುಷ್ಠಾನ'ದಲ್ಲಿ ಬರುವ ವಿವಿಧ ಬಿಡಿ ವಿಷಯಗಳನ್ನು ಮಲಯಾಳದಲ್ಲಿ 'ಚಡಜ್ಞ್' ಎನ್ನುತ್ತಾರೆ. ಇದಕ್ಕೆ ಕೇಳ್ಮೆ ಮತ್ತು ಅರ್ಥ ಸಾಮ್ಯಗಳಿರುವ ಶಬ್ದ ಉತ್ತರಕನ್ನಡ ಜಿಲ್ಲೆ ಮತ್ತಿತರ ಕಡೆ ಇರುವ ಹವ್ಯಕರ ಕನ್ನಡ ಭಾಷೆಯಲ್ಲಿರುವ 'ಚಡಂಗ'. ಅನುವಾದದಲ್ಲಿ ಈ ಸಮರ್ಥವಾದ ಪ್ರತಿಶಬ್ದವನ್ನು ಅಲ್ಲಲ್ಲಿ ಬಳಸಿದೆ.

ಕೆಲ ಲೇಖನಗಳ ಕೊನೆಯಲ್ಲಿದ್ದ ಅಡಿಟಿಪ್ಪಣಿಗಳನ್ನು ಅವುಗಳ ಸೂಚಿತ ಸಂದರ್ಭಕ್ಕೆ ವರ್ಗಾಯಿಸಿ ಓದನ್ನು ಸುಗಮಗೊಳಿಸಿದೆ. ಒಟ್ಟಿನಲ್ಲಿ ಕೇರಳದ ವಿಭಿನ್ನ ಜನಪದಗಳು, ಸಂಪಾದಕ ಡಾ. ರಾಘವನ್ ಪಯ್ಯನಾಡ್ ವಿಶ್ಲೇಷಿಸಿದಂತೆ, ಒಂದು ಮಹಾಸಾಂಘಿಕತೆಯಾಗಿ ರೂಪುಗೊಂಡಿರುವ ಬಗೆಯನ್ನು ಈ ಗ್ರಂಥದಿಂದ ಕಂಡುಕೊಳ್ಳಬಹುದು. ಅಲ್ಲದೆ ಜಾನಪದ ಆಚರಣೆಗಳನ್ನು ಹೇಗೆ ಅರ್ಥವಿಸಬೇಕಾಗಿದೆ ಎಂಬುದಕ್ಕೊಂದು ತೋರುಬೆರಳೂ ಆಗಿದೆ ಈ ಸಂಕಲನ.

'ಪಂಚಮೂಲ'
ಪತ್ರಕರ್ತರ ಕಾಲೋನಿ
ಇಂದ್ರಾಣಿ ದೇಗುಲದ ಬಳಿ,
ಅಂಚೆ: ಕುಂಜಿಬೆಟ್ಟು
ಉಡುಪಿ.

ಡಾ. ಕೆ. ಎಂ. ರಾಘವ ನಂಬಿಯಾರ್

ಮುನ್ನುಡಿ

ಇವತ್ತು ಜಾನಪದ ಅಧ್ಯಯನಕ್ಕೆ ಸ್ಪಷ್ಟವಾದ ಗುರಿಯಿದೆ. ಸಾಂಘಿಕತೆಯ ಸ್ವತ್ವದ ಗುರುತರಿಯುವುದೇ ಆ ಗುರಿ. ಹಳೆರೀತಿಯಲ್ಲಿ ಜನಪದಗೀತೆಗಳು, ಜನಪದ ಕಲೆಗಳು, ಆರಾಧನೆಗಳು ಇತ್ಯಾದಿ ಜನಪದರೂಪಗಳಲ್ಲಿ ನೆಟ್ಟುಕೊಳ್ಳುವುದಲ್ಲ ಆಧುನಿಕ ಜಾನಪದ ಅಧ್ಯಯನ. ಇವತ್ತು ಅಧ್ಯಯನದ ಒತ್ತು ಇರುವುದು ಸಾಂಘಿಕತೆಯಲ್ಲಿ. ಸಾಂಘಿಕತೆಯ ಸ್ವತ್ವವನ್ನು ಕಂಡರಿತುಕೊಳ್ಳುವುದು ಅಥವಾ ಅದರ ಕಡೆಗೆ ಒಯ್ಯುವುದು ಉದ್ದೇಶವಾಗಿರುವ ಅಧ್ಯಯನಗಳನ್ನು ಮಾತ್ರ 'ಜಾನಪದ' (ಫೋಕ್‌ಲೋರ್) ಅಧ್ಯಯನವೆಂದು ಪರಿಗಣಿಸುತ್ತೇವೆ.

ಏಕೀಕರಣದ ಮೂಲಕ ಎಲ್ಲ ಸ್ವತ್ವಗಳಿಗೂ ಮೌಲ್ಯತರುವ ಕೆಲಸ ಹಲವು ಕಡೆಗಳಲ್ಲಿ ಸಾಗುತ್ತಿರುವ ಈ ಕಾಲಘಟ್ಟದಲ್ಲಿ ಸಾಂಘಿಕತೆಯನ್ನು ಸಾಕ್ಷಾತ್ಕರಿಸಲು ಶ್ರಮಿಸುವ ಈ ವಿಜ್ಞಾನ ಶಾಖೆಗೆ ಚಾರಿತ್ರಿಕ ದೌತ್ಯವನ್ನು ನೆರವೇರಿಸುವ ಆವಶ್ಯಕತೆಯಿದೆ. ಇದರ ಮೊದಲ ಮೆಟ್ಟಲೆ ಸಾಂಘಿಕತೆಯ ಜಾನಪದವನ್ನು ಪರಿಚಯಿಸಿಕೊಳ್ಳುವುದು. ಈ ಗ್ರಂಥದ ಪ್ರಧಾನ ಉದ್ದೇಶ ಇದೇ. ಜಾನಪದ ಅಧ್ಯಯನ ಯೋಜನೆಯನ್ನು ಬಳಸಿಕೊಂಡು ಸಾಂಘಿಕತೆಯನ್ನು ಮನವರಿತುಕೊಳ್ಳುವ ಗಂಭೀರವಾದ ಶ್ರಮ ಇಲ್ಲಿ ಉದ್ದೇಶಗೊಂಡಿಲ್ಲ. ಆದರೂ ಆ ಗುರಿಯೆಡೆಗೆ ಸಾಗುವ ನಿಟ್ಟಿನ ಸೂಚನೆಗಳು ಇಲ್ಲಿನ ಬಹುತೇಕ ಲೇಖನಗಳಲ್ಲಿ ಒಳಗೊಂಡಿವೆ.

ಕೇರಳದ ವಿಶಿಷ್ಟವಾದ ಕೆಲ ಜಾನಪದ ರೂಪಗಳನ್ನು ಈ ಗ್ರಂಥದಲ್ಲಿ ಅಧ್ಯಯನಕ್ಕೆ ಅಳವಡಿಸಲಾಗಿದೆ. ಒಂದೊಂದು ಲೇಖನಕ್ಕೂ ಮೂರು ಸ್ತರಗಳಿವೆ. ಅವುಗಳಲ್ಲಿ ಅತ್ಯಂತ ಮುಖ್ಯವಾದುದೆಂದರೆ ಲೇಖನಕ್ಕೆ ಆಧಾರವಾದ ಜಾನಪದ ರೂಪದ ವಿವರಣಾತ್ಮಕ ಅಧ್ಯಯನ. ಅದರೊಂದಿಗೆ ಕೇರಳೀಯ ಸಾಂಘಿಕತೆಯ ತನ್ನತನಕ್ಕೆ ಬೆರಳು ತೋರುವಂಥ ಮೌಲ್ಯಮಾಪನವನ್ನೂ ಲೇಖನ ಒಳಗೊಂಡಿದೆ. ಪ್ರತಿ ಲೇಖನಕ್ಕೂ ನೀಡಿರುವ ಸಂಪಾದಕೀಯ ಟಿಪ್ಪಣಿ ಸದ್ಯದ ಜಾನಪದವನ್ನು ಜಾನಪದವಿಜ್ಞಾನ ಶಾಖೆಯೊಂದಿಗೆ ಗೋಣಸುಗೊಳಿಸಲು ಶ್ರಮಿಸಿದೆ. ಕೇರಳದ ಜಾನಪದ ಅಧ್ಯಯನದ ಇಂದಿನ ಸ್ಥಿತಿಯನ್ನು ಪರಿಗಣಿಸಿ ಸಾಧ್ಯವಿರುವಷ್ಟು ಎಲ್ಲ ಸ್ತರಗಳಲ್ಲೂ ಸಂಕೀರ್ಣತೆಯಿಲ್ಲಂತೆ ನೋಡಿಕೊಳ್ಳಲು ಶ್ರಮಿಸಿದೆ.

ಒಂದು ವಿಜ್ಞಾನಶಾಖೆ ಪರಿಪಕ್ವವಾಗಿ ರೂಪಗೊಳ್ಳುವಷ್ಟರಲ್ಲಿ ಅದಕ್ಕೆ ನಿಶ್ಚಿತವಾದ ಪಾರಿಭಾಷಿಕ ಪದಾವಳಿ ಹುಟ್ಟಿಕೊಳ್ಳುತ್ತದೆ. ಮಲಯಾಳದಲ್ಲಿ ಜಾನಪದವು ಇನ್ನೂ ಅಂಗೀಕಾರ ಗಳಿಸುತ್ತಿದೆಯಷ್ಟೆ. ಇವತ್ತು ಈ ರಂಗದಲ್ಲಿ ಕೆಲಸ ಮಾಡುತ್ತಿರುವ ಒಬ್ಬೊಬ್ಬ ವಿದ್ವಾಂಸರೂ ತಾವೇ ರೂಪಿಸಿದ ಪದಾವಲಿಯನ್ನೆ ಉಪಯೋಗಿಸುತ್ತಿದ್ದಾರೆ. ಈ ಪುಸ್ತಕಲ್ಲೂ ಲೇಖಕರು ಒಂದೇ ಉದ್ದೇಶಕ್ಕೆ ವಿಭಿನ್ನ ಪಾರಿಭಾಷಿಕ ಪದಗಳನ್ನು ಬಳಸಿದ್ದಿದೆ. ಇದು ಮೊಗ್ಗು ಮೂಡಿ ಬರುತ್ತಿರುವ ವಿಷಯವಾಗಿರುವುದರಿಂದ ಮತ್ತು ಈ ಗತಿವಿಧಿ ಆರೋಗ್ಯಕರವೆಂದು ಮನವರಿಕೆಯಾಗಿರುವುದರಿಂದ ಅವುಗಳನ್ನು ಏಕರೂಪತೆಗೆ ತರಲು ಯತ್ನಿಸಿಲ್ಲ. ಯಾವುದೆ ತನ್ನತನದ ಮೇಲೆ ಹೇರಿದ ಇನ್ನೊಂದರ ಅಧಿಪತ್ಯವನ್ನು ಕೀಳುವಂಥದು ಜಾನಪದ ರೂಪ. ಆದ್ದರಿಂದಲೆ ಭಾಷೆಯ ವಿಷಯದಲ್ಲಿ ಕೆಲ ಆಗ್ರಹಗಳಿರುವುದನ್ನು ಈ ಪುಸ್ತಕದಲ್ಲಿ ಕಾಣಬಹುದು.

ಯಾವುದೊಂದು ವಿಜ್ಞಾನ ಶಾಖೆಯನ್ನಾದರೂ ಪರಿಪೋಷಿಸುವುದು ಮತ್ತು ಅದಕ್ಕೆ ಗಮ್ಯದ ಅರಿವು ಉಂಟಾಗುವಂತೆ ಮಾಡುವುದು ವಿಶ್ವವಿದ್ಯಾಲಯ ಹಾಗೂ ಅವುಗಳ ಹಾಗಿರುವ ಅಕಾಡೆಮಿಕ್ ಸಂಸ್ಥೆಗಳ ಕೆಲಸ. ಆದರೆ ಜಾನಪದದ ವಿಷಯದಲ್ಲಿ ಅಂಥದು ಕೇರಳದಲ್ಲಿ ಇನ್ನೂ ಆಗಿಲ್ಲ. ಜಾನಪದ ಎಂಬುದು ಸ್ವತಂತ್ರವಾದ ಒಂದು ವಿಜ್ಞಾನಶಾಖೆ ಎಂಬುದನ್ನು ಅಂಗೀಕರಿಸುವುದಕ್ಕೂ ಈ ವಿಶ್ವವಿದ್ಯಾಲಯಗಳು ಅಸಮ್ಮತಿ ಸೂಚಿಸುತ್ತಿವೆ.

ಈ ಸ್ಥಿತಿಯಲ್ಲಿ ಈ ಪುಸ್ತಕದ ದೌತ್ಯ ಬಹಳ ದೊಡ್ಡದು. ಅನಾಯಾಸವಾಗಿ ಒಂದು ಪರಿಧಿಯ ವರೆಗೆ ಜಾನಪದವನ್ನು ಪರಿಚಯಿಸಿಕೊಡಲು ಈ ಗ್ರಂಥಕ್ಕೆ ಸಾಧ್ಯವಾಗಿದೆ. ಪ್ರಾದೇಶಿಕ ಭಾಷೆಗಳಲ್ಲಿ ಈ ಬಗೆ ಒಂದು ಶ್ರಮ ಮುಂಗೋಳಿಯಂತೆ ಬಂದಿದೆ.

ಸಂಪಾದಕ

ರಾಘವನ್ ಪಯ್ಯನಾಡ್

ಜಾನಪದ ಅಧ್ಯಯನಕ್ಕೆ ಒಂದು ಮುಮ್ಮಾತು

ರಾಘವನ್ ಪಯ್ಯನಾಡ್

ಯಾವುದೆ ವಿಜ್ಞಾನಶಾಖೆಯದೂ ಉದ್ಭವ ಒಂದು ಚಾರಿತ್ರಿಕ ಆವಶ್ಯಕತೆ. ನವೋತ್ಥಾನವನ್ನು ಹಿಂಬಾಲಿಸಿ ಬಂದ ಔದ್ಯಮಿಕ ಕ್ರಾಂತಿ ಮತ್ತು ರಾಷ್ಟ್ರೀಯತೆ, ಔದ್ಯಮೀಕರಣದ ಫಲವಾದ ನಗರೀಕರಣ ಇವು ಪರಂಪರೆ ಪ್ರಜ್ಞೆಯನನು ಎಚ್ಚರಗೊಳಿಸಿದವಲ್ಲದೆ ಹಳಮೆಯು ಅಧ್ಯಯನಕ್ಕೆ ಒಳಪಡಬೇಕಾದುದು ಎಂಬ ತಿಳಿವಳಿಕೆಗೂ ಕಾರಣವಾದವು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹಳಮೆಯ ಬಗೆಗೆ ಅಧ್ಯಯನ (Popular Antiquities) ತೊಡಗಿದುದು ಹಾಗೆ. ಆರಂಭದಲ್ಲಿ ಹಳಮೆ ಕುರಿತಾದ ಯಾವುದೆ ಅಧ್ಯಯನವೂ ಈ ಅಧ್ಯಯನಶಾಖೆಯ ಅಡಿಯಲ್ಲಿ ನಡೆಯತೊಡಗಿತು. ಎಲ್ಲ ವಿಷಯಗಳ ವಿದ್ವಾಂಸರೂ ಹಳಮೆ ಕುರಿತ ಅಧ್ಯಯನಕ್ಕೆ ಪ್ರಾಮುಖ್ಯವನ್ನು ನೀಡಿದರು. ಅಂದು ಭೂಗರ್ಭಶಾಸ್ತ್ರದಂಥ ಅಪೂರ್ವ ವಿಷಯದಲ್ಲಿ ಕೆಲಸ ಮಾಡುತ್ತಿದ್ದ ಪಂಡಿತರು ಕೂಡ ಮಣ್ಣಿನ ಬಗೆಗೆ, ಬಂಡೆಯ ಬಗೆಗೆ, ಅವುಗಳೊಂದಿಗೆ ಜೀವನಕ್ಕಿರುವ ಸಂಬಂಧದ ಬಗೆಗೆ ಹಾಗೂ ನಂಬಿಕೆಗಳ ಬಗೆಗೆ ಅಧ್ಯಯನ ಮಾಡಿದರು. ಅಂದು ಹಳಮೆ ಬಗೆಗಿನ ಅಧ್ಯಯನ ಬಹಳ ವಿಪುಲವೂ ಬಹುವಿಷಯಕವೂ ಆದ ಒಂದು ಅಧ್ಯಯನ ಮೇಖಲೆಯಾಗಿತ್ತು. ಆ ಕಾಲದಲ್ಲೂ ಅತ್ಯಧಿಕ ಸಂಗ್ರಹ ಮತ್ತು ಅಧ್ಯಯನ ನಡೆದುದು ಮೌಖಿಕ ಸಂಗ್ರಹದ ಮೇಲಾಗಿತ್ತು. 1846 ರಲ್ಲಿ ವಿಲಿಯಂ ಜೆ. ಥೋಮ್ಸ್ 'ಫೋಕ್‌ಲೋರ್' ಎಂಬ ಪದವನ್ನು ಬಳಸುವುದರೊಳಗೆ ಹಳಮೆಯ ಅಧ್ಯಯನ ಎಂಬ ವಿಸ್ತಾರವಾದ ಅಧ್ಯಯನ ಮೇಖಲೆಗೆ ಅರ್ಥಸಂಕೋಚ ಉಂಟಾಯಿತಲ್ಲದೆ 'ಫೋಕ್‌ಲೋರ್' ಎಂದರೆ 'ಮೌಖಿಕ ಸಂಗ್ರಹ'ವೆಂಬ ಅರ್ಥವೂ ನೆಲಸಿತು.

ಹೀಗೆ ಆಗಿರುವುದಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ ಪ್ರಧಾನವಾದುದೆಂದರೆ ಆ ಹೊತ್ತು ಜಾನಪದಕ್ಕೆ ಒಂದು ನಿರ್ವಚಿಸಲಾದ ಅಧ್ಯಯನೋದ್ದೇಶವೂ ಅಧ್ಯಯನ ರೀತಿಯೂ ಇರಲಿಲ್ಲ ಎಂಬುದು. ಆ ವರೆಗೆ ಹಳಮೆಯ ಅಧ್ಯಯನ ಒಳಗೊಂಡಿದ್ದ ವಿಷಯಗಳಲ್ಲಿ ಹಲವು ಇತರ ಕ್ಷೇತ್ರಗಳಲ್ಲಿ ಅಧ್ಯಯನಕ್ಕೆ ಅಳವಡುವಂಥದ್ದಾಗಿದ್ದವು. ಉದಾಹರಣೆಗೆ ಅನುಷ್ಠಾನಗಳು, ಆಚರಣೆಗಳು ಸಾಂಸ್ಕೃತಿಕ ಮಾನವಶಾಸ್ತ್ರ 'ವ್ಯವಹರಿಸುತ್ತಿದ್ದ ವಿಷಯಗಳು'. ನಂಬಿಕೆಗಳ ಕುರಿತಾದ ಅಧ್ಯಯನ ಮತಾಧ್ಯಯನದ ಭಾಗವಾಗಿತ್ತು. ಪುರಾವೃತ್ತ ಕಥಾಗಾನ, ಜನಪದಗೀತೆಗಳು ಮೊದಲಾದ ಮೌಖಿಕ ಜ್ಞಾನಶಾಖೆಗಳನ್ನು ಸಾಹಿತ್ಯವೆಂದು ಪರಿಗಣಿಸದಿದ್ದುದರಿಂದ ಇವುಗಳ ಕುರಿತು ಅಧ್ಯಯನ ಮಾಡಲು ಸಾಹಿತ್ಯ ಪಂಡಿತರು ಹೊರಡಲಿಲ್ಲ. ಹಾಗಾಗಿ ಹಳಮೆಯ ಅಧ್ಯಯನವೆಂಬ ವಿಶಾಲಕ್ಷೇತ್ರ ತಮ್ಮ ತಮ್ಮದೆಂಬ ಹಕ್ಕಿನ ತರ್ಕವಿಲ್ಲದೆ ಮೌಖಿಕಜ್ಞಾನಶಾಖೆಗೆ ಪರಿಮಿತಗೊಂಡಿತು. ಜಾನಪದವನ್ನು ಮೌಖಿಕ ಶಿಸ್ತಿಗೆ ಅದುಮಿ ನಿಲ್ಲಿಸಿ, ತಮ್ಮದೇ ಸ್ವಂತ ಅಧ್ಯಯನ ಪರಿಧಿಗೆ ಬೇಲಿ ಕಟ್ಟಿ ನಿಲ್ಲಿಸುವುದಕ್ಕೇ ಸಾಂಸ್ಕೃತಿಕ ಮಾನವಶಾಸ್ತ್ರಜ್ಞರು ಶ್ರಮಿಸುತ್ತಿರುವುದು. ಆದ್ದರಿಂದಲೇ 'ಜಾನಪದ'ವನ್ನು ನಿರ್ವಚಿಸಲು ಅವರಲ್ಲಿ ಬಹುಪಾಲು ಜನರು ಆಸಕ್ತಿ ತೋರಿದುದು. 'ಸ್ಟ್ಯಾಂಡರ್ಡ್ ಡಿಕ್ಷನರಿ ಆಫ್ ಫೋಕ್‌ಲೋರ್ ಮಿಥಾಲಜಿ ಆ್ಯಂಡ್ ಲೆಜೆಂಡ್ಸ್'ನಲ್ಲಿ ಕೊಟ್ಟಿರುವ ನಿರ್ವಚನಗಳಲ್ಲಿ ಬಹುಪಾಲು ಬಂದಿರುವುದು ಸಾಂಸ್ಕೃತಿಕ ಮಾನವಶಾಸ್ತ್ರಜ್ಞರಿಂದ. ಈ ನಿರ್ವಚನಗಳೆಲ್ಲ ಜಾನಪದವನ್ನು ಬಾಯ್ದೆರೆ ಶಿಸ್ತಿಗೆ ಅದುಮಿ ಕುಳ್ಳಿರಿಸುವ ಉದ್ದೇಶ ಹೊಂದಿರುವುದು ಸ್ಪಷ್ಟ. ಜಾನಪದ ಒಳಗೊಂಡಿರುವುದು ಬಾಯ್ದೆರೆ ಜ್ಞಾನಶಾಖೆಯನ್ನು ಮಾತ್ರವಲ್ಲ. ಜಾನಪದದ ಅಧ್ಯಯನ ಕ್ಷೇತ್ರವೂ ಪಠನೋದ್ದೇಶವೂ ಇಂಥದ್ದೇ ಎಂದು ವ್ಯಕ್ತವಾಗಿ ನಿರ್ವಚಿಸಲು

ಸಾಧ್ಯವಾಗದುದರಿಂದಲೆ ಬಹಳ ಕಾಲದವರೆಗೆ– 1960 ರ ದಶಕದ ವರೆಗೂ– ಜಾನಪದಕ್ಕೆ ಮೌಖಿಕ ಶಾಖೆಯ ಪರಿಧಿಯೊಳಗೆ ಅದುಮಿ ನಿಲ್ಲಬೇಕಾಯಿತು.

ಮೌಖಿಕತೆಗೆ ಒತ್ತು ನೀಡಿದ ಮತ್ತು ಹಾಗಲ್ಲದ ಎಲ್ಲ ನಿರ್ವಚನಗಳೂ ಒಂದು ವಿಷಯದಲ್ಲಿ ಸಹಮತ ಹೊಂದಿರುವುದಾಗಿ ಕಾಣಬಹುದು. ಅದು ಪಾರಂಪರ್ಯಕ್ಕೆ ಸಂಬಂಧಿಸಿದಂತೆ ಇರುವುದಾಗಿದೆ. ಪಾರಂಪರೀಯತೆ ಇರುವುಂಥದು ಮಾತ್ರವೇ ಜಾನಪದ ಎನಿಸೀತು ಎಂಬುದರಲ್ಲಿ ಯಾರಿಗೂ ಮತಭೇದವಿಲ್ಲ. ಆದರೆ ಯಾವೆಲ್ಲ ಪಾರಂಪರೀಯತೆಗಳು ಜಾನಪದ ಆಗಬಲ್ಲದು ಎಂಬುದರಲ್ಲಿ ಒಬ್ಬೊಬ್ಬರಲ್ಲೂ ವಿಭಿನ್ನ ಅಭಿಮತಗಳೇ ಇದ್ದವು. ಈ ಎಲ್ಲ ನಿರ್ವಚನಗಳು ಹೇಳಿ ಮುಗಿಸಲು ಶ್ರಮಿಸಿದುದು ಅಧ್ಯಯನದ ವ್ಯಾಪ್ತಿ ಬಗೆಗೆ ಮಾತ್ರವಾಗಿತ್ತು. ಯಾಕೆ ಅಭ್ಯಸಿಸಬೇಕು, ಹೇಗೆ ಅಭ್ಯಸಿಸಬೇಕು ಇತ್ಯಾದಿ ವಿಷಯಗಳು ಈ ನಿರ್ವಚನಗಳ ಚರ್ಚೆಗೆ ವಿಷಯವಾಗಿರಲಿಲ್ಲ. ಅಧ್ಯಯನದ ಉದ್ದೇಶವೋ, ಅಧ್ಯಯನ ರೀತಿಯೋ ನಿರ್ವಚನಗೊಳ್ಳದಿದ್ದ ಒಂದು ವಿಷಯವು ಯಾವುದರ ಬಗೆಗೆ ಅಧ್ಯಯನ ಮಾಡಬೇಕು ಎಂಬ ಬಗೆಗೆ ತರ್ಕನಡೆಸುತ್ತ ಬಂತು. ಜಾನಪದ ಅಧ್ಯಯನದ ಮಹೋನ್ನತರಾಗಿದ್ದ ರಿಚರ್ಡ್ ಎಂ. ಡಾರ್ಸನ್ ಕೂಡ ನಿರ್ವಚನದ ಬಗೆಗೆ ಚರ್ಚಿಸುವಾಗ ಜಾನಪದ ಅಧ್ಯಯನಕ್ಕೆ ಆಧಾರವಾದ ವಿಷಯದ ವ್ಯಾಪ್ತಿಯ ಕುರಿತಾಗಿ ಮಾತ್ರ ವ್ಯಾಕುಲರಾಗಿದ್ದರು.

ಜಾನಪದ ಅಧ್ಯಯನ ಎಂಬುದು ಮೌಖಿಕ ಶಿಸ್ತಿನ ಅಧ್ಯಯನಕ್ಕೆ ಮಾತ್ರ ಸೀಮಿತವಲ್ಲ ಎಂದೂ ಅದಕ್ಕೆ ಜನಪದದ ಬದುಕಿನಷ್ಟೆ ವ್ಯಾಪ್ತಿ ಉಂಟೆಂದೂ ಅವರು ವಾದಿಸಿದರು. ಅದರಿಂದಾಗಿಯೆ 'ಫೋಕ್‌ಲೋರ್' ಜಾನಪದ ಎಂಬ ಪದಕ್ಕೆ ಬದಲಾಗಿ 'ಜನಪದ ಜೀವನ' (folk life) ಎಂದು ಅವರು ಪ್ರಯೋಗಿಸುವುದು. ಹಾಗೆ ಜಾನಪದ ಅಧ್ಯಯನದ ಎರಡು ಶತಮಾನಗಳ ಚರಿತ್ರೆ ಒಂದು ಸುತ್ತನ್ನು ಪೂರ್ತಿಗೊಳಿಸಿತೆಂದು ಮಾತ್ರ ತಿಳಿಯಬಹುದು. ಪರಂಪರೆಯ ಭಾಗವಾದ ಎಲ್ಲವನ್ನೂ (ಹಳಮೆ)ಅಧ್ಯಯನಕ್ಕೆ ಒಳಪಡಿಸಿದ, ಹಳವೆಯ ಅಧ್ಯಯನದಿಂದ ಆರಂಭಿಸಿ, ಮೌಖಿಕ ಶಿಸ್ತಿಗೆ ಸೀಮಿತಗೊಂಡು, ಜನಪದ ಜೀವನದ ವರೆಗೆ (ಪಾರಂಪರ್ಯಸಹಿತವಾದ ಎಲ್ಲವನ್ನೂ) ಪುನಃ ವಿಕಸಿತಗೊಳಿಸಿದುದೇ 'ಜಾನಪದ' ಎಂಬ ವಿಷಯ.

ಎರಡು ಶತಮಾನಗಳ ವರೆಗೆ ಅಗಣಿತ ಸಂಖ್ಯೆಯ ಪಂಡಿತರು ಜಾನಪದವನ್ನು ಇನ್ನೇನೂ ಬಾಕಿ ಯಾಳಿಯದಂತೆ ಹೇಳಲು ಶ್ರಮಿಸಿದ ಬಳಿಕವೂ ಹೇಳಲು ಸಾಧ್ಯವಾಗದೆ ಹೋದುದಕ್ಕೆ ಕಾರಣ, ಒಂದು ಸಮಾಜಶಾಸ್ತ್ರ ಎಂಬ ನೆಲೆಯಲ್ಲಿ 'ಜಾನಪದ' ಎಂಬ ವಿಷಯದ ಅಧ್ಯಯನ ರೀತಿ ಮತ್ತು ಉದ್ದೇಶ ಇವುಗಳನ್ನು ನಿರ್ವಚಿಸದೆ ಹೋದುದೇ ಆಗಿದೆ. ಜಾನಪದದ ವ್ಯಾಪ್ತಿ ಜನಪದಜೀವನದಷ್ಟು ವಿಪುಲವಾಗಿರುವಾಗಲೂ, ಅದೇ ಬದುಕಿನ ಭಾಗವಾದ ಆರಾಧನೆ, ಆಚರಣೆಗಳು ಮತ್ತು ಐತಿಹ್ಯವನ್ನು ಸಾಂಸ್ಕೃತಿಕ ಮಾನವಶಾಸ್ತ್ರವೂ, ಸಾಮಾಜಿಕ ವ್ಯವಸ್ಥೆಗಳನ್ನು ಸಮಾಜಶಾಸ್ತ್ರವೂ ಮತ್ತು ಜನಪದಗೀತಗಳನ್ನು ಹಳೆಯ ಸಾಹಿತ್ಯವೆಂಬ ನೆಲೆಯಲ್ಲಿ ಸಾಹಿತ್ಯವೂ ಅಧ್ಯಯನಕ್ಕೆ ತೆಗೆದುಕೊಳ್ಳುತ್ತಿವೆ. ಅದರಿಂದಾಗಿ ಅಧ್ಯಯನಕ್ಕೆ ಒಳಪಡಿಸುವ ವಿಷಯದ ವ್ಯಾಪ್ತಿಗೆ ಅಳವಡುವ ನಿರ್ವಚನಕ್ಕೆ ಜಾನಪದವನ್ನು ಒಳಪಡಿಸಲು ಸಾಧ್ಯವಾಗದೆ ಹೋಯಿತು. ಒಂದು ಐತಿಹ್ಯದ ಬಗೆಗೆ ಒಬ್ಬ ಸಾಹಿತ್ಯದ ಪಂಡಿತ ಅಥವಾ ಮನವಶಾಸ್ತ್ರಜ್ಞ ಅಭ್ಯಾಸಮಾಡುವಾಗ ಅದು ಜಾನಪದ ಅಧ್ಯಯನ ಆಗದಿರುವುದಕ್ಕೆ ಇದೇ ಕಾರಣ. ಒಂದು ಸಾಂಘಿಕತೆಯ ಜಾನಪದದ ಕುರಿತ ಯಾವ ಅಧ್ಯಯನವೂ ಜಾನಪದ ಅಧ್ಯಯನವಾಗಬೇಕಿಲ್ಲ ಎಂದರ್ಥ. ಜಾನಪದದ ಕುರಿತ ಹಳೆಯ ನಿರ್ವಚನಗಳೆಲ್ಲ 'ಜಾನಪದ' ಎಂಬ ವಿಷಯವನ್ನು ನಿರ್ವಚಿಸುವ ಬದಲು ಜಾನಪದ ಅಧ್ಯಯನಕ್ಕೆ ಆಧಾರವಾಗಿರಬೇಕಾದ ವಿಷಯ ಯಾವುದು ಎಂದು ನಿರ್ವಚಿಸುವುದಕ್ಕಷ್ಟೆ

ಶ್ರಮಿಸಿದವು. ಆದ್ದರಿಂದ ' ಆದಿವಾಸಿಗಳೊ, ನಾಗರಿಕರೊ ಆದ ಒಂದು ಜನಾಂಗದಲ್ಲಿ ಪರಂಪರೆಯಿಂದ ಏನೆಲ್ಲ ಇವೆಯೊ ಅವೆಲ್ಲನ್ನು ಜಾನಪದ ಒಳಗೊಳ್ಳುತ್ತದೆ. ಒಂದು ಜನಾಂಗದ ಕುರಿತಾದ ಶಾಸ್ತ್ರ ಎಂಬುದಕ್ಕೆ ಮಿಗಿಲಾಗಿ ಜಾನಪದವು ಪಾರಂಪರೀಯ ಜನತಾ ಶಾಸ್ತ್ರವೂ ಲೋಕಗೀತಗಳೂ ಆಗಿವೆ' ಎಂದು ಜಾನ್ ಬೆಯ್ಲಿ ಹಾಗೂ 'ಮೌಖಿಕದ ಮೂಲಕ ಇರುವ ಸಾಂಸ್ಕೃತಿಕ ಪರಂಪರೆಯನ್ನು ಇಡಿಯಾಗಿ ಜಾನಪದ ಒಳಗೊಳ್ಳುತ್ತದೆ' ಎಂದು ಬಿ. ಎ. ಬೋಟ್‌ಕಿನ್ ಅವರು ಅಭಿಪ್ರಾಯಪಟ್ಟುದು ಇದಕ್ಕಾಗಿಯೇ. ಯಾಕಾಗಿ ಅಧ್ಯಯನ, ಹೇಗೆ ಅಧ್ಯಯನ ಎಂಬ ಈ ವಿಚಾರಗಳನ್ನು ಇವರು ಚಿಂತಿಸಲಿಲ್ಲ.

ಸಂಸ್ಕಾರವನ್ನು ಸೃಷ್ಟಿಸುವ ಒಂದು ಜನವರ್ಗ ಎಂಬ ನೆಲೆಯಲ್ಲಿ ಸಾಂಸ್ಕೃತಿಕ ಮಾನವಶಾಸ್ತ್ರ ಮನುಷ್ಯನ ಬಗೆಗೆ ಅಭ್ಯಸಿಸುವಾಗ, ಮನುಷ್ಯನೆಂಬ ಸಂಘಜೀವಿಯ ಬಗೆಗೆ ಸಮಾಜಶಾಸ್ತ್ರ ಅಭ್ಯಸಿಸುವಾಗ, ಜಾನಪದ ಅಧ್ಯಯನಕ್ಕೆ ಉದ್ದೇಶಪಡುವುದು ಯಾವುದನ್ನು ಎಂಬ ಪ್ರಶ್ನೆ ನ್ಯಾಯವಾಗಿಯೂ ಉದ್ಭವಿಸಬಲ್ಲುದು. 1960 ದಶಕದವರೆಗೂ ಈ ಪ್ರಶ್ನೆಗೆ ಸುವ್ಯಕ್ತವಾದ ಒಂದು ಉತ್ತರ ನೀಡಲು ಜಾನಪದ ವಿದ್ವಾಂಸರಿಗೆ ಸಾಧ್ಯವಾಗಿರಲಿಲ್ಲ. ಅದರಿಂದಲೆ 'ಇತರ ವಿಷಯಗಳ ಸೀಮೆಯನ್ನು ಹರಿದುಕೊಳ್ಳುವವರು' ಎಂಬ ಹಾಗೆ ಮಾತ್ರ ಜಾನಪದ ಅಧ್ಯಯನೇಚ್ಛುಗಳನ್ನು ಇತರ ಸಮೂಹಶಾಸ್ತ್ರವಿದರು ಕಂಡರು.

ಈ ಗ್ರಹಿಕೆಗೆ ಬದಲಾವಣೆ ಉಂಟಾದುದು ಅಲನ್ ಡಂಡಸ್ ಅವರ ಅಧ್ಯಯನದಿಂದ ತೊಡಗಿ ಉಂಟಾದ ಅರಿವಿನಿಂದ. ಜಾನಪದ ಅಧ್ಯಯನದ ಆಧುನಿಕ ಘಟ್ಟ ಎಂದು ಕರೆಯಬಹುದಾದ ಈ ಕಾಲಘಟ್ಟದಲ್ಲಿ ಜಾನಪದವು ನಿಖರವಾಗಿ ನಿರ್ವಚನಗೊಂಡಿತು. ನಿಖರವಾದ ನಿರ್ವಚನ ಎಂದು ಹೇಳಿದ್ದೇಕೆಂದರೆ ಜಾನಪದ ಅಧ್ಯಯನಕ್ಕೆ ಆಧಾರವಾದ ವಿಷಯದ ವ್ಯಾಪ್ತಿ, ಜಾನಪದ ಅಧ್ಯಯನದ ಗುರಿ ಮತ್ತು ಇದನ್ನು ಈಡೇರಿಸಿಕೊಳ್ಳುವುದರಲ್ಲಿ ತಳೆಯುವ ವಿಷಯದೊಂದಿಗಿನ ಸಮೀಪನ ಇವುಗಳ ಬಗೆಗೆ ವಿಶದೀಕರಣ ದೊರೆಯಿತು ಎಂಬುದಕ್ಕಾಗಿ. ಅದರಿಂದಲೆ ಅಲನ್ ಡಂಡಸ್ 'ಸಾಂಘಿಕತೆ'ಯನ್ನು ನಿರ್ವಚಿಸಿದುದು, ಅದರ ತಳಹದಿಯಲ್ಲಿ ಜಾನಪದ ಏನೆಲ್ಲವನ್ನು ಒಳಗೊಳ್ಳುತ್ತದೆ ಎಂದು ವಿಶದೀಕರಿಸಿದುದು ಮತ್ತು ಜಾನಪದ ಅಧ್ಯಯನದ ಗುರಿಯನ್ನು ಸ್ಪಷ್ಟಪಡಿಸಿದುದು.

ಹಳಗಾಲದಲ್ಲಿ 'ಸಾಂಘಿಕತೆ' ಎಂಬುದನ್ನು ಬಳಸುತ್ತಿದ್ದುದು ಗ್ರಾಮೀಣರು ಎನ್ನುವುದಕ್ಕೊ, ಕೃಷಿಕ ಸಮುದಾಯ ಎನ್ನುವುದಕ್ಕೊ ಆಗಿತ್ತು. ಆದ್ದರಿಂದ ಅಂದಿನ ಜಾನಪದವು ಮೇಲೆ ಹೇಳಿದ ಸಾಂಘಿಕತೆಗಳ ಜೀವನವಾಗಿತ್ತು. ಆಧುನಿಕ ಕಾಲದಲ್ಲಿ ನಾಗರಿಕತೆ ಗ್ರಾಮೀಣ ಸಾಂಘಿಕತೆಯನ್ನೂ ಕೃಷಿಕ ಸಾಂಘಿಕತೆಯನ್ನೂ ಹಲವು ಬಗೆ ಪ್ರಮಾಣಗಳಲ್ಲಿ ಸ್ವಾಧೀನಪಡಿಸಿಕೊಂಡಿದೆ. ಎಷ್ಟರ ಮಟ್ಟಿಗೆ ಸ್ವಾಧ್ವೀನತೆ ಬೆಳೆದರೆ ಸಾಂಘಿಕತೆ ಸಾಂಘಿಕತೆಯಲ್ಲದೆ ಯೋದೀತು ಎಂದು ನಿಶ್ಚಯಿಸುವುದು ಪ್ರಯಾಸಕರವಾಗುತ್ತದೆ. ಟ್ರ್ಯಾಕ್ಟರು, ಟಿಲ್ಲರುಗಳನ್ನು ಬಳಸಿಕೊಳ್ಳುವ ಕೃಷಿಕರನ್ನು ಹೊಂದಿದ ಪಂಜಾಬಿನ ಒಂದು ಸಾಂಘಿಕತೆಯನ್ನು, ಇದು ನಗರವೋ ಗ್ರಾಮವೋ ಎಂದು ನಿರ್ಣಯಿಸುವುದು ಸಾಧ್ಯವಲ್ಲದ ರೀತಿಯಲ್ಲಿರುವ ಕೇರಳೀಯ ಗ್ರಾಮಗಳನ್ನು ಸಮಾನ ಜನಪದ (ಫೋಕ್) ಆಗಿ ಪರಿಗಣಿಸಬಹುದೆ? ಈ ಬಗೆ ಜಿಜ್ಞಾಸೆ ತಲೆದೋರಲು ಕಾರಣ ಒಂದು ವಿಷಯದ ಶಾಸ್ತ್ರೀಯವಾದ ನಿರ್ವಚನದಿಂದ ಹೊರಪಡದಿರುವುದು. ಇದೆಲ್ಲ ಉಂಟಾಗುವುದು, ಯಾವುದೊಂದು ವಿಷಯವಾದರೂ, ಅವರ ನಿರ್ವಚನದ ಮುಖ್ಯ ಕಾರ್ಯವಾದ ಉದ್ದೇಶನಿರ್ವಚನ ನೀಡದಿರುವುದರಿಂದ. ಅಧ್ಯಯನ ರೀತಿಯನ್ನೂ, ಅಧ್ಯಯನವಸ್ತುಗಳ ಪರಿಧಿಯನ್ನು ನಿರ್ಣಯಿಸುವುದು ಮುಖ್ಯವಾಗಿ ಪಠನೋದ್ದೇಶವೇ

ಆಗಿದೆ. 'ತೆಯ್ಯಂ' ಜಾನಪದವೆಂದು ಹೇಳುವುದೂ, ಕಾರ್ಮಿಕರ ಘೋಷಣೆಗಳು ಜಾನಪದ ಹೌದೋ ಅಲ್ಲವೋ ಎಂದು ತೀರ್ಮಾನಿಸುವುದೂ ಅಧ್ಯಯನೋದ್ದೇಶದ ಬೆಳಕಿನ್ನಲ್ಲಾಗಿರುತ್ತದೆ. ಹಿಂದೆ 'ಮಲಯ' ಸಮುದಾಯದ (ತೈಯ್ಯಂ ಧರಿಸಿ ಆಡುವ ಕುಲದವರ) ರಹಸ್ಯಭಾಷೆ ಜಾನಪದದ ಭಾಗವಾಗುವಾಗ ವಿದ್ಯಾರ್ಥಿಗಳ ರಹಸ್ಯಭಾಷೆ ಜಾನಪದ ಆಗದಿದ್ದುದೂ, ಇಂದು ಅದನ್ನು ಜಾನಪದವಾಗಿ ಅಂಗೀಕರಿಸುವುದೂ ಜಾನಪದದ ಉದ್ದೇಶದಲ್ಲಿ ಉಂಟಾಗಿರುವ, ಅಥವಾ ಉದ್ದೇಶವಿಲ್ಲದಿದ್ದ ಜಾನಪದ ಅಧ್ಯಯನಕ್ಕೆ ಉದ್ದೇಶದೊರೆತಾಗ ಒದಗಿದ, ಬದಲಾವಣೆಯ ಫಲವಾಗಿದೆ.

ಇವತ್ತು ಜಾನಪದ ಅಧ್ಯಯನಕ್ಕೆ ಸುವ್ಯಕ್ತವಾದ ಉದ್ದೇಶವೂ ವ್ಯಾಪ್ತಿಯೂ ಇದೆ. ಜಾನಪದ ಅಧ್ಯಯನದ ಉದ್ದೇಶ ಸಾಂಘಿಕತೆಯನ್ನು ಗುರುತಿಸುವುದಾಗಿದೆ. ಯಾವುದೆ ಸಾಂಘಿಕತೆಯ ಸ್ವತ್ವವನ್ನು ಕಂಡುಕೊಳ್ಳವ ನಿಟ್ಟಿನ ಯಾವುದೊಂದು ಅಧ್ಯಯನವೂ ಜಾನಪದ ಅಧ್ಯಯನ ಎನಿಸಿಕೊಳ್ಳುತ್ತದೆ. ಅದು ಕೇರಳೀಯ ಪರಿಸರದಲ್ಲಿ ಜಾತಿ ಎಂಬ ಸಾಂಘಿಕತೆಯನ್ನು ಗುರುತಿಸಲು ಇರುವ ಶ್ರಮವಾಗಬಹುದು; ಯಾವುದಾದರೂ ಕಾರ್ಮಿಕರ ಸಮೂಹದ ಸ್ವತ್ವವನ್ನು ಕಂಡುಹಿಡಿಯುವ ನಿಟ್ಟಿನ ಶ್ರಮವೂ ಆಗಬಹುದು. ಇತರ ವಿದ್ಯಾರ್ಥಿ ಸಮೂಹಗಳಿಂದ ಒಂದು ವಿದ್ಯಾರ್ಥಿ ಸಮೂಹ ಹೇಗೆ ಭಿನ್ನವಾಗಿದೆ ಎಂದು ತಿಳಿಯುವ ಶ್ರಮವೂ ಆಗಬಹುದು. ಈ ಬಗ್ಗೆ ಅಧ್ಯಯನ ಸ್ವಾಭಾವಿಕವಾಗಿ ಒಂದು ಮಾನವಸಮೂಹವನ್ನು ಸಾಂಘಿಕತೆಗೆ ತಿರುಗಿಸುವ ಪರಂಪರಾಗತ ಸ್ವಭಾವದ ಕುರಿತಾದ ಅಧ್ಯಯನವಾಗಿಬಿಡುತ್ತದೆ.

ವ್ಯಕ್ತಿಯು ಮೂರ್ತವಾದ ವಾಸ್ತವ ಹೌದಾದರೂ ವ್ಯಕ್ತಿಗಳು ಸೇರಿ ಸಾಂಘಿಕವಾಗಿಯೆ ಮಾನವ ಜೀವನ ನಡೆಯುತ್ತಿರುವುದು. ಅನೇಕ ವೈಶಿಷ್ಟ್ಯಗಳು ಒಂದು ಗುಂಪಿನ ವ್ಯಕ್ತಿಗಳಿಂದ ಇನ್ನೊಂದು ಗುಂಪಿನ ವ್ಯಕ್ತಿಗಳನ್ನು ಭಿನ್ನರನ್ನಾಗಿ ಮಾಡುತ್ತವೆ. ಅದೇ ರೀತಿ ವ್ಯಕ್ತಿಗಳ ರಾಶಿಯಾದ ಸಾಂಘಿಕತೆಗೆ ಒಟ್ಟಿನ ವೈಶಿಷ್ಟಗಳು ಬಂದುಬಿಡುತ್ತವೆ. ಈ ವೈಶಿಷ್ಟ್ಯಗಳೇ ವಿಭಿನ್ನ ವ್ಯಕ್ತಿಗಳನ್ನು ಒಂದು ಸಾಂಘಿಕತೆಗಾಗಿ ಒಂದುಗೂಡಿಸುವುದು. ಈ ಘಟಕಗಳನ್ನೆ ಅಂದರೆ ಸಾಂಘಿಕತೆಯಲ್ಲಿರುವ ಎಲ್ಲ ವ್ಯಕ್ತಿಗಳೂ ಸಮಾನವಾದ ರೀತಿಯಲ್ಲಿ ಕೈಗೊಳ್ಳುವ ವೈಶಿಷ್ಟ್ಯಗಳನ್ನೆ, ಆ ಸಾಂಘಿಕತೆಯ ಜಾನಪದ ಎಂದು ಅರ್ಥಯಿಸುವುದು. ಒಂದು ಸಾಂಘಿಕತೆಯ ಜಾನಪದವು ಇತರ ಸಾಂಘಿಕತೆಯ ಜಾನಪದಗಳೊಳಗೆ ಸಾಮಾನವೂ, ವಿರುದ್ಧವೂ ಆದ ಸಂಬಂಧವನ್ನು ಸಾಧಿಸುವುದುಂಟು. ವಿರುದ್ಧವಾದ ಸಂಬಂಧಗಳೇ ಒಂದು ಸಾಂಘಿಕತೆಯಿಂದ ಇನ್ನೊಂದು ಸಾಂಘಿಕತೆಯನ್ನು ಅಗಲಿಸಿ ನಿಲ್ಲಿಸುವುದು. ಜಾನಪದ ಅಧ್ಯಯನದ ಉದ್ದೇಶ ಒಂದು ಸಾಂಘಿಕತೆಯ ಸ್ವತ್ವವನ್ನು ಕಂಡರಿತುಕೊಳ್ಳುವುದೇ ಆಗುವಾಗ ಅದು ಸಮಾನವೂ ವಿರುದ್ಧವೂ ಆದ ವೈಶಿಷ್ಟ್ಯಗಳನ್ನು ಮನವರಿತುಕೊಳ್ಳುವುದೇ ಆಗಿಬಿಡುತ್ತದೆ. ಸಾಂಘಿಕತೆಯ ಘಟಕಗಳಾದ ವ್ಯಕ್ತಿಗಳು ತಾವು ಒಂದೇ ಸ್ವತ್ವದ ಭಾಗಗಳಾಗಿದ್ದೇವೆ ಎಂದು ಗುರುತಿಸಿಕೊಳ್ಳುವುದು ಒಂದೇ 'ಜಾನಪದ'ವನ್ನು ಅವರು ಹಂಚಿಕೊಳ್ಳುವ ಮೂಲಕವಾಗಿರುತ್ತದೆ.

ಯಾವುದಾದರೂ ಒಂದು ಜಾತಿಯನ್ನು ನಾವು ಸಾಂಘಿಕತೆಯಾಗಿ ಗಣಿಸುವುದಾದರೆ, ಆ ಜಾತಿಗೆ ಸೇರಿದವರು ಕೈಗೊಳ್ಳುವ ಎಲ್ಲ ಆಚರಣೆಗಳನ್ನೂ ಅವರ ಜಾನಪದ ಎಂದು ತೆಗೆದುಕೊಳ್ಳಬೇಕಾಗುತ್ತದೆ. ಜನನದಿಂದ ಮರಣದ ವರೆಗಿನ ಜೀವನಾವರ್ತನದ ಆಚರಣೆಗಳು, ಹಬ್ಬಗಳು, ಲೋಕಗೀತೆಗಳು ಮೊದಲಾದ ಎಲ್ಲ ವಿಷಯಗಳು ಅದರ ಜಾನಪದದ ಭಾಗವಾಗಿರುತ್ತವೆ. ಅವುಗಳಿಂದಲೆ ಅವರು ಮಿಕ್ಕವರಿಂದ ಭಿನ್ನವಾದ ತಮ್ಮ ಸ್ವತ್ವವನ್ನು ಗುರುತಿಸಿಕೊಳ್ಳುವುದು ಮತ್ತು ವ್ಯಕ್ತಿಗಳ ನಡುವೆ ಸಾಂಘಿಕತೆ ಪ್ರಜ್ಞೆ ಉಂಟಾಗುವುದು.

ಮೇಲೆ ಹೇಳಿದ ವಾಸ್ತವಗಳು ನಮ್ಮನ್ನು ನಡೆಸುವುದು ಸಾಂಘಿಕತೆಯ ನಿರ್ವಚನದೆಡೆಗಾಗಿಯೇ, ಕೆಲವೊಂದು ವಿಶೇಷತೆಗಳಿಂದ ಒಂದು ಗುಂಪಿನ ವ್ಯಕ್ತಿಗಳಿಗೆ, ತಾವು ಯಾವುದೇ ಒಂದರ ಭಾಗವಾಗಿದ್ದೇವೆ ಎಂಬ ಭಾವನೆ ಬರುವಾಗಲೆ ಒಂದು ಸಾಂಘಿಕತೆಯ ಸೃಷ್ಟಿಯಾಗುವುದು. ಅಕಾಡೆಮಿಕ್ ರೀತಿಯಲ್ಲಿ ಸಮೀಪನ ಹೊಂದುತ್ತ ಒಂದು ಗುಂಪು ವ್ಯಕ್ತಿಗಳು ಹಲವು ವಿಷಯಗಳಲ್ಲಿ ಸಮಾನತೆ ತಳೆಯುವಾಗ ಅವರನ್ನು ಒಂದು ಸಾಂಘಿಕತೆಯಾಗಿ ತೆಗೆದುಕೊಳ್ಳಲಾಗುತ್ತದೆ. ಹೀಗಾಗುವಾಗ ಒಂದು ದೊಡ್ಡ ಸಾಂಘಿಕತೆಯ ಒಳಗಡೆ ಎಷ್ಟೋ ಉಪಸಾಂಘಿಕತೆಗಳು ಉಂಟಾಗಬಲ್ಲುದು. ಉತ್ತರ ಮಲಬಾರಿನ ಜನರು (ಕೇರಳದ) ಇತರ ಭಾಗಗಳ ಜನರಿಗಿಂತ ಪ್ರತ್ಯೇಕತೆಯನ್ನು ಪಾಲಿಸುತ್ತಿರುವುದರಿಂದ ಅವರನ್ನು ಒಯದು ಸಾಂಘಿಕತೆಯಲ್ಲಿ ಗುರುತಿಸಬಹುದು. ಅದರ ಜತೆಗೆ ಉತ್ತರ ಮಲಬಾರಿನಲ್ಲೆ ಹಲವು ವಿಭಿನ್ನ ಪ್ರದೇಶಗಳೂ, ವಿಭಿನ್ನ ಜಾತಿಗಳೂ ಸ್ವಕೀಯವಾದ ವಿಶೇಷತೆಗಳನ್ನು ಬದುಕಿನಲ್ಲಿ ಹೊಂದಿ ನಡೆಯುವವುಗಳಾಗಿವೆ. ಆದ್ದರಿಂದ ಅವುಗಳಲ್ಲಿ ಒಂದೊಂದೂ ಪ್ರತ್ಯೇಕ ಸಾಂಘಿಕತೆಯಾಗಿದೆ. ಒಬ್ಬ ವ್ಯಕ್ತಿ ಏಕಕಾಲದಲ್ಲಿ ವಿಭಿನ್ನ ಸಾಂಘಿಕತೆಗಳ ಭಾಗವಾಗಬಲ್ಲ. ಅದು ತೀರ್ಮಾನಗೊಳ್ಳುವುದು ಪರಿಗಣನೆಯಲ್ಲಿರುವ ಜಾನಪದ ಘಟಕಗಳು ಯಾವುದೆಲ್ಲ ಎಂಬುದರ ತಳಹದಿಯಲ್ಲಾಗಿರುತ್ತದೆ. ಒಬ್ಬಾತ ಒಂದೇ ಸಂದರ್ಭದಲ್ಲಿ ಯುವಕನಾಗಿರುವಲ್ಲಿ ಆತ ಯುವಜನ ಸಾಂಘಿಕತೆಯ ಭಾಗವಾಗಿಯೂ, ಗಂಡಾದರೆ ಪುರುಷ ಸಾಂಘಿಕತೆಯ ಭಾಗವಾಗಿಯೂ, ಆತ ವಿದ್ಯಾರ್ಥಿಯಾಗಿರುವುದಾದರೆ ವಿದ್ಯಾರ್ಥಿ ಸಾಂಘಿಕತೆಯ ಭಾಗವಾಗಿಯೂ, ನಾಯರ್ ಜಾತಿಯವನಾದರೆ ನಾಯರ್ ಸಾಂಘಿಕತೆಯ ಭಾಗವಾಗಿಯೂ, ಯಾವುದಾದರೂ ಸಾಂಸ್ಕೃತಿಕ ರಂಗದ ಭಾಗವಾಗಿದ್ದರೆ ಆ ಸಾಂಘಿಕತೆಯ ಭಾಗವಾಗಿಯೂ, ಪ್ರಾದೇಶಿಕವಾಗಿ ಉತ್ತರ ಮಲಬಾರಿನವನಾದರೆ ಉತ್ತರ ಮಲಬಾರ್ ಸಾಂಘಿಕತೆಯ ಭಾಗವಾಗಿಯೂ ಆಗಿರುತ್ತಾನೆ.

ಮೇಲ್ಕಾಣಿಸಿದ ವಾಸ್ತವದ ಬಳಕಿನಲ್ಲಿ ಇಂದು ಜಾನಪದವನ್ನು ಗುರುತಿಸುವುದು ಸಾಂಘಿಕತೆಯ ಹಿನ್ನೆಲೆಯಲ್ಲೆಂದೂ, ಸಾಂಘಿಕತೆಗಳ ಗುರುತರಿಯುವುದು ಜಾನಪದಗಳ ಸಮೂಹಗಳಿಂದ ಎಂದೂ ಗೊತ್ತಾಗುತ್ತದೆ. ಚುಟುಕಾಗಿ ಹೇಳುವುದಾದರೆ, ಸಾಂಘಿಕತೆಯ ಕುರಿತಾದ ಅಧ್ಯಯನವೇ ಜಾನಪದ. ಅದು ಸಾಂಘಿಕತೆಯ ವೀಕ್ಷಣೆಯಲ್ಲಿ ಒಂದು ಜಾನಪದ ವಿಷಯವನ್ನು ಗುರುತರಿಯುವುದರ ಶ್ರಮವಾಗಿರಬಹುದು. ಜಾನಪದಗಳ ಬೆಳಕಿನಲ್ಲಿ ಸಾಂಘಿಕತೆಯ ಸ್ವತ್ವವನ್ನು ಗುರುತಿಸಿ ಅರಿಯುವ ಶ್ರಮವೂ ಆಗಬಹುದು. ಸಾಂಘಿಕತೆಯೊಂದಿಗೆ ಜೀವಿಸುವಂಥ ಹಲವು ಜಂತುಗಳು ಇರುವವಾದರೂ ಸಾಂಘಿಕ ಜೀವನಕ್ಕೆ ಅನುಸಾರವಾಗಿ ನಡವಳಿಕೆ ಶಿಸ್ತುಗಳನ್ನೂ, ಜೀವನರೀತಿಗಳನ್ನೂ ಸೃಷ್ಟಿಸುವ ಜಂತು ಮನುಷ್ಯ ಮಾತ್ರ. ಸಾಮೂಹಿಕವಾದ ಜೀವನಕ್ಕೆ ಸಾಂಘಿಕತೆಯಲ್ಲಿರುವ ಎಲ್ಲ ಸದಸ್ಯರೂ ಒಂದೊಂದು ವಿಷಯದಲ್ಲೂ ಸಮಾನವಾದ ರೀತಿಯಲ್ಲಿ ವರ್ತಿಸುವುದು ಅವಶ್ಯ. ಹಾಗಿದ್ದರೆ ಮಾತ್ರ ಆಶಯವಿನಿಮಯ ಸಾಧ್ಯವಾದೀತು. ಈ ಬಗೆ ನಡವಳಿಕೆಯನ್ನೆ ಒಂದು ಸಾಂಘಿಕತೆಯ 'ಜಾನಪದ' ಎಂಬ ಪ್ರಯೋಗದಿಂದ ಉದ್ದೇಶಿಸುವುದು. ಜಾನಪದ ಸೃಷ್ಟಿಗೊಳ್ಳುವುದು, ನೆಲೆನಿಲ್ಲುವುದು ಸಾಂಘಿಕ ಜೀವನಕ್ಕೆ ಅನುಪೇಕ್ಷಣೀಯವಾದ ಘಟಕ ಎಂಬ ನೆಲೆಯಲ್ಲಾಗಿದೆ. ಆದ್ದರಿಂದ ಒಂದು ಜಾನಪದ ರೂಪುದಳೆಯುವುದು ಸಾಂಘಿಕಜೀವನಕ್ಕೆ ಅನುಸಾರವಾಗಿರುತ್ತದೆ. ಇದರ ಅರ್ಥ ಜಾನಪದಕ್ಕೆ ಆ ಆ ಸಾಂಘಿಕತೆಯಲ್ಲಿ ಸ್ಪಷ್ಟವಾದ ಧರ್ಮವಿದೆ ಎಂಬುದಾಗಿದೆ. ಮಾತ್ರವಲ್ಲ ಒಂದು ಜಾನಪದದ ಧರ್ಮಕ್ಕೆ ಅದೇ ಸಾಂಘಿಕತೆಯ ಇತರ ಜಾನಪದಗಳ ಧರ್ಮಗಳೊಂದಿಗೆ ಸಂಬಂಧವಿದೆ. ಉದಾಹರಣೆಗೆ ಉತ್ತರಕೇರಳದಲ್ಲಿ

ಹಳಗಾಲದಲ್ಲಿ 'ಮುರಪ್ಪೆಣ್ಣ್' ಸಂಪ್ರದಾಯವಿತ್ತು (ಮಾವನ ಮಗಳು ಹಕ್ಕಿನ ವಧುವಾಗುವುದು). ಅಥವಾ 'ಮುರಚ್ಚೆರುಕ್ಕ'ನಿಗೆ (ಸೋದರ ಅಳಿಯನಿಗೆ)ಹಕ್ಕಿನ ವಧು ಮಾವನ ಮಗಳು. ಈ ಬಗೆಯ ಒಂದು ಜಾನಪದ ರೂಪುಗೊಂಡುದು ಅಂದಿನ ಉತ್ತರ ಕೇರಳದ ವಿಶಿಷ್ಟ ಸಾಮಾಜಿಕ ಪರಿಸ್ಥಿತಿಯಲ್ಲಾಗಿತ್ತು. 'ಮುರಪ್ಪೆಣ್ಣು' ಪದ್ಧತಿ ಈಡೇರಿಸುವ ಒಂದು ಮುಖ್ಯವಾದ ಧರ್ಮವೆಂದರೆ ಕುಟುಂಬದ ಆಸ್ತಿ ತಲೆಮೊರೆಗಳಮೂಲಕವೂ ಪರಾಧೀನಗೊಳ್ಳುವುದಿಲ್ಲ ಎಂಬುದಾಗಿದೆ. ಇಂತಹ ಇನ್ನೂ ಹಲವು ಧರ್ಮಗಳು ಈ ಒಂದು ಜಾನಪದದಲ್ಲಿ ಈಡೇರುತ್ತವೆ. ಅನಂತರದ ಕಾಲಘಟ್ಟದಲ್ಲಿ ಹಲವಾರು ಕಾರಣಗಳಿಂದ 'ಮುರಪ್ಪೆಣ್ಣ'ನ್ನು ಮಾತ್ರ ಮದುವೆಯಾಗಬೇಕೆಂಬ ಆಗ್ರಹವನ್ನು ಕೈಬಿಡಬೇಕಾಗಿ ಬಂದಾಗ, ಈ ಸಾಂಘಿಕತೆಯಲ್ಲಿ ವಿವಾಹ ಸಂಬಂಧವಾಗಿ ಹೊಸದಾದ 'ಮಚ್ಚುನಿಯನ್‌ಪಣಂ' ಎಂಬ ಇನ್ನೊಂದು ಜಾನಪದ ಸೃಷ್ಟಿಯಾಯಿತು. ವರನ ಕಡೆಯವರು ವಧುವಿನ ಮಾವನ ಮಗನಿಗೆ ಹಣ ನೀಡಿ ಆತನ ಹಕ್ಕನ್ನು ಬಿಡಿಸುವುದು ಈ ವಿಧಿಯ ಸಾರ. ಸಾಂಘಿಕತೆಯ ಜೀವನವು ಬದಲಾವಣೆಗೆ ವಿಧೇಯವಾಗುವುದರಂದ ಜಾನಪದ ನಿರ್ವಹಿಸುತ್ತಿರುವ ಧರ್ಮಗಳಿಗೂ ಬದಲಾವಣೆ ಉಂಟಾಗುತ್ತದೆ. ಈ ಬದಲಾವಣೆಗಳಿಗೆ ಅನುಸಾರವಾಗಿ ಜಾನಪದ ಬದಲಿಕೊಳ್ಳುವುದೋ, ಹೊಸ ಜಾನಪದ ಸೃಷ್ಟಿಯಾಗುವುದೊ ಸಂಭವಿಸುತ್ತದೆ. ಕಣ್ಣೆದುರಿಗಿರುವ ಜಾನಪದ ಸಮುಚ್ಚಯದ ಹಿಂದುಗಡೆ ಧರ್ಮಗಳ ಒಂದು ವ್ಯೂಹ ಕೆಲಸ ಮಾಡುತ್ತದೆ. ಧರ್ಮಗಳಲ್ಲಿ ಉಂಟಾಗುವ ಬದಲಾವಣೆಯನ್ನು ಅನುಸರಿಸಿ ಧರ್ಮಗಳನ್ನು ಈಡೇರಿಸುವ ಪ್ರತ್ಯಕ್ಷ ರೂಪಗಳಾದ ಜಾನಪದಗಳಿಗೆ ಬದಲಾವಣೆಗೊಳ್ಳದೆ ಬಗೆಯಿಲ್ಲ. ಈ ರೀತಿ ಯೋಚಿಸುವಾಗ ನಮ್ಮ ಜಾನಪದ ಕಲೆಗಳಿಗೂ ಜಾನಪದ ಗೀತೆಗಳಿಗೂ ಉಂಟಾಗುವ ಪರಿವರ್ತನೆ ಮತ್ತು ಕೆಲವೊಮ್ಮೆ ಸಂಭವಿಸುವ ನಾಶವೂ ಧರ್ಮಸಂಬಂಧವಾಗಿ ಅನಿವಾರ್ಯವೆಂದು ಪರಿಗಣಿಸಬಹದು. ಹಳೆಯ ಜೀವನ ರೀತಿ ಬದಲುವಾಗ ಹಳೆಬದುಕಿನ ಪ್ರಕಟ ರೂಪಗಳಾದ ಜಾನಪದಕಲೆಗಳು ಮುಂತಾದವು ಬದಲಾಗಬಾರದು ಎಂದು ಹಠಹಿಡಿಯುವುದು ತರ್ಕಕ್ಕೆ ಸೇರುವಂಥದ್ದಲ್ಲ. ಊರ್ಜಿತದಲ್ಲಿರುವ ಯಾವ ಜಾನಪದಕ್ಕೂ ತನ್ನದೇ ಆದ ಧರ್ಮಗಳಿವೆ. ಹಲವು ಧರ್ಮಗಳನ್ನು ಸಾಧಿಸುವ ಒಂದು ಜಾನಪದ ರೂಪವನ್ನು ಒತ್ತಾಯದಿಂದ ಇನ್ನೇನಾದರೂ ಉದ್ದೇಶದೊಂದಿಗೆ ನಿಷೇಧಿಸಿದರೆ ಸಮೂಹಜೀವನದ ಚೌಕಟ್ಟಿನ ಮೇಲೆಯೆ ಅದರ ಬಾಧೆ ತಟ್ಟುತ್ತದೆ.

ದೇವತೆಗಳನ್ನು ತೃಪ್ತಿಪಡಿಸಲು ಬಲಿ ನೀಡಲಿಕ್ಕಿದೆ ಎಂಬ ಹಳೆಯ ತರ್ಕ ಹಲವು ಕಾಲಗಳಿಂದ ನೆಲೆಗೊಂಡಿರುವುದರಿಂದ ನರಬಲಿ ಮೃಗಬಲಿಯಾಗಿ ಬದಲಿತಲ್ಲದೆ, ಮೃಗಬಲಿಯೂ ಸಾಧ್ಯವಾಗದೆ ಹೋದುದರಿಂದ ಕೆನ್ನೀರು (ಕುರುನೀರು) ಕಲಸಿ ಇಡುವುದು, ಎಳಗುಂಬಳ ಕಡಿದು ಸುಣ್ಣ, ಅರಸಿನಪುಡಿ ಸವರುವುದು ಇತ್ಯಾದಿಯನ್ನು ಮಾಡುವುದಾಯಿತು. ವೀರಗಲ್ಲುಗಳು 'ವೀರನ್ ತೆಯ್ಯಂ' ಆಗಿ ಬದಲುವುದೂ, ಬಲಿದಾನ ಸ್ತೂಪಗಳಾಗುವುದೂ ಇದಕ್ಕೆ ಸಮನಾದ ಪ್ರಕ್ರಿಯೆಯೇ. ಧರ್ಮ ಸ್ಥಿರಗೊಳ್ಳುವ ವೇಳೆ ಅನಿವಾರ್ಯವಾದ ಹಲವು ಕಾರಣಗಳಿಂದ ಒಂದು ಜಾನಪದವನ್ನು ನಿರಾಕರಿಸುವಾಗ ಅದು ನೆರವೇರಿಸುವ ಧರ್ಮವನ್ನು ಕೈಗೂಡಿಸಲು ಹೊಸ ಜಾನಪದರೂಪ ಪ್ರತ್ಯಕ್ಷವಾಗುತ್ತದೆ ಎಂಬುದಕ್ಕೆ ಇವು ಉದಾಹರಣೆಗಳು, ಮಕ್ಕಳಾಗದಿರುವುದಕ್ಕೆ ಕಾರಣ ದುಷ್ಟಶಕ್ತಿಗಳ ಬಾಧೆ ಎಂಬ ನಂಬಿಕೆ ಇಲ್ಲವಾದಾಗ 'ಮಲಯನ್‌ಕೆಟ್ಟ್' ಎಂಬ ಬಾಧೆ ಉಚ್ಚಾಟನೆಯ ವಿಧಿ ನಿರ್ಮೂಲನಗೊಳ್ಳುತ್ತದೆ. ನಮ್ಮ ಸಾಂಘಿಕತೆಯಲ್ಲಿ ಹಿಂದೆ ಇರದಿದ್ದ ಬಾಂಧವ್ಯದ ಹೆಸರುಗಳು ಈಚಿನ ಕಾಲಘಟ್ಟದಲ್ಲಿ ಸೃಷ್ಟಿಗೊಂಡುದನ್ನು ಕಾಣುತ್ತೇವೆ. 'ಮಾಮನ್' (ಮಾವ) ಎಂಬ ಶಬ್ದಕ್ಕೆ ಈಗ

ಹೊಸ ಅರ್ಥ ಬಂದಿದೆ. ಇದು ಬಾಂಧವ್ಯದಲ್ಲಿ ಬಂದು ಸೇರಿರುವ ಹೊಸದೊಂದು ಧರ್ಮವನ್ನು ಪ್ರಕಟಿಸುವುದಕ್ಕಿರುವ ಪದವಾಗಿ ಬಳಕೆಗೆ ಬಂದಿದೆ. ಈಚೆಗೆ ಪತ್ನಿ ಪತಿಯನ್ನು 'ಚೇಟ್ಟಾ' ಎಂದು ಕರೆಯುವುದು ಗಂಡ–ಹೆಂಡಿರ ಸಂಬಂಧದಲ್ಲಿ ಬಂದುಸೇರಿರುವ ಬದಲಾವಣೆಯ ಫಲವಾಗಿದೆ.

ಜಾನಪದದ ಧರ್ಮಗಳು

ಜಾನಪದಕ್ಕೆ ಮುಖ್ಯವಾಗಿ ನಾಲ್ಕು ಧರ್ಮಗಳಿವೆ ಎಂದು ವಿಲಿಯಂ ಆರ್. ಬಾಸ್ಕಂ ಅವರು ಹೇಳುತ್ತಾರೆ.

ಒಂದು : ಬಲವಂತದಿಂದ ಅದುಮಿದ ಮನುಷ್ಯನ ಭಾವನೆಗಳನ್ನು ಮತ್ತು ಹಂಬಲಗಳನ್ನು ಪ್ರತಿಫಲಿಸುವುದು ಮತ್ತು ಈ ಅಸ್ವಸ್ಥತೆಯಿಂದ ಭಾವನೆಗಳ ಲೋಕಕ್ಕೆ ಪಾರಾಗಿ ತನ್ನನ್ನು ಸಂರಕ್ಷಿಸಿಕೊಳ್ಳುವುದು – ಇವುಗಳಿಗೆ ಕಂಡುಕೊಂಡ ದಾರಿಯೆ ಜಾನಪದ. ವ್ಯಕ್ತಿ ತನ್ನ ಅದುಮಿದ ಬಯಕೆಗಳನ್ನು ಸ್ವಪ್ನದ ಮೂಲಕ ಈಡೇರಿಸಿಕೊಳ್ಳುವ ಹಾಗೆ ಸಮೂಹ ಜೀವನದಲ್ಲಿ ವ್ಯಕ್ತಿಗಳಿಗೆ ಸ್ವಂತ ಹಂಬಲ, ಭಾವನೆಗಳಿಗೆ ಕಡಿವಾಣ ಹಾಕುವ ಸ್ಥಿತಿಯುಂಟಾಗುವಾಗ ಆತ ಜಾನಪದದ ಲೋಕವೊಂದನ್ನು ಸೃಷ್ಟಿಸುತ್ತಾನೆ ಹಾಗೂ ಆ ಮೂಲಕ ತನ್ನ ಮನಸ್ಸನ್ನು ಸಂತೈಸಿಕೊಳ್ಳುತ್ತಾನೆ. ರೈಲುಬಂಡಿಯ ಮೂತ್ರಿಗಳಲ್ಲೂ, ತ್ಯಜಿಸಿದ ಮನೆಯ ಗೋಡೆಗಳ ಮೇಲೂ ಅಶ್ಲೀಲತೆ ಮೂಡುವುದು ಇದಕ್ಕಾಗಿಯೇ. ಭೌತಿಕ ಜೀವನದಲ್ಲಿ ಜಾತಿ ಎಂಬುದು ಕ್ರೂರವಾದ ಒಂದು ಅನುಭವವಾಗಿ ಪರಿಣಮಿಸುವಾಗ, ಕಾರ್ಗತ್ತಲೆಯಲ್ಲಿ ಗುಂಪುಸೇರಿ 'ಜಾತಿಭೇಧವಿಲ್ಲ' ಎಂದು ಶಿವನ ಮೂಲಕ ಹೇಳಿಸುವುದು ಮತ್ತು ಆ ಮೂಲಕ ಸಮಾಧಾನಪಟ್ಟುಕೊಳ್ಳುವುದೇ 'ಪೊಟ್ಟನ್ ತೆಯ್ಯಂ' ಆರಾಧನೆ ಮೂಲಕ 'ಪುಲಯ' ಮತ್ತು 'ಮಲಯ' ಜನಾಂಗದವರು ಮಾಡುವುದು.

ಎರಡು: ಜಾನಪದವು ಸಂಸ್ಕೃತಿಗಿರುವ ಸಮರ್ಥನೆ ವಿಧಾನ ಕೂಡ. ಚಡಂಗಗಳು (ವಿಧಿಗಳು) ಮತ್ತು ಆಚಾರ ಸಂಹಿತೆಗಳು– ಆಚರಿಸುವವರಿಗೂ, ಅದರಲ್ಲಿ ಪಾಲುಗೊಳ್ಳುವವರಿಗೂ ಅನೇಕ ವಿಷಯಗಳು ಸಮರ್ಥನೆಯಾಗಿವೆ. ಯಾಕಾಗಿ ಹಾವಿಗೆ ಮಾತ್ರ ಸೀಳು ನಾಲಿಗೆ ಇದೆ ಎಂಬುದು ಹಳೆಯ ಮನಸ್ಸು ಇದಿರಿಸಬೇಕಾದ ಪ್ರಶ್ನೆಯಾಗಿತ್ತು. ಆ ಪ್ರಶ್ನೆಗೆ ಇರುವ ಉತ್ತರವೆ ದರ್ಭೆಗೆ ಅಮೃತ ಬಿದ್ದಾಗ ಹಾವುಗಳು ನೆಕ್ಕಿದುದರಿಂದ ದರ್ಭೆಹುಲ್ಲಿನ ಅಲಗು ತಗಲಿ ಅವುಗಳ ನಾಲಿಗೆ ಸೀಳಾಗಿಹೋದವು ಎಂಬ ಐತಿಹ್ಯ. ಸಾಂಘಿಕತೆಯು ವಿಧಿಸುವ ಅನೇಕ ಆಚಾರಗಳು ವ್ಯಕ್ತವಾಗುವುದು ಗಾದೆ ಮಾತುಗಳ ಮೂಲಕವಾಗಿರುತ್ತದೆ. 'ಎಟಕದ ದ್ರಾಕ್ಷೆ ಹುಳಿ' (ಕಿಟ್ಟಾತ್ತ ಮುನ್ತಿರಿ ಪುಳಿಕ್ಕುಂ), 'ಕಡಲಿಗೆ ಎಸೆಯುವುದಾದರೂ ಎಣಿಸಿಯೇ ಎಸೆಯಬೇಕು (ಕಟಲಿಲೆಜಿಯಾಂಬೋಟಿಂ ಎಣ್ಣಿಯೆಜಿಯಣಂ) ಇತ್ಯಾದಿ ಗಾದೆ ಮಾತುಗಳು ಇದಕ್ಕೆ ಉದಾಹರಣೆಗಳು.

ಮೂರು: ವಿದ್ಯಾಭ್ಯಾಸ– ಜಾನಪದವು ಸಂಬಂಧಪಟ್ಟ ಜನಾಂಗದ ವಿದ್ಯಾಭ್ಯಾಸದ ಸಾಧನವೂ ಹೌದು. ವಿಶೇಷತಃ ಅಕ್ಷರಜ್ಞಾನವಿಲ್ಲದಿದ್ದ ಸಮುದಾಯಗಳಲ್ಲಿ, ಅಕ್ಷರಜ್ಞಾನವಿಲ್ಲದ ಜನರು ಜೀವನಸಂಗ್ರಾಮಕ್ಕೆ ಬೇಕಾದ ಎಲ್ಲ ವಿಧಿ ವಿಧಾನಗಳನ್ನು ಕಲಿಯುವುದು ಜಾನಪದದ ಮೂಲಕವೇ. ಜೀವನದ ಒಂದೊಂದು ಘಟ್ಟದಲ್ಲೂ ಹೇಗೆ ನಡೆದುಕೊಳ್ಳಬೇಕು ಎಂಬ ಬಗೆಗೆ ಸಾಂಘಿಕತೆಗಳ ವ್ಯಕ್ತಿಗಳಿಗೆ ಯಾವ ಸಂಶಯೂ ಇರುವುದಿಲ್ಲ. ಆಹಾರ ಸಂಗ್ರಹ, ನ್ಯಾಯಾನ್ಯಾಯ ವಿವೇಚನೆ ಇವುಗಳಲ್ಲಿ ಅವರು ಸ್ವಯಂಶಿಕ್ಷಿತರು. ಆಫ್ರಿಕದ ಕೆಲ ಬುಡಕಟ್ಟುಗಳಲ್ಲಿ ನೀತಿನ್ಯಾಯ ತೀರ್ಪುಗಳನ್ನು ಅಲ್ಲಿನ ಗಾದೆ ಮಾತುಗಳು ಮತ್ತು ಆಚಾರವಿಧಿಗಳನ್ನು ಆಧರಿಸಿ ನೀಡುತ್ತಾರೆ. ನಮ್ಮ

ಸಮಾಜದಲ್ಲಿ ಹೊಸ ತಲೆಮಾರು 'ತೆಯ್ಯಂ' ಅನ್ನೂ 'ತಿಱ'(ರ)ಯನ್ನೂ ಕಲಿಯುವುದು ವಿದ್ಯಾಭ್ಯಾಸ ಪದ್ಧತಿಯಲ್ಲಿ ಅಲ್ಲ.

ಆಧುನಿಕ ಸಮಾಜದಲ್ಲಿ ಸಾಮೂಹಿಕ ಜೀವನಕ್ಕೆ ಅವಶ್ಯವಾದ ವಿವಿಧ ವಿಷಯಗಳನ್ನು ನಾವು ಕಲಿಯುವುದು ವ್ಯವಸ್ಥಿತ ಶಿಕ್ಷಣ ಪದ್ಧತಿಯಲ್ಲಾಗಿದೆ. ಹಾಗಿದ್ದರೂ ಸಾಂಘಿಕತೆಯ ಒಬ್ಬ ಸದಸ್ಯ ಎಂಬ ನೆಲೆಯಲ್ಲಿ ಒಬ್ಬ ವ್ಯಕ್ತಿ ಎಲ್ಲ ನಡವಳಿಕೆ ರೀತಿ ನೀತಿಗಳನ್ನು ಮೈಗೂಡಿಸಿಕೊಳ್ಳುವುದು ಜಾನಪದದ ಮೂಲಕವೇ. ಮದುವೆ ಚಪ್ಪರದಲ್ಲಿ ವರ ಮತ್ತು ವಧು ಹೇಗೆ ನಡೆದುಕೊಳ್ಳಬೇಕು ಎಂಬುದು ಶಾಲೆಯಲ್ಲಿ ದೊರೆಯುವ ಅರಿವಲ್ಲ. ಬದಲಾಗಿ ಕಂಡು, ಕೇಳಿ ಸಿಗುವ ಅರಿವು ಅದು.

ನಾಲ್ಕು: ಸ್ವೀಕೃತವಾದ ಶಿಷ್ಟಾಚಾರಗಳು ಸ್ಥಿರಗೊಳ್ಳುವುದನ್ನು ಖಾತರಿಪಡಿಸುವುದು. ಸ್ವೀಕೃತ ಶಿಷ್ಟಾಚಾರಗಳ ಸ್ಥಿರೀಕರಣವನ್ನು ಜಾನಪದವು ಎರಡು ರೀತಿಯಲ್ಲಿ ಖಾತರಿಪಡಿಸುತ್ತದೆ. ಒಂದನೆಯದಾಗಿ – ಜಾನಪದವು ರೂಪುಗಳ ಮೂಲಕ ಸಾಕ್ಷಾತ್ತಾಗಿ ನಿರ್ದೇಶನ ನೀಡುವಂಥದಾಗಿದೆ. ಗಾದೆಮಾತುಗಳು, ನೀತಿಕತೆಗಳು, ನಂಬಿಕೆಗಳು ಇತ್ಯಾದಿಗಳ ಮೂಲಕ ಮಾಡುವುದು ಇದನ್ನೇ. ಆದರೆ ಇದರಿಂದ ಬಹಳ ಭಿನ್ನವಾಗಿ, ಸ್ವೀಕೃತವಾದ ವ್ಯವಸ್ಥೆಗಳನ್ನು ಸಾಂಘಿಕತೆಯ ಸದಸ್ಯರು ಪ್ರಶ್ನಿಸುವ ಸಂದರ್ಭಗಳನ್ನು ನಿವಾರಿಸುವುದು ಎರಡನೆಯ ದಾರಿ. ಜಾನಪದಗಳಲ್ಲಿ ಬಹುಪಾಲು ಅವಲಂಬಿಸುವ ರೀತಿ ಇದೇ ಆಗಿದೆ. ಸಮೂಹವಾಗಿ ಜೀವಿಸುವಾಗ ವ್ಯವಸ್ಥೆಗಳು ಅವಶ್ಯವಾಗಿ ಬರುತ್ತವೆ. ಈ ವ್ಯವಸ್ಥೆಗಳು ವ್ಯಕ್ತಿಗಳ ಹಂಬಲಕ್ಕೂ ಸ್ವಾತಂತ್ರ್ಯಕ್ಕೂ ವಿರುದ್ಧವಾದಾಗ ವ್ಯಕ್ತಿಗಳಲ್ಲಿ ತಲೆದೋರುವ ಪ್ರತಿಭಟನೆಯ ಶಕ್ತಿಯನ್ನು ತಣಿಸುವುದು ಎಂಬುದೇ ಇಲ್ಲಿನ ತಂತ್ರ. ಸಾಮಾಜಿಕವಾಗಿಯೂ, ಆರ್ಥಿಕ ಪರಿಸ್ಥಿತಿಯಿಂದಲೂ ಅಡಿಯಾಳುಗಳಾಗಿ ಬದುಕಬೇಕಾಗಿಬಂದ 'ಪುಲಯ' ಜನಾಂಗದವರಿಗೆ ಅದರ ವಿರುದ್ಧ ಭೌತಿಕ ಜೀವನದಲ್ಲಿ ಹೋರಾಡಲು ಸಾಧ್ಯವಿಲ್ಲದೆ ಹೋದಾಗ ಸಮೂಹಕ್ಕೆ ಬೇಕಾಗಿ ಆತ್ಮಬಲಿದಾನ ನೀಡಬೇಕಾಗಿಬಂದ, ಕಾರಿಗುರುಗಳನ್ನು 'ಪುಲಿಮಱ(ರ)ಞ್ಞತೊಂಡಚ್ಚನ್' (ಹುಲಿಯಗಿ ಬದಲಿದ ಅಜ್ಜ) ಎಂಬ ದೈವವನ್ನಾಗಿ ಮಾಡಿ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾಗಿದೆ. ಇದರ ಮೂಲಕ ಜಾತಿ ಪದ್ಧತಿಯನ್ನೂ ಆರ್ಥಿಕ ವ್ಯವಸ್ಥೆಯನ್ನೂ ಪ್ರಶ್ನಿಸುವ ಅಡಿಯಾಳುವರ್ಗದ ಇದಿರಿಸಲಾರದ ಭರ ಶಮನಗೊಳ್ಳುತ್ತದೆ ಹಾಗೂ ವ್ಯವಸ್ಥೆ ಸುರಕ್ಷಿತವಾಗಿ ನೆಲೆಗೊಳ್ಳತ್ತದೆ. ಇದರಿಂದ 'ಪುಲಿಮಱಞ್ಞತೊಂಡಚ್ಚನ್' ದೈವದ ಆರಾಧನೆ ಎಂಬುದು ವ್ಯವಸ್ಥೆಗೆ ವಿರುದ್ಧವಾಗ ಒಂದು ಪ್ರತಿಭಟನೆಯೂ, ಅದರೊಂದಿಗೆ ವ್ಯವಸ್ಥೆಯನ್ನು ಸುರಕ್ಷಿತವಾಗಿ ಉಳಿಸಿಕೊಳ್ಳುವ ಒಂದು ಕವಚವೂ ಆಗಿಬಿಡುತ್ತದೆ. ಹೋಳಿ ಹಬ್ಬ, ಓಣಂ ಹಬ್ಬ, ಮಣ್ಣಾಪೇಡಿ (ಪುಲಪ್ಪೇಡಿ) ಇಂಥವೆಲ್ಲವೂ ಈ ಬಗೆಯ ಒಂದೊಂದು ಧರ್ಮವನ್ನು ನೆರವೇರಿಸುತ್ತವೆ. ವರ್ಷದಲ್ಲೊಂದು ದಿನ ಒಂದು ಸಾಂಕಲ್ಪಿಕ ಲೋಕವನ್ನು ನಿರ್ಮಿಸಿ, ಆವರೆಗಿದ್ದ ಅಸಮಾನತೆಗಳನ್ನೆಲ್ಲ ಇಲ್ಲವಾಗಿಸಿ, ತಂತ್ರಗಾರಿಕೆಯುಳ್ಳ ವ್ಯವಸ್ಥೆಯನ್ನು ನೀಡುವ ಮೂಲಕ ಜನರಲ್ಲಿರುವ ಪ್ರತಿಭಟನೆಯನ್ನು, ಮದ್ದುಗುಂಡುಗಳಿಗೆ ತಣ್ಣೀರು ಸುರಿಯುವುದು ಎಂಬಂತೆ, ನಿಷ್ಕ್ರಿಯಗೊಳಿಸಲಾಗುತ್ತದೆ.

ಜಾನಪದ ಅಭ್ಯಾಸಕ್ರಮ

ಇತರ ಯಾವುದೆ ಸಮಾಜಶಾಸ್ತ್ರಕ್ಕೆ ಇರುವಂತೆ ಜಾನಪದ ಎಂಬ ವಿಜ್ಞಾನಕ್ಕೂ ಮೂರು ವಿಭಾಗಗಳಿವೆ. ಸಂಗ್ರಹ, ವರ್ಗೀಕರಣ ಮತ್ತು ವ್ಯಾಖ್ಯಾನ ಇವು ಸೇರಿರುವಂಥದೇ ಜಾನಪದ ವಿಜ್ಞಾನ. ಪರಸ್ಪರ

ಅವಲಂಬಿತಗಳಾದ ಈ ಮೂರು ವಿಭಾಗಗಳನ್ನು ಕಲಿಯುವುದಕ್ಕಿರುವ ರೀತಿಗಳನ್ನೇ ನಾವು ಜಾನಪದ ಅಭ್ಯಾಸ ಕ್ರಮ ಎನ್ನುವುದು. ಒಂದೊಂದು ವಿಷಯಕ್ಕೂ ಅದರದ್ದೇ ಅಧ್ಯಯನನೋದ್ದೇಶವಿರುತ್ತದೆ. ಅಧ್ಯಯನ ರೀತಿ ಅದನ್ನು ಅನುಸರಿಸುತ್ತದೆ. ಮಾನವವಂಶಶಾಸ್ತ್ರದೊಂದಿಗೆ ನಿಕಟ ಸಂಬಂಧವಿರುವುದಾದರೂ ಜಾನಪದಕ್ಕೆ ಮಾನವವಂಶಶಾಸ್ತ್ರದ ಸಂಗ್ರಹ ರೀತಿಯೋ, ವರ್ಗೀಕರಣ ರೀತಿಯೋ, ವಿಶ್ಲೇಷಣೆ ರೀತಿಯೊ ಪೂರ್ಣವಾಗಿ ಸ್ವೀಕಾರಾರ್ಹವಲ್ಲ. ಜಾನಪದಕ್ಕೆ ಇತರ ಸಮಾಜಶಾಸ್ತ್ರ ವಿಷಯಗಳಿಗೆ ಭಿನ್ನವಾದ ಉದ್ದೇಶ ಉಂಟು ಎಂದು ಆಗಲೆ ಹೇಳಿ ಆಗಿದೆ. ಅದಕ್ಕೆ ಅನುಸಾರವಾದ ಒಂದು ಅಭ್ಯಾಸಕ್ರಮವನ್ನು ಜಾನಪದ ಸ್ವೀಕರಿಸಿದೆ.

ಒಂದು ಸಾಂಘಿಕತೆಯ ಸಾಂಘಿಕ ಸ್ವಭಾವವನ್ನು ಕಂಡುಹಿಡಿಯುವುದೆ ಜಾನಪದದ ಅಧ್ಯಯನದ ಉದ್ದೇಶ. ಆದ್ದರಿಂದ ಜಾನಪದ ವಸ್ತುಗಳನ್ನು ವಿಶ್ಲೇಷಿಸುವಾಗ ಸಂದರ್ಭವು ಬಹುವಾದ ಪ್ರಾಧಾನ್ಯವನ್ನು ಗಳಿಸುತ್ತದೆ. ಒಂದಿಗಿರುವ ಮತ್ತು ವಿಶಾಲವಾದ ಸುತ್ತಮುತ್ತಲನ್ನು ದಾಖಲಿಸದಿರುವ ಜಾನಪದ ಸಂಗ್ರಹ ಜಡವಾಗಿರುವುದು ಅದರಿಂದಲೇ.

'ಬೊಗಳುವ ನಾಯಿ ಕಚ್ಚುವುದಿಲ್ಲ' ಎಂಬ ಗಾದೆ ಮಾತು ಪ್ರತ್ಯೇಕವಾಗಿ ನಿಲ್ಲುವಾಗ ಅದು ಜಾನಪದ ಅಲ್ಲವೆನಿಸಬಹುದು. ವಿಶ್ವದ ಯಾವುದೆ ಸಾಂಘಿಕತೆಯಲ್ಲೂ ನೆಲೆಗೊಳ್ಳಬಲ್ಲ ಒಂದು ಗಾದೆ ಮಾತು ಇದು. ಒಂದು ಸಾಂಘಿಕತೆಯನ್ನು ಗುರುತಿಸುವುದಕ್ಕೆ ಅಧ್ಯಯನದಲ್ಲಿ ಅದೊಂದು ಉಪಾಧಿಯಾಗಬೇಕಾದರೆ ಯಾರು, ಯಾರಲ್ಲಿ, ಯಾವಾಗ, ಯಾವ ಸಂದರ್ಭದಲ್ಲಿ ಎಂಬಂತಹ 'ಸನ್ನಿಹಿತ' ಸಂದರ್ಭವೂ ಪ್ರಸ್ತುತ ಸಾಂಘಿಕತೆಯಲ್ಲಿ ನಾಯಿಗೂ ಬೊಗಳುವಿಕೆಗೂ, ಕಚ್ಚುವುದಕ್ಕೂ ಇರುವ ಸಾಂಸ್ಕೃತಿಕ ಮೌಲ್ಯವೂ, ಆ ಪದಗಳಿಗೂ ಭಾಷಾಪ್ರಯೋಗಕ್ಕೂ ಇರುವ ವೈಶಿಷ್ಟ್ಯಗಳೂ, ಒಳಗೊಂಡ 'ವಿಶಾಲ' ಸಂದರ್ಭವೂ ದಾಖಲೆಗೊಳ್ಳಬೇಕಾಗುತ್ತವೆ. ಪ್ರಾಕ್ತನವಸ್ತು ಸಂಗ್ರಹವೂ ಜಾನಪದ ಸಂಗ್ರಹವೂ ವ್ಯತ್ಯಾಸಗೊಳ್ಳುವುದು ಈ ಅರ್ಥದಲ್ಲೇ. ಉದಾಹರಣೆಗೆ ಒಂದು ಒಡವೆ ಪ್ರಾಕ್ತನ ವಸ್ತುವಾಗುವುದು ಮತ್ತು ಜಾನಪದ ವಸ್ತು ಆಗುವುದು ವಸ್ತುವಿನ ವೈಶಿಷ್ಟ್ಯದಿಂದಲ್ಲ. ಬದಲಾಗಿ ದಾಖಲಿಸುವ ಸಂಬಂಧಿತ ವಿಷಯಗಳಲ್ಲಿರುವ ವ್ಯತ್ಯಾಸದಿಂದಲೇ ಆಗಿರುತ್ತದೆ. ಆಗಲೆ ಸೂಚಿಸಿದಂತೆ 'ಸನ್ನಿಹಿತ'ವೂ 'ವಿಶಾಲ'ವೂ ಆದ ಸಂದರ್ಭವನ್ನು ದಾಖಲೆಗೊಳಪಡಿಸುವಾಗ ಅದು ಜಾನಪದ ವಸ್ತುವಾಗುತ್ತದೆ. ಕಾಲ, ಕರ್ತಾರ ಮೊದಲಾದ ಪರಿಮಿತ ವಿಷಯಗಳನ್ನು ಮಾತ್ರ ದಾಖಲಿಸುವಾಗ ಅದು ಪ್ರಾಕ್ತನ ವಸ್ತು ಮಾತ್ರವಾಗಿಯೂ ಇರುತ್ತದೆ.

ಮೇಲೆ ಹೇಳಿದ ವಿಷಯಗಳಿಂದಲೆ ಜಾನಪದ ಅಧ್ಯಯನದಲ್ಲಿ ಅನುಸರಿಸಬೇಕಾದ ಸಂಗ್ರಹಕಾರ್ಯ ರೀತಿ ಇತರ ಯಾವುದೆ ವಿಷಯದ ರೀತಿಗಿಂತ ಭಿನ್ನವಾಗಿರಬೇಕು ಎಂಬುದು ಸುವ್ಯಕ್ತ. ಸನ್ನಿಹಿತವೂ ವಿಶಾಲವೂ ಆದ ಸಂದರ್ಭ ದಾಖಲೆಗೊಳ್ಳಬೇಕಾದರೆ ಸಾಂಘಿಕತೆಯ ಒಳಗಡೆ ವಿಶಿಷ್ಟವಾದ ಹಲವು ರೀತಿಗಳನ್ನು ಬೆನ್ನುಹತ್ತಬೇಕಾಗುತ್ತದೆ. ಕಣ್ಣಮುಂದಿರುವ ಒಂದು ಜಾನಪದ ವಸ್ತುವಿನ ಹಿಂದುಗಡೆ ಅದನ್ನು ಸ್ಥಿರಗೊಳಿಸುವ ಪ್ರತ್ಯಕ್ಷವೂ, ಪರೋಕ್ಷವೂ ಆದ ಅನೇಕ ವಸ್ತುಗಳು ನೆಲೆಗೊಂಡಿರುತ್ತವೆ. ಸಾಂಘಿಕತೆಯ ತಳಕ್ಕಿಳಿದು ಈ ವಸ್ತುಸ್ಥಿತಿಗಳನ್ನು ಜಾನಪದತಜ್ಞ ಸಂಗ್ರಹಿಸಬೇಕಾಗುತ್ತದೆ.

ಒಂದು ಜಾನಪದ ವಸ್ತುಸ್ಥಿತಿಗೆ ಸ್ವತಂತ್ರ ಅಸ್ತಿತ್ವ ಎಂಬುದು ಇರಲಾರದು. ಅದು ಸಾಂಘಿಕತೆಯ ಇತರ ಎಲ್ಲ ಘಟಕರೂಪಗಳ ಜತೆ ಸಂಬಂಧಹೊಂದಿ ಇರುತ್ತದೆ. ಈ ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು ಮತ್ತು ದಾಖಲಿಸಿಕೊಳ್ಳಲು ಒಬ್ಬ ಜಾನಪದ ತಜ್ಞನಿಗೆ ಬದ್ಧತೆ ಇರುತ್ತದೆ. ಉದಾಹರಣೆಗೆ ಉತ್ತರ ಕೇರಳದಲ್ಲಿ 'ಕಾವು' (ಕಾಡು ಅಥವಾ ಮರಗಳು ಸುತ್ತುವರಿದ ಆರಾಧನಾಸ್ಥಳ)ಗಳ ಮುಂದೆಯೂ 'ತಜ' (ರ)ಗಳಲ್ಲೂ ಸ್ತೂಪಗಳಿವೆ.

ರಸ್ತೆ ಬದಿಯಲ್ಲಿ ರಾಜಕೀಯ ಪಕ್ಷಗಳ ಆಡಳಿತ ಕಚೇರಿಗಳ ಬಳಿಯೂ ಈ ಬಗೆ ಸ್ತೂಪಗಳನ್ನು ಕಾಣಬಹುದು. ಇವೆರಡೂ ವಸ್ತು ಎಂಬ ನೆಲೆಯಲ್ಲಿ ಸಮಾನ ಹೌದಾದರೂ ಅವೆರಡೂ ವಿಭಿನ್ನ ಜಾನಪದಗಳೇ ಆಗಿವೆ. ಒಂದು, ಸತ್ತು ದೈವವಾಗಿ ಮಾರ್ಪಟ್ಟ ವೀರರಿಗಿರುವ ಸ್ತೂಪವಾದರೆ, ಇನ್ನೊಂದು ರಾಜಕೀಯ ಆಂದೋಲನದಲ್ಲಿ ಬಲಿದಾನಗೊಂಡವರ ಸ್ಮಾರಕವಾಗಿದೆ. ಈ ಎರಡು ಬಗೆ ಸ್ತೂಪಗಳನ್ನು ಜಾನಪದ ವಿಶ್ಲೇಷಣೆಗೊಳಪಡಿಸಬೇಕಾದರೆ ಅದಕ್ಕೆ ಸಂಬಂಧಿಸಿದ ಸನ್ನಿಹಿತವೂ ವಿಶಾಲವೂ ಆದ ಸಂದರ್ಭಗಳನ್ನು ಸಂಗ್ರಹಿಸಬೇಕಾಗುತ್ತದೆ. 'ಕಾವಿ'ನಲ್ಲಿರುವ ಸ್ತೂಪ 'ತೆಯ್ಯಂ'ನೊಂದಿಗೆ, ಐತಿಹ್ಯದೊಂದಿಗೆ, ನಂಬಿಕೆಯೊಂದಿಗೆ, ಪರಲೋಕದೊಂದಿಗೆ ಸಂಬಂಧ ಹೊಂದಿದೆ. ಇದೆಲ್ಲದರ ಬೆಳಕಿನಲ್ಲಿ ಮೌಲ್ಯಮಾಪನ ಮಾಡುವಾಗ ಮಾತ್ರ ಆ ವಸ್ತುವಿನ ಜಾನಪದ ಮೌಲ್ಯವನ್ನು ನಿಖರಗೊಳಿಸಲು ಸಾಧ್ಯವಾಗುತ್ತದೆ. ಹಾಗೆಯೇ ಬಲಿದಾನ ಸ್ಮಾರಕಗಳ ವಿಷಯವೂ. ಒಂದು ವೇಳೆ ಇವುಗಳಿಗೆ ಪರಸ್ಪರ ಇರುವ ಸಂಬಂಧವೂ ಒಂದು ಜಾನಪದ ವಸ್ತುವಿಗೆ ಬಂದೊದಗುವ ಬದಲಾವಣೆಯೂ ಇದರಲ್ಲಿ ವ್ಯಕ್ತವಾಗುತ್ತದೆ.

ಕ್ಷೇತ್ರ ಕಾರ್ಯಕ್ಕಾಗುವಾಗ ಮಾನವಶಾಸ್ತ್ರದ ರೀತಿಯೆ, ಅದೇ ಅಚ್ಚಿನಲ್ಲಿ ಅಲ್ಲವಾದರೂ, ಜಾನಪದದಲ್ಲೂ ಸ್ವೀಕರಿಸುವುದು. ಮುಖ್ಯವಾಗಿ ಸಂಗ್ರಹಕಾರ್ಯ ಮೂರು ಬಗೆಗಳಲ್ಲಿ ಆಗುತ್ತವೆ. ಒಂದು–ಸಂದರ್ಶನ ರೀತಿ. ಎರಡು– ಪ್ರಶ್ನೋತ್ತರ ರೀತಿ. ಮೂರು– ಸಹನಿರೀಕ್ಷಣೆ ರೀತಿ. ಇವುಗಳಲ್ಲಿ ಯಾವುದರಲ್ಲೂ ಮಾಹಿತಿದಾತರರನ್ನು ಕಂಡುಹಿಡಿಯುವುದೆ ಬಹಳ ಮುಖ್ಯವಾದುದು. ಸಮೂಹದ ಎಲ್ಲರೂ ಜಾನಪದದ ವಾಹಕರು ಹೌದಾದರೂ ಬಹಳ ಕಡಿಮೆ ಜನರಷ್ಟೆ ಸಕ್ರಿಯ ವಾಹಕರಾಗಿರುತ್ತಾರೆ. ಜಾನಪದವನ್ನು ತಲೆಮಾರುಗಳಿಗೆ ದಾಟಿಸಿ ತರುವವರು ಮತ್ತು ಪ್ರಚಲಿತವಾಗಿ ಇರಿಸಿಕೊಳ್ಳುವವರು ಅವರೇ. ಉಳಿದ ಬಹುಸಂಖ್ಯೆಯ ವ್ಯಕ್ತಿಗಳು ಮೇಲೆ ಹೇಳಿದ ಪ್ರಕ್ರಿಯೆಯಲ್ಲಿ ಪಾಲುಗೊಳ್ಳದೆ ಸಾಂಘಿಕತೆಯ ಭಾಗವಾಗಿ ಬದುಕುವವರು ಮಾತ್ರವಾಗಿರುತ್ತಾರೆ. ಉದಾಹರಣೆಗೆ ನಮ್ಮ ಸಾಂಘಿಕತೆಯಲ್ಲಿ ಎಲ್ಲರೂ ವಿವಾಹಿತರಾಗುತ್ತಾರೆ. ವಿವಾಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಆದರೆ ವಿವಾಹ ವಿಧಿಗಳ ಕೇಂದ್ರವಾಗಿ ನಿರ್ವಹಿಸುವವರು ಆ ಸಾಂಘಿಕತೆಯ ಕೆಲವೇ ಕೆಲವು ಮಂದಿ ಮಾತ್ರ. ಅವರೇ ಪರಂಪರಾಗತ ರೀತಿಗಳಿಗನುಸಾರ ವಿವಾಹ ವಿಧಿಗಳಿಗೂ ಸಂಭ್ರಮಾಚರಣೆಗೂ ನೇತೃತ್ವ ನೀಡುವವರು. ಈ ವಿಷಯದಲ್ಲಿ ಅವರೇ ಸಕ್ರಿಯ ವಾಹಕರು. ಒಂದು ಸಾಂಘಿಕತೆಯಲ್ಲಿ ಉರ್ಜಿತದಲ್ಲಿರುವ ಗಾದೆಗಳು ಇಡಿಯ ಸಮೂಹದ ಸ್ವತ್ತಾದರೂ ಅವು ಅನುಸ್ಯೂತವಾಗಿ ನೆಲೆಗೊಳ್ಳುವಂತೆ ಅವನ್ನು ಬಳಕೆಗೆ ತರುವ ಅಭ್ಯಾಸವುಳ್ಳವರ ಸಂಖ್ಯೆ ತುಂಬ ಕಡಿಮೆ. ಗಾದೆ ಮಾತುಗಳಿಗೆ ಸಂಬಂಧಿಸಿ ವಾಹಕರು ಇವರೇ.

ಜಾನಪದ ಸಂಗ್ರಹದಲ್ಲಿ ಸಕ್ರಿಯ ವಾಹಕರಾಗಿರುವ ಮಾಹಿತಿದಾರರನ್ನು ಕಂಡುಹಿಡಿಯುವುದು ಬಲು ಮುಖ್ಯ. ಇದು ಮೂರು ಬಗೆ ಸಂಗ್ರಹಗಳಿಗೂ ಅವಶ್ಯವಾಗಿದೆ. ಯಾವ ಜಾನಪದದ ಬಗೆಗೆ ಅಧ್ಯಯನವೊ ಆ ರಂಗದಲ್ಲಿರುವ ಸಕ್ರಿಯವಾಹಕರನ್ನು ಗೊತ್ತುಹಚ್ಚಿ ಅವರೊಂದಿಗಿನ ಸಂದರ್ಶನ, ಸಂವಾದಗಳ ಮೂಲಕ ಜಾನಪದವನ್ನು ಮತ್ತು ಜಾನಪದದ ಸನ್ನಿಹಿತವೂ ವಿಶಾಲವೂ ಆದ ಸಂದರ್ಭಗಳನ್ನು ಸಂಗ್ರಹಿಸುವುದು ಎಂಬುದೇ ಒಂದನೆಯ ದಾರಿ. ಈ ಬಗೆಯ ಸಂದರ್ಶನ ಸಂಭಾಷಣೆ ಎರಡು ರೀತಿಗಳಲ್ಲಿ ಆಗಬಹುದು.

ಒಂದು: ಮೊದಲೆ ಸಿದ್ಧಪಡಿಸಿದ ಪ್ರಶ್ನಾವಳಿಯ ಸೀಮೆಯೊಳಗೆ ಉಳಿದು ಹೆಚ್ಚು ವೇಳೆ ತೆಗೆದುಕೊಳ್ಳದೆ ವಿಷಯವನ್ನು ಗ್ರಹಿಸಿ ದಾಖಲಿಸುವುದು. ಇದಕ್ಕಿರುವ ಒಂದು ಪರಿಮಿತಿಯೆಂದರೆ ಜಾನಪದ ಕಾರ್ಯಕರ್ತನಿಗೆ ಮೊದಲೆ ಪ್ರವೇಶವುಳ್ಳ ವಿಷಯಗಳ ಬಗೆಗೆ ಮಾತ್ರ ಮಾಹಿತಿದಾರರಿಂದ ಮಾಹಿತಿ ಸಂಗ್ರಹ ಸಾಧ್ಯವಾಗುವುದು.

ಹಾಗಿದ್ದಾಗ ಮಾತ್ರ ಪ್ರಶ್ನೆಗಳನ್ನು ಎತ್ತಲು ಮತ್ತು ಪ್ರಶ್ನೆಗಳಿಂದ ಪ್ರಶ್ನೆಗಳಿಗೆ ಮಾಹಿತಿದಾರರನ್ನು ನಡೆಸಲು ಸಾಧ್ಯವಾಗುತ್ತದೆ. ಎರಡನೆ ರೀತಿ ಮಾಹಿತಿದಾರನನ್ನು ವಿಷಯದ ಪರಿಧಿಯೊಳಗೆ ಸ್ವತಂತ್ರವಾಗಿ ಮಾತನಾಡಲು ಬಿಡುವುದು. ವಿಷಯದಿಂದ ಬಹಳ ದೂರಕ್ಕೆ ಹೋಗುವಾಗ ಪರಿಧಿಯೊಳಕ್ಕೆ ತರುವುದು ಮಾತ್ರ ಸಂಗ್ರಾಹಕನಿಗಿರುವ ಕೆಲಸ. ಇದು ಹೆಚ್ಚು ಸಮಯವನ್ನು ಬೇಡುವ ಸಂಗ್ರಹ ರೀತಿಯಾಗಿದೆ. ಆದರೆ ಇದರಲ್ಲಿ ತುಂಬ ಉಪಯೋಗ ಇದೆ. ಅನ್ವೇಷಕನಿಗೆ ತಿಳಿಯದಿದ್ದ ಅನೇಕ ವಸ್ತುಸ್ಥಿತಿಗಳ ಅರಿವಿಗೆ ಈ ಸಂಭಾಷಣೆ ಬೆಳೆಯುವುದಲ್ಲದೆ ಅರಿವಿನ ಹೊಸಕ್ಷಿತಿಜ ತೆರೆದು ಸಿಗುತ್ತದೆ. ಈ ಬಗೆ ಸಂಭಾಷಣೆ ಮೂಲಕ ಹೊಸ ಸಕ್ರಿಯ ವಾಹಕರನ್ನು ಗುರುತಿಸಿಕೊಳ್ಳಲೂ ಸಾಧ್ಯವಾಗುತ್ತದೆ.

ಎರಡು: ಪ್ರಶ್ನಾವಳಿ ರೀತಿ. ಇದು ಹಲವು ಶಿಸ್ತುಗಳಲ್ಲಿ ಅನುಸರಿಸುವ ರೀತಿಯಾಗಿರುತ್ತದೆ. ಅನ್ವೇಷಕನು ತನ್ನ ಕೊಠಡಿಯಲ್ಲಿದ್ದೇ ಓದಿಯೂ ಕಂಡರಿತುಕೊಂಡೂ ಗಳಿಸುವ ಅರಿವಿನ ಬೆಳಕಿನಲ್ಲಿ ಪ್ರಶ್ನಾವಳಿಯನ್ನು ತಯಾರಿಸುವುದು, ಮುಖತಃ ಅಥವಾ ಅಂಚೆ ಮೂಲಕ ಮಾಹಿತಿದಾರರಿಗೆ ಅದನ್ನು ತಲಪಿಸುವುದು ಮತ್ತು ಉತ್ತರಗಳನ್ನು ತರಿಸಿಕೊಳ್ಳುವುದು ಈ ವಿಧಾನ. ನಿಶ್ಚಿತವಾದ ಕೆಲವು ವಿಷಯಗಳಲ್ಲಿ ಸಂಶಯ ನಿವಾರಣೆ ಮಾಡಿಕೊಳ್ಳಲು ಇದು ಸಹಕಾರಿ. ಆದರೆ ಜಾನಪದ ಅಧ್ಯಯನದ ಮಟ್ಟಿಗೆ ಈ ಬಗೆಯ ಸಂಗ್ರಹ ರೀತಿ ಸಾಕಷ್ಟು ಉಪಯೋಗಿ ಅನಿಸಲಾರದು. ವಿಶ್ಲೇಷಣೆಗೆ ಮೊದಲೋ, ವಿಶ್ಲೇಷಣೆಯ ನಡುವೆಯೊ ಬರುವ ಸಂಶಯಗಳನ್ನು ನಿವಾರಿಸಲೂ ವಸ್ತು–ಅಂಕೆಅಂಶ ಗಳಿಸಲೂ ಇದು ಸಹಕರಿಸಬಹುದು ಅಷ್ಟೆ.

ಮೂರು: ಸಹನಿರೀಕ್ಷಣ ರೀತಿ. ಜಾನಪದ ಅಧ್ಯಯನಕ್ಕೆ ಅವಶ್ಯವಾದ ರೀತಿ ಸಹನಿರೀಕ್ಷಣೆ, ಯಾವ ಸಾಂಘಿಕತೆ ಬಗೆಗೆ ಅನ್ವೇಷಣೆ ನಡೆಯುತ್ತದೊ, ಆ ಸಾಂಘಿಕತೆಯ ಯಾವ ಜಾನಪದದ ಬಗೆಗೆ ಅನ್ವೇಷಣೆ ಸಾಗುತ್ತದೊ, ಅದರೊಂದಿಗೆ ಸಂಬಂಧವಿರುವ ಜೀವನ ಸಂದರ್ಭಗಳಲ್ಲಿ ಸಾಂಘಿಕತೆಯ ಒಬ್ಬರಾಗಿ ಇಳಿದು ಸೇರಿಕೊಳ್ಳುವುದು ಈ ರೀತಿ. ಸಾಂಘಿಕತೆಯಲ್ಲಿನ ನಿಯಂತ್ರಣವಿರುವ ವ್ಯಕ್ತಿಗಳೊಂದಿಗೆ ಸಂಪರ್ಕ ಸಾಧಿಸಿ ನಿಧಾನಕ್ಕೆ ಸಾಂಘಿಕತೆಯಲ್ಲಿ ಭಾಗಿಯಾಗುವುದು ಮತ್ತು ಸಾಂಘಿಕತೆ ಹೇಗೆ ಒಂದೊಂದೇ ವಸ್ತುಸ್ಥಿತಿಯನ್ನು ಗುರುತಿಸುವುದೊ, ಹೆಚ್ಚುಕಡಿಮೆ ಹಾಗೆಯೆ ವಸ್ತುಸ್ಥಿತಿಗಳನ್ನು ಗುರುತಿಸಿ ಅರ್ಥಮಾಡಿಕೊಳ್ಳುವುದು ಇಲ್ಲಿನ ಕಾರ್ಯವೈಖರಿ. ಖುದ್ದಾಗಿ ನೋಡುವುದು, ಕೇಳುವುದು, ತಿಳಿಯುವುದು ಇವು ಸಾಗುವಾಗ, ತಾನಾಗಿ ಉದ್ಭವಿಸುವ ಸಂಶಯಗಳನ್ನು ಸಾಂಘಿಕತೆಯಿಂದಲೆ ಪರಿಹರಿಸುವುದು, ಅವಶ್ಯವೆಂದು ಕಾಣುವಾಗ ಸಕ್ರಿಯ ವಾಹಕರೊಂದಿಗೆ ಸಂವಾದ ಏರ್ಪಡಿಸಲೂ ಸಾಧ್ಯವಾಗುತ್ತದೆ. ಸಹನಿರೀಕ್ಷಣೆ ರೀತಿಯ ಒಂದು ಪ್ರಯೋಜನವೆಂದರೆ ಸಕ್ರಿಯ ವಾಹಕರಾದ ಮಾಹಿತಿದಾರರನ್ನು ಗೊತ್ತುಹಚ್ಚಲು ಇತರರ ಸಹಾಯ ಅವಶ್ಯವಿಲ್ಲ ಎಂಬುದಾಗಿದೆ. ಕಂಡು, ಕೇಳಿ, ಮಾತನಾಡಿ ಸಾಂಘಿಕತೆಯೊಂದಿಗೆ ಇರುವಾಗ ಅವರವರ ಅನ್ವೇಷಣೆಗೆ ಅವಶ್ಯವಾದ ಅರಿವನ್ನು ಕೂಡಿಸುವುದು ಬಹಳ ಸುಲಭ. ಆದರೆ ಇದಕ್ಕೆ ಬಹುವಾದ ತಾಳ್ಮೆ, ಸಹಿಷ್ಣುತೆ ಅವಶ್ಯವಾಗಿವೆ.

ಅಪರಿಚಿತವಾದ ಸಾಂಘಿಕತೆ ಬಗೆಗೆ ಸಂಶೋಧನೆಗೆ ಹೊರಡುವಾಗ ಬಹುವಾದ ಪೂರ್ವಸಿದ್ಧತೆ ಅವಶ್ಯ. ಅನುಕ್ರಮವಾಗಿ ಯಾರಲ್ಲಿಗೆಲ್ಲ ಹೋಗಿ ಯಾವೆಲ್ಲ ರೀತಿಯಲ್ಲಿ ಗುರಿ ತಲಪಬಹುದು ಎಂಬುದಕ್ಕೆ ನಿಶ್ಚಿತವಲ್ಲವಾದರು ವಿಶಾಲವಾದ ಕೆಲ ರೂಪರೇಖೆಗಳಿವೆ. ಆ ಬಗೆಯ ಸೂಕ್ಷ್ಮವಾದ ವಿಷಯಗಳು ಇಲ್ಲಿ ಪ್ರತಿಪಾದನೆಗೊಳ್ಳುವುದಿಲ್ಲ.

ಮೇಲೆ ಹೇಳಿದ ಮೂರು ರೀತಿಗಳೂ ಜಾನಪದ ಸಂಗ್ರಹವೃತ್ತಿಯಲ್ಲಿ ಬಳಕೆಯಾಗುತ್ತದೆ. ಸಹನಿರೀಕ್ಷಣ ರೀತಿಯ ಮೂಲಕ ವಿಶಾಲವಾದ ತಿಳವಳಿಕೆಯನ್ನು ಪಡೆಯುವುದು, ಸಂದರ್ಶನ ರೀತಿಯ ಮೂಲಕ ಮತ್ತು ಪ್ರಶ್ನಾವಳಿ ರೀತಿಯ ಮೂಲಕ ತೀಳಿವಳಿಕೆಗೆ ಆಳವನ್ನು ತರುವುದು ಪದ್ಧತಿ. ಸಹನಿರೀಕ್ಷಣ ರೀತಿಯಲ್ಲಿ ಕೆಲಸ ಮುಗಿಯುವಾಗಲೂ, ತಿಳಿವಳಿಕೆ ಬರುವುದು ಹೌದಾದರೂ ಅನೇಕಾನೇಕ ಪ್ರಶ್ನೆಗಳಿಗೆ ಉತ್ತರದೊರೆಯಲೂ ಬೇಕಾಗುತ್ತದೆ. ಅಸ್ಪಷ್ಟತೆ ತೊಲಗುವುದಕ್ಕೂ ಸಂದರ್ಶನ ರೀತಿ ಸಹಾಯಕ. ಸಂಶೋಧನ ಕಾರ್ಯದ ಕೊನೆಯಲ್ಲಿ ವಸ್ತುಸ್ಥಿತಿ ಸಂಬಂಧವಾದ ಸಂಶಯಗಳಿಗೆ ಉತ್ತರ ಗಳಿಸುವುದಕ್ಕೂ ಅಂಕೆಅಂಶಗಳನ್ನು ಪಡೆಯುವುದಕ್ಕೂ ಪ್ರಶ್ನೋತ್ತರ ಮಾರ್ಗವನ್ನು ಅವಲಂಬಿಸಬಹುದು.

ಯಾವ ವಸ್ತುಸ್ಥಿತಿಗಳನ್ನು ಸಂಗ್ರಹಿಸುವುದು ಎಂಬುದರ ತಳಹದಿಯಲ್ಲಿ ಮೂರು ವಿಧಾನಗಳಿಂದ ಸಂಗ್ರಹಣವನ್ನು ಕೈಗೊಳ್ಳಬಹುದು. (೧) ಬರೆದು ಹಾಗೂ ರೇಖಾಚಿತ್ರಗಳ ಮೂಲಕ ದಾಖಲಿಸಬಹುದು (೨) ಟೇಪ್‌ರೆಕಾರ್ಡರ್ (ಧ್ವನಿಮುದ್ರಣ ಉಪಕರಣ) ಬಳಸಿ ದಾಖಲಿಸಬಹುದು (೩) ಛಾಯಾಚಿತ್ರ / ದೃಕ್‌ಶ್ರವಣ ಉಪಕರಣಗಳಿಂದ ದಾಖಲಿಸಬಹುದು.

ಹೊಸ ಸಮೀಪನದ ಮೂಲಕ ಎಲ್ಲ ಜಾನಪದಗಳೂ ಪ್ರದರ್ಶನಗಳಾಗಿವೆ. ಆ ರೀತಿಯಲ್ಲಿ ಎಲ್ಲ ಜಾನಪದಗಳೂ ರಂಗ ಪ್ರದರ್ಶನಗಳೇ ಆಗಿರುತ್ತವೆ. ಆದ್ದರಿಂದ ಅದರ ಯಥಾರ್ಥವಾದ ಚಿತ್ರೀಕರಣ ಸಾಧ್ಯವಾಗುತ್ತದೆ. ಜಾನಪದ ಅಧ್ಯಯನದಲ್ಲಿ ಕ್ಷುಲ್ಲಕ ಎಂದು ಕಾಣಬಹುದಾದ ವಿಶೇಷತೆಗಳು ಕೂಡ ವಿಶ್ಲೇಷಣೆಗೆ ಅವಶ್ಯವೆನಿಸುವುದರಿಂದ ಎಲ್ಲವನ್ನೂ ದಾಖಲಾತಿಗೆ ತರಬೇಕಾಗುತ್ತದೆ. ಛಾಯಾಚಿತ್ರಗ್ರಹಣ, ವಿಡಿಯೋಗ್ರಾಫಿ ಮೊದಲಾದವುಗಳ ಮೂಲಕ ಜಾನಪದ ರಂಗಪ್ರದೇಶದ ಹೆಚ್ಚಿನೆಲ್ಲ ವೈಶಿಷ್ಟ್ಯಗಳನ್ನು ದಾಖಲಿಸಿಕೊಳ್ಳಲು ಸಾಧ್ಯವಿದೆ. ಜಾನಪದ ರಂಗಕಲೆಗಳ ಅಧ್ಯಯನದಲ್ಲಿ ಈ ಬಗೆ ಸಂಗ್ರಹರೀತಿ ಅತ್ಯಾವಶ್ಯಕೂಡ. ಈ ಬಗೆ ಸಂಗ್ರಹ ಕಾರ್ಯಕ್ಕೆ ಅವಶ್ಯವಾದ ಪೂರ್ವಸಿದ್ಧತೆ ಬಗೆಗೂ, ಪಾಲಿಸಬೇಕಾದ ನಿಯಮಗಳ ಬಗೆಗೂ ಈ ಪ್ರಬಂಧದಲ್ಲಿ ಚರ್ಚೆ ನಡೆಸುವುದಿಲ್ಲ.

ಜನಪದ ಗೀತೆ, ಕಥನಗಾಯನ, ಜಾನಪದ ಕತೆಗಳು, ಐತಿಹ್ಯ, ಸ್ಥಳಪುರಾಣ ಮೊದಲಾದ ಹಲವಾರು ರೂಪಗಳಲ್ಲಿ ಜಾನಪದ ಉಳಿದುಬಂದಿದೆ. ಇವೆಲ್ಲವೂ ಜಾನಪದ ಎಂಬ ನೆಲಯಲ್ಲಿ ಉಳಿದಿರುವುದು ಬಾಯ್ದೆರೆ ಪರಂಪರೆಯಲ್ಲೇ. ಇವುಗಳನ್ನು ಅನ್ಯಮಾಧ್ಯಮಗಳಿಗೆ ಬದಲಿಸುವಾಗ ನಾವು ಯಾಥಾರ್ಥವಾಗಿ ಮಾಡುವುದೆಂದರೆ ಅದರ ಮೂಲರೂಪವನ್ನು ನಾಶಪಡಿಸಿ ಹೊಸ ರೂಪ ನೀಡುವುದೇ ಆಗಿದೆ. ಅಂದರೆ ವಾಚಿಕ ರೂಪಕ್ಕೆ ಲಿಖಿತ ರೂಪ ನೀಡುವುದಾಗಿದೆ. ಅದರೊಂದಿಗೆ ವೈಶಿಷ್ಟ್ಯಪೂರ್ಣವಾದ ಪ್ರಸ್ತುತ ಜಾನಪದ ರೂಪದ ಹಲವು ಸ್ವಭಾವಗಳು ನಷ್ಟವಾಗುತ್ತವೆ.

ವಾಚಿಕದ ರೀತಿ, ಶಬ್ದಗಳ ಏರಿಳಿತಗಳು, ಸ್ಥಾಯಿ, ಮೌನ, ನಗೆ ಮೊದಲಾದ ಅದರ ನಡುವಣ ಅನೇಕ ವಿಷಯಗಳ ನಿಜವನ್ನು ಮನವರಿಕೆ ಮಾಡಿಕೊಡಲು ಲಿಖಿತ ರೂಪಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸಂಗ್ರಹ ಕಾರ್ಯದಲ್ಲಿ ಧ್ವನಿಮುದ್ರಣ ಉಪಕರಣವನ್ನು ಬಿಟ್ಟುಬಿಡಲು ಸಾಧ್ಯವಿಲ್ಲ. ಇದರೊಂದಿಗೆ ಸಂಗ್ರಹಕಾರ್ಯದಲ್ಲಿ ಬರುವ ಸಂದರ್ಶನದ ಸಂಭಾಷಣೆಗಳನ್ನೂ ಕೆಲವೊಮ್ಮೆ ಧ್ವನಿಮುದ್ರಿಸಿಕೊಳ್ಳಬೇಕಾಗುತ್ತದೆ.

ಸಂಗ್ರಹಕಾರ್ಯದಲ್ಲಿ ಲಿಖಿತ ರೀತಿ ಬಹಳ ಮುಖ್ಯ. ಮೇಲೆ ಹೇಳಿದ ಎರಡು ರೀತಿಯ ಸಂಗ್ರಹಕಾರ್ಯಗಳಲ್ಲೂ ಅನುಬಂಧವಾಗಿ ನಿಲ್ಲುವಂಥದು ಬರವಣಿಗೆ. ಚಿತ್ರೀಕರಣಕ್ಕೂ, ಧ್ವನಿಮುದ್ರಣಕ್ಕೂ

ಸಹಕಾರಿಯಾಗಿ ಅನುಬಂಧಗಳಾದ, ಸಂಶೋಧನೆಗೆ ಅವಶ್ಯವಾದ, ಅನೇಕಾನೇಕ ವಿವರಗಳನ್ನು ಸಂಗ್ರಹಿಸಬೇಕಾಗುತ್ತದೆ. ಸನ್ನಿಹಿತವೂ ವಿಶಾಲವೂ ಆದ ಸಂದರ್ಭಗಳನ್ನು ದಾಖಲಿಸಬೇಕಾದರೆ ಬರವಣಿಗೆಯೊಂದೇ ದಾರಿ. ಚಿತ್ರೀಕರಿಸಿದ ಅಥವಾ ಧ್ವನಿಮುದ್ರಿಸಿಕೊಂಡ ವಿಷಯಗಳನ್ನು ಗುರುತಿಸುವುದಕ್ಕೆ ಬರವಣಿಗೆ ಮೂಲಕ ದಾಖಲಿಸಿದ ಟಿಪ್ಪಣಿಗಳು ಬೇಕೇಬೇಕು.

ಇದಲ್ಲದೆ ಕೈಬರಹದ ಮೂಲಕ ಮಾತ್ರ ಸಾಧ್ಯವಾಗುವ ಸಂಗ್ರಹ ಕಾರ್ಯವಿದೆ. ಉದಾಹರಣೆಗೆ ಯಾವುದಾದರೂ ಒಂದು ನಂಬಿಕೆ. ಅದನ್ನು ಚಿತ್ರೀಕರಿಸುವುದಕ್ಕಾಗಲಿ, ಧ್ವನಿಮುದ್ರಿಸಿ ಹಿಡಿದಿಟ್ಟುಕೊಳ್ಳಲಾಗಲಿ ಸಾಧ್ಯವಿಲ್ಲ. ಬರೆದಿಡುವುದು ಮಾತ್ರ ಇರುವ ಒಂದೇ ದಾರಿ.

ಇದಲ್ಲದೆ, ಕೇರಳದ ಸ್ಥಿತಿಗತಿಯಲ್ಲಿ ಚಿತ್ರೀಕರಣ ಮತ್ತು ಧ್ವನಿಮುದ್ರಣಗಳು ಎಲ್ಲ ಸಂಶೋಧಕರಿಗೂ ಲಭ್ಯವಾಗುವ ಉಪಕರಣಗಳಲ್ಲ. ಇಲ್ಲಿ ನಡೆಯುವ ಜಾನಪದ ಸಂಗ್ರಹಕಾರ್ಯಗಳಲ್ಲಿ ಹಲವು, ವ್ಯಕ್ತಿಗಳು ತಾವಾಗಿಯೆ ತಮ್ಮ ಆಸಕ್ತಿಮಾತ್ರದಿಂದ ಮಾಡುವಂಥದ್ದಾಗಿವೆ. ಇದರಲ್ಲಿ ಅನಿವಾರ್ಯವಾಗಿ ಬರುವ ಖರ್ಚುಗಳನ್ನು ತಾಳಿಕೊಳ್ಳುವುದಕ್ಕೆ ಆರ್ಥಿಕವಾಗಿ ಅವರಿಗೆ ಸಾಧ್ಯತೆ ಇಲ್ಲ. ಮಾತ್ರವಲ್ಲ, ಈ ಉಪಕರಣಗಳನ್ನು ಬಳಸಿ ಶಾಸ್ತ್ರೀಯವಾಗಿ ವಸ್ತುಸ್ಥಿತಿಗಳನ್ನು ಸಂಗ್ರಹಿಸಲು ಬೇಕಾದ ತಾಂತ್ರಿಕ ಪರಿಣತಿಯೊ, ವೈಜ್ಞಾನಿಕ ವೀಕ್ಷಣೆಯೊ ಅವರಲ್ಲಿಲ್ಲ. ಅವರಿಗೆ ಈ ವಿಷಯದಲ್ಲಿ ಬೇಕಾದ ತರಬೇತಿಯೂ ದೊರಕಿಲ್ಲ. ಅಥವಾ ಒಂದುವೇಳೆ ಉಪಕರಣ ಪರಿಕರಗಳು ಕೈಗೆಬಂದರೂ ಸಂಗ್ರಹವಾದವುಗಳನ್ನು ಸಂರಕ್ಷಿಸಿಡುವ ವ್ಯವಸ್ಥೆ ಕೂಡ ನಮ್ಮ ಊರುಗಳಲ್ಲಿ ಇಲ್ಲ.

ವಸ್ತುಸಂಗ್ರಹಾಲಯ ಮತ್ತು ದಾಖಲೆಕಾಪು ಮನೆ

ಸಂಗ್ರಹಕಾರ್ಯದಲ್ಲಿ ಬಹಳ ಮುಖ್ಯ ಅಂಶವೆಂದರೆ ಸಂಗ್ರಹವಾದ ದಾಖಲೆಗಳನ್ನು ಹೇಗೆ ಸಂರಕ್ಷಿಸಬಹುದು ಎಂಬುದು. ಸಂಗ್ರಹಕಾರ್ಯದಲ್ಲಿ ಮೂರು ಬಗೆಯ ಸಂಪತ್ತು ಸಿಗುತ್ತದೆ. ಒಂದನೆಯದು ಚಿತ್ರೀಕೃತವಾದ ವಸ್ತುಸ್ಥಿತಿಗಳು, ಅವು ಛಾಯಾಚಿತ್ರಗಳಾಗಬಹುದು; ವಿಡಿಯೋ ಕ್ಯಾಸೆಟ್‌ಗಳು ಆಗಿರಬಹುದು; ಫಿಲ್ಮ್‌ಗಳಾಗಬಹುದು; ಧ್ವನಿಮುದ್ರಣದ ಕ್ಯಾಸೆಟ್‌ಗಳಾಗಬಹುದು. ಇವೆಲ್ಲವನ್ನು ವರ್ಗೀಕರಿಸಿ ಸಂಪೂರ್ಣವಾದ ಅನುಬಂಧ ವಿವರಗಳೊಂದಿಗೆ ಕ್ರಮೀಕರಿಸಬೇಕಾಗಿದೆ. ಹೀಗೆ ಕ್ರಮೀಕರಿಸುವುದಕ್ಕೆ ವೈಜ್ಞಾನಿಕವಾದ ಹಲವು ರೀತಿಗಳಿವೆ. ಈ ಬಗೆಯ ದಾಖಲೆಕಾಪುಮನೆಗಳಲ್ಲಿ ಕೈಬರಹದ ಪ್ರತಿಗಳನ್ನೂ ಸಂಗ್ರಹಕಾರ್ಯದ ವೇಳೆ ಬರಹಮೂಲಕ ದಾಖಲಿಸಿಕೊಂಡ ದಾಖಲೆಗಳನ್ನೂ ಕ್ರಮೀಕರಿಸಿ ಕಾಪಿಡಬೇಕಾಗುತ್ತದೆ. ಇದಲ್ಲದೆ ಸಂಗ್ರಹವಾದ ವಸ್ತುಗಳ ಬಗೆಗೆ ವಿಶದವಾದ ಅನುಬಂಧ ವಿವರಗಳೂ ದಾಖಲೆ ಕಾಪು ದಾಸ್ತಾನು ಮನೆಯಲ್ಲಿ ವರ್ಗೀಕೃತವಾಗಿ ಕಾಪುಗೊಳ್ಳಬೇಕು.

ಸಂಗ್ರಹಕಾರ್ಯದ ನಡುವೆ ಒಟ್ಟುಸೇರಿದ ವಸ್ತುಗಳ ಸಂಚಯವನ್ನು ರಕ್ಷಿಸಿಡುವ ಸ್ಥಳವೇ 'ಜಾನಪದ ವಸ್ತುಸಂಗ್ರಹಾಲಯ'. ಜಾನಪದ ಅಧ್ಯಯನದಲ್ಲಿ 'ದಾಖಲೆ ಕಾಪು'ಮನೆಯಷ್ಟೆ ಮುಖ್ಯ ಜಾನಪದ ವಸ್ತುಸಂಗ್ರಹಾಲಯ.

ವಸ್ತುಗಳನ್ನು ವರ್ಗೀಕರಿಸಿ ಕಾದಿರಿಸುವುದಕ್ಕೂ, ಅವುಗಳ ಬಗೆಗಿನ ಅನುಬಂಧ ವಿವರಗಳನ್ನು ಇದಕ್ಕೆ ಜೋಡಿಸಿ ದಾಖಲಾತಿ ಕಾಪುಮನೆಯಲ್ಲಿ ಕಾಯ್ದುಕೊಳ್ಳುವುದಕ್ಕೂ ಪ್ರತ್ಯೇಕ ಸೌಕರ್ಯಗಳು ಅವಶ್ಯವಾಗಿವೆ.

ಒಟ್ಟಾರೆಯಾಗಿ ಹೇಳುವುದಾದರೆ ಸಂಗ್ರಹಕಾರ್ಯ ಮುಗಿದರೆ ಸಂಶೋಧನೆಗೆ ಅವಶ್ಯವಾದ ಸಂಪೂರ್ಣ ವಿವರಗಳು ಜಾನಪದ ವಸ್ತುಸಂಗ್ರಹಾಲಯದಲ್ಲೂ, ದಾಖಲಾತಿಕಾಪು ಮನೆಯಲ್ಲೂ ವರ್ಗೀಕರಿಸಿ ಕಾಪುಗೊಂಡಿರುತ್ತವೆ.

ವರ್ಗೀಕರಣ

ಸಂಗ್ರಹಗೊಂಡ ವಸ್ತುಸ್ಥಿತಿಗಳ ವರ್ಗೀಕರಣ ಯಾವ ಅಧ್ಯಯನಕ್ಕೂ ಮೊದಲು ನಡೆಯಬೇಕಾದುದಾಗಿದೆ. ಅದು ವಸ್ತುಸ್ಥಿತಿಗಳ ಪ್ರತ್ಯೇಕ ಗುರುತಿಸುವಿಕೆಯಾಗಿದೆ. ಶಾಸ್ತ್ರವಿಷಯಗಳನ್ನು ಅಪೇಕ್ಷಿಸಿ ವರ್ಗೀಕರಣ ಪ್ರಕ್ರಿಯೆ ಸಮಾಜಶಾಸ್ತ್ರವಿಷಯಗಳ ಮಟ್ಟಿಗೆ ತುಂಬ ಕಠಿನವಾದ ಕೆಲಸವಾಗಿದೆ. ಜಾನಪದದ ರೂಪ, ರಚನೆ, ಆಶಯ, ಧರ್ಮ, ಸಂದರ್ಭ ಮೊದಲಾದ ಅನೇಕ ವಸ್ತುಸ್ಥಿತಿಗಳ ಆಧಾರದಲ್ಲಿ ವರ್ಗೀಕರಣ ಸಾಧ್ಯವಾಗುತ್ತದೆ. ಈ ಸಾಧ್ಯತೆಗಳೇ ವರ್ಗೀಕರಣವನ್ನು ಕ್ಲಿಷ್ಟವಾಗಿ ಮಾಡುವಂಥವು. ಒಂದು ಗೀತ ಏಕಕಾಲದಲ್ಲಿ 'ತೋಱ್ಱಂಪಾಟು' ಆಗಿಯೂ, ವೀರಕಥನಗಾನವಾಗಿಯೂ ಪರಿಣಮಿಸುವುದು ಹೀಗೆ. ಸಂದರ್ಭಾನುಸಾರಿಯಾದ ವರ್ಗೀಕರಣದಲ್ಲಿ ಅದು 'ತೋಱ್ಱಂಪಾಟು' ಆಗಿಯೂ, ಆಶಯದ ತಳಹದಿಯಲ್ಲಿ ಅದು ವೀರಕಥಾಗಾನ ಆಗಿಯೂ ಪರಿಗಣಿತವಾಗುತ್ತದೆ. ಒಂದೇ 'ವಡಕ್ಕನ್‌ಪಾಟು' ಕಣ್ಣೂರು, ಕಾಸರಗೋಡು ಜಿಲ್ಲೆಗಳಲ್ಲಿ ಬೇಸಾಯದ ನಾಟಿ ಹಾಡಾಗಿಯೂ, ಕೋವಿಕ್ಕೋಡ್ ಜಿಲ್ಲೆಯಲ್ಲಿ 'ಕಡೆಯುವ ಹಾಡಾ'ಗಿಯೂ ಬಳಕೆಯಾಗುವುದು ವರ್ಗೀಕರಣವನ್ನು ಪುನಃ ಜಟಿಲಗೊಳಿಸುತ್ತದೆ. ಜಾನಪದಕತೆ, ಸ್ಥಳಪುರಾಣ, ಐತಿಹ್ಯ, ಜನಪದ ಗೀತೆ, ಕಥನಗಾನ ಎಂಬಂಥ ರೂಪ ಆಧಾರಿತ ವರ್ಗೀಕರಣವನ್ನೇ ಸಾಮಾನ್ಯವಾಗಿ ಅಂಗೀಕರಿಸಿರುವುದು. ಆದರೆ ಆ ಬಗೆ ವರ್ಗೀಕರಣ ಎಲ್ಲ ಅಧ್ಯಯನಗಳಿಗೂ ಸಹಕಾರಿ ಎನಿಸಬೇಕಿಲ್ಲ. ಧರ್ಮ ಸಂಬಂಧವಾದ ಒಂದು ಜಾನಪದ ಅಧ್ಯಯನದಲ್ಲಿ ರೂಪ ಸಂಬಂಧವಾದ ವರ್ಗೀಕರಣಕ್ಕೆ ಪ್ರಸಕ್ತಿ ಇಲ್ಲ. ಮೇಲೆ ಹೇಳಿದ ಕಾರಣಗಳಿಂದ ವರ್ಗೀಕರಣ ಯಾವತ್ತೂ ಒಂದು ಕಗ್ಗಂಟೇ. ಒಂದು ಜಾನಪದ ರೂಪವೆ ಹಲವು ಜಾನಪದ ರೂಪಗಳನ್ನು ಒಳಗೊಂಡುದಾಗಿರುವುದು ಪುನಃ ಪ್ರಶ್ನೆಯನ್ನು ಉಂಟುಮಾಡುತ್ತದೆ. ಉದಾಹರಣೆಗೆ 'ಪಡಯಣಿ' ಒಂದು ಬಗೆ ವರ್ಗೀಕರಣದಲ್ಲಿ ಆರಾಧನೆಯಾಗಿದೆ. ಈ ಆರಾಧನೆಯು ನೃತ್ಯ, ನಾಟಕ, ಮೆರವಣಿಗೆ ಮೊದಲಾದ ಹಲವಾರು ಜಾನಪದ ಕಲಾ ರೂಪಗಳನ್ನು ಒಳಗೊಂಡಿರುವಂಥದಾಗಿದೆ. ಹೀಗಾಗುವಾಗ ಜಾನಪದವು ವರ್ಗೀಕರಣಕ್ಕೆ ವಿಧೇಯವಾಗದೆ ಒಂದು ಮರೀಚಿಕೆಯಾಗಿಬಿಡುವುದು. ಅಧ್ಯಯನಕ್ಕೆ ಸಹಾಯಕವಾಗುವ ರೀತಿಯ ಯಾವುದಾದರೂ ಒಂದು ಮಾನದಂಡವನ್ನು ಆಧರಿಸಿದ ಒಂದು ವರ್ಗೀಕರಣವೂ (Analytical Category) ಸ್ಥಳೀಯವಾದ ಜಾನಪದ ರೂಪ ಎಂಬ ನೆಲೆಯಲ್ಲಿ ಸಾಂಘಿಕತೆ ಅದನ್ನು ಹೇಗೆ ಗುರುತಿಸುತ್ತದೆ ಎಂಬುದನ್ನು ಆಧಾರವಾಗಿಸಿ ಇನ್ನೊಂದು ವರ್ಗೀಕರಣವೂ ಅಧ್ಯಯನಕ್ಕೆ ಅವಶ್ಯವಾಗಿದೆ. ಉದಾಹರಣೆಗೆ ಈ ರೀತಿಗಳಲ್ಲಿ ಹಾಡುವ, 'ತೆಯ್ಯಂ'ನ ಕತೆ ವಿವರಿಸುವ 'ಪಾಟು' ಸಾಂಘಿಕತೆಯ ಗುರುತರಿಯುವಿಕೆ ನಿಟ್ಟಿನಿಂದ 'ತೋಱ್ಱಂಪಾಟು' ಆಗಿಯೂ Native Category ವಿಶ್ಲೇಷಣೆ ವರ್ಗೀಕರಣ ಪ್ರಕಾರ Mythical Ballad ಆಗಿಯೂ ಪರಿಗಣಿತವಾಗುತ್ತದೆ. ಮೊದಲಿನದು ಸ್ಥಳೀಯವಾದ ಗುರುತಿಸುವಿಕೆ. ಎರಡನೆಯದು ಸಾರ್ವತ್ರಿಕವಾದ ಗುರುತಿಸುವಿಕೆ. ಸಾಂಘಿಕತೆ ಕುರಿತು ಸಾರ್ವತ್ರಿಕ ವಿಷಯವೇ ಜಾನಪದ ಎಂಬುದರಿಂದ ಈ ಎರಡು ಬಗೆ ವರ್ಗೀಕರಣವೂ ಅವಶ್ಯವಾಗಿರುತ್ತದೆ.

ಜೀವನದ ಸರ್ವತಲಸ್ಪರ್ಶಿಯಾದ ಜಾನಪದವನ್ನು ಹಲವರು ಹಲಬಗೆಗಳಲ್ಲಿ ವರ್ಗೀಕರಿಸಿರುವುದುಂಟು. ವಿಷಯದ ವಿಪುಲತೆ, ವೈವಿಧ್ಯಗಳನ್ನು ವ್ಯಕ್ತಗೊಳಿಸುವುದಕ್ಕೂ, ವರ್ಗೀಕರಣ ರೀತಿ ಉದಾಹರಿಸುವುದಕ್ಕೂ ರಿಚರ್ಡ್. ಎಂ. ಡಾರ್‌ಸನ್ ನೀಡಿದ ವರ್ಗೀಕರಣವನ್ನು ಕೆಳಗೆ ಕಾಣಿಸಿದೆ.

ಜಾನಪದವನ್ನು ಮುಖ್ಯವಾಗಿ ಮೌಖಿಕ ಮಾಹಿತಿ, ಸಾಮೂಹಿಕ ಆಚಾರ, ಸಾಂಸ್ಕೃತಿಕ ಬಳುವಳಿ, ಜಾನಪದ ಪ್ರದರ್ಶನ ಕಲೆ ಎಂದೆಲ್ಲ ವಿಭಜಿಸಲಾಗಿದೆ. ಮೌಖಿಕ ಪದ್ಧತಿಯಲ್ಲಿ ವ್ಯಾಖ್ಯಾನಗಳು, ಪದ್ಯಕಥಾಖ್ಯಾನಗಳು, ಸ್ಥಳೀಯ ಇತಿಹಾಸ, ಗಾದೆ ಮಾತುಗಳು, ಒಗಟುಗಳು, ಸ್ಥಳೀಕ ನುಡಿ ಮೊದಲಾದವು ಒಳಗೊಳ್ಳುತ್ತವೆ. ಉತ್ಸವಗಳು, ಸಂಭ್ರಮಾಚರಣೆಗಳು, ವಿನೋದಗಳು, ಆಟಗಳು, ನಾಟಿವೈದ್ಯ, ಊರ–ಮತಾಚರಣೆ ಇತ್ಯಾದಿ ಸಾಮೂಹಿಕ ಆಚಾರದಲ್ಲಿ ಸೇರುತ್ತವೆ. ಊರ–ಕರಕುಶಲತೆ, ನಾಡಕಲೆಗಳು, ಊರ–ವಾಸ್ತುವಿದ್ಯೆ, ಊರ–ಬಟ್ಟೆ, ಊರ–ಅಡುಗೆ ಮೊದಲಾದವನ್ನು ಸಾಂಸ್ಕೃತಿಕ ಬಳುವಳಿಯಲ್ಲಿ ಸೇರಿಸಿದ್ದಾರೆ. ಗ್ರಾಮೀಣ ನಾಟಕ, ಗ್ರಾಮೀಣ ಸಂಗೀತ, ಗ್ರಾಮೀಣ ನೃತ್ಯ ಇತ್ಯಾದಿಗಳನ್ನು ಗ್ರಾಮೀಣ ಪ್ರದರ್ಶನ ಕಲೆಯಾಗಿ ಕಾಣಿಸಿದೆ. ಈ ವರ್ಗೀಕರಣ ಪರಿಪೂರ್ಣವಲ್ಲ ಎಂದು ಯಾರಿಗೂ ಅನಿಸೀತು. ಇವುಗಳೊಳಗಿನ ಘಟಕಗಳಲ್ಲಿ ಒಂದೊಂದಕ್ಕೂ ಸಂಬಂಧದ ಎಷ್ಟೆಷ್ಟೋ ಒಳಹುರಿಗಳಿರುವ ಸಾಧ್ಯತೆ ಇದೆ.

ಶಾಸ್ತ್ರೀಯವಾದ ವರ್ಗೀಕರಣ ಅವಶ್ಯವೆನಿಸುವುದು ಅಕಾಡೆಮಿಕ್ ಅಧ್ಯಯನಗಳಿಗಿಂತ ಹೆಚ್ಚಾಗಿ ಜಾನಪದ ವಸ್ತುಸಂಗ್ರಹಾಲಯಕ್ಕೂ ದಾಖಲೆ ಕಾಪುಮನೆಗೂ ಆಗಿರುತ್ತದೆ. ಸಂಗ್ರಹಗೊಳ್ಳುವ ವಸ್ತುಗಳು ಸಂಗ್ರಹಾಲಯದಲ್ಲೂ ದಾಖಲೆ ಕಾಪಿನಲ್ಲೂ ಕ್ರಮೀಕರಣಗೊಳ್ಳುವುದಕ್ಕೆ ಜಾನಪದದ ಶಾಸ್ತ್ರೀಯವಾದ ವರ್ಗೀಕರಣ ಅತ್ಯವಶ್ಯ.

ದಾಖಲಾತಿಕಾಪುಮನೆಯೂ, ವಸ್ತುಸಂಗ್ರಹಾಲಯವೂ ಕೇರಳದ ಜಾನಪದ ಅಧ್ಯಯನಕ್ಕೆ ಇಂದಿನ ಸ್ಥಿತಿಯಲ್ಲಿ ಅಲಭ್ಯ ವಿಷಯವಾಗಿವೆ. ಕಾರಣ ಆಗಲೆ ಸೂಚಿಸಿದ ಹಾಗೆ ಕೇರಳದ ಜಾನಪದ ಅಧ್ಯಯನವನ್ನು ಇವತ್ತು ಕೂಡ ವ್ಯಕ್ತಿಗಳೇ ನಡೆಸುತ್ತಿದ್ದಾರೆ. ಅವರು ಸಂಗ್ರಹಿಸುತ್ತಿರುವ ವಸ್ತುಗಳನ್ನು ತಾವೇ ಸಂರಕ್ಷಿಸಲು ಬೇಕಾದ ಪರಿಸರ ಅವರಲಿಲ್ಲ. ವ್ಯಕ್ತಿಗಳು ಸಂಗ್ರಹಿಸಿರುವ ವಸ್ತು, ದಾಖಲೆಗಳನ್ನು ಒಂದು ಕೇಂದ್ರದಲ್ಲಿ ದಾಖಲಾತಿ ಕಾಪುಮನೆಯೂ, ವಸ್ತುಸಂಗ್ರಹಾಲಯವೂ ಆಗಿ ಸಂರಕ್ಷಿಸಲು ಇಲ್ಲಿ ಖಾಸಗಿ ಸಂಸ್ಥೆಗಳೊ ಸರಕಾರಿ ವ್ಯವಸ್ಥೆಯೊ ಇಲ್ಲ. ಇದರಿಂದ ವ್ಯಕ್ತಿಗಳು ಸಂಗ್ರಹಿಸಿದ ವಿಪುಲವಾದ ವಸ್ತುಸ್ಥಿತಿ ಸಾಮಗ್ರಿಗಳಲ್ಲಿ ಅಲ್ಪಭಾಗ ಮಾತ್ರ ಉಪಯೋಗಕ್ಕೆ ಬಂದು ಪುಸ್ತಕಗಳಾಗಿ ತೋರಿಬರುತ್ತಿವೆ. ಬಾಕಿ ಎಲ್ಲವೂ ಪೂರ್ತಿನಷ್ಟಗೊಳ್ಳುತ್ತಲೂ ಇದೆ. ಇದು ಅಕಾಡೆಮಿಕ್ ಆಯೋಜನವಿಲ್ಲದೆ ಹಾನಿಗೊಳ್ಳುತ್ತಿರುವ ವಿಜ್ಞಾನದಾಸ್ತಾನುಗಳಾಗಿವೆ. ಇದರ ಬಗೆಗೆ ಯಾರೂ ಗಂಭೀರವಾಗಿ ಚಿಂತಿಸಿಲ್ಲ.

ಅಧ್ಯಾಯ ಒಂದು

ಮೌಖಿಕ ಶಾಖೆ

ಆರೋಮುಣ್ಣಿಯ ಅಂಕಪ್ಪುಱ(ರ)ಪ್ಪಾಡು

(ಕಥನಗಾನ)

ಎಂ.ಆರ್. ರಾಘವ ವಾರಿಯರ್

ಟಿಪ್ಪಣಿ

ಜಾನಪದದ ದೊಡ್ಡ ವಿಭಾಗವೊಂದು ಮೌಖಿಕಜ್ಞಾನಶಾಖೆಯಾಗಿದೆ. ಗಾದೆ ಮಾತು, ಒಗಟು ಮೊದಲಾದ ಅನೇಕ ಮೌಖಿಕ ಜ್ಞಾನರೂಪಗಳು ಇರುವವಾದರೂ ಅನೇಕ ಕಾರಣಗಳಿಂದ ಪ್ರಾಮುಖ್ಯ ಗಳಿಸುವುದು ಜಾನಪದ ಗೀತಗಳೇ. ಜಾನಪದಗೀತೆಗಳ ಆಖ್ಯನರೂಪಗಳನ್ನೆ 'ಕಥಾಗಾನ' ಎಂದು ಕರೆಯುವುದು. ಹಾಡುಗಳ ಗಾತ್ರವನ್ನನುಸರಿಸಿ ಕಥನಗಾನಗಳನ್ನು ಕಥಾಸೂಚಿತ ಗಾನ, ಕಥಾಗಾನ, ಕಥಾಗಾನಚಕ್ರ, ಜಾನಪದ ಇತಿಹಾಸ ಹೀಗೆಲ್ಲ ವರ್ಗೀಕರಿಸಬಹುದು. ಯಾರಾದರೊಬ್ಬ ಕಥಾನಾಯಕನನ್ನು ಕೇಂದ್ರೀಕರಿಸಿ ಕಾಲಾನುಕ್ರಮವಿಲ್ಲದೆ ಹಲವಾರು ಘಟನಾವಳಿಗಳನ್ನು ಹೆಣೆದು ಪ್ರಸ್ತುತಪಡಿಸುವ ಕಥಾಗಾನ ರೂಪವನ್ನೆ 'ಕಥಾಗಾನಚಕ್ರ' ಎಂದು ಕರೆಯುವುದು. ಇದಕ್ಕೆ ಅತ್ಯಂತ ಉತ್ತಮ ಉದಾಹರಣೆ 'ತಚ್ಚೋಳಿಪಾಟು'. ಒಬ್ಬನನ್ನು ಅಥವಾ ಹೆಚ್ಚು ಮಂದಿಯನ್ನು ನಾಯಕನಾಗಿ ಮಾಡಿ ಅವರನ್ನು ಕೇಂದ್ರಿಕರಿಸಿ ಕಲಾನುಕ್ರಮ ಪಾಲಿಸಿಕೊಳ್ಳುತ್ತ ಘಟನಾವಳಿಗಳನ್ನು ನಿರೂಪಿಸುವ ಕಥಾಗಾನವೇ 'ಗ್ರಾಮೀಣ ಇತಿಹಾಸ'. 'ಪುತ್ತೂರಂಪಾಟು' ಈ ಬಗೆಯ ಒಂದು ಕಥಾಗಾನವಾಗಿದೆ.

ತಿರುಳನ್ನು ಆಧರಿಸಿ ಕಥಾಗಾನಗಳನ್ನು ಕಾಲ್ಪನಿಕ ಕಥಾಗಾನ, ಚಾರಿತ್ರಿಕ ಕಥಾಗಾನ, ವೀರಕಥಾಗಾನ, ಅಲೌಕಿಕ ಕಥಾಗಾನ, ಮಾಂತ್ರಿಕ ಕಥಾಗಾನ, ಪುರಾವೃತ್ತ ಕಥಾಗಾನ, ಹಾಸ್ಯಕಥಾಗಾನ ಎಂದೆಲ್ಲ ವರ್ಗೀಕರಿಸಬಹುದು. 'ವಡಕ್ಕನ್ ಪಾಟುಗಳ್' (ಬಡಗಣ ಹಾಡುಗಳು) ಮುಖ್ಯವಾಗಿಯೂ ವೀರ ಕಥಾಗಾನಗಳಾಗಿವೆ. ಅಪೂರ್ವವಾಗಿ ಪುರಾವೃತ್ತ ಸಂಬಂಧಿಯಾದ ಕಥೆಗಳನ್ನೂ ಹಾಡುವುದುಂಟು.

ಕಥಾಗಾನ ಸಾರ್ವತ್ರಿಕವಾದ ಒಂದು ಜಾನಪದ ರೂಪವಾಗಿದೆ. ವಿಶೇಷತಃ ವೀರಕಥಾಗಾನ, ಮಧ್ಯಯುಗೀನ ಬದುಕನ್ನೆ ಪ್ರತಿಬಿಂಬಿಸುವುದು ಎಂದು ಅಧ್ಯಯನಗಳು ಶ್ರುತಪಡಿಸುತ್ತವೆ. ಇಂಗ್ಲಂಡ್ ಮತ್ತು ಸ್ಕಾಟ್ಲಂಡ್‌ಗಳ ಪರಂಪರಾಗತ ಗಾಯಕರು (ಬಾಡ್ಸ್) ಒಂದು ಪ್ರತ್ಯೇಕ ರೀತಿಯ ವಾದ್ಯೋಪಕರಣವನ್ನು ಬಳಸಿ ಹಾಡುವ ಗಾನರೂಪವನ್ನೆ ಕಥಾಗಾನ (ಬಾಲಡ್ಸ್) ಎಂದು ಕರೆಯುವುದು. ಆ ಬಗೆಯ ಪರಂಪರಾಗತ ಗಾಯಕರು ಕೇರಳದಲ್ಲಿ ಇಲ್ಲವಾದರೂ ನಮ್ಮ 'ವಿಲ್ಲಡಿಚ್ಚಾನ್ ಪಾಟು'ಕಾರರು, 'ಪುಳ್ಳುವ'ರು, 'ಕೋತಾಮೂರಿ ಆಟ'ಕಾರರು ಮಾಡಿಕೊಂಡು ಬಂದುದು ಒಂದು ಅರ್ಥದಲ್ಲಿ ಇದೇ ಆಗಿದೆ. ಇವೆಲ್ಲ ಒಂದು ರೀತಿಯಲ್ಲಿ ರಂಗಕಲೆಯ ಭಾಗಗಳಾಗಿವೆ. ವಡಕ್ಕನ್ ಪಾಟುಗಳಾದರೆ ಕೇವಲ ಹಾಡುಗಳಾಗಿವೆ. ನೇಜಿ ನೆಡುವಾಗ, ಔತಣ ಅಡುಗೆಗೆ ಕಡೆಯುವ ಕಲ್ಲು ತಿರುವುವಾಗ ಎಂಬೆಲ್ಲ ಸಂದರ್ಭಗಳಲ್ಲಿ ಈ 'ಪಾಟು'ಗಳನ್ನು ಹಾಡುತ್ತಾರೆ.

ಸಂಪಾದಕ

ಆರೋಮುಣ್ಣಿಯ ಅಂಕಪುಱ(ರ)ಪ್ಪಾಡು

ಪುತ್ತೂರಂ ವೀರಗಾಥೆಗಳಲ್ಲಿ ಒಳಗೊಂಡಿರುವ ಪಾಟು ಕಥೆಯ ಭಾಗವೊಂದನ್ನು ಇಲ್ಲಿ ಉದ್ಧರಿಸಿದೆ. ಇನ್ನೆಂದೂ ಮರಳಿ ಬರಲಾಗದ ಹಾಗೆ ಕಳೆದುಹೋದ ಒಂದು ಕಾಲದ ಹೆಜ್ಜೆಗುರುತು ಒತ್ತಿಸಿಕೊಂಡಿರುವಂಥದು ಈ ಪಾಡುಕಥೆ. ಹಳೆಯ ಆಚಾರಗಳು, ನಂಬಿಕೆಗಳು ಅರಿವುಗಳು, ಹೆಚ್ಚೇಕೆ ಹಳಮೆಯ ಜೀವನಪ್ರಪಂಚವನ್ನಿಡಿಯಾಗಿ ಈ ಹಾಡಿನಲ್ಲಿ ಸ್ಪಷ್ಟ ಕಾಣಬಹುದು. ಪರಂಪರಾಗತವಾದ ಒಂದು ನುಡಿಪದ್ಧತಿಯಲ್ಲಿ ಇದು ಸ್ಫುಟವಾಗುತ್ತದೆ. ತಿಳಿಯಾದ ಮಲಯಾಳದ ಚೆಲುವೂ ರಚನೆಯ ಗಟ್ಟಿತನವೂ ತುಂಬಿಕೊಂಡಿರುವ ಆ ಆಖ್ಯಾನರೀತಿ ಕೈತಪ್ಪು ಬಾರದೆ ಕಾಪಿನಬೇಕಾದ ಒಂದು ನಿಧಿಯಾಗಿದೆ. 'ಕವಿಯಶಃ ಪ್ರಾರ್ಥಿ' ಗಳಿಗೆ ಮಾತ್ರವಲ್ಲ ಮಲಯಾಳ ಭಾಷೆಯನ್ನು ಬಳಸುವ ಆವಶ್ಯಕತೆ ಇರುವ ಯಾವ ವ್ಯಕ್ತಿಗೂ ತಿಳಿದುಬರಬೇಕಾದ ಹಲವು ರಚನಾಮರ್ಮಗಳು ಈ ಬಗೆ ಪಾಡುಕಥೆಗಳಲ್ಲಿ ಇವೆ. ಇದೆಲ್ಲಕ್ಕೂ ಹೊರಗೆ ಕೇರಳೀಯ ಸಮೂಹದ ಒಂದು ಹಳೆಯ ಯುಗಸಂಧಿಯಲ್ಲಿದ್ದ ಆಚಾರಗಳೂ, ವಿಚಾರಗಳೂ, ಜೀವನ ರೀತಿಯೂ ತಂಗಿಕೊಂಡು ಇರುವ ವಾಙ್ಮಯಗಳೇ 'ಪುತ್ತೂರಂ ಪಾಟು ಕಥೆಗಳು'.

'ಚೇಕವನ್' (ಯೋಧಜನ)ಗಳ 'ತಱ(ರ)ವಾಡು'(ಮನೆತನ) ಎನಿಸಿದ 'ಪುತ್ತೂರನ್ ವೀಡು' ಹಳಮೆಗೂ ಪರಂಪರೆಗೂ ಹೆಸರಿರುವಂಥದು. ಚೇರಮಾನ್ ಪೆರುಮಾಳ್ ತಂಬುರಾನ್ (ದೊರೆ)ನ ಕಾಲದಲ್ಲಿ ಈೞಂ(ಳಂ)ನಿಂದ ಬಂದ 'ಕುಲವಿರುತ್' ಎಂಬ ಒಬ್ಬ ಚೇಕವನೇ ಈ ತರವಾಡಿನ ಮೂಲಪುರುಷ. ಆ ತರವಾಡಿನವನಾದ ಕಣ್ಣಪ್ಪನ್ ಚೇಕವನ್‌ನ ಮಗನೇ 'ಆರೋಮಲ್' ಎಂಬೊಬ್ಬ ಚೇಕವನ್. ಯುದ್ಧದಲ್ಲೂ ಪಟ್ಟುಗಳಲ್ಲೂ ಬಲುಗಟ್ಟಿಗನೆಂದು ಆರೋಮಲ್ ಚೇಕವನ್ ಕೀರ್ತಿಯನ್ನು ಹಬ್ಬಿಸಿದ.

ಹಾಗಿರುತ್ತ ಊರಿನ 'ಕುಱು(ರು)ಙ್ಙೊಟಿಡಂ' ಎಂಬೊಂದು ತರವಾಡಿನಲ್ಲಿ ಅಕ್ಕ ಮತ್ತು ತಂಗಿಯರು ಹೆತ್ತ 'ಉಣಿಕ್ಕೋನಾರ್' ಮತ್ತು 'ಉಣಿಚ್ಚಂದ್ರೋನ್' ಈ ಇಬ್ಬರು ನಾಯರ್‌ಗಳು ತಮ್ಮೊಳಗೆ ಹಿರಿತನ–ಕಿರಿತನ ವಿವಾದ ತೊಡಗಿದರು. ಹಲವು ಬಗೆ ಪರೀಕ್ಷಿಸಿಯೂ ನಿಜ ಬಯಲುಗೊಳ್ಳಲಿಲ್ಲ. ಕೊನೆಗೆ ಆ ಕಾಲದ ಪದ್ಧತಿಯಂತೆ ರಣರಂಗದಲ್ಲಿ ವೀರರ ಹೋರಾಟ ಏರ್ಪಡಿಸಿ ಜಯಾಪಜಯಗಳ ಮೂಲಕ ಪ್ರಶ್ನೆ ಪರಿಹರಿಸುವುದಾಗಿ ತೀರ್ಮಾನವಾಯಿತು. ಉಣ್ಣಿಚ್ಚಂದ್ರೋನ್ ತನ್ನ ಪರವಾಗಿ ಕಾದಲು ಕೋಲತ್ತುನಾಡಿನ (ಏಜಿಮಲ–'ಏಳುಮಲೆ' ರಾಜಧಾನಿಯಾದ ರಾಜ್ಯದ) 'ಅರಿಜೋಡರ್' ಎಂಬ ಚೇಕವನನ್ನು ಕರೆಸಿಕೊಂಡ, ಉಣಿಕ್ಕೋನಾರ್ ಪುತ್ತೂರನ್ ವೀಡಿನ್ ಆರೋಮಲ್ ಚೇಕವನನ್ನು ತನಗಾಗಿ ಪಡೆದುಕೊಂಡ. ಅಂಕ(ಕಾಳಗ)ದಲ್ಲಿ ಆರೋಮಲ್ ಚೇಕವನ್ ಅರಿಜೋಡನನ್ನು ಕಡಿದು ಬೀಳಿಸಿದ. ಹೋರಾಟದ ಬಳಲಿಕೆಯಿಂದ ಆರೋಮಲ್ ತನ್ನ ಸಹಾಯಕ ಚಂದುವಿನ ಮಡಿಲಲ್ಲಿ ತಲೆಯಿರಿಸಿ ಜೊಂಪಿಗೆ ಸರಿದ. ಆ ಸಂದರ್ಭ ಕಾಯ್ದು ಚಂದು ಕೈದೀವಿಗೆಯ ಸಲಾಕೆಯಿಂದ ಆರೋಮಲ್ ಚೇಕವನಿಗೆ ಇರಿದ. ವಂಚಕ ಚಂದುವಿನ ಇರಿತದಿಂದ ಆರೋಮಲ್ ಮಡಿದ.

ಆರೋಮಲ್ ಚೇಕವನ ತಂಗಿಯಾದ ಉಣ್ಣಿಯಾರ್ಚ ಎಂಬವಳ ಮಗನೇ ಆರೋಮುಣ್ಣಿ. ಅಂದರೆ ಆರೋಮಲ್ ಚೇಕವನ ಅಳಿಯ. ಬಾಲಕ ಆರೋಮುಣ್ಣಿ ಒಮ್ಮೆ ಜತೆಗಾರ ಮಕ್ಕಳೊಂದಿಗೆ 'ಕಾಱ(ರ)'ಎಂಬ ಆಟದಲ್ಲಿದ್ದಾಗ ಇತರರು ಅವನನ್ನು ಗೇಲಿ ಮಾಡಿದರು. ಅವರಿದಿರು ಏರಿಹೋದ ಆರೋಮುಣ್ಣಿಯಲ್ಲಿ ಅವರಂದರು, "ನಿನ್ನ ತಾಕತ್ತನ್ನು ತೋರಿಸಬೇಕಾದದ್ದು ನಮ್ಮಲ್ಲಿ ಅಲ್ಲ, ಮೊದಲು ನಿನ್ನ ಮಾವನನ್ನು ಕೊಂದವನಲ್ಲಿ ಸೇಡು ತೀರಿಸಿಕೋ, ಆ ಮೇಲೆ ನಮ್ಮ ಮೇಲಿನ ಹಗೆ ನೋಡಿಕೋ". ಅವಮಾನ ತಾಳಲಾರದೆ

ಮನೆಗೆ ಬಂದು ತಾಯಿಯಲ್ಲಿ ಕೇಳಿ ವಿಷಯವನ್ನು ತಿಳಿದುಕೊಂಡ ಆರೋಮುಣ್ಣಿ ಮಾವನನ್ನು ಕೊಂದ ಚಂದುವಿನ ಮೇಲೆ ಹಗೆ ತೀರಿಸಲು ಹೊರಡುವಿಕೆಯೆ ಈ ಹಾಡಿನಲ್ಲಿರುವುದು.

ವೇಗಂ ಎಚುನೇಜ್ಬು ಆರೋಮುಣ್ಣಿ ತಾಕ್ಕೋಲುಂ ಕೂಟ್ಟಂ ಎಡುಕ್ಕುನ್ನುಂಡ್	ಬೇಗನೆ ತಾನೆದ್ದ ಆರೋಮುಣ್ಣಿ ಬೀಗದ ಕೀಲಿಗೊಂಚಲ ತೆಗೆವ
ಪಡಿಞ್ಞಾಟ್ಟಿ[1] ವಾತಿಲ್ ತುಱಕ್ಕುನ್ನುಂಡ್ ವಚಿಪೋಲೆ ಅಮ್ಮಾವನೆ ನಿನೆಂದುಕೊಣ್ಣೆ	ಪಡುಮನೆ ಬಾಗಿಲ ತೆರೆಯುತ್ತಾನೆ ವಿಧಿಯಂತೆ ಮಾವನ ನೆನೆದುಕೊಂಡು
ಪಡಿಞ್ಞಾಟ್ಟಿ ವಾತಿಲುಂ ತಾಟ್ ತುಱನ್ನು ಕಾರೋಲಪ್ಪೆಟ್ಟಿಯೆಡುಕ್ಕುನ್ನುಂಡ್	ಪಡುಮನೆ ಬಾಗಿಲ ಬೀಗ ತೆರೆದು ತಾಳೆಯೋಲೆಯ ಪೆಟ್ಟಿಗೆಯ ತೆಗೆವ
ನಾಲ್ಕೆಟ್ಟಕತ್ತು[2] ಕೊಟುನ್ನುವೆಚ್ಚು ಕಾರೋಲಪ್ಪೆಟ್ಟಿ[3] ಮುಖಂ ತುಱನ್ನು	ನಾಲ್ಕಟ್ಟು ಒಳಕ್ಕವ ದಾಟಿಕೊಂಡ ತಾಳೆಯೋಲೆ ಪೆಟ್ಟಿಗೆ ಮುಚ್ಚಳ ತೆರೆದ
ಚೆಂಬೋಲ[4]ಯೆಡುತ್ತಜ್ಜ್ನೋಕ್ಕುನ್ನುಂಡ್ ಚೆಂಬೋಲ ವಾಯಿಚ್ಚ್ ನೋಕ್ಕುನ್ನೇರಂ	ಚೆಂಬೋಲೆ ತೆಗೆದದ ನೋಡುತ್ತಾನೆ ಚೆಂಬೋಲೆ ವಾಚಿಸಿ ನೋಡುತ್ತಿರೆ
ಕಣ್ಣೀರ್ ನಿಱಞ್ಞ್ ಮುಚಿಞ್ಞೊಟಿಕಿ ಚೆಂಬೋಲಯೆಡುತ್ತಜ್ಜ್ವೆಕ್ಕುನ್ನುಂಡ್	ಕಣ್ಣೀರು ತುಂಬಿ ಕಟ್ಟೆಯೊಡೆಯಿತು ಚೆಂಬೋಲೆ ತೆಗೆದತ್ತ ಇರಿಸುತ್ತಾನೆ.

1. ಪಡಿಞ್ಞಾಟ್ಟಿ ನಾಲ್ಕು ಸುತ್ತು ಗೋಡೆಯಿರುವ ಹಳೆಯ ತಱವಾಡು ಮನೆಯಲ್ಲಿ ಪಶ್ಚಿಮ ಭಾಗದಲ್ಲಿನ, ಗತಿಸಿದ ಹಿರಿಯರ ಸ್ಮರಣೆ ಮಾಡುವ, ಕೊಠಡಿ ಅಂದರೆ ದೇವರ ಕೋಣೆ. ಕನ್ನಡದಲ್ಲಿ ಅದನ್ನು 'ಪಡುಮನೆ' ಎಂದು ಅನುವಾದಿಸಿದೆ. 2. ನಾಲ್ಕೆಟ್ಟಕಂ– ಸಾಲು ಸುತ್ತ ಗೋಡೆ ಆವರಿಸುವ ಮನೆ. 3. ಪೆಟ್ಟಿ= ಪೆಟ್ಟಿಗೆ. 4. ಚೆಂಬೋಲ= ಆಮ್ರದ ಹಾಳೆ ಬರಹ

ಕಾರೋಲಪ್ಪೆಟ್ಟಿಯಡಚ್ಚುಪೂಟ್ಟಿ ಪಡಿಞ್ಞಾಟ್ಟಿಯಕತ್ತು ಕೊಡುನ್ನುವೆಚ್ಚು	ತಾಳ್ಯೋಲೆ ಪೆಟ್ಟಿಗೆ ಮುಚ್ಚಿ ಬಿಗಿದ ಪಡುಮನೆಯೊಳಕ್ಕೆ ದಾಟಿಕೊಂಡ
ಪಡಿಞ್ಞಾಟ್ಟಿ ಮಚ್ಚಱಪೂಟ್ಟುನ್ನುಂಡ್	ಪಡುಮನೆಯಟ್ಟ ಬೀಗವ ಹಾಕುವ

ಅಮ್ಮೇಡೆಯರಿಕತ್ತು ಚೆನ್ನಿದೆಲ್ಲೋ	ಅಮ್ಮನ ಬಳಿಗೇ ಹೋದನಲ್ಲೋ
ಒನ್ನಿಙ್ಙು ಕೇಳ್ಕಣಂ ಪೆಱ್ಱೋರಮ್ಮೇ	ಒಮ್ಮೆಗೆ ಕೇಳಿತ್ತ ಹೆತ್ತವ್ವೆಯೇ
ಒರುತಲಯ್ಕೆಣ್ಣ ತರಿಕವೇಣಂ	ಒಮ್ಮೆ ತಲೆಗೆಣ್ಣೆಯ ಕೊಡಲುಬೇಕು
ಅದು ತಾನೆ ಕೇಳ್‍ಕುನ್ನು ಉಣ್ಣಿಯಾರ್ಚ	ಅದ ತಾನೆ ಕೇಳ್ವಳು ಉಣ್ಣಿಯಾರ್ಚ
ಕಿಣ್ಣತ್ತಿಲೆಣ್ಣಯಾಂ ಕಣ್ಣಾಡಿಯಾಂ	ಬಟ್ಟಲ ಲೆಣ್ಣೆಯ ಕನ್ನಡಿಯ
ಎಣ್ಣಯಾಂ ಪೀಠಂ ಕೊಡುಕ್ಕುನ್ನುಂಡ್	ಎಣ್ಣೆಯ ಪೀಠವ ಕೊಡುತಿರುವಳು
ಎಣ್ಣ ನಿಱಯೋಳಂ ತೇಚಾರೋಮರ್	ಎಣ್ಣೆ ತುಂಬ ಹಚ್ಚಿಕೊಂಡಾರೋಮರ್
ಈಂಚಾ ಪೊಳಿಂಚಿಕ್ಕಾ ತಾಳಿ[1]ಡುತ್ತು	ಈಂಚಾ ಪೊಳಿಂಚಿಕ್ವಾ ಗುಳ[1]ತೆಗೆದಳು
ತಾಳಿಯಾಂ ಕೊಂಡು ಕೊಡುತ್ತಿತಮ್ಮ	ಗುಳವನ್ನು ತಂದೂಕೊಟ್ಟಳಮ್ಮ
ತಾಳಿಯಾಂ ವಾಙ್ಙುನ್ನು ಆರೋಮುಣ್ಣಿ	ಗುಳವನ್ನು ಕೊಳುವನು ಆರೋಮುಣ್ಣಿ
ಆಱ್ಱಾಂಚಿರಯ್ಕಲುಂ ಕುಳಿಪ್ಪಾನಾಯಿ	ನದಿಯ ಕಟ್ಟೆಗೆ ತನ್ನ ಮೀಹಕಾಗಿ
ವೇಗತ್ತಿಲ್ ತನ್ನೆಯಾಂ ಪೋಕುನ್ನುಂಡ್	ಬೇಗನೆ ತಾನೇ ಹೋಗುತ್ತಾನೆ
ಆಱ್ಱಾಂಚಿರಯ್ಕಲುಂ ಚೆಲ್ಲುನ್ನುಂಡ್	ನದಿಯ ಕಟ್ಟೆಗೆ ಸಾರುತ್ತಾನೆ
ತಾಳಿಕ್ಕಲ್ಲೇಱಿಯಿರುನ್ನವಿಡೆ	ಗುಳಹಚ್ಚೊ ಕಲ್ಲನೇರುವನಲ್ಲಿ
ತಾಳಿಯಾಂ ತೇಚ್ಚು ಮೆಱುಕ್ಕಿಳಕ್ಕಿ	ಗಾಳ ಹಚ್ಚಿ ಜಿಡ್ಡ ಮೈಯಿಂದಿಳಿಸಿ
ಮೆಱುಕ್ಕಿಳಕ್ಕಿತ್ತನ್ನೆ ಕುಳಿಕ್ಕುನ್ನ್ಂಡ್	ಜಿಡ್ಡನಿಳಿಸಿ ತಾನೆ ಮೀಯುತ್ತಾನೆ
ಕಲ್ಲಿನ್ಮೇಲ್ ಕರ್ಮಂ ಕಱಿಕ್ಕುನ್ನುಂಡ್	ಕಲ್ಲಮೇಲೆಯೆ ಕರ್ಮಾಚರಣೆಯಾಯ್ತು
ಕಡವತ್ತು ಮಂತ್ರಂ ಉಡನ್‍ಕಱಿಚ್ಚು	ತಡಿಯಲ್ಲಿ ಮಂತ್ರ ಒಡನೆ ಮುಗಿಸಿ
ಸೂರ್ಯನು ವೆಳ್ಳಂ ಜಪಿಚ್ಚೆಱಿಞ್ಞು	ಸೂರ್ಯಂಗೆ ನೀರ ಜಪಿಸಿಯೆಸೆದ

1 ‘ಗುಳ’ ಎಂದರೆ ಜಿಡ್ಡು ಸರಿಸಲು ಬಳಸುವ ವನಸ್ಪತಿ ಅರೆದ ಲೋಳೆ. ಇದಕ್ಕೆ ಮಲಯಾಳದಲ್ಲಿ ‘ತಾಳಿ’ ಎನ್ನುತ್ತಾರೆ. ಈಂಚ್ ಗಿಡ ಪೊಳಿಂಚಿಕಾಯಿ ಜಜ್ಜಿಮಾಡಿದ ‘ತಾಳಿ’ ಎಂದರ್ಥ.

ಸೂರ್ಯಭಗವಾನೇಕ್ಕೆ ವಣಜ್ಞಿ	ಸೂರ್ಯದೇವರಿಗೆಲ್ಲ ಪೊಡಮಟ್ಟನು
ಅವಿಡನ್ನು ವೇಗಂ ನಡನ್ನವನುಂ	ಅಲ್ಲಿಂದ ಬೇಗನೆ ಮಡೆದನವನು
ಆಋುಂ ಮಣಮ್ಮೇಲುಂ ವೀಟ್ಟಿಲ್‌ವನ್ನು	ನದಿ ದಡ ಹೊಯ್ಗೆಮೇಲ್ನಡೆದು ಮನೆಗೆ
ನಾಲ್‌ಕೆಟ್ಟಕತ್ತು ಕಡನ್ನವನುಂ	ನಾಲ್ಕೆಟ್ಟು ಮನೆಯೊಳ ಹೊಕ್ಕನವನು
ಆಚಾರತ್ತೋಡೆಯಾಂ ಇರಿಕ್ಕುನ್ನುಂಡ್	ಆಚಾರದೊಂದಿಗೆ ಕುಳ್ಳಿರುವನು
ಚಂದನಚ್ಚಾಣ ವಲಿಚ್ಚುವಚ್ಚು	ಚಂದನಶಾಣೆಯ ಎಳೆದುಇಟ್ಟು
ಚಂದನಂ ಉರಸಿ ಕುಜಿ ವರಚ್ಚು	ಚಂದನ ತೇದು ನಾಮವ ಬರೆದ
ಅಂಕಕ್ಕುಜಿಯುಂ ವರಯ್ಕುನ್ನುಂಡ್	ಕಾಳೆಗ ನಾಮವ ಬರೆಯುತ್ತಾನೆ
ಚುಂಡನ್ ಕುಜಿ[1]ಯುಂ ತೊಡುಕುಜಿ[2]ಯುಂ	'ಚುಂಡನ್ ಕುಜಿ'ಯನು ತೊಡುಕುಜಿಯನು ಅಂಕ
ಅಂಕಕ್ಕುಜಿಯುಂ ವರಚ್ಚವನುಂ	ಕಾಜಿಯ ಬರೆದನವನು
ಪೊನ್‌ಕೊಂಡರಚ್ಚು ತಿಲಕಂ ತೊಟ್ಟು	ಬಂಗಾರವನು ತೇದು ತಿಲಕವಿಟ್ಟ
ಈ ವಕ ಕಾಣುನ್ನು ಉಣ್ಣಿಯಾರ್ಚ	ಈ ಬಗೆ ಕಾಣುವಳು ಉಣ್ಣಿಯಾರ್ಚ
ನೆಞ್ಞತ್ತು ಕೈ ವೆಚ್ಚು ಚೋದಿಕ್ಕುನ್ನು	ಎದೆ ಮೇಲೆ ಕೈಯಿಟ್ಟು ಕೇಳುತ್ತಾಳೆ
ಒನ್ನಿಜ್ಞು ಕೇಳ್‌ಕ್ಕಣಂ ಪೊನ್ಮಗನೆ[3]	ಒಂದಿತ್ತ ಕೇಳ್ಬೇಕು ಪೊನ್ಮಗನೆ
ಅಂಕಕ್ಕುಜಿಗಳ್[4]ವರಚ್ಚದೆಂದೇ	ಅಂಕಕುಜಿಯನು ಬರೆದುದೇನು
ಎವಿಡೇಕ್ಕ್ ಒರುಜ್ಞಿಯ ಯಾತ್ರಯಾಣ್	ಎಲ್ಲಿಗೆ ಸಜ್ಜಾದೆ ಯಾತ್ರೆಗಾಗಿ
ಅಪ್ಪೋಳ್ ಪಜಯನ್ನು ಆರೋಮುಣ್ಣಿ ಕೋಲಾಸ್ತ್ರೀ ನಾಟ್ಟೋಳಂ ಪೋಣೆನಿಕ್ಕ್	ಆವಾಗ ಪೇಳ್ವನು ಆರೋಮುಣ್ಣಿ ಕೋಲಾಸ್ತ್ರೀನಾಡಿಗೆನಗೆ ಹೋಗಲುಂಟು
ಅಪ್ಪೋಳ್ ಚೋದಿಕ್ಕುನ್ನು ಉಣ್ಣಿಯಾರ್ಚ	ಆಗ ಕೇಳುವಳೂ ಉಣ್ಣಿಯಾರ್ಚ
ಎಂದು ಮೊಜಿಚೊಲ್ಲಿಪ್ಪೋಣುನೀಯ್ಯ್	ಏನು ಕಾರಣ ಹೇಳಿ ಪೋಪೆ ನೀನು
ಅಪ್ಪೋಳ್ ಪಜಯುನ್ನುಆರೋಮುಣ್ಣಿ	ಆಗ ಹೇಳುವನು ಆರೋಮುಣ್ಣಿ
ಚಂದೂನೆ ಕಾಣಾನಾಯ್ ಪೋನ್ನ್ಞಾನುಂ	ಚಂದುವನು ಕಾಣಲು ಪೋಪೆ ನಾನು

1 ಚುಂಡನ್‌ಕುಜಿ–ಹೆಬ್ಬೆರಳ ನಾಮ 2. ತೊಡುಕುಜಿ – ಅಡ್ಡನಾಮ 3. ಪೊನ್ಮಗನೆ – ಹೊನ್ನಮಗನೆ 4. ಅಂಕಕ್ಕುಜಿ – ಯುದ್ಧದ ನಾಮ ಬರೆಹ.

ಚಂದುನೋಡೊರುವಾಳ್ ಪೊರುತವೇಣಂ	ಚಂದುನೊಂದಿಗೆ ಬಾಳೊ[1]ಂದೊರಸಬೇಕು
ಅಪ್ಪೋಳ್ ಪಱಯಾನ್ನು ಉಣ್ಣಿಯಾರ್ಚ	ಆಗ ಪೇಳುವಳು ಉಣ್ಣಿಯಾರ್ಚ
ಚಂದೂನ್ನ್ ಪರಞ್ಞವನ್ ಚದಿಯನಾಣ್	ಚಂದು ಎಂಬವನೊಬ್ಬ ವಂಚಕನು
ಅಮ್ಮಾವನು ಶರಿಯೊತ್ತ ಅಡವುಂಡಲ್ಲೋ	ಮಾವನಿಗೆ ಸಾಟಿಯಾದ ಪಟ್ಟು ಬಲ್ಲ 61
ಒರು ಕಳರಿಯಿಲ್ ನಿನ್ನ್ ಪಠಿಚ್ಚತಾಣ್	ಒಂದೇ ಗರಡಿಯಲ್ಲಿ ಕಲಿತವರು
ಒರುಮಿಚ್ಚು ವಿದ್ಯ ಪಠಿಚ್ಚವರುಂ	ಒಂದಾಗಿ ವಿದ್ಯೆಯ ಕಲಿತವರು
ನಾಲ್ಪತ್ತಿರಂಡು ವಯಸ್ಸವನ್	ನಲ್ವತ್ತೆರಡು ವಯಸ್ಸವಂಗೆ
ಮುಂತಂಡಯ್ಯೂಕ್ಕುಳ್ಳ ಕಾಲಮಾಣ್	ಮುಂದೋಳು ಉರ್ಕುವ ಕಾಲವಿದು
ಅರಿಜ್ಝೋಡನ್ ತನ್ಞ[2] ಚದಿ[3]ಯಿಂಡಲ್ಲೋ	ಅರಿಜ್ಝೋಡನ ತನ್ನ ಚದಿಯುಂಟಲ್ವೇ
ಪದಿನೆಟ್ಟ್ ಕಳರಿಕ್ಕ್ ಆಶಾನ್[4] ಚಂದು	ಹದಿನೆಂಟು ಗರಡಿಗೆ ಆಶಾನ್ ಚಂದು
ಮೊೞಿಕೂಡಾತ್ತಮ್ಮಾವನ ಕೊನ್ನು ಚಂದು	ಕಾರಣ ಕೊಡದೆ ಮಾವನ ಕೊಂದ ಚಂದು
ಮೊೞಿಯೋಡೆ ನಿನ್ನೆಯಾಂ ಕಲ್ಲುಮವನ್	ಕಾರಣ ಹೇಳಿಯೆ ನಿನ್ನ ಕೊಲ್ಲುವನು
ಕಳ್ಳಚ್ಚದಿಯೇಱುಂ ಚಂದುನಲ್ಲೋ	ಕಳ್ಳವಂಚನೆ ಬಹಳ ಚಂದುಗಲ್ವೇ
ವೆಱುದೆ ಮರಿಪ್ಪಾನುಂ ಪೋಂಡ ನೀಯ್ಯ್	ಬರಿದೆ ಸಾಯಲು ಹೋಗಬೇಡ ನೀನು 70
ನೀಯುಂ ಚೆಱುಪ್ಪಲ್ಲೋ ಬಾಲ್ಯಕಾಲಂ	ನೀನಾದರೂ ಸಣ್ಣಲ್ವೇ ಬಾಲ್ಯಕಾಲ
ಅಟವುಂ ತೊೞಿಯುಂ ಉಱಚ್ಚಿಟ್ಟಿಲ್ಲ	ಪಟ್ಟು ಪೆಟ್ಟುಗಳಿನ್ನೂ ಬಲಿತುದಿಲ್ಲ
ಮಾಱಾನ್ಞನೋಡೇಱುಞ ತೊಡುತ್ತಿಟ್ಟಿಲ್ಲ	ಇದಿರಾಳಿಯೊಳು ಮಲೆತು ತಾಗಿದ್ದಿಲ್ಲ
ಅಪ್ಪೋಳ್ ಪಱಯುನ್ನು ಆರೋಮುಣ್ಣಿ	ಆಗ ಪೇಳುವನ್ನುಆರೋಮುಣ್ಣಿ
ದೈವವಿಧಿ ಪೋಲಿರಿಕ್ಕಟ್ಟಮ್ಮೇ	ದೈವ ಕಲ್ಪಿಸಿದಂತಿರಲಿ ತಾಯೇ
ನಾಲ್ಕೆಟ್ಟಕತ್ತು ಕಟಕ್ಕುನ್ನುಂಡ್	ನಾಲ್ಕೆಟ್ಟು ಮನೆಯೊಳು ದಾಟುವನು.

1. ಬಾಳು–ಖಡ್ಗ 2. ಱ = ಇದು ಬಿರುಸಾದ ರೇಫ್. ಈ ಶಕಟ ರೇಫಕ್ಕ ಎಱದೇ ಒತ್ತಕ್ಷರವಾಗಿ ಬಂದಾಗ (ಱ) ಮೃದು ಟಕಾರ, ಇಂಗ್ಲಿಷಿನ it ನಲ್ಲಿರುವ ಟಕಾರ, ಉಚ್ಚಾರಗೊಳ್ಳುತ್ತದೆ. ತಮಿಳು ಮತ್ತು ಮಲಯಾಳಗಳಲ್ಲಿ ಇರುವ ವಿಶಿಷ್ಟ ಪ್ರಯೋಗ. 'ನ್ಞ– ನಕಾರಕ್ಕೆ ಅರ್ಧ ಡಕಾರ ಸೇರಿಕೊಳ್ಳುತ್ತದೆ. 3.ಚದಿ = ವಂಚನೆ 4. ಆಶಾನ್ = ಗುರು

ತೆಕ್ಕಿನಿಯೆನ್ನೊರು ಪೂಂದಳತ್ತಿಲ್	ತೆಂಕಣಮನೆಯೆಂಬ ಹೂತಳದಿ
ಅಡಿಚ್ಚು ತಳಿಚ್ಚು ಚಿತಂ ವರುತ್ತಿ	ಗುಡಿಸಿ ತಳಿದು ಶುದ್ಧ ಬರಿಸಿದಳು
ಪೂವ್ವನಿಲಯುಂ ಮುಱಿಚ್ಚುವೆಚ್ಚು	ಹೂಬಾಳೆಯೆಲೆಯನು ಅರಿದಿಟ್ಟಳು
ಪೊನ್ನುಂ ಪೆರುಂಬಾಯಿರಿಪ್ಪಾನಿಟ್ಟು	ಹೊನ್ನ ಹಿರಿಚಾಪೆಯ ಕುಳ್ಳಿರಲು
ಪೂಪೋಲೆ ಚೋರು ವಿಳಂಬುನ್ನುಂಡ್	ಹೂವಂತೆ ಅನ್ನವ ಬಡಿಸುತ್ತಾಳೆ
ಪೊನ್‌ಪೋಲೆ ನಾಲು ಕಱಿ ವಿಳಂಬಿ	ಹೊನ್ನಂಥ ನಾಲ್ಕು ಪದಾರ್ಥವನ್ನು
ತರಿಯಿಟ್ಟ ಕಿಂಡಿಯಿಲ್ ವೆಳ್ಳಮಾಯಿ	ತರಿಹಾಕಿದ ಗಿಂಡಿಯಲಿ ನೀರನಿಟ್ಟು
ಆರೋಮುಣ್ಣಿಯೆ ವಿಳಿಕ್ಕುನ್ನುಂಡ್	ಆರೋಮುಣ್ಣಿಯ ಕರೆಯುತ್ತಾಳೆ
ಚೋರುಣ್ಣಾನ್ ವಾಯುಣ್ಣಿಪೊನ್‌ಮಗನೇ	ಅನ್ನವುಣ್ಣಲು ಬಾ ಉಣ್ಣಿ ಪೊನ್ ಮಗನೇ
ವಿಳಿಚ್ಚ ವಿಳಿಕೇಟ್ಟು ವೇಗಂ ವನ್ನು	ಕರೆದ ಕರೆಹ ಕೇಳೆ ಬೇಗ ಬಂದ
ಕಿಂಡಿಯಿಲ್ ವೆಳ್ಳಂ ಕೊಡುಕ್ಕುನ್ನುಂಡ್	ಗಿಂಡಿಯಲ್ಲಿ ನೀರನು ಕೊಡುತ್ತಿದ್ದಾಳೆ
ಕೈವಾಯ್ ಮುಖವು ಚಿತಂ ವರುತ್ತಿ	ಕೈಬಾಯಿ ಮುಖವ ಶುದ್ಧಿಯ ಬರಿಸಿ
ಚೋಱುಂ ವಲಂಭಾಗೇ ಚೆನ್ನಿರುನ್ನು	ಅನ್ನದ ಬಲಭಾಗದಿಂದ ಕೂತ
ಭೂಮಿಕ್ಕ್ ನೀರ್‌ತೆಳಿಚ್ಚನ್ನಂ ವೆಚ್ಚು	ಭೂಮಿಗೆ ನೀರ್ ತಳಿದನ್ನವಿಟ್ಟ
ಕೈಕ್ಕುಂಭಂ ನನ್ನಾಯ್ ಪಿಡಿಕ್ಕುನ್ನುಂಡ್	ಕೈಕುಂಭ ಚೆನ್ನಾಗಿ ಹಿಡಿಯುತ್ತಾನೆ
ವಾಯ್‌ಕ್ಕ್ ರಸತ್ತೋಡೆ ಉಣ್ಣುನ್ನೇರಂ	ಬಾಯಿಗೆ ರುಚಿಯಾಗಿ ಉಣ್ಣುವಾಗ
ಅಮ್ಮಾವನ್ ಕಾರ್ಯಂ ನಿನಂದುಪೋಯಿ	ಮಾವನ ಬಗೆಯನು ನೆನೆದುಹೋಯ್ತು
ಚೋಱಾಲೊರುವಱ್ಱು ಇಱಙ್ಙುನ್ನಿಲ್ಲ	ಅನ್ನದಾ ಅಗುಳೊಂದು ಇಳಿವುದಿಲ್ಲ
ಕಣ್ಣೀರ್ ನಿಱಙ್ಙು ಮುಱಿಙ್ಙುವೀಣು	ಕಣ್ಣೀರು ತುಂಬಿತು ಕೆಡೆಯೆ ಕೆಳಗೆ

ಅಪ್ಪೋಳ್ ಚೋದಿಕ್ಕುನ್ನು ಉಣ್ಣಿಯಾರ್ಚ	ಆಗಲ್ ಕೇಳುವಳು ಉಣ್ಣಿಯಾರ್ಚ
ಎಂದಿನ್ನೆ ಕುಱವುಂಡೋ ಪೊನ್ನಗನೇ	ಯಾವುದರ ಕಮ್ಮಿಉಂಟೋ ಪೊನ್ನಗನೇ
ಅಪ್ಪೋಳ್ ಪಱಯುನ್ನು ಆರೋಮುಣ್ಣಿ	ಆವಾಗ ಹೇಳುವನು ಆರೋಮುಣ್ಣಿ
ಚೋಱುಂ ಕಱಿಯುಂ ಎನಿಕ್ಕುವೇಂಡ	ಅನ್ನ ಪದಾರ್ಥವೆನಗೆ ಬೇಡ
ಅಮ್ಮಾಮನ್ ಕಾರ್ಯಂ ಇನ್ನ್ ಓರ್ತ್ತುಪೋಯಿ	ಮಾವನ ಬಗೆಯದು ನೆನೆದುಹೋಯ್ತು
ಚೋಱಾಲೊರು ವಱ್ಱ ಇಱಙ್ಙುನ್ನಿಲ್ಲ	ಅನ್ನದೊಳೊಂದಗುಳು ಇಳಿವುದಿಲ್ಲ
ಕೈಯ್ಯಾಂ ಕುಡಞ್ಞೆಣೀಱ್ಱವನುಂ	ಕೈಯ ಸಿಡಿದತ್ತ ಎದ್ದನವನು
ಕೈ ವಾಯ್ ಮುಖವುಂ ಚಿತಂವರುತ್ತಿ	ಕೈಬಾಯಿ ಮುಖವನು ಶುದ್ಧಿ ಬರಿಸಿ
ಪಡಿಞ್ಞಾಱ್ಱೆ ವಾತಿಲುಂ ತಾಱ್ತುಱನ್ನು	ಪಡುಮನೆ ಬಾಗಿಲ ಬೀಗ ತೆರೆದ
ಮೆಯ್‌ವರ್ಣಪ್ಪೆಟ್ಟಿ ವಲಿಚ್ಚುವೆಚ್ಚು	ಮೆಯ್ ಬಣ್ಣದ ಪೆಟ್ಟಿಗೆಯೆಳೆದು ಇಟ್ಟು
ಓಮನಪ್ಪೆಟ್ಟಿ ಮುಖಂ ತುಱನ್ನು	ಮುದ್ದಿನ ಪೆಟ್ಟಿಗೆ ಮುಖವ ತೆರೆದ
ವೀರಾಳಿಪ್ಪಟ್ಟು ಕುಞ್ಞುಡುತ್ತು	ವೀರಾಳಿ ಬಟ್ಟೆಯ ಸಿಡಿದು ಉಟ್ಟ
ಮನ್ನನ್ ತಲಕ್ಕೊತ್ತ ಪೊನ್ನುಂತೊಪ್ಪಿ[2]	ಮನ್ನೆಯ ತಲೆಗೊಪ್ಪಿದ ಹೊನ್ನತೊಪ್ಪಿ
ಕಾದಿನುಂ ರಂಡಿನುಂ ಅನಂತನ್ ತೋಡ	ಕಿವಿಗಳಿಗೆರಡಕ್ಕೂ ಅನಂತನ ಕುಂಡಲ
ಎಡಂಬಿರಿ ವಲಂಬಿರಿ ವಳಯೆಡುತ್ತು	ಎಡಮುರಿ ಬಲಮುರಿ ಬಳೆ ತೆಗೆದ
ಮುನ್‌ತಂಡಕ್ಕಿಟ್ಟು ಮುಱುಕ್ಕುನ್ನುಂಡ್	ಮುಂಗೈಗೆ ಇಟ್ಟು ಬಿಗಿಯುತ್ತಾನೆ
ಚೇರ್ಚಯಿಲಙ್ಙ್ ಅಣಿಯುನ್ನುಂಡ್	ಸೇರಿಕೆ ಹದದಲ್ಲಿ ಅಣಿಯುತ್ತಾನೆ
ಪೂಪ್ಪಚ್ಚ ಉಱುಮಾಲ್ ತಲೆಯಿಲ್‌ಕೆಟ್ಟಿ	ಜರಿಪಚ್ಚೆ ರುಮಾಲನು ತಲೆಗೆಕಟ್ಟಿ
ನಾಗಾಪಟಂ ವೆಚ್ಚ ಪೊನ್ನರಞ್ಞಾಣ್	ನಾಗಾಪಟವಿಟ್ಟ ಹೊನ್ನೇವಳ

ಭಂಗಿಯೊಡಜ್ಞನೆ ಅರಯಿಲ್ ಪೂಟ್ಟಿ	ಅಂದದೊಳಗಂತು ಕಟಿಗೆ ಬಗಿದು
ನಾಗಾಪಟಂವಚ್ಚ ಪೊನ್‌ಮೋತಿರಂ	ನಾಗಪಟವಿಟ್ಟ ಹೊನ್ನುಂಗುರ
ಇರುವಿರಲ್‌ಕ್ಕಜ್ಞನೆ ಅಣಿಯುನ್ನುಂಡ್	ಇರ್ಬೆರಳಿಗೆ ಹಾಗೆ ಅಣಿಯುತ್ತಾನೆ
ಚುರಿಕಾ ಪರಿಚಾ ತೊಟುತೆಡುತ್ತು	ಸುರಿಗೆ ಢಾಲನು ನಮಿಸಿ ತೆಗೆದ
ಪೊನ್ನುಂ ಮೆತಿಯಡಿಯೇಜೆಕ್ಕೊಂಡ್	ಹೊನ್ನ ಪಾದುಕೆಯ ನೇರಿಕೊಂಡು
ದೈವಜ್ಞಳೆಯೊಕ್ಕೆ ಕೈತೊಟುತ್	ದೈವಗಳಿಗೆಲ್ಲ ಕೈಮುಗಿದು
ಓಮನಪೆಟ್ಟಿಯುಂ ಪೂಟ್ಟುನ್ನುಂಡ್	ಮುದ್ದಿನ ಪೆಟ್ಟಿಗೆ ಬಿಗಿಯುತ್ತಾನೆ
ನಾಲುಕೆಟ್ಟಕತ್ತು ಕಡನ್ನಾರೋಮರ್	ನಾಲುಕೆಟ್ಟಿನ ಮನೆ ದಾಟಿದ ಮುದ್ದುವೀರ

ನಾಟಕಶಾಲಯುಂ ಪೊನ್ವಿಳಜ್ಞಿ	ನಾಟಕಶಾಲೆಯೂ ಪೊಂಬೆಳಗಿತು
ಈ ವಕ ಕಾಣುನ್ನ ಉಣ್ಣಿಯಾರ್ಚ	ಈ ಬಗ್ಗೆ ಕಾಣುವ ಉಣ್ಣಿಯಾರ್ಚ
ನೆಞ್ಞತ್ತು ಕಯ್ಯುಂ ಪತಿಚ್ಚಿದಮ್ಮ	ಎದೆ ಮೇಲೆ ಕೈಯ ಇಟ್ಟಳು ಅಮ್ಮ
ಕಣ್ಣೀರ್ ನಿಜಞ್ಞೆರಿ ಮುಟುಞ್ಞೊಮಿಕಿ	ಕಣ್ಣೀರು ತುಂಬಿ ಕೋಡಿ ಹರಿಯಿತು
ಅಪ್ಪೋಳ್ ಪಜಯುನ್ನು ಉಣ್ಣಿಯಾರ್ಚ	ಆಗಲ್ ಪೇಳುವಳೂ ಉಣ್ಣಿಯಾರ್ಚ
ಪುತ್ರರಿಲ್ಲಾದೆ ಕೊದಿಚ್ಚ ಕಾಲಂ	ಪುತ್ರರಿಲ್ಲದೆ ಹಂಬಲಿಸಿದ ಕಾಲ
ಕಾಣ್ಮಾನ್ ಕೊದಿಚ್ಚ ಮಗನಲ್ಲೋನೀ	ಕಾಣಲಾಸೆಗೊಂಡ ಮಗನಲ್ಲೋ ನೀ
ಮೂನ್ನು ವಯಸ್ಸಿಲ್ ಮುಡಿಯಿಜಕ್ಕಿ	ಮೂರು ವರುಷಕೆ ಕೂದಲಿಳಿಸಿದು
ಅಂಜುವಯಸ್ಸಿಲುಂ ಕಾದುಕುತ್ತಿ	ಐದು ವಯಸ್ಸಿಗೆ ಕಿವಿ ಸುರಿದು
ಏಟುವಯಸ್ಸಿಲೆಟುತ್ತಿನಾಕ್ಕಿ	ಏಳು ವಯಸ್ಸಿಗೆ ಬರೆಹಕ್ಕಿಕ್ಕಿ
ಅಕ್ಷರವಿದ್ಯ ಗ್ರಹಿಪ್ಪಿಚ್ಚು ಞಾನ್	ಅಕ್ಷರವಿದ್ಯೆ ತಿಳಿಸಿಕೊಟ್ಟೆನು

ವೆಟ್ಟುಂ ಪಯಱ್ಟುಂ ಪಠಿಪ್ಪಿಚ್ಚುಞಾನ್	ಹೊಯ್ಯು ವರಸೆಯ ನಾ ಕಲಿಸಿಕೊಟ್ಟೆ
ಅದುಕೊಂಡು ಅಭ್ಯಾಸಂ ತಿಗಯಾಞ್ಞಿಟ್ಟ್	ಅದರಿಂದ ಅಭ್ಯಾಸ ಸಾಲದಾಗಿ
ತುಳುನಾಟ್ಟಿಲ್ ನಲ್ಲ ತುಳುಕ್ಕುರಿಕ್ಕಳ್	ತುಳುನಾಡಿನ ಒಳ್ಳೆ ತುಳುಗುರುಗಳು
ಕುರಿಕ್ಕಳೆ ತನ್ನೆ ವರುತ್ತಿ ಞಾನುಂ	ಗುರುಗಳನ್ನೆ ಕರೆಸಿದೆ ನಾನು
ಮೂವಾಂಡಿರುತ್ತಿ ಞಾನಭ್ಯಸಿಚ್ಚು	ವರುಷಮೂರು ನಾನಭ್ಯಸಿಸಿದೆನು
ತುಳುನಾಡನ್ ವಿದ್ಯ ಗ್ರಹಿಚ್ಚುಞಾನುಂ	ತುಳುನಾಡ ವಿದ್ಯ ಗ್ರಹಿಸಿದೆ ನಾನು
ನಿಯ್ಯುಮೇ ಪೋಯಿ ಮರಿಚ್ಚದೆಂಗಿಲ್	ನೀನೂವೆ ಪೋಗಿ ಮಡಿದೆಯಾದರೆ
ಇನಿಯಾರೆ ಕಂಡಿಟ್ಟಿರಿಕ್ಕುನ್ನು ಞಾನ್	ಇನ್ನಾರ ಕಂಡು ಇರುವೆ ನಾನು
ಅಪ್ಪೋಳ್ ಪಱಯುನ್ನು ಆರೋಮುಣ್ಣಿ	ಆಗಲೆ ಪೇಳುವ ಆರೋಮುಣ್ಣಿ
ಇದುಕೊಂಡು ನಿಜ್ಜಳುಂ ಖೇದಿಕ್ಕೇಂಡ	ಇದರಿಂದ ನೀಮಗೇನೂ ಖೇದ ಬೇಡ
ಅಮ್ಮಾವನ್ ತನ್ಟೆ ಮನಸ್ಸುಂಡೆಂಗಿಲ್	ಮಾವನ ಮನದ ಹರಕೆಯಿರೆ
ಚಂದುನೋಡುತ್ತರಂ ಚೋದಿಕ್ಕೇಂಡೂ	ಚಂದುನಲ್ಲುತ್ತರ ಕೇಳ್ಬೇಕಷ್ಟೆ
ಚಂದೂನೆ ತಲ ಞಾನುಂ ಕೊಂಡುಪೋರುಂ	ಚಂದೂನ ತಲೆ ನಾನು ಕೊಂಡುತರುವೆ
ಚಂದೂನ್ಟೆ ತಲಕೊಂಡು ಕಾಱಿಕ್ಕೊಟ್ಟುಂ[1]	ಚಂದೂನ ತಲೆಯಿಂದ ಕಾಱಿ ಬಡಿವೆ
ಅಪ್ಪೋಳ್ ಪಱಯುನ್ನು ಉಣ್ಣಿಯಾರ್ಚ	ಆಗಲು ಪೇಳ್ವಳು ಉಣ್ಣಿಯಾರ್ಚ
ಒನ್ನಿಙ್ಙು ಕೇಳ್ಕ್ಕೇಣಂ ಪೊನ್‌ಮಗನೇ	ಒಂದಿಲ್ಲಿ ಕೇಳ್ಬೇಕು ಪೊನ್ಮಗನೇ
ಪುತ್ತೂರಂ ವೀಟ್ಟೋಳಂ ಪೋಣಂ ನಿಯ್ಯ್	ಪುತ್ತೂರ ವೀಡಿಗೆ ಹೊಗ್ಬೇಕು ನೀ
ಕಳರಿಯಕತ್ತುಂಡ್ ಮುತ್ತಚ್ಚನುಂ	ಗರಡಿಯೊಳಗಿರ್ಪ ಮುತ್ತಚ್ಚನೂ
ಅವರೋಟು ಯಾತ್ರ ವಟಿಜ್ಜಿಪ್ಪೋಣಂ	ಅವರಿಗೆ ತಲೆವಾಗಿ ಯಾತ್ರೆಪೋಗು

ಇನಿಯೊರನುಸರಂ ಕೇಳ್‌ಕಯುಣ್ಣಿ	ಇನ್ನೊಂದನುಸರಣೀಯ ಕೇಳುಉಣ್ಣಿ
ಕಣ್ಣಪ್ಪುಣಿಯೆ ತುಣ ಕೊಂಡುಪೋಣಂ	ಕಣ್ಣಪ್ಪುಣಿಯನುಗ್ರಹ ಪಡೆದುಹೋಗು
ಅಮ್ಮಾವನ್ ತನ್ಱೆ ಚುರಿಕನಾಲುಂ	ಮಾವನವರ ಚುರಿಕ ನಾಲ್ಕೂ
ನಿಲಯಱಕತ್ತು ಇರಿಪುಂಡಲ್ಲೋ	ನೆಲಮಾಳಿಗೆಯೊಳಗೆ ಇರುವುದಲ್ಲೋ
ಚೋರಕ್ಕಚ್ಚ[2] ಕೂಡಿ ಕೊಂಡುಪೋಣಂ	ರಕ್ತಕಚ್ಚೆಯನೂ ಒಯ್ಯಬೇಕು
ಇನಿಯುಮೇಯೊನ್ನುಂಡ್ ಕೇಳ್‌ಕ್ಕಯುಣ್ಣಿ	ಇನ್ನೂ ಒಂದುಂಟು ಕೇಳು ಎಣ್ಣಿ
ಇನ್ನುಂ ನಾಳೆಯುಂ ಞಾನ್‌ಕಾತ್ತಿರಿಕ್ಕುಂ	ಇಂದು ನಾಳೆ ನಾನು ಕಾದಿರುವೆ
ಮಱ್ಱನ್ನಾಳ್ ಕಾಲತ್ತು ವನ್ನಿಲ್ಲೆಂಗಿಲ್	ನಾಡಿದು ಬೆಳಗ್ಗೇ ಬಾರದಿರೆ

1. ಕಾಱಿಕ್ಕೊಟ್ಟುಂ– ಕಾಲ್ಚೆಂಡಿನಂತೆ ಬಡಿವೆ. 'ಕಾಱಿ' ಆಟದ ಹೆಸರು ಕಾಲ್ಚೆಂಡು ಎಂಬಂತೆ.

2. ಚೋರಕ್ಕಚ್ಚ = ರಕ್ತಗಚ್ಚೆ, ಕೆಂಬಟ್ಟೆಯ ಕಚ್ಚೆ.

ಚೋದಿಚ್ಚಱಿಞ್ಞು ವನ್ನಿಟೇಂಡು	ಕೇಳಿಯರಿತು ಬಂದರಷ್ಟೆ ಸಾಕು
ನೇರಿಟ್ಟು ವೆಟ್ಟಿ ಮರಿಚ್ಚದೆಂಗಿಲ್	ಎದುರೆದುರು ಕಡಿದು ಮಡಿದೆಯಾದರೆ
ವೀಟ್ಟೇಕ್ಕು[1] ನಲ್ಲೊರು ಮಾನಂ ತನ್ನೆ ವೀರಾಳಿ	ವೀಡಿಗೆ ಚೆನ್ನಾದ ಮಾನ ಬಂತು ವೀರಾಳಿ
ಪಟ್ಟು ವಿತಾನತ್ತೋಡೆ	ರೇಶಿಮೆ ವಿತಾನದಲಿ
ಆರ್ತ್ತುವಿಳಿಚ್ಚು ಎಡುಪ್ಪಿಕ್ಕೇಂಡು	ಕೂಗಿ ವೈಭವದಿಂದ ತೆಗೆಸಿಯೇನು
ಎಲಪುಲ ನನ್ನಾಯಿ ಕಟುಪ್ಪಿಚ್ಚೇಕ್ಕಾಂ	ಹೊಲೆ ಸೂತಿಕ ಚೆನ್ನಾಗಿ ಮುಗಿಸಿಯೇನು
ಒಟೆವಾಳುಕೊಂಡು ಮರಿಚ್ಚದೆಂಗಿಲ್	ಮರೆಬಾಳ ತಗಲಿಸಿ ಸತ್ತುದಾದರೆ
ಪಚ್ಚೋಲಯಿಲ್[2]ಕೆಟ್ಟಿ ವಲಿಲಪ್ಪಿಕ್ಕೇಂಡು	ಹಸಿಯೋಲೆಯಲಿ ಕಟ್ಟಿ ಎಳೆಸುವುದಷ್ಟೆ
ಪುಲಯುಂ[3] ಕೂಡಿ ಞಾನ್ ಕುಳಿಕ್ಕಯಿಲ್ಲ	ಹೊಲೆಯನ್ನು ಕೂಡ ನಾ ಮೀಯಲಾರೆ
ಅಪ್ಪೋಳ್ ಪಱಯುನ್ನು ಆರೋಮುಣ್ಣಿ	ಆಗಲೆ ಹೇಳುವ ಆರೋಮುಣ್ಣಿ
ದೈವವಿಧಿಪೋಲೆ ವನ್ನು ಕೂಡುಂ	ದೈವವಿಧಿಯ ಹಾಗೆ ಬಂದೊದಗುವುದು
ವಿಧಿಪೋಲೆಯಲ್ಲಾದೆ ವರಿಕಯಲ್ಲ	ವಿಧಿಯಂತೆ ಅಲ್ಲದೆ ಬರುವುದಿಲ್ಲ
ಅಮ್ಮೇಟೆ ಕಾಲ್ಕ್ಕಲುಂ ಕುಂಬಿಡುನ್ನೇನ್	ತಾಯಿಯ ಕಾಲಿಗೆ ಕುಂಬಿಡುವೆಂ
ಅನುಕೂಲತ್ತೋಡೆ ವರಂ ಕೊಡುತ್ತು	ಅನುಕೂಲವಾಗಿ ವರವಕೊಟ್ಟಳು

1. ವೀಟ್ಟೇಕ್ಕು= ಬೀಡಿಗೆ, ಮನೆಗೆ. 2. ಪಚ್ಚೋಲಯಿಲ್ = ತೆಂಗಿನ ಹಸಿ ಸೋಗೆ (ಹೆಣಿಗೆ)ಯಲ್ಲಿ.

3. ಪುಲಯುಂ–ಹೊಲೆಯನ್ನೂ, ಮಗ ಮಡಿದ ಸೂತಕವನ್ನೂ

ಕುನ್ನತ್ತು ವೆಚ್ಚ ವಿಳಕ್ಕುಪೋಲೆ	ಗುಡ್ಡದೊಳಿರಿಸಿದ ದೀಪದಂತೆ
ಚೆನ್ನೇಡಂ ಚೆನ್ನು ಜಯಚ್ಚುವಾಯೋ	ಹೋದಲ್ಲಿ ಹೋಗಿ ಜಯಿಸಿ ಬಾರ
ಮಾಱಿತ್ತು ಕೈಯ್ಯುಂ ಪತಿಚ್ಚಿದಮ್ಮ	ಎದೆ ಮೇಲೆ ಕೈಯನು ಇಟ್ಟಳಮ್ಮ
ಪೋಕ ನೀ ಎನ್ನುಣ್ಣಿ[1]ಪೊನ್ಮಗನೇ	ಹೋಗು ನೀ ನನ್ನುಣ್ಣಿ ಪೊನ್ಮಗನೇ
ಯಾತ್ರಯುಂ ಚೊಲ್ಲಿ ನಡನ್ನವನುಂ	ಯಾತ್ರೆಯ ಹೇಳಿ ನಡೆದನವನು
ಪಡಿಪ್ಪುರಯೋಡಿ ಇಡಾಕಡನ್ನು	ಪಡಿಪಿರೆ ಓಡುತಎಡೆದಾಟಿದ
ತಾಣ ವಯಲೋಡೆ ಪುಂಜಪ್ಪಾಡೆ	ತಗ್ಗಿನ ಬಯಲು ಪುಂಜ ಗದ್ದೆ
ಆಱುಂ ಮಣಮ್ಮೇಲುಂ ಇಡಕಡನ್ನು	ಹೊಳೆ ಮಳಲದಂಡೆ ಮೇಲ್‌ದಾಟಿಕೊಂಡು
ತಱಯಿಟ್ಟ ಮಾವುಂ ಪುಳಿಕಡನ್ನು	ಕಟ್ಟೆಕಟ್ಟಿದ ಮಾವು ಹುಣಸೆದಾಟೆ
ಮಗನ್ ಪೋಯ ವಝಿನೋಕ್ಕಿ ನಿನ್ನಿದಮ್ಮ	ಮಗ ಹೋದ ದಾರಿ ನೋಡಿ ನಿಂತಳಬ್ಬೆ
ಪಡಿಪ್ಪುರ ತನ್ನಿಲುಂ ಚೆನ್ನುನಿನ್ನು	ಪಡಿಪಿರೆಯಲ್ಲಿಗೂ ಬಂದು ನಿಂತಳು
ನೆಞ್ಞತ್ತು ಕೈಯುಂ ಪದಿಚ್ಚುಕೊಂಡು	ಎದೆಮೇಲೆ ಕೈಯನು ಇರಿಸಿಕೊಂಡು
ನೇರ್ಚವಟಿಪಾಡು ನೇರುನ್ನುಂಡ್	ಹರಕೆ, ಸೇವೆಯನವಳು ಹೇಳಿಕೊಂಬಳು
ಎನ್ಟೆ ಮಗನ್‌ಪೋಯಿ ಜಯುಚ್ಚುವನ್ನಾಲ್	ನನ್ನ ಮಗ ಹೋಗಿ ಗೆದ್ದು ಬಂದ್ರೆ
ಕಾವಿಲ್ ಭಗವತಿ ನಲ್ಲಮ್ಮಕ್ಕ್	ಕಾವಿನ ಭಗವತಿ ಒಳ್ಳೆ ಅಮ್ಮನಿಗೆ
ಪಳ್ಳಿಪ್ಪಾನಯುಂ[2] ಕಟಿಪ್ಪಿಕ್ಕೇಂಡು	ಪಳ್ಳಿಪಾನೆಯನೂ ಅರ್ಪಿಸುವೆ.
ನಾಟ್ಟು ಭರದೇವತ ಮುಂಡಿಯಾನ್[3]	ನಾಡ ಪೊರೆವ ದೇವತೆ ಮುಂಡಿಯಾನ್‌ಗೆ
ನಾಲ್ಪತ್ತಿರಂಡು ತಿರಿಯುಂ[4] ನೇರ್ನ್ನು	ನಲ್ವತ್ತೆರಡು ತಿರಿ ಹರ ಕೆಹೇಳ್ದಳು

1. ಎನ್ನುಣ್ಣಿ = ನನ್ನ ಉಣ್ಣಿ (ಮರಿ, ಮುದ್ದು) 2. ಪಳ್ಳಿಪ್ಪಾನ – ದೇವೀ ಆಲಯದ ಆಟದ ಸೇವೆ.
3. ಮುಂಡಿಯಾನ್– ಶಿವದೇವರು 4. ಘರಿ– ದೀಪದ ಕುಡಿ (ಬತ್ತಿ)

ಅಂದಿ ಮಹಾಕಾಳನ್ ದೈವತ್ತಿನು ಅರಿಯುಂ ನನಚ್ಚಿಟ್ಟು ಕೈತೊೀಟಿವಾನ್	ಸಂಜೆ ಮಹಾಕಾಳನ್ ದೈವವದಕೆ ಅಕ್ಕಿಯ ನನೆಹಾಕಿ ಕೈಮುಗಿಯಲು
ಪೂಕ್ಕೋಟ್ಟು ಭ್ರಾಂತನ್ ದೈವತ್ತಿನ್ನು ತಿಯ್ಯಾಟ್ಟ[1] ನೇರ್ಚ ಕಟಿಪ್ಪಿಕ್ಕೇಂಡು	ಪೂಕ್ಕೋಟ್ಟು ಭ್ರಾಂತನ್ ದೈವವದಕೆ ಬೆಂಕಿಯಾಟ ಹರಕೆ ತೀರಿಸಲುಂಟು
ಅಂಕಕ್ಕರಿನಾಗಂ ದೈವತ್ತಿನ್ನು ವೆಳ್ಳರಿ ವೆಱ್ಱಿಲ ಪುಷ್ಪಂ ನೇರ್ನು	ಅಂಕಕ್ಕರಿನಾಗ ದೈವವದಕೆ ಬಿಳಿಯಕ್ಕಿ ವೀಳ್ಯವು ಹೂವು ಹರಕೆ
ಭೂತಮಿಱಕ್ಕುಂ ಪುಲಿದೈವತ್ತಿನು ಪುಲಿಕ್ಕೋಲಂ ಕೆಟ್ಟಿ ಇಾನಾಡಿಕ್ಕಾಂ	ಭೂತವನಿಳಿಸುವ ಪುಲಿದೈವಕ್ಕೆ ಪುಲಿಕೋಲ ಕಟ್ಟಿಸಿ ನಾನಾಡಿಸುವೆ
ಅಲ್ಲಿಮಲರ್ಕ್ಕಾವಿಲ್ ದೈವತ್ತಿನ್ನು ಕಾವೂಟ್ಟುಂ[2] ವೇಲ ಕಟಿಪ್ಪಿಚ್ಚೇಕ್ಕಾಂ	ಅಲ್ಲಿಮಲರ್ ಕಾವಿನ ದೈವವದಕೆ ಕಾವೂಟದ ಸೇವೆ ಮಾಡಿಸುವೆ
ಅಂಜನಕ್ಕಾವಿಲೆ ವೇಲ ನೇರ್ನ್ನು ಅಯ್ಯಪ್ಪನ್ ಕಾವಿಲೆಕೂತ್ತು[3]ಂ ನೇರ್ನ್ನು	ಅಂಜನ ಕಾವಿನುತ್ಸವವನ್ನು ಅಯ್ಯಪ್ಪನ್ ಕಾವಿನ ಕೊತ್ತು ಕೊಡುವೆ
ಮಗನ್ ಪೋಯಿಕಣ್ಣುಮಱಞ್ಞಿತಲ್ಲೊ ಕುಮರಂ ಪುಱಯ್ಕುಲುಂ ಚೆಲ್ಲುನ್ನುಂಡ್	ಮಗ ಹೋಗಿ ಕಣ್ಣಿಂದ ಮರೆಯಾದನಲ್ಲೊ ಕುಮರಂ ಹೊಳೆಬಳಿಗೂ ಹೋಗುತ್ತಾಳೆ.

1. ತಿಯ್ಯಾಟ್ಟಂ– ಬೆಂಕಿಯ ಆಟ, ಕೆಂಡಸೇವೆ, 2. ಕಾವೂಟ್ಟುಂ–ಕಾವು (ದೇಗುಲ) ಊತಣ ಸಂತರ್ಪಣೆ
3. ಕೂತ್ತ್– ನೃತ್ಯ ಸೇವೆ

ವೀರಪದಗಳು, ಐತಿಹ್ಯಗಳು, ಮುತ್ತಜ್ಜಿ ಕತೆಗಳು ಮೊದಲಾದ ಹಲಬಗೆ ಗ್ರಾಮೀಣಕತೆಗಳಿಂದ ಮಲಯಾಳ ಭಾಷೆಗೆ ಸಂಪನ್ನವಾದ ಒಂದು ಕಥಾಖ್ಯಾನ ಪರಂಪರೆಯಿದೆ. ಕಥನ ಸಂದರ್ಭದಿಂದಲೂ ಕಥನ ತಂತ್ರದಿಂದಲೂ ವ್ಯತ್ಯಸ್ತವೂ ವಿವಿಧವೂ ಆದ ಕಥಾ ಸಮುಚ್ಚಯಗಳು ಇಲ್ಲಿವೆ. ಮೌಖಿಕತೆಯ ಬಗೆ ನೋಡಿ ಅವುಗಳನ್ನು ಗದ್ಯವೆಂದೂ ಪದ್ಯವೆಂದೂ ವಿಭಾಗಿಸಬಹುದು. ಆ ವಿಭಾಗಗಳಲ್ಲಾದರೂ ಬೇರೆ ಬೇರೆ ಕಟ್ಟು–ಮಟ್ಟುಗಳಲ್ಲಿ ಇರುವ ಬಗೆಗಳು ಕಾಣಿಸಬಹುದು. ಪದ್ಯವಿಭಾಗದ ಒಂದು ಮುಖ್ಯವಾದ ಬಗೆ ಕಥಾಗಾನಗಳಾಗಿವೆ–

ನಾಡಹಾಡುಗಾರರು 'ಪಾಟ್ಟುಕಥ' ಎಂದು ಹೆಸರಿರಿಸಿ ಕರೆಯುವ ಬಗೆ. 'ಪಾಟ್ಟುಕಥೆ'ಗಳು ಕೂಡ ತಾರತಮ್ಯ ಪ್ರಕಾರ 'ತೊರಂ ಪಾಟ್ಟು'ಗಳು, 'ತೋಱ್ಱಂ ಪಾಟ್ಟು' (ಪಾಡ್ದನದಂಥದು)ಗಳು, 'ಕಳಿ (ಆಟದ) ಪ್ಪಾಟ್ಟು'ಗಳು ಎಂದೆಲ್ಲ ಪುನಃ ಕವಲುಗೊಳ್ಳುತ್ತವೆ. 'ಪಾಟ್ಟುಕಥೆ'ಗಳಲ್ಲಿ, ಅವು ಪ್ರಚಲಿತವಾದ ಪ್ರದೇಶಗಳನ್ನು ಅನುಸರಿಸಿ 'ವಡಕ್ಕನ್ ಪಾಟ್ಟು'ಗಳ್ (ಬಡಗಣ ಹಾಡುಗಳು), 'ತೆಕ್ಕನ್ ಪಾಟ್ಟು'ಗಳ್ (ತೆಂಕಣ ಹಾಡುಗಳು) ಎಂಬಂಥ ಪ್ರದೇಶ ಸೂಚಕವಾದ ಒಂದು ವರ್ಗೀಕರಣವಿದೆ. ವಸ್ತುವಿನಿಂದಲಾದರೂ ಮೌಖಿಕಧಾರೆಯಿಂದಲಾದರೂ ವೀರಕಥಾ ಪರಂಪರೆಯಲ್ಲಿ ಸೇರುವವುಗಳು 'ವಡಕ್ಕನ್ ಪಾಟ್ಟು'ಗಳು ಮತ್ತು 'ತೆಕ್ಕನ್‌ಪಾಟ್ಟು'ಗಳು. ಬಡಗಣ ಕೇರಳದ ಕೆಲ ವೀರರ ಮತ್ತು ವೀರವನಿತೆಯರ ಬಗೆಗಿನ ಕಥನದ ಹಾಡುಗಳೇ 'ವಡಕ್ಕನ್ ಪಾಟ್ಟು'ಗಳೆಂಬ ಹೆಸರಿನಿಂದ ಪ್ರಸಿದ್ಧವಾದವುಗಳು.

ಮಲಬಾರ್ ಪ್ರದೇಶದಲ್ಲಿ ಕೂಲಿ ಕೆಲಸಗಾರರ ನಡುವೆ ಇವತ್ತೂ ಪ್ರಚಲಿತವಾಗಿ ಇರುವ ಮೌಖಿಕಧಾರೆಯೇ 'ವಡಕ್ಕನ್ ಪಾಟು'ಗಳು. ಗದ್ದೆಯಲ್ಲೂ ತೋಟದಲ್ಲೂ ಕೆಲಸ ಮಾಡುವ ಕೂಲಿಗೆಲಸಗಾರರು ಗಂಡು ಹೆಣ್ಣೆಂಬ ಭೇದವಿಲ್ಲದೆ ಹಾಡುತ್ತ ಬಂದಿರುವ ಈ ಹಾಡುಗಳ ಇತಿವೃತ್ತ ನಾಡವೀರರ ಹೋರಾಟದ ವೀರಚರಿತ್ರೆಗಳಾಗಿವೆ. ಕೆಲವೆ ಹಾಡುಗಳಲ್ಲಿ ಆಳರಸರ ಹೆಣ್ಣುಹುಚ್ಚೋ, ಆ ಆಸೆಗೆ ಬಾಗದ ಅಡಿಯಾಳು ಹೆಣ್ಣಿನ ವ್ಯಕ್ತಿಘನತೆಯೊ ವಿಷಯವಾಗಬಹುದು.

ಹಾಡುವ ಸಂದರ್ಭವನ್ನು ಆಧರಿಸಿ 'ವಡಕ್ಕನ್ ಪಾಟು'ಗಳನ್ನು 'ತೊರಂ ಪಾಟು'ಗಳು (ಗೈಮೆಯ ವೇಳೆ ಹೇಳುವ ಪಾಟುಗಳು) ಎಂಬ ವರ್ಗಕ್ಕೆ ಸೇರಿಸಬಹುದು. ಹಳಗಾಲದಲ್ಲಿ ಬೇಸಾಯದ ನಾಟಿ ಕೆಲಸದ ವೇಳೆ ಗದ್ದೆಬಯಲುಗಳಲ್ಲಿ ಅವುಗಳನ್ನು ಹಾಡುತ್ತಿದ್ದರು. ಇವತ್ತು ಮದುವೆ ಮನೆಗಳಲ್ಲಿ ರುಬ್ಬುವ ಕೆಲಸದ ವೇಳೆಯೂ ಅವುಗಳನ್ನು ಹಾಡುವುದಿದೆ. ಶ್ರಮವಿರುವ ಕೆಲಸ ಮಾಡುವಾಗ ಹಾಡುವ ಹಾಡು ಎಂಬ ಅರ್ಥದಲ್ಲೆ ಅವುಗಳಗೆ 'ತೊರಂ ಪಾಟು' ಗಳೆಂದು ಹೆಸರು.

ಜನಪದ ಹಾಡುಗಳ ಮೌಖಿಕಧಾರೆ

ಜನಪದ ಗೀತೆಗಳ ವಿಭಾಗಕ್ಕೆ ಸೇರಿದ್ದಷ್ಟೆ ವಡಕ್ಕನ್ ಪಾಟುಗಳು? ಆ ಬಗೆ ವರ್ಗೀಕರಣಕ್ಕೆ ಆಧಾರ ಏನು? ಜನಪದ ಗೀತೆಗಳಿಗೆ ಸ್ವಕೀಯವಾದ ಒಂದು ರಚನಾಪದ್ಧತಿಯೊ ಪ್ರಕಟನಪದ್ಧತಿಯೊ ಇದೆಯೆ? ಜನಪದ ಜ್ಞಾನಧಾರೆ ಕುರಿತಾಗಿ ವ್ಯಕ್ತವಾದ ಗ್ರಹಿಕೆ ಇರುವುದಾದಲ್ಲಿ ಮಾತ್ರವೆ ಜಾನಪದ ಮತ್ತು ಅದು ಅಲ್ಲದ ವಾಙ್ಮಯಗಳನ್ನು ಬಗೆಯರಿತು ತಿಳಿಯಲು ಸಾಧ್ಯ.

ವಡಕ್ಕನ್ ಪಾಟುಗಳನ್ನು ಪರಿಶೀಲಿಸಿದರೆ ಒಂದು ವಿಷಯ ನಿಚ್ಚಳವಾಗುತ್ತದೆ. ಹಲವೊಮ್ಮೆ ಕತೆಗಳನ್ನೂ ಘಟನೆಗಳನ್ನೂ ಒಂದು 'ಪಾಟ'ನಲ್ಲಿರುವಂತೆಯೆ ಇತರ ಹಲವು 'ಪಾಟು'ಗಳಲ್ಲೂ ಕಾಣಬಹುದು. ವರ್ಣನೆಗಳಲ್ಲೂ ಪುನರಾವರ್ತನೆಯನ್ನು ಕಾಣಬಹುದು. ಇದು 'ವಡಕ್ಕನ್ ಪಾಟು'ಗಳಿಗೆ ಮಾತ್ರವಾದ ಪ್ರತ್ಯೇಕತೆಯೂ ಅಲ್ಲ. ಮಲಯಾಳದ ಇತರ 'ಪಾಟುಕಥೆ'ಗಳಲ್ಲೂ, ಗದ್ಯದಲ್ಲಿರುವ ಜಾನಪದ ಕತೆಗಳಲ್ಲೂ ಈ ರೀತಿಯನ್ನು ಕಾಣುತ್ತೇವೆ. ಜಾನಪದ ವಾಙ್ಮಯಗಳ ರಚನಾ ತಾಂತ್ರಿಕತೆಗೆ ಸಂಬಂಧಪಟ್ಟ ಒಂದು ವಸ್ತುಸ್ಥಿತಿ ಇದು. ತಲೆಮಾರುಗಳಿಂದ ಕಿವಿಯಿಂದ ಕಿವಿಗೆ ದಾಟಿ ಬರುವ ಪಾಟುಗಳ ರಚನಾ ತಂತ್ರ ಲಿಖಿತ ಸಾಹಿತ್ಯ

ರೂಪಗಳದ್ದಕ್ಕಿಂತ ವ್ಯತ್ಯಸ್ತವಾಗಿದೆ. ವ್ಯತ್ಯಸ್ತವಾದ ಆ ರಚನಾತಂತ್ರಗಳ ಬಗೆಗಿರುವ ಅರಿವು ಹಾಡುಗಾರರ ಸಮೂಹವನ್ನೂ ಸಂಸ್ಕೃತಿಯನ್ನೂ ಅರಿತುಕೊಳ್ಳಲು ಸಹಾಯಕ.

ಸಿದ್ಧ ಸಾಲುಗಳು

'ವಡಕ್ಕನ್ ಪಾಟು'ಗಳಲ್ಲಿ ಮುಖ್ಯವಾದ 'ಪುತ್ತೂರಂ ಪಾಟು'ಗಳಲ್ಲೊಂದರಲ್ಲಿ ಕಥೆ ಹೇಳತೊಡಗುವುದು ಹೀಗೆ

ನಾಡಂಜುಕೊಂಡೋ ನಗರಂಕೊಂಡೋ	ನಾಡೈದರಿಂದಲೊ ನಗರದಿಂದಲೋ
ವೀಡಂಜು ಕಂಡುಳ್ಳೊರಿಂಬಂಕೊಂಡೋ	ಮನೆಯೈದ ಕಂಡಹರುಷದಿಂದಲೊ
ಆರೇಕ್ಕೊಂಡಂಜು ಕವಿ ಕೆಟ್ಟೇಂಡು	ಆರಿಂದಲೈದು ಕವಿ ಕಟ್ಟೇಕ್ಕು

ಹೇಗೆ 'ಕವಿ' (ಕವನ) 'ಕಟ್ಟೇಕ್ಕು' (ಕಟ್ಟಬೇಕು) ಎಂದಲ್ಲ, ಯಾವುದರ ಕುರಿತು ಕವಿ 'ಕಟ್ಟಬೇಕು' ಎಂದಷ್ಟೆ ಯೋಚಿಸಬೇಕಾಗಿದೆ. ಕವಿತೆಯನ್ನು ಕಟ್ಟುವುದು ಎಂಬ ಪದ ಪ್ರಯೋಗ ಗಮನಾರ್ಹ. ಮೊದಲೇ ಸಿದ್ಧಪಡಿಸಿದ ಸೊಲ್ಲುಗಳನ್ನು (ಚೇರುವಕಳ್) ಸೇರಿಸಿಕಟ್ಟುವ ಪದ್ಧತಿಯನ್ನೆ ಇದು ಒಳಗೊಳ್ಳುವುದು. ಶ್ರೀಲಂಕೆಯ ಜಾನಪದ ಹಾಡುಗಾರರಲ್ಲೂ ಇಂತ ಒಂದು ರಚನಾಪದ್ಧತಿ, ಅದಕ್ಕೆ ಇದೇ ಹೆಸರೂ, ಇರುವುದಾಗಿ ತಿಳಿದವರು ಹೇಳುತ್ತಾರೆ. ಹಳೆತಮಿಳು (ಪೞಂದಮಿೞು) 'ಪಾಟು' ಗಳೊಂದಿಗೆ ಸಂಬಂಧಿಸಿದ 'ಕೆಟ್ಟಲ್' (ಕಟ್ಟುಗೆ), 'ಯತ್ತಲ್' (ಕಟ್ಟುಗೆ), 'ತೊಟುತ್ತಲ್' (ತೊಡುತ್ತಲ್ – ಜೋಡಣೆಸಂಗ್ರಹ) ಮೊದಲಾದ ಸಮಾನ ಪ್ರಯೋಗಗಳೂ ಈ ಅರ್ಥದಲ್ಲಿರುವವುಗಳೆಂದು ಬೆಟ್ಟು ಮಾಡುತ್ತವೆ. ಹಳೆಯ ಗ್ರೀಕ್ ಭಾಷೆಯಲ್ಲಿ ಈ ಬಗೆ ಕವಿತಾ ರಚನೆಗೆ ಇದೇ ಅರ್ಥದ ಒಂದು ಪದವೆ ಉಪಯೋಗಿಸುತ್ತಿದ್ದುದು. ಜಾನಪದ ಪಾಟುಗಳ ಕಟ್ಟುಪದ್ಧತಿಯನ್ನು ಸಂಬಂಧಿಸಿ ಸಾರ್ವತ್ರಿಕವಾದ ಪ್ರಚಲಿತ ಒಂದು ಧಾರೆಯೆ 'ವಡಕ್ಕನ್ ಪಾಟು'ಗಳಲ್ಲೂ ಕಾಣುವುದೆಂಬುದು ಒಂದು ಕೌತುಕದ ಸಂಗತಿ.

ವೀರರ ಚರಿತ್ರೆಯೆ ವಡಕ್ಕನ್‌ಪಾಟುಗಳ ಇತಿವೃತ್ತವೆಂದು ಹೇಳಿದೆ. ಹೆಚ್ಚಿನ 'ಪಾಟು'ಗಳಲ್ಲಿ ಇರುತ್ತವೆ ಕಾದ ಕಾಳಗ. ಎದುರಿಸಿ ಕಾದುವವರು ಯಾರಾದರೂ ಅಡ್ಡಯಿಲ್ಲ. ಅಂಕ (ದ್ವಂದ್ವಯುದ್ಧ) ವನ್ನೂ ಹೊಯ್ಯುಗೆ (ಹೊಡೆತ)ಯನ್ನೂ ಬಣ್ಣಿಸಲು ವಡಕ್ಕನ್ ಪಾಟುಕಾರರಿಗೆ ಪದ್ಧತಿಯ ಅನೇಕ ಸಿದ್ಧ ಸಾಲುಗಳಿವೆ.

ಪೋತ್ತುಂ ಕಲಯುಂ ಕಿಡಕ್ಕುಂ ವಣ್ಣಂ	ಕೋಣವು ಕಲೆಯು ಮಲಗಿರುವಂತೆ
ನೆಲತ್ತಿರಜ್ಜೆ ಇಡಿವೆಟ್ಟುಂಬೋಲೆ	ನೆಲಕಿಳಿದರು ಸಿಡಿಲೊಗ್ಗರಂತೆ
ಬಾಲಿಸುಗ್ರೀವನ್ಮಾರ್ ಯುದ್ಧಂ ಪೋಲೆ	ವಾಲಿಸುಗ್ರೀವರ ಕಾಳಗದಂತೆ
ಆಳೆ ವಿವರಿಚ್ಚಟೆಇಲ್ಲಕೂಡ.	ಆಳಭೇದವು ತಿಳಿಯದಾಯಿತು.
ಅಂಕತ್ತಿನ್ನೆ ನಿಲಯೋ ಅತಾರುತಮ್ಮಿಲಾಯಾಲುಂ	ಅಂಕದ ನೆಲೆಯೊ, ಅದಾರೆ ಆಗಿರಲಿ
ಪಿಡಕೋಟಿ ಕೊತ್ತಿಪ್ಪಿರಿಯುಂ ಪೋಲೆ	ಹೇಟೆಗಳು ಚುಚ್ಚಿಯಗಲುವಂತೆ

ಸೂಚಿ ಕ್ಕಿರಿಂಬಿನು ಪಟುತುಮಿಲ್ಲ	ಸೂಜಿಕಬ್ಬಣಕ್ಕೆ ಮೃದುತ್ವವಿಲ್ಲ
ಪಚ್ಚಮರುನ್ನಿನು ಮುಜೆಯುಮಿಲ್ಲ	ಹಸಿಮದ್ದಿಗೆ ಗಾಯವೆಂಬುದಿಲ್ಲ
ಅಭ್ಯಾಸತ್ತುಟಕ್ಕವುಂ ಒರುಪೋಲೆತನ್ನೆ	ಅಭ್ಯಾಸದರಂಭ ಒಂದೇ ತೆರನೆ
ಏಟಿಡಿ ಪಿನ್ನಾಕ್ಕಂ ಮಾಜೆನಿನ್ನು	ಏಳಡಿ ಹಿಂದಕ್ಕೆ ಸರಿದು ನಿಂತರ್
ಮೂನ್ನಡಿ ಮುಂಬಾಕ್ಕಂ ಊನ್ನಿನಿನ್ನು	ಮೂರಡಿ ಮುಂಭಾಗ ನಾಟಿ ನಿಂತರ್

(ತಟ್ಟಿಕ್ಕಟಿಚ್ಚಾಲ್ ಏಪ್ಪೋಟುಂ ನಾಲಡಿ ಪಿನ್ನಾಕ್ಕಂ!) ತಟ್ಟ ಮುಗಿಸಿದರೆ ಯಾವಾಗಲೂ ನಾಲ್ಕಡಿ ಹಿಂದಕ್ಕೆ ಅಡವು ('ಅಡವು' ಎಂಬುದಕ್ಕೆ ಹೆಜ್ಜೆಯ ನಿಲುವು ಎಂಬುದು ಸೂಕ್ತವಾದ ಪ್ರಯೋಗ. ಭರತನಾಟ್ಯದ ಪರಿಭಾಷೆಯಲ್ಲಿ ಇದು ಸುವ್ಯಕ್ತ. ಆದರೆ ನಿಲುವು ಎಂದರೆ ಅದಕ್ಕೆ ಇಲ್ಲಿನ 'ಪಟ್ಟು' ಎಂಬರ್ಥದ ಬೆಲೆ ಬಾರದು) ಮತ್ತು ಹೊಡೆತಗಳನ್ನು ವಿವರಿಸುವುದಕ್ಕೆ ಪ್ರಚಲಿತ ಸಾಲುಗಳು ಅನೇಕ ಇವೆ.

ಇರುವರುಮಾಯಜ್ಞು ನೇರಿಟ್ಟಲ್ಲೊ	ಇಬ್ಬರು ತಮ್ಮೊಳಿದಿರಾದರಲ್ಲೋ
ಅಂಕಂ ಪಿಡಿಕ್ಕುನ್ನಿರುವರುಮಾಯ್	ಅಂಕ ಹಿಡಿಯುವರಿಬ್ಬರು ತಾವ್
ಸರಸ್ವತಿಯಂಕಂ ಪಿಡಿಚ್ಚವರುಂ	ಸರಸ್ವತಿಯಂಕವ ಹಿಡಿದವರು
ಗಣಪತಿಯಂಕವುಂ ತಾರಿ ತಾಟಿ	ಗಣಪತಿಯಂಕದ ನುಡಿ ಇಳ್ದಿದ್ರು
ಕೋಲ್ತಾರಿಯಂಕಂ ಪಿಡಿಚವರುಂ	ಕೋಲ್ನುಡಿಯಂಕ ಹಿಡಿದರಂದು
ಅಞ್ನೂಱುಂ ಮುನ್ನೂಱುಂ ನೀಟ್ಟುನೀಟ್ಟಿ	ಐನೂರು ಮುನ್ನೂರೂ ಉದ್ದ ಎಳೆದರು
ವಾಳ್ತ್ತಾರಿಯಂಕಂ ಪಿಡಿಚ್ಚವರುಂ	ಬಾಳ್ತಾರಿಯಂಕ ಹಿಡಿದರವರು
ಅಞ್ನೂಱುಂ ಮುನ್ನೂಱುಂ ನೀಟ್ಟು ನೀಟ್ಟಿ	ಐನೂರೂ ಮುನ್ನೂರೂ ನೀಟ ನೀಡುವರು
ವಾಳ್ತ್ತಾರಿಯಂಕಂ ಪಿಡಿಚ್ಚವರುಂ	ಬಾಳ್ತಾರಿಯಂಕ ಹಿಡಿದರವರು
ಅಞ್ನೂಱುಂ ಮುನ್ನೂಱುಂ ವೆಟ್ಟು ವೆಟ್ಟಿ	ಐನೂರೂ ಮೂನ್ನೂರೂ ಕಡಿಯಕಡಿದರು
ಪದಿನೆಟ್ಟಡವಜ್ಞು ವೆಟ್ಟವರುಂ	ಹದಿನೆಂಟಡವಿನಲ್ಲೂ ಕಡಿದರವರು
ಪುಲಿಯಂಕತ್ತಾರಿಯುಂ ನೇರಿಟ್ಟಲ್ಲೋ	ಹುಲಿಯಂಕತ್ತಾರಿಯಲು ಇದಿರಿಸಿದರಲ್ಲೋ

ಈ ಸಾಲುಗಳಲ್ಲಿ ಕೆಲವು ಕೆಲವೊಮ್ಮೆ ಬಿಟ್ಟು ಹೋಗಬಹುದು. ಕೆಲವೊಮ್ಮೆ ಬೇರೆ ಕೆಲ ಸಾಲುಗಳು ಸೇರಿರಲೂ ಬಹುದು. 'ಅಂಕ'ಸಾಲುಗಳ ಬಗೆಗಿನ ರಸಭರಿತವಾದ ಒಂದು ಚಿತ್ರಣ ಬರುತ್ತದೆ. ಅಲ್ಲಿ ವೀರರ ಯುದ್ಧವನ್ನು ವರ್ಣಿಸುವುದಕ್ಕೆ ಬೇಕಾದ ಸಾಲುಗಳನ್ನು ಕೋಳಿಯಂಕ ವರ್ಣಿಸಲೂ ಬಳಕೆಯಾಗಿದೆ. 'ಆನೆಗೆ ಜೊಂಪು ಹತ್ತಿಸುವ ಅರಿಙ್ಙೋಡ'ರೊಂದಿಗೆ ಆರೋಮಲ್ ಚೇಕವರ್ ಅಂಕದ ಕಣದಲ್ಲಿ ಇದಿರಾದುದು ಹಾಗೆ.

എന്നു പറഞ്ഞു തുടങ്ങി വെട്ട് വാൾത്താരി കോൽത്താരി വെട്ടുന്നുണ്ട് അങ്കപ്പുറപ്പെട്ടു പാഞ്ഞുവെട്ടി	ಎಂದು ಪೇಳುತ ಕಡಿಯೆ ಮೊದಲಿಟ್ಟರು ಬಾಳ್‌ತಾರಿ ಕೋಲ್‌ತಾರಿ ಕಡಿಯುತ್ತಾರೆ ಅಂಕದ ಕಣದಗಲ ಓಡಿ ಕಡಿದರು

ಅವರು ಪರಸ್ಪರ ಹೋರಾಡುವುದಕ್ಕೆ ಮುನ್ನ ಅರಿಙ್ಙೋಡರ ಕೋಳಿಯಾದ ಅರಕ್ಕನ್‌ಪುಳ್ಳಿಯೂ ಆರೋಮಲ್ ಅವರ ಪಾಲನ್ ಚಿಂಙನೂ ಎದುರಿಸುವುದಿದೆ.

വാള്ത്താരി കോല്ത്താരി പിടിക്കുന്നുണ്ട് അങ്കപ്പുറപ്പെട്ടു പാഞ്ഞു കൊത്തി ചേകോന്മാരുടെ അങ്കവിരുത് വാഴ്ത്താനും ഏഴങ്കം വെട്ടി ജയിച്ചോരാണേ പന്തിരണ്ടങ്കം പദവി തീര്ത്തു ഇരുപത്തിരണ്ടങ്കം താരി താഴ്ത്തി	ಬಾಳ್‌ತಾರಿ ಕೋಲ್ತಾರಿ ಹಿಡಿಯುತ್ತಾರೆ ಅಂಕದ ಕಣದಗಲ ಓಡಿ ಕಡಿದರು ಬೇಕವರ ಅಂಕ ಪ್ರತಾಪ ಪೊಗಳಲು ಏಳಂಕ ಕಾದಿ ಗೆದ್ದೋರವರು ಹನ್ನೆರಡಂಕ ಪದವಿ ಮುಗಿಸಿದ್ರು ಇಪ್ಪತ್ತೆರಡಂಕಗಳ ತಾರಿ ಇಳಿಸಿದ್ರು

ಎಂದು ಹಲವಾರು ಕಡೆಗಳಲ್ಲಿ ಪುನರಾವರ್ತನೆಯ ಸಾಲುಗಳು ಬರುತ್ತವೆ. ವನಿತೆಯರ ಚೆಲುವು ಬಣ್ಣಿಸವುದಕ್ಕೂ ತಯಾರಿಸಿಟ್ಟ ಸಾಲುಗಳು ಇರುತ್ತವೆ.

ഈ വഗ പെണ്ണുങ്ങള് ഭൂമിലുണ്ടോ മാനത്തൂന്നെങ്ങാനും പൊട്ടി വീണോ ഭൂമീന്നു തനിയെ മുളച്ചുവന്നോ എന്തു നിറമെന്നു ചൊല്ലേണ്ടു ഞാന് കുന്നത്തു കൊന്നയും പൂത്തപോലെ	ಈ ಬಗೆ ಹೆಂಗಳೆಯರು ಭೂಮಿಯಲಿಹರೇ ಬಾನಿಂದೆಲ್ಲಾದರು ಒಡದು ಬಿದ್ದಳೋ ಭೂಮಿಯಿಂದ ತಾನೇ ಮೊಳೆತುಬಂದಳೋ ಏನು ಮೈಬಣ್ಣವೆಂದೊರೆವೆ ನಾನು ಬೆಟ್ಟದ ಕಕ್ಕೆಮರ ಹೂತ ಹಾಗೆ

ಇಳಮಾವಿನ್ ತಯ್ಯು ತಳಿರ್ತ್ತಪೋಲೇ	ಎಳೆಮಾವುಗಿಡ ತಳಿರೆದ್ದ ಹಾಗೆ
ಕುರುತ್ತೋಲಯಾಯತಿನ್ ವರ್ಣಂಪೋಲೆ	ತೆಂಗಿನ ಎಳೆಗರಿಯ ಬಣ್ಣದಂತೆ
ವಯನಾಡನ್ ಮಞ್ಞಳ್ ಮುಱಿಞ್ಞಪೋಲೆ	ಗುಲಗುಂಜಿ ಬಿತ್ತಿನ ಬಣ್ಣದಂತೆ
	ವಯನಾಡ ಅರಸಿನ ಅರಿದ ಹಾಗೆ

ತಚ್ಚೋಳಿ ಚಂದುವಿನ ಪ್ರೇಯಸಿ ತಾಟಿತ್ತುಮತ ಮಾದುಕುಟ್ಟಿಯನ್ನು ಕಂಡು ತುಳುನಾಡಿನ ಕೋಟೆಯ ಕಂಡರ್ ಮೇನೋನ್ ಹೇಳುವ ಮೇಲಿನ ಸಾಲುಗಳಲ್ಲಿ ಕಾಣಿಸುವ ಸೊಲ್ಲುಗಳೇ ಕೊಡುಮಲ ಕುಂಕಿಯನ್ನು ಕಂಡು ತಚ್ಚೋಳಿ ಚಂದುವೂ, ಉಣ್ಣಿಯಾರ್ಚಯನ್ನು ಕಂಡು ನಾಗಪುರತ್ತಜ್ಞಾಡಿಯ ಜೋನಕರೂ ಉದ್ಗರಿಸುವ ಸಾಲುಗಳಲ್ಲಿ ಬರುತ್ತವೆ. ಹಾಗೆಯೇ ಆಱ್ಞಾಱನ್ ನದೀದಂಡೆಗೆ ಮೀಯಲು ಹೋದ ಚಂದುವನ್ನು ಕಂಡು ಕುಂಕಿಯೂ, ಕಪ್ಪುಳ್ಳಿಪಾಲಾಟ್ಟಿನ ಕೋಮನ್ನಾರನ್ನು ಕಂಡು ತೋಣ್ಣೂರಾಂವೀಡಿನ ಉಣಿಚ್ಚಿರಿತಯೂ ಹೇಳುವ ಸಾಲುಗಳಲ್ಲಿ ಸೊಲ್ಲಿನ ಪುನರಾವರ್ತನೆಯಿದೆ. ಗಂಡುಸನ್ನು ಹೆಣ್ಣು ಬಣ್ಣಿಸುವಾಗ 'ಈ ಬಗೆ ಪುರುಷರು ಭೂಮಿಯಲಿಹರೇ' ಎಂದು ಸಾಂದರ್ಭಿಕ ಬದಲಾವಣೆ ಪಡೆಯುತ್ತದೆ. ಗಂಡನ್ನೂ, ಹೆಣ್ಣನ್ನೂ 'ಮುಡಿಯಿಂದ ಅಡಿವರೆಗೆ' ಬಣ್ಣಿಸಲು ಪದ್ಧತಿಯ ಸಾಲುಗಳಿವೆ.

ಹೀಗೆ ಪದ್ಧತಿಯ ಸಾಲುಗಳನ್ನು ಕೋದು ಕಟ್ಟಿ ತಯಾರಿಸುವ ಬಣ್ಣನೆಯಿಂದ ಹೊರಪಡುವ ಅಂಶವೆಂದರೆ ಇಂಥದರಿಂದ ಸಂದರ್ಭಕ್ಕೆ ಬೇಕಾದಂತೆ ಬಣ್ಣನೆಯನ್ನು ಉದ್ದಕ್ಕೆಳೆಯಲೂ, ಚುಟುಕುಗೊಳಿಸಲೂ ಸಾಧ್ಯ ಎಂಬುದು. ಪಾಟುಗಳಲ್ಲಿ ಆಗಾಗ ಕಾಣಿಸುವ ಊಟದ ವರ್ಣನೆ–

ವೇಂಡುನ್ನ ಚೋರ್‌ವಾರಿ ಉಣ್ಣುನ್ನುಂಡ್	ಬೇಕಾದ ಅನ್ನವ ಬಾಚಿ ಉಣುವ
ವೇಂಡಾತ್ತ ಚೋಱ್ಱಿನುಕೈಮಡಕ್ಕಿ	ಬೇಡಾದ ಅನ್ನಕೆ ಕೈತಡೆದ

ಎಂದು ಕೆಲವೆಡೆ ಎರಡೆ ಸಾಲುಗಳಿಗೆ ಮೊಟಕುಗೊಳ್ಳುತ್ತದೆ. ಬೇರೆ ಕೆಲವೆಡೆ–

ಚೋಱಿಱ್ಱಂ ವಲಭಾಗೇ ಚೆನ್ನಿರುನ್ನು	ಅನ್ನದ ಬಲಗಡೆಯಿಂ ಬಂದು ಕೂತ
ಭೂಮಿಕ್ಕು ನೀರ್ ತಳಿಚ್ಚನ್ನಂ ವೆಚ್ಚು	ಭೂಮಿಗೆ ನೀರ್ ತಳಿದು ಅನ್ನವಿಟ್ಟ
ಕೈಕುಂಭಂ ನಲ್ಲ ಪಿಡಿ ಪಿಡಿಚ್ಚು	ಕೈಬಿಂದಿಗೆ ಚೆನ್ನಾಗಿ ಹಿಡಿ ಹಿಡಿದ
ವಾಯ್ಕು ರಸತ್ತೋಡೆ ಉಣ್ಣುನ್ನುಂಡ್	ಬಾಯ್ಗೆ ರುಚಿಯು ಹತ್ತಿ ಉಣ್ಣುತ್ತಾನೆ
ವೇಂಡುನ್ನ ಚೋರ್ ವಾರಿ ಉಂಡವರುಂ	ಬೇಕಾದನ್ನವ ಬಾಚಿ ಉಂಡವರೂ
ವೇಂಡಾತ್ತ ಚೋಱ್ಱಿನ್ನು ಕೈಮಡಕ್ಕಿ	ಬೇಡದ ಅನ್ನಕೆ ಕೈತಡೆದರು.

ಎಂದು ವಿಸ್ತರಿಸುವುದಿದೆ. ಬೇಕಾದರೆ ಹೂಬಾಳೆ ಎಲೆ ಕೊಯ್ದು ಇರಿಸುವುದನ್ನೂ, ಅನ್ನಬಡಿಸುವುದನ್ನೂ ಮುಂತಾಗಿ ಸೇರಿಸಿಕೊಂಡು ಇನ್ನೂ ಉದ್ದಕ್ಕೆ ಎಳೆಯುವುದುಂಟು.

ಅಂಕಂ (ದ್ವಂದ್ವ ಯುದ್ಧ), ಅಡವು (ನಿಲುವು, ಪಟ್ಟು), ಚೆಲುವು, ಸಿಂಗಾರಗೊಳ್ಳುವ ಬಗೆ, ಮೀಹ, ಊಟ, ನಿದ್ರೆ, ಹೋಗಿ ಬರುವಿಕೆ, ವೀರರ ಜನನ, ಸಾಮಾನ್ಯವಾಗಿ ಬೇಕಾಗುವ, ಯಾವುದಕ್ಕೂ ಒದಗುವ ಹದವಾದ ಉದ್ದ, ಗಿಡ್ಡ ಬಣ್ಣನೆಯ ಸಿದ್ಧಸಾಲುಗಳು ಇವೆ. 'ಒರಿಕ್ಕಿವಚ್ಚ' (ಸಿದ್ಧ ಪಡಿಸಿ ಇರಿಸಿಕೊಂಡ) ಈ ಬಗೆಯ ಸಾಲುಗಳನ್ನು 'ಒರುಕ್ಕುಶೀಲುಗಳ್' (ಸಿದ್ಧ ಸಾಲುಗಳು) ಎಂದು ಕರೆಯಬಹುದು. 'ಒರುಕ್ಕುಶೀಲು'ಗಳು ಸಾಂಘಿಕತೆಯ ಸಾರ್ವಜನಿಕ ಬಂಡವಾಳವಾಗಿವೆ. ಮೌಖಿಕ ಧಾರೆಯಲ್ಲಿ ಟಂಕಿಸಿ ಬರುವ ಯಾವ ಪಾಟುಕವಿಯಾದರೂ ಮೂಡಿಸುವ ಗುರುತು ಇದು.

ಇಡಿಯ ಸಲುಗಳನ್ನು ಮಾತ್ರವಲ್ಲ, ಸಾಲುತುಣುಕುಗಳನ್ನೂ ಸಿದ್ಧಸಾಲುಗಳಿಂದ ಎತ್ತಿಕೊಂಡು ಪಾಟುಕಟ್ಟುವುದದನ್ನು ವಡಕ್ಕನ್ ಪಾಟು ಕವಿ ಕಮ್ಮಟಗಳಲ್ಲಿ ಕಾಣಬಹುದು. ಪಡಿ (ಹೊಸ್ತಿಲು), ಪಡಿಪ್ಪುರ (ಪಡಿಪಿರೆ), ಪಡಕಾಳಿಮುಱ್ಱಂ (ಪಡೆಕಾಳಿಯಂಗಳ) ಪಡಿಞ್ಞಾಱ್ಱೆ ಮಚ್ಚಱ (ಪಡುಮನೆಯಟ್ಟ), ಕಾಱ್ಱಾಡುಂ ತಿಣ್ಣ ಕಳಿತ್ತಿಣ್ಣ (ಗಾಳಿಯಾಡುವ ಜಗಲಿ, ಆಡು ಜಗಲಿ), ನಾಲುಕೆಟ್ಟು ಅಕಂ (ನಾಲ್ಕು ಸುತ್ತುಮದಿಲ ಮನೆ) ತೆಕ್ಕಿನಿಯೆನ್ನೊರು ಪೂಂದಳಂ (ತೆಂಕಮನೆಯೆಂಬೊಂದು ಹೂದಿಣ್ಣೆ), ಏಟಿರ ಮಾಳಿಗ ಮಣಿಮಾಳಿಗ (ಏಳರಮಾಳಿಗೆ ಮಣಿಮಾಳಿಗೆ), ವೀರಾಳಿಪುಲ್ಪಾಯ (ವೀರಾಳಿ ಹುಲ್ಲ ಚಾಪೆ), ವೀರಾಳಿ ಮನ್ನನ್ ತಟುಕ್ಕ್ (ವೀರಾಳಿ ಮನ್ನೆಯನ ಚಾಪೆ), ವೀರಾಳಿ ಶಂಖ್ (ವೀರಾಳಿಯ ಶಂಖ), ಮೆಯ್‌ವರ್ಣಪೆಟ್ಟಿ (ಮೈಗೆ ಪೂಸುವ ಬಣ್ಣಗಳಿರುವ ಪೆಟ್ಟಿಗೆ), ರಾಮಾಯಣಂ ಕೊತ್ತಿಯ ವಳ (ರಾಮಾಯಣ ಕೆತ್ತಿದ ಬಳೆ), ಮುಡಿಯೆಣ್ಣಿ ಮುತ್ತ್ (ಕೂದಲು ಲೆಕ್ಕಿಸಿ ಮುತ್ತು), ಎರಿದಾಹಕ್ಕಞ್ಞಿ (ಉರಿ ಬಾಯಾರಿಕೆ ಕಳೆಯಲಿರುವ ಗಂಜಿ), ತಟ್ಟೊತ್ತ ಭೂಮಿ ಕಳಿಪ್ಪರಂಬ್ (ಪೆಟ್ಟಿಸಿ ಸಮಗೈದ ಆಟದ ಬಯಲು), ತಱಯಿಟ್ಟ ಮಾವ್ (ಕಟ್ಟೆಕಟ್ಟಿದ ಮಾವಿನಮರ), ಕಿಳಿವಾಲನ್‌ವೆಱ್ಱಿಲ (ಗಿಳಿಬಾಲದಂಥ ವೀಳ್ಯದೆಲೆ), ಈಱನ್ ಕವುಙ್ಙಿನ್ಱೆ ಪಾಕ್ಕ್ (ಹಸಿಕವುಂಗಿನ ಮುಚ್ಚಿಗೆ), ಶಂಖಿಲೊಳಿಮಿನ್ನುಂನೂಱ್ (ಶಂಖದಂತೆ ಹೊಳೆವ ಸುಣ್ಣ), ಪಾಲಿಲ್ ಮುಟುಙ್ಙಿಯ ಪಾಕ್ಕ್ (ಹಾಲಲಿ ಮುಳುಗಿದ ಮುಚ್ಚಿಗೆ) ಎನ್ನುವಂಥ ಪ್ರಯೋಗಗಳು ಅಪರಿಮಿತ. ಸಂಭಾಷಣೆ ಆರಂಭಿಸುವುದಕ್ಕೆ 'ಒನ್ನುಂಡ್ ಕೇಳ್‌ಕ್ಕಣಂ' (ಒಂದುಂಟು ಕೇಳ್ಬೇಕು), 'ಅಪ್ಪೋಳ್‌ಪಱಯುನ್ನು' (ಆಗ ಹೇಳುತ್ತಾನೆ/ಳೆ) ಎಂಬಂಥ ಒಂದು ರೀತಿ ಇರುತ್ತದೆ.

ಸಿದ್ಧ ಸಾಲುಗಳಿಗೆ ಹೊರತಾಗಿ ಅಲ್ಲಲ್ಲಿ ಕಟ್ಟಿ ತಯಾರಿಸುವ ಸಾಲುಗಳೂ, ಪ್ರಯೋಗಗಳೂ ಬೇರೆಯಿವೆ. ಈ ಬಗೆ ಸಾಲುಗಳನ್ನು ಕವಿತ್ವ ಎಂದು ಹೇಳಬಹುದು. ಸ್ಥಾನಾಪನ್ನರು ಮತ್ತು ತರವಾಡಿನವರಾದ ಗಣ್ಯರು ಯಾತ್ರೆ ಹೋಗುವಾಗ ಒಂದಿಗೆ ಹೋಗುವಾಗಿನ ಬಣ್ಣನೆ ನೋಡುವ–

ಎಣ್ಣಂ ಪದಿನಾರು ನಾಯನ್‌ಮಾರುಂ । ಎಣಿಸೆ ಹದಿನಾರು ನಾಯನ್ಮಾರೂ

ಎಂದೂ ಗಂಡುಸಿನ ಬಗೆಗಾದರೆ, ಹೆಣ್ಣಿನ ಸಂದರ್ಭದಲ್ಲಿ–

ಎಣ್ಣಂ ಪದಿನಾರು ಪ್ಪಾತ್ತಿಮಾರುಂ । ಎಣಿಸೆ ಹದಿನಾರು ಹೆಂಗುಸರೂ

ಎಂದಾಗುವುದು ಕವಿತ್ವದ ಉಪಯೋಗದಿಂದಲೇ.

ಅಜೀವನ್[1] ಕೊಂಡಞ್ಞಾಟೆ[2]ಅರಿಯೆಡುತ್ತು । ಅಟುವನ್ನಿಂದ ಅಞ್ಞಾಟೆ ಅಕ್ಕಿತೆಗೆದು

ಎಂಬ ಸಾಲಿನ ರಚನೆಯಲ್ಲೆ ಕವಿತೆ ಹಾಡಿದೆ.

1.ಅಟಿವನ್'–ಮುದ್ರೆ ಹೊಂದಿದ ಅಳತೆ ಪಾತ್ರಕ್ಕೆ ಒಂದಿಷ್ಟು ಕೊರೆಯಿರುವ ಅಳತೆ ಪಾತ್ರ. 2. 'ಅಞ್ಞಾಜಿ' – ಧಾನ್ಯದ ಅಳತೆ (ಸುಮಾರು ಒಂದೂಕಾಲು ಸೇರು.)

[ಅಜೀವನ್‌ಕೊಂಡಞ್ಞಾಜಿ[1]ಮುದಿರೆಡುತ್ತು । ಅಟಿವನ್‌ನಿಂದ ಅಞ್ಞಾಜಿ ಹುರುಳಿತೆಗೆದು

ಅಟಿವನ್ ಕೊಂಡಞ್ಞಾಜಿ ಪಣಮೆಡುತ್ತು । ಅಟಿವನ್‌ನಿಂದ ಅಞ್ಞಾಜಿಹಣ ತೆಗೆದು[1]

ಎಂದೆಲ್ಲ ಬೇಕಾದಂತೆ ಬದಲಿಸಬರುತ್ತದೆ.

ತಚ್ಚೋಳಿಪಾಟಂ ಇಡಕಡನ್ನು । ತಚ್ಚೋಳಿ ಗದ್ದೆ ಎಡೆ ದಾಟಿದ

ಎಂಬ ಸಾಲೇ–

ತಜಿಯಿಟ್ಟು ಮಾವುಂ ಇಡಕಡನ್ನು । ಕಟ್ಟೆಕಟ್ಟಿದ ಮಾವು ಎಡೆ ದಾಟಿದ

ತಜಿಯಿಟ್ಟು ಮಾವುಂ ಪುಳಿಕಡನ್ನು । ಕಟ್ಟೆಕಟ್ಟಿದ ಮಾವು ಹುಣಸೆ ದಾಟಿದ

ಕುಮರಂ ಪುಱಯುಂ ಇಡಕಡನ್ನು । ಕುಮರಂ ಹೊಳಯ ಎಡದಾಟಿದ

ಪುತ್ತೂರಂ ಪಾಟಂ ಇಟಕಡನ್ನು । ಪುತ್ತೂರ ಗದ್ದೆ ಎಡೆ ದಾಟಿದ

ಕೂಟ್ಟಾಟಂ ಪಾಟಂ ಇಟಕಡನ್ನು । ಕೊಟ್ಟಾಟಂ ಗದ್ದೆ ಎಡೆ ದಾಟಿದ

ಎಂಬ ಹಾಗೂ ಬದಲಬಲ್ಲುದು.

ಸಿದ್ಧ ಸಾಲುಗಳನ್ನೂ ಕವಿತ್ವಸಾಲುಗಳನ್ನೂ ತುಂಡು ಪ್ರಯೋಗಗಳನ್ನು ಕಡಿದು ಗೊಣಸು ತಗಲಿಸಿ ಸೇರಿಸಿಯೂ ಬೆಳಗಿಸಿಯೂ ಆಗಾಗ ಕಟ್ಟಿ ತಯಾರಿಸುವಂಥವು ವಡಕ್ಕನ್ ಪಾಟುಗಳು. ಇಲ್ಲಿ ಪಾಟು ಕಟ್ಟುವವನು ಮತ್ತು ಕೇಳುವವನ ನಡುವಣ ಬಾಂಧವ್ಯ ಸಕ್ರಿಯವಾಗಿರುತ್ತದೆ. ಪಾಟು ಕಟ್ಟುವ ಆ ನಿಮಿಷಗಳಲ್ಲಿ ಹಾಡುವವನೇ ಕವಿಯೂ ಆಗಿರುತ್ತಾನೆ. ಆತ ಮತ್ತು ಕೇಳುಗನ ನಡುವಣ ಸಂಬಂಧ ರಂಗವನ್ನೇರುವ ನಟ ಮತ್ತು ಪ್ರೇಕ್ಷಕರ ನಡುವೆ ಇರುವಂಥದೇ. ಈ ಅರ್ಥದಲ್ಲಿ ಜಾನಪದ 'ಪಾಟು' ಒಂದು ಪ್ರದರ್ಶನ ಕಲೆಯೆ ಆಗಿದೆ. ಹಾಡುಗಾರ ಪೂರ್ವಸಿದ್ಧತೆಯೊಂದಿಗೆ ತಯಾರಿಸಿಟ್ಟ ಒಂದು ಪಠ್ಯವನ್ನು ಯಾಂತ್ರಿಕವಾಗಿ ಪುನರಾವರ್ತಿಸುವುದಲ್ಲ, ಮತ್ತೆ? ಚಾಲತಿಯಲ್ಲಿರುವ ಒಂದು ಕತೆಗೆ ತನ್ನದೆ ಒಂದು ಪಠ್ಯವನ್ನು ಕಟ್ಟಿ ತಯಾರಿಸುವುದಾಗಿದೆ. ಇದು ಹಾಡುಗಾರನ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಕಥೆಯ ಘಟನೆಗಳನ್ನು ಆಗಾಗ ಕೂಡಿಟ್ಟುಕೊಳ್ಳಬೇಕಾಗುತ್ತದೆ. ಕಥಾ ಪಾತ್ರಗಳಿಗೆ ಆಗಾಗ ಉಸಿರುಕೊಡಬೇಕಾಗುತ್ತದೆ. ಸಭೆಯಪ್ರತಿಕ್ರಿಯೆ ಆಗಾಗ ಪಡೆಯುವ ಹಾಡುಗಾರನಿಗೆ ಕೇಳುಗರನ್ನು ತನ್ನ ಜತೆಗೆ ಒಯ್ಯುವ ಆವಶ್ಯಕತೆ ಇರುತ್ತದೆ. ತನ್ನತನವೊ, ಹೊಸತನವೊ ಅಲ್ಲ ಆತನಿಗೆ ಬೇಕಾಗುವುದು, ಬದಲು ಚುರುಕಿನ ಆವಿಷ್ಕಾರ ಅವನಿಗಿರುವ ಆವಶ್ಯಕತೆ. ಅದಕ್ಕೆ ಆತನ ಬಳಿಯಿರುವ ಅಚ್ಚಿನ ರೂಪಗಳು ಈ ಸಿದ್ಧಸಾಲುಗಳು ಮತ್ತು ಕವಿತ್ವಗಳು. ವಿಶ್ವದ ಆದ್ಯಂತ ಇರುವ ಜಾನಪದ ಗೀತಗಳ ಬಗೆಗೆ ನಡೆದಿರುವ ಯಾವ ಸಂಶೋಧನೆಯೂ ಶ್ರುತಪಡಿಸಿರುವುದು ಸಿದ್ಧಸಾಲುಗಳು, ಕವಿತ್ವಗಳು ಮತ್ತು ಅವುಗಳ ಮುಖ್ಯ ವೈಶಿಷ್ಟ್ಯಗಳನ್ನೆ.

ಕವಿ ಕಟ್ಟುವ ಪರಂಪರೆ ಪ್ರಾದೇಶಿಕ ವೈವಿಧ್ಯ

---

1. ಹಣವನ್ನು ಅಳೆಯುವುದೂ ಧಾನ್ಯ ಅಳೆಯುವ ಪಾತ್ರದಿಂದಲೇ

'ಕವಿ ಕಟ್ಟುವಿಕೆ' ಪರಂಪರೆಯಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ. ಸಾಲುಗಳನ್ನೆ ನೋಡುವ. 'ತಚ್ಚೋಳಿ ಪಾಟು'ಗಳಲ್ಲಿ ಮೀಹ, ನಾಮಹಾಕುವುದನ್ನು ಬಣ್ಣಿಸಲು–

ನಲ್ಲ ಕಳಭವುಂ[1] ಕಸ್ತೂರಿಯುಂ	ಒಳ್ಳೆ ಕಳಭವೂ ಕಸ್ತೂರಿಯು
ಕೋಟಿಕ್ಕೋಡನ್‌ಚಾಂದುಂ ಚಂದನವುಂ	ಕೋಟಿಕೋಡಿನ ಚಾಂದು ಚಂದನವು
ನಾಲು ಮಣವುಮೊನ್ನಾಯ್ಚ್ಚೇರ್ತ್ತುವೇಗಂ	ನಾಲ್ಕು ಕಂಪೂ ಒಂದಾಯ್ತು ಬೇಗ
ನಾಯರ್‌ಕುಱೆಯಂಜುಂ ತೊಟ್ಟು ಪಿನ್ನೆ	ನಾಯರ್ ನಾಮವೈದ ಹಚ್ಚಿ ಮತ್ತೆ
ಕಟತ್ತು ವೈನಾಡನ್ ವರ ವರಞ್ಞು	ಕಡತ್ತುವಯನಾಡಿನ ಬರೆ ಬರೆದ

ಎಂಬ ಸಿದ್ಧ ಪಂಕ್ತಿಯಿದೆ. ಇದು 'ಪುತ್ತೂರಂ ಪಾಟಿ'ನಲ್ಲಿ ಕಾಣುವುದಿಲ್ಲ. ಆಯುಧ ಗ್ರಹಣಕ್ಕೆ 'ಪುತ್ತೂರ ಪಾಟು' ಗಾರರಿಗೆ ತಪ್ಪದೆ ಈ ಸಾಲುಗಳು ಬರಲೇಬೇಕು–

ಚುರಿಕ ಪರಿಶ ತೊಟುತೆಡುತ್ತು । ಸುರಿಗೆ ಗುರಾಣಿಯ ನಮಿಸಿ ತೆಗೆದ

ಆದರೆ ಅದೇ ತಚ್ಚೋಳಿ ವೀರರ ಬಣ್ಣನೆಯಲ್ಲಿ–

[ಉಱುಮಿ[2] ಪರಿಶ ತೊಟುತೆಡುತ್ತು । ಉರುಮಿ ಗುರುಣಿಯ ನಮಿಸಿ ತೆಗೆದ

ಎಂದಾಗುತ್ತದೆ. ಇಂಥದಕ್ಕೆ ಹಲವು ಬಗೆ ಉದಾಹರಣೆಗಳನ್ನು ಎತ್ತಿ ಹೇಳಲು ಸಾಧ್ಯವಿದೆ. ಪಾಟುಗಳಲ್ಲಿರುವ ಈ ಬಗೆ ವ್ಯತ್ಯಾಸಗಳನ್ನು ಹೇಳಿ 'ವಡಕ್ಕನ್ ಪಾಟುಗಳಲ್ಲಿ 'ಪೂತ್ತೂರ ಪದ್ಧತಿ', 'ತಚ್ಚೋಳಿ ಪದ್ಧತಿ' ಎಂದು ಬೇರೆ ಬೇರೆ 'ಕವಿ ಮೊಳ್ಕೆಯ' ಪದ್ಧತಿಗಳನ್ನು ಕಂಡುಕೊಳ್ಳಬಹುದಾಗಿದೆ. ಇವುಗಳಲ್ಲದೆ ಇವುಗಳಿಂದ ಭಿನ್ನವಾಗಿ ಬೇರೆಯೂ ಪಾಟು ಧಾರೆಗಳು ಬಡಗಣ ಮಲಯಾಳದಲ್ಲಿ ಕಾಣಬಹುದು. 'ಆಱು ನಾಟ್ಟಿಲ್ ನೂಱು ಭಾಷ' (ಆರು ನಾಡುಗಳಲ್ಲ ನೂರು ಭಾಷೆ) ಎಂಬ ಮಾತಿರುವ ಹಾಗೆ ಸ್ಥಳೀಯ ಭಿನ್ನತೆಯನ್ನು ಮುಂದೆ ಮಾಡಿ ಒಂದೊಂದು ಊರುಗಳಲ್ಲಿ ಟಂಕಿಸಲ್ಪಟ್ಟು ಬರುವ ಸಿದ್ಧಸಾಲುಗಳೂ, ಕವಿತ್ವಗಳೂ, ತುಂಡು ಸಾಲುಗಳೂ ಪ್ರಯೋಗದಲ್ಲಿ ಇವೆ. ಪಾಟುಗಳ ಮೇಲುಹರಹಿನಲ್ಲಿ ಈ ಬಗೆ ಒಂದೊಂದೇ ವ್ಯತ್ಯಯಗಳು ಗೋಚರವಾದರೂ ಬುನಾದಿ ಕಥಾಸಂವಿಧಾನದಲ್ಲಿ ಆಶ್ಚರ್ಯಕರವಾದ ಸಾದೃಶ್ಯವುಂಟೆಂಬ ವಾಸ್ತವವೂ ಗಮನಾರ್ಹವಾಗಿದೆ. 'ತಚ್ಚೋಳಿ' ಮನೆತನಕ್ಕೆ ಸಂಬಂಧಿಸಿ ಇರುವ ಹನ್ನೆರಡರಷ್ಟು ಕೋಟೆಹಿಡಿದ ಪಾಟುಗಳಲ್ಲಿ ಕಾಣುವ ಅದೇ ಕಥಾಘಟನೆಯೇ, 'ತಚ್ಚೋಳಿ'ಯವರ ಊರಾದ 'ಕಡತ್ತನಾಡಿ'ನಿಂದ ಎಷ್ಟೋ ಆಚೆಗಿರುವ 'ಕುಟ್ಟನಾಡಿ'ನಲ್ಲಿ ಪ್ರಚಲಿತವಿರುವ,– ಚೆಜ್ಜನ್ನೂರಾದಿ'ಯ ಬಗೆಗಿರುವ ಪಾಟು ಕಥೆಗಳಲ್ಲೂ ಲಭ್ಯ.

---

1. ಕಳಭಂ – ಎಂಟು ಬಗೆ ಸುಗಂಧ ದ್ರವ್ಯಗಳನ್ನು ಅರೆದು ಕಲಸಿದ ನಾಮಲೇಪದ್ರವ್ಯ. 2. ಉಱುಮಿ = ಒಂದು ಬಗೆಯ ಖಡ್ಗ. ಇದನ್ನು ತುರ್ಕಿ ಖಡ್ಗ ಎಂದೂ ಕರೆಯುತ್ತಾರೆ.

‘ತೊರಂಪಾಟುಗಳು’ ಎಂಬ ವಿಭಾಗದಲ್ಲಿ ಸೇರುವ ಪಾಟುಗಳ ಸಾಲುಗಳಿಗೆ ಮತ್ತು ಶೈಲಿಗಳಿಗೆ ಬಡಗಣ ಮಲಬಾರಿನ, ಅದರಲ್ಲೂ ವಿಶೇಷತಃ ‘ಕೋಲತ್ತುನಾಡಿ’ ನಲ್ಲಿರುವ ‘ತೆಯ್ಯಂಆಟ’ಗಳಲ್ಲಿ ಬರುವ ‘ತೋಱ್ಱಂ’ (ಭೂತಕೋಲದ ‘ಪಾಡ್ದನ’ ಇಂದೇ) ಕೆಲವು ಘಟನೆಗಳ ನುಡಿಗಳೊಂದಿಗೆ ಪ್ರಕಟವಾದ ಸಾಮ್ಯವಿದೆ. ಹೀಗೆ ನೋಡುವಾಗ ಬಡಗಣ ಮಲಬಾರ್ ಒಂದು ಜಾನಪದ ಸಾಂಸ್ಕೃತಿಕ ಸೀಮೆ ಎಂದೂ ಆ ಸಾಂಸ್ಕೃತಿಕ ಸೀಮೆಯ ವಾಙ್ಮಯಗಳಲ್ಲಿ ಪರಸ್ಪರ ಅನೇಕಾನೇಕ ಎಳೆಸೇರಿಕೆಗಳೂ ಇವೆ ಎಂದು ಕೂಡ ಅರ್ಥವಾಗುತ್ತದೆ. ಸಂಸ್ಕೃತೀಕರಣದ ಮತ್ತು ಬ್ರಾಹ್ಮಣಾಧಿಪತ್ಯದ ಹಿಡಿತದಿಂದ ತಪ್ಪಿಸಿಕೊಂಡು ಚರಿತ್ರೆಯ ದೃಷ್ಟಿಯಿಂದಲೂ ಭೂವಿಜ್ಞಾನದ ದೃಷ್ಟಿಯಿಂದಲೂ, ಅಗಲಿ ನಿಲ್ಲಲು ಆಸ್ಪದವಾಗಿರುವುದಕ್ಕೇ ಈ ಜಾನಪದದ ಉಗಮದ ಕಾರಣವಿರಬೇಕು, ಈ ಜಾನಪದ ಸಂಸ್ಕಾರ ಸೀಮೆಯೇ ತಿಳಿಮಲಯಾಳದ ಸ್ರೋತವಾದ ‘ಕೃಷ್ಣಗಾಥ’ (ಕೃಷ್ಣಚರಿತದ ಮಲಯಾಳ ಹಾಡಗಬ್ಬ)ದ ಮೂಲಸೆಲೆ ಎಂಬುದು ಇನ್ನಷ್ಟು ಹೆಚ್ಚಿದ ಚಿಂತನೆಗೆ ವಿಷಯವಾಗುತ್ತದೆ.

ಟಿಪ್ಪಣಿಗಳು

ಪದ್ಯಸಾಲು 3 : ಪಟಿಞ್ಞಾಱ್ಱಿ : ಹಳೆಯ ಕೇರಳ ಮನೆತನಗಳ ವಾಸ್ತು. ನಾಲ್ಕು ಕಟ್ಟು : ಎಂಟು ಕಟ್ಟು, ಹದಿನಾರು ಕಟ್ಟು ಇತ್ಯಾದಿ, ಅಳತೆ ಆಯಗಳ ರಚನೆಯಾಗಿತ್ತು. ಬುನಾದಿ ಮಾದರಿ ‘ನಾಲುಕೆಟ್ಟೇ’ ಆಗಿತ್ತು. ಚೌಕಾಕೃತಿಯ ನಾಲ್ಕು ಸುತ್ತಲೂ ಕೋಣೆಗಳಿದ್ದು ನಡುವೆ ಅಂಗಳವಿರುವ ರಚನೆಯದು. ‘ನಾಲ್ಕು ಕಟ್ಟಿ’ನ ತೆಂಕಣ ಕೋಣೆ ‘ತೆಕ್ಕಿನಿ’, ಬಡಗಣದು ‘ವಡಕ್ಕಿನಿ’, ‘ಕಿಟಕ್ಕು’ (ಮೂಡಣಕ್ಕೆ) ಇರುವಂಥದು ‘ಕಿಟಕ್ಕಿನಿ’. ‘ಪಡಿಞ್ಞಾರು’ (ಪಡು ದಿಕ್ಕಿನಲ್ಲಿ) ಇರುವುದು ‘ಪಡಿಞ್ಞಾಱ್ಱಿ’. ಇದರಲ್ಲೆ ದೈವಗಳನ್ನೂ ಇತರ ತೀರ್ಥವಸ್ತುಗಳನ್ನೂ ಶ್ರದ್ಧಾವಸ್ತುಗಳನ್ನೂ ಇರಿಸುವ ‘ಅಟ್ಟ’ವಿರುವುದು. ಪಶ್ಚಿಮದ ಕೋಣೆಯೇ ಮನೆಯ ಪ್ರಧಾನ ಕೇಂದ್ರ.

ಸಾಲು 4 : ನಿನನ್ದು : ನೆನೆದು. ತಮಿಳು ಪ್ರಯೋಗವೆಂಬ ಭಾವನೆ ಬರಿಸುವ ಒಂದು ಹಳೆಪ್ರಯೋಗ. ಇದು ‘ಪಾಟಿ’ನ ಹಳಮೆಯನ್ನು ಸೂಚಿಸುತ್ತದೆ.

ಸಾಲು 6 : ಕಾರೋಲ : ಬರಹದ ಓಲೆಗೆ ವಿಶಿಷ್ಟವಾದ ಹನೆಮರದ ಓಲೆಯಲ್ಲಿ ಬರೆದು ದಾಖಲೆಗಳನ್ನು ಹಿಂದೆ ಕಾಯ್ದಿರಿಸುತ್ತಿದ್ದರು. ಈ ಹನೆಯ ಓಲೆಯನ್ನು ಕಡಿದಿಕ್ಕಿ, ಅಳತೆಗೆ ತಕ್ಕವಾಗಿ ಕತ್ತರಿಸಿ ಒಣಗಿಸಿ ಕಾಯ್ದಿರಿಸುತ್ತಾರೆ. ಹಳತಾದ ಒಣ ಓಲೆಗಳಲ್ಲಿ ಲೋಹದ ಕಂಠದಿಂದ ಬರೆಯುತ್ತಾರೆ. ಬರೆಹ ಸ್ಫುಟವಾಗಲು ಔಲೆಯೇ ಹಾಳೆಯ ಬರಹದ ಮೇಲೆ ಮಸಿಪುಡಿ ಒರಸುವುದು ಪದ್ಧತಿ. ಮಸಿಯನ್ನು ಒರಸಿ ಒರಸಿ ಕಪ್ಪಾದ ಓಲೇಯೆ ‘ಕಾರೋಲ’.

ಸಾಲು 9 : ಚೆಂಬೋಲ ; ತಾಮ್ರದ ತಗಡು. ಇದನ್ನು ಹನೆಯೋಲೆಯಂತೆ ಬರೆಯಲು ಬಳಸುತ್ತಿದ್ದರು. ಹೆಚ್ಚು ಅಮೂಲ್ಯವಾದ ದಾಖಲೆ ಬರಹಗಳನ್ನು ಕಾಯ್ದಿರಿಸಿಕೊಳ್ಳಲು ಹೆಚ್ಚು ಬಾಳಿಕೆಯ ತಾಮ್ರದ ತೆಳು ಹಾಳೆಗಳ ಬಳಕೆ.

ಸಾಲು 49 : ಅಂಕಕುಱಿ : ಅಂಕ (ಯುದ್ಧ)ಕ್ಕೆ ಹೊರಡುವರು ಹಣೆ ಮತ್ತಿತರ ಅವಯವಗಳಿಗೆ ಬರೆಯುವ ವಿಶಿಷ್ಟ ಬರೆಹ (ನಾಮ ಮತ್ತು ರೇಖೆಗಳು).

ಸಾಲು 52 : ಕೋಲಾಸ್ತ್ರೀ ನಾಡು : ಕೋಲತ್ತಿರಿ ನಾಡು ಎಂಬುದನ್ನೆ ಹೀಗೆ ಹೇಳಿರಬೇಕು. ಹೀಗೆ ಸ್ಥಳೀಯ ಹೆಸರುಗಳನ್ನು ಸಂಸ್ಕೃತೀಕರಿಸುವ ಒಂದು ರೀತಿ ಹಳೆಯ ಪಾಟುಗಳಲ್ಲಿ ಸಾಮಾನ್ಯ, ‘ಪುತ್ತೂರಂ ಪಾಟಿ’ನಲ್ಲೆ ‘ಮಾನಕ್ಕೇಡ್’ (ಮಾನಕ್ಕೆ ಕೊರತೆ) ಎಂಬುದನ್ನು ‘ಮಾನಿಭಕ್ಕೇಡ್’ ಎಂದು ಸಂಸ್ಕೃತದ ಹಾಗೆ ತೋರುವಂತೆ

ಮಾಡಿದುದು 'ಸಂಸ್ಕೃತ'ದ ಬಗೆಗಿನ ಒಲವನ್ನು ಸೂಚಿಸುತ್ತದೆ, 'ನಾಣಿಭಕ್ಕುಙಂ಼' (ನಾಚಿಕೆಗೇಡು) ಅಂಥದಕ್ಕೆ ಇನ್ನೊಂದು ಉದಾಹರಣೆ.

ಸಾಲು 67 : ಮೊಟಿ : ಮಾವನಾದ ಆರೋಮಲ್ ಚೇಕವರನ್ನು ಕೊಂದದ್ದು ಮೋಸದಲ್ಲಿ. ಅದಕ್ಕೆ ಕಾರಣ ಹೇಳುವುದಕ್ಕಿರಲಿಲ್ಲ. ಒಂದು ಕೃತ್ಯದ ಕಾರಣ ಎಂಬ ಅರ್ಥದಲ್ಲಿ 'ವಟಿಯುಂ ಮೊಟಿಯುಂ' ಎಂಬ ಬಳಸುವುದು ಹಳೆಯ ನಾಡಿಗರ ಮಾತಿನ ಶೈಲಿ. ಈಗ ಆರೋಮುಣ್ಣಿಯನ್ನು 'ವಟಿ', 'ಮೊಟಿ' ಹೇಳಿಯೆ ಕೊಲ್ಲಲು ಸಾಧ್ಯ. ಕಾರಣ, ತಾನಿರುವಲ್ಲಿಗೆ ಬಂದು ತನಗೆ ಉಪದ್ರವ ನೀಡುತ್ತಾನೆ ಎಂದು ಕಾರಣಕೊಟ್ಟು ಹತ್ಯೆಯನ್ನು ಸಮರ್ಥಿಸಬಹುದಲ್ಲ?

ಸಾಲು 73 : ಮಾಙಾ಼ನ್ –ಶತ್ರು.

ಸಾಲು 79–82 : ಅನ್ನ ಬಡಿಸುವುದರ ಕುರಿತ ಸಿದ್ಧಸಾಲುಗಳನ್ನು ನೋಡಿರಿ.

ಸಾಲು 123 : ಪೊನ್ ವಿಳಙ್ಙಿ (ಹೊನ್ನು ಬೆಳಗಿತು) : 'ವಡಕ್ಕನ್ ಪಾಟು' ಗಳಲ್ಲಿ ಕಾಣುವ ಒಂದು ಪ್ರಯೋಗರೀತಿ. ಹೊನ್ನು ಹೊಳೆಯುವಂತೆ ಹೊಳೆಯಿತು ಎಂಬುದನ್ನು ಹೀಗೆ ಕಿರಿದಾಗಿ ಹೇಳಿದೆ. 'ಚಂದ್ರನ್ ವಳಙ್ಙ಼ ತಿರು ನೆಟ್ಟಿ಼' (ಚಂದಿರನಂತೆ ಬಾಗಿದ ಸಿರಿನೆತ್ತಿ = ಹಣೆ) ಎಂಬ ಇಂಥದೆ ಇನ್ನೊಂದು ಪ್ರಯೋಗವಿದೆ. ಅದು ಕೂಡ ಹೀಗೆಯೆ ಕಿರಿದುಗೊಳಿಸಿರುವಂಥದು.

ಸಾಲು 162–169 : ಕೇರಳೀಯರ ರಣಶೌರ್ಯವನ್ನು ಎತ್ತಿಹೇಳಲು ಉಪಯೋಗಿಸುವ ಸಾಲುಗಳಿವು.

ಯಥಾರ್ಥವಾಗಿ ಈ ಸಾಲುಗಳು ಚೇಕವರನ್ನು (ಯುದ್ಧಜೀವಿಗಳನ್ನು) ಯುದ್ಧಾಸಕ್ತರನ್ನಾಗಿ ನಿಲ್ಲಿಸಲು ಗುರಿಮಾಡಿದೆ. ಆದರೆ ಅವರ ಅಂಕಸಾಹಸದಿಂದ ಪ್ರಯೋಜನ ಎತ್ತುವವರು ಅವರನ್ನು ಅಂಕಕ್ಕೆ ಕೂಲಿಕೊಟ್ಟು ಇಳಿಸುವ ಆಡಳಿತಾಧಿಕಾರಿಗಳು ಹಾಗೂ ಮೇಲುವರ್ಗದವರು ಎಂಬುದನ್ನು ಮರೆಯುವ ಹಾಗಿಲ್ಲ. ಚೇಕವರನ್ನು ಕರೆದರೆ ತತ್ಕ್ಷಣ ಅವರು ಒದಗಿ ಬರುವಂತೆ ಅದಕ್ಕೆ ಹದಗೊಳಿಸುವ ಆದರ್ಶ, ಅಧ್ಯಾತ್ಮಸ್ವರೂಪಗಳನ್ನು ಆ ಆಯೋಧನ ಜೀವಿಗಳಿಗೆ ಸಿದ್ಧಗೊಳಿಸಿ ನೀಡುವುದೇ ಈ ಸಾಲುಗಳ ಧರ್ಮ ಎಂದು ತೋರುತ್ತದೆ.

ಅಂಕ : ಮಧ್ಯಯುಗದಲ್ಲಿ ಹಲವು ನಾಡುಗಳಲ್ಲಿ ನೆಲೆಗೊಂಡಿದ್ದ ಒಂದು ವ್ಯವಸ್ಥೆ 'ಅಂಕ' (ದ್ವಂದ್ವಯುದ್ಧ). ವಿವಾದ ಪರಿಹಾರಕ್ಕೆ 'ಅಂಕಂ' ಒಂದು ಉಪಾಧಿಯಾಗುತ್ತಿತ್ತು. ಹಾಗೆ ಇತರರಿಗೆ ಬೇಕಾಗಿ ಯುದ್ಧ ಹೂಡಿ ಗೆದ್ದುಕೊಡಲು ತಯಾರಿರುವ ಚೇಕವನ್‌ಗಳ ಒಂದು ಸಮುದಯವೂ ಉಂಟಾಯಿತು. 'ಅಂಕಚೇಕವನ್'ಗಳಿಗೆ ಪ್ರತಿಫಲವಾಗಿ ಬಲುದೊಡ್ಡ ನಿಧಿಯನ್ನು ಕೊಡುತ್ತಿದ್ದರು ಎಂಬುದೇ 'ವಡಕ್ಕನ್ ಪಾಟು' ಮೊದಲಾದ ಹಾಡುಗಬ್ಬಗಳಿಂದ ತಿಳಿದುಬರುವುದು.

ಅಂಕದ ಕೆಲವು ಚಾರಿತ್ರಿಕ ಪಳೆಯುಳಿಕೆ ಸ್ಥಳನಾಮಗಳ ರೂಪದಲ್ಲಿ ಇವತ್ತೂ ನಮ್ಮ ಹಳ್ಳಿಗಳಲ್ಲಿ ಕಾಣಸಿಗುತ್ತವೆ. ಅಂಕಪರಂಬು ಎಂಬ ಹೆಸರಿರವ ಬಯಲುಗಳು , ಊರು ಹೆಸರುಗಳು ಹಳಗಾಲದ ಅಂಕ ನಡೆದ ತಾವುಗಳೆಂಬ ಸೂಚನೆಯಾಗಿವೆ. ಕೇರಳದ ಹೊರಗೆ ಶ್ರೀಲಂಕೆಯಲ್ಲೂ ಈ ಬಗೆಯ ವ್ಯವಸ್ಥೆ, ಅನೇಕ 'ಅಂಕಂಮನ' ಎಂದು ಹೆಸರಿರುವುದಾಗಿ ಚರಿತ್ರೆಕಾರರು ದಾಖಲಿಸುತ್ತಾರೆ. 'ಈಟಿತ್ತುನಾಡು'(ಶ್ರೀಲಂದೆ) ಮತ್ತು ಚೇಕವನ್‌ಗಳ ನಡುವಣ ಸಂಬಂಧಗಳನ್ನು ತಾಳೆನೋಡಿದರೆ 'ಅಂಕಂ' ಎಂಬ ವ್ಯವಸ್ಥೆಗಿದ್ದ ವ್ಯಾಪ್ತಿಗೆ ಹೆಚ್ಚು ವಿಶ್ವಾಸಾರ್ಹತೆ ಒದಗುತ್ತದೆ.

ಮಾಪ್ಪಿಳ ಪಾಟು

(ಜಾನಪದ ಗೀತ)

ಎಂ.ಎನ್.ಕಾರಶ್ಶೇರಿ

ಟಿಪ್ಪಣಿ

ಆಖ್ಯಾನವಲ್ಲದ್ದೂ ಏನಾದರೊಂದು ಬಗೆಯ ಆಶಯವನ್ನು ಪ್ರಕಟಿಸುವ ಉದ್ದೇಶವುಳ್ಳದ್ದೂ ಆದ ಹಳ್ಳಿಹಾಡೇ 'ನಾಡನ್‌ಪಾಟು' (ಜನಪದ ಗೀತ). ಕಥಾಗಾನಗಳಿಗೆ ಹೋಲಿಸಿದರೆ 'ನಾಡನ್‌ಪಾಟು'ಗಳು ವ್ಯಕ್ತಿನಿಷ್ಠ. ಪುನರಾವರ್ತನೆಯ ಚರಣಗಳು, ತಾಳಾತ್ಮಕತೆ, ಸ್ವತಃ ಸ್ಫುರಣೆ, ಸಮರ್ಥನೆ (ತರ್ಕ)ರಹಿತತೆ ಮೊದಲಾದ ಅನೇಕ ಸ್ವಭಾವಗಳಿಂದ ಇದು ಕಥಾಗಾನದ ಗುಂಪಿನಿಂದ ಬೇರೆ ನಿಲ್ಲುತ್ತದೆ. ಒಳಗೊಳ್ಳುವ ಆಶಯ, ಹಾಡುವ ಸಂದರ್ಭ, ಹಾಡುವ ವ್ಯಕ್ತಿ, ಪಾಟಿನ ಸ್ವಭಾವ ಹೀಗೆ ಹಲವನ್ನು ಆಧರಿಸಿ 'ನಾಡನ್ ಪಾಟು'ಗಳನ್ನು ವರ್ಗೀಕರಿಸಬಹುದು. ಹಾಡಾಗಿರುವುದರಿಂದ ಸಾಲುಗಳನ್ನು ಆಧರಿಸಿಯೂ ವರ್ಗೀಕರಣ ಸಾಧ್ಯ.

ಹಾಡು ಹಾಡದಿರುವ ಸಾಂಘಿಕತೆ ಉಂಟೆಂದು ಅನಿಸದು. 'ಪಾಟು' ಸಾರ್ವಲೌಕಿಕ ವಾಸ್ತವ ಎಂದು ತೋರಿಸುವ ಗಾದೆಯಷ್ಟೆ 'ಪಡುಪಾಟ್ಟೊನ್ನು ಪಾಡಾತ್ತ ಕಟುತಯಿಲ್ಲ' (ಹಾಳು ಹಾಡೊಂದ ಹಾಡದ ಕತ್ತೆಯಿಲ್ಲ) ಎಂಬುದು. ತಾಳವನ್ನು ಮಾತ್ರ ಒಳಗೊಂಡು ಅರ್ಥವಿಲ್ಲದ ವರ್ಣಸೇರಿಕೆಯಿಂದ ಮಾತ್ರ ಘಟಿತವಾದ ಪಾಟುಗಳು, ಮಕ್ಕಳ ಹರುಷಕ್ಕಾಗಿ ಹಾಡುವ ಪಾಟುಗಳು, ಶ್ರಮಿಕರು ಆಯಾಸವನ್ನು ಹಗುರಗೊಳಿಸುವುದಕ್ಕೆ ಬೇಕಾಗಿ ಹಾಡುವ ಪಾಟುಗಳು, ಸಾಂಘಿಕತೆಯ ಆಂತರಿಕ ಸಂಘರ್ಷವನ್ನು ಹೊರಹರಿಯಗೋಡುವ ಪಾಟುಗಳು ಇವೆ.

ಕೇರಳದಲ್ಲಿ ಮಗುವಿನಿಂದ ತೊಡಗಿ ಮುತ್ತಜ್ಜಿವರೆಗಿನವರು ಹಾಡುವ ವಿಭಿನ್ನವಾದ ಪಾಟು ಪರಂಪರೆಗಳಿವೆ. ಅವುಗಳೊಂದಿಗೆ ಸ್ಥಳೀಯ ವೈಶಿಷ್ಟ್ಯ ಒಳಗೊಳ್ಳುವ ವ್ಯತ್ಯಾಸಗಳುಳ್ಳ ಪಾಟುಗಳೂ, ಒಂದೇ ಸ್ಥಳದಲ್ಲೆ ಲಂಬಮಾನವಾಗಿ ನೆಲೆಸುವಂಥವುಗಳೂ, ವಿಭಿನ್ನ ಸಾಂಘಿಕತೆಗಳ ಸ್ವತ್ವವನ್ನು ಪ್ರತಿಫಲಿಸುವಂಥ ಪಾಟುಗಳೂ ನೆಲಸಿಕೊಂಡಿವೆ. ಜಾತಿಗಳ ಸಾಂಘಿಕತೆಯೂ, ಮತಗಳ ಸಾಂಘಿತೆಯೂ ಇಲ್ಲಿ ಇವೆ. ಇದರಿಂದಲೆ 'ಪುಲಯರ ಪಾಟು'ಗಳೆಂದೂ 'ಪಣಿಯರ ಪಾಟು'ಗಳೆಂದೂ, 'ಮಾಪ್ಪಿಳಪಾಟು' ಎಂದೂ, 'ಬಾಗಿಲ ತೆರೆ ಪಾಟು' (ವಾತಿಲ್ ತುಱಪಾಟು) ಎಂದೂ ವಿಭಾಗಗಳು ಆಗುವುದು. ಕೇರಳದ ಮುಸ್ಲಿಮರಲ್ಲಿ ಪ್ರಚಾರದಲ್ಲಿದ್ದ ಪಾಟು ಪರಂಪರೆಯೆ 'ಮಾಪ್ಪಿಳ ಪಾಟು'. ಇದು 'ಅರಬಿಮಲಯಾಳ'ದಲ್ಲಿ (ಅರಬಿ ಭಾಷಾಮಿಶ್ರಿತ ಮಲಯಾಳದಲ್ಲಿ) ಕಟ್ಟಿದ ಪಾಟು.

ಹೆಸರಿನಿಂದ ತಿಳಿಯುವಂತೆ ಮಾಪ್ಪಿಳಗಳ ಪಾಟುಗಳಾದರೂ ಹಾಡುವವರು, ಪಾಟಿನ ಧರ್ಮ ಇತ್ಯಾದಿಗಳಿಂದ ಅವು ಮಾಪಿಗಳಿಗೆ ಮಾತ್ರ ಸೀಮಿತವಾಗುವ ಪಾಟುಗಳಲ್ಲ. ಇವತ್ತು ಕೇರಳೀಯ ಸಾಂಘಿಕತೆ ಏಕಪ್ರಕಾರ ಆಸ್ವಾದಿಸುವ ಒಂದು ಗಾನ ಪರಂಪರೆಯಾಗಿ ಅದು ನೆಲೆಕಂಡಿದೆ. ಸಾಂಘಿಕತೆ ತಾನಾಗಿಯೆ ಸೃಷ್ಟಿಸದಿರುವುದೂ, ಸಾಂಘಿಕತೆ ತನ್ನ ಸ್ವಾಧೀನ ಇರಿಸಿಕೊಳ್ಳದ್ದೂ, ಆದರೆ ಸಾಂಘಿಕತೆಗೆ ಬೇಕಾಗಿ ಸೃಷ್ಟಿಗೊಳ್ಳುವಂಥದ್ದೂ, ಸಾಂಘಿಕತೆಯ ಮಾನ್ಯತೆ ಇರುವಂಥದೂ ಆದ ಪರಂಪರೆಯನ್ನೆ ಜನತಾ ಪರಂಪರೆ ಎನ್ನುವುದು. ಒಂದು ಕಾಲದಲ್ಲಿ ವಿಶಿಷ್ಟ ಪರಿಸರದಲ್ಲಿ ಮಾಪ್ಪಿಳ (ಮಲಯಾಳಿ ಮುಸ್ಲಿಮರ) ಸಮುದಾಯ

ಅನುಸರಿಸಿಬಂದ ಮಾಪ್ಪಿಳ ಪಾಟು ಎಂಬ ಜಾನಪದ ಹಾಡು, ಅದರ ವಿಶಿಷ್ಟ ಪರಿಸರವನ್ನೆಲ್ಲ ಅತಿಕ್ರಮಿಸಿ ಸ್ವಾತಂತ್ರ್ಯ ವಹಿಸತೊಡಗಿದೆ. ಯಾವುದೊಂದು ಜಾನಪದ ರೂಪಕ್ಕೂ ಇರುವ ವೈಶಿಷ್ಟ್ಯವೆಂದರೆ ಅದು ಯಾವಾಗ, ಹೇಗೆ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಹೇಳಲು ಸಾಧ್ಯವಾಗುತ್ತದೆ ಎಂಬುದಾಗಿದೆ. ಮಾಪ್ಪಿಳ ಪಾಟಿಗೆ ಸಂಬಂಧಿಸಿ ಈ ಬಗೆಯ ಹೇಳುವಿಕೆ ಅಸಾಧ್ಯವಾಗಿಬಿಟ್ಟಿದೆ. ಸಾಮಾಜಿಕ ಪರಿವರ್ತನೆಗಳಿಗನುಸಾರವಾವಿ ಹೇಗೆ ಒಂದು ನಾಡ ಪರಂಪರೆಯು ಸಾರ್ವಜನಿಕ ಪರಂಪರೆಯಾಗಿ ಬದಲುತ್ತದೆ ಎಂಬುದಕ್ಕೆ ಅತ್ಯಂ ಒಳ್ಳೆಯ ಉದಾಹರಣೆಯೆ 'ಮಾಪ್ಪಿಳಪಾಟು'.

ಸಂಪಾದಕ

ಸುಫೈರ ಮತ್ತು ಮುನೀರ್

ಮಾಪ್ಪಿಳಪಾಟು ರಚಯಿತರಲ್ಲಿ ಅತ್ಯಂತ ಪ್ರಮುಖರಾದ ಮೋಯಿನ್‌ಕುಟ್ಟಿ ವೈದ್ಯರ (1852–1892) ಬಹಳ ಪ್ರಸಿದ್ಧವಾದ ಕೃತಿ ಬದರುಲ್‌ಮುನೀರ್ – ಹುಸ್ನುಲ್ ಜಮಾಲ್' (1872). ಒಂದು ಪಾರ್ಸಿಕಾವ್ಯದಲ್ಲಿರುವ ಪ್ರಣಯ ಕತೆಯನ್ನು ಆಧರಿಸಿ ರಚಿಸಿದ ಪ್ರಸ್ತುತ ಕೃತಿಯ ೬೭ನೆ ಪಾಟು ಈ ಕೆಳಗಿನದು.

ಹಿನ್ನೆಲೆ

ಹಿಂದ್ ರಾಜ್ಯದ ಮಹಾಸಿನ್ ರಾಜನ ಮುದ್ದಿನ ಮಗಳು ಹುಸ್ನುಲ್ ಜಮಾಲ್ ಮತ್ತು ಆತನ ಮಂತ್ರಿ ಮಸಾಮೀರ್‌ನ ಮಗ ಬದರುಲ್ ಮುನೀರ್ ಅವರು ಪ್ರಣಯಿಗಳಾಗಿದ್ದರು. ಪರಿಸ್ಥಿತಿ ಪ್ರತಿಕೂಲವಾಗಿ ಪರಿಣಮಿಸಿದಾಗ ಅವರು ಊರು ಬಿಡಲು ನಿಶ್ಚಯಿಸಿದರು. ಆ ವಿಫಲ ಶ್ರಮದ ನಡುವೆ ಕೈತಪ್ಪದ ಪ್ರೇಯಸಿಯನ್ನು ಹುಡುಕುತ್ತ ಅಲೆದ ಮುನೀರ್ ಒಂದೆಡೆ 'ಜಿನ್' ರಾಣಿಯಾದ ಖಮರ್‌ಬಾನಳ ಸನ್ನಿಧಿಗೆ ತಲಪಿದ. ಮುನೀರನ ಚೆಲುವಿಗೆ ಮನಸೋತ ರಾಣಿ ಆತನನ್ನು ತನ್ನ ಅರಮನೆಯಲ್ಲಿ ಉಳಿಸಿಕೊಂಡಳು. ಅಲ್ಲಿನ ಉದ್ಯಾನದಲ್ಲಿ ಮಲಗಿ ನಿದ್ರಿಸಿದ್ದ ಮುನೀರನ್ನು ಆಕಾಶ ಮಾರ್ಗದಲ್ಲಿ ಸಾಗುತ್ತಿದ್ದ ಸುಫೈರ ಕಂಡಳು. ಪರಿಜಿನ್ನ ಚಕ್ರವರ್ತಿಯಾದ ಶಿಹಾಬ್‌ನ ಪುತ್ರಿ, ಚೆಲುವಿಗೆ ಹೆಸರಾದವಳು, ಈ ಸುಫೈರ. ಅವಳು ಕೆಳಕ್ಕೆ ಇಳಿದು ಬದರುಲ್ ಮುನೀರನನ್ನು ನಿದ್ದೆಯಿಂದ ಎಚ್ಚರಿಸದೆ ತನ್ನ ರೆಕ್ಕೆಯಿರುವ ತೇರಿನಲ್ಲಿ ಎತ್ತಿ ಮಲಗಿಸಿ ಹಾರಿ ಹೋಗುತ್ತಾಳೆ. ಮುಂದಿನ ಕಥಾಭಾಗವೆ ಈ ಪಾಟಿನಲ್ಲಿ ಇರುವುದು.

ಇಶಲ್ (ಮಟ್ಟು) : 'ಆಲವುಂ ಅರ್ಶುಂ'(ಎಂಬಂತೆ)

ಮಿಕವುಱ್ಱ ಬದಱುಲ್‌ಮುನೀಱಿನೆ ತ್ತನ್ನಾ	ಮಿಗೆ ಚೆಲುವ ಬದರುಲ್ ಮುನೀರನ ತನ್ನ
ಮಿನುದಪ್ಪು ಅರಿಶಿಲ್ ಕಿಡತ್ತಿ ನನ್ನಾಯ್	ಮಿಸುನಿ ಪರ್ಯಂಕದಿ ಒರಗಿಸಿ ಚೆನ್ನ
ಅಕನೇಶಕ್ಕುಳಲಿ ತಾನ್ ಇರುಂದ್ ಅರಿಕೆ	ಒಗುನೇಹ ಚಲುವಿ ತಾ ಕುಳಿತು ಪಕ್ಕ
ಅವನ್ ತನ್ಱೆ ಸದ್ಱುಂ ಪುಱಂ ತಡಕ್ಕೈ	ಅವನೆದೆ ಬೆನ್ನನು ತಡವುತ್ತಕ್ಕೈ
ಮುಗಿಲ್ನೀಙ್ಙೆತ್ತೆಳಿಯುಂ ನುಜುಮ್‌ಪೋಲೆ	ಮುಗಿಲ್ಸರಿದು ತೊಳಗಿದ ತಾರೆಯಂತೆ

ಮುಗಂ ಕಣ್ಣುಂ ತುಱಿಂದಂಗ್ ಉಣರ್ನ್ದದಾಲೆ	ಮೊಗ ಕಣ್ಣು ತೆರೆದೆಚ್ಚರಾಗುತ್ತಲೆ
ಸುಕಮುಱ್ಱ್ ಸುಫೈಱಾಮುಕತ್ತೆಕಂಡ್	ಸೊಗವೇರ್ದ ಸುಫೈರಾಳ ಮೊಗವ ಕಂಡು
ಸೊರಣಚುಂಡ್ ಅನಕ್ಕಿಚ್ಚಿಱಿತ್ತುಂಕೊಂಡ್	ಚೆನ್ನವ ತುಟಿಯಲುಗಿ ನಗೆಯಕೊಂಡು 1
ಚಿಱಿತ್ತ್ ಎಳುನ್ದ್ ಇರಿನ್ದಪ್ಪಳ್ ಬಂದ್ ಇಶಾಱಾ	ನಗುತೆದ್ದು ಕುಳಿತಲ್ಲಿ ನಿಜದರಿವಾಗಿ
ಚಿಂಗಾರ ತಖ್ತ್ ಇದ್ ಎದೆಂಡ್ ಹೈಱಾಯ್	ಸಿಂಗರದ ಪರ್ಯಂಕವಿದೆಂಥ ಅಚ್ಚರಿ
ಸಿಱಿ ಚೇರೆ ಇರಿಪ್ಪೋಳ್ ಖಮರ್‌ಬಾನ್ ಅಲ್ಲಾ	ಸೇರಿಕುಳ್ಳಿರ್ಪಳು ಖಮರ್‌ಬಾನ್ ಅಲ್ಲ
ಸಿಫ್ತ್ತುಂ ಪಿನ್ ಜಮಾಲಿಯತ್ತ್ ಎಂದು ಚೊಲ್ಲಾನ್	ಇವಳ ಮಹಿಮೆ ಚೆಲುವಿಗೇನೆನ್ನಲಿ
ಕಱುಪ್ಪ್ ಬಂಡಿಱಗುಂ ಕುಶಲ್ ಮಶಕ್ಕುಂ	ಮುಡಿಯಗಪ್ಪಿಗೆ ದುಂಬಿ ರೆಕ್ಕೆ ಮೋಹಿಸೀತು
ಕರ ಕೆಟ್ಟಾಲ್ ಪಿರಿಚಂಗ್ ಯೆಳುಮಯಾಕುಂ	ತುರುಬು ಕಟ್ಟಿಗೆ ಹರಿಶಂಖ ಎಳಸು
ತಿಱಕತ್ತುಂ ಮುಕತ್ತಾಲ್ ಸಿರಾಜ್ ಒಳಿಕ್ಕುಂ	ಉರಿಶೋಭೆಮೊಗಕೆ ಬೆಳಕಡಗೀತು
ಸುಱುಮಕ್ಕಣ್ ಮಿಳಿತ್ತ್ ಬೆಟ್ಟಾಲೆ ನೋಕ್ಕುಂ	ಕಾಡಿಗೆತೊಡೆದ ಕಣ್ಣೋಟಕೆ ಕಡಿವ ಕೆಚ್ಚು 2
ಚಿಱಿ ಚುಂಡ್ ಪವಿಳತ್ತೆ ನಾಣಿಪ್ಪಿಕ್ಕುಂ	ಮೇಲ್ದುಟಿ ಹವಳವ ನಾಚಿಸುವುದು
ಚಿಱಿಕ್ಕೊಲ್ ಮಿನ್ನುಕಂ ಲೆಂಗುಂ ಸಿನ್ನುಂ ನಾಕ್ಕುಂ	ಸಿರಿನಗೆ ಮಿಂಚಿನ ತೆರ ಹಲ್ಲು ನಾಲಗೆ
ಚಿಱಪ್ಪೊತ್ತೆ ಕಳುತ್ತುಂ ಅದ್ಯಪ್ಪತ್ತೋಳುಂ	ಸಿಂಗಾರದ ಕೊರಳು ಅದ್ಭುತದ ತೋಳು
ಚೆಪ್ಪೊತ್ತೆ ಮುಲಯುಂ ಒಶುಕ್ಕಮಾಱುಂ	ದುಂಡಗೆ ಮೊಲೆಯೂ ಸೊಬಗಿನೆದೆ
ಸರ್ಜನಪ್ಪರಿಶ್ ಇವ ಕಂಡೆ ನೇರಂ	ಸಹಜಸುಂದರ ರೂಪ ಕಂಡ ವೇಳೆ
ತರಂಯೆಂದ್ ಯೆಂಡ್‌ಅಱಿಯಾ ಮುಶಿಪ್‌ಪಾರಂ	ತೆರವಾವುದಿವಳೆಂದು ಮನಮಸುಗಿತು
ಪಱಞ್ಞ್ ಪೊಂಜಿರಿಞ್ಞವಳ್ ಮಾರ'ನೋಡ್	ಸಿರಿ ನಗೆಯೊಳ್ ನುಡಿದಳು ಮಾರನಲ್ಲಿ
ಪರಿಶೋಡೆ ಚಿಱಿ ಪಿಂಬೆಂದ್ ಕೇಡ್	ಸಿರಿನಗೆ ಶೋಭೆ ಬೆನ್ನಲೇನು ಮಬ್ಬು 3
ಕೇಟಾಲುಂ ಮುಶಿಪ್ಪಾಲುಂ ಬಾಡಿಡಂಡ	ಮುದುಡದೆ ಬಾಡದೆ ನುಡಿಯಾಲಿಸು

ಕೇಟ್ಟುಕೊಳ್ ಯೆನ್ನೈಕದ ಯೇಜ್ಜುಮುಂಡಾಂ	ಕಥೆ ಬಹಳ ಉಂಟೆನ್ನ ನುಡಿಯ ಕೇಳು
ತೇಡಿ ಞಾನ್ ಶಜೆನೆಕಾಂಬತಿನ್	ಮನುಜನೊಬ್ಬನ ಕಾಂಬುದಕೆ ಹುಡುಕಿದೆ
ತೆಂಡಿಡ್ಡೈ ಪೆರಿಪ್ಪಂ ಬೈ ಕಂಡದ್ ಇನ್ನ್	ಹಲದಾರಿಗಳಲೆದು ಕಂಡೆನಿಂದು
ಪೀಡ ಯೆನ್ ಮನದಕತ್ತ್ ಉಳ್ಳತೊಂಡ್	ಪೀಡೆಯೊಂದೇ ಮನದಿ ಇಹುದು ಕಾಣ
ಪೇಟಿಕ್ಕಾನ್ ಅಖುವುಂ ಪಿತಾವುಂ ಉಂಡ್	ಬೆದರಲು ಇರುವರು ಅಣ್ಣ ಅಪ್ಪ
ಕೂಡುಂ ಜಿನ್ ಕುಲತ್ತಿಲ್ ಪರಿಕಳ್‌ಮೇಲ್ಮಾ	ಜಿನ್ ಕುಲದ ಕೂಟದಿ ಮೇಲ್ 'ಪರಿಜಿನ್ನು'
ಕೂಟ್ಟತ್ತಿಲ್ ಅರಶನ್‌ಯೆನ್ ಬಾವಯಾಮೇ	ಕೂಟದ ದೊರೆಯನ್ನ ತಂದೆಯಹನು 4

ಅನುವಾದ

ಸೌಂದರ್ಯದಲ್ಲಿ ಅತ್ಯುನ್ನತನಾದ ಬದರುಲ್ ಮುನೀರನ್ನು ಅವಳು ಅತ್ಯಂತ ನಯವಾದ ಮೆತ್ತೆಯ ಪರ್ಯಂಕದಲ್ಲಿ ಚಂದಕ್ಕೆ ಮಲಗಿಸಿದಳು. ಪ್ರೇಮತುಂಬಿದ ಆ ಸುಂದರಿ ಆತನ ಎದೆಯನ್ನೂ ಬೆನ್ನನ್ನು ತಡವಿದಳು. ಮುಗಿಲು ಸರಿದು ತಾರೆ ತೊಳಗುವಂತೆ ಆತ ಮುಖವನ್ನೂ ಕಣ್ಣನ್ನೂ ತೆರೆದು ಎಚ್ಚರಗೊಳ್ಳುತ್ತಾನೆ. ಕಣ್ಣಿಗೆ ಸುಖವನ್ನು ಕೊಡುವ ಸುಫೈರಳ ಮುಖವನ್ನು ನೋಡಿ ಆತ ಎದ್ದು ಕುಳಿತಾಗ ಬದರುಲ್ ಮುನೀರ್‌ಗೆ ತಾನು ಇರುವುದೆಲ್ಲಿ ಎಂಬ ಪ್ರಶ್ನೆ ಬಂತು. ಈ ಮನೋಹರವಾದ ಪರ್ಯಂಕ ಯಾವುದು ಎಂದು ಅಚ್ಚರಿಪಟ್ಟ. ಹತ್ತಿರ ಕುಳಿತ ಹುಡುಗಿ ಖಮರ್‌ಬಾನ್ ಅಲ್ಲವಲ್ಲ? ಇವಳ ಚೆಲುವು ಮತ್ತು ಮಹಿಮೆಯ ಬಗೆಗೆ ಏನು ಹೇಳಬಲ್ಲೆ? ತಲೆಗೂದಲ ಕಪ್ಪು ಬಣ್ಣ ನೋಡಿದರೆ, ದುಂಬಿಯ ರೆಕ್ಕೆಗಳೂ ಮೋಹಗೊಂಡಾವು. ತಲೆಗೂದಲ ತುರುಬುಕಟ್ಟಿ ಇರಿಸಿದ ಅಂದ ನೋಡಿದರೆ ಹುರಿಶಂಖವು ಹೆಚ್ಚು ತಗ್ಗಿ ಬಗ್ಗೀತು. ಮುಖದಲ್ಲಿ ಉರಿಯುವ ತೇಜಸ್ಸನ್ನು ನೋಡಿದರೆ ದೀಪ ಓಡಿ ಅಡಗುತ್ತದೆ. ಸುರುಮ (ಕಾಡಿಗೆ)ತೊಡೆದ ಕಣ್ಣುಗಳ ಕಡಿಯುವ ಕೆಚ್ಚಿರುವ ನೋಟ! ಇವಳ ತುಟಿಗಳು ಹವಳವನ್ನು ನಾಚಿಸಲು ಬರುವಂಥವು. ನಕ್ಕರೆ, ಮಿಂಚು ಹೊಡೆಯುವ ಹಾಗೆ ಹಲ್ಲು, ನಾಲಗೆ ಹೊಳೆಯುತ್ತವೆ. ಅಲಂಕಾರ ತುಂಬಿದ ಕುತ್ತಿಗೆ, ಅದ್ಭುತವೆನಿಸುವ ಚೆಲುವಿನ ತೋಳುಗಳು, ಚೆಪ್ಪು (ಉರುಟು ಭಂಡಾರ ಪಾತ್ರ) ಹೋಲುವ ಮೊಲೆಗಳು, ಚೆಲುವು ಸೂಸುವ ಎದೆ... ಸಹಜವಾದ ಈ ಆಕೃತಿ ನೋಡಿದಾಗ ಈಕೆ ಯಾವ ಬಗೆಯವಳು ಎಂದರಿಯದೆ ಮನಸ್ಸಿನಲ್ಲಿ ಕಸಿವಿಸಿಹೊಂದಿದ.

ಆಗ ಅವಳು ಮಂದಹಾಸ ಬೀರುತ್ತ ಆ ಮಾರಾಂಗನಲ್ಲಿ ಹೀಗೆ ಮಾತನ್ನು ತೊಡಗಿದಳು – 'ಮೋಹಕವಾದ ಮಂದಹಾಸದ ಬಳಿಕ ಏನು ಅಸಮಾಧಾನ ಆಯಿತಪ್ಪ? ಆ ರೀತಿ ಅಸಮಾಧಾನ, ಮನಸ್ಸಿನಲ್ಲಿ ಆತಂಕ ಉಂಟಾಗಿ ಬಾಡದಿರು. ನನ್ನ ಕತೆಯನ್ನು ತುಂಬ ಹೇಳಲಿಕ್ಕಿದೆ. ಆಲಿಸು. ನಾನು ಮನುಷ್ಯವಂಶದ ಒಬ್ಬನಿಗಾಗಿ ಹುಡುಕುತ್ತ ಬಹಳವಾಗಿ ಅಲೆದವಳು. ಆತನನ್ನು ಪಡೆಯಲು ದಾರಿಸಿಕ್ಕಿರುವುದು ಇವತ್ತೇ. ನನ್ನ ಮನಸ್ಸಿನಲ್ಲಿ ಪೀಡೆ ಎಂದು ಹೇಳಿಕೊಳ್ಳಲು ಇರುವುದು ಒಂದು ಮಾತ್ರ. ನನಗೆ ಹೆದರಲು ಸಹೋದರ ಮತ್ತು ತಂದೆ ಇದ್ದಾರೆ. ಜಿನ್ ವಂಶದಲ್ಲಿ ಶ್ರೇಷ್ಠ ವರ್ಗವಾದ 'ಪರಿಜಿನ್'ಗಳಲ್ಲಿ ಸೇರಿದವಳು ನಾನು. ಪರಿಜಿನ್‌ಗಳಿಗೆ ನನ್ನ ತಂದೆ ಚಕ್ರವರ್ತಿ.

ಮಾಪ್ಪಿಳ ಪಾಟಿನ ಬಗೆಗೆ

ಮಲಬಾರಿನ ಮುಸ್ಲಿಮರನ್ನು 'ಮಾಪ್ಪಿಳ' ಎಂದು ಕರೆಯುವುದು ವಾಡಿಕೆ. ತೀರ ಈಚಿನ ವರೆಗೂ ಕೇರಳದ ಯಹೂದ್ಯರನ್ನೂ ಕ್ರೈಸ್ತರನ್ನೂ ಆ ಹೆಸರಿನಲ್ಲಿ ಗುರುತಿಸುವುದಿತ್ತು. ಈಗ ಕೇರಳೀಯ ಮುಸ್ಲಿಮರು ಎಂಬ ಅರ್ಥದಲ್ಲಿ 'ಮಾಪ್ಪಿಳ' ಎಂದು ಕರೆಯತೊಡಗಿದ್ದಾರೆ.

ಗಂಡ, ನವವರ ಎಂಬಂಥ ಅರ್ಥದಲ್ಲಿ ಪ್ರಯೋಗಿಸುವ ಒಂದು ದ್ರಾವಿಡ ಶಬ್ದ 'ಮಾಪ್ಪಿಳ'. ಈ ಅಭಿಪ್ರಾಯದಲ್ಲೆ ಮುಂದೆ ಅದು ಸಮುದಾಯದ ನಾಮವಾಗಿ ಬಂದಿರಬಹುದು. ಕೇರಳೀಯ ವನಿತೆಯರನ್ನು ವಿವಾಹವಾದವರು ಎಂಬ ಗ್ರಹಿಕೆಯ ಕಾರಣವೆ ಯಹೂದ್ಯರಿಗೂ, ಕ್ರೈಸ್ತರಿಗೂ, ಮುಸ್ಲಿಂಗಳಿಗೂ ಆ ಹೆಸರು ಉದ್ಭವಿಸಿರುವುದಾಗಿರಬೇಕು. ಆ ಮೂರು ಮತಗಳು ಅನ್ಯದೇಶಗಳಿಂದ ಬಂದವುಗಳಷ್ಟೆ?

ಇಲ್ಲಿನ ಮುಸ್ಲಿಂಗಳಿಗೆ ತಮ್ಮದಾದ ಒಂದು ಲಿಪಿ ಪದ್ಧತಿ ಇತ್ತು. ಇದಕ್ಕೆ 'ಅರಿಮಲಯಾಳಂ' ಎಂದು ಹೆಸರು. ಅರಬಿ ಲಿಪಿಮಾಲೆಯಲ್ಲಿ ಸಣ್ಣ ಪುಟ್ಟ ಬದಲಾವಣೆ ಮಾಡಿಕೊಂಡು ಮಲಯಾಳಂ ಬರೆಯುವ ರೀತಿ ಇದು. ಈ ಲಿಪಿಮಾಲಿಕೆಯಿಂದ ಅರಬಿಯ ಹಾಗೂ ಮಲಯಾಳದ ಅಕ್ಷರಗಳನ್ನು ಬರೆಯಲು ಸಾಧ್ಯವಿದೆ.

ಈ ಲಿಪಿ ಪದ್ಧತಿ ರೂಪಗೊಂಡುದು ಯಾವಾಗ ಎಂದು ನಿಖರವಾಗಿ ಹೇಳಬರುವುದಿಲ್ಲ. ಕನಿಷ್ಠಪಕ್ಷ ಐನೂರುವರ್ಷಗಳ ಹಳಮೆ ಇದಕ್ಕಿದೆ. ಮಲಬಾರಿನಲ್ಲೂ, ತಿರುವಾಂಕೋಡಿನಲ್ಲೂ, ಲಕ್ಷದ್ವೀಪದಲ್ಲೂ ಈ ಲಿಪಿ ಮಾಲಿಕೆ ಪ್ರಚಾರದಲ್ಲಿತ್ತು. ಅರಬಿಮಲಯಾಳ ಲಿಪಿಯಲ್ಲಿ ಮಾಸಪತ್ರಿಕೆಗಳೂ, ಗ್ರಂಥಗಳೂ ಹೊರಬಂದಿದ್ದವು. ಈಗಲೂ ಮಲಬಾರಿನಲ್ಲಿ ಒಂದು ಒಳ್ಳೆಯ ಶೇಕಡಾ ಮಾನದಲ್ಲಿ ಮತಪಾಠಶಾಲೆಗಳ ಬೋಧನೆಮಾಧ್ಯಮ 'ಅರಬಿಮಲಯಾಳ'ವೇ ಆಗಿದೆ.

ಅರಬಿ– ಮಲಯಾಳದಲ್ಲಿ ದಾಖಲಾಗಿ ಇರುವ ಸಾಹಿತ್ಯವನ್ನು 'ಅರಬಿ–ಮಲಯಾಳ ಸಾಹಿತ್ಯ' ಎಂದು ಕರೆಯುತ್ತಾರೆ. ಇದರಲ್ಲಿ ಗದ್ಯವೂ ಪದ್ಯವೂ ಇವೆ. ಇದರಲ್ಲಿರುವ ಪದ್ಯ ಸಾಹಿತ್ಯವನ್ನೆ ವ್ಯಾಪಕವಾಗಿ 'ಮಾಪ್ಪಿಳ ಪಾಟು' ಎಂಬ ಹೆಸರಿನಿಂದ ಗುರುತಿಸುವುದು.

ಮಾಪ್ಪಿಳ ಪಾಟಿನಲ್ಲಿ ಸಂಗೀತಕ್ಕೇ ಆದ್ಯತೆ. ಒಂದು ಪಾಟು ಮಾಪ್ಪಿಳ ಪಾಟು ಹೌದೇ ಎಂಬುದರ ನಿರ್ಣಯವಾಗುವುದು ಅದನ್ನು ಹಾಡಿ ಕೇಳಿಸಿದಾಗಲೇ.

ಮಾಪ್ಪಿಳ ಪಾಟುಗಳ ಧಾಟಿಯ ತಾಳಕ್ರಮಕ್ಕೆ 'ಇಶಲ್' ಎಂದು ಹೆಸರು. ತೊಂಗಲ್, ಕೊಂಬ್, ಕಪ್ಪಪ್ಪಾಟು, ಒಪ್ಪನಚಾಯಲ್, ಒಪ್ಪನ ಮುಜೆಕ್ಕಂ, ವಿರುತ್ತಂ ಮೊದಲಾದ ಹೆಸರುಗಳಿಂದ ಗುರುತಿಸುವ ನೂರಾರು 'ಇಶಲು'ಗಳಿವೆ. ಆರಂಭಿಕಕಾಲದ ಇಶಲುಗಳಲ್ಲಿ ಅರಬಿಗಾನರೀತಿಯ ಪ್ರಾಧಾನ್ಯ ಬಹಳ ಪ್ರಕಟವಾಗಿಯೆ ಕಾಣಸಿಗುತ್ತಿತ್ತು. ಹಳೆಯ ಪಾಟುಕೃತಿಯಾದ 'ಮುಹ್‌ಯುದ್ದೀನ್‌ಮಾಲ' ರಚನೆಗೊಂಡದ್ದು ಅರಬಿ ಗಾನರೀತಿಯಲ್ಲಿ. ಅರಬಿ ಗಾನರೀತಿಯಿಂದ ಮುಕ್ತಗೊಳ್ಳಲು ಪಾಟುಗಳಿಗೆ ಬಹಳ ಕಾಲ ಬೇಕಾಗಿಬರಲಿಲ್ಲ.

ಇಶಲುಗಳ ಆಧಾರ ಹೆಚ್ಚಿನ ವೇಳೆಯೆಲ್ಲ ದ್ರಾವಿಡಗಾನ ರೀತಿಗಳೇ ಆಗಿವೆ. ಉದಾಹರಣೆಗೆ 'ತೊಂಗಲ್'. ಈ ಇಶಲ್‌ಗೆ 'ಮಾವೇಲಿ ನಾಡು ವಾಣೀಡುಂ ಕಾಲಂ' ಎಂಬ ಮಟ್ಟಿನಲ್ಲೂ, 'ಆದಿ ಅಂತಂ' ಎಂಬ ಇಶಲ್‌ಗೆ 'ಓಮನ ಕುಟ್ಟನ್ ಗೋವಿಂದನ್' ಎಂಬ ಮಟ್ಟಿನಲ್ಲೂ 'ಪುಕಯಿನಾರ್' ಎಂಬ ಇಶಲ್‌ಗೆ'ವಂಚಿಪ್ಪಾಟಿನ' ಧಾಟಿಯಲ್ಲೂ ಸಾದೃಶ್ಯವಿದೆ.

ಅರಬಿ ಹಾಡಿಕೆ ಧಾಟಿಯೂ, ದ್ರಾವಿಡ ತಾಳವೂ 'ಮಾಪ್ಪಿಳ ಪಾಟಿ'ನಲ್ಲಿ ಸಮನ್ವಯಗೊಂಡಿವೆ.

ಸಂಗೀತಕ್ಕೆ ಬಹುವಾದ ಪ್ರಾಧಾನ್ಯವಿರುವುದರಿಂದ ಮಾಪ್ಪಿಳ ಪಾಟಿನಲ್ಲಿ ಪ್ರಾಸನಿಯಮ ಕಟ್ಟುನಿಟ್ಟಿನಿಂದ ಪಾಲನೆಗೊಳ್ಳುತ್ತದೆ. ಇದನ್ನು ಸಾಮಾನ್ಯವಾಗಿ 'ಕಂಬಿಯುಂ ಕಟುತ್ತುಂ' (ಕಂಬಿ ಮತ್ತು ಕತ್ತು) ಎಂದು ಕರೆಯುತ್ತಾರೆ. ಪಾಟು ಆಗುವುದಕ್ಕೆ ಕಂಬಿಯೂ ಕತ್ತೂ ಹೊಂದಿಕೊಳ್ಳಬೇಕೆಂದು ಮಾಪ್ಪಿಳಗಳು ಹೇಳುವುದುಂಟು. ಕಂಬಿ, ಕತ್ತು, ಬಾಲಕಂಬಿ (ವಾಲ್ಕಂಬಿ), ಬಾಲದ ಮೇಲಿನ ಕಂಬಿ (ವಾಲುಮ್ಮಲ್ ಕಂಬಿ)ಇವು ಮಾಪ್ಪಿಳಪಾಟ್ಟಿನಲ್ಲಿರುವ ಮುಖ್ಯವಾದ ಪ್ರಾಸವ್ಯವಸ್ಥೆ.

ಅದ್ಯಕ್ಷರ ಪ್ರಾಸವೇ 'ಕಂಬಿ'. 'ಮಾತಿನ (ಮೊಟೆಯ) ಒಂದೊಂದು ಅರ್ಧಸಾಲಿನಲ್ಲೂ ಅದ್ಯಕ್ಷರ ಸಮಾನವಾಗಿರಬೇಕು' ಎಂಬುದು ಕಂಬಿಯ ನಿಬಂಧನೆ. ಇದು ಪಾದಾರ್ಧಾದಿಪ್ರಾಸವೆ ಆಗಿದೆ. ಮಲಯಾಳ ಸಾಹಿತ್ಯದಲ್ಲಿ ಬರುವ ಹಳೆಯ 'ಪಾಟು ಸಾಹಿತ್ಯ' ದಲ್ಲಿ ಕಾಣಿಸುವ 'ಮೋನ'ಎಂಬುದು ಇದೇ.

'ನಾಲಡಿ' (ನಾಲ್ಕು ಸಾಲುಗಳ) ರಚನೆಗಳಲ್ಲಿ ಎಲ್ಲಾ ಮಾತಿನ ಎರಡನೆ ಅಕ್ಷರ ಸಮಾನವಾಗಿರಬೇಕು ಎಂಬ ನಿಯಮಕ್ಕೇ ಹೆಸರು 'ಕಟುತ್ತು' (ಕತ್ತು). ಒಂದು ಬಗೆ ದ್ವಿತೀಯಾಕ್ಷರ ಪ್ರಾಸವೇ. ಪಾಟು ಸಾಹಿತ್ಯದಲ್ಲಿ 'ಪದುಕ'ಎನ್ನುವುದು ಈ ನಿಬಂಧನೆಯನ್ನೇ.

ಅತ್ಯಾಂಕ್ಷರಗಳಿಗೆ ಬರುವ ಸಮಾನತೆಯೇ 'ವಾಲ್‌ಕಂಬಿ' (ಬಾಲಕಂಬಿ). ಅರಬಿ ಗಾನಕೃತಿಗಳಲ್ಲಿ ಈ ಅಂತ್ಯಪ್ರಾಸ ಸರ್ವಸಾಮಾನ್ಯವಾಗಿ ಕಂಡುಬರುತ್ತದೆ.

ಒಂದು ಖಂಡ ಕೊನೆಗೊಳ್ಳುವ ಪದವೊ ಪದಸಮೂಹವೊ ಪುನರಾವರ್ತನೆಯೊಂದಿಗೆ ಮುಂದಿನ ಖಂಡ ತೊಡಗುವುದ್ದರೆ ಆ ಶಿಸ್ತಿಗೆ ಹೆಸರು 'ವಾಲುಮ್ಮಲ್‌ಕಂಬಿ' (ಬಾಲದ ಮೇಲಿನ ಕಂಬಿ).

ತಮಿೞು ಕೃತಿಗಳಲ್ಲೂ, ಮಲಯಾಳದ ಇತರ ಪಾಟು ಸಾಹಿತ್ಯದಲ್ಲೂ ಭಾಷಾಚಂಪೂ (ಮಲಯಾಳ) ಕೃತಿಗಳಲ್ಲೂ (ಸಂಸ್ಕೃತ ಸ್ತೋತ್ರ ಸಾಹಿತ್ಯದಲ್ಲೂ) ಕಾಣಿಸುವ 'ಅಂತಾದಿ'ಯೇ ಈ 'ವಲುಮ್ಮಲ್ ಕಂಬಿ'.

ತಮಿೞು–ಅರಬಿ ಪರಂಪರೆಯ ಪ್ರಾಸನಿಯಮಗಳನ್ನೆ ಮಾಪ್ಪಿಳ ಪಾಟುಕಾರರು ಮುಂದುವರಿಸಿ ತಂದಿರುವುದು.

ಭಾಷೆಗೆ ಸಂಬಂಧಿಸಿ ಅನೇಕಾನೇಕ ಪ್ರತ್ಯೇಕತೆಗಳು ಈ ಗಾನಶಾಖೆಯಲ್ಲಿವೆ. ಅರಬಿ, ಸಂಸ್ಕೃತ, ತಮಿೞು, ಹಿಂದುಸ್ಥಾನಿ, ಪಾರ್ಸಿ, ಕನ್ನಡ ಮೊದಲಾದ ಭಾಷೆಗಳ ಶಬ್ದಗಳನ್ನು ಸುಭವಾಗಿ ಮಾಪ್ಪಿಳ ಪಾಟಿನಲ್ಲಿ ಕಾಣಬಹುದು. ಈಣಂ (ರಾಗ), ತಾಳ, ಪ್ರಾಸ ಇವುಗಳೊಂದಿಗೆ ಸೇರಿಹೋಗಲು ಯಾವ ಭಾಷೆಯಿಂದಲೂ ಮಾತನ್ನು ಸ್ವೀಕರಿಸಬಹುದೆಂಬುದೆ ಪಾಟು ರಚನಕಾರರ ದಾರಿ. ಆದರೂ ಈ ಇತರ ಭಾಷೆಗಳಲ್ಲಿ ಅರಬಿ ಭಾಷೆಗೇ ಹೆಚ್ಚು ಪ್ರಾಧಾನ್ಯ. ಮುಖ್ಯವಾದ ಹಲವು ಕೃತಿಗಳು ಇರುವುದು ಸಂಕರ ಭಾಷೆಯಲ್ಲಾಗಿದೆ. ಅರಬಿ ಪದಗಳೂ ವ್ಯಾಕರಣವೂ ಮಲಯಾಳದೊಂದಿಗೆ ಬೆರೆತುಕೊಂಡು ಒಂದು ಬಗೆ 'ಸಮಾನಾಂತರ ಮಣಿಪ್ರವಾಳಂ' ಶೈಲಿ ಮೋಯಿನ್‌ಕುಟ್ಟಿ ವೈದ್ಯರ (1852–1892) ಮತ್ತು ಇತರರ ರಚನೆಗಳಲ್ಲಿ ಕಾಣಬಹುದು. ಬಾಯ್ದರೆ ಧಾರೆಗೂ ಈ ಪಾಟುಗಳಲ್ಲಿ ಗಣನೀಯ ಸ್ಥಾನ ದೊರೆತಿದೆ.

ವಿಶುದ್ಧರನ್ನು ಪ್ರಕೀರ್ತಿಸುವ 'ಮಾಲಪ್ಪಾಟು'ಗಳು, ವಿಶುದ್ಧಯುದ್ಧಗಳನ್ನು ವರ್ಣಿಸುವ 'ಪಡಪ್ಪಾಟು'ಗಳು, ಧಾರ್ಮಿಕ ನಿರ್ದೇಶಗಳನ್ನು ಒಳಗೊಂಡ 'ಉರುದಿ'ಗಳು, ಸ್ತುತಿಪ್ರಧಾನವಾದ 'ವಿರುತ್ತಂ'ಗಳು, ಕಥೆಗಳೂ, ವಿಶುದ್ಧ ಚರಿತೆಗಳೂ ಒಳಗೊಂಡ 'ಕಿಸ್ಸ'ಗಳು, ಪ್ರೇಮವನ್ನೂ ವೀರತ್ವವನ್ನೂ ಆಧರಿಸಿ ರಚಿತವಾದ 'ಕೆಸ್ಸುಗಳು, 'ಕತ್ತುಪಾಟು' (ಪತ್ರಬರಹ ಪದ್ಯ)ಗಳು, 'ಕಲ್ಯಾಣಪಾಟು'ಗಳು(ಮದುವೆ ಹಾಡುಗಳು) ಎಂದು ಹಲವು ಒಳಪ್ರಭೇದಗಳೂ ಈ ಪದ್ಯಶಾಖೆಯಲ್ಲಿ ಇವೆ.

'ಮಾಲಪಾಟು'ಗಳಿಗೆ ಆರಂಭವನ್ನು ಗುರುತಿಸಿದುದು 'ಮಹ್‌ಯುದ್ದೀನ್ ಮಾಲ'ಯಾಗಿದೆ. ಅದು ಅರಬಿ ಮಲಯಾಳದ ಮೊದಲನೆ ಪದ್ಯ ಕೃತಿ ಎಂದೂ ನಂಬಲಾಗುತ್ತಿದೆ. ಗ್ರಂಥಕಾರ ಕೋಟಿಕೋಡಿನವಾರದ ಖಾಝಿ ಮುಹಮ್ಮದ್, ರಚನಾಕಾಲ ಕೊಲ್ಲವರ್ಷ 782 (ಎ.ಡಿ1607)ಎಂದು ಈ ಕೃತಿಯಲ್ಲಿ ನಮೂದಾಗಿದೆ. ಜಿಲಾನಿಯ ಮುಹ್‌ಯುದ್ದೀನ್ ಶೇಖನ ಜೀವನಚರಿತ್ರೆಯನ್ನೂ ಅದ್ಭುತ ಸಾಹಸಗಳನ್ನೂ ಕೋದು ರಚಿಸಿದುದು 'ಮುಹ್‌ಯುದ್ದೀನ್ ಮಾಲ'. 'ಬದರ್‌ಮಾಲ', 'ರಿಫಾಈ ಮಾಲ', 'ನಫಿಸತ್ತು ಮಾಲ', 'ಮಞ್ಞಕ್ಕುಳಂ ಮಾಲ', 'ಮಂಬುಱಂ ಮಾಲ', 'ಮಲಪ್ಪುಱಂ ಮಾಲ' ಮೊದಲಾದವು ಇತರ ಮುಖ್ಯವಾದ ಮಾಲಾರಚನೆಗಳು.

ಅರಬಿಮಲಯಾಳದಲ್ಲಿ ಐವತ್ತರಷ್ಟು 'ಪಡಪ್ಪಾಟು'(ಸಮರಗೀತ)ಗಳಿವೆ. ಅವುಗಳಲ್ಲಿ ಮುಖ್ಯವಾದವುಗಳಾದ 'ಬದರ್ ಪಡಪ್ಪಾಟು', ಉಹದ್ ಪಟಪ್ಪಾಟು', 'ಮಕ್ಕಂ ಫತ್‌ಹ್', 'ಘುತುಹುಶ್ಶೋಂ', 'ಹುನೈನ್ ಪಡಪ್ಪಾಟು', 'ಖಂದಕ್ ಪಡಪ್ಪಾಟು' ಮೊದಲಾದ ಕೃತಿಗಳ ಹೆಸರುಗಳೇ ಅವು ಮುಸ್ಲಿಮರ ಆರಂಭ ಕಾಲದ ಯುದ್ಧಗಳ ಕುರಿತ ವರ್ಣನೆ ಎಂದು ಸೂಚಿಸುತ್ತವೆ.

ಅರಬಿಮಲಯಾಳದ ಅತ್ಯಂತ ಮುಖ್ಯ ಕವಿ ಮೋಯಿನ್ ಕುಟ್ಟಿ ವೈದ್ಯರು. ಇಂದಿನ ಮಲಪ್ಪುರಂ ಜಿಲ್ಲೆಯ ಕೊಂಡೋಟ್ಟಿ ಎಂಬಲ್ಲಿ 1852ರಲ್ಲಿ ಅವರು ಜನಿಸಿದರು. ತನ್ನ ಇಪ್ಪತ್ತರ ಹರೆಯದಲ್ಲಿ ಬರೆದ ಅವರ ಮೊದಲ ಕೃತಿ 'ಬದರುಲ್‌ಮುನೀರ್ – ಹುಸ್ನುಲ್ ಜಮಾಲ್' (1872) ಪ್ರೇಮ ಎಂಬ ವಿಷಯವನ್ನು ಈ ಸಾಹಿತ್ಯಶಾಖೆಗೆ ದಾಟಿಸಿ ಬಿಟ್ಟಿತು. ಬದರ್ ಪಡಪ್ಪಾಟು, ಉಹದು ಪಡಪ್ಪಾಟು, ಹಿಜ್‌ರ, ಮಲಪ್ಪುರಂ ಪಡಪ್ಪಾಟು ಮೊದಲಾದ ವೈದ್ಯರ್ ಕೃತಿಗಳು ಅರಬಿಮಲಯಾಳದ ಛಂದಸ್ಸಿಗೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟವು. ತನ್ನ ನಲ್ವತ್ತರ ಹರೆಯದಲ್ಲಿ (1892 ರಲ್ಲಿ) ಅವರು ತೀರಿಕೊಂಡರು.

'ನೂಲ್‌ಮಲೆ'ಯನ್ನೂ 'ಕಪ್ಪಪ್ಪಾಟ'ನ್ನೂ ರಚಿಸಿದ ಕುಞ್ಞಾಯಿನ್ ಮುಸ್ಲಿಯಾರ್, ತತ್ತ್ವ ಚಿಂತನೆ ಮುಖ್ಯವಸ್ತುವಾಗಿರುವ ಪಾಟುಗಳ ಕರ್ತಾರರಾದ ಅಬ್ದುಲ್‌ಖಾದರ್ ಮಸ್ತಾನ್, 'ಫುತುಹುಶ್ಶಾಮ್'ನ ರಚಯಿತ ಚೇಕುವಾಯಿ ಪರೀಕ್ಕುಟ್ಟಿ, 'ಚಾಕ್ಕೀರಿ ಬದರ್' ರಚಿಸಿದ ಚಾಕ್ಕೀರಿ ಮೊಯ್ದೀನ್ ಕುಟ್ಟಿ, 'ಕರ್ಬಲ'ದ ರಚನಕಾರ ಮುಂಡಂಬ್ರ ಉಣ್ಣಿಮುಹಮ್ಮದ್, 'ಸಫಲಮಾಲ' ರಚಿಸಿದ ಶುಜಾಯಿ ಮೊಯಿದು ಮುಸ್ಲ್ಯಾರ್, ಜನಪರ ಗಾನಗಳ ಕರ್ತಾರರಾದ ಪುಲಿಕ್ಕೋಟ್ಟಿಲ್ ಹೈದರ್ ಮೊದಲಾದವರು 'ಮಾಪ್ಪಿಳ ಪಾಟು'ಗಳ ಪ್ರಧಾನ ರಚನಕಾರರು. ಕೆಲ ಮಹಿಳೆಯರೂ ಪಾಟು ಕಟ್ಟಿರುವುದಿದೆ. ಪಿ.ಕೆ.ಹಲೀಮ, ವಿ. ಆಯಿಶಕ್ಕುಟ್ಟಿ, ಕುಂಡಿಲ್ ಕುಞ್ಞಾಮಿನ ಮೊದಲಾದವರ ಪಾಟುಗಳಿಗೆ ಒಳ್ಳೆಯ ಪ್ರಚಾರ ದೊರಕಿದೆ.

'ಮಾಪ್ಪಿಳಪಾಟು' ಒಂದು ಸಮೂಹದ ಬಿಡವಿನ ವೇಳೆಯ ವಿನೋದ ಉಪಾಧಿ ಮಾತ್ರವಲ್ಲ. ಅವರ ನಿತ್ಯ ಜೀವನದ ಸಂದರ್ಭಗಳೊಂದಿಗೆ ಈ ಪಾಟುಗಳಿಗೆ ಹತ್ತಿರದ ಸಂಬಂಧವಿದೆ. ಪ್ರಕೃತಿವಿಕೋಪದಿಂದಾಗುವ ಹಾನಿ, ಸಾಂಕ್ರಾಮಿಕ ಕಾಯಿಲೆ ಇತ್ಯಾದಿಯನ್ನು ನಿವಾರಿಸಲು 'ನಡಪ್ಪು ಮೌಲೂದ್' ಏರ್ಪಡಿಸುವುದು ಮಾಪ್ಪಿಳಗಳ ನಡುವೆ ಪ್ರಚಲಿತವಿತ್ತು. ರಾತ್ರಿ ಹೊತ್ತು ಮಸೀದಿಯಿಂದ ದೀಪ ಹಿಡಿದು ಒಂದು ಗುಂಪು ಸ್ತುತಿಗೀತಗಳನ್ನು ಹಾಡುತ್ತ ಗ್ರಾಮದ ಸುತ್ತ ನಡೆಯುವುದೇ 'ನಡಪ್ಪು ಮೌಲೂದ್'. ಪ್ರವಾದಿ ಜನನಮಾಸದಲ್ಲಿ ಮಸೀದಿಯಲ್ಲೂ, ಮನೆಗಳಲ್ಲೂ 'ಮೌಲೂದ್' (ಸ್ತುತಿಕೀರ್ತನೆಯ ಆಲಾಪನೆ) ನಡೆಯುತ್ತದೆ. ಗತಿಸಿದ ಸಿದ್ಧರನ್ನು ತೃಪ್ತಿಪಡಿಸುವುದಕ್ಕೆ ಹಾನಿಗಳಿಂದ ರಕ್ಷಣೆ ಪಡೆಯುವುದಕ್ಕೆ ಇರುವ ಇನ್ನೊಂದು ಪದ್ಧತಿ 'ಕುಾತ್ತೀಬ್'. ಇದರಲ್ಲಿ ಕೆಲವೊಮ್ಮೆ ನಾಲಿಗೆಗೆ ಸೂಜಿ ಹೊಗಿಸುವುದು, ಹೊಟ್ಟೆಗೆ ತಿವಿದು ಗಾಯಮಾಡುವುದು ಇತ್ಯಾದಿಗಳು ಇರುವುದುಂಟು. 'ಕುಾತ್ತೀಬ್'ನ ಚಡಂಗಗಳಲ್ಲಿ ಒಂದು ಸ್ತುತಿಗೀತ ಹಾಡಿಕೆಯಾಗಿರುತ್ತದೆ.

ಸಿದ್ಧರ, ಬಲಿದಾನಗೈದವರ ವಾರ್ಷಿಕ ಸ್ಮರಣ ದಿನಗಳೇ 'ನೇರ್ಚ' ಎಂದು ಹೆಸರಾದ ಆಚರಣೆ. 'ನೇರ್ಚ'ಗಳಲ್ಲೂ ಸಾವಿಗೆ ಸಂಬಂಧಿಸಿದ ಕೆಲ ಆಚರಣೆಗಳಲ್ಲೂ ಗೀತ ಗಾಯನ ನಡೆಯಲು ಇರುತ್ತದೆ. ಹೆರಿಗೆ, ಗೃಹಪ್ರವೇಶ, ಮದುವೆ, ಚೇಲಾಕರ್ಮ (ಸುನ್ನತು), ಬಿತ್ತನೆ, ನಾಟಿ, ಕೊಯ್ಲು ಇವುಗಳ ವೇಳೆಯೂ ಮೌಲೂದ್ ಅಥವಾ ಸ್ತುತಿಗಳು ಅಥವಾ ಪಾಟುಗಳನ್ನು ಕಾಣಬಹುದು.

ಮದುವೆ ಸಮಾರಂಭದಲ್ಲಿ ಪ್ರಾಧಾನ್ಯ ಪಾಟಿಗೆ. ಮದುವೆ ಮನೆಯಲ್ಲಿ ಒಟ್ಟು ಸೇರಿದವರ ವಿನೋದಕ್ಕಾಗಿ ಗಾಯಕ ಸಂಘಗಳು ಹಾಡುವ 'ಕಲ್ಯಾಣಪ್ಪಾಟು' ಒಂದು ಬಗೆ. ನವವರನನ್ನು (ಪುದಿಯಾಪ್ಪಿಳ) ಭೇಡಿಸಿ ಜತೆಗಾರರು ಕೈ ಮುಟ್ಟಿ ಹಾಡುವ 'ಒಪ್ಪನ ಪಾಟು'ಗಳು ಇನ್ನೊಂದು ಬಗೆ. ವಧುವನ್ನು (ಪುದಿಯ ಪೆಣ್ಣು) ಕೊಂಡಾಡುವ, ಜತೆಗಾತಿಯರು ಕೈತಟ್ಟಿಯೂ ಶರೀರ ಚಲನೆ ಮೂಲಕವೂ ಹಾಡುವ 'ಒಪ್ಪನ ಪಾಟು'ಗಳು ಮತ್ತೊಂದು ಬಗೆ. 'ಪುದಿಯಾಪ್ಪಿಳ' ಭಾರ್ಯಾಗೃಹಕ್ಕೆ ಹೋಗುವಾಗಲೂ, 'ಪುದಿಯ ಪೆಣ್ಣು' ಭರ್ತೃಗೃಹಕ್ಕೆ (ಪುದುಕ್ಕಂ) ಹೋಗುವಾಗಲೂ ದಾರಿಯುದ್ದಕ್ಕೂ ಹಾಡುವ 'ಪಾಟು'ಗಳು ಮಗದೊಂದು ಬಗೆ. ಹೀಗೆ ಸರ್ವತ್ರ ಪಾಟುಮಯ.

ತೆಪ್ಪ ಹುಟ್ಟು ಹಾಕುವಾಗ, ಬೀಡಿ ಕಟ್ಟುವಾಗ, ದೋಣಿ ಹುಟ್ಟು ಹಾಕುವಾಗ, ಎತ್ತಿನಗಾಡಿ ನಡೆಸುವಾಗ ಮಾಪ್ಪಿಳಗಳು ಹಾಡುವುದುಂಟು. ಆಗಲೆಲ್ಲ ಪಾಟುಗಳು 'ವೇಲಪ್ಪಾಟು' (ಶ್ರಮಿಕ ಹಾಡು)ಗಳಾಗಿ ಕೂಡ ಗಣನೆಗೆ ಬರುತ್ತವೆ. ದಫ್‌ಮುಟ್ಟ್ (ಡಪ್ಪುಬಾರಿಸು), 'ಅಱವಾನಕ್ಕಳಿ', ಕೋಲ್‌ಕ್ಕಳಿ (ಕೋಲಾಟ) ಮೊದಲಾದ ಮಾಪ್ಪಿಳ ಕಲೆಗಳಲ್ಲೂ ಪಾಟುಗಳಿವೆ. ಪಾಟು ಪ್ರಾಧಾನ್ಯ ಪಡೆಯದ ಒಂದು ಮಾಪ್ಪಿಳ ಕಲೆಯೂ ಇಲ್ಲ. ಮತ್ತೆ ತಾಯಂದಿರ ವಾತ್ಸಲ್ಯದ ಸಲೆಯೊಡೆದು ಹರಿದು ಬರುವ ಜೋಗುಳ ಪಾಟು (ತಾರಾಟ್ಟು ಪಾಟು)ಗಳು ಧಾರಾಳ. ಮಾಪ್ಪಿಳ ಜನರು ಎಂದೆಂದಿಗೂ ಹಾಡುಗಳಿರುವ ವರ್ಗದವರೇ ಆಗಿದ್ದರು.

ಏಕಾಂತದ ಒಬ್ಬರ ಮೌನ ಓದಿಗೊ, ಗಟ್ಟಿಯಾಗಿ ಓದುವುದಕ್ಕೊ ವಸ್ತುವಾಗಲು ಅಲ್ಲ ಹೆಚ್ಚಿನ ವೇಳೆ ಮಾಪ್ಪಿಳ ಪಾಟು ರಚನೆಗೊಳ್ಳುವುದು. ಯಾವುದಾದರೂ ಒಂದು ಬಗೆಯಲ್ಲಿ ಪ್ರದರ್ಶನಗೊಳ್ಳುವುದಕ್ಕಾಗಿಯೇ. ಹಾಗೆ ಪ್ರದರ್ಶನಗೊಳ್ಳುವಾಗಲೆ ಮಾಪ್ಪಿಳಪಾಟು ಅದಾಗಿ ಬದಲಿಕೊಳ್ಳುವುದು. ಆಗ ಮಾತ್ರ ಆ ಗಾನಶಾಖೆ ಅದರ ಸಂಪೂರ್ಣ ಸಾಧ್ಯತೆಯನ್ನು ಕಂಡುಕೊಂಡೀತು. ಈ ನಿಟ್ಟಿನಿಂದ ಮಾಪ್ಪಿಳ ಪಾಟು ಒಂದು ಪ್ರದರ್ಶನ ಕಲೆ.

ಮಾಪ್ಪಿಳಪಾಟು ರಚನೆಗೊಳ್ಳುವುದೂ ಪ್ರಸ್ತುತಗೊಳ್ಳುವುದೂ ವೈಯಕ್ತಿಕ ಆಸ್ವಾದನೆಯನ್ನು ಉದ್ದೇಶಪಟ್ಟಲ್ಲ. ಒಂದು ಸಾಂಘಿಕತೆಯ ಪಾಲುಗಾರರನ್ನು ಲಕ್ಷಿಸಿಕೊಂಡಾಗಿರುತ್ತದೆ. ಅದರ ರಚನೆ ನಿರ್ವಹಣೆ ವ್ಯಕ್ತಿಗಳಿಂದಾದರೂ ಅವರು ಎದುರಿಗಿಟ್ಟುಕೊಳ್ಳುವುದು ಒಂಟಿ ವ್ಯಕ್ತಿಗಳನ್ನಲ್ಲ; ಅವರೆಲ್ಲ ಒಟ್ಟು ಸೇರಿದ ಸಮೂಹವನ್ನು. ಆ ಅಂಶವನ್ನು ನೆನೆದರೆ ಮಾಪ್ಪಿಳ ಪಾಟು ಎಂದೆಂದೂ ಒಂದು ಜಾನಪದ ಸ್ವಭಾವವನ್ನು ಸ್ಥಿರಪಡಿಸಿಕೊಂಡಿದೆ. ಪಾಪ್ಪಿಳಪಾಟು ಒಂದು ಸಾಮೂಹಿಕ ಅನುಭವವಾಗಿದೆ.

ಪದ ಪರಿಚಯ

ಇಶಲ್– ಇಯಲ್, ಹಾಡುವ ಮಟ್ಟು. 'ಆಲವುಂ ಅರ್ಶುಂ'– ಹಳೆಯ ಪಾಟು ಒಂದರ ಮೊದಲ ಶಬ್ದಗಳು, ಈ ಪದ್ಯಗಳ ಧಾಟಿಯಲ್ಲೆ ಪ್ರಸ್ತುತ ಪಾಟನ್ನು ಹಾಡಬೇಕು ಎಂಬ ಸೂಚನೆ. ಮಿಕವುಱ್ಱ –

ಮೇಲ್ಮೆ ತುಂಬಿದ. ಇಲ್ಲಿ ಮಿಗುವು ಏರುವುದು ಚೆಲುವಿನಲ್ಲಿ. ಬದರುಲ್ ಮುನೀರ್‌ನ ಬಗೆಗೆ. ಮಿನುದ–ಮಿನುಸ, ನಯವಾದ, ನಯವೇರಿದ. ಪೂ ಅರಿಶಿಲ್–ಹೂಮೆತ್ತೆಯಲ್ಲಿ. ಅರಿಶ್(ಅರಬಿ)–ಪರ್ಯಂಕ, ಮೆತ್ತೆ. ಅಕನೇಶಕ್ಕುಳಲ್–ಒಳಗೆ ನೇಹ ತುಂಬಿದ ಚೆಲುವೆ. ನೇಶಂ–ಸ್ನೇಹ (ನೇಹ), ಕುಟಿಲಿ–ಚೆಲುವೆ. ಇರುಂದು–ಇರುನ್ನ್ (ಕುಳಿತು), ಅವನ್ ತನ್ಱೆ–ಅವನ್ಱೆ (ಅವನ), ಸದ್‌ರುಂ (ಅರಬಿ)– ಎದೆಯೂ, ಪುಱಂ– ಪುಱವುಂ (ಬೆನ್ನನ್ನೂ) ತಟಕ್ಕೈ–ತಟವುಕಯಾಯಿ (ತಡವಿದಳು). ಸುಜಮ್ (ಅರಬಿ) – ನಕ್ಷತ್ರ, ತಾರೆ. ಮುಕಂ ಕಣ್ಣುಂ–ಮೊಗವನ್ನೂ ಕಣ್ಣನ್ನೂ. ತುಱಂದಜ್ಞ್ – ತುಱನ್ನಜ್ಞ್ (ತೆರೆದಾಚೆ), ಉಣರ್‌ನ್ದಾಲೆ – ಉಣರ್ನತಿನಾಲೆ (ಎಚ್ಚರಗೊಂಡುದರಿಂದ), ಎಚ್ಚರಗೊಂಡನೆಂದು ತಾತ್ಪರ್ಯ. ಸುಕಮುಳ್ಳ–ಸುಖವುಳ್ಳ, ಕಣ್ಣಿಗೆ ಸುಖನೀಡುವ; ಸುಪ್ಪೈರಾಮುಕತ್ತೆ–ಸುಫೈರಾಳ ಮುಖವನ್ನು; ಸೊರಣಚ್ಚುಂಡ್–ಸ್ವರ್ಣತುಟಿ, ಚಿನ್ನದಂತೆ ಶೋಭೆಯಿರುವ ತುಟಿ; ಚಿಱಿತ್ತುಂ ಕೊಂಡ್–ಚಿರಿಚ್ಚುಕೊಂಡ್ (ನುಗುತ್ತ), ನಕ್ಕನು ಎಂದರ್ಥ; ಎಳುಂದ್–ಎಟುನೇಱ್ಱು (ಎದ್ದು), ಇರಿಂದಪ್ಪೋಳ್–ಇರುನ್ನಪ್ಪೋಳ್ (ಕುಳಿತಾಗ); ಬಂದ್–ವನ್ನು(ಬಂತು); ಇಶಾಱ (ಅರಬಿ)–ಪರಿಸರದ ಪ್ರಜ್ಞೆ; ಚಿಂಗಾರ–ಸಿಂಗಾರ, ಇಲ್ಲಿ ಮನೋಹರವಾದ ಎಂದರ್ಥ; ತಖ್‌ತ್ತ್ (ಅರಬಿ)–ಪರ್ಯಂಕ, ಮಂಚ; ಇದ್ ಏದೆಂಡ್–ಇದ್ ಏದ್ ಎನ್ನ್ (ಇದು ಯಾವುದು ಎಂದು) ಹೈರಾಯ್ (ಅರಬಿ)–ಅಚ್ಚರಿಪಟ್ಟನು; ಸಿಜೆ–ಸ್ತ್ರೀ; ಚೇರೆ–ಸೇರೆ, ಸಮೀಪವಾಗಿ; ಇರಿಪ್ಪೊಳ್–ಇರಿಕ್ಕುನ್ನವಳ್ (ಕೂತಿರುವವಳು); ಸಿಫತ್ತುಂ–ವಿಶೇಷತೆಯೂ, ಮಹಿಮೆಯೂ; ಪಿನ್–ಪಿನ್ನೆ (ಮತ್ತೆ), ಜಮಾಲಿಯತ್ತ್ (ಅರಬಿ)–ಚೆಲವು; ಎನ್ದ್‌ಚೊಲ್ಲಾನ್–ಎನ್ದ್ ಪರಯಾನಾಣ್ (ಏನೆನ್ನೋಣ?) ಬಂಡಿಱಗುಂ–ವಂಡಿನ್ ಚಿಱಗುಂ (ದುಂಬಿಯ ರೆಕ್ಕೆಯೂ); ಕುಶಲ್–ಕುಟಿಲ್ (ತಲೆಗೂದಲು); ಮಶಕ್ಕುಂ – ಮಯಕ್ಕುಂ, ಮಯಜ್ಞೆಪ್ಪೋಗುಂ (ಮರುಳಾಗುವ, ಮೋಹಿಸುವ), ಕರ–ತುಂಬ್ (ತುರುಬು) ತಲೆಗೂದಲ ತುರುಬು; ಕೆಟ್ಟಾಲ್ – ಕೆಟ್ಟಿಯದು ಕಂಡಾಲ್ (ಕಟ್ಟಿದ್ದು ನೋಡಿದರೆ); ಪಿರಿಚಂಗ್ – ಪಿರಿಶಂಖ್(ಹುರಿಶಂಖ); ಯೆಳುಮಯಾಕುಂ – ಎಳಿಮಯುಳ್ಳತಾಗುಂ(ಎಳಮೆಯುಳ್ಳದ್ದಾದೀತು, ಎಳಸಾದೀತು ವಿನೀತವಾದೀತು, ತಗ್ಗಿ ಬಗ್ಗೀತು); ತಿಱ–ಭಂಗಿ, ಶೋಭೆ; ಮುಕತ್ತಾಲ್ – ಮುಖತ್ತಾಲ್ (ಮುಖದಿಂದ); ಸಿರಾಜ್ (ಅರಬಿ)–ಬೆಳಕು; ಸುಱುಮಕ್ಕಣ್ – ಸುರುಮ (ಕಾಡಿಗೆ) ತೊಡೆದ ಕಣ್ಣು; ಮಿಳಿತ್ತ್ – ಮಿಟಿಚ್ಚ್ (ತೆರೆದು); ಬೆಟ್ಟಾಲೆ – ವೆಟ್ಟಾಲೆ (ಕಡಿಯಲು); ಚಿಜೆ – ಮೇಲ್ತುಟಿ; ಪವಿಳತ್ತೆ–ಏವಿಟತ್ತೆ (ಹವಳವನ್ನು); ಚಿರಿಕ್ಕೂಲ್ – ಚಿರಿಕ್ಕುಕಯಾಣೆಂಗಿಲ್ (ನಗುವುದಾದರೆ); ಮಿನ್ನ್ – ಮಿನ್ನಲ್ (ಮಿಂಚು); ಉಕಂ–ಯುಗಂ, ಸೇರಿಕೆ, ಹಾಗೆ; ಲೆಂಗುಂ– ತಿಳಙ್ಙುನ್ನ (ಹೊಳೆಯುವ); ಸಿನ್ನುಂ (ಅರಬಿ) – ಹಲ್ಲೂ; ನಾಕ್ಕುಂ – ನಾವುಂ (ನಾಲಗೆಯೂ); ಚಿಜೆಪ್ಪೊತ್ತ – ಅಲಂಕಾರಂ ನಿರಙ್ಙ (ಅಲಂಕಾರತುಂಬಿದ); ಚಿಱಪ್ಪ್ – ಅಲಂಕಾರ; ಕಳುತ್ತುಂ – ಕಟುತ್ತುಂ (ಕುತ್ತಿಗೆಯೂ); ಅದ್ರುಪ್ಪತ್ತೋಳುಂ – ಅದ್ಭುತವಾದ ತೋಳೂ; ಅದ್ರುಪ್ಪಂ–ಅದ್ಭುತಂ; ಚೆಪ್ಪ್ –ಉರುಟಾದ ಮುಡಿಪಿನ ಪಾತ್ರ, ಆಕೃತಿ ಸಾದೃಶ್ಯಕ್ಕಾಗಿ ಸ್ಥನಗಳನ್ನು ಚೆಪ್ಪಿಗೆ

ಹೋಲಿಸುವುದಿದೆ; ಒಶುಕ್ಕಮಾಜ್ – ಒಟುಕ್ಕಮಾಜ್, ಒಟುಗುಮಾಜ್ (ಹರಿಯುವಂತೆ); ಇಲ್ಲಿ ಚೆಲುವು ಉಕ್ಕಿಹರಿಯುವಂತೆ; ಸರ್ಜನ – ಸೃಷ್ಟಿಯಲ್ಲಿರುವ, ಸಹಜವಾದ; ಪರಿಶ್ –ಆಕೃತಿ; ಎಂದ್‌ಯೆಂಡ್ –ಎಂದ್ ಎನ್ನ್ (ಎಂಥದುಎಂದು); ಅಜೆಯಾ–ಅಜೆಯಾತ್ತದಿನಾಲ್ (ತಿಳಿಯದುದರಿಂದ); ಮುಶಿಪ್ಪ್ – ಮುಷಿಪ್ಪನ, (ಅಸಮಾಧಾನ), ಪಾರಂ – ಬಹಳ ಹೆಚ್ಚು; ಪೊಂಚಿರಿತ್ತ್ – ಪುಂಚಿರಿಚ್ಚು (ಮಂದಹಾಸ ಬೀರುತ್ತ); ಮಾರನೋಡ್ – ಮಾರನಿಗೆ ಸಮನಾದ ಚೆಲುವನೊಂದಿಗೆ; ಪರಿಶೋಡೆ–ಅವಿಗಾಯಿ, ವಶ್ಯಮಾಯಿ (ಮೋಹಕವಾಗಿ); ಚಿಜೆತ್ತೆ–ಚಿರಿತ್ತೆ, ಚಿರಿಚ್ಚು (ನಕ್ಕಳು); ಪಿಂಬ್–ಶೇಷಂ (ಬಳಿಕ); ಕೇಡ್–ಕೋಟ್ಟಂ, ಕುಱವು (ಕೊರತೆ); ಕೇಡಾಲುಂ ಮುಶಿಪ್ಪಾಲುಂ– ಅತೃಪ್ತಿಯಿಂದಲೂ, ಅಸಮಾಧಾನದಿಂದಲೂ; ಬಾಡಿಡಂಡ–ವಾಡಿಡೇಂಡ (ಬಾಡಬೇಡ); ಕೇಟ್ಟುಕೊಳ್– ಕೇಟ್ಟುಕೊಳ್ಳು (ಕೇಳಿಕೊಳ್ಳು); ಯೆನ್ನೈ –ಎನ್ಟೆ (ನನ್ನ); ಕದ–ಕಥ (ಕಥೆ); ಯೇಱ್ಱಮುಂಡಾಂ– ಏಜೆಯುಂಡ್ (ಬಹಳ ಇದೆ); ತೇಡಿ–ಹುಡುಕಿ; ಬಶಜೆನೆ (ಅರಬಿ) – ಮನುಷ್ಯನನ್ನು; ಕಾಂಬದಿನ್ನ್ – ಕಾಣ್ಮದಿನ್ನ್ (ಕಾಣಲು); ತೆಂಡಿಡ್ಯೆ –ತೆಂಡುಕಯುಂಡಾಯಿ (ಅಲೆದದ್ದಾಯಿತು); ಪೆರಿಪ್ಪಂ – ಹೆಚ್ಚಾಗಿ, ಬಹಳ; ಬೈ –ವಟಿ (ದಾರಿ); ಪೀಡ–ಪೀಡೆ; ಯೆನ್–ಎನ್ಟೆ (ನನ್ನ); ಮನದಕತ್ತ್ –ಮನದೊಳಗೆ; ಉಳ್ಳದೊಂಡ್ –ಉಳ್ಳದುಂಡ್ (ಇರುವುದೊಂದು); ಅಖಿವುಂ (ಅರಬಿ) – ಸಹೋದರನೂ; ಪಿದಾವುಂ–ಪಿತನೂ; ಕುಡುಂಜಿನ್‌ಕುಲತ್ತ್ – ಜಿನ್ನ್ ಕುಲ ಎಲ್ಲ ಸೇರಿದರೂ; ಪರಿಗಳ್–ಪರಿಜಿನ್ನುಗಳು; ಮೇಲ್ಮಾ –ಮೇಲ್ಮೆ ಉಳ್ಳವರಾಗಿದ್ದಾರೆ. ಕೂಟ್ಟತ್ತಿಲ್– ಆ ಗುಂಪಿನಲ್ಲಿ; ಅರಶನ್ –ಅರಸ, ಇಲ್ಲಿ ಚಕ್ರವರ್ತಿ ಎಂದರ್ಥ. ಯೆನ್ – ಎನ್ಟೆ (ನನ್ನ); ಬಾವ – ತಂದೆ; ಆಮೇ – ಆಕುನ್ನು (ಆಗಿದ್ದಾರೆ).

ಟಿಪ್ಪಣಿ : ಲೇಖನದಲ್ಲಿ ವಿಶದಪಡಿಸಿದ ಪ್ರಾಸವ್ಯವಸ್ಥೆಯನ್ನು ಸಾಲುಗಳ ಅಡಿಗೆರೆಗಳಲ್ಲೂ ವಿನ್ಯಾಸದ ವ್ಯಾತ್ಯಾಸದಲ್ಲೂ ಕಂಡರಿತುಕೊಳ್ಳಬಹುದು.

ಅಡಿತಳಿಪಾಟು

(ಆಚರಣೆ ಗಾನ)

ಎಂ. ವಿ. ವಿಷ್ಣು ನಂಬೂತಿರಿ

ಟಿಪ್ಪಣಿ

ಯಾವ ಜಾನಪದ ಹಾಡೂ ಕಾಣಿಸಿಕೊಳ್ಳುವುದು ಯಾವುದಾದರೂ ವಿಶಿಷ್ಟ ಸಂದರ್ಭಗಳಲ್ಲಾಗಿರುತ್ತದೆ. ಅದು ವಿನೋದದ ಭಾಗವಾಗಿ ಕಾಣಿಸಿಕೊಳ್ಳಬಹುದು, ಕೆಲಸದ ಭಾವಾಗಿ ಕಾಣಿಸಿಕೊಳ್ಳಬಹದು, ಆಚರಣೆಯ ಭಾಗವಾಗಿ ಕಾಣಿಸಿಕೊಳ್ಳಬಹುದು. ಆಚರಣೆಯ ಭಾಗವಾಗಿ ಗಾನ ಕಾಣಿಸಿಕೊಳ್ಳುವುದರಿಂದಲೆ ಅದನ್ನು 'ಆಚರಣೆಗಾನ' ಎನ್ನುವುದು. ಒಂದು 'ಪಾಟು' ತಾನೇ ಅನುಷ್ಠಾನವೆನಿಸಬಹುದು. ಅಲ್ಲದಿದ್ದರೆ ಆಚರಣೆ ಎಂಬ ಕ್ರಿಯಾಂಶಗಳೊಂದಿಗೆ ಸೇರಿಕೊಂಡು ಕಾಣಿಸಿಕೊಳ್ಳಬಹುದು. ಹಲವು 'ತೋಱ್ಱಂ' ಪಾಟುಗಳೂ ಸ್ವತಂತ್ರ ಅಸ್ತಿತ್ವವುಳ್ಳ ಆಚರಣೆ ಗಾನಗಳಾಗಿವೆ. ಆದರೆ ತೆಯ್ಯಂ ಆರಾಧನೆಯಲ್ಲಿ ಬರುವಂಥ 'ತೋಱ್ಱಂ ಪಾಟು'ಗಳು ಆಚರಣಸಂಬಧಿಯಾಗಿವೆ. ಒಟ್ಟಿಗಿದ್ದುಕೊಂಡು ಆಚರಣೆಯನ್ನು ಪೂರ್ಣಗೊಳಿಸುವುದು ಪಾಟಿನ ಧರ್ಮ.

ಹೆಚ್ಚಿನೆಲ್ಲ ಆಚರಣೆಗಳು ಇವತ್ತೂ ಊರ್ಜಿತದಲ್ಲಿ ಉಳಿದುಕೊಂಡಿರುವ ಪ್ರದೇಶ ಕೇರಳ. ಹೆಚ್ಚಿನ ಆಚರಣೆಗಳೊಂದಿಗೆ ಗಾನ ಪರಂಪರೆಯೂ ಉಳಿದುಕೊಂಡಿದೆ. ಕೇರಳದಲ್ಲಿ ಊರ್ಜಿತದಲ್ಲಿರುವ ಹೆಚ್ಚಿನ ಜಾನಪದ ಕಲೆಗಳೆಂದರೆ ಆರಾಧನಾ ಕಲೆಗಳೇ. ಅವುಗಳ ಭಾಗವಾಗಿ ಹಾಡುತ್ತ ಬಂದಿರುವ ಪಾಟುಗಳೆಲ್ಲ 'ಆಚರಣಗಾನ' ಶಾಖೆಗೆ ಸೇರುತ್ತವೆ.

ಜಾತೀಯವಾದ ಸಾಂಘಿಕತೆ ಹಳಗಾಲದಂತೆ ಶಕ್ತಿಯುತವಾಗಿ ಉಳಿದಿಲ್ಲವಾದರೂ ಅವು ಸ್ವಂತವಾಗಿಯೆ ನೆಲೆಗೊಂಡಿವೆ. ಬದಲಾವಣೆ ತುಂಬ ಆಗಿರುವುದಾದರೂ, ಭೌತಿಕ ಸಂಸ್ಕಾರದ ವಿಷಯದಲ್ಲಿ ಏಕೀಕರಣ ಉಂಟಾಗಿರುವುದಾದರೂ, ಜಾನಪದದಲ್ಲಿ ಜಾತೀಯ ಸಾಂಘಿಕತೆ ಇಂದಿಗೂ ಉರ್ಜಿತದಲ್ಲಿದೆ. ಒಂದೊಂದು ಜಾತಿಯೂ ತನ್ನದೇ ಆಚರಣೆಗಳನ್ನೂ, ಲೋಕವೀಕ್ಷಣೆಯನ್ನು ಊರ್ಜಿತದಲ್ಲಿ ಇರಿಸಿಕೊಂಡಿದೆ. ಕೇರಳದ ಪುಲಯ ಜನಾಂಗ ಆಚರಿಸಿಕೊಂಡುಬರುವ ಆಚರಣೆಗಳೂ ಆಚರಣಗಾನಗಳೂ ಇಲ್ಲಿ ಪರಾಮರ್ಶೆಗೆ ಬಂದಿವೆ.

ಸಂಪಾದಕ

ಕೇರಳದ ಅತ್ಯಂತ ಬಡಗಣ ಪ್ರದೇಶದಲ್ಲಿರುವ ಪುಲಯ ಜನರು ತಮ್ಮ 'ಕೋಟ್ಟಂ'ಗಳಲ್ಲೂ 'ಸ್ಥಾನಂ'ಗಳಲ್ಲೂ 'ಅಡಿತಳಿ ಪೂಜೆ' ನಡೆಸುತ್ತಾರೆ. ಅದರಲ್ಲಿ ಬಳಕೆಯಾಗುವ ಆರಾಧನಾ ಪಾಟು ಈ 'ಅಡಿತಳಿ ಪಾಟು'. ಜಗತ್ತಿನ ಉತ್ಪತ್ತಿ, ಜೀವಸೃಷ್ಟಿ, ಉದಯ ಇತ್ಯಾದಿಗೆ ಸಂಬಂಧಿಸಿದ ಪುರಾಣವೆ ಅದರಲ್ಲಿ ಆಖ್ಯಾನಗೊಳ್ಳುವುದು. ಪ್ರಸಿದ್ಧ ಪುರಾಣಾದಿಗಳಲ್ಲಿ ಕಾಣುವಂಥ 'ಅಧಿಷ್ಠಿತ ಪುರಾಣ' (Higher myth) ಅಲ್ಲ ಇದು. ನಿಮ್ನ ಪರಂಪರೆಯಿರುವ 'ಉಪಪುರಾಣ' (ಉಪತ್ಯಪುರಾಣ –Lower myth) ಇದಾಗಿದೆ.

ಬೆಳಗಾಗಲು ಏಳುವರೆ ನಾಟಿಕ (ನಾಟಿಕ = 24 ನಿಮಿಷ) ಅಂದರೆ ಮೂರು ತಾಸುಗಳಷ್ಟು ಮೊದಲು ಎದ್ದು 'ಅಡಿತಳಿ' (ಗುಡಿಸುವುದು, ಹನಿ ತಳಿಯುವುದು) ನಡೆಸಿ ಕಾಯವೆಳ್ಳಾಟ್ಟಿಯು, ಕುದುರೆತಯ ಸೆಗಣಿ ಕಲಸಿ ಚಿಮುಕಿಸಿ ಶುದ್ಧಮಾಡಿದಳು. ಅನಂತರ ದೇವರನ್ನು ಎಬ್ಬಿಸಿದಳು. ದೇವರ ಪೂಜೆಗೆ ಹೂತರಲು 'ಪೂಮಾಣಿ'ಗಳಿಲ್ಲ. ಭಗವಂತ ಪೂಮಾಣಿಗಳನ್ನು ಸೃಷ್ಟಿಸಿ ಹೂತರಲು ಕಳುಹಿಸಿದ. ಭಗವಂತ ಹಾಲಕೊಳಕ್ಕೆ ನೆಗೆದು ಮಿಂದನಾದರೂ ಪೂಮಾಣಿಗಳು ಹೂವಿನೊಂದಿಗೆ ಮರಳಲಿಲ್ಲ. ಪೂಮಾಣಿಗಳನ್ನು ಅರ್ಜುನಹುಡುಗ (ಅರ್ಜುನ್ನಕಿಡಾವು) ಅಪಹರಿಸಿ ಪಾತಾಳದಲ್ಲಿ ಅಡಗಿಸಿಟ್ಟಿದ್ದ. ಶ್ರೀಪಟ್ಟನ್ ಪೂಮಾಣಿಗಳನ್ನು ಪತ್ತೆಮಾಡಲು ಪುಟಾಣಿಯನ್ನು ಅರ್ಜುನಮಲೆಗೆ ಕಳುಹಿಸುತ್ತಾನೆ. ಅದು ಕೂಡ ಫಲಕೊಡಲಿಲ್ಲ. ಶ್ರೀಭಗವಂತನೆ ಹೊರಟು ನಿಂತ. ಬೆಟ್ಟವನ್ನು ಮೆಟ್ಟಿ ಅದುರಿಸುತ್ತ ನಿಂತ ಅರ್ಜುನಹುಡುಗನನ್ನು ಖಡ್ಗವೆಸೆದು ಕಡಿದ ಭಗವಂತ ಅವನನ್ನು 'ಕಿಟಿಕ್ಕಿನಂಕೊಜ್ಜಿ'ಯ (ಪೂರ್ವದ ನಕ್ಷತ್ರವ)ನ್ನಾಗಿ ಮಾಡಿದ.

ಶ್ರೀ ಭಗವಂತ ಪೂಮಾಣಿಗಳನ್ನು ಕಂಡ. ಹೂವಿನೊಂದಿಗೆ ಮರಳುವಾಗ ಮಹಾಮಾಯೆಯಿಂದ ಚಿನ್ನದ ಕುದುರೆಯೂ ಚಿನ್ನದ ಆನೆಯೂ ಮುಂಭಾಗದಲ್ಲಿ ಕಾಣಿಸಿಕೊಂಡವು. ಆನೆಯ ಮೇಲೆ ಕುಳಿತು ಕುದುರೆಯ ಬೆನ್ನ ಮೇಲೆ ಕಾಲು ನೀಡಿ ಭಗವಂತನ ಅನಂತರದ ಪ್ರಯಾಣ ಮುಂಬರಿಯಿತು. ಮರಳಿದ ಬಳಿಕ ಭಗವಂತ ದೇವರ ಪೂಜಾಕರ್ಮ (ತೇವಾರಂ) ಗಳನ್ನು ಮುಗಿಸಿ ಹೊನ್ನ ಓಲೆಯನ್ನೂ ಹೊನ್ನ ಕಂಠ (ನಾರಯ)ವನ್ನೂ ತೆಗೆದು ಸೃಷ್ಟಿಕಾರ್ಯ ತೊಡಗಿದ. ಉದಯವನ್ನೂ ಅಸ್ತಮಾನವನ್ನೂ ಭಗವಂತ ಬರೆದ. ಮಣ್ಣಿನಿಂದ ಮನುಜನನ್ನು ಸೃಷ್ಟಿಸಿದ. ಆ ಮೇಲೆ ಭಗವಂತ ಉದಯಮಲೆ ಕೋಟೆಗೆ ಹೋಗುತ್ತಾನೆ. ಅಸ್ತಮಾನ ಕೋಟೆಯ ಅಂಜನಾದೇವಿ ಭಗವಂತನಲ್ಲಿ, 'ಉದಿವೆಳಿ' (ಉದಯದ ಬೆಳಗುವಿಕೆ) ನಡೆಸದಿರುವುದಕ್ಕೇನು ಕಾರಣ ಎಂದು ಕೇಳಿದಳು. ಮನುಷ್ಯರು ಕರಟಿಹೋದಾರೆಂದು 'ಉದಯವೆಳಿ' ನಡೆಸಲಿಲ್ಲ ಎಂದು ದೇವರುಕೊಟ್ಟ ಕಾರಣ.

ಆಱುಮಱಯುಂ ಮಱಿಕ್ಕಕತ್ತ್ನ್ನ್	ಆರು ಮರೆಯೂ ಮರೆಯೊಳಗಿನಿಂದ
ಏೞು ಕದಿರ್‌ವೆಚ್ಚುಂ ಪೊನ್‌ಕದಿರ್‌ವೆಚ್ಚುಂ	ಏಳು ಕದಿರನ್ನಿಟ್ಟೂ ಪೊನ್‌ಕದಿರನ್ನಿಟ್ಟೂ
ಉದಿವೆಳಿಯೋಜನ ನಡತ್ತುವ ವೇಣಂ	ಉದಿ ಬೆಳಗಿನ ಯೋಜನೆ ನಡೆಸಲು ಬೇಕು

ಎಂದು ಅಂಜನಾದೇವಿ ಅಪೇಕ್ಷಿಸಿದಳು. ಆ ಪ್ರಕಾರ ಭಗವಂತ 'ಉದಿವೆಳಿ' ನಡೆಸಿದ.

ಉತ್ತರ ಕೇರಳದ 'ಪುಲಯ'ರಲ್ಲಿ ಉತ್ಪತ್ತಿ ಪುರಾಣ ಸಂಬಂಧವಾದ ಆರಾಧನಾ ಗಾನಗಳು ಬೇರೆ ಇವೆ. 'ಇರುಳುಂ ವೆಳಿಯುಂ' (ಇರುಳು ಮತ್ತು ಬೆಳಗು) 'ಮರವುಂ ಪಱಿಯುಂ ತೋಱ್ಱಂ' (ಮರವೂ ಕಳಸಿಗೆಯೂ ಸ್ತೋತ್ರ) ಮೊದಲಾದವು ಅವುಗಳಲ್ಲಿ ಕೆಲವು. ಆಚರಣೆ, ಆರಾಧನೆ, ನಂಬಿಕೆ ಮೊದಲಾದವುಗಳೊಂದಿಗೆ ಪುರಾವೃತ್ತ (ಪುರಾಣ) ಸಂಬಂಧಿಸುತ್ತವೆ ಎಂಬುದಕ್ಕೆ ಉತ್ತಮ ನಿದರ್ಶನ 'ಅಡಿತಳಿ ಪಾಟ್ಟು'. ಮಾನವ ಸಂಸ್ಕೃತಿಯ ಪಾರಂಪರೀಯ ಧಾರೆಗಳಿಂದ ಪುರಾವೃತ್ತಗಳು (ಮಿತ್‌ಗಳು) ದೂರನಿಲ್ಲುವವುಗಳಲ್ಲ ಎಂದೇ ಭಾವಿಸಬೇಕಾಗಿದೆ.

ಪಾಟು

ವಾಟ್‌ಗೆನ್ನೇ ವಾಟ್‌ಗೆನ್ನೇ ಪೊಲಿ ವಾಟ್‌ಗೆನ್ನೆ	ಬಾಳ್‌ಗೆ ಎನ್ನ ಬಾಳ್‌ಗೆ ಎನ್ನ ವೃದ್ಧಿಯ
ತೈವಂ[1]	ಬಾಳ್‌ಗೆ ಎನ್ನ ದೈವ
ಉದಮಲ[2] ಕೋಟ್ಟಯಿಲಮ್ಮ ಕಾಯವೆಳ್ಳಾಟ್ಟಿ	ಉದಯಬೆಟ್ಟದ ಅಮ್ಮ ಕಾಯವೆಳ್ಳಾಟ್ಟಿ
ಪುಲರುವಾನೇಟರ ನಾಟಿಕಚ್ಚಜ್ಜಲಾಯಪ್ಪೋಳ್	ಬೆಳಗಿಗೇಳರೆ ನಾಲಿಕೆ ಕೆಂಪಡರಿದಾಗ
ಇೞಟ್ಟಿಯುಣನ್ನುವಲ್ಲೋ ಅಮ್ಮ ಕಾಯವೆಳ್ಳಾಟ್ಟಿ	ನಡುಗಿಯೆಚ್ಚತ್ತಳಲ್ಲೋ ಅಮ್ಮ ಕಾಯವೆಳ್ಳಾಟ್ಟಿ
ಉಡಲುಂ ಇೞಟ್ಟಿ ವಲಪುಱಂ[5]ಉಣನ್ನು	ಒಡಲೂ ನಡುಗುತ ಬಲಕಾಗಿ ಎದ್ದಳು
ವೆಳ್ಳಕ್ಕದಿರ್‌ಮಾಚ್ಚಿ[6]ಯೆಡುತ್ತುವಲ್ಲಮ್ಮ	ಬೆಳ್ಳಕ್ಕದಿರ ಕಸರಿಗೆ ತೆಗೆದಳಲ್ಲಮ್ಮ
ಕಿಟಿಕ್ಕಿನಾಂ ತಿರುಮುರಱ್ಱತ್ತುಳ್ಳಿಲ್ ಪೋರುನ್ನು	ಮೂಡುಮನೆ ಸಿರಿಯಂಗಳದೊಳು ಬಹಳು

1. ತೈವಂ – ದೈವಂ, ದೇವರು. 2. ಉದಮಲ–ಉದಯ ಬೆಟ್ಟ. 3. ನಾಟಿಕ = ನಾಲಿಕೆ, 24 ನಿಮಿಷ 4. ಚೆಜ್ಜಲಾಯಪ್ಪೋಳ್– ಕೆಂಪಾದಾಗ 5. ವಲಪುಱಂ – ಬಲಕಡೆಗೆ ಹೊರಳಿ 6. ವೆಳ್ಳಕ್ಕದಿರ್‌ಮಾಚ್ಚಿ – ಬಿಳಿ ಕದಿರ (ಬಿಳಿ ಕಿರಣಗಳ) ಕಸಬರಿಗೆ 7. ಕಾಯಪ್ಪುರ– ವಾಸದ ಕೋಣೆ

ಕಿಟಿಕ್ಕಿನಾಂ ತಿರುಮುಱ್ಱಮಡಿಚ್ಚುವಲ್ಲಮ್ಮ	ಮೂಡಣಸಿರಿಯಂಗಳ ಗುಡಿಸಿದಳಲ್ಲಮ್ಮ
ಕಿಟಿಕ್ಕಿನಾಂ ಕಾಯಪ್ಪುರ[7]ಯುಮಡಿಚ್ಚುವಲ್ಲಮ್ಮ	ಮೂಡುವಾಸದಕೋಣೆ ಗುಡಿಸಿದಳಲ್ಲಮ್ಮ
ತತ್ತಕ್ಕುಡು ನಲ್ಲ ಕಿಳಿವಾದಿಲೊಕ್ಕೆ	ಗಿಳಿಗೂಡಿನೊಳ್ಳೆಯ ಗಿಳಿಬಾಗಿಲೆಲ್ಲ
ಒಕ್ಕೆಯಡಿಚ್ಚಜ್ಜು ವಾರುನ್ನಲ್ಲಮ್ಮ	ಎಲ್ಲ ಗುಡಿಸಿಯತ್ತ ಚಾಚುವಳಲ್ಲಮ್ಮ

ಭಗವಾನ್ ಪುಱಪ್ಪಾಡ್‌ಪೋರೇಣಮೆಂಗಿಲ್	ಭಗವಂತ ಹೊರಟಿತ್ತ ಬರುವುದಾಗಲಿಕೆ
ಪುಣ್ಯಂ[8] ತೆಳಿಚ್ಚಱ್ಞು ಕಾಣುವ ವೇಣಂ	ತೀರ್ಥವ ತಳಿದುದು ಕಾಣಿಸಬೇಕು
ಪುಣ್ಯಂತೆಳಿಕ್ಕುವಾನಱಿಞ್ಞೆಕೂಡಲ್ಲೋ	ತೀರ್ಥತಳಿವುದೆಂತು ತಿಳಿಯದಲ್ಲಲ್ಲೋ
ಎಜ್ಞನೆಯಾಣಮ್ಮೇ ಪುಣ್ಯಂತೆಳಿಕ್ಕ	ಎಂತ ಹೇಳಮ್ಮ ತೀರ್ಥದ ತಳಿವ
ವಡಕ್ಕನಾಂ ಕಾಯಪ್ಪುರಯಿಲುಂ ಪೋರುನ್ನಮ್ಮ	ಬಡಗಣ ಕೋಣೆಗೆ ಬರುತಿಹಳಮ್ಮ
ವೆಳ್ಳಕ್ಕುದಿರೆಯೇಯುಣತ್ತುನಲ್ಲಮ್ಮ	ಬೆಳ್ಳನೆ ಕುರೆಯನೆಚ್ಚರಿಸುವಳಲ್ಲಮ್ಮ
ಎಡಪುಱಂ ಟ್ಟಿಞೆ ವಲವುಮುಣನ್ನು	ಎಡಭಾಗವಲುಗಿ ಬಲವೂ ಎಚ್ಚತ್ತು
ನೀಂಡ ವಲಿಞ್ಞಱ್ಞು ನಿನ್ನು ಕುದಿರ	ಉದ್ದಕ್ಕೆ ಮೈಮುರಿದು ನಿಂತಿತು ಕುದುರೆ
ವಾಲೇರ್ತಿಯಜ್ಞ್ ನಿನ್ನು ಕುದಿರ ಕೋಲೆಳಕ್ಕಿ	ಬಾಲವನೆತ್ತಿಯೆ ನಿಂತಿತು ಕುದುರೆ
ಮೂತ್ರಮೊಟಿಕ್ಕುನ್ನುಂಡ್	ಕೋಲಲುಗಿ ಮೂತ್ರವ ಹೊಯ್ಯುತ್ತದೆ
ಪಾಡಕಾಲುಕೊಂಡು ಕೊಯಮ್ಬುನ್ನಜ್ಞೆನೆ[9]	ಗೊರಸುಗಾಲಿಂದಲೆ ಕಲಸುತ್ತದಲ್ಲಿ
ವಾಲುಮುಕ್ಕಿ ಪಳ್ಳಕ್ಕಡಿಚ್ಚುಳ್ಳನೇರಂ	ಬಾಲ ಮುಳುಗಿಸಿ ಪಕ್ಕೆಗೆ ಹೊಡೆದ ವೇಳೆ
ಅದು ತನ್ನೆ ಕಂಡುವಲ್ಲಮ್ಮ ಕಾಯವೆಳ್ಳಾಟ್ಟಿ	ಅದನೇ ಕಂಡಳಲ್ಲಮ್ಮ ಕಾಯವೆಳ್ಳಾಟ್ಟಿ
ಚಾಣಕಮೆಡುತ್ತುವಲ್ಲಮ್ಮ ಕಾಯವೆಳ್ಳಾಟ್ಟಿ	.ಸಗಣಿಯ ತೆಗೆದಳಲ್ಲಮ್ಮ ಕಾಯವೆಳ್ಳಾಟ್ಟಿ
ಪೊನ್‌ಕಲಂ ವೆಳ್ಳತ್ತಿಲ್‌ಕಲಕ್ಕುನ್ನಜ್ಞೆನೆ	ಹೊನ್ನಮಡಕೆ ನೀರಲಿ ಕಲಸುತ್ತಂತು
ನೂಱೊನ್ನು ಪೊನ್‌ಕೋಟ್ಟ ಪುಣ್ಯಂ ತೆಳಿಚ್ಚು	ನೂರೊಂದು ಹೊಂಗೋಟೆಗೆ ತೀರ್ಥ ತಳಿದು
ಆಡ್ನ್ನುಂ[10] ಪೋರುನ್ನುವಲ್ಲೊ ಕಾಯವೆಳ್ಳಾಟ್ಟಿ	ಅಲ್ಲಿಂದಲು ಬಹಳಲ್ಲೊ ಕಾಯವೆಳ್ಳಾಟ್ಟಿ
ಕಾಲ್‌ಮುಕಂ ತೇವಾರಂ[11]ಕಟಿಚ್ಚುವಲ್ಲಮ್ಮ	ಕಾಲು ಮುಖ ತೇವಾರವ ಮುಗಿಸಿದಳಲ್ಲಮ್ಮ

8. ಪುಣ್ಯಂ – ತೀರ್ಥೋದಕ. 9. ಕೊಯಮ್ಬುನ್ನು – ಕಲಸುತ್ತದೆ. 10. ಆಡುನ್ನುಂ – ಅವಿಡನ್ನುಂ, ಅಲ್ಲಿಂದಲೂ 11. ತೇವಾರಂ – ದೇವಕಾರ್ಯ, ಪೂಜೆ. ಆದರೆ ಇಲ್ಲಿ ಕಾಲು ಮುಖ ತೊಳೆದು ಶುದ್ಧವಾಗುವ ವಿಧಿ ಎಂಬ ಅರ್ಥ ತೆಗೆದುಕೊಳ್ಳಬಹುದು.

ದೇವುರಿ[12] ಕೊಂಡಞ್ಞ್ ತಱ್ಱುಡುಕ್ಕುನ್ನು	ದೇವುರಿಯಿಂದಲಿ ನೆರಿಯುಡುವಳು
ದೇವುರಿ ತಲಕೊಂಡ್ ತಲಮುಱಿಕ್ಕುನ್ನ್	ದೇವುರಿತುದಿಯಿಂದ ತಲೆ ಮುಚ್ಚುವಳು
ನೂಱ್ಱೊನ್ನು ಪೊನ್‌ಕೋಟ್ಟ ಮೋಳಿಲ್‌ಪೊಕುನ್ನು[13]	ನೂರೊಂದು ಹೊಂಗೋಟೆ ಮೇಲೆ ಹೋಗ್ತಾಳೆ
ಭಗವಾನ್ ಕಿಡಕ್ಕುನ್ನೋರು ಪಳ್ಳಿಯಱ ನೇರೆ	ಭಗವಂತ ಮಲಗಿರುವ ಗರ್ಭಗುಡಿ ಕಡೆಗೆ
ಪೊನ್ನುಂ ತಿರುಪ್ಪಡೀವಾದುಕ್ಕಲ್ ವನ್ನು ನಿಕ್ಕ್‌ನ್ನ್[14]	ಹೊನ್ನಸಿರಿಹೊಸ್ತಿಲ ಬಾಗಿಲೆಡೆ ಬಂದು ನಿಲುವಳು
ಒರು ಕಾಲುವುಂ[15] ಪುಱಮಾಯಿ ನಿನ್ನುವಲ್ಲಮ್ಮ	ಒಂದು ಕಾಲ ಹೊರಗಿರಿಸಿ ನಿಂತಳಲ್ಲಮ್ಮ
ಪತ್ತುವಿರಲುಕೊಂಡು ವಾಯ್ಕುಯಿಪೊತ್ತಿ[16]	ಹತ್ತು ಬೆರಳಿಂದ ಬಾಯಿಗೆ ಕೈಮುಚ್ಚಿ
ಉದಮಲ ವಾೞುನ್ನಯೆನ್ಱ ಪೊನ್ನಪ್ಪಯೆನ್ನ್	ಉದಮಲ ಆಳುವ ಎನ್ನ ಪೊನ್ನಪ್ಪ ಎಂದು
ಮೂನ್ನ್ ವಿಳಿಯುಂ ವಿಳಿಚ್ಚುವಲ್ಲಮ್ಮ	ಮೂರು ಕರೆಹವ ಕರೆದಳಲ್ಲಮ್ಮ
ಅದು ತನ್ನೆ ಕೇಟ್ಟುವಲ್ಲೋ ಪೊನ್ನುಂ ಶ್ರೀಭಗವಾನ್	ಅದನಾಲಿಸಿದನಲ್ಲೊ ಹೊನ್ನ ಶ್ರೀ ಭಗವಾನ್
ಇಡಪುಱಂ ಇೞ್ಟ್ಟಿ ವಲಭಾಗೋಂ ಉಣನ್ನು	ಎಡಭಾಗವಲುಗಿ ಬಲಭಾಗ ಎಚ್ಚತ್ತ
ಅಪ್ಪೋ ಪಱಞ್ಞುವಲ್ಲೋ ಅಮ್ಮ ಕಾಯವೆಳ್ಳಾಟ್ಟಿ	ಆಗಲು ಹೇಳಿದಳಲ್ಲೊ ಅಮ್ಮ ಕಾಯವೆಳ್ಳಾಟ್ಟಿ
ಒನ್ನಿಪ್ಪಂ ಕೇಕ್ಕ[17]ಯೆನ್ಱ ಪೊನ್ನಪ್ಪಾಯೆನ್ನ್	ಒಂದನು ಈಗ ಕೇಳು ಪೊನ್ನಪ್ಪಾ ಎಂದು
ಉದಿಕ್ಕುವಾನಿಲಞ್ಞುವಾನುಂ[18] ಕಾಲಮಾಯಲ್ಲೋ	ಉದಿಸಲು ಬೆಳಗಲು ಕಾಲವಾಯ್ತಲ್ಲೋ
ಅಪ್ಪೋೞ್ ನಿನಚ್ಚುವಲ್ಲೋಪೊನ್ನುಂ ಶ್ರೀಭಗವಾನುಂ	ಆಗನೆನೆದನಲ್ಲೊ ಹೊನ್ನು ಶ್ರೀ ಭಗವಂತ
ಉದಿಕ್ಕುವಾನಿಲಞ್ಞಾನುಂ ಕಾಲಮಾಯೆಂಗಿಲ್	ಉದಿಸಲು ಬೆಳಗಲು ಕಾಲವಾಯ್ತಾದರೆ

ಅರಯಾಲ್ ತಱಿಕ್ಕಲುಂ ಪೋವುಗ ವೇಣಂ	ಅರಳಿಯಕಟ್ಟೆಗೆ ಪೋಗಲುಬೇಕು
ನೀರ್ಕೊಂಡ್ ನೀರ್ತೇವಾರಂ ಕಟಿಯುಗವೇಣಂ	ನೀರಿಂದ ನೀರ್ತೇವಾರ ನಡೆಯಬೇಕು
ಅರಿಕೊಂಡ್ ಅರಿತೇವಾರಂ ಕಟಿಯುಗವೇಣಂ	ಅಕ್ಕಿಯಿಂದ ಅಕ್ಕಿತೇವಾರ ನಡೆಯಲುಬೇಕು
ಪೂಕೊಂಡ್ ಪೂತೇವಾರಂ ಕಟಿಯುಕವೇಣಂ	ಹೂವಿಂದ ಹೂತೇವಾರ ನಡೆಯಲುಬೇಕು
ಭೂಮಿಕ್ಕುಮುಟ್ಟೋಳಂ ಕುಟಿಯೆಡುಕ್ಕುವಾನ್	ನೆಲದಲ್ಲಿ ಮಂಡಿವರೆಗೆ ಕುಳಿ ತೋಡಲು
ಆಳುಮಜ್ಞಲ್ಲಲ್ಲೊ ಮನುಷ್ಯರಿಲ್ಲಲ್ಲೋ	ಆಳುಗಳಿಲ್ಲಲ್ಲೊ ಮನುಷ್ಯರಿಲ್ಲಲ್ಲೊ

12. ದೇವುರಿ = ಉದ್ದನೆ ಇಮ್ಮಡಿ ವಸ್ತ್ರ (ಸೀರೆ). 13. ಮೋಳಿಲ್ ಪೋಕುನ್ನು – ಮೇಲೆ ಗೋಗುತ್ತಾಳೆ. 14 ನಿಕ್ಕ್ನ್ನ್ – ನಿಲ್ಲುವಳು 15. ಕಾಲುವುಂ – ಕಾಲುಂ, ಕಾಲನ್ನೂ 16. ವಾಯ್ ಕಯಿ ಪೊತ್ತಿ – ಬಾಯನ್ನು ಕೈಯಿಂದ ಮುಚ್ಚಿದಳು. ಆದರ ಸೂಚಕವರ್ತನೆ. 17. ಕೇಕ್ಕ –ಕೇಳ,ಕೇಳು. 18. ನಿಲಜ್ಞನುಂ– ಶೋಭಿಸಲು.

ಆಳ್‌ಮನುಷ್ಯನೇಯುಂ ಸ್‌ಜ್‌ಟ್ಟಿಕ್ಕುನ್ನುಂಡ್[19]	ಆಳು ಮನಷ್ಯನನ್ನೂ ಸೃಷ್ಟಿಸುತ್ತಾನೆ
ಪೂಕೊಂಡ್‌ಪೂತೇವರಂ ಕಟಿಯಣಮೆಂಗಿಲ್	ಹೂವಿಂದ ಹೂತೇವಾರ ನಡೆಯಬೇಕಾದರೆ
ಪೂಪ್ಪಟಿಪ್ಪಾನ್ ಪೂಮಾಣಿಗಳ್‌ಇಲ್ಲಾತ್ತ ಕಾಲಂ	ಹೂಕೊಯ್ಯೆ ಪೂಮಾಣಿಗಳಿಲ್ಲದ ಕಾಲ
ಆಣುಂ[20]ಪೆಣ್ಣುಂ ಪೂಮಾಣಿಗಳೆ ಸ್‌ಜ್‌ಟ್ಟಿಚ್ಚು ತೈವಂ	ಗಂಡುಹೆಣ್ಣು ಪೂಮಾಣಿಯನು ಸೃಷ್ಟಿಸಿತುದೈವ
ಆಣಿನ್ಞೆ ವಲಂಕೈಯಿಲ್ ಪೂಕೊಕ್ಕಯಾಯಿ[21]	ಗಂಡಿನ ಬಲಗೈಲಿ ಪೂಕೊಕ್ಕೆ ಬಂತು
ಪೆಣ್ಣಿನ್ಞೆ ಇಡಂಗೈಯಿಲ್ ಪೂಕ್ಕೊಟ್ಟಯಾಯಿ[22]	ಹೆಣ್ಣಿನ ಎಡಗೈಲಿ ಹೂಬುಟ್ಟಿ ಬಂತು
ಪೂಕ್ಕೊಕ್ಕಯುಂ ಪೂಕ್ಕೊಟ್ಟಯುಂ ಸ್‌ಜ್‌ಟ್ಟಿಚ್ಚುದೈವಂ	ಪೂಕೊಕ್ಕೆ ಹೂಬುಟ್ಟಿ ಸೃಷ್ಟಿಸಿತು ದೈವ

ಕುಳಿಕುಜಿ ತೇವಾರಂ ಕಜಿಯುಕವೇಣಂ	ಮಿಹ[23] ನಾಮ ತೇವಾರ ನಡೆಸಲು ಬೇಕು 66
ಅತಿನು ತುಣಯಾಯಿಟ್ಟು ಆಳು ವೇಣಲ್ಲೋ	ಅದಕೆ ರಕ್ಷಣೆಗಾಗಿ ಆಳು ಬೇಕಲ್ಲೋ
ಅಂಜುಭೃತಕನ್ಮಾರೆ[24]ಯಂಜು ಸ್ಙ್ಟ್ಟಿಚ್ಚು ದೈವಂ	ಐದು ಭೃತಕರನ್ನು ಐದೂ ಸೃಷ್ಟಿಸಿತು ದೈವ
ಅಂಜುಭೃತಕನ್ಮಾರಂಜು ಪೋರುನ್ನದುಂಡ್'	ಐದು ಭೃತಕರ್ಯೆವರೂ ಬರುತಲಿದ್ದಾರೆ
ಎಣ್ಣೆಯುಂ ತಾಳಿ[25]ಯುಮಾಯಿ ಪೋರುನ್ನಜ್ಞನೆ	ಎಣ್ಣೆಯನು ಗುಳ[25]ವನು ತರುವರು ಹಾಗೇನೆ
ಅಂಜೊರುದೇವುರಿಯು[26]ಮಾಯಿ ಪೋರುನ್ನಜ್ಞನೆ	ಐದೊಂದು ದೇವುರಿಯ[26]ಹಿಡಿದು ಬಹರು
ಭಗವಾನ್‌ಕಿಡಕ್ಕುನ್ನ ಪಳ್ಳಿಯಜಿ ನೇರೆ	ಭಗವಂತ ಮಲಗುವ ಗರ್ಭಗುಡಿಯೆದುರು
ಪೊನ್ನುಂ ತಿರುಪ್ಪಡಿ ಕಡನ್ನು ಪೋರುನ್ನಜ್ಞನೆ	ಹೊನ್ನಸಿರಿಹೊಸಲನು ದಾಟಿಬರುವರು ಹಾಗೆ
ಕಯಿತಾಜ್ಞೆ[27] ಮೇಯಿತಾಜ್ಞೆ[28] ಯೆಯಿಪ್ಪಿಕ್ಕು[29]ನ್ನುಂಡ್	ಕೈಯಾನಿಸಿ ಮೈಯಾನಿಸಿಯೆಬ್ಬಿಸುತ್ತಾರೆ
ಉದಮಲ ವಾಟುನ್ನಯೆನ್ಪೊನ್ನಪ್ಪಪ್ಪೋಳ್	ಉದಮಲೆಯಾಳುವ ಪೊನ್ನಪ್ಪ ಈಗಲ್
ಉದಿಕ್ಕುವಾನಿಲಜ್ಞುವಾನುಂ ಕಾಲಮಾಯಲ್ಲೋ	ಉದಿಸಲೂ ಬೆಳಗಲೂ ಕಾಲ ಬಂತಲ್ಲೋ 70
ಕಯಿತಾಜ್ಞೆ ಮೆಯಿತಾಜ್ಞೆಯಜ್ಞ್ ಕೊಟ್ಟುನ್ನುತ್ಂಡ್	ಕೈಯಾನಿಸಿ ಮೈಯಾನಿಸಿಯಾಚೆ ಒಯ್ಯುತ್ತಿದಾರೆ
ನೀರೋಡು ವೆಳ್ಳಿಯೆನ್ನೊರು ಪಾಲ್‌ಕುಳಜ್ಞರ	ನೀರೊಳು ಬೆಳ್ಳಿಯೆಂಬೊ ಹಾಲ ಕೊಳತಡಿಗೆ
ಅವಿಡಯುಂ ಕೊಂಡುನ್ನು ನಿಜುತ್ತುನ್ನದುಂಡ್	ಅಲ್ಲಿಗೆ ಕೊಂಡೊಯ್ದು ನಿಲ್ಲಿಸುತ್ತಾರೆ
ಎಣ್ಣಯುಂ ತಾಳಿತೇಜ್ಞ್ ಕೊಡುಕ್ಕುನ್ನದುಂಡ್	ಎಣ್ಣೆಯ ಮೇಣ್ ತಾಳಿಯುಜ್ಜಿಕೊಡುತ್ತಾರೆ
ಎಟಾನಾಂವೆಳ್ಳಿಪ್ಪಡ ಮೇಲ್‌ತಾತ್ತು ನಿಜುತ್ತಿ	ಏಳನೆ ಬೆಳ್ಳಿಮೆಟ್ಟಲಿಗಿಳಿಸಿ ನಿಲಿಸಿ ಹಚ್ಚಿಯು
ತೇಜ್ಞುಮುರಜ್ಞುಂ ಕುಳಿಪ್ಪಿಕ್ಕುನ್ನ್ಂಡ್	ತಿಕ್ಕಿಯು ಮೀಯಿಸುತ್ತಾರೆ

19. ಸ್ಙ್ಟ್ಟಿಕ್ಕುನ್ನುಂಡ್ – ಸೃಷ್ಟಿಸುತ್ತಾನೆ. 20. ಆಣುಂ –ಗಂಡನ್ನೂ 21. ಪೂಕೊಕ್ಕ – ಹೂಕೊಯ್ಯುವ ಉದ್ದನೆ ಕೋಲಿನ ಕೊಕ್ಕೆ, ದೋಟಿ 22. ಪೂಕ್ಕೊಟ್ಟ – ಹೂತುಂಬುವ ಬುಟ್ಟಿ 23. ಮಿಹ–ಸ್ನಾನ 24.

ಭೃತಕನ್ಮಾರೆ – ಭೃತ್ಯರನ್ನು 25. ತಾಳಿ –ಗುಳ, ಜಿಡ್ಡು ಕಳೆಯುವ ಸಸ್ಯದ ಅರೆವು 26. ದೇವುರಿ – ಒರಸುವ ದೇವರ ಕಿರುಬಟ್ಟೆ 27. ಕಯಿ – ಕೈ 28. ತಾಙ್ಙೆ – ಆಧರಿಸಿ, ಆನಿಸಿ. 29. ಯೆಯಪ್ಪಿಕ್ಕುನ್ನುಂಡ್ – ಎಬ್ಬಿಸುತ್ತಾರೆ.

ಪಾಲ್ಕ್ಕುಳಂ ಚಾಡಿ ಕುಳಿಯುಂ ಕಟಿಚ್ಚು	ಹಾಲ್ಗೊಳಕೆ ಹಾರಿ ಮೀಹವನು ಮುಗಿಸಿ
ಮುಙ್ಙಿಕ್ಕುಳಿಚ್ಚಙ್ಙ್ ಪೋರುನ್ನ ನೇರಂ	ಮುಳುಗಿ ಮಿಂದತ್ತ ಬರುತಿರುವ ವೇಳೆ
ಒನ್ನಾನಾಂ ದೇವುರಿ ಎಡುಕ್ಕುನ್ನದ್ಂಡ್	ಒಂದನೆ ದೇವುರಿ ತೆಗೆಯುತ್ತಾನೆ
ಭಗವಾನ್ ತಿರುಮುಕವುಂ ತೋಱಿತ್ತುನ್ನ್ಂಡ್	ಭಗವಂತ ಸಿರಿಮೊಗ ಒರಸುತ್ತಾನೆ
ರಂಡಾನಾಂ ದೇವಿರಿಂ ಎಡುಕ್ಕುನ್ನದುಂಡ್	ಎರಡನೆ ದೇವುರಿಯ ತೆಗೆಯುತ್ತಾನೆ
ಭಗವಾನ್ ತಿರುತ್ತಲಯುಂ ತೋಱಿತ್ತುನ್ನ್ಂಡ್	ಭಗವಂತ ಸಿರಿತಲೆ ಒರಸುತ್ತಾನೆ
ಮೂನ್ನಾನಾಂ ದೇವಿರಿಕೊಂಡುಂಮೆಯ್ಯುಂ ತೋಱಿತ್ತುನ್ನು	ಮೂರನೆ ದೇವುರಿಯಿಂದ ಮೈಯನು ಒರಸಿಕೊಂಬ
ನಾಲಾನಾಂ ದೇವಿರಿಕೊಂಡುಂ ಅರ ತೋಱಿತ್ತ್ನ್ನ್	ನಾಲ್ಕನೆ ದೇವುರಿಯಿಂದ ನಡು ಒರಸಿಕೊಂಬ
ಅಂಜಾನಾಂ ದೇವುರಿಕೊಂಡ್ಕಾಲುಂತೋಱಿತ್ತಿ	ಇದನೆ ದೇವುರಿಯಿಂದ ಕಾಲೊರಸಿದ
ಅಪ್ಪೋಳ್ ಪಱಯುನ್ನುವಲ್ಲೋ ಪೊನ್ನುಂ ಶ್ರೀಭಗವಾನುಂ	ಆವಾಗ ಪೇಳ್ವನಲ್ಲೊ ಹೊನ್ನ ಶ್ರೀ ಭಗವಂತ
ಒನ್ನಿಪ್ಪಂ ಕೇಳ್ಕ್ಕಣಂ ಎನ್ಱೆ ಶ್ರೀ ಪಟ್ಟರ್ ಅನುಜಾ	ಒಂದೀಗ ಕೇಳ್ಬೇಕು ನನ್ನ ಶ್ರೀ ಪಟ್ಟರ್ ತಮ್ಮಾ
ಅರ್ಜುನಮಲಮುಗಳಿಲ್ ಪೋವುಕವೇಣಂ	ಅರ್ಜುನಬೆಟ್ಟದ ಮೇಲೆ ಹೋಗೇಕು
ಪೂಮಾಣಿಗಳ ತನ್ನೆಯುಂ ಕಾಣುವಾನಿಲ್ಲ	ಪೂಮಾಣಿಗಳನೂ ಕಾಂಬುದಕಿಲ್ಲ
ಅದು ತನ್ನೆ ಕೇಟ್ಟುವಲ್ಲೊ ಕುಞ್ಞೆ ಶ್ರೀ ಪಟ್ಟನ್ ಕುಞ್ಞೆ	ಅದನೇ ಕೇಳಿದನಲ್ಲೊ ಮಗು ಶ್ರೀ ಪಟ್ಟನ್ ಮಗುವು

ಅರ್ಜುನಮಲಮುಗಳಿಲ್ ಕೇಱುನ್ನತುಂಡ್	ಅರ್ಜುನ ಬೆಟ್ಟವನಡರುತ್ತ ಬಂದ
ಅದುತನ್ನೆ ಕಂಡುವಲ್ಲೋ ಅರ್ಜುನಕ್ಕಿಡಾವು	ಅದನೇ ಕಂಡನಲ್ಲೊ ಅರ್ಜುನಪುಟ್ಟ
ಪೂಮಾಣಿಗಳುಂ ವೇಗತ್ತಿಲ್‌ಪೋರುನ್ನತ್‌ಂಡ್ ಅರ್ಜುನಮಲಮುಕಳಿಲೆತ್ತುನ್ನ ನೇರಂ	ಪುಮಾಣಿಗಳೂ ಬೇಗನೆ ಬರುತಲಿದ್ದಾರೆ ಅರ್ಜುನ ಬೆಟ್ಟದ ಮೇಲೆ ತಲುಪುವ ವೇಳೆ
ಅರ್ಜುನಮಲ ಚವುಟ್ಟಿ ವಿಪ್ಪಿಕ್ಕುನ್ನ್ಂಡ್ ಪೇಡಿಚ್ಚ್ ಪಾಯುನ್ನಲ್ಲೋ ಪೂಮಾಣಿಗಳ್	ಅರ್ಜುನಬೆಟ್ಟ ಒದೆದು ನಡುಗಿಸುತ್ತಾನೆ ಬೆದರಿ ಓಡುವರಲ್ಲೊ ಪೂಮಾಣಿಗಳು
ಕರಿಂಗಲ್ಲುಂ ಪಾತಾಳತ್ತಿಲ್ ಕೂಡುನ್ನತ್‌ಕಂಡು ಅದು ತನ್ನೆ ಕಂಡುವಲ್ಲೋ ಅರ್ಜುನಕ್ಕಿಡಾವು	ಕಗ್ಗಲ್ಲ ಪಾತಾಳದಿ ಸೇರ್ವುದ ಕಂಡ ಅದನೇ ಕಂಡನಲ್ಲೊ ಅರ್ಜುನಪುಟ್ಟ
ಕರಿಂಗಲ್ಲ್ ವೆಚ್ಚಜ್ಜಡಕ್ಕುನ್ನತ್ ಕಂಡ್ ಅಪ್ಪೋಳ್ ಪಱಞ್ಞ್‌ವಲ್ಲೊ ಪೊನ್ನಪ್ಪ[30]ನಾಣ್	ಕಗ್ಗಲ್ಲನಿಟ್ಟು ಮುಚ್ಚುವುದನು ಕಂಡ ಆಗಲ್ ಪೇಳಿದನಲ್ಲೊ ಪೊನ್ನಪ್ಪ[30] ತಾನು
ಪೂವಿನ್ನು ಪೋಯುಳ್ಳೋರು ಪೂಮಾಣಿಯಿಲ್ಲ ತೇಡಿಕ್ಕೊಂಡು ಪೋಯುಳ್ಳ ಶ್ರೀ ಪಟ್ಟನುಮಿಲ್ಲ	ಹೂವಿಗೆ ಹೋದಂಥ ಪೂಮಾಣಿಯಿಲ್ಲ ಹುಡುಕಿ ಹೋಗಿರುವಂಥ ಶ್ರೀ ಪಟ್ಟನು ಇಲ್ಲ
ವಾಳು[31]ಮೆಡುತ್ತಙ್ಙು ಪೋರುನ್ನದ್‌ಕಂಡು ಅರ್ಜುನಮಲಮುಗಳಿಲುಂ ಪೋರುನ್ನತು ಕಂಡು	ಬಾಳನು[31] ತೆಗೆದಾಚೆ ಬರುವುದ ಕಂಡ ಅರ್ಜುನಬೆಟ್ಟದ ಮೇಲೂ ಬರುವುದ ಕಂಡ
ಅರ್ಜುನಮಲಮುಗಳಿಲುಂ ಕೇಱುನ್ನತುಂಡ್ ಅದು ತನ್ನೆ ಕಂಡುವಲ್ಲೊ ಅರ್ಜುನಕ್ಕಿಡಾವು	ಅರ್ಜುನಬೆಟ್ಟದ ಮೇಲೆ ಏರುತ್ತಿದ್ದಾನೆ ಅದನೇ ಕಂಡನಲ್ಲೊ ಅರ್ಜುನಪುಟ್ಟ
ಅರ್ಜುನಮಲಚವಿಟ್ಟಿ ವಿಱಪ್ಪಿಕ್ಕುನ್ನುಂಡ್ ಅಪ್ಪೊಪ್ಪಱಞ್ಞುವಲ್ಲೊ ಪೊನ್ನುಂ ಶ್ರೀ ಭಗವಾನುಂ	ಅರ್ಜುನಬೆಟ್ಟವೊದೆದು ನಡುಗಿಸುತಾನೆ ಆಗ ಹೇಳಿದನಲ್ಲೊ ಹೊನ್ನಭಗವಂತ

ಇತ್ರ ನಾಳುಂ ನೀ ಅರ್ಜುನಕ್ಕಿಡಾವ್	ಇನಿತು ದಿವಸ ನೀನು ಅರ್ಜುನಕ್ಕಿಡಾವು
ಇನ್ನು ಮುದಲ್ಕ್ಕು ನೀ ಕಟಿಕ್ಕಿನಾಂಕೋಜ್ಚಿ[32]	ಇಂದಿನಿಂದ ನೀ ಮೂಡಣದ ತಾರೆ
ಪಡಿಞ್ಞಾಱು ಕಾಣುಂಬೋಳ್ ನೀ ಅತ್ತಾಯಕ್ಕೊಜ್ಚಿಯನ್[33]	ಪಡುವಣದಿ ಕಾಂಬಾಗ ನೀ ಸಂಜೆತಾರೆ
ವಾಳುಕೊಂಡೆಱಿಞ್ಞು ಮುಱಿಕ್ಕುನ್ನತ್ಂಡ್	ಬಾಳನ್ನೆಸೆದವ ತುಂಡರಿಸುತ್ತಾನೆ
ಅವಿಡುನ್ನ್ ಪೋರುನ್ನ್ ಪೊನ್ನುಂ ಶ್ರೀಭಗವಾನ್	ಅಲ್ಲಂದ ಬರುವನು ಹೊನ್ನು ಶ್ರೀ ಭಗವಾನ್
ಕರಿಂಗಲ್ಲ್ ಪಾತಾಳತ್ತಿಲ್ ಪೋರುನ್ನತ್ಂಡ್	ಕಗ್ಗಲ್ಲ ಪಾತಾಳದಲಿ ಬರುತಾನೆ
ಕರಿಂಗಲ್ಲ್ ಪಾತಾಳಂ ತುಱಕ್ಕುನ್ನತ್ಂಡ್	ಕಗ್ಗಲ್ಲ ಪಾತಾಳ ತೆರೆಯುತ್ತಿದ್ದಾನೆ
ಅರ್ಜುನಮಲಮುಕಳಿಲುಂ ಪೋಕುನ್ನತ್ಂಡ್	ಅರ್ಜುನಬೆಟ್ಟದ ಮೇಲೂ ಹೋಗುತಾನೆ

30. ಪೊನ್ನಪ್ಪನ್ – ಪ್ರೀತಿಯ (ಚಿನ್ನದಂಥ) ಅಪ್ಪ. 31 ವಾಳ್ – ಬಾಳು, ಖಡ್ಗ. 32. ಕಿಟಿಕ್ಕಿನಾಂ ಕೋಜ್ಚಿ – ಮೂಡಣತಾರಕೆ (ಬೆಳ್ಳಿ ಚುಕ್ಕೆ) 33. ಅತ್ತಾಯಕ್ಕೊಜ್ಚಿಯನ್– ಸಂಜೆತಾರೆ. ಅತ್ತಾಯಂ ಅತ್ತಾಟಿಂ, ಬೈಗು

ಕೊಟ್ಟ ನಿಱಯುವೋಳಂ ಪೂ ಕೊಯ್ತೆಡುತ್ತು	ಬುಟ್ಟಿ ತುಂಬುವಷ್ಟು ಹೂಕೊಯ್ದುತೆಗೆದ
ವೇಗಂ ಕಡುಮನ[34] ಪೋರುನ್ನತ್ಂಡ್	ಬೇಗನೆ ಲಗುಬಗನೆ ಬರುತಲಿದ್ದಾನೆ
ಭಗವಾನ್ ಪೂವೊಡು ಪೋರುನ್ನ ನೇರಂ	ಭಗವಂತ ಹೂ ಸಹಿತ ಬರುವಂಥ ವೇಳೆ
ಮಹಾಮಾಯ ಪೊನ್ನಾನ ಕಂಡು ಭಗವಾನ್	ಮಹಾಮಾಯ ಹೊನ್ನಾನೆಯ ಕಂಡ ಭಗವಾನ್
ಮಹಾಮಾಯ ಪೊನ್ಕುದಿರ ಕಂಡು ಭಗವಾನ್	ಮಹಾಮಾಯ ಹೊನ್ಕುದಿರೆಯ ಕಂಡ ಭಗವಾನ್
ಪೊನ್ನಾನ ಪೊನ್ಕುದಿರ ಕಂಡು ಭಗವಾನ್	ಹೊನ್ನಾನೆ ಹೊಂಗುದುರೆ ಕಂಡ ಭಗವಾನ್
ಪೊನ್ಕುದಿರಮೋಳಿಲುಂ ಕಾಲುಂ ನೀಟ್ಟುನ್ನ್	ಹೊಂಗುದುರೆ ಮೇಲೂ ಕಾಲು ನೀಡುವನು
ಅತ್ತಿನೆನ್ನರಯಾತ್ತಱಿಕ್ಕಲುಂ ಪೋರುನ್ನತ್ಂಡ್	ಆನೆಯೇರಿ ಅರಳಿಕಟ್ಟೆಯೆಡೆಗೂ ಬರುತ್ತಾನೆ

ಪೊನ್ನಾನಪ್ಪುಱತ್ತಿನ್ನಿಱಙ್ಙಿ ಭಗವಾನ್	ಹೊನ್ನಾನೆ ಬೆನ್ನಿಂದಲಿಳಿದ ಭಗವಾನ್
ಪೊನ್‌ಪೀಠತ್ತಿಲ್ ಮುಗಳಿಲಿರುನ್ನು ಭಗವಾನ್	ಹೊನ್ನಪೀಠದ ಮೇಲೆ ಕುಳಿತ ಭಗವಾನ್
ಪೊನ್ನೋಲ ಪೊನ್ನೆ಴ುತ್ತಾಣಿ ಕಂಡು ಭಗವಾನ್	ಹೊನ್ನೋಲೆ ಹೊನ್ನಬರೆಕಂಟ ಕಂಡ ಭಗವಾನ್
ನೀರ್‌ಕೊಂಡು ನೀರ್‌ತೇವಾರಂ ಕಟಿಚ್ಚು ಭಗವಾನ್	ನೀರ್ಕೊಂಡು ನೀರರ್ಚನೆ ನಡೆಸಿಹ ಭಗವಾನ್
ಅರಿಕೊಂಡ್ ಅರಿತೇವಾರಂ ಕಟಿಚ್ಚು ಭಗವಾನ್	ಅಕ್ಕಿಯಿಂದ ಅಕ್ಕಿಯರ್ಚನೆ ನಡೆಸಿದ ಭಗವಾನ್
ಪೂಕೊಂಡ್ ಪೂತೇವಾರಂ ಕಟಿಚ್ಚುಭಗವಾನ್	ಹೂವಿಂದ ಹೂವಿನಪೂಜೆ ನಡೆಸಿದ ಭಗವಾನ್
ಮಹಾಮಾಯ ಪೊನ್‌ಪೀಠಂ ಕಂಡು ಭಗವಾನ್	ಮಹಾಮಾಯ ಹೊನ್ನಪೀಠ ಕಂಡ ಭಗವಾನ್
ಪೊನ್‌ಪೀಠಂಮೋಳಿಲಿರುನ್ನು ಭಗವಾನ್	ಹೊನ್ನಪೀಠವೇರಿ ಕುಳಿತನಾ ಭಗವಾನ್
ವೆಳ್ಳಿಪೀಠಂ ಮೋಳಿಲ್‌ಕಾಲ್ ನೀಟ್ಟ್ವನ್ನ್	ಬೆಳ್ಳಿಪೀಠದ ಮೇಲೆ ಕಾಲ ನೀಡಿದ
ಪೊನ್ನೋಲ ಪೊನ್ನೆ಴ುತ್ತಾಣಿ[35] ಎಡುಕ್ಕುನ್ನತ್‌ಂಡ್	ಹೊನ್ನೋಲೆ ಹೊನ್ನ ಬರೆಕಂಟ ತೆಗೆಯುತ್ತಾನೆ
ಏನ್ನುಳ್ಳ[36] ಆಕಾಶವುಂ ಕಂಡು ಕರುದಿ	ಎತ್ತರದ ಆಕಾಶವ ಕಂಡು ಬಗೆದು
ತಾಣುಳ್ಳ ಭೂಮಿಯಾಲುಂ ಕಂಡು ಕರುದಿ	ತಗ್ಗಿರುವ ಭೂಮಿಯನ್ನೂ ಕಂಡು ಬಗೆದು
ನಾಲೊರುಭಾಗಙ್ಙಳುಂ ಕಂಡುಕರುದಿ	ನಾಲ್ಕು ಭಾಗಗಳನು ಕಂಡು ಬಗೆದು
ಎಟ್ಟೊರು ದಿಕ್ಕಿಲುಂ ಕಂಡು ಕರುದಿ	ಎಂಟು ದಿಕ್ಕುಗಳನು ಕಂಡು ಬಗೆದು
ವೇಂಡುಂಬೋಲೊಕ್ಕೆಯುಂ ಕಂಡು ಕರುದಿ	ಬೇಕಾದಂತೆಲ್ಲವ ಕಂಡು ಬಗೆದು
ಉದಯವುಮಸ್ತಮಾನಂ ಎಟುದಿ ಭಗವಾನ್	ಉದಯಾಸ್ತಮಾನವ ಬರೆದ ಭಗವಾನ್

34. ವೇಗಂ ಕಡುಮನ – ಎರಡೂ ಶಬ್ದಗಳಿಗೆ 'ಬೇಗನೆ' ಎಮದು ಒಂದೇ ಅರ್ಥ. 35. ಎಟುತ್ತಾಣಿ – ಓಲೆ ಹಾಳೆಯಲ್ಲಿ ಬರೆಯುವ ಕಂಟ. 36. ಏನ್ನುಳ್ಳ – ಎತ್ತರವಿರುವ

ಏಝ್ಝುವುಮಿಙಿಕ್ಕಮೆಟುದಿ ಭಗವಾನ್	ಉಬ್ಬರವಿಳಿತವ ಬರೆದ ಭಗವಾನ್
ಆಯಿರತ್ತೊನ್ನು ಜನನಮೆಟುದಿ ಭಗವಾನ್	ಸಾವಿರದೊಂದು ಜನನ ಬರೆದ ಭಗವಾನ್
ಆಯರಂ ಮರಣಮೆಟುದಿ ಭಗವಾನ್	ಸಾವಿರ ಮರಣ ಬರೆದ ಭಗವಾನ್
ತಟ್ಟಿಕ್ಕೂಟ್ಟಿ ಸಮಂ ಚೆಯ್ದು ಪೊನ್ನು ಶ್ರೀ ಭಗವಾನ್	ತೊಡೆದು ಕೂಡಿಸಿ ಸಮಗೈದ ಪೊನ್ನು ಶ್ರೀ ಭಗವಾನ್
ಮಣ್ಣುಕೊಂಡ್ ಮನುಷ್ಯನೆ ಸ್ಋಷ್ಟಿಚ್ಚುದೈವಂ	ಮಣ್ಣಿನಿಂದ ಮನುಷ್ಯನ ಸೃಷ್ಟಿಸಿದು ದೈವ
ತೆಕ್ಕು ವಡಕ್ಕುಮಾಯಿ ಕೀಱೆ ಭಗವಾನ್	ತೆಂಕುಬಡಗಾಗಿ ಸೀಳಿದ ಭಗವಾನ್
ಕಿಟಕ್ಕು ಪಡಿಞ್ಞಾಱ್ ಎರಯುಂ ಕಲುಪ್ಪಿಚ್ಚು[37]	ಮೂಡುಪಡವಣದಿ ತೀನು ಕಲುಪಿಸಿದ[37]
ಪೊನ್ನಾನಪ್ಪುಱಂ ಕೇಱೆ ಪೊನ್ನುಂ ಶ್ರೀ ಭಗವಾನ್	ಹೊನ್ನಾನೆ ಬೆನ್ನೇರಿರ್ದ ಹೊನ್ನ ಶ್ರೀ ಭಗವಾನ್
ಪೊನ್‌ಕುದಿರ ಮೋಳಿಲುಂ ಕಾಲು ನೀಟ್ಟುನ್ನ್	ಹೊಂಗುದುರೆ ಮೇಲೂ ಕಾಲು ನೀಡುವನು
ಉದಮಲಕೋಟ್ಟಕ್ಕುಂ ವನ್ನು ಭಗವಾನ್	ಉದಯಾದ್ರಿ ಕೋಟೆಗೆ ಬಂದ ಭಗವಾನ್
ಅಸ್ತಮಾನಕ್ಕೋಟ್ಟಯಿಲಮ್ಮ ಅಂಜನಾದೇವಿ	ಅಸ್ತಮಾನಕೋಟೆಯಮ್ಮ ಅಂಜನಾದೇವಿ
ಅಂಜನಾದೇವಿಯುಮಜ್ಞ ಪೋರುನ್ನದ್‌ಂಡ್	ಅಂಜನಾದೇವಿಯು ಆಚೆ ಬರುತಲಿದ್ದಾಳೆ
ಅಸ್ತಮಾನಕ್ಕೋಟ್ಟಯಿಲ್ ಮಹೇಶ್ವರಿಯಮ್ಮ	ಅಸ್ತಮಾನಕೋಟೆಯವಳು ಮಹೇಶ್ವರಿಯಮ್ಮ
ಅಪ್ಪೋಳೆ ಚೋದಿಚ್ಚುವಲ್ಲೊ ಮಹೇಶ್ವರಿಯಮ್ಮ	ಆಗಲೆ ಕೇಳಿದಳಲ್ಲೋ ಮಹೇಶ್ವರಿಯಮ್ಮ
ಉದಿ ವೆಳಿಯೋಜನ ನಡತ್ತಾತ್ತದೆಂದೇ	ಉದಿಬೆಳಗಿನಾಚರಣೆ ನಡೆಸದಿರುವುದೇನು
ಅಪ್ಪೋಪ್ಪರಞ್ಞುವಲ್ಲೋ ಪೊನ್ನುಂ ಶ್ರೀ ಭಗವಾನ್	ಆಗ ಪೇಳಿದನಲ್ಲೋಹೊನ್ನ ಶ್ರೀ ಭಗವಾನ್
ಎಜ್ಜನೆ ಉದಿವೆಳಿ[38] ನಡತ್ತೇಂಡು ಞಾನುಂ	ಎಂತು ಉದಿವೆಳಿ ನಡೆಸಿಯೇನು ನಾನು
ಭೂಮಿಲ್ ನರಮನುಷ್ಯನೆ ಸ್ಋಷ್ಟಿಚ್ಚುಞಾನುಂ	ಭೂಮಿಯಲಿ ನರಮನುಷ್ಯನ ಸೃಷ್ಟಿಸಿದೆ ನಾನು
ವೇಂಡುಂಬೋಲೊಕ್ಕಯುಂ ಕಂಡು ಕರುದಿ	ಬೇಕಾದಂತೆಲ್ಲವ ಕಂಡು ಬಗೆದೆ

ಎಂನ್ನೊಊರುದಿವೆಳಿ ಕೊಂಡಿಱಊಞ್ಞಾನ್ನ[39]	ನನ್ನುದಿಬೆಳಗದು ತಾಗಿದರೆಯು
ಭೂಮಿನರಮನುಷ್ಯನ್ ಕರಿಞ್ಞುನಿಪೋವ್ವಲೋ[40]	ಭೂಮಿನರಮನುಷ್ಯ ಕರಕಲಾಗುವನಲ್ಲೊ
ಅಪ್ಪೋಪ್ಪಱಞ್ಞುವಲ್ಲೊ ಮಹೇಶ್ವರಿಯಮ್ಮ	ಆಗ ಪೇಳಿದಳಲ್ಲೊ ಮಹೇಶ್ವರಿಯಮ್ಮ

37. 'ತೆಕ್ಕು ವಡಕ್ಕು ವಾಯಕೀಱಿಯ ಆಳು ತನ್ನೆ ಕಿ಴ಕ್ಕು ಪಡಿಞ್ಞಾಱ್ ಇರಯುಂ ಕಲ್ಪಿಕ್ಕುಂ' (ತೆಂಕು ಬಡಗು ಬಯಿ ಸೀಳಿದವನೇ ಮೂಡುಪಡು ಆಹಾರವನ್ನೂ ಕಲ್ಪಿಸುತ್ತಾನೆ) ಎಂಬ ಒಂದು ಗಾದೆ ಮಾತು ಇದೆ. ಕಲುಪಿಸಿದ – ಆದೇಶಿಸಿದ. ತೀನು – ಪೋಷಣೆ, ಆಹಾರ. ಅದೇ'ವಿರ'

ಆಱು ಮಱಯುಂ ಮಱಕ್ಕಕತ್ತ್ನ್ನ್	ಆರು ಮರೆಯೂ ಮರೆಯೊಳಗಿನಿಂದ
ಏಟುಕದಿರ್‌ವೆಚ್ಚುಂ ಪೊನ್‌ಕದಿರ್‌ವೆಚ್ಚುಂ	ಏಳು ಕದಿರನ್ನಿಟ್ಟೂ ಪೊನ್‌ಕದಿರನಿಟ್ಟೂ
ಉದಿವೆಳಿಯೋಜನ ನಡತ್ತುವ ವೇಣಂ	ಉದಿಬೆಳಗು ಯೋಜನೆ ನಡೆಸಲುಬೇಕು
ಅಪ್ಪೊಟೆ ಚೆಱುಮನುಷ್ಯನು ತಣುಪ್ಪ್ ಕಿಟ್ಟಲ್ಲೊ	ಆಗ ಕಿರುಮನುಷ್ಯಗೆ ತಣುಪು ಸಿಗುವುದಲ್ಲೊ
ಆಱು ಮಱಯುಂ ಮಱಕ್ಕಕತ್ತ್ನ್ನ್	ಆರು ಮರೆಯ ಮಾಡಿ ಮರೆಯೊಳಗೆ
ಏಟುಕದಿರ್‌ವೆಚ್ಚುಂ ಪೊನ್‌ಕದಿರ್ ವೆಚ್ಚುಂ	ಏಳು ಕದಿರನಿಟ್ಟು ಪೊನ್ ಕದಿರನಿಟ್ಟೂ
ಉದಿವೆಳಿಯೋಜನ ನಡತ್ತಿ ಭಗವಾನ್	ಉದಿಬೆಳಗು ಯೋಜನೆ ನಡಿಸಿದ ಭಗವಾನ್
ಉಚ್ಚ ತಿರಯುವೋಳಂ ಆನಪ್ಪುಱತ್ತುಂ	ನಡುನೆತ್ತಿ ತಿರುಗೋವರೆಗೆ ಆನೆ ಮೇಲೂ

ನಮ್ಮ ಲೋಕಗೀತ(ನಾಡನ್‌ಪಾಟು)ಗಳನ್ನು ಸಾಮುದಾಯಿಕ ಗಾನಗಳು, ಆರಾಧನಾಗಾನಗಳು, ವಿನೋದ ಗಾನಗಳು, ಶ್ರಮಿಕ ಪಾಟುಗಳು ಎಂದು ಹೀಗೆ ಹಲವು ಬಗೆಗಳಾಗಿ ವರ್ಗೀಕರಿಸಲು ಸಾಧ್ಯ. ಭವಿಷ್ಯದಲ್ಲಿ ಉಳಿಯಬೇಕೆಂಬ ಉದ್ದೇಶವಿರುವ ಯಾವುದೇ ಅರಿವನ್ನೂ ಗಾನರೂಪಕ್ಕೆ ಪರಿವರ್ತಿಸಲು ಪ್ರಾಚೀನರು ಶ್ರಮಿಸಿದ್ದರು. ಶಾಸ್ತ್ರ, ತತ್ವಜ್ಞಾನ, ಸದಾಚಾರ, ಚರಿತ್ರೆ, ಐತಿಹ್ಯ ಮೊದಲಾದ ಯಾವುದೆ

ವಿಷಯವನ್ನು ಪಾಟುಗಳಾಗಿ ಆವಿಷ್ಕರಿಸಲಾಗಿದೆ. ಜ್ಯೋತಿಷ , ರೇಖಾಶಾಸ್ತ್ರ, ಕೃಷಿ, ವೈದ್ಯ, ವೇದಾಂತ ಮೊದಲಾದವು ಲೋಕಗೀತಕ್ಕೆ ವಿಷಯವಾದದ್ದಿದೆ. ನಿರರ್ಥಕ ಗಾನಗಳೂ 'ನಾಡನ್ ಪಟು'ಗಳಲ್ಲಿ ಇವೆ.

ಕೇರಳದ ಅನುಷ್ಠಾನ ಪರಂಪರೆ

ಅನುಷ್ಠಾನ ಕರ್ಮಗಳು, ಅನುಷ್ಠಾನ ಕಲಾನಿರ್ವಹಣೆ, ಆರಾಧನೆ, ಪೂಜೆ, ಮಾಂತ್ರಿಕಾನುಷ್ಠಾನ ಪದ್ಧತಿಗಳು ಮೊದಲಾದವುಗಳಲ್ಲಿ ಹಾಡುವ ಪಾಟುಗಳೆಲ್ಲ 'ಅನುಷ್ಠಾನ (ಧಾರ್ಮಿಕ ಆಚರಣೆ) ಗಾನ' ವಿಭಾಗದಲ್ಲಿ ಬರುವವುಗಳಾಗಿವೆ. ಕೇರಳದ ಲೋಕಗೀತಗಳಲ್ಲಿ ದೊಡ್ಡದೊಂದು ಪಾಲು ಅನುಷ್ಠಾನಪರವಾಗಿವೆ.

ಅನುಷ್ಠಾನಗಾನಗಳು ಬಹುತೇಕ ಮತಪರವಾದವುಗಳು. ಆದರೆ ಮತಪರವಾದ ಗಾನಗಳೆಲ್ಲ ಏಕಪ್ರಕಾರ ಅನುಷ್ಠಾನಬದ್ಧ ಗಾನಗಳಲ್ಲ. ವಿನೋದ ಗಾನಗಳಲ್ಲೂ ಮತೀಯ ಸಂಬಂಧ ಪಾಲಿಸುವಂಥ ಭಾಗಗಳನ್ನು ಕಾಣಬಹುದು. ಕೈತಟ್ಟು ಆಟದ (ಕೈಕೊಟ್ಟಿಕ್ಕಳಿ) ಪಾಟುಗಳೂ, ಓಣಪಾಟುಗಳೂ (ಓಣಂ ಹಬ್ಬದಲ್ಲಿ ಹಾಡುವ ಪಾಟುಗಳೂ) ವಿನೋದಗಾನಗಳೆಂದು ಹೇಳಬಹುದಾದರೂ ಅವು ಮತಪರವಾದ ಸಂಭ್ರಮಾಚರಣೆಗೆ ಸಂಬಂಧಪಡುತ್ತವೆ. ಕೋಲಡಿ(ಕಂಬಡಿ), ಕಳಿಪಾಟು (ಆಟದ ಹಾಡು)ಗಳು ಹಿಂದುಗಳಲ್ಲೂ, ಮುಸ್ಲಿಮರಲ್ಲೂ, ಕ್ರೈಸ್ತರಲ್ಲೂ ಪ್ರಚಾರದಲ್ಲಿವೆ. ಮತೀಯ ಪರಾಮರ್ಶೆಗಳಿರುವ ಹಾಡುಗಳನ್ನೂ ಅವುಗಳಲ್ಲಿ ಕಾಣಬಹುದು.

ಅನುಷ್ಠಾನ ಶಾಖೆಗಳು

ಪರಂಪರೆಯಲ್ಲೂ, ಪ್ರಯೋಗಲ್ಲೂ, ಧರ್ಮದಲ್ಲೂ ವೈವಿಧ್ಯ ತೋರುವ ಅನೇಕ ಶಾಖೆಗಳನ್ನು ನಮ್ಮ ಅನಷ್ಠಾನಗಾನಗಳಲ್ಲಿ ಕಾಣಬಹುದು. 'ತೋಱ್ಱಂಪಾಟು'ಗಳು, 'ಸರ್ಪಪಾಟು'ಗಳು, 'ತೀಯಾಟ್ಟು (ಬೆಂಕಿಯಾಟ)ಪಾಟು'ಗಳು, 'ಕಳಮೆಟುತ್ತು ಪಾಟು'ಗಳು (ಮಂಡಲ ಬರೆಹದ ಹಾಡುಗಳು), 'ಅಯ್ಯಪ್ಪನ್ ಪಾಟು'ಗಳು; 'ಬ್ರಾಹ್ಮಣಿ ಪಾಟು'ಗಳು, 'ಕುತ್ತಿಯೋಟ್ಟ ಪಾಟು'ಗಳು, 'ಚಾತ್ತಿರಾಂಕ ಪಾಟು'ಗಳು, ಪೂರಕ್ಕಳಿ ಪಾಟು'ಗಳು, 'ಆವಿಯರ್ ಪಾಟು', ಕಣ್ಯಾರ್‌ಕಳಿ ಪಾಟು', 'ಚೀಱುಂಬ (ಭಗವತಿ) ಪಾಟು', 'ಮುಂಡ್ಯನ್ ಪಾಟು' ಮೊದಲಾದವು ಅನುಷ್ಠಾನ ಪರವಾದವುಗಳಾಗಿವೆ.

ಕೇರಳದ ವಿವಿಧ ಭಾಗಗಳಲ್ಲಿ 'ತೋಱ್ಱಂ ಪಾಟು'ಗಳೆಂಬ ಹೆಸರಿನಲ್ಲಿ ಅನುಷ್ಠಾನ ಗಾನಗಳಿವೆ. ದಕ್ಷಿಣ ಕೇರಳದ 'ವೇಲನ್' ಜನಾಂಗದ 'ಭಗವತಿ ಪಾಟು', ಮಧ್ಯಕೇರಳದ ಮಣ್ಣನ್ ಜನಾಂಗದ ಭಗವತಿ ತೋಱ್ಱವೂ, ಪುಲಯರ ಕಣ್ಣಗಿ ತೋಱ್ಱವೂ ಕುಱುಪ್ಪುಗಳೂ, ತೀಯಾಟ್ಟುಣ್ಣಿಗಳೂ ಹಾಡುವ 'ಭದ್ರಕಾಳಿ ತೋಱ್ಱ'ವೂ, 'ಮಣಿಮಂಗತ್ತೋಱ್ಱ'ವೂ, ತೆಯ್ಯಂಪಾಡಿನಂಬಿಯಾನ್‌ಮಾರ್ ಹಾಡುವ 'ದಾರಿಗವಧಂ ತೋಱ್ಱಂ', 'ಮಹಿಷವಧಂ ತೋಱ್ಱಂ', 'ಯಕ್ಷಿತೋಱ್ಱಂ', 'ನಾಗತ್ತೋಱ್ಱಂ'

ಮೊದಲಾದವುಗಳೂ, ಉತ್ತರ ಕೇರಳದಲ್ಲಿ 'ತೆಯ್ಯಂ', 'ತಿಱ'ಗಳಲ್ಲಿ ಹಾಡುವ 'ತೋಱ್ಱಂ ಪಾಟು'ಗಳು ಇವೆಲ್ಲ 'ತೋಱ್ಱಂ' ಎಂಬ ಮಹಾವಿಭಾಗಕ್ಕೆ ಸೆರುತ್ತವೆ.

ಪುಳ್ಳುವರ್ (ಜನಾಂಗದವರು) ಸರ್ಪಕಾವು (ಬನ)ಗಳಲ್ಲೂ ನಾಗಕ್ಷೇತ್ರಗಳಲ್ಲೂ ಮನೆಗಳಲ್ಲೂ ಸರ್ಪಪ್ರೀತಿಗೆ ಬೇಕಾಗಿ 'ಪಾಟು' ಗಳನ್ನು ಹಾಡುತ್ತಾರೆ. 'ಭದ್ರಕಾಳಿ ತೀಯಾಟ್ಟ'ದಲ್ಲಿ 'ತೀಯಾಟ್ಟುಣ್ಣಿ'ಗಳೂ, 'ಅಯ್ಯಪ್ಪನ್ ತೀಯಾಟ'ದಲ್ಲಿ ತೀಯಾಡಿ ನಂಬಿಯಾನ್ಮಾರರೂ ಹಾಡುವ ಗಾನಗಳು ಅನುಷ್ಠಾನಪರವಾದವುಗಳು. ತೆಯ್ಯಂ ಪಾಡಿ ನಂಬಿಯಾನ್‌ಮಾರರ, ಕಲ್ಲಾಱ್ಱಕುಱುಪ್ಪನ್ಮಾರರ 'ಕಳಮೆಟುತ್ತು' (ಮಂಡಲ ಬರೆಹ) ಪಾಟುಗಳು ಪ್ರಸಿದ್ಧವಾಗಿವೆ. ಅಯ್ಯಪ್ಪ ಭಕ್ತರು ಹಾಡುವಂಥ 'ಅಯ್ಯಪ್ಪನ್ ಪಾಟು' (ಶಾಸ್ತಾಂ ಪಾಟು) ಅನುಷ್ಠಾನಗಾನಗಳಿಗೆ ಸೇರಿದೆ. ಪುಷ್ಪಕ ಸಮುದಾಯಕ್ಕೆ ಸೇರಿದ ಸ್ತ್ರೀಗಳಾದ ಬ್ರಾಹ್ಮಣಿಯಮ್ಮಗಳು 'ಭಗವತಿ ಪಾಟು' ಆಚರಣೆ ನಡೆಸಿಕೊಂಡುಬರುತ್ತಾರೆ.

ದಕ್ಷಿಣ ಕೇರಳದಲ್ಲಿರುವ ಭಗವತಿ ಕ್ಷೇತ್ರಗಳಲ್ಲೂ ಕಾವು (ಬನ) ಗಳಲ್ಲೂ ಉತ್ಸವಕ್ಕೆ ಸಂಬಂಧಿಸಿ ನಡೆಸುವಂಥ 'ಕುತ್ತಿಯೋಟ್ಟಂ' ಎಂಬ ಹೆಸರಿನ ಆರಾಧನಾ ಕಲೆಯಲ್ಲಿ 'ಭದ್ರಕಾಳಿ ಚರಿತೆ'ಯಂಥ ಪಾಟುಗಳನ್ನು ಹಾಡಲಾಗುತ್ತದೆ. ಕೇರಳ ಬ್ರಾಹ್ಮಣರ ಅನುಷ್ಠಾನ ಕಲೆಯಾದ 'ಚಾತ್ತಿರಾಂಕಂ' (ಸಂಘಕ್ಕಳಿ)ಗೂ ಪಾಟುಗಳಿವೆ. ಅತ್ಯಂತ ಉತ್ತರಭಾಗದ ಕೇರಳದಲ್ಲಿರುವ ಕಾವುಗಳಲ್ಲೂ ಭಗವತಿ ಕ್ಷೇತ್ರಗಳಲ್ಲೂ ಮೀನ ಮಾಸದ ಪೂರಂ (ಹುಬ್ಬಾ) ನಕ್ಷತ್ರದಂದು ಮುಗಿಯುವಂತೆ ಒಂಬತ್ತು ದಿವಸಗಳ ಕಾಲ ನಡೆಯುವ 'ಪೂರಕ್ಕಳಿ'ಯಲ್ಲಿ ಹಲವಾರು ಗಾನಗಳನ್ನು ಹಾಡುತ್ತಾರೆ. ದೇವಿಯನ್ನೊಲಿಸುವುದಕ್ಕಾಗಿ ಇರುವ 'ಕಣ್ಯಾರ್‌ಕಳಿ'ಗೆ ಹಾಡುವ ಪಾಟುಗಳಿಗೆ ಹೆಚ್ಚಿನ ಪ್ರಚಾರ ಇರುವುದು ಪಾಲಕ್ಕಾಡ್ ಜಿಲ್ಲೆಯಲ್ಲಿ.

ಮಂತ್ರವಾದ ಪಾಟುಗಳು

ಅನುಷ್ಠಾನಪರವಾದದ್ದೆಂದು ಹೇಳಬಹುದಾದ ಇನ್ನೊಂದು ಬಗೆಯೇ ಮಂತ್ರವಾದ ಪಾಟುಗಳು. ಮಂತ್ರವಾದವನ್ನು ಕುಲವೃತ್ತಿಯಾಗಿರುವ ವಣ್ಣಾನ್, ಮಣ್ಣಾನ್, ಮಲಯನ್, ಪಾಣನ್, ಕಣಿಶನ್ (ಗಣಕನ್), ಪುಳ್ಳುವನ್, ಕೋಪ್ಪಾಳನ್, ಮಾವಿಲನ್, ಚೆಱವನ್, ಪಱಯನ್, ವೇಲನ್ ಮೊದಲಾದ ಅನೇಕ ಸಮುದಾಯಗಳು ಕೇರಳದಲ್ಲಿವೆ. ಮಾಂತ್ರಿಕ ಕರ್ಮಗಳಲ್ಲೂ, ಬಾಧಾ ಉಚ್ಚಾಟನೆ ಕ್ರಿಯೆಯಲ್ಲೂ ಬಳಸುವ ಪಾಟುಗಳು ವೈವಿಧ್ಯಮಯವಾಗಿವೆ. ಸ್ತುತಿಗಳು, ಕೀರ್ತನೆಗಳು, ಪುರಾಣೇತಿಹಾಸ ಕಥಾಗಾನಗಳು, ಕಾಲ್ಪನಿಕ ಪುರಾವೃತ್ತಗಳು, ವಂಶೋತ್ಪತ್ತಿ ಕಥೆಗಳು ಮೊದಲಾದ ಬಗೆ ಬಗೆಯ ಗಾನಗಳು, 'ಮಂತ್ರವಾದ ಪಾಟು'ಗಳಲ್ಲಿ ಇವೆ.

ಮಂತ್ರವಾದ ಕರ್ಮಗಳು, ಬಾಧೋಚ್ಚಾಟನೆ, ಕಲಾನಿರ್ವಹಣೆಯಂಥವುಗಳಲ್ಲಿ ಹಾಡುವ ಮಂತ್ರವಾದ ಪಾಟುಗಳನ್ನು–ಗರ್ಭಬಲಿ ಸಂಬಂಧವಾದ ಬಾಧಾಶಕ್ತಿಗಳ ಒಲುಮೆಗಾಗಿ ಹಾಡುವವುಗಳು, ಈತಿ ಬಾಧೆ ಪರಿಹಾರಕವಾದವುಗಳು, ದೃಷ್ಟಿದೋಷ ಪರಿಹಾರಕಗಳು–ಎಂದೆಲ್ಲ ವರ್ಗೀಕರಿಸಬಹುದು. ಕೆಂದ್ರೋನ್‌ಪಾಟು, ಗಂಧರ್ವನ್ ತುಳ್ಳಲ್, ಕಳಂಪಾಟ್ಟ್, ಕನ್ನಲ್‌ಕ್ಕೂತ್ತ್, ಬಲಿಕ್ಕಳ, ತೆಯ್ಯಾಟ್ಟ್, ಮಲಯನ್‌ಕೆಟ್ಟ್ (ಮಲಯನ್ ಕಟ್ಟುಗೆ), ಕೋಲಂ ತುಳ್ಳಲ್ ಇವೆಲ್ಲ ಗರ್ಭಬಲಿ ಸಂಬಂಧವಾದವುಗಳು. ಕುಱುಂದಿನಿಪಾಟು, ಸರ್ಪಂತುಳ್ಳಲ್, ತಿರಿಯುಟಿಚ್ಚಲ್, ಮಲಯಪ್ಪುಱಾಟ್ಟು ಕಳಿ ಮೊದಲಾದವುಗಳು ಬಾಧಾಪ್ರೀತಿಗಾಗಿ ಇರುವವುಗಳು. ಊರಲ್ಲಿ ಉಂಟಾಗುವ ಕಷ್ಟಕಾರ್ಪಣ್ಯ, ದಾರಿದ್ರ್ಯ, ರೋಗಹಬ್ಬುಗೆ ಈ ಬಗೆ ಆಪತ್ತುಗಳೇ ಈತಿಬಾಧೆಗಳು. ಕೆಲವು ದುರ್ದೇವತೆಗಳು ಈತಿಬಾಧೆ ತರುತ್ತವೆ ಎಂಬುದು ನಂಬಿಕೆ. ಕಲಿಯನಾಟ್ಟಂ, ವೇಡನಾಟ್ಟಂ, ಕರ್ಕಡೋತ್ತಿಯಾಟ್ಟಂ, ಗಳಿಂಜನಾಟ್ಟಂ, ಕನ್ನಿಯಾಟ್ಟಂ, ಕಾಲನ್‌ಕಳಿ, ಕಾಲನಾಟ್ಟಂ, ಭೂತಂ. ತುಳ್ಳಲ್, ಗದ್ದಿಗ, ಮಾರಿಯಾಟ್ಟಂ (ಶನಿಪ್ಪಾಟು) ಮೊದಲಾದವು ಈತಿಬಾಧಾ ಪರಿಹಾರಕ ಆಚರಣೆಗಳು. ಈ ಮಾಂತ್ರಿಕಾನುಷ್ಠಾನ ಕರ್ಮಗಳಿಗೆಲ್ಲ ವಿವಿಧ ತೆರನಾದ ಪಾಟುಗಳನ್ನು ಹಾಡಲು ಇದೆ. ಕೆಟ್ಟಕಣ್ಣು ಬಿದ್ದ ದೋಷ ಪರಿಹಾರಕ್ಕೆ ಹಾಡುವ 'ಕಣ್ಣೇಱು'ಪಾಟೂ, ನಾಲಿಗೆದೋಷ ಅಗಲಿಸುವ 'ನಾವೇರ್'ಪಾಟೂ, ಪಕ್ಷಿಪೀಡೆ ನಿವಾರಿಸಲು ಇರುವ ಪುಳ್ಳವಪ್ಪಾಟೂ, ಪಿಶಾಚಬಾಧೆ ಕಳೆಯುವ ಪಳ್ಳಿಪ್ಪಾನ ಪಾಟೂ ಮಂತ್ರವಾದ ಪಾಟುಗಳಲ್ಲಿ ಸೇರಿರುವಂಥವು.

ವರ್ಗ ಪರಂಪರೆ

ನಮ್ಮ ನಾಡಪಾಟುಗಳಲ್ಲಿ ಬಹುಭಾಗವೂ ಜಾತಿ–ವರ್ಗಸಂಬಂಧವುಳ್ಳವುಗಳಾಗಿವೆ. ವಿಶೇಷತಃ ಅನುಷ್ಠಾನಗಾನಗಳಲ್ಲಿ ಜಾತಿಯೊಂದಿಗಿನ ಸಂಬಂಧ ಸುದೃಢವಾಗಿದೆ. ಅನುಷ್ಠಾನಗಳೂ, ಅನುಷ್ಠಾನ ಕಲಾ ನಿರ್ವಹಣೆಗಳೂ, ಮಂತ್ರವಾದ ಸಂಬಂಧವಾದ ವಿಧಿವಿಧಾನಗಳೂ, ಬಾಧಾನಿವಾರಣಾ ಕಲಾ ನಿರ್ವಹಣೆಗಳೂ ಎಲ್ಲಾ ಹಲವು ಸಮುದಾಯದವರ ಕುಲಗಸುಬುಗಳು ಕೂಡ ಆಗಿವೆ.

ಪುಲಯನ್‌ಪಾಟು, ಪಾಣಪ್ಪಾಟು, ಪಾಪ್ಪಿನಿಪ್ಪಾಟು, ಪುಳ್ಳುವನ್‌ಪಾಟು, ಮಣ್ಣಾರ್‌ಪಾಟು, ವೇಲರ್‌ಪಾಟು, ಬ್ರಾಹ್ಮಣಿಪಾಟು, ಅಕ್ಕಮ್ಮಪಾಟು, ತೆಯ್ಯಂಪಾಡಿ ಪಾಟು, ಕಣಿಯಾನ್ ಪಾಟು, ಮೊದಲಾದ ಹೆಸರುಗಳೇ ಅವುಗಳ ಜಾತಿಪರಂಪರೆಯನ್ನು ಓದಿಹೇಳುತ್ತವೆ. ಮಲಯನ್, ವಣ್ಣಾನ್, ವೇಲನ್, ಕೋಪ್ಪಾಳನ್, ಮಾವಿಲನ್, ಚಿಂಗತ್ತಾನ್, ಕುಚಿಚ್ಯನ್, ಪಣಿಯರ್, ಮಲಯಾಳರ್, ಗಣಕರ್, ವೇಟ್ಟುವರ್ ಮೊದಲಾದ ಜಾತಿಯವರಿಗೆಲ್ಲ ಸ್ವಂತವಾದ ಅನುಷ್ಠಾನ ಸಂಬಂಧವಾದವುಗಳೂ, ಅನುಷ್ಠಾನೇತರವಾದವುಗಳೂ ಆದ ಗಾನಗಳಿವೆ.

ಪುರಾವೃತ್ತ (Myth)

ಸಾಮೂಹಿಕ ಪ್ರಸಕ್ತಿ ಇರುವವುಗಳು ನಾಡಪಾಟುಗಳು. ಸಾಮೂಹಿಕ ಪರಾಮರ್ಶೆಗಳ ಹಾಗೆಯೆ ನಾಡಪಾಟುಗಳಿಗೆ ವಿಶೇಷತೆಯನ್ನು ತಂದುಕೊಡುವ ಉಪಾಧಿಗಳೆ ಪುರಾವೃತ್ತ (Myth)ಗಳು. ಗತಕಾಲದ ಸಾಂಸ್ಕೃತಿಕ ಚರಿತೆಯನ್ನೂ, ಚಿತ್ರವನ್ನೂ ಅವು ಕಾಣಿಕೆ ಇಡುತ್ತಿವೆ. ಮರೆಯಿಂದಲೂ ಸ್ಪಷ್ಟತೆಯಿಂದಲೂ ಅವು ಸಾಮಾಜಿಕ ವಿಮರ್ಶೆಯನ್ನೂ ನಿರ್ವಹಿಸಯತ್ತವೆ. ಒಂದೊಂದು ಸಮೂಹಕ್ಕೂ ಒಂದೊಂದು ಜಾತಿಗೂ ಅವರದ್ದೇ ಆದ ಪುರಾವೃತ್ತಗಳು ಇರುತ್ತವೆ. ಪುರಾವೃತ್ತಗಳ ಕಟ್ಟುಬಿಡಿಸುವುದರಿಂದ ಸಾಮೂಹಿಕವಾದ ಹಲವಾರು ವೈಶಿಷ್ಟ್ಯಗಳನ್ನು ಬಯಲುಪಡಿಸಲು ಸಾಧ್ಯವಾಗುತ್ತದೆ.

ಪುಲಯರ ಪಾಟುಗಳು

ಪರಂಪರೆ ಮೂಲಕ ದೊರೆತ ಅನೇಕ ನಾಡಪಾಟುಗಳ ಒಡೆಯರೆನಿಸಿದ್ದಾರೆ ಪುಲಯರು. ಹುಟ್ಟಿನಿಂದ ತೊಡಗಿ ಮರಣದ ವರೆಗಿನ ಜೀವನದ ಎಲ್ಲ ರಂಗಗಳೊಂದಿಗೂ ಆ ಪಾಟುಗಳು ಸಂಬಂಧಿಸುತ್ತವೆ.

ಕೇರಳದ ಅತ್ಯಂತ ಬಡಗಣಭಾಗದಲ್ಲಿರುವ ಪುಲಯ ಜನಾಂಗದವರಲ್ಲಿ ಲೆಕ್ಕವಿಲ್ಲದಷ್ಟು ನಾಡಪಾಟುಗಳು ಪ್ರಚಾರದಲ್ಲಿವೆ. ಆರಾಧನೆಗೂ ಆಚರಣೆಗೂ ಅವರಲ್ಲಿ ಪ್ರಾಧಾನ್ಯವಿದೆ. ಉತ್ತರ ಕೇರಳದ ಪುಲಯರು ತೆಯ್ಯಂ ಧರಿಸಿ ಆಡುತ್ತಾರೆ. ಅದಕ್ಕೆ ಅವರು ಹಾಡುವತೋಱ್ಱಂಪಾಟುಗಳು ಅನುಷ್ಠಾನ ಗಾನಗಳಲ್ಲಿ ಮುಖ್ಯವಾದವುಗಳು. ಪುಲಿಮಱಿಞ್ಞ ತೊಂಡಚ್ಚನ್, ಐಪ್ಪಳ್ಳಿತ್ತೆಯ್ಯಂ, ಮರುತಿಯೋಡನ್ ಕುರಿಕ್ಕಳ್, ಪನಯಾರ್ ಕುರಿಕ್ಕಳ್, ವಟ್ಯನ್ ಪೊಳ್ಳ, ವೆಳ್ಳುಕ್ಕುರಿಕ್ಕಳ್ ಮೊದಲಾದ ಅನೇಕ ಗುರುಗಳ ಚರಿತ್ರೆಯನ್ನು ಆಖ್ಯಾನ ಮಾಡುವ ವೀರಗಾಥೆಯ ಗಾನಗಳು ಅವರ ತೋಱ್ಱಂ ಪಾಟುಗಳಲ್ಲಿ ಇವೆ. ಅಲ್ಲದೆ ಅರಿಶಾಸ್ತ್ರಂ (ಅಕ್ಕಿ ಶಾಸ್ತ್ರ) ಇರುಳುಂ ವೆಳಿಯುಂ (ಇರಳೂ ಬೆಳಗೂ), ಮರವುಂ ಪಱಿಯುಂ ತೋಱ್ಱಂ(ಮರವೂ, ಕಳಸಿಗೆಯೂ ತೋಱ್ಱಂ), ವಿರುನ್ನ್ ಪೂಜ ಪ್ಪಾಟ್ಟು (ಅತಿಥಿ ಪೂಜೆ ಪಾಟು),

ಗಣಪತಿಪ್ಪಾಟು, ಕಲಶಪ್ಪಾಟು ಎಂದು ಮುಂತಾದ ಅನುಷ್ಠಾನ ಗಾನಗಳೂ ಪುಲಯರ ಪಾಟುಗಳಲ್ಲಿ ಒಳಗೊಂಡಿವೆ. 'ಮಾರಿ ಮಾಮಾಯ' (ಮಾರಿ ಮಹಾಮಾಯೆ)ಗಳನ್ನು ದೂರೀಕರಿಸಲು ಅವರು ಹಾಡುವ ಬಾಧಾ ಉಚ್ಚಾಟನೆ ಸಂಬಂಧವಾದ ಗಾನವೇ ಮಾರಿಪ್ಪಾಟು (ಶನಿಪ್ಪಾಟು), ಗರ್ಭಬಲಿಕರ್ಮಗಳಿಗೂ ಮಂತ್ರವಾದ ಕ್ರಿಯೆಗಳಿಗೂ ಬಳಸುವ ಪಾಟುಗಳೂ ಅವರಲ್ಲಿವೆ. ಪುಲಯರ ಇನ್ನೊಂದು ಅನುಷ್ಠಾನಗಾನ 'ಅರಜ್ಜಾಙ್ಙು ಪಾಟು). ಮಙ್ಙಲ (ಕಲ್ಯಾಣ) ಪಾಟುಗಳು ಅಂದರೆ ಮದುವೆ ಹಾಡುಗಳು, ಕೃಷಿಪಾಟುಗಳು ಎಂಬ ವಿಭಾಗಗಳಲ್ಲಿ ಅವರ ಕೊಡುಗೆ ಅನಲ್ಪವಾಗಿದೆ.

ಗ್ರಾಮ್ಯ ಭಾಷಾಪ್ರಯೋಗಗಳು ಈ ಪಾಟುಗಳಲ್ಲಿ ಕಾಣುವವು. ಅತಿ ಉತ್ತರ ಕೇರಳದ ಪ್ರಾದೇಶಿಕ ಭಾಷಾ ಸ್ವಭಾವವೂ ಅವುಗಳಲ್ಲಿ ವ್ಯಕ್ತವಾಗುತ್ತಿದೆ. ಪ್ರದೇಶ ಭೇದಕ್ಕೆ ಅನುಸಾರವಾಗಿ ಈ ಪಾಟುಗಳಿಗೆ ಪಾಠಾಂತರಗಳು ಇವೆಯೆಂಬುದೂ ಗಮನಾರ್ಹವಾಗಿದೆ.

ಅರಿಪ್ಪೋ ತಿರಿಪ್ಪೋ ತೋರಣಿ ಮಂಗಲಂ

(ವಿನೋದಗಾನ)

ಇ. ಕೆ. ಗೋವಿಂದವರ್ಮರಾಜ

ಟಿಪ್ಪಣಿ

ಆಖ್ಯಾನರೂಪದಲ್ಲಿರುವ ಪಾಟುಗಳನ್ನು ನಾವು ಕಥಾಗಾನವೆಂದು ಕರೆಯುತ್ತೇವೆ. ಹಾಗಲ್ಲದೆ, ಯಾವುದಾದರೂ ಒಂದು ಆಶಯವನ್ನೊ ಏನಾದರೊಂದು ಅವಸ್ಥೆಯನ್ನೊ ಮಾತ್ರ ಬಯಲುಪಡಿಸುವ ಪಾಟುಗಳನ್ನು 'ನಾಡನ್‌ಪಾಟು'(ಗ್ರಾಮೀಣ ಗೀತ)ಗಳು ಎಂದು ಕರೆಯಬಹುದು. ನಾಡನ್‌ಪಾಟುಗಳಿಗೆ ಅನೇಕ ಒಳಹುರಿಗಳಿವೆ. ಅವುಗಳಲ್ಲಿ ಒಂದು ವಿನೋದ ಗಾನ. ವಿನೋದ (ಮನೋರಂಜನೆ)ಎಂಬ ಉದ್ದೇಶದೊಂದಿಗೆ ಹಾಡುವ ಪಾಟುಗಳು ಎಂದೇ ನಾವು ಇವನ್ನು ಗುರುತಿಸುವುದು. ಅವುಗಳಲ್ಲೂ ಜಾನಪದ ಆಟಗಳ ಜತೆಗೆ ಹಾಡುವವುಗಳು, ನಗೆಗಾನಗಳು, ಕಿಡಿಗೇಡಿ (ತೆಜಿ)ಪಾಟುಗಳು ಎಂದೆಲ್ಲ ಹಲವು ವಿಭಾಗಗಳು ಇವೆ.

ಈ ಪಾಟುಗಳಲ್ಲಿ ಹೆಚ್ಚಿನವುಗಳು ನಿಖರವಾದ ಅರ್ಥ ನೀಡುವವುಗಳಲ್ಲ. ಅನೇಕ ಸಲ ಅವುಗಳಲ್ಲಿ ಅಸಂಬದ್ಧ ಆಲೋಚನೆ ಕಾಣಬಹುದು. ಹಾಗಿರುವುದಾದರೆ ಸಾಂಘಿಕತೆ ಇದನ್ನು ಹೊತ್ತು ನಡೆಯುವುದು ಯಾಕಿರಬಹುದು? ಜಾನಪದದ ಎರಡು ವೈಶಿಷ್ಟ್ಯಗಳನ್ನು ಶತಮಾನಗಳಿಗೂ ಹಿಂದೆಯೆ ವಿದ್ವಾಂಸರು ಚಿಂತಿಸಿದ್ದರು. ಒಂದು–ಜಾನಪದದ ತರ್ಕರಹಿತತೆ. ಇನ್ನೊಂದು– ಒಂದೇ ಜಾನಪದ ವಿಭಿನ್ನ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುವುದು. ಜಾನಪದದಲ್ಲಿ ಹುಟ್ಟಿಕೊಂಡಿರುವ ಎಲ್ಲ ತತ್ತ್ವಗಳೂ ಇವುಗಳಲ್ಲಿ ಯಾವುದಾದರೂ ಒಂದನ್ನು ವಿಶದೀಕರಿಸಲು ಉಂಟಾಗಿರುವವುಗಳಾಗಿವೆ. ಮನುಷ್ಯನ ಅದುಮಿದ ಭಾವನೆಗಳನ್ನೂ ಆಕಾಂಕ್ಷೆಗಳನ್ನೂ ಪ್ರತಿಫಲಿಸುವುದು ಮತ್ತು ಈ ಅಸ್ವಾಸ್ಥ್ಯದಿಂದ ಭಾವನೆಯ ಲೋಕಕ್ಕೆ ಪಾರಾಗುವುದು, ಇವುಗಳಿಗಿರುವ ಮಾರ್ಗವೆ ಜಾನಪದ ಎಂದು ಜಾನಪದದ ಪ್ರಧಾನ ಧರ್ಮಗಳಲ್ಲಿ ಒಂದೆಂಬಂತೆ ವಿಲಿಯಂ ಆರ್. ಬಾಸ್ಕಂ ಹೇಳುತ್ತಾರೆ. ಪ್ರತ್ಯಕ್ಷವಾಗಿ ಸಮೂಹದಲ್ಲಿ ಪ್ರಕಟಿಸಲು ಸಾಧ್ಯವಾಗದ ವಿಷಯಗಳನ್ನು ಪ್ರಜ್ಞಾತಲದಿಂದ ಆಚೆಗೆ ಒಯ್ದು, ಭಿನ್ನವಾದ ಮತ್ತೊಂದು ಯುಕ್ತಿಯನ್ನು ಬಳಸಿ ಪ್ರಕಟಿಸುವುದೆ ಜಾನಪದದಲ್ಲಿ ಕಾಣಿಸುವ ಅಸಂಬದ್ಧಕ್ಕೆ ಕಾರಣ. ಆದ್ದರಿಂದ ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸುವುದಕ್ಕೆ ವಿಶಿಷ್ಟ ಅಧ್ಯಯನಕ್ರಮವನ್ನು ಅವಲಂಬಿಸಬೇಕಾಗುತ್ತದೆ, ಆ ಬಗ್ಗೆ ಅಧ್ಯಯನಗಳ ಮೂಲಕ ಸಾಂಘಿಕತೆ ಇದಿರಿಸುವ, ಆದರೆ ಪ್ರತ್ಯಕ್ಷವಲ್ಲದ, ಅನೇಕ ವಿಚಾರಗಳ ಬಗೆಗೆ ತಿಳವಳಿಕೆ ಪಡೆಯಲು ಸಾಧ್ಯವಿದೆ.

ಸಂಪಾದಕ

ಎಲ್ಲ ವಿಭಾಗಗಳ ಜನರಿಗೂ ಮನೋರಂಜನೆ ಗಳಿಸುವುದೆಂದರೆ ಇಷ್ಟ. ಆದ್ದರಿಂದ ಅವರಿಗೆಲ್ಲ ಮನೋರಂಜನೆಗೆ ಅವಶ್ಯವಾದ ರೀತಿಯ ಹಲಬಗೆ ಆಟಗಳೂ ಸಮಾಜದಲ್ಲಿ ಪ್ರಚಲಿತ ಇವೆ. ಈ ಬಗೆ ಆಟಗಳಿಗೆಲ್ಲ ಬಿಟ್ಟುಬಿಡಲು ಅಸಾಧ್ಯವಾದ ಒಂದು ಘಟಕ ಪಾಟು. ಇದಲ್ಲದೆ, ಪ್ರತ್ಯೇಕ ಉದ್ದೇಶವೇನೂ ಇಲ್ಲದೆ ಕೇವಲ ತಮಾಷೆಗಾಗಿ ಹಾಡುವ ಪಾಟುಗಳೂ ಇವೆ. ಆದ್ದರಿಂದ ಮನೋರಂಜನೆಯ (ಆಟದ) ಭಾಗವಾಗಿ ಹಾಡುವ ಪಾಟುಗಳೂ, ಮನೋರಂಜನೆಗಾಗಿಯೆ ಹಾಡುವ ಪಾಟುಗಳೂ 'ವಿನೋದಗಾನ' ವೆಂದು ಗುರುತಿಸಲ್ಪಡುತ್ತವೆ. ಮನೋರಂಜನೆಗೆ ಬೇಕಾಗಿ ಹಾಡುವ ಕೆಲ 'ಪಾಟು'ಗಳನ್ನು ಇಲ್ಲಿ ಪರಿಶೀಲಿಸಬಹುದು.

ಆಡಲು ಬಳಕೆಯಾಗುವ ಪಾಟುಗಳು

(1) ಅರಿಪ್ಪೋ/ತಿರಿಪ್ಪೋ
ತೋರಣಿ/ಮಜ್ಞಲಂ
ಪಂದ್ರಂ/ಡಾನೀಂ/ಕುದಿರಿಂ
ಚೆಕ್ಕಿಟ್ಟ/ಮುರಿಕ್ಕಿಟ್ಟ/ಎಂದಂಬ್?
ಮುರಿಕ್ಕುಂಬು
ಮುರಿಕ್ಕಿ/ಚೆರಿಕ್ಕಿ/ಕೆಡನ್ನೋಳೆ
ಅಞ್ಞಾಯೆಣ್ಣ ಕುಡಿಚ್ಚೋಳೆ
ಅಕ್ಕರ/ಯುಳ್ಳೊರು/ಮಾಡ/ಪ್ರಾವಿನ್ಡೆ
ಕಯ್ಯೋ/ಕಾಲೋ/ಕೊತ್ತಿ/ಚ್ಚೆತ್ತಿ/ಮಡಂಕಾಟ್ಟ್

(2) ಅಕ್ಕತ್ತ್/ ಇಕ್ಕತ್ತ್
ಆನ/ವರುಂಬೋಳ್
ಕಲ್ಲೇ/ಕುತ್ತ್/ಕಡುಂ/ಕುತ್ತ್

(3) ಅತ್ತಿ/ ಕುತ್ತಿ/ಪ್ಪದಿ/ನಾಜ್
ಆರ್/ಪಱಞ್ಞು/ ಪದಿ/ ನಾಜ್
ಇೌನ್/ ಪಱಞ್ಞು/ ಪದಿ/ ನಾಜ್
ಪದಿನಾ/ ಚೆಲ್ಲೆಂಗಿ/ ಲೆಣ್ಣಿ/ ಕ್ಕೋ

ಮುಟ್ಟಾಟ ಕಣ್ಣು ಮುಚ್ಚಾಲೆ ಆಟ ಮೊದಲಾದ ಗ್ರಾಮೀಣ ಆಟಗಳಲ್ಲಿ ಉಳಿದವರನ್ನು ಮುಟ್ಟಬೇಕಾದ ವ್ಯಕ್ತಿಯನ್ನೂ(ಆಟದಲ್ಲಿ ಅವನನ್ನು 'ಕಾಗೆ' ಎಂದು ಕರೆಯುವುದು ಪದ್ಧತಿ), ಕಣ್ಣು ಮುಚ್ಚಿ

ಹಿಡಿಯುವ ವ್ಯಕ್ತಿಯನ್ನೂ ಕಂಡು ಹಿಡಿಯುವುದು ಪಾಟು ಹಾಡಿಕೊಳ್ಳುತ್ತಿರುವ ಒಂದು ಆಟದ ಮೂಲಕವಾಗಿರುತ್ತದೆ. ಈ ಪಾಟನ್ನು 'ಎಣ್ಣಪ್ಪಾಟ್ಟ್' (ಎಣಿಕೆಹಾಡು) ಎಂದು ಕೆಲವು ಕಡೆ ಕರೆಯುವುದಿದೆ. ಆಟದಲ್ಲಿರುವ ಎಲ್ಲರೂ ಎದುರುಬದುರು ಸುತ್ತಾಗಿ ಕೂತಿರುತ್ತಾರೆ. ಎಲ್ಲರೂ ತಮ್ಮ ಅಂಗೈಗಳನ್ನು ನೆಲಕ್ಕೆ ಮಗುಚಿ ಇಡುತ್ತಾರೆ. ತಾಗಿಕೊಂಡೇ ಇರುವ ಕೈಗಳು ವೃತ್ತಾಕಾರದಲ್ಲಿರುತ್ತವೆ. ಸುತ್ತಿನಲ್ಲಿ ಒಬ್ಬ ಬಲಗೈ ಮುಷ್ಟಿ ಹಿಡಿದು ಪಾಟು ಹಾಡುತ್ತ ಒಂದೊಂದು ಮೇಂಗೈಮೇಲೂ ಗುದ್ದುತ್ತಾನೆ. ಪಾಟಿನ ಒಂದೊಂದು ಪದಕ್ಕೂ ಒಂದೊಂದು ಕೈಗೆ ಏಟು ಬೀಳುತ್ತದೆ. ಪಾಟಿನ ಕೊನೆಯ ಪದ ಉಚ್ಚರಿಸುವಾಗ ಯಾವ ಮೇಂಗೈಗೆ ಏಟು ಬೀಳುತ್ತದೋ, ಆ ಕೈಯನ್ನು ತಿರುಗಿಸಿ ಅಂಗೈತೋರಬೇಕು. ಪಾಟು ಮತ್ತು ಏಟು ಮುಂದುವರಿಯುತ್ತವೆ. ಒಂದೊಂದೇ ಕೈ ಅಂಗೈತೋರುತ್ತ ಹೊಗುತ್ತದೆ. ಒಂದೊಮ್ಮೆ ಪಾಟಿನ ಕೊನೆಯ ಪದ ಅಂಗೈ ಹೊಡೆತಕ್ಕೆ ಸಿಕ್ಕಿದರೆ, ಆತ ಗುಂಪಿನ ಹೊರಕ್ಕೆ. ಹೀಗೆ ಒಬ್ಬೊಬ್ಬರೇ ಹೊರಬಿದ್ದ ಬಳಿಕ ಕೊನೆಯಲ್ಲಿ ಉಳಿಯುವವನೇ 'ಕಾಗೆ' ಅಥವಾ ಕಣ್ಣು ಮುಚ್ಚಬೇಕಾದವನು. ಒಂದು ನಿಶ್ಚಿತ ಸಂಖ್ಯೆವರೆಗೆ ಎಣಿಸಿ, ಅದರ ಪುನರಾವರ್ತನೆ ಮಾಡುತ್ತ ಆಟಗಾರರನ್ನು 'ಜೌಟ್' ಮಾಡಿ, ಆಟಗಾರನನ್ನು ಕಂಡುಕೊಳ್ಳುವ ವಿದ್ಯೆಯೆ ಈ ಪಾಟುಗಳಲ್ಲಿ ಅಡಗಿರುವ ರಹಸ್ಯ.

ಎಣಿಸುವುದಕ್ಕೆ ಬದಲು ನಿಲ್ಲುವ ಈ ಪಾಟುಗಳು ಆದ್ಯಂತ ತಾಳವನ್ನು ನೀಡುತ್ತವೆ. ಇವು ಸ್ಪಷ್ಟವಾದ ಅರ್ಥ ನೀಡುವ ಪಾಟುಗಳಲ್ಲ. ಒಂದು ಹಸ್ತವನ್ನು ಮುಷ್ಟಿಯಿಂದ ಹೊಡೆದು ಇನ್ನೊಂದು ಹಸ್ತಕ್ಕೆ ಹೊಡೆಯುವುದರ ನಡುವಣ ವೇಳೆಗೆ ಪದವೊಂದರ ಉಚ್ಚಾರ ಸಮಪ್ರಮಾಣದ ಕಾಲದ ಅಳತೆಯೊಂದಿಗೆ ಸಾಗುತ್ತದೆ. ಅಂಥ ಪದಗಳೇ ಈ ಪಾಟುಗಳಲ್ಲಿ ಇರುವುದು. ಪಾಟುಗಳ ಕೆಲ ಪದಗಳನ್ನು ಒಂಟಿಯಾಗಿ ಹೊರತೆಗೆದರೆ ಅದಕ್ಕೆ ಅರ್ಥವಿದ್ದೀತು. ಆದರೆ ಇಡಿಯ ಪಾಟನ್ನು ಒಟ್ಟಾರೆಯಾಗಿ ತೆಗೆದುಕೊಂಡಾಗ ಅರ್ಥವೇನೆಂದು ತಿಳಿಯಲು ಸಾಧ್ಯ ಎನ್ನುವಂತಿಲ್ಲ. ಆದರೂ ಆಟದ ಕ್ರಿಯೆಯನ್ನು ಎತ್ತಿಕೊಡಲು ನಾಟಕೀಯ ಸ್ವಗತಾಖ್ಯಾನ ಕಲ್ಪಿಸಿಕೊಡುವಂತೆ ಈ ಪಾಟುಗಳನ್ನು ಕಾಣಬಹುದು. ಮೊದಲ ಪಾಟಿನಲ್ಲಿ 'ಎಂದಂಬು?' ಪ್ರಶ್ನೆಗೆ 'ಮುರಿಕ್ಕುಂಬು' ಎಂಬ ಸ್ವಗತವಾದ ಉತ್ತರ ಒಂದು ಪ್ರತ್ಯೇಕವಾದ ಆಶಯವನ್ನು ಕೊಡುವುದಿಲ್ಲವಾದರೂ ವಚನ-ಪ್ರತಿವಚನ ಪ್ರತೀತಿಯನ್ನು ಒಳಗೊಳಿಸುತ್ತದೆ. ಎರಡನೆ ಪಾಟಿಗೂ ವಿಶೇಷ ಅರ್ಥವೇನಿಲ್ಲ. ಆದರೆ 'ಆನವರುಂಬೋಳ್' (ಆನೆ ಬರುವಾಗ) ಪ್ರಯೋಗವು ಸಜೀವವಾದ ಒಂದು ಚಿತ್ರವನ್ನು ಕೊಡುತ್ತದೆ. ಮೂರನೆ ಪಾಟಿನ ಸಂವಿಧಾನ ಒಂದು ವಾಗ್ವಾದದ ರೂಪದಲ್ಲಿದೆ. ಆಟಕ್ಕೆ ಚೈತನ್ಯವನ್ನೀಯುವ ಉಪಾಯಗಳು ಇವೆಲ್ಲ. ವಿಚಾರಕ್ಕಿಂತ ಆಚಾರಕ್ಕೆ ಪ್ರಾಧಾನ್ಯವನ್ನೀಯುವವುಗಳು ಇವು. ಗ್ರಾಮ ಗ್ರಾಮಗಳಲ್ಲಿ ಈ ಆಟಕ್ಕೆ ಬಳಕೆಯಾಗುವ ಪಾಟುಗಳ ಪ್ರಭೇದಗಳೇ ಮೇಲ್ಕಾಣಿಸಿರುವವುಗಳು.

ಈ ಆಟ ಕೈಗೆ ಮುಷ್ಟಿಯಿಂದ ಹೊಡೆಯದೆಯೂ ನಡೆಯುವುದುಂಟು. ಆಟಗಾರರು ಸುತ್ತಾಗಿ ನಿಂತು, ಅವರಲ್ಲೊಬ್ಬ ಪಾಟು ಹಾಡುತ್ತಾನೆ. ಪಾಟಿನ ಒಂದು ಪದ ಹೇಳುವಾಗಲೂ ಒಬ್ಬೊಬ್ಬನ ಮೈಮುಟ್ಟುತ್ತಾನೆ. ಕೊನೆಯ ಪದ ಹೇಳುವಾಗ ಮುಟ್ಟಿಸಿಕೊಳ್ಳುವವನು ಸುತ್ತಿನಿಂದ ಹೊರ ಬೀಳುತ್ತಾನೆ.

ಸುತ್ತಿನಿಂದ ಹೊರಬೀಳಲು ಕೊನೆಗೆ ಉಳಿಯುವ ವ್ಯಕ್ತಿಯೆ 'ಕಾಗೆ'. ಇದು ಕೂಡ ಎಣಿಕೆಯ ಒಂದು ಪ್ರಭೇದವೇ.

ಅತ್ತಳಿ । ಇತ್ತಳಿ । ಪಜಂಗಿತ್ತಾಳಿ
ನಜ್ಜೀಮ್ಮ । ಸಜ್ಜೀಮ್ಮ । ಸಾ
ಞಾನೆಣ್ಣ । ನೀಯೆಣ್ಣ।
ಮಣ್ಣೆಣ್ಣ । ಪೆಟ್ರೋಳ್

ಇವುಗಳಲ್ಲಿ ಯಾವ ಪದವೂ ಸಂಪುಷ್ಟವಾದ ಅರ್ಥಕೊಡುವುದಿಲ್ಲ.

ಆಟದ ಆರಂಭಕ್ಕೆ ಸಜ್ಜುಗೊಳಿಸಿಕೊಡುವ ಪಾಟುಗಳು ಇವೆಲ್ಲ. ಇನ್ನು ಆಟದೊಂದಿಗೆ ಹಾಡುವ ಪಾಟುಗಳನ್ನು ಪರಿಶೀಲಿಸುವ. ಯಾವುದಾದರೂ ಕೈಯಲ್ಲಿ ಮಂಜಾಡಿ (ಮಂಜಟಿಗೆ) ಬಿತ್ತು ಅಥವಾ ಹುಣಸೆಬೀಜವನ್ನು ತೋರಗೊಡದೆ ಹಿಡಿದು ಯಾವಮುಷ್ಟಿಯಲ್ಲಿ ಬಿತ್ತು ಇದೆ ಎಂದು ಕೇಳುವುದು, ಒಂದು ಪಾಟಿನ ಮೂಲಕವಾಗಿರತ್ತದೆ.

ಅಕ್ಕಾ ಪುಕ್ಕಾ ಚೆಮ್ಮಾಂಗಣ್ಣಿ
ಎಕ್ಕೈಮ ತಾರಂ? (ಯಾವ ಕೈಯಲ್ಲಿ ತಾರ?)

ಇದನ್ನು ಹಾಡಿ ಮುಗಿಸಿದಾಗ ಇದಿರಾಳಿ ಉತ್ತರಿಸಬೇಕು. ಇದೇ ರೀತಿಯಲ್ಲಿ ಮಳಲಿನಲ್ಲಿ 'ಕರು' (ಹುಡುಕಬೇಕಾದ ವಸ್ತು)ವನ್ನು ಮುಚ್ಚಿಡುವಾಗಲೂ ಪಾಟು ಹಾಡಲಿಕ್ಕಿದೆ.

ಕೀಚ್ಚೀ ಕೀಚ್ಚೀ ಪೊಂದೋಲಂ
ಆರು ಪಜಿಞ್ಞು ಪೂಂದೋಲಂ
ಞಾನ್ ಪಜಿಞ್ಞು ಪೂಂದೋಲಂ
ಪೂಂದೋಲುಂಡೆಂಗಿಲೆಣ್ಣಿಕ್ಕೋ

ಈ ಪಾಟು ಹೇಳಿ ಮುಗಿಸುವುದರೊಳಗೆ 'ಕರು'ವನ್ನು ಮಳಲಿನಲ್ಲಿ ಎಲ್ಲಾದರೊಂದೆಡೆ ಹುಗಿದು ಅಡಗಿಸಿ ಆಗಿರುತ್ತದೆ.

ಈ ಎರಡು ಆಟಗಳಲ್ಲೂ ಮಳಲಿನಲ್ಲಿ ಅಡಗಿಸಿಡುವವರಿಗೆ, ತಾನು ಯಾವ ಕೈಯಲ್ಲಿ ಅಥವಾ ಯಾವ ಕಡೆಯಲ್ಲಿ ಇಟ್ಟಿರುವುದಾಗಿ ಸರಿಯಾಗಿ ತಿಳಿದಿರಬೇಕು. ಇದು ಮುಖಭಾವದ ಮೂಲಕ, ತನ್ನ ಅರಿವಿಗೆ ಬಾರದೆಯೆ, ಸುಳಿವು ಸಿಗುವುದುಂಟು. ಹೀಗೆ ಮುಖಭಾವ ಇದಿರಾಳಿಗೆ ಸಿಗದಂತೆ ಮಾಡುವ ಒಂದು ಉಪಾಯ ಪಾಟನ್ನು ಹಾಡುವುದು. ಕೈಗಳನ್ನು ಎತ್ತಿಯೂ, ಕೆಳಕ್ಕೆ ಹಾಕಿಯೂ ಮಾಡುವ ಆಟದ

ಕೆಲಸಕ್ಕೆ ಭರ ಸೇರಿಕೊಳ್ಳಲು 'ಅಕ್ಕಾ ಪುಕ್ಕಾ' ಹಾಡು ದ್ರುತಗತಿಯ ತಾಳದಲ್ಲಾಗಿರುತ್ತದೆ. ಆದರೆ ಮಳಲಿನ ಗುಪ್ಪೆಕಟ್ಟುವಾಗ, ಅದರ ಮೂಲಕ ಅಂಗೈಗಳನ್ನು ಮುಂದಕ್ಕೂ ಹಿಂದಕ್ಕೂ ಚಲಿಸುವಾಗ, ಚಲನೆಗೆ ಬೇಕಾದ ವಿಲಂಬಿತತೆಗೆ ಅನುಸರಿಸಿ ವಿಲಂಬಿತ ತಾಳದಲ್ಲೆ ನಡೆಯುತ್ತದೆ. 'ಕೀಚ್ಚೀ ಕೀಚ್ಚೀ' ಪಾಟು. ಮಳಲಿನಲ್ಲಿ ಸರಿಯುವ ಶಬ್ದದ ಅನುಕರಣವೇ 'ಕೀಚ್ಚೀ' ಕೀಚ್ಚೀ' ಹಾಡುವಿಕೆ. ಅಂದರೆ ಒಂದೊಂದು ಆಟಕ್ಕೂ ಅದಕ್ಕೆ ಹೊಂದಿಕೊಳ್ಳಬಲ್ಲ ತಾಳವೂ ಶಬ್ದಸಮೂಹವೂ ಬಳಕೆಯಾಗುತ್ತವೆ. ಮಕ್ಕಳು ಹಿಡಿಕಡ್ಡಿಯಿಂದ ನೆಲದಲ್ಲಿ (ಮಣ್ಣಿನಲ್ಲಿ) ಬರೆ ಎಳೆದು ಆಡುವಾಗ ಹಾಡುವ ಪಾಟು ಇದು–

ವರ । ವರ । ವರಕ್ಕ । ಲಮ್ಮಕ್ಕ್	(ಬರೆ । ಬರೆ । ಬರೆಹ । ಅಮ್ಮನಿಗೆ)
ಭಾಗ್ಯ । ಮುಂಡೆಂಗಿಲ್ । ಎಟ್ಟು । ವರ	(ಭಾಗ್ಯ । ವಿದ್ದರೆ । ಎಂಟು । ಬರೆ)

ಬರೆದು ಮುಗಿದಾದ ಎಂಟು ಗೆರೆಗಳು ನಿಖರವಾಗಿ ಮೂಡುತ್ತವೆ. ಸಂಖ್ಯೆಗಳನ್ನು ಅಕ್ಷರಗಳಾಗಿ ಬರೆದು ಮೂಡಿಸುವ ತಂತ್ರ ಮಕ್ಕಳ ಈ ಬಗೆ ಆಟಗಳಿಂದ ಬಂದದ್ದಿರಬಹುದು.

ಮಕ್ಕಳನ್ನು ಆಡಿಸುವ ಪಾಟುಗಳು

ಮಕ್ಕಳನ್ನು ಆಡಿಸಲು ಹಿರಿಯರು ಹಾಡುವ ಪಾಟು ಕೂಡ 'ವಿನೋದಗಾನ'ವೆ ಆಗಿದೆ. ಶಬ್ದದ ಮೂಲಕವೂ ಧಾಟಿಯ ಮೂಲಕವೂ ಮಕ್ಕಳಿಗೆ ಅವು ಆನಂದ ನೀಡುತ್ತವೆ. ಸಣ್ಣ ಮಕ್ಕಳ ಅಂಗೈಗೆ ದೊಡ್ಡವರು ಅಂಗೈಯಿಂದ ತಟ್ಟಿ ಹಾಡುವ ಪಾಟು ಈ ಕೆಳಗಿನದು–

ತಪ್ಪೋ ತಪ್ಪೋ ತಪ್ಪಾಣಿ	ತಪ್ಪೋ ತಪ್ಪೋ ತಪ್ಪಾಣಿ
ತಪ್ಪು ಕುಡುಕ್ಕೇಲೆಂದುಂಡ್	ತಪ್ಪು ಕುಡಿಕೆಯಲ್ಲೇನುಂಟು
ಮುತ್ತಜ್ಜಿ ತನ್ನೊರು ಮುತ್ತ್‌ಂಡ್	ಮುತ್ತಜ್ಜಿ ಕೊಟ್ಟಿರೋ ಮುತ್ತುಂಟು
ಮುತ್ತಿನು ಮುಜ್ಜಾನ್ ತೇನುಂಡ್	ಮುತ್ತಿಗೆ ಮುಳುಗಲು ಜೇನುಂಟು
ತೇನ್ ಕುಡಿಕ್ಕಾನ್ ವಂಡುಂಡ್	ಜೇನು ಕುಡಿಯಲು ಬಂಡುಣಿ ಉಂಟು
ವಂಡಿನಿರಿಕ್ಕಾನ್ ಪೂವುಂಡ್	ಬಂಡುಣಿಗೆ ಕೂರಲು ಹೂವುಂಟು
ಪೂ ಚೂಡಾನಮ್ಮಯುಂಡ್	ಹೂ ಮುಡಿವುದಕೇ ಅಮ್ಮನುಂಟು
ಅಮ್ಮಕ್ಕೆಡುಕ್ಕಾನ್ ಕುಞ್ಞುಂಡ್	ಅಮ್ಮನಿಗೆತ್ತಲು ಮಗುವುಂಟು

ಈ ಪಾಟು ಸಂವಾದದ ರೂಪದಲ್ಲಿದೆ. ಮಕ್ಕಳಿಗೆ ಲಲ್ಲೆಗರೆಯಲು ಒದಗುವ ರೀತಿಯ ತಾಳವನ್ನು ಮೊದಲಿಂದ ಕೊನೆವರೆಗೆ ಕಾಯ್ದುಕೊಂಡಿದೆ.

ಪಾಟು ಮತ್ತು ಕ್ರಿಯೆ (ಆಟ) ಸೇರಿ ನಡೆಯುವ ವಿನೋದಗಾನಗಳು ಇದುವರೆಗೆ ಚರ್ಚಿತವಾದವು. ಇನ್ನು ವಿನೋದಕ್ಕಾಗಿ ಮಾತ್ರ ಹಾಡುವ ಪಾಟುಗಳನ್ನು ಪರಿಶೀಲಿಸುವ. ಅವುಗಳಲ್ಲಿ ಒಳಗೊಂಡಿವೆ ತರ್ಕರಹಿತವಾಗಿ ವಿಷಯಗಳನ್ನು ಕೋದು ಕಟ್ಟಿ ತಯಾರಿಸುವ ಅಸಂಬದ್ದ ಗಾನಗಳು.

ಞಾನೊರು ವೆಳ್ಳರಿ ನಟ್ಟಪ್ಪಂ	ನಾನೊಂದು ಸೌತೆಯ ನಟ್ಟಾಗ
ಆತ್ತೇದುಂ ಪೂತ್ತೇದುಂ ವೆಂಡಕ್ಕ	ಆದದ್ದೂ ಹೂತದ್ದೂ ಬೆಂಡೆಕಾಯ್
ಪೂವೆಂಡಕ್ಕ ಪಱಿಚ್ಚ್ ವೀಟ್ಟಿಲಿಟ್ಟಪ್ಪಂ	ಹೂಬೆಂಡೆಯನು ಕೊಯ್ದು ಮನೆಯಲ್ಲಿಟ್ಟಾಗ
ವೀಟ್ಟಿಲ್ ಕಂಡದ್ ಕೊತ್ತಚ್ಚಕ್ಕ	ಮನೆಯಲಿ ಕಂಡುದು ಮಿಡಿ ಹಲಸು
ಕೊತ್ತಚ್ಚಕ್ಕ ಪಱಿಚ್ಚು ಉಪ್ಪೇರಿವೆಚ್ಚಪ್ಪಂ	ಮಿಡಿಹಲಸು ಕಿತ್ತು 'ಉಪ್ಪೇರಿ' ಮಾಡಿದಾಗ
ಕೊಂಡು ವೆಳಂಬ್ಯದ್ ಚಾಮಕಞ್ಞಿ	ತಂದು ಬಡಿಸಿದ್ದು ನವಣೆಗಂಜಿ
ಚಾಮಕ್ಕಞ್ಞಿ ಕುಡಿಚ್ಚಾಮೋದಂ ತೀರ್ತಪ್ಪಂ	ನವಣೆಗಂಜಿ ಕುಡಿದಾಮೋದ ತೀರ್ದಾಗ
ವಯಱ್ಱಿಲ್ ತಡಞ್ಞದ್ ಕೋಯಿಕುಞ್ಞಿನ್	ಹೊಟ್ಟೆಯಲ್ಲಿ ತಂಗಿದ್ದು ಕೋಳೀಮರಿಯು
ಕೋಯಿಕ್ಕುಞ್ಞಿನ್ ಚೆಱುಪ್ಪತ್ತಿಲ್ ಪಿಯೋ ಪಿಯೋ	ಕೋಳಿಮರಿ ಎಳಮೆಯಲ್ಲಿ ಪಿಯೋ ಪಿಯೋ
ಞಾನುಂ ಚೆರುಪ್ಪತ್ತಿಲ್ ಕ್ಳೈ ಕ್ಳೈ	ನಾನೂ ಎಳಮೆಯಲ್ಲಿ ಕ್ಳೈ ಕ್ಳೈ

ಇದರ ಒಂದೊಂದು ಸಾಲೂ ತರ್ಕರಹಿತ. ಇದರಲ್ಲಿ ತಮಾಷೆ ಉಂಟುಮಾಡುವ ಅಂಶವೆಂದರೆ ಪರಸ್ಪರ ವಿರುದ್ಧವಾದ ಆಶಯಗಳ ಸೇರಿಕೆ.

ತುಂಬ ಸಣ್ಣ ಮಕ್ಕಳು ಸುಮ್ಮಗೆ ಹಾಡಿ ಖುಷಿಪಡಲು ಇರುವಂಥದು 'ಕುಞ್ಞಿ ಕುಞ್ಞಿ ಕುಱುಕ್ಕಾ' ಎಂದು ಆರಂಭವಾಗುವ ಪಾಟು–

ಕುಞ್ಞಿ ಕುಞ್ಞಿಕ್ಕುಱುಕ್ಕಾ	ಪುಟ್ಟ ಪುಟ್ಟ ನರಿಯಣ್ಣಾ
ನಿನಕ್ಕೆಂದ್ ವೆರುತ್ತಂ	ನಿನಗೆ ಏನು ಕಾಯಿಲೆ
ಎನಿಕ್ಕೆನ್ಱೇಟ್ಟಾ	ನನಗೆ ನನ್ನಣ್ಣಾ
ತಲಕ್ಕುತ್ತ ವೆರುತ್ತಂ	ತಲೆಚುಚ್ಚು ಕಾಯಿಲೆ
ಅದಿನುಂಡ್ ವೈಶ್ಯಂ	ಅದಕ್ಕುಂಟು ಮದ್ದು (ವೈದ್ಯ)
ಕಕ್ಕಿರಿ ಪೋಣಂ	ಮುಳ್ಸೌತ್ತೆ ಹೋಗ್ಬೇಕು
ಕಕ್ಕಿರಿ ಚೆಲ್ಲಣಂ	ಮುಳ್ಸೌತೆ (ಹೊಟ್ಟೆಗೆ) ಸೇರ್ಬೇಕು
ವೆಳ್ಳರಿ ಪೋಣಂ	ಸೌತೆಗೆ ಹೋಗ್ಬೇಕು
ವೆಳ್ಳರಿ ಚೆಲ್ಲಣಂ	ಸೌತೆ (ಹೊಟ್ಟೆಗೆ) ಸೇರ್ಬೇಕು

ಕುನ್ನಮ್ಮ ಪೋಣಂ	ಗುಡ್ಡಕ್ಕೆ ಹೋಗ್ಬೇಕು
ಕೂಕ್ಕಿ ವಿಳಿಕ್ಕಣಂ	ಕೂಗಿ ಕರೇಬೇಕು
ಪಾಱಮ್ಮ ಪೋಣಂ	ಬಂಡೆಗೆ ಹೋಗ್ಬೇಕು
ಪಱಪಱ ತೂಱಣಂ	ಪರಪರ ಹೇಲ್ಬೇಕು

ಓರೆಕೋರೆ ಕಟ್ಟಿಲ್ಲದ ಭಾಷೆಯನ್ನೆ ಇದರಲ್ಲಿ ಬಳಸಿರುವುದು. ಇದರಿಂದ ಬೇಗನೆ ಈ ಪಾಟಿನೊಂದಿಗೆ ಸೇರಿಕೆ ಸಾಧ್ಯವಾಗುತ್ತದೆ.

ಸಮಾಜದ ಯಾವುದಾದರೂ ಒಂದು ವಿಭಾಗದ ಹೆಸರೆತ್ತಿ ನಗೆ ಮಾಡುವ ಪಾಟುಗಳೂ ಇವೆ.

ವೆಳ್ಳರಿ ವಳಪ್ಪಿಲ್ ತೀಯೆತ್ತಿ[1]	ಸೌತೆಯ ತೋಟದಿ ತೀಯೆತ್ತಿ[1]
ನಾಯರ್ ಪನ್ನಕ್ಕು ತೀಜ್ಜೆ	ನಾಯರ್ ಕೆನ್ನೆಗೆ ಕಿಡಿತಗಲಿತು
ತಚ್ಚ್ ಕೆಡುಕ್ಕಾನ್ ತಚ್ಚತ್ತಿ[2]	ಹೊಡೆದಣಗಿಸಲು ಕಲುಕುಟಿಗತಿ

ಜಾತಿ ಹೆಸರಿನೊಂದಿಗೆ ಕ್ರಿಯೆಯನ್ನು ಸಂಶ್ಲೇಷಿಸಿ ಶ್ಲೇಷೆಯಿಂದ ನಗೆ ಮಾಡಲು ಇದರಲ್ಲಿ ಶ್ರಮಿಸಿದೆ.

ಹೆಸರುಗಳನ್ನೆ ತಾಳಬದ್ಧವಾಗಿ ಕೋದು ಹಾಡುವ ಪಾಟೂ ಇದೆ–
ಮುಹಮ್ಮದ್ ಮುಹಮ್ಮದ್ ಕುಞ್ಞಿಮುಹಮ್ಮದ್
ಅಹಮ್ಮದ್ ಆಲಿ ಕುಞ್ಞಿಯಸೀಸ್.

ಇನ್ನು ಮಕ್ಕಳು ಹಾಡುವಂಥ ಇನ್ನೊಂದು ಪಾಟು ನೋಡುವ–

---

1. ತೀಯತ್ತಿ – ಇದಕ್ಕೆ ಎರಡು ಅರ್ಥಗಳು. ಒಂದು ಬೆಂಕಿ ತಲಪಿತು (ತೀ+ಎತ್ತಿ). ಇನ್ನೊಂದು ತೀಯ ಜಾತಿಯವಳು. 2. ತಚ್ಚತ್ತಿ – ಇದಕ್ಕೆ ಹೊಡೆಯುವವಳು ಮತ್ತು ತಚ್ಚನ್ (ತಕ್ಷನ್ – ಕಲ್ಲುಕುಟಿಗ) ಜಾತಿಯವಳು ಎಂದು ಎರಡರ್ಥ.

ಆಶಾ ಮನಸ್ಸಿಲ್ ವೆಚ್ಚು	ಆಶಾ ಮನದಲ್ಲಿ ಇರಿಸಿ
ಕೋರನ್ ತೆಙ್ಙುಮ್ಮ ಕೇಱಿ	ಕೋರನ್ ತೆಂಗನ್ನೇರಿದ

ಮಟ್ಟಲಿಡಿಞ್ಞುಪೋಯಿ	ಮಡಲು ಜಾರೀ ಹೋಯ್ತು
ಮಟ್ಟಲುಂ ತಾಟಿತ್ತಾಯಿ	ಮಡಲೂ ಬಿತ್ತು ಕೆಳಗೆ
ಕೋರನುಂ ತಾವಿತ್ತಾಯಿ	ಕೋರನೂ ಬಿದ್ದ ಕೆಳಗೆ
ಮಟ್ಟಲಡುಪ್ಪಿಲಾಯಿ	ಮಡಲು ಸೇರಿತು ಒಲೆಗೆ
ಕೋರನ್ ಕಿಡಪ್ಪಿಲಾಯಿ	ಕೋರನ್ ಸೇರಿದ ಚಾಪೆಗೆ
ಮಟ್ಟಲುಂ ವೆಣ್ಣೀಜಾಯಿ	ಮಡಲೂ ಆಯಿತು ಬೂದಿ
ಕೋರನುಂ ವೆಣ್ಣೀಜಾಯಿ	ಕೋರನೂ ಆದನು ಬೂದಿ

ಈ ಪಾಟಿನಲ್ಲಿ ಒಂದು ನೀತಿಬೋಧೆ ಇದೆ – ಮಾಡುವ ಕೆಲಸದಲ್ಲಿ (ಶ್ರದ್ಧೆ) ಎಚ್ಚರ ಇರಬೇಕು. ಇಲ್ಲದೆಹೋದರೆ ಮಡಲಿ(ತಂಗಿನ ಸೋಗೆ)ಗೂ ಮನುಷ್ಯನಿಗೂ ವ್ಯತ್ಯಾಸ ಉಳಿಯದು. ಎರಡೂ ಬೂದಿಯಾಗುವುದೇ. ಈ ಪಾಟಿಗೆ ಒಂದು ಪಾಠಾಂತರ ಇದೆ. 'ಕೋರನ್' ಹೆಸರಿನ ಬದಲು 'ಮೂಸ್ಸ' ಎಂದು ಬಳಸುವುದು ಅಷ್ಟೆ. ಹಾಗೆ ಬರುವಾಗ ಪಾಟು ಇನ್ನೊಂದು ಆಶಯವನ್ನೂ ಒಳಗೊಳ್ಳುತ್ತದೆ – ಕೆಲಸದ ಆಧಾರದಲ್ಲಿ ಗುಂಪಾಗಿರುವ ಸಮುದಾಯದಲ್ಲಿ ಅವನದಲ್ಲದ ಕೆಲಸಕ್ಕೆ ಕೈಹಾಕಿದರೆ ಹೀಗೆಲ್ಲ ಆಪತ್ತು ಬರುತ್ತದೆಂಬ ಎಚ್ಚರಿಕೆಯೂ ಇಲ್ಲಿದೆ.

ಈ ರೀತಿಯಲ್ಲಿ ಆಶಯವನ್ನು ಒಳಗೊಳ್ಳುವಂಥದೂ. ಸಮೂಹ ಜೀವನವನ್ನು ಭದ್ರಗೊಳಿಸುವುದಕ್ಕೆ ಒದಗೂವಂಥದೂ ಆಗಿರುವ ಪಾಟುಗಳೂ ವಿನೋದಗಾನಗಳಲ್ಲಿ ಇವೆ.

ವಿನೋದಗಾನದಲ್ಲಿ ಒಂದು ದೊಡ್ಡ ವಿಭಾಗ ಅಶ್ಲೀಲ ಪಾಟುಗಳದು. ವಿಭಿನ್ನ ಹರೆಯದವರು ವಿಭಿನ್ನ ಸ್ವಭಾವದಲ್ಲಿರುವ ಪಾಟುಗಳನ್ನು ಹಾಡುತ್ತಾರೆ. ಯೌವನಕ್ಕೆ ಕಾಲಿರಿಸುವ ಮಕ್ಕಳ ಲೈಂಗಿಕತೆ ಕುರಿತಾದ ಜಿಜ್ಞಾಸೆ, ಅದರ ಕುರಿತ ಬಣ್ಣ ಬರಿಸಿದ ಭಾವನೆಗಳು ಇತ್ಯಾದಿಯನ್ನು ಪಾಟುಗಳಲ್ಲಿ ತರುವುದಿದೆ. ವಿಚಿತ್ರವಾದ ಅನುಭವಗಳನ್ನು ವಿವರಿಸುವ ಪಾಟುಗಳು ಹಿರಿಯವರದು. ಗುಟ್ಟಿನಲ್ಲಿ ಹಾಡುವ ಅಶ್ಲೀಲ ಪಾಟುಗಳ ಸಂಗ್ರಹ ಸುಲಭವಲ್ಲವಾದ್ದರಿಂದಲೂ, ಅವುಗಳ ಕುರಿತಾದ ಅಧ್ಯಯನ ಅನಪೇಕ್ಷಿತವೆಂಬ ಭಾವನೆ ಇರುವುದರಿಂದಲೂ ಈ ರಂಗದಲ್ಲಿ ಒಂದಿಷ್ಟೂ ಅಧ್ಯಯನ ನಡೆದಿಲ್ಲ.

ವಿನೋದಗಾನಗಳಲ್ಲಿ ಹೆಚ್ಚಿನವು ಅಸಂಬದ್ಧ ಗಾನಗಳೆಂಬುದನ್ನು ಕಂಡೆವು. ಆದರೆ ಹೀಗೆ ಪಾಟುಗಳಿರುವುದು ಯಾವುದಕ್ಕಾಗಿ? ಅವಶ್ಯವಲ್ಲದ್ದೇನನ್ನೂ ಮನುಷ್ಯ ಸೃಷ್ಟಿಸಲಾರ. ಪ್ರಜ್ಞಾತಲದ ನಮ್ಮ ಮನಸ್ಸಿಗೆ ತರ್ಕರಹಿತ ಎಂದು ತೋರುವ ಗಾನಗಳು ಒಂದು ಪಕ್ಷದಲ್ಲಿ ಸಂವಹನ ಮಾಡುವುದು ಒಳಮನಸ್ಸಿನ ಪಾತಳಿಯಲ್ಲಾಗಿರಬಹುದು. ಅಬೋಧ ತಲದ ತರ್ಕವಲ್ಲವಷ್ಟೆ ಬೋಧ ತಲದ ಮನಸ್ಸಿನದು? ಒಂದಂತು ಖಚಿತ. ಈ ಬಗೆ ಪಾಟುಗಳನ್ನು ಹಾಡುವ ಮೂಲಕ ಹಾಡುವವರು ಮಾನಸಿಕವಾಗಿ ಏನೇನನ್ನೆಲ್ಲ ಪಡೆಯುತ್ತಾರೆ. ಅಲ್ಲದಿದ್ದರೆ ತಲೆಮೊರೆಗಳಾಗಿ ಇಷ್ಟೆಲ್ಲ ಪಾಟುಗಳನ್ನು ನೆಲೆಗೊಳಿಸಲು ಸಾಂಘಿಕತೆ ಶ್ರಮಿಸಲಾರದಲ್ಲ?

ವಯನಾಟ್ಟು ಕುಲವನ್

(ಪುರಾವೃತ್ತ)

ಎಂ. ಎ. ರಹ್‌ಮಾನ್

ಟಿಪ್ಪಣಿ

ಮೌಖಿಕ ಧಾರೆಯ ಎರಡು ಮುಖ್ಯವಾದ ಶಾಖೆಗಳು ಪದ್ಯಕಥಾಖ್ಯಾನಗಳು ಮತ್ತು ಗದ್ಯ ಕಥಾಖ್ಯಾನಗಳು. ಕಥಾಗಾನ, ಕಥಾಗಾನಚಕ್ರ, ಜನಪದ ಇತಿಹಾಸ ಇತ್ಯಾದಿ ಪದ್ಯ ಕಥಾಖ್ಯಾನದ ಭಾಗವೂ, ಪುರಾವೃತ್ತ (Myth), ಐತಿಹ್ಯ, ಗ್ರಾಮೀಣ ಕಥೆ ಮೊದಲಾದವು ಗದ್ಯ ಕಥಾಖ್ಯಾನದ ಭಾಗಗಳೂ ಆಗಿವೆ. ಅನುಭವ ಕಥೆಗಳೂ ಈ ವಿಭಾಗಕ್ಕೆ ಸೇರಿದ್ದೇ ಆಗಿದೆ. ಕಥಾಖ್ಯಾನದ ಸ್ವಭಾವವನ್ನು ಅನುಸರಿಸಿ ಪುರಾವೃತ್ತ, ಐತಿಹ್ಯ, ಗ್ರಾಮೀಣಕಥೆ ಎಂಬ ವಿಭಾಗೀಕರಣವಿರುತ್ತದೆ. ಒಂದು ಜನತೆ ಪುಣ್ಯಕರವೆಂದು ಭಾವಿಸುವ ಕಥೆಯೆ ಪುರಾವೃತ್ತ. ಅದರಲ್ಲಿ ಅಲೌಕಿಕವೂ, ದೈವಿಕವೂ ಆದ ಕಥಾಪಾತ್ರಗಳೂ ಘಟನೆಗಳೂ ಇರುತ್ತವೆ. ತರ್ಕರಹಿತವಾದರೂ ಅದು ನೆಲಸಿರುವ ಸಾಂಘಿಕತೆ ಒಮ್ಮೆಯೂ ಅದನ್ನು ಪ್ರಶ್ನಿಸಲಾರದು. ಶಿವನು ತನ್ನ ಪಕ್ಕೆಲುಬು ಕಿತ್ತು ಶಕ್ತಿಯನ್ನು ಸೃಷ್ಟಿಸಿದನೆಂಬುದರಲ್ಲಿ ಅಸ್ವಾಭಾವಿಕತೆ ಯಾರಿಗೂ ತೋರಿಲ್ಲ. ತರ್ಕರಹಿತ ಮೇಲ್ಮಟ್ಟದ ಘಟನೆಯನ್ನು ಸೃಷ್ಟಿಸುವುದು ಹಲವು ಬಗೆಯ ಮಾನಸಿಕ ಒತ್ತಡಗಳಿಂದ ಪಾರಾಗಲು ಸಮೂಹ ಕಂಡುಕೊಂಡ ಮಾರ್ಗವಾಗಿದೆ ಎಂಬ ಒಂದು ವಾದವಿದೆ. ಪುರಾವೃತ್ತಗಳ ಬಗೆಗೆ ಹತ್ತೊಂಬತ್ತನೆ ಶತಮಾನದಿಂದಲೆ ಸಿದ್ಧಾಂತಗಳು ಮಂಡನೆಗೊಂಡಿವೆ. ಅವುಗಳಲ್ಲಿ ಹಲವು ಈ ತರ್ಕರಹಿತತೆಯ ಹಿಂದುಗಡೆ ಇರುವ ತರ್ಕವನ್ನು ಹುಡುಕುವವುಗಳಾಗಿವೆ.

ನಾವು ಪುರಾವೃತ್ತವಾಗಿ ಗಣಿಸುವ ಹಲವೂ, ಇವತ್ತಿನ ಪಾಶ್ಚಾತ್ಯ ನಿರ್ವಚನವನ್ನನುಸರಿಸಿ ಹೇಳುವುದಾದರೆ, ಪುರಾವೃತ್ತವಲ್ಲ. ಅವುಗಳನ್ನು ಪುಣ್ಯಕಥೆ ಎಂದೇ ಪರಿಗಣಿಸಲಾಗುತ್ತದೆ. ಅವರ ವೀಕ್ಷಣೆಯಲ್ಲಿ ಯಾವುದರದ್ದಾದರೂ ಉದ್ಭವದ ಬಗೆಗೆ ಪ್ರತಿಪಾದಿಸುವ ಆಖ್ಯಾನರೂಪ ಮಾತ್ರ 'ಪುರಾವೃತ್ತ'ವೆನಿಸುತ್ತದೆ. 'ವಯನಾಟ್ಟು ಕುಲವನ್'ನ ಕಥೆ ಎಲ್ಲ ಅರ್ಥಗಳಲ್ಲೂ ಒಂದು ಪುರಾವೃತ್ತವಾಗಿದೆ. ವಯನಾಟ್ಟು ಕುಲವನ್ ಎಂಬ ದೈವದ ಉದ್ಭವ, ಕಳ್ಳು ಕೆತ್ತುವುದರ ಉದ್ಭವ ಮತ್ತು ತೀಯ್ಯ ಸಮುದಾಯದ ಉದ್ಭವ ಇತ್ಯಾದಿ ವಿಷಯಗಳು ಈ ಪುರಾವೃತ್ತದಲ್ಲಿ ವಿವರಣೆಗೊಳ್ಳುತ್ತವೆ.

ಸಂಸ್ಕೃತಿಸಮನ್ವಯ ಹೊಂದಿರುವ ಯಾವುದೊಂದು ಸಮಾಜದಲ್ಲೂ ಎರಡು ಬಗೆಯ ಪುರಾವೃತ್ತಗಳು ಅಸ್ತಿತ್ವದಲ್ಲಿವೆ. ಈ ಸಮನ್ವಯದ ನಡುವೆ ಹಲವು ಕಾರಣಗಳಿಂದ ಯಾವುದಾರೂ ಒಂದು ಸಂಸ್ಕೃತಿ ಮೇಲುಸಂಸ್ಕೃತಿಯಾಗಿಯೂ ಪರಿಗಣಿತವಾಗುತ್ತದೆ. ಉಳಿದ ಎಲ್ಲ ತಲಗಳಲ್ಲಿ ಮೇಲುಸಂಸ್ಕೃತಿಯ ನಿಯಂತ್ರಣ ಕೀಳುಸಂಸ್ಕೃತಿಯಲ್ಲೂ, ಕೀಳುಸಂಸ್ಕೃತಿಯ ನಿಯಂತ್ರಣ ಮೇಲು ಸಂಸ್ಕೃತಿಯಲ್ಲೂ ಸಂಭವಿಸುವಂತೆ ಪುರಾವೃತ್ತದ ವಿಷಯದಲ್ಲೂ ಉಂಟಾಗುತ್ತದೆ. ಆದರೆ ನಿಮ್ನ

ಪುರಾವೃತ್ತದ ಮೇಲೆ ಉಚ್ಚ ಪುರಾವೃತ್ತಕ್ಕಿರುವ ನಿಯಂತ್ರಣ ತುಲನಾತ್ಮಕವಾಗಿ ಹೆಚ್ಚು ಎಂದೇ ತೋರುತ್ತದೆ. ವಯನಾಟ್ಟು ಕುಲವನ್ ಆ ಬಗೆಯ ಒಂದು ಪುರಾವೃತ್ತವಾಗಿದೆ. ಗ್ರಾಮೀಣ ದೈವವಾದ 'ವಯನಾಟ್ಟು ಕುಲವನ್' ಶಿವನೊಂದಿಗೆ ಸಂಬಂಧ ಹೊಂದಿರುವುದು ಸುವ್ಯಕ್ತ.

ಸಂಪಾದಕ

ಪುರಾವೃತ್ತ

ತೋಱ್ಱಂ ಪಾಟುಗಳ ಮೂಲಕವೂ ಇತರ ಮೌಖಿಕ ಧಾರೆ ಮೂಲಕವೂ ಆಚರಣೆ ಮೂಲಕವೂ ಉತ್ತರ ಕೇರಳದಲ್ಲಿ ಅಚ್ಚೊತ್ತಿದ ಒಂದು ಪುರಾವೃತ್ತ 'ವಯನಾಟ್ಟು ಕುಲವನ್'ನದು. ಅದು ಹೀಗಿದೆ–

ಹಿಂದೊಂದು ಕಾಲದಲ್ಲಿ ಶಿವನೂ ಪಾರ್ವತಿಯೂ ಕಾಡಿನಲ್ಲಿ ಬೇಟೆಯಾಡುತ್ತಿದ್ದರು. ಕಾಮಾತುರನಾದ ಶಿವ ಪಾರ್ವತಿಯನ್ನು ಸಮೀಪಿಸಿದನಾದರೂ ಆಕೆ ಸಿದ್ಧಳಿರಲಿಲ್ಲ. ಆಗ ಶಿವನಿಂದ ನೆಲಕ್ಕೆಬಿದ್ದ ಮೂರು ಬೀಜಗಳಿಂದ ಮೂರು ಮರಗಳು ಉಂಟಾಗುತ್ತವೆ. ಅವುಗಳಿಗೆ 'ಕರಿಮಗಳ್', 'ತಿರುಮಗಳ್' ಮತ್ತು 'ತೇನ್‌ಮಗಳ್' ಎಂದು ಶಿವ ನಾಮಕರಣ ಮಾಡುತ್ತಾನೆ. ಅನಂತರ ಶಿವ ಮತ್ತೊಮ್ಮೆ ಕಾಡಿನಲ್ಲಿ ಸಂಚರಿಸುತ್ತಿದ್ದಾಗ, 'ತೇನ್‌ಮಗಳ್' ಮರದ ಬುಡದಿಂದ ಜೇನು ಧಾರಾಳ ಹರಿಯುವುದನ್ನು ಕಂಡ. ಅದನ್ನು ಎತ್ತಿ ಕುಡಿದಾಗ ಶಿವನಿಗೆ ಮತ್ತು ತಲೆಗೇರಿತು. ಆ ರೀತಿಯಲ್ಲಿ ಮತ್ತನಾಗಿ ಬರುತ್ತಿದ್ದ ಶಿವನನ್ನು ಕಂಡು ಪಾರ್ವತಿಗೆ ಹೆದರಿಕೆಯಾಯಿತು. ವಿಷಯವೇನೆಂದು ಗೊತ್ತಾಗಿ ಪಾರ್ವತಿ ಆ ಮರದ ಬುಡದ ಜೇನನ್ನು ಮೇಲ್ಮುಖವಾಗಿ ಹರಿಯುವಂತೆಯೂ, ಅದರ ಗೊನೆಯಲ್ಲಿ ಹೊಮ್ಮುವಂತೆಯೂ ಮಾಡಿದಳು. ಮರುದಿವಸ ಮಧುವನ್ನು ಕುಡಿಯಲು ಆ ಮರದ ಬುಡಕ್ಕೆ ಬಂದಾಗ, ಅದು ಕಾಣಸಿಗದೆ ಶಿವನಿಗೆ ಸಿಟ್ಟು ಬಂತು. ಆ ಕ್ರೋಧಾವೇಶದಲ್ಲಿ ಶಿವ ಬಲಗೈಯಿಂದ ತನ್ನ ಎಡ ತೊಡೆಯ ಮೇಲೆ ಅಪ್ಪಳಿಸಿದ. ಆಗ ಒಬ್ಬ ಮಗನ ಸೃಷ್ಟಿಯಾಯಿತು. ಅವನಿಗೆ 'ದಿವ್ಯನ್' ಎಂಬ ಹೆಸರನ್ನು ಇರಿಸಿದ. ಅವನಿಗೆ ಗೊನೆಯಿಂದ ಕಳ್ಳನ್ನು ತೆಗೆಯುವ ವಿದ್ಯೆಯನ್ನು ಉಪದೇಶಿಸಿದ. ಹಾಗೆ ಶಿವನಿಗೆ ಮಧು ದೊರೆಯಿತು. ಅವನು ಪಾನಮತ್ತನಾದ.

ದಿವ್ಯನ್ ಮಧು ಕುಡಿದು ಕೂತ್ತಾಡತೊಡಗಿದ (ತೂರಾಡತೊಡಗಿದ) ಕಾಲ. ಊರವರೆಲ್ಲ ಶ್ರೀ ಮಹಾದೇವನ್ ತಿರುವಡಿ(ಶ್ರೀಪಾದ)ಯ ಮುಂದೆ ಹೋಗಿ 'ಅರಿಪ್ಪವನ್ನೂ ಕೊಡುಪ್ಪವನ್ನೂ ಅಗ್ನಿಮಾಲೆಯಾದ ಮಂತ್ರವನ್ನೂ ಕೈಮುಗಿದು ಸ್ವೀಕರಿಸುತ್ತಿದ್ದಾರೆ' ಎಂದು ಗೊತ್ತಾಗಿ ದಿವ್ಯನ್ ಅದನ್ನೆಲ್ಲ ಪಡೆಯಲು ಶ್ರೀ ಮಹಾದೇವನ್ ತಿರುವಡಿಯ ಬಳಿಗೆ ಸಾರುತ್ತಾನೆ. ಮಧು ಕುಡಿಯುವ ಕಾರಣಕ್ಕಾಗಿ ಅವನ್ನೆಲ್ಲ ದಿವ್ಯನಿಗೆ ಕೊಡಲು ಶ್ರೀ ಮಹಾದೇವನ್ ತಿರುವಡಿ ಒಪ್ಪಲಿಲ್ಲ. ಮಧು ಕುಡಿಯಲಾರೆ ಎಂದು ಖಚಿತ ಭರವಸೆ ನೀಡಿದ ಬಳಿಕ ದಿವ್ಯನಿಗೆ ಅವೆಲ್ಲವನ್ನೂ ಕೊಡಲು ಒಪ್ಪಿದ. ಆದರೆ 'ಕದಳಿಯನ್' ಎಂಬ ಮಧುವನದಲ್ಲಿ ಬೇಟೆಯಾಡಬಾರದು, ಅಲ್ಲಿನ ಮಧುವನ್ನು ಕುಡಿಯಬಾರದು ಎಂದು ಮಹಾದೇವ ನಿಬಂಧನೆ ವಿಧಿಸಿದ. ಭರವಸೆಯ ಮೇರೆಗೆ ದಿವ್ಯನಿಗೆ ಪ್ರದಾನ ಮಾಡಿದ. ದಿವ್ಯನ್ ಕೊಟ್ಟ ಭಾಷೆಯನ್ನು ಮೀರಿ 'ಕದಳಿವನಂ' ಎಂಬ ಮಧುವನದಲ್ಲಿ ಬೇಟೆಯಾಡಿದ. ಅಲ್ಲಿ ಪೂಜಿಸಿ ಇರಿಸಿದ ನೂರಎಂಟು ಮಧುಕೊಡಗಳಲ್ಲಿ ಒಂದನ್ನು ತೆಗೆದು ಕುಡಿದ. ಇದರಿಂದ ದಿವ್ಯನ ಎರಡೂ ಕಣ್ಣುಗಳು ಒಡೆದು ಮಧುಕೊಡದಲ್ಲಿ ಸೇರಿತು. ಕಣ್ಣು ಕಾಣದಾದಾಗ ಶ್ರೀ ಮಹಾದೇವನ್ನ್ ತಿರುವಡಿಯ ಬಳಿಗೆ

ಹೋಗುತ್ತಾನೆ. ಓಡಯೆಂಬ ಮಧುವನಕ್ಕೆ ಹೋಗಿ ಓಡ ಬಡಿದು ಜಜ್ಜಿ ಪಂಜು (ಚಟ್ಟ್, ಸೂಟೆ) ಕಟ್ಟಿಕೊಳ್ಳು' ಎಂದು ಆಶೀರ್ವದಿಸಿದ. ಅಲ್ಲದೆ ಒಂದು 'ಹುಸಿಕಣ್ಣನ್ನೂ' ಕೊಟ್ಟ. 'ಇಡವಿಲೋಕ'ದ (ಮಧ್ಯಲೋಕದ) ಕಿರುಮನುಷ್ಯರಿಗೆ ಸಂತೋಷ ನೀಡಲು ಅಲ್ಲಿಗೆ ಕಳುಹಿಸಿದ. ಕಣ್ಣು ಕಾಣಿಸದವನಿಗೆ ಪಂಜಿನಿಂದ ಏನು ಉಪಯೋಗ? ಸಿಟ್ಟಾದ ದಿವ್ಯನ್ ಹುಸಿಗಣ್ಣನ್ನೂ, ಪಂಜನ್ನೂ ತೆಗೆದು ಬೀಸಾಡಿದ. ಅದು ಬಂದು ಬಿದ್ದದ್ದು ಆದಿಪಜಿಂಬನ್ ಕಣ್ಣನ್ ಎಂಬವನ ನಡುಅಂಗಳದಲ್ಲಿ. ಆದಿಪಜಿಂಬನ್ ಕಣ್ಣನ್ ಇದನ್ನು ಕಂಡು ಹೆದರಿದ. ಅವನಿಗೆ ಕನಸಿನಲ್ಲಿ ಹೀಗೆ ಅಪ್ಪಣೆಯಾಯಿತು. 'ಕಣ್ಣನ್ನೂ, ಪಂಜನ್ನೂ ಕನ್ನೀರಾಶಿಯಲ್ಲಿ (ಆರಾಧನಾ ಸಮುಚ್ಚಯದಲ್ಲಿ) ಇರಿಸಿಕೋ, ಅಡ್ಡ ಇರಿಸು. ವೀತ್ತು ಪಾತ್ರವನ್ನೂ (ಧಾರೆಹಿಡಿಯುವ ಪಾತ್ರೆ), ಮಂತ್ರ ಪಾತ್ರೆಯನ್ನೂ ಕೋದು ಇರಿಸಿಕೋ, ಮಾಂಸದ ಕೋಲೂ, ಮೀನಿನ ಕೋಲೂ ಇರಿಸಿಕೊ, ಹಾಗಿದ್ದರೆ ನಿನ್ನ ಕನ್ನೀರಾಶಿಯಲ್ಲಿ (ಆರಧನಾ ಸ್ಥಾನದಲ್ಲಿ) ನಾನು ಬಾಳುತ್ತೇನೆ'. ಹಾಗೆಯೆ ಆಯಿತು. ಹಾಗೆ ಆದಿಪಜಿಂಬನ್ ಕಣ್ಣನ ಕನ್ನೀರಾಶಿಯಲ್ಲಿ ದಿವ್ಯನ್ ಸಾನ್ನಿಧ್ಯವಾಯಿತು.

ಅನಂತರ ಒಮ್ಮೆ ಮೊಟ್ಟಂಪಳ್ಳಿ, ಕಟಕನ್‌ಪಳ್ಳಿ, ತಿಯ್ಯಂಚೇರಿ ಇಲ್ಲಂ ಅಕಂಪಡಿ, ನರಿಯನ್ ಕೋರಪ್ಪಣಿಕ್ಕರ್, ಕೊಲ್ಲಚ್ಚೇನ್‌ಕೋಡಿ, ತುಮಿರಿಕ್ಕನಲಾಡಿ ಎಂಬ ಆರು ಮಂದಿ ಮಲನಾಡಿನಿಂದ ವಯನಾಡಿಗೆ ಹೋದರು. ಅವರು ಅಲ್ಲಿಗೆ ತಲಪಿದಾಗ 'ವಯನಾಟ್ಟು ಕುಲವನ್' ದೈವದ 'ವೆಳ್ಳಾಟಂ' (ತೈಯ್ಯಂ ಅಟದ ಮೊದ ಘಟ್ಟದಲ್ಲಾಗುವ ಅಣಿಕಟ್ಟಿಕೊಳ್ಳದೆ ನಡೆಸುವ ದೈವದ ಆಟ) ನಡೆಯುತ್ತಿತ್ತು. ತಿಯ್ಯಂಚೇರಿ ಹೇಳಿದ, 'ನರಿಯನ್ ಕೋರಪ್ಪಣಿಕ್ಕರೇ, ಒಳ್ಳೆಯದಾದ ದೈವ. ವಯನಾಡು ಬಿಟ್ಟು ಮಲ ನಾಡಿಗೆ ಬರುವುದಾಗಿದ್ದರೆ. . .' ಇದನ್ನು ದೈವ ಹೊರಗಿವಿಯಿಂದ ಕೇಳಿಸಿಕೊಂಡಿತು. ಮತ್ತೆ ಹೀಗೆ ಹೇಳಿತು, 'ಅದಕ್ಕೆ ಸಂಕಟಪಡಬೇಡಿರಿ ನನ್ನ ತಿಯ್ಯಂಚೇರಿ ಇಲ್ಲಂ ಅಕಂಪಡಿ, ನರಿಯನ್ ಕೋರಪ್ಪಣಿಕ್ಕರೇ – ನೆನಕೆಯಿದ್ದರೆ ನಿಮಗೆ ಅಕ್ಕಿ ಕೊಡಿಸುತ್ತೇನೆ; ಇದನ್ನು ಕೇಳಿದ ಆದಿಪಜಿಂಬನ್ ಕಣ್ಣನ್, 'ಹೋಗಬೇಡ ದೈವವೇ, ಮಲನಾಡಿಗೆ. ಕೊಡಗರು ಕುಡಿಯದ ಕಳ್ಳು, ಗುಡಿಯೊಳಗೆ ಕುಜೆಚ್ಚಿ (ಮೀನಿನ)ತಲೆ ವೈಭವದಿಂದ ಕೊಡುತ್ತೇನೆ' ಎಂದ. ಇದಕ್ಕೆ ಉತ್ತರವಾಗಿ ದೈವ ಹೀಗೆ ಹೇಳಿತು, 'ಅದಕ್ಕೆ ಅಧಿಕ ಪರಾಧೀನ (ನಿರ್ಗತಿಕತನ) ತೋಡಿಕೊಳ್ಳುವುದು ಬೇಡ, ನನ್ನ ಆದಿಪಜಿಂಬನ್‌ಕಣ್ಣಾ. ಓರೆ ಇಟ್ಟುಕೋ ವೀತ್ತುಪಾತ್ರವನ್ನೂ, ಮಂತ್ರ ಪಾತ್ರವನ್ನೂ. ಕೋದು ಇರಿಸಿಕೋ ಮೀನುಕೋಲನ್ನೂ ಮಾಂಸದಕೋಲನ್ನೂ. ಆದರೆ ಮೂರು ದಿವಸ ನಡೆದರೆ ಸ್ಥಳ ಸೇರದ ಹೆದ್ದಾರಿ (ಪೆರುವಟಿ)ಯನ್ನು ನಾನು ಮೂರೂಮುಕ್ಕಾಲು ನಾಳಿಕ (ಸುಮಾರು ಒಂದೂವರೆಗಂಟೆ)ದೊಳಗೆ ನಿನ್ನ ಕನ್ನೀರಾಶಿಯಲ್ಲಿ ತಲಪಿ ಬಾಳುತ್ತೇನೆ; ಆ ಬಳಿಕ ಹೀಗೆ ಉಪದೇಶ ನೀಡಿತು.

'ಈಗ ನನ್ನ ಮಧ್ಯಾಹ್ನದ ಗಂಜಿಯ ಮಾತನ್ನಷ್ಟೆ ಹೇಳಿದುದಲ್ಲವೆ? ಆದರೆ ಇದರ ಹಾಗೆ ನನ್ನ ತೇರೂ ತಿರುಮುಡಿ (ಶಿರೋಭೂಷಣ), ಕುಳ್ಳಿರುವಿಕೆ ಪಾನ, ತೆಗೆದುಕೊಂಡು ತೊಳಗಿ ಕೈಯೆತ್ತಿ ಬಡಗು ಭಾಗಕ್ಕೆ ತಿರುಗಿ ತಿರುಮುಡಿ ಧರಿಸಿ ಪಡುಗಡೆಗೆ ತಿರುಗಿ ಶ್ರೀ ಮುಖದೊಂದಿಗೆ ಶ್ರೀಮುಖ ನೋಡಿ, ಪಂಜು ಎಸೆದು ಬಲ ಭಾಗಕ್ಕೆ ತಿರುಗುವ ಕಾಲದಲ್ಲಿ ಪಂಜು ಕಟ್ಟಿನಿಂದ ಒಂದು ಕಡ್ಡಿ ಎಳೆದು ಕುತ್ತಿ

ಆರಿಸಿ, ಅದನ್ನು ಬಟ್ಟೆಯಲ್ಲಿ (ಕಂಚುಕದಲ್ಲಿ) ಇರಿಸಿಕೊಳ್ಳಿ. ಹಾಗಾದರೆ ನಾನು (ನಿಮ್ಮೊಂದಿಗೆ) ಬರುತ್ತೇನೆ'. (ಮಾತುಕತೆಯ ಘಟ್ಟದಲ್ಲಿ 'ವೆಳ್ಳಾಟ' ಮಾತ್ರ ಆಗಿದೆ. ಅಣಿಧರಿಸಿ ತೆಯ್ಯಂ ಇಳಿದರೆ ಆಚರಣೆಯ ಕೊನೆಯಲ್ಲಿ ಪಂಜು ಎಸೆದು ಬಲಭಾಗಕ್ಕೆ ತಿರುಗುವಾಗ ಆ ಪಂಜಿನಿಂದ ಒಂದು ಗರಿಯನ್ನು ತೆಗೆದು ನಂದಿಸಿ ಅದನ್ನು ಇಟ್ಟುಕೊಂಡು ಹೋದರೆ ಜತೆಯಲ್ಲಿ ತಾನೂ ಬರುವುದಾಗಿ ದೈವದ ಹೇಳಿಕೆ).

ದೈವ ಅವರೊಂದಿಗೆ ಮಲನಾಡಿಗೆ ಹೊರಟು 'ಆಂದಿರಿ ಮಾಡಂ'ನಲ್ಲಿ ಬಾಳಿತು. ಅನಂತರ ಪಜೂರ್ ತೊಡಗಿ ಏಳು ಸ್ಥಾನಗಳಲ್ಲಿ ನೆಲೆ ಕಂಡಿತು. ಎಂಟನೆ ಸ್ಥಾನವಾಗಲು ವಳಪಟ್ಟಣಂ ಕೋಟೆಗೆ ತಲಪಿತು. ಕೋಟೆ ಬಾಗಿಲಿಗೆ ಹೋದ ವಯನಾಟ್ಟು ಕುಲವನನ್ನು ದೊರೆ ಯಥೋಚಿತವಾಗಿ ಆದರಿಸಲಿಲ್ಲ. ಕರ್ಮಿಯಾದ ತಂಡಯಾನಲ್ಲಿ ದೈವ ಸಿಟ್ಟು ಮಾಡಿತು. ಅದನ್ನು ತಂಡಯಾನ್ ತಂಬುರಾನ್ (ರಾಜ)ನಿಗೆ ಹೇಳಿದ. ಹೀಗೆಲ್ಲ ಹೇಳಿರುವುದು ದೈವವೇ ಆಗಿರುವುದಾದರೆ ದೇವತೆ ಸ್ವತಃ ಶಕ್ತಿಯನ್ನು ತೋರಿಕೊಡಬೇಕು. ನಾಳೆ ಬೆಳಗಾಗುವಷ್ಟರಲ್ಲಿ ಊನವಿಲ್ಲದ ಹುಲಿತೊಗಲನ್ನು ನಾಡನಾಳುವವರಿಗೆ ಕಾಣಿಕೆಯಿಡಬೇಕು. ತೆಯ್ಯಂ ಕಟ್ಟಿದ ಕನಲಾಡಿ (ವಣ್ಣಾನ್) ಧಿಕ್ಕಾರದ ಮಾತನ್ನು ಹೇಳಿರುವುದಾದರೆ ಅವನನ್ನು ಗಲ್ಲಿಗೇರಿಸಬೇಕು. ದೈವ ಅಭಿಮಾನ ಹೇಳಿರುವುದಾದರೆ ತಂಡಯಾನ್ ಮತ್ತು ತುಮಿರಿ ಕನಲಾಡಿ (ತೆಯ್ಯಂಕಟ್ಟಿದವ) ಇವರಿಗೆ ಬಳೆ ಕೊಟ್ಟು ಅಭಿನಂದಿಸಬೇಕು. ಗಲ್ಲುಗಂಬ ನೆಡಲೂ, ಚಿನ್ನದ ಬಳೆ ಮಾಡಿಸಲೂ ಏರ್ಪಾಡಾಯಿತು. ವಯನಾಟ್ಟುಕುಲವನ್ ದೈವ ತೀಯಂಚೇರಿ ಇಲ್ಲಂ ಅಕಂಪಡಿಯನ್ನು ಕರೆದು ಹುಲಿಯ ಕಿವಿಗೆ ಈಡು ಮಾಡಿಸಿ ಊನವಿಲ್ಲದ (ಹರಿಯದ) ಹುಲಿಯ ತೊಗಲನ್ನು ಆಳುವ ದೊರೆಗೆ ಕಾಣಿಕೆ ಒಪ್ಪಿಸಿತು. ನಂಬಬಹುದಾದ ದೈವ ಎಂದು ವಯನಾಟುಕಲವನ್ ದೈವಕ್ಕೆ ನಾನಾಜಿ (ನಾಲ್ಕು ನಾಜಿ ಅಳತೆಯ ಅಕ್ಕಿ) ವೆಚ್ಚಕ್ಕೆ ಆಗಲೆಂದು ರಾಜ ಆದೇಶಿಸಿದ. ಉಳಿದ ದೈವಗಳಿಗೆ ಮುನ್ನಟಿ (ಮೂರುನಾಟಿ) ಮಾತ್ರ ಆರಾಧನಾ ವೆಚ್ಚಕ್ಕೆ ಸಲ್ಲುವುದು.

ಈ ಪುರಾವೃತ್ತ ಪೂರ್ತಿಯಾಗಬೇಕಾದರೆ ಕಂಡನಾರ್ ಕೇಳನ್‌ನ ಪುರಾವೃತ್ತವನ್ನೂ ಹೇಳಬೇಕಾಗುತ್ತದೆ. ಅದು ಹೀಗೆ–

ಕಣ್ಣಚ್ಚಾರ್ ವಲಿಯ ತಂಬುರಾನ್ ಮತ್ತು ಮೇಲೇಡತ್ತ್ ಚಕ್ಕಿ ಇವರ ಕೆಲಸದ ಆಳು ಕೇಳನ್. ಎರಡು ಕುಜ್ಜಿ (ಅಳತೆಯಷ್ಟು) ರಾಕು (ಮದ್ಯ) ಮತ್ತು ಮುನ್ನಾಟಿ (ಮೂರು ನಾಟಿ ಅಳತೆಯ) ಕಳ್ಳು ಕೊಟ್ಟು ಕೇಳನನ್ನು 'ಪುನಂ' (ಹೊಲ) ಕಡಿದು ಕೃಷಿ ಮಾಡಲು ಕಳುಹಿಸಿದರು. ಕೇಳನ್ ಕಾಡುಕಡಿದು ಸುತ್ತಲೂ ಪೇರಸಿ ಬೆಂಕಿಕೊಟ್ಟ. ಆದರೆ ಅವನು ಸುತ್ತಲಿನ ಬೆಂಕಿಯ ನಡುವೆ ಆಗಿಬಿಟ್ಟ. ಕಡಿಯಲು ಉಳಿದಿದ್ದ ಒಂದೇ ನೆಲ್ಲಿಮರವನ್ನೇರಿ ಬದುಕಿಕೊಳ್ಳಲು ನೋಡಿದ. ಅಷ್ಟರಲ್ಲಿ ಬೆಂಕಿಯಿಂದ ಬದುಕಲು ಮರವನ್ನೇರಿದ ಕಾಳಿ ಮತ್ತು ಕರಾಳಿ ಎಂಬ ಹೆಸರಿನ ಸರ್ಪಗಳು ಕಡಿದು ಅವನನ್ನು ಸಾಯಿಸಿದವು. ಕೇಳನೂ ಸರ್ಪಗಳೂ ಕೊನೆಗೂ ಬೆಂಕಿಗುರುಳಿ ಬೂದಿಯಾದದ್ದಾಯಿತು.

ಆ ದಾರಿಯಾಗಿ ಬೇಟೆಯಾಡುತ್ತ ಬಂದ ವಯನಾಟ್ಟು ಕುಲವನ್ ನೆಳಲಿಗಾಗಿ ನೆಲ್ಲಿಯ ಬುಡಕ್ಕೆ ಬಂದ. ಬಿಲ್ಲಿನ ಕೆಳತುದಿಯಿಂದ ಶರೀರರೂಪದಲ್ಲಿ ಮಲಗಿದ್ದ ಬೂದಿಯನ್ನು ತಟ್ಟಿನೋಡಿದ.

ಮಂತ್ರಶಕ್ತಿಯಿಂದ (ಅದನ್ನು ಹಿಂದೆ ಶಿವ ಕರುಣಿಸಿದ್ದನಷ್ಟೆ) ಜೀವ ಬರಿಸಿದ. ಕೇಳನ್ ಬಿಲ್ಲು ಹಿಡಿದು ಆಧರಿಸಿ ಮೇಲೆದ್ದು ನಿಂತ. ದೈವವನ್ನು ಕಂಡ. ಹಾಗೆ ಕಂಡುದರಿಂದ 'ಕಂಡನಾರ್ ಕೇಳನ್' ಎಂಬ ಹೆಸರೂ ಅವನಿಗೆ ಬಂತು. ಕಂಡನಾರ್ ಕೇಳನನ್ನು ವಯನಾಟ್ಟು ಕುಲವನ್ ತನ್ನೊಂದಿಗೆ ಕರೆದೊಯ್ದು. ತನಗೆ ಸ್ಥಾನ ಇರುವಲ್ಲೆಲ್ಲ ಕಂಡನಾರ್ ಕೇಳನಿಗೆ ಮುನ್ನಾಟಿ ಅಳತೆಯ ಅಕ್ಕಿಯ ಸೇವೆಯನ್ನು ಕಲ್ಪಿಸಿದ ವಯನಾಟ್ಟು ಕುಲವನ್. ಅಂದರೆ ಅಲ್ಲೆಲ್ಲ ಕೇಳನ್ ದೈವವಾಗಿ ಕೋಲಕಟ್ಟಿ ಆರಾಧನೆ ಪಡೆಯತೊಡಗಿದ.

ಹಿನ್ನೆಲೆ

ಕೇರಳ ಇಂದು ಅನುಷ್ಠಾನ ಕಲೆಗಳ ನಾಡಾಗಿದೆ. ವಿಶ್ವಾಸದ ಅಥವಾ ಪುರಾವೃತ್ತದ ಬೆಂಬಲವಿಲ್ಲದೆ ಅನುಷ್ಠಾನಕ್ಕೆ ಅಸ್ತಿತ್ವ ಇರುವುದಿಲ್ಲ. ಕೇರಳದ ಉದ್ದಕ್ಕೂ ಗ್ರಾಮದೇವತೆಗಳೂ, ದುರ್ಮೂರ್ತಿಗಳೂ ಇವೆ. ಇವಕ್ಕೆಲ್ಲ ಸ್ವಂತವಾದ ಕಥೆಗಳಿವೆ. ಈ ಕಥೆಗಳು ತೋಱ್ಱಂ ಪಾಟುಗಳಾಗಿಯೂ, ಬಾಯ್ದೆರೆಯಾಗಿ ದಾಟಿಕೊಳ್ಳುವ ಕಥಾರೂಪಗಳಾಗಿಯೂ ನೆಲೆಸಿವೆ. 'ತೆಕ್ಕನ್ ಪಾಟುಗಳ್'(ತೆಂಕಣ ಪಾಟುಗಳು) ಎಂದು ಹೆಸರಾದ ಪಾಟುಗಳಲ್ಲಿ ಬಹುಭಾಗವೂ ಪುರಾವೃತ್ತಗಳಾಗಿವೆ. ದೇವತಾ ತುಷ್ಟಿಗಾಗಿ ದೇವತೆಯ ಕತೆಯನ್ನು 'ವಿಲ್ಲಡಿಚ್ಚಾನ್" (ಬಿಲ್ಲಿನ ಹೆದೆಗೆ ಹೊಡೆದು ಹಾಡುವ) ಪಾಟುಗಳ ಮೂಲಕ ಪ್ರಸ್ತುತಪಡಿಸುತ್ತಾರೆ. ಪೂತಪ್ಪಾಟು, ತೋಱ್ಱಂ ಪಾಟು. ಕಾವಿನ ಪಾಟು ಹೀಗೆ ಅನೇಕಾನೇಕ ಪಾಟುಗಳು ಪುರಾವೃತ್ತ ಸಂಬಂಧವಾಗಿ ಕೇರಳದಲ್ಲಿ ಇವೆ. ಈ ಪುರಾವೃತ್ತಗಳಲ್ಲಿ ದೇವತೆ ಒಂದು ಸ್ಥಳದಿಂದ ಇತರ ಸ್ಥಳಗಳಿಗೆ ಸಂಚರಿಸಿದುದರ ವಿವರಣೆಯೂ ಇರುತ್ತದೆ. ಕೇರಳದಲ್ಲಿ ಅತಿ ಹೆಚ್ಚು ಪ್ರಚಾರದಲ್ಲಿರುವ ಪುರಾವೃತ್ತದ ಆಖ್ಯಾನ ಕಾಳಿಯದಾಗಿದೆ. ಕೇರಳದ ಪ್ರಧಾನ ಕಲಾರೂಪಗಳಾದ ತೆಯ್ಯಂ, ಮುಡಿಯೇಱ್ಱು, ಪಡಯಣಿ ಮೊದಲಾದವುಗಳಿಗೆ ಆಧಾರವಾಗಿ ನಿಲ್ಲುವುದು ಕಾಳಿಯ ಕಥೆಯೇ. ಒಂದೊಂದು ಆರಾಧನಾ ಸ್ಥಳದಲ್ಲೂ ಇರುವ ವಿಶಿಷ್ಟ ಅನುಷ್ಠಾನಗಳ ಕಾರ್ಯಕಾರಣ ಸಂಬಂಧವನ್ನೂ ಆ ಆ ಸ್ಥಳದಲ್ಲಿ ಪ್ರಚಾರದಲ್ಲಿರುವ ಪುರಾವೃತ್ತ ವಿಶದೀಕರಿಸುತ್ತದೆ. ಪ್ರತ್ಯಕ್ಷವಾಗಿ ಕಾಣುವ ವಿವಿಧ ಅನುಷ್ಠಾನಗಳ ಹಿಂದುಗಡೆ ಪುರಾವೃತ್ತದ ಒಂದು ಲೋಕವುಂಟು.

ಪಯ್ಯನ್ನೂರಿನಿಂದ ಉತ್ತರಕ್ಕೆ ಕರ್ನಾಟಕದ ಗಡಿಯಾದ ತಲಪಾಡಿ ವರೆಗೆ ಇರುವ ಪ್ರದೇಶಗಳಲ್ಲಿ ನಡೆಯುವ ಒಂದು ಆರಾಧನೆ ವಯನಾಟ್ಟು ಕುಲವನ್ ತೆಯ್ಯಂ ಕಟ್ಟುಗೆ ಬಹಳ ವರ್ಷಗಳು ಕಳೆದಾಗ ತೀಯಜಾತಿಯ ತರವಾಡು (ಮನೆತನ)ಗಳಲ್ಲಿ ನಡೆಯುವ ಆರಾಧನೆ ಇದು. ವಯನಾಟ್ಟು ಕುಲವನ್ ತೆಯ್ಯಂ ಮೂರು ದಿನಗಳಿಗೆ ಚಾಚಿಕೊಳ್ಳುವ ಆರಾಧನೆ. ಇದಕ್ಕೆ ಬಹಳ ಮುಂಚಿತವಾಗಿಯೆ ಕಣಿಯಾನ್ (ಕಣಿ = ಜ್ಯೋತಿಷ, ಜ್ಯೋತಿಷಿ) ಅನ್ನು ಕರೆಸಿ ದಿನ ನಿಗದಿ ಮಾಡುತ್ತಾರೆ. ಅನುಷ್ಠಾನಕ್ಕೆ ಮೊದಲು ಪ್ರತ್ಯೇಕವಾದ ದಿನವೊಂದರಲ್ಲಿ 'ಕೂವಂ ಅಳಕ್ಕಲ್' ಎಂಬ ಒಂದು ವಿಧಿಯಿದೆ. ಆರಾಧನೆಗೆ ಅವಶ್ಯವಾದ 'ಕುಜಿ' (ನಾಮದ ಪುಡಿ) ಮೊದಲಾದ ವಸ್ತುಗಳನ್ನು ತಯಾರಿಸುವುದಕ್ಕೆ ಅಕ್ಕಿಗಾಗಿ ಭತ್ತವನ್ನು ಅಳೆಯುವ ವಿಧಿ ಇದು. ಆರಾಧನೆ ದಿನಕ್ಕೆ ಮೊದಲು 'ಕಲವಱ' (ಸಂಭಾರ ದಾಸ್ತಾನು ಕೊಠಡಿ) ತುಂಬಿಸಬೇಕು.

ಊಟಕ್ಕೆ ಬೇಕಾದ ಅಕ್ಕಿ, ತೆಂಗಿನಕಾಯಿ, ಕುಂಬಳ ಮೊದಲಾದ ತರಕಾರಿ ಇತ್ಯಾದಿಯನ್ನು ತೆಂಗಿನ ಹೆಣೆದ ಸೋಗೆಯಿಂದ ತಯಾರಿಸಿದ ಚಪ್ಪರ ಕೋಣೆಯೆ 'ಕಲವಱ'. ಈ ಎಲ್ಲ ವಸ್ತುಗಳು ತಱವಾಡಿನ ಶಾಖೆಗಳಾದ ಮನೆಗಳಿಂದ ಹೊರೆಕಾಣಿಕೆಯಲ್ಲಿ ಬರುತ್ತವೆ. ಸುಡುಮದ್ದು ಸುಡುತ್ತ ಸಂಭ್ರಮದಿಂದ ಒಂದು ಆಚರಣೆಯಾಗಿಯೆ ತಱವಾಡಿಗೆ ಹೊರೆಕಾಣಿಕೆಯ ಆಗಮನ. ಒಂದನೆ ದಿವಸ ಸಂಜೆ ಹಲವು ಜನರ ನೇತೃತ್ವದಲ್ಲಿ ಹಲವು ಗುಂಪುಗಳಲ್ಲಿ ಕೋವಿಗಳನ್ನು ಹಿಡಿದು ಬೇಟೆಗಾಗಿ ಕಾಡಿಗೆ ಹೋಗಬೇಕು. ಅದಕ್ಕೆ ಮುಂಚಿತವಾಗಿಯೆ ತರಱವಾಡು ಮನೆಯ ಮುಂಭಾಗದಲ್ಲೊ, ಬಯಲು ಸ್ಥಳದಲ್ಲೊ ದೈವವನ್ನು ಕರೆಸಿಕೊಳ್ಳಲು ಹೆಣೆದ ತೆಂಗಿನ ಸೋಗೆಯಿಂದ 'ಮಱ' (ಮರೆ) ಕಟ್ಟುತ್ತಾರೆ. ವರ್ಷಗಳ ಹಿಂದೆ (ಹಿಂದಿನ ಬಾರಿ ಎಂದರ್ಥ) ನಡೆದ ಈ ದೈವದ ಕೋಲದ ವೇಳೆ ಕೊನೆಯದಾಗಿ ದೈವಬಳಸಿದ 'ಓಡಚ್ಚೂಟ್ಟಿನ' (ಪಂಜಿನ) ತುಂಡನ್ನು (ಇದನ್ನು ಕಾಯ್ದಿರಿಸುತ್ತಾರೆ) ಮತ್ತೆ ಉರಿಸಿ ಇಟ್ಟು, ಜತೆಗೆ ದೀಪವುರಿಸುವುದರೊಂದಿಗೆ ದೈವ ಸಾನ್ನಿಧ್ಯ ಉಂಟಾಗುತ್ತದೆ. ಅಂದು ರಾತ್ರಿಯೂ ಮರುದಿನ ಹಗಲೂ ಹಲವು ದೈವಗಳನ್ನು 'ಕಟ್ಟಿ' ಆಡುವುದಿದೆ. (ಕಟ್ಟಿ = ವೇಷಧರಿಸಿ). ಸಂಜೆಯಾಗುತ್ತಲೆ 'ಕಂಡನಾರ್‌ಕೇಳನ್' ತೆಯ್ಯಂನ 'ವೆಳ್ಳಾಟ್ಟಂ' ಹೊರಡುತ್ತದೆ. ಅಷ್ಟರಲ್ಲಿ ಬೇಟೆಗೆ ಹೋದ ಗುಂಪುಗಳು ಮರಳಿಬರುತ್ತವೆ.

ಇದಕ್ಕೆ ಮೊದಲು ಹಗಲಿಡೀ ಜೌತಣಕ್ಕೆ ಬೇಕಾದ ಸಜ್ಜೀಕರಣ ನಡೆಯುತ್ತಿರುತ್ತೆ. ಬಂದು ಸೇರುವ ಸಾವಿರಾರು ಮಂದಿಗೆ ಊಟಕ್ಕೆ ಬೇಕಾದ ಸಿದ್ದತೆಗಳು ನಡೆಯುತ್ತಿರುತ್ತದೆ. ದೊಡ್ಡಚಪ್ಪರದಡಿಯಲ್ಲಿ ಹತ್ತಿಪ್ಪತ್ತು ತಾಮ್ರದ ಕಡಾಯಿಗಳಲ್ಲಿ ಅಕ್ಕೆ ಬೇಯಿಸಿ, ಬಸಿದು, ಉದ್ದಕ್ಕೆ ಅಳೆತ್ತರದ ಅನ್ನದ ದಿಬ್ಬ ಏರಿಸುತ್ತಾರೆ. ಹಲವು ಪಾತ್ರೆಗಳಲ್ಲಿ ಅಟ್ಟು ತಯಾರಿಸಿದ ವಿವಿಧ ಪದಾರ್ಥ (ವ್ಯಂಜನ)ಗಳನ್ನು ದೋಣಿಗಳಲ್ಲಿ ಸುರಿದು ಇಡುತ್ತಾರೆ. ಊಟ ಬಡಿಸಲು ಗಂಟೆ ನಾಲ್ಕು (ಮುಂಜಾನೆ) ಆಗುವುದಾದರೂ ಅದನ್ನು ಉಣ್ಣದೆ ಬಂದವರಾರೂ ಹೋಗಲಾರರು.

ಅತ್ಯಂತ ಹೆಚ್ಚು ಜನರು ಪಾಲುಗೊಳ್ಳುವ, ಅವರೆಲ್ಲ ಭಕ್ತಿಯ ಆವೇಶ ಪಡೆಯುವ ಆರಾಧನಾಭಾಗವೇ 'ಕಂಡನಾರ್ ಕೇಳನ್'ನ 'ವೆಳ್ಳಾಟ್ಟಂ'.

'ವೆಳ್ಳಾಟ್ಟಂ' ಎಂದರೆ ಮರುದಿವಸ ಹಗಲಿನಲ್ಲಿ ಆವೇಶಗೊಳ್ಳಲಿರುವ ತೆಯ್ಯಂನ ಒಂದು ಕಿರುಮಾದರಿ. 'ಮಱ'ಕ್ಕೆ ಮುಂಭಾಗದಲ್ಲಿ ಕಟ್ಟಿಗೆಯನ್ನು ಪೇರಿಸಿಟ್ಟಿರುತ್ತಾರೆ. ಅದಕ್ಕೆ ಬೆಂಕಿಕೊಡುತ್ತಾರೆ. ಕಂಡನಾರ್ ಕೇಳನ್ ಅದಕ್ಕೆ ಸುತ್ತ ಓಡುವುದಿದೆ. ಆ ವೇಳೆಗೆ ಬೇಟೆಗೆ ಹೋದವರು ತಾವು ಮರಳುತ್ತಿರುವುದಾಗಿ ಆಕಾಶಕ್ಕೆ ಗುಂಡೆಸೆದು ಸೂಚನೆ ಕೊಡುತ್ತಾರೆ. ಒಂದೊಂದೆ ಗುಂಪು ತಾವು ಈಡು ಮಾಡಿದ ಕಾಡುಹಂದಿ, ಜಿಂಕೆ, ಕೂರನ್ (mouse deer), ಅಳಿಲು, ಮಲಾನ್ ಮೊದಲಾದವನ್ನು ತೂಗಿ ಹೊತ್ತು ತರುತ್ತಾರೆ. ಸಾವಿರಾರು ಜನರು ಕೂಗಿ ಹರ್ಷೋದ್ಗಾರ ಮಾಡುವುದರೊಂದಿಗೆ 'ವೆಳ್ಳಾಟ್ಟಂ' ಬೇಟೆಮೃಗಗಳನ್ನೂ ಸ್ವೀಕರಿಸುವುದಿದೆ. ಹರವಿದ ತೆಂಗಿನ ಹೆಣೆದ ಸೋಗೆಗಳ ಮೇಲೆ ಮೃಗಗಳನ್ನು ಸಾಲಾಗಿ ಮಲಗಿಸುತ್ತಾರೆ. ಇದಕ್ಕೆ 'ಬಪ್ಪಿಡಲ್' ಎಂದು ಹೆಸರು. 'ಮಕ್ಕುಪ್ಪಿಡಲ್' ಎಂಬುದೇ

‘ಬಪ್ಪಿಡಲ್’ ಆಗಿರಬೇಕು. ಅಮದರೆ ‘ಪಾಲುಮಾಡಿಕೊಳ್ಳಲು ಹಾಕುವುದು’ ಎಂದರ್ಥ. ಮೃಗಗಳನ್ನು ಕೊಯ್ದು ಪಾಲುಮಾಡಿಕೊಳ್ಳುವುದನ್ನು ತೋರಿಸುವ ವಿಧಿ ಇದು. ಮೂರು ದಿನಗಳ ಆರಾಧನೆಯಲ್ಲಿ ಅತ್ಯಂತವಾಗಿ ಭೌತಿಕವಾಗಿಯೂ ಮಾನಸಿಕವಾಗಯೂ ಜನರಿಗೆ ಪಾಲುಗೊಳ್ಳುವಿಕೆ ಇರುವ ಘಟ್ಟ ಇದುವೇ. ಸೇರಿದವರು ಪೂರ್ತಿಯಾಗಿ ಕೂಗು ಹಾಕುವುದು ಮತ್ತು ಬೇಟೆಗೆ ಹೋದವರು ತಮ್ಮ ಕೋವಿಯಿಂದ ಮೇಲಕ್ಕೆ ಗುಂಡು ಹಾರಿಸುವುದು ನಡೆಯುತ್ತವೆ. ಇದಾದ ಬಳಿಕ ಮೃಗಗಳಲ್ಲಿ ಒಂದನ್ನು ಕೊಯ್ದು ಬೇಯಿಸುತ್ತಾರೆ. ಆ ಬಳಿಕ ಒಂದು ಮೃಗವನ್ನು ಕೊಯ್ದು ಅದರ ಕರುಳನ್ನು ತೆಗೆದು ಬೆಂಕಿಗೆ ಹಾಕಿ ಸುಡುತ್ತಾರೆ. ಸುಟ್ಟ ಕರುಳು ರುಚಿಯಿರುವುದಾಗಿ ‘ವೆಳ್ಳಾಟ್ಟಂ’ ಅಭಿನಯಿಸಿ ತೋರಿಸುತ್ತದೆ. ಉಳಿದುದನ್ನು ಸೇರಿದವರಿಗೆ ಕೊಡುತ್ತದೆ. ಅನಂತರ ಮೃಗಗಳನ್ನು ಅಲ್ಲಿಂದೆತ್ತಿ ಕೋಯ್ದು ಬೇಯಿಸುತ್ತಾರೆ. ಇದರ ಅಡುಗೆಗೆ ಒಂದೆರಡು ತಾಸು ತಗಲುತ್ತದೆ. ಒಂದೋ ಎರಡೋ ತುಂಡು ಮಾಂಸ ಮತ್ತು ಅನ್ನ ಸಿಗುವುದಕ್ಕಾಗಿ ಬೆಳಗ್ಗೆ ಆರುಗಂಟೆವರೆಗೂ ಜನರು ಕಾಯುತ್ತಾರೆ. ಜೌತಣ ಮುಗಿಸಿದ ಈ ಜನರು ಮರುದಿನ ಸಂಜೆವೇಳೆಗೆ ಆವೇಶಗೊಳ್ಳುವ ‘ ವಯನಾಟ್ಟು ಕುಲವನ್’ ತೆಯ್ಯಂ ಅನನು ಕಂಡು ಅನುಗ್ರಹ ಪಡೆದು ಮನೆಗೆ ಮರಳುತ್ತಾರೆ.

ವಿಶ್ಲೇಷಣೆ

ಆರ್ಯ – ದ್ರಾವಿಡ ಸಂಘರ್ಷಗಳೂ, ಮೇಲಧಿಕಾರವೂ, ಶೈವ–ವೈಷ್ಣವ ಸಂಕಲ್ಪಗಳೂ ಸೇರಿ ಸಂಕರಗೋಡ ಒಂದು ಕೇರಳೀಯ ಬಹುತ್ವ (Plurlism) ವಯನಾಟ್ಟು ಕುಲವನ್ ಮತ್ತು ಕಂಡನಾರ್ ಕೇಳನ್ ಇವರೊಳಗಿನ ಜತೆಗಾರಿಕೆಯಲ್ಲಿ ಇದೆ. ಕೃಷಿ ಚಟುವಟಿಕೆ ವ್ಯವಸ್ಥೆ ಸಕ್ರಿಯವಾಗಿ ನೆಲಸಿರುವ ಬಡಗಣ ಮಲಬಾರಿನ ತೀಯ ಜಾತಿಯ ತರವಾಡುಗಳಲ್ಲೂ, ಕಾವುಗಳಲ್ಲೂ, ಬಯಲುಗಳಲ್ಲೂ, ಗ್ರಾಮಗಳಲ್ಲೂ ರಂಗವೇರುವ ಮೇಲೆ ಹೇಳಿದ ತೆಯ್ಯಂಗಳ ಹಿಂದಿನ ಬಲವೇ ಈ ಪುರಾವೃತ್ತ. ಬೇಸಗೆಯ ನಡುಭಾಗದಲ್ಲಿ (ಮೀನ–ಮೇಷ) ಮತ್ತು ಮಳೆಗಾಲ ಆರಭವಾಗುವುದರ ನಡುವೇಳೆಯೆ ಈ ‘ತೆಯ್ಯಂ’ ನಿಗದಿಯಾಗುವುದು. ನಿಗದಿಗೆ ‘ಅಡಯಾಳಂ ಕುಱಿಕ್ಕುಕ’ (ದಿನ ಗುರುತಿಸುವುದು) ಎಂದು ಪರಿಭಾಷೆ. ಹಲಸು, ಮಾವು ಮೊದಲಾದ ಕೇರಳೀಯ ಫಲಗಳೂ, ಸೌತೆ, ಪಡುವಲ, ಕೆಂಗುಂಬಳ ಮೊದಲದ ಕಾಯಿಪಲ್ಯೆಗಳೂ ಬೆಳೆದು ಕೊಯ್ಯುವುದಕ್ಕೆ ತಯಾರಾಗಿ ನಿಲ್ಲುವ ಕಾಲ ಇದು. ಎಡೆ ಬೆಳೆತೆಗೆದಾದ ಗದ್ದೆ ಉರಿಬಿಸಿಲಿಗೆ ಬಿರುಕುಬಿಟ್ಟಿರುತ್ತದೆ. ಈ ಬಗೆ ಬಯಲುಗಳೇ ಹೆಚ್ಚಾಗಿ ವಯನಾಟ್ಟು ಕುಲವನ್ ತೆಯ್ಯಂ ಆರಾಧನೆಗೆ ಆಯ್ಕೆಯಾಗುವುದು. ಒಂದು ವರ್ತುಲಾಕೃತಿಯ ಆರಾಧನಾಸ್ಥಳದ ಒಂದೆಡೆ ‘ಮಱಿ’ (ಮರೆ–ಇದೇ ದೈವದ ಗರ್ಭಗೃಹ) ಇರುತ್ತದೆ. ಅದರ ಮುಂದೆ ಎಡಗಡೆಗೆ ಅಗ್ನಿಕುಂಡ ಉರಿಯುತ್ತಲೆ ಇರುತ್ತದೆ. ಮೃಗದಕರಳು ಸುತ್ತು ತೆಗೆಯಲು ಇರುವಂಥದು ಇದು. ಇದರ ಸುತ್ತಲೇ ಕಂಡನಾರ್ ಕೇಳನ ತಾಂಡವ ನೃತ್ಯ. ಮೂರು ದಿವಸ ಬೆಂಕಿ ಉರಿದು, ಸಮಾಪ್ತಿ ವೇಳೆಗೆ ವಯನಾಟ್ಟು

ಕುಲವನ 'ಚೂಟ್ಟಾಟಂ' (ದೊಂದಿಯಾಟ) ಮುಗಿದರೆ, ಮಳೆ ಸುರಿಯುತ್ತದೆಂದು ಸಾಮಾನ್ಯವಾಗಿ ಗ್ರಾಮೀಣರೂ, ವಿಶೇಷತಃ ಕೃಷಿಕರೂ ನಂಬುತ್ತಾರೆ. ಅದಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಸಂಕ್ರಮಣ ಮತ್ತಿತರ ಹೊಂದಿಕೆಯ ದಿನಗಳನ್ನು ನೋಡಿಯೆ ಆರಾಧನೆಯ ದಿನಗಳನ್ನು ಜ್ಯೋತಿಷಿ ಹಾಗೂ ತರವಾಡಿನ ಪ್ರಮುಖರು (ಕಾರಣವನ್ಮಾರರು) ನಿರ್ಣಯಿಸುತ್ತಾರೆ. ವೇಷ ತಿಂಗಳ ಅಪರಾರ್ಧದಲ್ಲೆ ವಯನಾಟ್ಟು ಕುಲವನ್ ದೈವದ ಆರಾಧನಾ ದಿನಗಳ ಆರಂಭ. ಹಿಚ್ಚಿನ ಕಡೆಗಳಲ್ಲಿ ಈ ದೈವದ ಆರಾಧನೆ ವೇಳೆ ಮಳೆ ಸುರಿಯುವುದು ಸಾಮಾನ್ಯ. ಈ ಆರಾಧನೆಯಲ್ಲಿ ಬೇಟೆ ಮೃಗಗಳ ನೆತ್ತರು ಭೂಮಿಗೆ ಸುರಿಯುವುದು, ಅಗ್ನಿ ಕುಂಡದಲ್ಲಿ ಬೆಂದ ಮಣ್ಣಿರುವುದು ಮತ್ತು ಅಲ್ಲಿ ಮೊದಲ ಮಳೇ ಸುರಿಯುವುದ ಇವುಗಳಿಗೆ ನೆಲದ ಫಲವತ್ತತೆ ಹೆಚ್ಚುವ ದೃಷ್ಟಿಯ ಅರ್ಥವೂ ಗಮನಾರ್ಹ. ಹೆಚ್ಚನ ಕಡೆಗಳಲ್ಲಿ ವಯನಾಟ್ಟು ಕುಲವನ್ ಆರಾಧನೆ ಮುಗಿದ ಹತ್ತಿರದ ದಿನಗಳಲ್ಲೆ ಆ ಬಯಲಿನಲ್ಲಿ ಕೃಷಿಕೆಲಸದ ಆರಂಭವಾಗುತ್ತದೆ.

ತೆಯ್ಯಂ ಆಟದ ಮೂರು ದಿನವೂ ತರವಾಡು ಮನೆಯಂಗಳದ ತೆಂಗಿನಿಂದ ಇಳಿಸಿದ ಕಳ್ಳನ್ನು ಕುಲವನ್ ದೈವಕ್ಕೆ ಅರ್ಪಣೆ ಮಾಡಲಾಗುವುದು. 'ಕಲವಱ' (ದಾಸ್ತಾನುಕೋಣೆ)ಯಲ್ಲಿ ಜೇನು ಮತ್ತು 'ಚಾರಾಯಂ' (ಶರಾಬು) ನೈವೇದ್ಯವಿರಿಸಿ ಇಬರು ವೃತಸ್ಥರಾಗಿ ಕುಳ್ಳಿರುತ್ತಾರೆ. 'ಏಱ್ಟುಕತ್ತಿ' (ಮೂರ್ತೆಕತ್ತಿ[1]) ಯನ್ನು 'ಮಱ' (ತೆಂಗಿನ ಹೆಣೆದ ಹಸಿ ಸೋಗೆಯಿಂದ ಮುಚ್ಚಿದ ದೈವದ

1. ಮೂರ್ತೆಕತ್ತಿ – ತೆಂಗಿನ ಕೋಡನ್ನು ಕೆತ್ತಿ ಕಳ್ಳು ಇಳಿಸಲು ಬಳಸುವ ವಿಶಿಷ್ಟ ಕತ್ತಿ.

ಪೂಜಾಗೃಹ) ಯಲ್ಲಿ ಇಡುತ್ತಾರೆ. ಕಳ್ಳು ತೆಗೆಯಲು ಬಳಕೆಯಾಗುವ ಇತರ ಉಪಕರಣಗಳಾದ 'ಓಂಡ' (ಕಳ್ಳು ಸುರಿಯುವ ಕುಡಿಕೆ), 'ತಳ' (ತೆಂಗು ಏರಲು ಕಾಲಿಗೆ ಹಾಕಿಕೊಳ್ಳುವ ಹಗ್ಗದ ಸುತ್ತು) ಮೊದಲಾದುವನ್ನು ತರವಾಡು ಅಂಗಳದಲ್ಲಿ ತೂಗುಹಾಕುತ್ತಾರೆ.

'ವಯನಾಟ್ಟು ಕುಲವನ್' ದೈವದ ಪುರಾವೃತ್ತವನ್ನೂ ಮತ್ತು ಅನುಬಂಧವಾಗಿ ಕೊಟ್ಟಿರುವ 'ಕಂಡನಾರ್‌ಕೇಳನ್' ದೈವದ ಪುರಾವೃತ್ತವನ್ನೂ ಆ ತೆಯ್ಯಂಗಳ ಮೇಲೆ ಸೂಚಿಸಿದಂಥ ಅನುಷ್ಠಾನಗಳನ್ನೂ ಒಟ್ಟು ಸೇರಿಸಿ ಆಲೋಚಿಸಿದರೆ ಒಂದು ವಿಷಯ ಖಚಿತವಾಗುತ್ತದೆ. ಬೇಟೆಯನ್ನು ಕೈಬಿಡಲು ನಿರ್ಬಂಧಿತವಾದ ಒಂದು ಜನವಿಭಾಗ (ಬುಡಕಟ್ಟುಗಳು)ದ ಭೂತಕಾಲದ ಸ್ಮೃತಿಯನ್ನು ಮತ್ತು ಏಱ್ಱ (ಕಳ್ಳಿಳಿಸುವಿಕೆ), 'ಮದ್ಯಪಾನ'ಗಳನ್ನು ಬೆಟ್ಟುಮಾಡಿ ಅಪಹಾಸ್ಯಕ್ಕೊಳಗಾದ ಒಂದು ಸಾಂಘಿಕತೆಯಸ್ವಂತ ಅನನ್ಯತೆಯನ್ನು ಬೆಟ್ಟುಮಾಡುವುದಕ್ಕಿರುವ ತನ್ನತನದ ಅರಿವು, ಮನಸ್ಸಿನಿಂದ ಬೇಟೆಗೆ ಹಿಂದಿರುಗುವಿಕೆಯನ್ನು ನಡೆಸುವಾಗಲೂ ಕೃಷಿಯನ್ನು ಜೀವನ ಮಾರ್ಗವನ್ನಾಗಿ ಮಾಡುವ ಉತ್ಕಟ ಇಚ್ಚೆ ಇವುಗಳೇ ಈ ಪುರಾವೃತ್ತಗಳ ಹಿಂದೆ ಕೆಲಸಮಾಡುವಂಥವು. ಮೇಲು ಜಾತಿಯವರು ಈ ಸಾಂಘಿಕತೆಯನ್ನು ಕರೆದುದು 'ತೀಯ್ಯರ್' ಎಂದಾಗಿತ್ತು. (ತೀಯ್ಯ ಸ್ವಭಾವ ಉಳ್ಳವ ಕೆಟ್ಟ ಸ್ವಭಾವ ಉಳ್ಳವ. ಇದಕ್ಕೆ ವಿರುದ್ಧವಾಗಿ ನಂಬೂತಿರಿಗಳನ್ನು ಕರೆಯುತ್ತಿದ್ದುದು 'ಚೊವ್ವರ್' ಎಂದಾಗಿತ್ತು). ಈ ಕರೆಹವನ್ನು ಪ್ರತಿಭಟಿಸುವುದಕ್ಕಾಗಿಯೆ ಪುರಾವೃತ್ತದಲ್ಲಿ ಈ ಸಮುದಾಯದ ವ್ಯಕ್ತಿಗೆ ಶಿವನಿಂದ 'ದಿವ್ಯನ್'

ಎಂಬ ಹೆಸರನ್ನು ಇಡಿಸಿಕೊಂಡದ್ದು. 'ದಿವ್ಯನ್' ತದ್ಭವ ರೂಪದಲ್ಲಿ 'ತೀಯ್ಯ'ನಾದ. ಈ ರೀತಿಯಲ್ಲಿ ಯಾವ ಪುರಾವೃತ್ತವಾದರೂ ಗತಕಾಲದ ಸಮೂಹಜೀವನದಲ್ಲಿದ್ದ ಸಂಘರ್ಷಗಳನ್ನು ದಾಖಲೆಮಾಡುವುದನ್ನು ಕಾಣಿತ್ತೇವೆ. ಅವಧಾನತೆಯೊಂದಿಗೆ ಸಮೀಪಿಸಿದರೆ ಪುರಾವೃತ್ತದಿಂದ ಇತಿಹಾಸವನ್ನು ಸೋಸಿತೆಗೆಯಲು ಸಾಧ್ಯವಿದೆ. ಇದರಿಂದ ಆಚೆಗೆ ಈ ಪುರಾವೃತ್ತ ಸಾರ್ವಲೌಕಿಕ ಮನುಷ್ಯನ ಸತ್ಯಗಳನ್ನೂ ಒಳಗೊಂಳ್ಳುತ್ತದೆ. ಮಧುವನದಲ್ಲಿ ಬೇಟೆಯಾಡಬಾರದು ಎಂದೂ ಮಧುಕೊಡವನ್ನು ಕುಡಿಯಲು ಬಳಸಬಾರದೆಂದೂ ಇದ್ದ ನಲ್ಲಚ್ಛನ (ನಲ್ಲಚ್ಛನ್–ಒಳ್ಳೆಯ ತಂದೆ–ಶಿವ) ಆಜ್ಞೆಯನ್ನು 'ಕುಲವನ್' ಉಲ್ಲಂಘಿಸಿದ, ಅದರಿಂದಾಗಿ ಆತ ಮೇಲುಲೋಕದಿಂದ 'ಇಡವಿ' (ಎಡೆಯ – ಮಧ್ಯದ) ಲೋಕಕ್ಕೆ (ಭೂಮಿಗೆ) ಭ್ರಷ್ಟನಾಗಿ ಬಿದ್ದ. ಇದು 'ಆದಮನ ಪುರುದೀಸಾ ನಷ್ಟ'ವನ್ನು ನೆನಪಿಸಿಕೊಡುತ್ತದೆ. ಪುರಾವೃತ್ತವು ಏಕಕಾಲದಲ್ಲಿ ಸಮೂಹಜೀವನದ ಚರಿತ್ರೆಯನ್ನೂ ಮಾನವ ಸಂಸ್ಕೃತಿಯ ಚರಿತ್ರೆಯನ್ನು ಒಳಗೊಳ್ಳುತ್ತದೆ ಎಂಬುದನ್ನು ಈ ಪುರಾವೃತ್ತ ತೋರಿಕೊಡುತ್ತದೆ.

ಅನಂತರ ಕಾಲದಲ್ಲಿ ಜಾತಿ ಪದ್ಧತಿ ಉರ್ಜಿತಕ್ಕೆ ಬಂದಾಗ ಕೃಷಿ ಭೂಮಿಯ ಒಡೆತನ ಸಮೂಹದ ಮೇಲುವರ್ಗದವರ ವಶವಾಯಿತು. ಕೃಷಿ ಮೂಲಕ ಉತ್ಪಾದನಯೂ, ಉತ್ಪಾದನೆ ಮೂಲಕ ಐಶ್ವರ್ಯವೂ ಉಂಟಾದವು. ಕೃಷಿಯನ್ನು ಮಾನ್ಯವಾದ ಯದ್ಯೋಗವೆಂದೂ, ಕಳ್ಳು ಕೆತುವುದು (ಚೆತ್ತ್) ಕೆಟ್ಟ ಉದ್ಯೋಗವೆಂದೂ ನೋಡತೊಡಗಿದರು. ಕೃಷಿಯಲ್ಲಿ ತೊಡಗಿಕೊಂಡ ಬಳಿಕವೂ ತೀಯ್ಯ ಸಮಾಜ ಕಳ್ಳು ಇಳಿಸುವುದರಲ್ಲಿ ಅನನ್ಯತೆಯನ್ನು ಕಾಣುತ್ತದೆ ಎಂಬುದೇ ಪುರಾವೃತ್ತದಲ್ಲಿ 'ಕೆತ್ತು'ವುದನ್ನು ಶಿವನೇ ಉಪದೇಶಿಸಿದ ಎಂದು ಹೇಳಿರುವುದರಲ್ಲೂ, ಅನುಷ್ಠಾನದ ವೇಳೆ ಕುಲಚಿಹ್ನೆ ಎಂಬಹಾಗೆ 'ಏಱು ಕೆತ್ತಿ'ಯೂ. 'ಒಂಡ'ಯೂ 'ತಳ'ಯೂ ಪ್ರದರ್ಶನ ವಸ್ತುವಾಗುವದರಲ್ಲೂ ವ್ಯಕ್ತವಾಗುವುದು. ಅದರೊಂದಿಗೆ ಕೈತಪ್ಪಿ ಹೋದ ಬೇಟೆಯನ್ನು ಒಂದು ದಿನದ ಮಟ್ಟಿಗೆ ಪುನಃಸೃಷ್ಟಿ ಮಾಡಲಾಗುತ್ತದೆ. ಆದ್ದರಿಂದ ಈ ಪುರಾವೃತ್ತ ಒಂದು ಸಮುದಾಯದ ಸ್ವಂತ ಪರಾಂಪರ್ಯವನ್ನು ಆತ್ಮಸಾತ್‌ಗೊಳಿಸುವ, ಸ್ವಂತ ಅನನ್ಯತೆಯನ್ನು ಎತ್ತಿ ಹಿಡಿಯುತ್ತ ಪ್ರತಿಭಟನೆ ವ್ಯಕ್ತಪಡಿಸುವ ತಂತ್ರ ಕೂಡ ಆಗಿದೆ. ತೀಯ್ಯರ ಹಾಗೆ ಪರಂಪರಾಗತ 'ಕೆತ್ತು' (ಕಳ್ಳಿಳಿಸುವ)ಗೆಯವರು ಮಧ್ಯಕೇರಳದ 'ತಂಡಾನ್' ಜನರು ('ಚೋವನ್' ಜನರೆಂದರೂ ಅವರೇ) ಅವರಲ್ಲೂ 'ಕುಲನಾಯಕ' ಸಂಕಲ್ಪವಿದೆ. 'ತಂಡಾನ್'ಗಳಲ್ಲಿ 'ಮುತ್ತಪ್ಪನ್' ಎಂಬ 'ಆದಿಪಿತ'ನೇ ಇದ್ದಾನೆ. ಉತ್ತರ ಮಲಬಾರಿನ 'ಪಱಶ್ಶಿನಿ (ಎಂಬಲ್ಲಿಯ) ಮುತ್ತಪ್ಪನ್' ಅತ್ಯಂತ ಪ್ರಸಿದ್ಧ. ಬಡಗಣ ಕೇರಳಕ್ಕೆ ತಾಗಿಕೊಂಡಿರುವ ಕೊಡಗಿನ 'ಏಯ್ಯಪ್ಪ', 'ಪಱಶ್ಶಿನಿ ಮುತ್ತಪ್ಪ' ಮತ್ತು 'ಶಬರಿಮಲೆ ಅಯ್ಯಪ್ಪನ್' ಇವರೊಳಗಿರುವ ಸಮಾನತೆಯನ್ನು ಅನ್ವೇಷಿಸಬಹುದಾಗಿದೆ. ದಕ್ಷಿಣ ಕೇರಳದ 'ಈಟವ'ರಲ್ಲಿ ಇದಕ್ಕೆ ಸಮಾನವಾದ ನಾಯಕ ಸಂಕಲ್ಪ ಇರುವುದು ತಿಳಿಯದು.

'ಈಟವರ್' ಜನರು 'ಈಟತ್ತು ನಾಡಿ'ನಿಂದ ಬಂದವರೆಂದು ಚರಿತ್ರಕಾರರು ಹೇಳುತ್ತಾರೆ. ಅವರು 'ಈ ಟತ್ತು ನಾಡೆಂ'ದು ಗುರುತಿಸುವುದು ಸಲೋನ್ ಅಸನ್ನು. ವಡಕ್ಕನ್ ಪಾಟಿನಲ್ಲಿ ಕಾಣುವ ಚೇಕೋನ್ ಗಳು ಈ ವಿತ್ತು ನಾಡಿನಿಂದ ಬಂದವರೆಂದೂ ತಿಳಿಯಲಾಗುತ್ತದೆ. ಆದರೆ ಸಲೋನಿನ ಕೆತ್ತುವ'ವರನ್ನು

ಸಾಮಾನ್ಯವಾಗಿ ಕರೆಯುತ್ತಿದ್ದುದು 'ಕೊಚ್ಚಿಯಾನ್' ಎಂದಾಗಿದೆ. ಇವತ್ತೂ ಕರೆಯುವುದು ಹಾಗೆಯೇ, ಇದು ಈಟಿವರು ಸಲೋನಿನಿಂದ ಬಂದವರೆಂಬ ಬಾದಕ್ಕೆ ವಿರುದ್ಧವಾಗಿದೆ. (ಕೊಚ್ಚಿಯಿಂದ ಬಂದವರು) ಎಂಬ ಅರ್ಥದಲ್ಲೆ ಈ ಕರೆಹ. ಎ.ಅಯ್ಯಪ್ಪನ್, ಶ್ರೀನಿವಾಸ ಅಯ್ಯಂಗಾರ್ ಅವರು ಈವಿವರೂ ತೀಯ್ಯರೂ ಸಿಲೋನಿನಿಂದ ಬಂದವರೆಂಬ ವಾದವನ್ನು ತರ್ಕಬದ್ಧವಾಗಿ ನಿರಾಕರಿಸಿದ್ದಾರೆ. 'ಈಟಿಂ'ಎಂಬ ಮಾತಿನ ಅರ್ಥವೇನು ಎಂದೂ ಈವಿತ್ತುನಾಡು ಯಾವುದು ಎಂದೂ 'ವಯನಾಟ್ಟು ಕುಲವನ್' ದೈವದ ತೋಱ್ಱಂ ಪಾಟೇ ಸಾಕ್ಷ್ಯ ನೀಡುತ್ತದೆ. 'ಈಯೋ ಕರಿಂಬನ' ಎಂದು ಹಲವು ತೋಱ್ಱಂಗಳಲ್ಲೂ ಪುನರಾವರ್ತನೆಗೊಳ್ಳುತ್ತದೆ. 'ಈಯೋ' ಎಂಬುದಕ್ಕೆ ಅಲ್ಲಿ ಉದ್ದೇಶಿಸುವ ಅರ್ಥ 'ಎತ್ತರದ' ಎಂಬುದಾಗಿದೆ. 'ಈವಿನಾಡು ವಯನಾಟ್ಟಿಲ್‌ನಿನ್ನುಂ ಆವಿನಾಡು ಮಲನಾಟ್ಟಿಲೇಕ್ಕ್ ಇೌನ್ ಕೈಯೆಡುತ್ತು' (ಈವಿನಾಡಾದ ವಯನಾಡಿನಿಂದ ಆಳನಾಡಾದ – ತಗ್ಗಿನ ನಾಡಾದ –ಮಲನಾಡಿಗೆ ('ಮಲಯಾಳ ನಾಡಿಗೆ' ನಾನು ಹೊರಟೆ) ಎಂದು ಸ್ವತಃ ವಯನಾಟ್ಟುಕುಲವನೇ ಹೇಳುತ್ತಾನೆ. 'ಆವಿಂ' ಎಂಬುದರ ವಿರೋಧ ಶಬ್ದ 'ಈವಿಂ'. ಈವಿನಾಡು ಎಂದರೆ ವಯನಾಡು ಎಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷ್ಯ ಬೇಕಾಗಿಲ್ಲ. 'ಈವಿನಾಡನ್ ತೀಯ್ಯನ್'ಎಂದು 'ಮಕ್ಕಪೋದಿ' ತೋಱ್ಱಂನಲ್ಲೂ ಬರುತ್ತದೆ. ಪುರಾವೃತ್ತಗಳನ್ನೂ ಇತರ ಮೌಖಿಕ ಅರಿವಿನಧಾರೆಗಳನ್ನೂ ಚರಿತ್ರರಚನೆಯ ಮೂಲಸೆಲೆಗಳನ್ನಾಗಿ ಸ್ವೀಕರಿಸಬೇಕಾಗುವುದರ ಆವಶ್ಯಕತೆ ಕಡೆಗೇ ಇದು ಬೆರಳು ಮಾಡುತ್ತಿರುವುದು. ಇಲ್ಲಿ ಪ್ರಸ್ತುತವೇನಿಸುವ ಒಂದು ಗ್ರಾಮೀಣಕತೆಯನ್ನು ದಾಖಲಿಸಬಹುದು–

ವಯನಾಟ್ಟು ಕುಲವನ್ ವಯನಾಡಿನ ಒಬ್ಬ ಆದಿವಾಸಿಯಾಗಿದ್ದ. 'ಕುಲವನ್' ಎಂದರೆ ಕುಲನಾಯಕ. ಕುಟುಂಬ ನಾಯಕ ಎಂದರ್ಥ. ವಯನಾಡಿನ ಒಡಯರು ಆದಿವಾಸಿಗಳಿಂದ ಏಲಕ್ಕಿ, ಕರಿಮೆಣಸು, ಮೊದಲಾದ ವನ್ಯೋತ್ಪತ್ತಿಗಳನ್ನು ಪ್ರತಿಫಲವಿಲ್ಲದೆ ತಮ್ಮ ಅರಮನೆಗಳಿಗೆ ತಲಪಿಸಲು ಹೇಳಿದರು. ವಯನಾಟು ಕುಲವನ್ ಅದನ್ನು ಪ್ರತಿಭಟಿಸಿದ ಮಾತ್ರವಲ್ಲ ಆತ ಆದಿವಾಸಿಗಳನ್ನೂ ಭೂಒಡಯರ ವಿರುದ್ಧ ಸಂಘಟಿಸಿದ. ಇದು ಗೊತ್ತಾದೊಡನೆ ರಾಜ (ತಂಬುರಾನ್) ಕುಲವನನ್ನು ಭ್ರಷ್ಟನೆಂದು ಸಾರಿದ. ಕುಲವನ್ ಕಾಡಿಗೆ ಪಾರಾದ. ರಾಜನ (ತಂಬುರಾನನ) ಆಳುಗಳು ಕಾಡಿಗೆ ಬೆಂಕಿಕೊಟ್ಟರು. ಅಲ್ಲಿಂದ ಪಾರಾದ ಕುಲವನ್ ಒಬ್ಬ ಮುಸ್ಲಿಮನ ಮನೆಯಲ್ಲಿ ಅಡಗಿಕುಳಿತ. ಈ ಮುಸ್ಲಿಂ ಒಬ್ಬ ವ್ಯಾಪಾರಿಯಾಗಿದ್ದ. ಆದಿವಾಸಿಗಳಿಂದ ನ್ಯಾಯವಾದ ಬೆಲೆಗೆ ವನ್ಯೋತ್ಪತ್ತಿಗಳನ್ನು ಕೊಳ್ಳುತ್ತಿದ್ದವನು ಆತ. ಹಾಗೆ ಅಡಗಿ ಜೀವಿಸುವಾಗ ಕುಲವನಿಗೆ ಕಳ್ಳುಕುಡಿಯಬೇಕು, ಮೀನು ತಿನ್ನಬೇಕು. ಆ ಮುಸ್ಲಿಂ ವ್ಯಾಪಾರಿ ತಲೆಯಲ್ಲಿ ಮುಂಡು(ಬಟ್ಟೆ) ಹಾಕಿ, ಕಳ್ಳನ್ನು ಕುಲವನಿಗೆ ರಹಸ್ಯವಾಗಿ ತಂದುಕೊಟ್ಟ. (ಇದೇ ಮುಸ್ಲಿಂ ಗಲ್ಲಿಗೇರಲು ತೀರ್ಪುಪಡೆದಾಗ, ರಕ್ಷಿಸಿರುವುದಕ್ಕೆ ಪ್ರತ್ಯುಪಕಾರವಾಗಿ ಕುಲವನ್ ಆತನ ತಲೆಗೆ ಬಟ್ಟೆ ಹಾಕಿ ಕೊಟ್ಟ ಎಂಬ ಒಂದು ಪಾಠಾಂತರವಿದೆ.) ಅಲ್ಲಿ ಬಹಳ ದಿನ ಉಳಕೊಳ್ಳಲು ಕುಲವನಿಗೆ ಸಾಧ್ಯವಾಗಲಿಲ್ಲ. ಆತ ನೇರ ಮೆಲ ಹತ್ತಿ ಇಳಿದು ಮಲನಾಡಿಗೆ (ಈಗಿನ ಕಾಸರಗೋಡು ಜಿಲ್ಲೆಗೆ)ಬಂದ. ಮಲನಾಡಿನ ತೀಯ್ಯ ಜನಾಂಗದವರು ಕುಲವನನ್ನು ಸ್ವಾಗಿಸಿದರು. ತೀಯ್ಯರು ಸ್ವಂತ ಜಮೀನು ಇಲ್ಲದೆ

ಭೂಮಾಲಕರ ಭೂಮಿಯಲ್ಲಿ ದುಡಿಯುವುದಲ್ಲದೆ 'ಕೆತ್ತುಗೆ' ಕುಲವೃತ್ತಿಯೊಂದಿಗೂ ಜೀವಿಸುತ್ತಿದ್ದರು. ಆ ಕಾಲದಲ್ಲೆ ಕುಲವನ ಮಲನಾಡು ಪ್ರವೇಶ. ಕುಲವನ್ ಅವರ ಕುಲನಾಯಕನಾದ.

ಪುರಾವೃತ್ತಕ್ಕೆ ಹೊಸ ಪಾಠಗಳು ಉಂಟಾಗಬಹುದು. ಕ್ರಾಂತಿಯ ಕೆಚ್ಚು ಇರುವ ಜನತೆ ಪಠ್ಯವನ್ನು ಸೃಷ್ಟಿಸುವಾಗ ಅದನ್ನು ಅನುಸರಿಸಿ ಕಥೆ ಬದಲುತ್ತದೆ. ಮಾತ್ರವಲ್ಲ ಪುರಾವೃತ್ತದಿಂದ ಗ್ರಾಮೀಣ ಕಥೆಗೆ ಅದು ಪಯಣಿಸುತ್ತದೆ. ಬೇಟೆ ಮತ್ತು ಕಳ್ಳು ಕೆತ್ತುವುದನ್ನು ಜೀವನಮಾರ್ಗವಾಗಿಸ್ವೀಕರಿಸಿದ ಒಂದು ಜನತೆ ಕಾಲದ ಪ್ರವಾಹದಲ್ಲಿ, ಹುಟ್ಟಿಬೆಳೆದ ಊರು ಬಿಟ್ಟು ಮಲೆನಾಡಿಗೆ ಸೇರಿದುದರ ಚರಿತ್ರೆಯ ಆಧಾರ ಈ ಪುರಾವೃತ್ತ. ಮಲನಾಡಿನಲ್ಲಿ ಬೇಟೆಯನ್ನು ಕೈಬಿಟ್ಟು ಕೃಷಿಯ ದುಡಿಮೆಯನ್ನು ಅವಲಂಬಿಸಬೇಕಾಗಿ ಬಂತು. ಆಗಲೂ ಗೋತ್ರಸ್ಮೃತಿಯನ್ನು ಕೈಬಿಡದೆ ನೆಲೆಗೊಳಿಸಿದರು. ಕೃಷಿಯನ್ನು ಪ್ರಧಾನ ಜೀವನಮಾರ್ಗವಾಗಿ ಸ್ವೀಕರಿಸಿದಾಗಲೂ ವರ್ಷಗಳು ಸರಿದಂತೆ ಒಂದು ದಿವಸ ನಷ್ಟಗೊಂಡ ಭೂತಕಾಲವನ್ನು ಪುನಃಸೃಷ್ಟಿ ಮಾಡುತ್ತಾರೆ. ಗುಂಪಾಗಿ ಬೇಟೆಯಾಡಲು ಹೋಗುವುದು, ಗುಂಪಾಗಿ ಮಾಂಸ ಬೇಯಿಸುವುದು, ಗುಂಪಾಗಿ ಅದನ್ನು ತಿನ್ನುವುದು. ಆವಾಗಲೂ ಈ ಸಾಂಘಿಕತೆ ಕಳ್ಳು 'ಕೆತ್ತುಗೆ'ಯನ್ನು ನೆಲೆಗೊಳಿಸಿತು. 'ಏಙ್ಚ್ಛ' (ಶೇಂದಿಯಳಿಕೆ) ತಮ್ಮ ಕುಲವೃತ್ತಿ ಎಂಬುದನ್ನು ಹೊಸತಲೆಮಾರಿಗೆ ಪುರಾವೃತ್ತದ ಮೂಲಕ ತಿಳಿಸಿಕೊಡುತ್ತಲೇ ಬರುತ್ತಾರೆ. 'ಏಙ್ಚ್ಛ' ಉಪಕರಣಗಳ ಅನುಷ್ಠಾನಪರವಾದ ಉಪಸ್ಥಿತಿಯಿಂದ ಸಾಂಘಿಕತೆಯು 'ಏಙ್ಚ್ಛ'ನೊಂದಿಗೆ ಸಂಬಂಧ ಹೊಂದಿದ ಸ್ವತ್ವವನ್ನು ಆವರ್ತಿಸಿ ಗಟ್ಟಿ ಮಾಡಲಾಯಿತು. ಕೃಷಿಕರೆಂಬ ನೆಲೆಯಲ್ಲಿ ಭೂಮಿಯ ಫಲವತ್ತತೆಗಾಗಿ ಹಲವು ಬಗೆಯ ಆಚರಣೆಗಳನ್ನು ಮಾಡುವುದರೊಂದಿಗೆ ಕೃಷಿಯಿಂದ ಬೇಟೆಗೆ ಮಾನಸಿಕವಾದ ಒಂದು ಹಿಂದಿರುಗುವಿಕೆ ಪುರಾವೃತ್ತದ ಮೂಲಕವೂ ಅನುಷ್ಠಾನಗಳ ಮೂಲಕವೂ ನಿರ್ವಹಿಸಲ್ಪಡುತ್ತದೆ. ಆದ್ದರಿಂದಲೇ ಕೇಳನ್ ಕೃಷಿಕೆಲಸದ ಬಲಿದಾನ ಆಗುವುದು ಮತ್ತು ಅವನಿಗೆ ಬಿಲ್ಲಿನಿಂದ ಮರುಹುಟ್ಟು ಬರುವುದು. ಪುರಾವೃತ್ತ ಎಂಬ ನೆಲೆಯಲ್ಲೂ ಅನುಷ್ಠಾನ ಎಂಬ ನೆಲೆಯಲ್ಲೂ 'ಕಂಡನಾರ್ ಕೇಳನ್'ಗೆ ಸ್ವತಂತ್ರ ಅಸ್ತಿತ್ವವಿಲ್ಲ. ವಯನಾಟ್ಟು ಕುಲವನ್ ಸಾನ್ನಿಧ್ಯದಲ್ಲಿ ಒಂದು ಉಪದೇವತೆ ಆಗಿ ಮಾತ್ರ ಕೇಳನ್‌ಗೆ ನೆಲೆ.

ಬೇಟೆಯ ಸಮೂಹ ಕೃಷಿಸಮೂಹವಾಗಿ ಬದಲುವುದರ ಭಾಗವಾಗ ಬುಡಕಟ್ಟು ಜೀವನ ಗ್ರಾಮೀಣ ಜೀವನಕ್ಕೆ ದಾರಿಬಿಟ್ಟು ಕೊಡಬೇಕಾಗಿಬಂತು. ಗ್ರಾಮೀಣ ಜೀವನ ಕುಟುಂಬದಲ್ಲಿ ಅಧಿಷ್ಠಿತವಾದುದು. ಅನೇಕ ವರ್ಷಗಳಿಗೊಮ್ಮೆ ಕುಟುಂಬದ ಸದಸ್ಯರೆಲ್ಲ ಒಟ್ಟು ಸೇರಿಯೆ 'ವಯನಾಟ್ಟು ಕುಲವನ' ತೆಯ್ಯಂ ಆರಾಧನೆ ನಡಯುವುದು. ಹಾಗೆ ಹಿಂದೆ ಎಂದೊ ಕೈಬಿಟ್ಟು ಹೋದ, ಒಟ್ಟು ಸೇರಿ ನಡೆಯುವ ಬುಡಕಟ್ಟು ಜೀವನವನ್ನು ಅನುಷ್ಠಾನದ ಮೂಲಕ ಪುನಃ ಸೃಷ್ಟಿ ಮಾಡುವುದೇ ಈ ಪುರಾವೃತ್ತದ ಮೂಲಕವೂ ಆಚರಣೆ ಮೂಲಕವೂ ಆಗುವಂಥದು.

ವಯನಾಡು ಪ್ರದೇಸದ ಒಬ್ಬ ಪ್ರಬಲ ಜನನಾಯಕನ ಹೊಸ ಪ್ರದೇಶಕ್ಕೆ ಆದ ವಲಸೆಯನ್ನೂ ಈ ಪುರಾವೃತ್ತ ಬಯಲುಪಡಿಸುತ್ತದೆ ಎಂದು ಆಗಲೆ ಸೂಚಿತವಾಯಿತಷ್ಟೆ? ಬೇಟೆಯಿಂದ ಕೃಷಿಗೂ,

ಅಲ್ಲಿಂದ ಆಧುನಿಕ ಜೀವನಕ್ಕೂ ಇಲ್ಲಿನ ಸಮೂಹ ನಡೆಸಲ್ಪಟ್ಟಿದೆ. ಅದರ ನಡುವೆ ಆರ್ಯವಾದ ಸಾಂಸ್ಕೃತಿಕ ಪ್ರಭುತ್ವವನ್ನೂ ಈ ಸಮೂಹ ಎದುರಿಸಿ ನಿಂತಿತು ಎಂಬುದನ್ನೂ ಕಾಣಬಹುದು. ಈ ಬಗೆಯಲ್ಲಿ ಒಂದು ಕೃಷಿಕ ವ್ಯವಸ್ಥೆಯನ್ನು ಎತ್ತಿಹಿಡಿದ ವಯನಾಟ್ಟು ಕುಲವನ ಕ್ಷೇತ್ರದಲ್ಲೆ ಕಯ್ಯಾರ್, ಕರಿವೆಳ್ಳೂರ್, ಮುನಯನ್ ಕುನ್ನ್, ರಾವಣೇಶ್ವರಂ ಮೊದಲದ ಕೃಷಿಕರ ಕ್ರಾಂತಿ ಆಂದೋಲನಗಳು ನಡೆದುದು. ಇದೊಂದು ಆಕಸ್ಮಿಕವಾಗುವ ಸಾಧ್ಯೆತೆ ಇಲ್ಲ. ಮನುಷ್ಯ ವರ್ತಮಾನ ಕಾಲದಲ್ಲಿ ಮಾತ್ರವಲ್ಲ ಬದುಕುವುದು. ಸಹಸ್ರಾಬ್ದಗಳ ಪರಂಪರೆ ಅವನಲ್ಲಿ ಕರಗಿ ಸೇರಿಕೊಳ್ಳುತ್ತದೆ. ಆದ್ದರಿಂದಲೆ ಅಲ್ಲವೇ, ‘ನನ್ನ ವಯಸ್ಸೂ, ಮನುಷ್ಯ ಸಂಸ್ಕೃತಿಯ ವಯಸ್ಸೂ ಒಟ್ಟು ಸೇರಿಯೆ ನನ್ನ ವಯಸ್ಸು’ ಎಂದು ಕುಞ್ಞಣ್ಣಿ ಮಾಸ್ತರ್ ಹೇಳುತ್ತಿದ್ದುದು.

ಪೆರುಂದಚ್ಚನ್
(ಐತಿಹ್ಯ)
ಉಷಾ ನಂಬೂತಿರಿಪ್ಪಾಡ್

ಟಿಪ್ಪಣಿ

ಗದ್ಯ ಕಥಾಖ್ಯಾನದ ಒಂದು ಪ್ರಧಾನ ವಿಭಾಗ ಐತಿಹ್ಯ. ಇತಿಹಾಸದ ಆಂಶಗಳ ಬೆಂಬಲದಿಂದಲೆ ಕಥೆಯೊಂದು ಐತಿಹ್ಯವಾಗಿ ಬದಲುವುದು. ಈ ಇತಿಹಾಸಪರತೆಯೆ ಐತಿಹ್ಯವನ್ನು ಪುರಾವೃತ್ತದಿಂದಲೂ ಗ್ರಾಮೀಣ ಕಥೆಯಿಂದಲೂ ವ್ಯತ್ಯಸ್ಥವನ್ನಾಗಿ ಮಾಡುವುದು. ಅವರಿಂದಲೆ ಸಾಂಘಿಕತೆಗೆ ಇತರ ಗದ್ಯ ಕಥಾಖ್ಯಾನಗಳಿಗೆ ಇರುವುದಕ್ಕಿಂತ ಹೆಚ್ಚು ಭಾವನಾತ್ಮಕವಾಗಿ ಸಾಮೀಪ್ಯ ಐತಿಹ್ಯದೊಂದಿಗೆ ಉಂಟಾಗುತ್ತದೆ. ನಿರಕ್ಷರ ಸಮೂಹವನ್ನು ಸಂಬಂಧಿಸಿಯಾದರೆ ಐತಿಹ್ಯ ಅದರ ಚರಿತ್ರೆಯ ಭಾಗವಾಗಿದೆ.

ಸ್ಥಳ, ಕಾಲ ಬಂಧಿತವಾದ ಯಾವುದರದೂ ಅವಸ್ಥೆಯ ಚರಿತ್ರೆ. ಒಂದು ಕತೆ ಸ್ಥಳದಲ್ಲೂ, ಕಾಲದಲ್ಲೂ ಬಂಧಿಸಲ್ಪಡುವಾಗ ಅದು ಐತಿಹ್ಯವಾಗಿ ಬಿಡುತ್ತದೆ. ಹಾಗಲ್ಲದೆ, ಚರಿತ್ರೆಯನ್ನು ಭಾವನೆಯೊಂದಿಗೆ ಬೆರಸಿದರೆ ಐತಿಹ್ಯವುಂಟಾಗುತ್ತದೆ. ಎಂದೂ ಹೇಳಬಹುದು. ಅದರಿಂದಲೆ ಕಡಮಱ್ಱತ್ತ್ ಕತ್ತನಾರ್ ಅವರ ಕೃತಿಯನ್ನು ನಾವು ಐತಿಹ್ಯವಾಗಿ ಪರಿಗಣಿಸುವುದು. ಕಡಮಱ್ಱತ್ತ್ ಜೀವಿಸಿ ಅಳಿದ ಒಬ್ಬ ವೈದಿಕ ಎಂದು ಕಥೆಯಲ್ಲಿರುವ ಚಾರಿತ್ರಿಕ ಸೂಚನೆಗಳಿಂದ ವ್ಯಕ್ತವಾಗುತ್ತದೆ.

ಯಾವ ಐತಿಹ್ಯದಲ್ಲೂ ಅವರ ಪ್ರಧಾನವಾದ ಮಗ್ಗುಲು ಅದು ಒಳಗೊಂಡಿರುವ ಸಂದೇಶವೆ ಆಗಿರುತ್ತದೆ. ಈ ಸಂದೇಶವನ್ನು ಪಾಲುಮಾಡಿಕೊಳ್ಳುವುದಕ್ಕಿರುವ ಸಾಂಘಿಕತೆಯ ಮಾಧ್ಯಮವೇ ಐತಿಹ್ಯ. ಪುರಾವೃತ್ತವು, ಗ್ರಾಮೀಣಕತೆಗಳೂ ಸಂದೇಶವನ್ನು ಒಳಗೊಂಡಿರುವವಾದರೂ ಐತಿಹ್ಯ ಒಳಗೊಳ್ಳುವ ಸಂದೇಶಕ್ಕೆ ಸಾಂಘಿಕತೆಯ ಮನಸ್ಸಿನಲ್ಲಿ ಆನೆಗೂ ಮಿಗಿಲಾದ ಶಕ್ತಿಯಿರುವ ಬೇರುಗಳನ್ನು ಉಂಟುಮಾಡಲು ಸಾಧ್ಯವಿದೆ. ಸಾಂಘಿಕತೆಗೆ ಪುರಾವೃತ್ತದ ಜತೆ ಭಾವನಾತ್ಮಕ ಸಂಬಂಭ ಮಾತ್ರವಿದೆ. ಅದಕ್ಕಿರುವ ಸ್ಥಳಕಾಲ ಸಂಬಂಧವೆಂಬುದು ಪುರಾವೃತ್ತ ಸಂಬಂಧವಾದ ಸ್ಥಳಕಾಲ ಸಂಬಂಧವಾಗಿದೆ; ಯಥಾರ್ಥ ಚರಿತ್ರ ಸಂಬಂಧವಲ್ಲ. ಗ್ರಾಮೀಣ ಕಥೆಗಾದರೆ ಚರಿತ್ರೆ ಸಂಬಂಧವೇ ಇಲ್ಲ.

ಮನುಷ್ಯ ವಾಸ್ತವದಲ್ಲಿ ಮಾತ್ರ ಬದುಕುವುದಲ್ಲ. ಅವನು ಸುದೂರವಾದ ಚರಿತ್ರೆಯನ್ನೂ ವರ್ತಮಾನಕಾಲಕ್ಕೆ ಪ್ರವಹಿಸುವಂತೆ ಮಾಡುತ್ತಾನೆ. ಹಾಗೆ ಚರಿತ್ರೆಯೂ ಭಾವನೆಯೂ ಪರಸ್ಪರ ಬೆರೆತ ಒಂದು ವರ್ತಮಾನವನ್ನೂ ಆತ ಸೃಷ್ಟಿಸುತ್ತಾನೆ. ಈ ಬಗೆಯ ಪರಂಪರಾಪ್ರಜ್ಞೆಯನ್ನು ಎಲ್ಲ ಸಾಂಘಿಕತೆಗಳೂ ಕಾಪಿಟ್ಟಕೊಳ್ಳುವುದಿದೆ. ಐತಿಹ್ಯದ ಮೂಲಕ ಸಿಗುವ ಚರಿತ್ರೆಯ ಅರಿವು ವರ್ತಮಾನ ಕಾಲದ ಹಲವು ತರ್ಕ ರಹಿತತೆಗಳನ್ನೂ ಮೌಲ್ಯಮಾಪನಕ್ಕೊಳಪಡಿಸುತ್ತದೆ. ಹಾಗೂ ಬದುಕನ್ನು ಒಂದು ನಿರಂತರ ಪರಿವರ್ತನೆಗೆ ಒಳಪಡಿಸುತ್ತದೆ.

ಯಾವುದಾದರೂ ವಸ್ತುವಿನ, ವಸ್ತುಸ್ಥಿತಿಗಳ ಉದ್ಭವವನ್ನು ಪ್ರತಿಪಾದಿಸುವ 'ಉತ್ಪತ್ತಿ ಐತಿಹ್ಯಗಳ', ನಡೆದ ಘಟನೆಗಳನ್ನು ಭಾವನಾಪೂರ್ಣವಾ ಪ್ರತಿಪಾದಿಸುವ 'ಚರಿತ್ರೈತಿಹ್ಯಗಳು', ಅಲೌಕಿಕವೊ, ದೈವಿಕವೊ ಆದ ವಿಷಯಗಳನ್ನು ಪ್ರತಿಪಾದಿಸುವ 'ದಿವ್ಯೈತಿಹ್ಯಗಳು', ಮತಪ್ರಜ್ಞೆಯನ್ನೊ, ವರ್ಗಪ್ರಜ್ಞೆಯನ್ನೊ ಬೆಂಬಲಿಸುವ 'ಮತೀಯ ಐತಿಹ್ಯ'ಗಳು ಎಂದು ಹೀಗೆ ಹಲವು ಸ್ವಭಾವಗಳಲ್ಲಿರುವ ಐತಿಹ್ಯಗಳು ಉಂಟಾಗಬಲ್ಲವು. 'ಪೆರುಂದಚ್ಚನ್' 'ದಿವ್ಯೈತಿಹ್ಯ' ವಿಭಾಗಕ್ಕೆ ಸೇರುತ್ತದೆ. ಕಾರಣ, 'ಪಱಯಿ' ಹೆತ್ತ 'ಪಂದಿರು' (ಹನ್ನೆರಡು) ಕುಲದ ಕಥೆಯೆ ಪುರಾವೃತ್ತ ಸಂಬಂಧಿಯಾಗಿದೆ.

– **ಸಂಪಾ**

ದಕ

ಪಱಯಿ ಹೆತ್ತ ಹನ್ನೆರಡು ಕುಲ

(ಪಱಯಿ ಪೆಱ್ಱ ಪಂದಿರು ಕುಲಂ)

ವಿಧಿ ಸಂಕಲ್ಪದಲ್ಲಿ, ಬ್ರಾಹ್ಮಣ ಕನ್ಯೆಯೆಂದು ಬಗೆದು, ವರರುಚಿ ಎಂಬ ಬ್ರಾಹ್ಮಣ ಪಂಡಿತ ಒಬ್ಬ ಪಱಯಿ (ಅಸ್ಪೃಶ್ಯೆ)ಯನ್ನು ವಿವಾಹವಾದ. ವಿವಾಹವಾದ. ವಿವಾಹದ ತನ್ನ ವಿಧಿಯ ಬಗೆಗೆ ಅರಿತುಕೊಂಡ ವರರುಚಿ ಪತ್ನೀ ಸಮೇತ ದೇಶಪರ್ಯಟನಕ್ಕೆ ಹೊರಟ. ಹೀಗೆ ಹಲವು ಸ್ಥಳಗಳಲ್ಲಿ ಸಂಚರಿಸುತ್ತಿರುವಂತೆ ಅವನ ಪತ್ನಿ ಗರ್ಭಿಣಿಯಾದಳು. ಆಕೇಗೆ ಹೆರಿಗೆ ಬೇನೆ ಕಾಣಿಸಿಕೊಂಡಾಗ ವರರುಚಿ ಆಕೆಗೆ ಕಾಡಿನ ಒಳಗೆ ಸೇರಿಕೊಂಡು ಹೆತ್ತುಕೊಳ್ಳಲು ಹೇಳಿದ. ಹಾಗೆ ಅವಳು ಹನ್ನೆರಡು ಮಕ್ಕಳನ್ನು ಹೆತ್ತಳು. ಪ್ರತಿ ಬಾರಿ ಹೆರಿಗೆ ಆದೊಡನೆ, ಮಗುವಿಗೆ ಬಾಯಿ ಉಂಟೋ' ಎಂದು ಆತ ಕೆಳುವ. 'ಉಂಟು' ಎಂದು ಪತ್ನಿ ಉತ್ತರಿಸಿದೊಡನೆ, 'ಬಾಯಿ ಇರುವ ಮಗುವಿಗೆ ದೇವರ ಆಹಾರ ಕೊಡುವ' ಎಂದು ಹೇಳಿ ಮಗುವನ್ನು ಅಲ್ಲೆ ಬಿಟ್ಟು ಬರಲು ಹೇಳುತ್ತಾನೆ. ಆ ಆಜ್ಞೆನಡೆಯುವುದು ಪದ್ಧತಿಯಾಗಿತ್ತು. ಕೊನೆಗೆ ಹನ್ನೆರಡನೆ ಬಾರಿ ಹೆತ್ತಾಗ, 'ಮಗುವಿಗೆ ಬಾಯಿ ಉಂಟೋ' ಎಂದು ಕೇಳಿದೊಡನೆ, ಆಕೆ ಒಂದು ಮಗುವನ್ನಾದರೂ ತನ್ನ ತಾಯ್ತನಕ್ಕೆ ಪಡೆದುಕೊಳ್ಳಲೆಂದು, 'ಇಲ್ಲ' ಎಂಬ ಸುಳ್ಳು ಉತ್ತರ ಕೊಟ್ಟಳು. ಮಗುವನ್ನು ತನ್ನೊಂದಿಗೆ ತರಲು ವರರುಚಿ ಒಪ್ಪಿಗೆ ಕೊಟ್ಟ. ಮಗುವಿಗೆ ಕೊನೆಗೆ ಬಾಯಿ ಇಲ್ಲವಾಗಿ ಹೋಯಿತೆಂದು ಕಥೆ. ಆ ಮಗುವೆ 'ವಾಯಿಲ್ಲಾಕುನ್ನಿಲಪ್ಪನ್' (ಬಾಯಿ ಇಲ್ಲದ ಬೆಟ್ಟದ ಅಪ್ಪ) ಆದುದು. ಇವರ ಮಕ್ಕಳು ಹನ್ನೆರಡು ವಿಭಿನ್ನ ಕುಲದವರಾಗಿದ್ದರು. ಅವರ ಕುರಿತಾಗಿ ಪ್ರಸಿದ್ಧ ಶ್ಲೋಕವೊಂದಿದೆ–

ಮೇಟ(ಳ)ತ್ತೋಳಗ್ನಿಹೋತ್ರೀ ರಜಕನುಳಿಯನ್ನೂರ್
ತ್ತಚ್ಚನುಂ ಪಿನ್ನೆ ವೆಳ್ಳೋನ್
ವಾಯಿಲ್ಲಾಕುನ್ನಿಲಪ್ಪನ್ ವಟುತಲ ಮರುವುಂ
ನಾಯರ್ ಕಾರಯ್ಕಲ್ ಮಾತಾ
ಚೆಮ್ಮೇ ಕೇಳುಪ್ಪ ಕುಱ್ಱನ್ ಪೆರಿಯತಿರುವರಂ
ಗತ್ತೆಮಿಂ ಪಾಣನಾರುಂ
ನೇರೇ ನಾರಾಯಣಭ್ರಾಂತನು ಮುಡನಕವೂರ್
ಚಾತ್ತನುಂ ಪಾಕ್ಕನಾರುಂ

ವಿಭಿನ್ನ ಕುಲಗಳಿಗೆ ಸೇರಿ ಇವರು ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುತ್ತಿದ್ದರು. ದಿವ್ಯನಾದ ವರರುಚಿಯ ಈ ಮಕ್ಕಳಲ್ಲಿ ಒಬ್ಬೊಬ್ಬರಿಗೂ ವಿವಿಧ ರೀತಿಯ ಅಲೌಕಿಕತೆ ಇತ್ತು.

ಪೆರುಂದಚ್ಚನ್

ತಚ್ಚನ್ (ತಕ್ಷನ್)ಗಳಲ್ಲಿ ದೊಡ್ಡ ತಚ್ಚನ್ ಆಗಿದ್ದ ಪೆರುಂದಚ್ಚನ್. ಉಳಿಯನ್ನೆತ್ತಿದರೆ ಯಾವುದನ್ನೂ ರೂಪಕಲ್ಪಿಸಿ ಸೃಷ್ಟಿಸಲು ಯೋಗ್ಯತೆಯಿರುವ ಮಾಂತ್ರಿಕ ಶಿಲ್ಪ ಪ್ರತಿಭೆ. ತನ್ನ ತಪ್ಪದಿರುವ ಲೆಕ್ಕಾಚಾರದ ಬಗೆಗೆ ತಲೆಯೆತ್ತಿ ನಡೆಯುವ ಅಹಂಕಾರಿ. ಯೋಗ್ಯತೆಯಲ್ಲಿ ತನ್ನನ್ನು ಮೀರಿಸುವವ ಯಾರಾದರೂ, ಅದು ತನ್ನ ಸ್ವಂತ ಮಗನೇ ಆದರೂ, ಅವನನ್ನು ನಾಶಮಾಡುವ, ಒಂದು ಬಗೆ 'ಮೆಗಲೋ ಮಾನಿಯಾಕ್'. ಹೀಗೆ ವಿವಿಧ ಚಿತ್ರಗಳೇ ಪೆರುಂದಚ್ಚನ ಬಗೆಗಿನ ಕಥೆಗಳಿಂದ ನಮಗೆ ದೊರೆಯುವುದು. ಯಥಾರ್ಥತೆಯನ್ನು, ಲೋಕತತ್ವಗಳನ್ನು ಐತಿಹ್ಯದ ಆವರಣದೊಂದಿಗೆ ಜನಸಾಮಾನ್ಯರಿಗೆ ತಲಪಿಸುವುದು ಎಂಬುದೇ ಈ ಬಗೆ ಕಥೆಗಳ ಉದ್ದೇಶ.

ಪೆರುಂದಚ್ಚನಲ್ಲಿ ಕಲೆಯೂ ಲೆಕ್ಕವೂ ಸಮ್ಮಿಳಿತವಾಗಿದ್ದವು ಎಂಬುದಕ್ಕೆ ನಿದರ್ಶನ ಆತ ನಿರ್ಮಿಸಿದ ದೇಗುಲದ ಕೊಳ. ಕೊಳವನ್ನು ತೋಡಿ ಅಂಚುಗಳನ್ನು ಕಟ್ಟಲು ಕಲ್ಲು ಕೆತ್ತ ತೊಡಗಿದಾಗ ಕೊಳದ ಆಕೃತಿ ಬಗೆಗೆ ಊರ ಗಣ್ಯರಿಗೆ ವಿಭಿನ್ನ ಆಲೋಚನೆಗಳು ಬಂದಿದ್ದವು. ಕೆಲವರು ಅಂದರು ಅದು ಚೌಕಾಕೃತಿಯದು ಎಂದು. ಇನ್ನು ಕೆಲವರಿಗೆ ಅದು ತ್ರಿಕೋಣವಾದರೆ ಸಾಕು. ಕೆಲವರಿಗೆ ವೃತ್ತಾಕೃತಿಯಾದರೆ ಸೊಗಸು. ಎಲ್ಲರೂ ತಮ್ಮೊಳಗೆ ತರ್ಕಿಸತೊಡಗಿದರು. ಕೊನೆಯಲ್ಲಿ ಪೆರುಂದಚ್ಚನ್ ಹೇಳಿದ, "ನಿಮ್ಮ ಒಬ್ಬೊಬ್ಬರದೂ ಇಷ್ಟಪ್ರಕಾರ ಕೊಳ ಉದ್ದಕ್ಕೂ, ಚೌಕವಾಗಿಯೂ, ತ್ರಿಕೋಣವಾಗಿಯೂ, ಉರುಟಾಗಿಯೂ ಇರುತ್ತದೆ. ಪೆರುಂದಚ್ಚನ್ ಕಟ್ಟಿದ ಆ ಕೊಳ ಒಂದೊಂದು ಕಡೆಯಿಂದ ನೋಡುವಾಗ ಒಂದೊಂದು ಆಕೃತಿಯಲ್ಲಿರುವುದಾಗಿ ಕಾಣುತ್ತಿತ್ತು.

ಈ ಕೊಳವನ್ನು ನೋಡಿದ ಪೆರುಂದಚ್ಚನ ಮಗ, 'ಯಾರಾದರೂ ಹೊಳೆ ದಾಟಿ ಈ ಕೊಳಕ್ಕೆ ಹೋಗುವುದುಂಟೇ?' ಎಂದು ಕೇಳೀದ. ದೂರದಲ್ಲಿ ಹರಿಯುತ್ತಿದ್ದ ನದಿಗೂ ಈ ಕೊಳಕ್ಕೂ ಏನೂ ಸಂಬಂಧವಿರಲಿಲ್ಲ. ಆದ್ದರಿಂದ ಮಗ ಹೆಡ್ಡು ಮಾತನ್ನಾಡುತ್ತಿದ್ದಾನೆಂದು ಪೆರುಂದಚನ್ ಬಗೆದನಷ್ಟೆ. ಆದರೆ ಸ್ವಲ್ಪ ಕಾಲ ಕಳೆದಾಗ ದೂರದಲ್ಲಿ ಹರಿಯುತ್ತಿದ್ದ ಹೊಳೆ ನುಗ್ಗಿ ಸೀಳಿ ಬಂದು ದೇವಾಲಯದ ಮತ್ತು ಕೊಳದ ನಡುವಿನಿಂದ ಹರಿಯತೊಡಗಿತು. ಹೊಳೆಯನ್ನು ದಾಟಿ ಯಾರೂ ಕೊಳಕ್ಕೆ ಮೀಯಲು ಹೋಗಲೂ ಇಲ್ಲ.

ಹೊಳೆಯ ಮೇಲೆ ಪೆರುಂದಚ್ಚನ್ ಒಮ್ಮೆ ಸೇತುವೆಯೊಂದನ್ನು ನಿರ್ಮಿಸಿದ. ಸೇತುವೆಯ ಅಂಚಿನಲ್ಲಿ ಒಂದು ಬೊಂಬೆಯನ್ನು ಇರಿಸಿದ. ಯಾರಾದರೂ ಸೇತುವೆಯ ಇನ್ನೊಂದು ಅಂಚಿನಲ್ಲಿ ಪ್ರವೇಶಿಸಿ ನಡೆಯುತ್ತ ಅರ್ಧಾಂಶಕ್ಕೆ ಬಂದಾಗ ಬೊಂಬೆ ಮೆಲ್ಲಗೆ ನೀರಿಗಿಳಿದು ಮುಳುಗುತ್ತದೆ. ಸೇತುವೆ ದಾಡುವವನ್ನು ಈ ಕಡೆ ಬರುತ್ತಿರುವಂತೆ ಬಾಯಲ್ಲಿ ನೀರು ತುಂಬಿಕೊಂಡು ಬೊಂಬೆ ತನ್ನ ಮೂಲಸ್ಥಿತಿಗೆ ಬಂದು ತಲುಪುತ್ತದೆ. ನಡೆಯುವ ವ್ಯಕ್ತಿ ಹತ್ತಿರವಾದಂತೆ ಬೊಂಬೆ ಒಮ್ಮೆಲೆ ಆತನ ಮುಖಕ್ಕೆ ನೀರನ್ನು ಉಗುಳುತ್ತದೆ. ಇದನ್ನು ನೋಡಿದ ಪೆರುಂದಚ್ಚನ್‌ನ ಮಗ ಇನ್ನೊಂದು ಪಾಪೆಯನ್ನು ನಿರ್ಮಿಸಿ ಬಳಿಯಲ್ಲಿ ಇರಿಸಿದ. ಅದೆಂಥದೆಂದರೆ, ಬೊಂಬೆ ನೀರು ಬಾಯಿಯಲ್ಲಿ ತುಂಬಿ ಉಗುಳಲು ತಯಾರಾಗುವ ವೇಳೆಗೆ ಅದರ ಕೆನ್ನೆಗೆ ಒಂದೇಟು ಬಿಗಿಯುತ್ತದೆ. ಮಾತ್ರವಲ್ಲ ಉಗುಳುವ ಮುಖ

ತಿರುಗಿಬಿಡುತ್ತದೆ. ಇದರಿಂದ ಸೇತುವೆ ದಾಟುವವರಿಗೆ ಪೆರುಂದಚ್ಚನ್‌ನ ಪಾಪೆಯ ಉಗುಳು ತಾಗಿಸಿಕೊಳ್ಳುವ ಸ್ಥಿತಿ ತಪ್ಪಿತು.

ಮಗನ ಈ ಅಸಾಮಾನ್ಯವಾದ ಬುದ್ಧಿಶಕ್ತಿ ಹಾಗೂ ಮುಂಗಾಣ್ಕೆಯ ನುಡಿಯನ್ನು ಕಂಡು ಪೆರುಂದಚ್ಚನಿಗೆ ಕಸಿವಿಸಿಯಾಯಿತು. ತನ್ನನ್ನು ಹಿಂದೆ ಹಾಕಲು ಈತ ಸಮರ್ಥನೆಂದು ಪೆರುಂದಚ್ಚನಿಗೆ ತೋರಿತು. ಅದನ್ನು ಸಹಿಸುವುದೆಂದರೆ ಈ ಕಲಾಕಾರನ ಮಟ್ಟಿಗೆ ಯಾತನೆಯೆ ಆಗಿತ್ತು.

ಒಮ್ಮೆ ಒಂದು ಕಡೆ ಕೆಲ ಬಡಗಿಗಳು ದೇವಾಲಯವೊಂದರ ಕೆಲಸದಲ್ಲಿದ್ದರು. ಪೆರುಂದಚ್ಚನ್ ಅಲ್ಲಿಗೆ ತಲಪಿದ. ಕೆಲಸ ನೋಡುತ್ತ ನಿಂತ. ಬಡಗಿಗಳು ಪೆರುಂದಚ್ಚನನ್ನು ಗಮನಿಸಲಿಲ್ಲ. ಪೆರುಂದಚ್ಚನನ್ನು ಕರೆಯದೆ ಅವರು ಊಟಕ್ಕೆ ಹೋಗಿಯೂಬಿಟ್ಟರು. ತನ್ನನ್ನು ಉದ್ದೇಶಪೂರ್ವಕ ಅವಗಣಿಸಿದ ಬಡಗಿಗಳಿಗೆ ಒಂದು ಪಾಠ ಕಲಿಸುತ್ತೇನೆ ಎಂದು ನಿಶ್ಚಯಿಸಿದ. ಗರ್ಭಗುಡಿಯ ಪಕ್ಕಾಸಿಗೆ (ತೀರಿಗೆ) ತುದಿಯಲ್ಲಿ ಒಂದೊಂದು ಹೆಚ್ಚುವರಿ ಬರೆ ಗೀರಿ ಆತ ಅಲ್ಲಿಂದ ಹೊರಟುಹೋದ ಊಟ ತೀರಿಸಿ ಬಂದ ಬಡಗಿಗಳು ಪೆರುಂದಚ್ಚನ್ ಬರೆದ ಗೆರೆಯನ್ನು 'ಕಣಕ್ಕಾಶಾರಿ' (ಲೆಕ್ಕ ಬಲ್ಲ ಬಡಗಿ) ಗಳು ಗೀರಿದುದೆಂದು ಎಣಿಸಿ ಅದರ ಅನುಸಾರ ಪಕ್ಕಾಸಿನ ಕೆಲಸ ಮುಂದುವರಿಸಿದರು. ಕೆಲಸ ಮುಗಿದಾಗ ಪಕ್ಕಾಸಿನ ಉದ್ದ ಕಡಿಮೆಯಾಯಿತು. ಅದರಿಂದ ಪಕ್ಕಾಸುಗಳು 'ಕೂಟ'ಕ್ಕೆ ಕಚ್ಚಿಹಿಡಿಯಲಾರದಾದವು. ಈ ಸಮಸ್ಯೆಗೆ ಪರಿಹಾರ ಹೇಗೆಂದು ಯಾರಿಗೂ ತಿಳೀಯದಾಯಿತು. ಆದರ ಪೆರುಂದಚ್ಚನ್ ಇದನ್ನು ಮೊದಲೆ ಎಣಿಸಿ ಹಲವು 'ಕಡುತುಟಿ' (ಕೀಲು ತುಂಡು) ಗಳನ್ನು ಕತ್ತಿ ತಯಾರಿಸಿದ್ದ. ಬಡಗಿಗಳು ಉಟಕ್ಕೆ ಹೋದ ವೇಳೆಯಲ್ಲಿ ಪೆರುಂದಚ್ಚನ್ ಗರ್ಭಗುಡಿಯ ಮಾಡನ್ನು ಏರಿ ಕಡುತುಟಿಗಳನ್ನು ಕೂಡಿಸಿಟ್ಟು ಒಂದು ಏಟು ನೀಡಿದ. ಪಕ್ಕಾಸುಗಳು ಕೂಟಕ್ಕೆ ಕಚ್ಚಿಹಿಡಿದವು ಕೂಡ. ಒಂದಿಗಿದ್ದ ಮಗನಿಗೆ ಈ ಅದ್ಭುತ ವಿದ್ಯೆಯನ್ನು ತೋರಿಕೊಟ್ಟ. ಆಗ ಮಗ ತಾನು ಅದನ್ನು ಕಂಡದ್ದು ಮಾತ್ರವಲ್ಲ ಕಲಿತೂ ಆಯಿತು ಎಂದ. ಪಕ್ಕಾಸುಗಳು ಕೂಟ ಹಿಡಿದು ಕೊಂಡುದಕ್ಕೆ ಬೆರಗಾದ ಬಡಗಿಗಳು ಪೆರುಂದಚನನ್ನು ಮನಗನ್ನೂ ಗೌರವಿಸಿದರು. ತಮ್ಮೊಂದಿಗೆ ಕೆಲಸದಲ್ಲಿ ಸೇರಿಕೊಳ್ಳಲೂ ಹೇಳಿದರು. ಒಂದು ದಿವಸ ದೇಗುಲದ ಮಾಡಿನ ಮೇಲೆ ಕೆಲಸ ಮಾಡುತ್ತಿದ್ದ ಪೆರುಂದಚ್ಚನ್ ಕೈತಪ್ಪೆಂಬ ಹಾಗೆ ಉಳಿಯನ್ನು ಕೆಳಗಡೆ ಬಗ್ಗಿ ಕೆಲಸ ಮಾಡುತ್ತಿದ್ದ ತನ್ನ ಮಗನ ಮೆಲಕ್ಕೆ ಬಿಟ್ಟುಬಿಟ್ಟ. ಕತ್ತು ತುಂಡಾಗಿ ಮಗನ ಮರಣವೂ ಆಯಿತು.

ವಾಗ್ವಿಲಾಸದಲ್ಲೂ ಪೆರುಂದಚ್ಚನ್ ಕಡಿಮೆಯವನಾಗಿರಲಿಲ್ಲ ಎಂಬುದಕ್ಕೂ ಒಂದು ಕತೆಯಿದೆ. ಒಂದು ದಿನ ಪೆರುಂದಚ್ಚನ್ ಬೆಳಗ್ಗೆ ಎದ್ದು ಸಹೋದರ ಅಗ್ನಿಗೋತ್ರಿಯನ್ನು ಕಾಣಲು ಹೋದ. ಪದ್ದತಿಯಂತೆ 'ಇಲ್ಲಂ' (ಮನೆ)ನ ಹೊರಗೆ ನಿಂತ. ಸಹಸ್ರನಾಮ ಪಠನವೂ ಅನೇಕ ದೇವತೆಗಳಿಗೆ ಅನೇಕ ಪೂಜೆಗಳನ್ನು ನೆರವೇರಿಸಿ ಅಗ್ನಿಹೋತ್ರಿ ಹೊರಬಂದಾಗ ಮಧ್ಯಾಹ್ನ ಆಗಿತ್ತು. ಆಗ, 'ಇಷ್ಟೂ ಹೊತ್ತು ಅಂಗಳದಲ್ಲಿ ಅನೇಕ ಹೊಂಡತೋಡಿದೆನೆಂದೂ ಒಂದರಲ್ಲೂ ನೀರು ಸಿಗಲಿಲ್ಲವೆಂದೂ, ಒಂದೇ ಕಡೆ ಅಷ್ಟೂ ಹೊತ್ತು ತೋಡಿದುದಾಗಿದ್ದರೆ ನೀರು ಸಿಗುತ್ತಿತ್ತು 'ಎಂದ ಪೆರುಂದಚ್ಚನ್. ಹಲವು ದೇವತೆಗಳನ್ನು ಪೂಜಿಸುವುದಕ್ಕಿಂತ ಒಂದೇ ದೇವರನ್ನು ಪೂಜಿಸಿದರೆ ಫಲಪ್ರಾಪ್ತಿಯೆಂದು ಆತ ಹೇಳಿದುದರ ಅರ್ಥ.

ಹಲವು ಹೊಂಡಗಳನ್ನು ತೋಡಿದರೆ ಅವುಗಳ ಅಡಿಯಲ್ಲಿ ಇರುವ ನೀರ ಸೆಲೆಗೆ ಪರಸ್ಪರ ಸಂಬಂಧ ಏರ್ಪಡುತ್ತದೆಂದೂ ವಿವಿಧ ದೇವತೆಗಳ ಸೇವೆ ಮಾಡುವುದರಿಂದ ಆತ ಕೊನೆಗೆ ಏಕೈಕ ಶಕ್ತಿಯನ್ನೆ ಆರಾಧಿಸುವುದೆಂದೂ ಅಗ್ನಿಹೋತ್ರಿ ಉತ್ತರವಿತ್ತ. ಅಗ್ನಿಹೋತ್ರಿ ಹೇಳಿದುದು ಸರಿಯೆಂದು ಪೆರುಂದಚ್ಚನ್ ಒಪ್ಪಿದ ಕೂಡ.

ಪೆರುಂದಚ್ಚನ ಶಿಲ್ಪಚಾತುರ್ಯದ ನಿದರ್ಶನ ಆತ ತನ್ನ ಊರಿನಲ್ಲಿ ನಿರ್ಮಿಸಿದ ದೇಗುಲ. ಸೋಪಾನದಿಂದ ಗರ್ಭಗುಡಿಗೆ ಏರುವಾಗ ತಲೆ ಮೇಲಿನ ದಾರಬಂಧಕ್ಕೆ ತಗಲುತ್ತದೆಂದು ಅನಿಸುತ್ತದೆ. ಆದರೆ ನೇರವಾಗಿ ಯಾವ ಪರಿವೆಯೂ ಇಲ್ಲದೆ ಏರಿ ಇಳಿದರೆ ತಲೆ ಮುಟ್ಟುವುದಿಲ್ಲ. ತಲೆ ಮುಟ್ಟುತ್ತದೆಂದು ಎಣಿಸಿ ಬಗ್ಗಿ ನಡೆದಿರಾ? ತಲೆ ತಾಗಿತೆಂದೇ ಅರ್ಥ.

ಮೌಖಿಕವಾಗಿ ಕೇಳಿಯೂ ಬರೆಹದ ಮೂಲಕ ಓದಿಯೂ ತಿಳಿದ ಪೆರುಂದಚ್ಚನ ಕಥೆಗಳು ಇವು. ಪೆರುಂದಚ್ಚನ ಕಥೆಯಲ್ಲಿ ಗಮನ ಸೆಳೆಯುವ ಅಂಶ ಆತನ ಶಿಲ್ಪ ಚಾತುರ್ಯವೊ, ಪ್ರತಿಭೆಯೊ ಅಲ್ಲ. ಆತ ಮತ್ತು ಆತನ ಮಗನ ನಡುವಣ ಸಂಬಂಧದ ಬಗೆಗೇ ಪೆರುಂದಚ್ಚನ್ ಕತೆ ಬೆಟ್ಟುಮಾಡುವುದು. ಪೆರುಂದಚ್ಚನ್ ಮಗನನ್ನು ಕೊಂದದ್ದಲ್ಲವೆಂದೂ, ಅರಿಯದೆ ಆಕಸ್ಮಿಕವಾಗಿ ಉಳಿ ಕೆಳಕ್ಕೆ ಬಿದ್ದು ಹೋದುದೆಂದೂ ಪಾಠಾಂತರವಿದೆ.

ವ್ಯಾಖ್ಯಾನ

ಸಂಕೀರ್ಣವಾದ ಈ ಪಿತೃ–ಪುತ್ರ ಸಂಬಂಧದ ಒಳಕೋಣೆಗಳಿಗೆ ಹೋಗುವಾಗ ಪ್ರಾಯ್ಡನ ಸಿದ್ಧಾಂತದ ಪ್ರಸ್ತುತತೆ ಅನುಭವಕ್ಕೆ ಬರುತ್ತದೆ. ಪೂರ್ಣವಾಗಿ ಇದು ಈಡಿಪಸ್‌ನ ಕಥೆಯಂತಿದೆ ಎಂದು ಹೇಳಲು ಬಾರದಾದರೂ ಕಥೆಯ ಉದ್ದಕ್ಕೂ, ತಂದೆಗೂ ಮಗನಿಗೂ ಇರುವ ವೈಮನಸ್ಯ ತೋರಿಬರುತ್ತದೆ. 'ಈಡಿಪಲ್ ಸಿದ್ಧಾಂತ' ಪ್ರಕಾರ ಅಪ್ಪನಿಗೆ ಮಗಳೊಂದಿಗೂ ಅಮ್ಮನಿಗೆ ಮಗನೊಂದಿಗೂ ಹೆಚ್ಚು ನಿಕಟತೆ ಇರುತ್ತದೆ. ಒಂದೊಮ್ಮೆ ಪೆರುಂದಚ್ಚನ್ ಮಗನ್ನನ್ನು ಉದ್ದೇಶಪೂರ್ವಕ ಕೊಂದದ್ದಲ್ಲ ಎಂಬ ಪಾಠಾಂತರವನ್ನು ಒಪ್ಪಿದರೂ ಅದು ಪೆರುಂದಚ್ಚನ ಉದ್ದೇಶ ಶುದ್ಧಿಯನ್ನು ಸಾಬೀತುಪಡಿಸಲು ಶಕ್ತವಾಗಿಲ್ಲ.

ಪೆರುಂದಚ್ಚನ ಕತೆಯಲ್ಲಿ, ತಿಳಿದ ಮಟ್ಟಿಗೆ, ತಾಯಿ ಎಂಬ ಕಥಾಪಾತ್ರಕ್ಕೆ ದೊಡ್ಡ ಪ್ರಸಕ್ತಿ ಇಲ್ಲವಾದರೂ, ವೃತ್ತಿಯಲ್ಲಿ ತನ್ನನ್ನು ಮೀರಿಸುವ ಮಗ ಪೆರುಂದಚ್ಚನಿಗೆ ಇಷ್ಟವಾಗಿರಲಿಲ್ಲ. ಮಗನ ಸ್ಥಾನದಲ್ಲಿ ಮಗಳಾಗಿರುತ್ತಿದ್ದಾರೆ ಒಂದು ಪಕ್ಷದಲ್ಲಿ ಅವಳ ಇಷ್ಟೊಂದು ಅಪ್ರಿಯತೆ ಉಂಟಾಗಲು ದಾರಿಯಲ್ಲ ಎಂದು ತೋರುತ್ತದೆ. ತಾನೇ ಸಾಕಿ ಬೆಳೆಸಿದ ಮಗ, ತನ್ನ ಸ್ವಂತ ಅಸ್ತಿತ್ವಕ್ಕೆ ಬೆದರಿಕೆಯಾಗುವವಷ್ಟರ ಮಟ್ಟಿಗೆ ಗೆಳೆದಾಗ, ಒಬ್ಬ ತಂದೆ ಹಿಡಿಯುವುದು ಈ ದಾರಿಯನ್ನೇ ಎಂಬುದೂ ನಿರ್ಣಯವಲ್ಲ. ಆದರೆ ಮಗನಿಗೆ ತಂದೆಯನ್ನು ನಾಶ ಪಡಿಸಬೇಕೆಂಬ ಇಚ್ಛೆ ಇರಲಿಲ್ಲ ಎಂದು

ತಿಳಿಯಬೇಕಷ್ಟೆ. ಭಾರತೀಯ ನೆಲೆಗಟ್ಟಿನಲ್ಲಿ, ತಂದೆ ಮಗನಿಗಿಂತ ಹೆಚ್ಚು ಶಕ್ತಿಶಾಲಿಯಾಗಿರುವುದು ಬಹಳ ಸಾಮಾನ್ಯ ಎಂದು ಎ.ಕೆ.ರಾಮಾನುಜನ್ ಹೇಳುತ್ತಾರೆ. ರಾಮಾನುಜನ್ ಎತ್ತಿ ಹೇಳುವ 'ಈಡಿಪಲ್ ತ್ರಿಕೋಣ'ದ (Oedipal tyiangle) ಬಗೆಗೆ, ತಂದೆ–ತಾಯಿ–ಮಗ ಎಂಬ ತ್ರಿಕೋಣ, ಇಲ್ಲಿ ಪರಾಮರ್ಶೆಗೆ ಬರುವುದಿಲ್ಲವಾದರೂ ಭಾರತೀಯ ಕಥೆಗಳಲ್ಲಿ ತಂದೆ ಮಗನನ್ನು ಆಕ್ರಮಿಸುವುದು ಸರ್ವಸಾಮಾನ್ಯ ಎಂಬುದು ರಾಮಾನುಜನ್ ಅವರ ನಿರ್ಣಯ. ಪಿತೃಸಮಾನ ವ್ಯಕ್ತಿಯ ಶಕ್ತಿಯನ್ನು ಒಮ್ಮೆಯೂ ಯಾರೂ ಕೆಳಗಾಗಿ ಕಾಣರು. ಇಲ್ಲಿ ಸಂಭವಿಸುವುದೂ ಇದೇ. ಯೌವನವು ವಾರ್ಧಕ್ಯವನ್ನಲ್ಲ, ವಾರ್ಧಕ್ಯ ಯೌವನವನ್ನು ಅಡಿಯಾಳನನಾಗಿ ಮಾಡುತ್ತದೆ. ಯೌವನ ಅದಕ್ಕಾಗಿ ಸಾಯಿಸಲ್ಪಡುವುದು ಕೂಡ ಇದೆ.

ಇನ್ನೊಂದು ವಿಚಾರನ್ನೂ ಇಲ್ಲಿ ವ್ಯಕ್ತಗೊಳಿಸಬೇಕಾಗಿದೆ. ಪೆರುಂದಚ್ಚನ್ ಕಥೆಗಳಲ್ಲಿ ಪಾಪೆಯ ಕಥೆಯೆ ಹೆಚ್ಚು ಪ್ರಸಿದ್ಧವಷ್ಟೆ? ಪೆರುಂದಚ್ಚನ್ ನಿರ್ಮಿಸಿದ ಪಾಪೆ ಇತರರ ಮೇಲೆ ಉಗುಳುವಂಥದಾಗಿತ್ತು ಎಂಬುದನ್ನು ನೆನೆಯಬೇಕಾಗಿದೆ. ಇಲ್ಲಿ ಉಗಿಯುವ ಪಾಪೆಯನ್ನು ತನ್ನ ಪ್ರತೀಕವಾಗಿ ಪೆರುಂದಚ್ಚನ್ ರೂಪಿಸಿರಬಹುದುದೆಂದು ವ್ಯಾಖ್ಯಾನಿಸಬರುತ್ತದೆ. ಮನುಷ್ಯ ತನ್ನದೆ ಮಾದರಿಯಲ್ಲಷ್ಟೆ ಬೊಂಬೆಯನ್ನು ತಯಾರಿಸುವುದು? ಇನ್ನೊಬ್ಬನನ್ನು ಅವಹೇಳನ ಮಾಡುವುದಕ್ಕೆ ಒದಗುವ ಅತ್ಯಂತ ಸಫಲವಾದ ಮಾರ್ಗವೆಂದರೆ ಉಗುಳುವುದು. ಆದ್ದರಿಂದಲೆ ಪೆರುಂದಚ್ಚನಗ ಉಗುಳುವ ಪಾಪೆಯನ್ನು ನಿರ್ಮಿಸಿದುದು. ಇನ್ನಾರಿಗೂ ತನ್ನಷ್ಟು ಪ್ರತಿಭೆಯೂ ಯೋಗ್ಯತೆಯೂ ಇಲ್ಲವೆಂದು ಇನ್ನೊಂದು ರೀತಿಯಲ್ಲಿ ಸೂಚಿಸಲು ಸೂಕ್ತವಾದ ಅತ್ಯಂತ ಒಳ್ಳೆಯ ಮಾರ್ಗವೆಂದರೆ ಸ್ವಂತ ಯೋಗ್ಯತೆಯನ್ನುಪಯೋಗಿಸಿ ಒಂದು ಪಾಪೆಯನ್ನು ನಿರ್ಮಿಸುವುದೆಂದು ಆತ ಎಣಿಸಿರಬಹುದು. ಆದ್ದರಿಂದ ಉಗುಳುವುದು ಪಾಪೆಯಾದರೂ, ಪ್ರತೀಕದ ನೆಲೆಯಲ್ಲಿ ವ್ಯಾಖ್ಯಾನಿಸುವುದಾದರೆ, ಫಲಿತಾಂಶದಲ್ಲಿ ಅದು ಪೆರುಂದಚ್ಚನ್ ಉಗುಳಿದಂತೆಯೇ. ಇತರರಲ್ಲಿ ಪೆರುಂದಚ್ಚನಿಗೆ ಇದ್ದ ಅವಜ್ಞೆ ತಿರಸ್ಕಾರಗಳು ಪಾಪೆಯ ಮೂಲಕ ವ್ಯಕ್ತವಾಗುತ್ತಿದ್ದವು. ಆಗಲೆ ಉಗುಳುವ ಬೊಂಬೆಯ ಕೆನ್ನೆಗೆ ಏಟು ಬಿಗಿಯುವ ಪಾಪೆಯನ್ನು ತಯಾರಿಸುವುದಲ್ಲವೆ? ಈಯೊಂದು ಕಾರ್ಯವನ್ನು ಎರಡು ರೀತಿಯಲ್ಲಿ ವ್ಯಾಖ್ಯಾನಿಸಬಹುದು. (i) ಶಿಲ್ಪಪ್ರಾವೀಣ್ಯದಲ್ಲಿ ಅಪ್ಪನಿಗಿಂತ ಹೆಚ್ಚಿನವ ತಾನು ಎಂಬುದನ್ನು ಅಪ್ಪನಿಗೆ ಮನವರಿಕೆ ಮಾಡಿಕೊಡುವುದಕ್ಕಾಗಿ ಮಗ ಪಾಪೆಯನ್ನು ನಿರ್ಮಿಸಿದುದು (ii) ಇತರರನ್ನು ಅವಮಾನಿಸುವುದಕ್ಕಾಗಿ ಉಗುಳುವ ಪಾಪೆಯನ್ನು ಮಾಡಿದ ಅಪ್ಪನಿಗೆ ತನ್ನ ಸ್ವಂತ ಕೆಲಸದ ಮೂಲಕ ಒಂದು ಶಿಕ್ಷೆ ನೀಡುವುದಕ್ಕಾಗಿ ಮಗ ಕೆನ್ನೆಗೆ ಹೊಡೆಯುವ ಪಾಪೆಯನ್ನು ತಯಾರಿಸಿದ. ಯಾವುದಿದ್ದರೂ ಇದು ಅಪ್ಪನ ಪ್ರತಿಷ್ಠೆಗೆ ಕುಂದಕ ತಂದದ್ದಂತು ನಿಜ.

ಮನಃಶಾಸ್ತ್ರ ಪ್ರಕಾರ ವಿಶ್ಲೇಷಿಸುವುದಾದರೆ ಪೆರುಂದಚ್ಚನ್ ಕಥೆಯನ್ನು ಒಂದು ಈಡಿಪಲ್ ಕಥೆಯೆಂದು ಸ್ಥಾಪಿಸಲು ಬರುವುದಿಲ್ಲ. ಆದರೆ ಎ. ಕೆ. ರಾಮಾನುಜಂ ಹೇಳುವಂತೆ ಒಂದು ಭಾರತೀಯ ಈಡಿಪಸ್ ಕಾಂಪ್ಲೆಕ್ಸ್ ಅದರ ಹಿಂದುಗಡೆ ಕೆಲಸಮಾಡುತ್ತದೆ. ಭಾರತದಲ್ಲಿ ಈಡಿಪಸ್ ಕಥೆಗಳಿಲ್ಲ

ಎನ್ನುವಂತಿಲ್ಲ. ಅಪ್ಪನನ್ನು ಕೊಲ್ಲಲು ಮಗ ಇಚ್ಛಿಸುವುದರ ಬದಲು ಅಪ್ಪ ಮಗನನ್ನೂ ಕೊಲ್ಲಬಯಸುವುದೇ ಭಾರತೀಯ ಕಥಗಳಲ್ಲಿ ಕಾಣುವುದು. ಇದು ತಲೆಕೆಳಗಾದ ಈಡಿಸನ್ ಕಾಂಪ್ಲೆಕ್ಸ್ ಆಗಿದೆ. ಇದೇ ಅವರ ಅಭಿಪ್ರಾಯ. ಒಂದಂತು ಖಚಿತ ಅಲೌಕಿಕ ಸಿದ್ಧಿಗಳಿರುವ ಇಬ್ಬರು ವ್ಯಕ್ತಿಗಳೊಳಗಿನ ಸಂಘರ್ಷವನ್ನು ಇದು ಚಿತ್ರಿಸುತ್ತದೆ; ಸಂಬಂಧಗಳ ಸಂಕೀರ್ಣತೆಗಳು ಉಂಟುಮಾಡುವ ಸಿಕ್ಕಿನೊಳಗೆ ಸಿಲುಕಿಕೊಳ್ಳುವ ಮನುಷ್ಯಮನಸ್ಸುಗಳ ದಯನೀಯತೆ ತುಂಬಿಕೊಂಡ ಚಿತ್ರ.

ಕೇರಳದ ಐತಿಹ್ಯಗಳು

ಕೇರಳದ ಐತಿಹ್ಯಗಳನ್ನು (i) ಉತ್ಪತ್ತಿ ಐತಿಹ್ಯಗಳು, (ii) ಇತಿಹಾಸದ ಐತಿಹ್ಯಗಳು, (iii) ಅಲೌಕಿಕ ಐತಿಹ್ಯಗಳು, (iv) ದಿವ್ಯ ಐತಿಹ್ಯಗಳು, (v) ಮತೀಯ ಐತಿಹ್ಯಗಳು, ಎಂದು ವರ್ಗೀಕರಿಸಬಹುದು. ಪರಶುರಾಮ ಕೊಡಲಿಯೆಸೆದು ಸೃಷ್ಟಿಸಿದ ಭೂಮಿಯೇ ಕೇರಳ ಎಂಬ ಕಥೆ ಉತ್ಪತ್ತಿ ಐತಿಹ್ಯ ವಿಭಾಗಕ್ಕೆ ಸೇರುತ್ತದೆ. ಬಡಗಣ ಕೋಟ್ಟಯಂನಲ್ಲಿನ 'ಕುಮಾರಧಾರಾ' ಎಂಬ ಜಲಪಾತದ ಧಾರೆಗೆ ಒಡ್ಡಿಕೊಂಡು ಮಲಗಿ ಇಪ್ಪತ್ತನಾಲ್ಕು ತಾಸು ಕಳೆದು, ತನ್ನ ಮೌಢ್ಯವನ್ನು ತೊಲಗಿಸಿ, ಬುದ್ಧಿವಂತನಾದ ಕೋಟ್ಟಯಂನರಾಜನ ಕತೆಯನ್ನು ಚರಿತ್ರೆಯ ಐತಿಹ್ಯವೆಂಬ ಗುಂಪಿಗೆ ಸೇರಿಸಬಹುದು. ಮಂತ್ರವಾದಿಯಾದ ಕಡಮಱ್ಱತ್ತು ಕತ್ತನಾರ್ ರಚಿಸಿದ ಕತೆಯನ್ನು ಅಲೌಕಿಕ ಐತಿಹ್ಯ ವಿಭಾಗಕ್ಕೆ ಸೇರಿಸಬೇಕು. ಚೆಂಜನ್ನೂನ್ನೂರಿ ಭಗವತಿಯ ಪವಿತ್ರ ಹುತ್ತದ ಕಥೆಯನ್ನೂ, ಮಣ್ಣಾಱಶ್ಶಾಲೆಯ ಸರ್ಪಗಳ ಕಥೆಯನ್ನೂ ದಿವ್ಯ ಐತಿಹ್ಯ ವಿಭಾಗಕ್ಕೆ ಸೇರಿಸಬೇಕು. ತೋಮಾಶ್ಲೀಹ ನೀರಲ್ಲಿ ನಿಂತು ಜಪಿಸುತ್ತಿದ್ದ ನಂಬೂತಿರಿಗಳು ಮೇಲಕ್ಕೆ ಆಚಮನದಿಂದ ತಳಿದ ನೀರನನು ಅಲ್ಲಿಯೆ ನಿಲ್ಲಿಸಿ ತೋರಿಸಿದನೆಂದೂ ಅದರಿಂದಾಗಿ ಆ ನಂಬೂತರಿಗಳು ಕ್ರೈಸ್ತರಾಗಿ ಮತಾಂತರಗೊಂಡರೆಂದೂ ಇರುವ ಕಥೆ ಮತೀಯ ಐತಿಹ್ಯದ ಭಾಗವಾಗಿದೆ. ಮೇಲೆ ಹೇಳಿದ ಲಕ್ಷಣಗಳಿಂದ ಸ್ಪಷ್ಟವಾಗಿ ಗಡಿರೇಖೆ ಗುರುತಿಗೆ ಬಾರದ ಹಾಗೂ ಎರಡು ಅಥವಾ ಹೆಚ್ಚು ವರ್ಗಲಕ್ಷಣಗಳಿಂದ ಕೂಡಿರುವ ಕಥೆಗಳು ಯಾವುದಾದರೂ ಒಂದು ವರ್ಗದಲ್ಲಿ ಜಾಗ ಪಡೆಯುವ ಸಂದರ್ಭಗಳೂ ಐತಿಹ್ಯದಲ್ಲಿ ಇವೆ.

ಕೋಂದ ಮತ್ತು ನರಿ

(ಕೋಂದನುಂ ಕುಱುಕ್ಕನುಂ)

(ಗ್ರಾಮೀಣ ಕತೆ)

ಕೆ.ಎಂ. ಭರತನ್

ಟಿಪ್ಪಣಿ

ಆಖ್ಯಾನ (ಹೇಳುವುದು) ಮನುಷ್ಯನ ಒಂದು ಸಾರ್ವತ್ರಿಕ ಸ್ವಭಾವ. ಆದಿಮಧ್ಯ ಅಂತ್ಯ ಇವುಗಳೊಳಗೆ ಹೊಂದಿಕೆಯಿರುವ ಘಟನೆಗಳು ಅನುಕ್ರಮವಾಗಿ ಬಂದರೆ ಆ ಬಗೆಯ ಆಖ್ಯಾನವನ್ನು 'ಕಥೆ' ಎಂದು ಕರೆಯಬಹುದು. ಪುರಾವೃತ್ತವೂ, ಐತಿಹ್ಯವೂ ಈ ಅರ್ಥದಲ್ಲಿ ಕಥೆಯಾಗಿದೆ. ಆದರೆ 'ಗ್ರಾಮೀಣಕಥೆ' ಎಂದು ಹೇಳುವುದೇಕೆಂದರೆ ಅವುಗಳಿಗಿಂತ ಭಿನ್ನವಾದ ಸ್ವಾಭಾವ ಈ ಬಗೆಯ ಕಥಾರೂಪದಲ್ಲಿದೆ ಎಂಬುದಕ್ಕಾಗಿ. ಚಾರಿತ್ರಿಕ ವಾಸ್ತವತೆಯನ್ನು ಒಳಗೊಳ್ಳದ, ದೈವಿಕವೂ ಅಲೌಕಿಕವೂ ಆದ ವಿಷಯಗಳನ್ನು ಪ್ರತಿಪಾದಿಸದಿರುವ ಆದಿ-ಮಧ್ಯ-ಅಂತ್ಯ ಹೊಂದಿಕೆಯರುವ ಘಟನೆಗಳ ಅನುಕ್ರಮವನ್ನು ಕಥೆ ಎಂದು ಕರೆಯಬಹುದು. ಒಂದು ಗ್ರಾಮೀಣ (ನಾಡೋಡಿ) ಕಥೆ ತನ್ನಲ್ಲಿರುವ ಘಟನೆಗಳು ಎಲ್ಲಿ ಯಾವಾಗ ನಡೆದವು ಎಂಬುದನ್ನು ಹೇಳುವುದೆ ಇಲ್ಲ. ಆದ್ದರಿಂದಲೆ ಕಾಲ ದೇಶಗಳನ್ನು ಸೂಚಿಸದೆ 'ಹಿಂದೆ ಒಂದು ರಾಜ್ಯದಲ್ಲಿ' ಎಂದು ಕತೆ ಆರಂಭಗೊಳ್ಳುವುದು.

ಕಥೆಯನ್ನು ಹಲವು ಬಗೆಗಳಲ್ಲಿ ವಿಶದೀಕರಿಸಲು ಶ್ರಮಗಳು ನಡೆದಿವೆ. ಅದು ನ್ಯೂನದಿಂದ ಆಧಿಕ್ಯದೆಡೆಗೆ ಘಟನೆಗಳ ಅನುಕ್ರಮಣಿಕೆ ಎಂದೂ ಇಲ್ಲದಿರುವಿಕೆಯಿಂದ ಆರಂಭಿಸಿ ಇಲ್ಲದಿರುವಿಕೆಯ, ಇಲ್ಲದಿರುವಿಕೆಯಲ್ಲಿ ಕೊನೆಗೊಳ್ಳುವಂಥದು ಎಂದೂ ವಿಶದೀಕರಣಗಳವೆ. ಮೂವತ್ತೊಂದು ಅಂಶಗಳ ಹಖಬಹುದಾದ ರೀತಿಯ ಪುರ್ವಾಪರಕ್ರಮಣವೆ ಕಥೆ ಎಂದು ವಿ. ಜೆ. ಪ್ರಾಪ್ ಸಿದ್ಧಾಂತಿಸುತ್ತಾರೆ. ಇದು ಒಂದು ಅರ್ಥದಲ್ಲಿ ಕಥೆ ಎಮದರೇನೆಂದು ನಿರ್ವಚಿಸುವುದೆ ಆಗಿದೆ. ಮನುಷ್ಯ ಪ್ರಾಕೃತವಾದ ಅವಸ್ಥೆಯಲ್ಲಿ ಪುರಾವೃತ್ತವನ್ನು ಸೃಷ್ಟಿಸುತ್ತಾನೆ ಎಂದೂ ಆ ಬಳಿಕ ಕೃಷಿವೃತ್ತಿಯನ್ನು ಆಧರಿಸಿದ ಗ್ರಾಮೀಣ ಬದುಕನ್ನು ನಡೆಸುವಾಗ ಪುರಾವೃತ್ತಕ್ಕೆ ಅದರ ದೈವಿಕತೆ (ಅಲೌಕಿಕತೆ) ನಷ್ಟವಾಗಿ ಛಿದ್ರಗೊಂಡು ಚದರಿಹೋಗಿ ಗ್ರಾಮೀಣ ಕತೆಗಳಾಗುತ್ತವೆ ಎಂದೂ ಅಭಿಪ್ರಾಯವಿದೆ. ಎನೇ ಆದರೂ ಭಾಷೆಗೆ ಇರುವ ಹಾಗೆ ಕಥೆಗೂ ಒಂದು ವ್ಯಾಕರಣವಿದೆ ಎಂದು ಎಲ್ಲರೂ ಬಲ್ಲರು. ಆದ್ದರಿಂದಲೆ ಅಲ್ಲವೆ ಪುಟ್ಟ ಮಕ್ಕಳೂ ಕಥೆಯನ್ನೂ ಕಥೆಯಲ್ಲಿ ಎಟಕದ ಆಖ್ಯಾನವನ್ನೂ ಗುರುತಿಸುವುದು?

ಕಥೆಗಳನ್ನು ಹಲವು ಮಾನದಂಡಗಳನ್ನು ಬಳಸಿ ವರ್ಗೀಕರಿಸಬಹುದು. ಕಥಾಪಾತ್ರಗಳ ಆಧಾರವಾಗಿಯೂ ಕಥೆ ನಿರ್ವಹಿಸುವ ಧರ್ಮಗಳನ್ನು ಆಧರಿಸಿಯೂ ಕಥೆಗಿರುವ ವಿಷಯ, ಕಥೆಯ ಸ್ವಭಾವ ಇತ್ಯಾದಿಯನ್ನು ಆಶ್ರಯಿಸಿಯೂ ವರ್ಗೀಕರಣ ಸಾಧ್ಯ. ಪ್ರಾಣಿಗಳ ಕತೆಗಳೂ, ಲೌಕಿಕ ಕತೆಗಳು,

ಸದಾಚಾರಕತೆಗಳೂ, ಮಾಂತ್ರಿಕಕತೆಗಳು, ಮತೀಯ ಕತೆಗಳು, ನಗೆ ಕತೆಗಳು ಮೊದಲಾದ ಕವಲು ಪ್ರಭೇದಗಳು ಉಂಟಾಗುವುದು ಹೀಗೆ. ಕಥೆಯ ಸಂಕೀರ್ಣತೆ, ಕಥೆ ಒಳಗೊಳ್ಳುವ ಉದ್ದೇಶಗಳ ಸಂಖ್ಯೆ ಇತ್ಯಾದಿಯೂ ಕಥೆಗಳ ವರ್ಗೀಕರಣಕ್ಕೆ ಬುನಾದಿಯಾಗುವುದುಂಟು. 'ಆಮೆ ಮತ್ತು ಮೊಲ'ದಂಥ ಏಕೋದ್ದೇಶದ ಕತೆಯೂ ಫೆರಿಟೇಲ್‌ಗಳಂಥ ಬಹೂದ್ದೇಶದ ಕತೆಗಳೂ ಇವೆ. ಆದರೆ ಎಲ್ಲ ಬಗೆಯ ಕತೆಗಳೂ ಎಲ್ಲ ಸಾಂಘಿಕತೆಗಳಲ್ಲೂ ಕಾಣಿಸಿಕೊಳ್ಳಬೇಕೆಂದಿಲ್ಲ. ಫೆರಿ ಟೇಲ್ (fairy Tale) ಎಂದ ಇಂಗ್ಲಿಂಡಿನಲ್ಲೂ, 'ಮಾಕಹೀನ್'(Marchen) ಎಂದು ಜರ್ಮನಿಯಲ್ಲೂ, 'ಟಾಲ್ ಟೇಲ್' (Tall Tale) ಎಂದು ಅಮೇರಿಕದಲ್ಲೂ ಹೆಸರಾದ, ತುಲನಾತ್ಮಕವಾಗಿ ದೀರ್ಘವೂ, ಸಂಕೀರ್ಣವೂ ಆದ ಕಥಾರೂಪ ದ್ರಾವಿಡ ಸಂಸ್ಕೃತಿಯಲ್ಲಿ ಲಭ್ಯವಾಗಿರಲಿಲ್ಲ. ವಿಭಿನ್ನ ಸಂಸ್ಕೃತಿಗಳಿಗೆ ಸರಿಯಾಗಿ ವಿಭಿನ್ನ ಟೇಲ್ ಟೈಪ್ ಇಂಡೆಕ್ಸ್ ಆಗಬೇಕಾದುದು, ಕಥೆ ಸಾರ್ವಜನೀನವಾಗಿರುವುದಾದರೂ, ಕಥಾರೂಪಗಳು ಸಂಸ್ಕೃತಿಗೆ ಅನುಸಾರ ವ್ಯತ್ಯಸ್ತಗೊಳ್ಳುತ್ತವೆ ಎಂಬುದರಿಂದ ಎನ್ನಬೇಕಾಗಿದೆ.

ಇಲ್ಲಿ ಉದ್ಧರಿಸುವ 'ಕೋಂದ ಮತ್ತು ನರಿ' (ಕೋಂದನುಂ ಕುಜುಕ್ಕನುಂ) ಎಂಬ ಕತೆ ಫೆರಿಟೇಲಿನ ಎಲ್ಲ ವಿಶೇಷತೆಗಳನ್ನು ಒಳಗೊಳ್ಳುವ ಕತೆಯಾಗಿದೆ. ಈ ಕತೆಯನ್ನು ಹೇಳಿದವರಿಂದಲೂ, ಇದರೊಂದಿಗೆ ನಡೆಸಿದ ಸಂಬಂಧಿತ ಮಾಹಿತ ಸಂಗ್ರಹದಿಂದಲೂ ಈ ಕತೆ ಹುಟ್ಟಿರುವುದು ಇಲ್ಲಿ ಅಲ್ಲ ಎಂಬುದು ಸ್ಪಷ್ಟಗೊಂಡಿದೆ. ಆದರೆ ಈ ಕತೆಯನ್ನು ಮಕ್ಕಳು ಆಸಕ್ತಿಯಿಂದ ಕೇಳುತ್ತಬಂದಿದ್ದಾರೆ ಎಂಬುದರಿಂದಲೂ ಅದು ಪ್ರಚಾರದಲ್ಲಿ ಉಳಿದುಕೊಂಡಿದೆ ಎಂಬುದರಿಂದಲೂ ಅದಕ್ಕೆ ಸಾಮೂಹಿಕ ಪುನಃ ಸೃಷ್ಟಿ ಒದಗಿದೆ ಎಂಬುದು ಸುವ್ಯಕ್ತ 'ಕೋಂದ' ಎಂಬ ಹೆಸರು ಘಟನೆಗಳ ವಿವರಣೆಯೂ ಇಲ್ಲಿನ ಪರಿಸರಕ್ಕೆ ಒಪ್ಪುವು ಹಾಗೆ ಬದಲಿಕೊಂಡಿವೆ. ಫೆರಿಟೇಲನ್ನು ಪರಿಚಯಿಸಿಕೊಳ್ಳಲು ಹೊಸದೊಂದು ಸಾಂಘಿಕತೆಯಲ್ಲಿ ಪ್ರವೇಶ ಮಾಡುವಾಗ ಅದರಲ್ಲಿ ಉಂಟಾಗುವ ಬದಲಾವಣೆಯನ್ನು ಅರ್ಥಮಾಡಿಕೊಳ್ಳಲು ಕಥೆ ಗರ್ಭೀಕರಸಿಕೊಂಡ ಆಂತರಿಕ ಅರ್ಥವನ್ನು ಅರಿಯಲೂ ಈ ಕಥೆಯನ್ನು ಅಧ್ಯಯನ ಮಾಡುವುದರ ಮೂಲಕ ಸಾಧ್ಯವಿದೆ.

– **ಸಂಪಾ**

ದಕ

ಕಥೆ ಹೀಗೆ

ಒಮ್ಮೆ ಒಂದೆಡೆಯಲ್ಲಿ ಒಬ್ಬ ರಾಜನಿದ್ದ. ರಾಜನ ಅರಮನೆ ಬಹಳ ದೊಡ್ಡದೂ ಸುಂದರವೂ ಆಗಿತ್ತು. ಅರಮನೆಯ ಸುತ್ತಲೂ ಮನೋಹರವಾದ ಉದ್ಯಾನ. ಹಲವು ಬಣ್ಣಗಳೊಂದಿಗೆ ಬೆಳೆದು, ಕಳಿತು ತೂಗುವ ಹಣ್ಣುಗಳೂ, ಅರಳಿ ನಳನಳಿಸುವ ಹೂಗಳೂ ಇರುವ ಬಲುಬಗೆಯ ತರುಲತೆಗಳಿಂದ ತುಂಬಿಕೊಂಡ ಉದ್ಯಾನ ಅದು. ಎಷ್ಟು ನಿಬಿಡ ಕಾರ್ಯಭಾರವಿರುವುದಾದರೂ ಉದ್ಯಾನದಲ್ಲಿ ಸುತ್ತಾಡುವ ಪದ್ಧತಿಯನ್ನು ರಾಜ ತಪ್ಪಿಸುತ್ತಿರಲಿಲ್ಲ. ಪದ್ಧತಿಯಂತೆ ಒಂದು ದಿನ ಉದ್ಯಾನದಲ್ಲಿ ನಡೆಯುವಾಗ ಒಂದು ಅದ್ಭುತವಾದ ದೃಶ್ಯ ರಾಜನಕಣ್ಣಿಗೆ ಬಿತ್ತು. ಒಂದು ಮಾವಿನ ಮರದಲ್ಲಿ ಮೂರು ಚಿನ್ನದ ಮಾವಿನ ಕಾಯಿಗಳು.

'ಯಾರಾದರೂ ಇದನ್ನು ತಗೊಂಡುಹೋದರೆ? ಖಂಡಿತವಾಗಿಯೂ ಇವತ್ತೇ ಒಬ್ಬ ಕಾವಲುಗಾರನನ್ನು ನೇಮಿಸಬೇಕು' ಎಂದು ರಾಜ ಎಣಿಸಿದ.

ಆತನಿಗೆ ಮೂರು ಗಂಡುಮಕ್ಕಳು. ಅವರೇ ರಾಮ, ಕೃಷ್ಣ ಮತ್ತು ಕೋಂದ! ರಾಜ ತನ್ನ ಹಿರಿಮಗನನ್ನು ಕರೆದು ವಷಯ ಹೇಳಿದ.

ಖಂಡಿತವಾಗಿಯೂ ನಾನು ಹೋಗಿ ಚಿನ್ನದ ಮಾವುಗಳನ್ನು ರಕ್ಷಿಸುತ್ತೇನೆ' ರಾಮ ಹೇಳಿದ.

ಹೇಳಿದಂತೆ ರಾಮ ಉದ್ಯಾನಕ್ಕೆ ಹೋದ. ರಾತ್ರಿ ಬಹಳ ಹೊತ್ತು ನಿದ್ರೆ ಮಾಡದೆ ಚಿನ್ನದ ಮಾವುಗಳಿಗೆ ಕಾವಲು ಕೂತ. ಮತ್ತೆ ಯಾವಾಗಲೇ ಅವನಿಗೆ ತೂಕಡಿಕೆ ಬಂದು ಹೋಯಿತು. ಮುಂಜಾನೆ ಎಚ್ಚತ್ತು ನೋಡಿದರೆ ಮೂರು ಕಾಯಿಗಳಲ್ಲಿ ಒಂದು ಕಾಣೆ.

ಇದು ಗೊತ್ತಾಗಿ ರಾಜನಿಗೆ ಸಿಟ್ಟೂ ಬಂತು, ದುಃಖವೂ ಆಯಿತು. 'ಇನ್ನೇನು ಮಾಡೋಣ?' ರಾಮನಿಗೆ ಚಿನ್ನದ ಮಾವುಗಳನ್ನು ಕಾಪಾಡಲು ಸಾಧ್ಯವಿಲ್ಲ ಎಂಬುದು ರಾಜನಿಗೆ ಖಚಿತವಾಯಿತು. ಎರಡನೆ ಮಗನಾದ ಕೃಷ್ಣ ಚಿನ್ನದ ಮಾವುಗಳ ರಕ್ಷಣೆಗಾಗಿ ಸಜ್ಜಾದ. ಕೃಷ್ಣನೂ ತುಂಬ ಉತ್ಸಾಹದೊಂದಿಗೆ ನಿದ್ರಿಸದೆ ಮಾವಿಗೆ ಕಾವಲು ಕೂತ. ಆದರೆ ಅರ್ಧರಾತ್ರಿ ಕಳೆದಾಗ ಅವನಿಗೂ ಜೊಂಪು ಹತ್ತಿತ್ತು. ಬೆಳಕು ಹರಿದಾಗ ಎದ್ದು ನೋಡಿದರೆ ಇನ್ನೊಂದು ಮಾವಿನ ಕಾಯಿಯೂ ಕಾಣದಾಗಿತ್ತು.

ಇನ್ನು ಬಾಕಿ ಇರುವುದು ಒಂದೇ ಚಿನ್ನದ ಮಾವು. ರಾಜ ವ್ಯಾಕುಲನಾದ ಆಗ ಕಿರಿಯ ಮಗ ಕೋಂದ ಬಂದು ತಂದೆಯೊಡನೆ ಹೇಳಿದ–

1. ಕೋಂದನ್–ಗೋವಿಂದನ್‌ನ ತದ್ಭವ. ಅದೇ ಕೋಂದ.

'ಅಪ್ಪಾಜಿ ದುಃಖಿಸಬಾರದು, ಇನ್ನಿರುವ ಒಂದೇ ಮಾವನ್ನು ನನು ಕಾಪಾಡುತ್ತೇನೆ. ಖಂಡಿತವಾಗಿಯೂ ನಾನು ಕಳ್ಳನನ್ನು ಕಂಡುಹಿಡಿಯುತ್ತೇನೆ ಕೂಡ'.

ರಾಜನಿಗೆ ಭರವಸೆ ಮೂಡದಿದ್ದರೂ ಒಪ್ಪಿಗೆ ಕೊಟ್ಟ.

ಕೋಂದ ಉದ್ಯಾನಕ್ಕೆ ಹೋಗಿ ನಿದ್ರಿಸದೆ ಕಾವಲು ಕೂತ. ರಾತ್ರಿ ತುಂಬ ತಡವಾದಾಗ ತುಂಬ ನಿದ್ರೆ ಬರಹತ್ತಿತ್ತು. ಬಹಳ ಹೊತ್ತು ಅತ್ತಿಂದಿತ್ತ ನಡೆದಾಡಿದ. ನಡೆಯುತ್ತಿದ್ದಾಗಲೆ ಅವನಿಗೆ ನಿದ್ರೆ ಬಂತು. ಕೈಯನ್ನು, ಕಾಲನ್ನೂ ಪರಚಿಕೊಂಡೂ, ಚಿವುಟಿಯೂ ಅವನು ಒಂದು ಬಗೆ ಎಚ್ಚರದಲ್ಲೆ ಇದ್ದ.

ಅರ್ಧರಾತ್ರಿ ಕಳೆದಾಗ ಒಂದು ಸದ್ದು ಕೇಳಿತು. ಮೇಲಕ್ಕೆ ನೋಡಿದಾಗ ಒಂದು ಹಕ್ಕಿ. ಆ ಹಕಕಿ ಮೆಲ್ಲಗೆ ಬಂದು ಮಾವಿನ ಗೆಲ್ಲಿನ ಮೇಲೆ ಕೂತಿತು. ಮತ್ತೆ ತುಂಬ ಮೆತ್ತಗೆ ಕೊನೆಯ ಚಿನ್ನದ ಮಾವನ್ನೂ ಕುಕ್ಕಿ ತೆಗೆಯಿತು. ಅದನ್ನು ನೋಡಿದ ಕೋಂದ ತನ್ನ ಬಿಲ್ಲನ್ನು ತೆಗೆದು ಬಾಣವನ್ನು ಹೆದೆಗೆ ಹೂಡಿಬಿಟ್ಟ. ಒಂದಲ್ಲ ಹಲವು, ಅವೊಂದೂ ಹಕ್ಕಿಗೆ ಚುಚ್ಚಿ ತಾಗಲಿಲ್ಲ. ಆದರೆ ಒಂದು ಬಾಣ ತಾಗಿ ಅದರ ಒಂದು ಗರಿ ಕೆಳಕ್ಕೆ ಬಿತ್ತು. ಚಿನ್ನದ ಬಣ್ಣದ ಆ ಗರಿಯನ್ನು ಕಂಡು ಕೋಂದನಿಗೆ ಅಚ್ಚರಿಯಾಯಿತು.

ಕೋಂದ ಕೂಡಲೆ ರಾಜನನ್ನು ಕಂಡು ಹೀಗೆ ಹೇಳಿದ, 'ಅಪ್ಪಾಜಿ ನನಗೆ ಚಿನ್ನದ ಮಾವನ್ನು ಉಳಿಸಿಕೊಳ್ಳಲು ಆಗಲಿಲ್ಲ, ಅದರೆ ಕಳ್ಳನನ್ನು ಕಂಡುಕೊಂಡಿದ್ದೇನೆ. ಇಗೊಳ್ಳಿ ಈ ಗರಿ ಕಳ್ಳನದು ಬಾಣಗಳನ್ನು ಬಿಟ್ಟರೂ ಅವುಗಳು ಅದಕ್ಕೆ ಚುಚ್ಚಲಿಲ್ಲ, ಮಾವನ್ನು ಎತ್ತಿಕೊಂಡು ಅದು ತೆಂಕಣ ಕಡೆಗೆ ಹಾರಿಹೋಯಿತು'.

ಆ ಚಿನ್ನದ ಗರಿಯನ್ನು ನೋಡಿ ರಾಜನಿಗೆ ಹರುಷವಾಯಿತು. ಮಕ್ಕಳನ್ನು ಕರೆದು ರಾಜ ಹೇಳಿದ–

'ಈ ಹೊನ್ನ ಹಕ್ಕಿಯನ್ನು ಜೀವಂತವಾಗಿ ಪಡೆಯಲು ನನಗೆ ತುಂಬ ಆಸೆಯಿದೆ. ಅದನ್ನು ಹಿಡಿದು ತರುವ ಯಾರಿಗೂ ನನ್ನ ರಾಜ್ಯದ ಅರ್ಧಭಾಗವನ್ನು ನೀಡುವೆ;

ಹಿರಿಯ ಮಗನಾದ ರಾಮ ಹೊನ್ನ ಹ್ಕಿಯನ್ನು ಹುಡಕಲು ಹೋಗಲಣಿಯಾದ. ರಾಜನಿಂದ ಪ್ರಯಾಣಕ್ಕೆ ಬೇಕದ ಹಣವನ್ನು ಪಡೆದು ಹಕ್ಕಿಯನ್ನು ಹುಡುಕಿಹೊರಟ.

ನಡೆದೂ ನಡೆದೂ ಕೊನೆಗೆ ಅವನೊಂದು ಕಾಡಿಗೆ ತಲುಪಿದ, ಅಲ್ಲಿ ಒಂದು ನರಿಯನ್ನು ಕಂಡ.

'ನೀನು ಹೋಗುವುದು ಎಲ್ಲಿಗೆ?' ನರಿ ಕೇಳಿತು.

'ಹೊನ್ನಹಕ್ಕಯನ್ನು ಹುಡುಕಿ ಹೋಗುತ್ತಿದ್ದೇನೆ' ರಾಮ ಉದಾಸೀನದಿಂದಲೆ ಉತ್ತರವಿತ್ತ.

'ನಿನಗೆ ಸಹಾಯ ಮಾಡಲು ನನಗೆ ಸಾಧ್ಯ', ನರಿ ಹೇಳಿತು.

'ತುಂಬಾ ಮುಂದಕ್ಕೆ ನಡೆದರೆ ಸಂಜೆಗೆ ನೀನು ಛತ್ರವೊಂದಕ್ಕೆ ತಲಪಬಲ್ಲೆ. ಆ ಛತ್ರದಲ್ಲಿ ಹಾಡು, ಕೂತ್ತು (ನೃತ್ಯ), ನೃತ್ಯ ಎಲ್ಲಾ ಇರುತ್ತವೆ. ಆದರೆ ಯಾವ ಕಾರಣಕ್ಕೂ ನೀನು ಆ ಛತ್ರವನ್ನು ಹೊಗಬಾರದು. ಅಲ್ಲಿಂದಲೂ ಬಹಳ ನಡೆದರೆ ಒಂದು ಖಲಿ ಮನೆ ಕಾಣಿಸುತ್ತದೆ. ಆ ರಾತ್ರಿಯನ್ನು ನೀನು ಅದರಲ್ಲಿ ಕಳೆಯಬಹುದು. ಮರುದಿನ ಮುಂಜಾನೆ ಬೇಗನೆ ಪುನಃ ಪ್ರಯಾಣ ಬೆಳೆಸಿದರೆ ಸಂಜೆ ಆಗುವ ವೇಳೆಗೆ ನಿನಗೆ ಹೊನ್ನಹಕ್ಕಿಯಿರುವ ಊರಿಗೆ ತಲಪಲು ಸಾಧ್ಯ;

'ನನಗೆ ಉಪದೇಶ ನೀಡಲು ಇವನಾರು' ಎಂಬ ಮನೋಭಾವದೊಂದಿಗೆ ಆ ನರಿ ಹೇಳಿದ ದಾರಿಯಾಗಿ ನಡಯತೊಡಗಿದ. ಸಂಜೆ ವೇಳೆಗೆ ಛತ್ರದ ಬಳಿಗೆ ತಲಪಿದ. ಛತ್ರದ ಒಳಗಡೆ ಹಾಡು, ಆಟ, ನಡೆಯುತ್ತಿದ್ದವು. ಆ ದೃಶಯ ಅವನಿಗೆ ಅತ್ಯಂತ ಹರುಷ ನೀಡಿತು. ಅವನ ಕೈಯಲ್ಲಿ ಬೇಕಾದಷ್ಟು ಹಣವೂ ಇತ್ತು. ಪ್ರಯಾಣದ ಉದ್ದೇಶ ಮರೆತು ಅವನು ಅಲ್ಲಿ ತಂಗಿದ.

ಹೊನ್ನಹಕ್ಕಿಯನ್ನು ಹುಡುಕಿ ಹೋದ ರಾಮ ಬಹಳಕಾಲ ಕಳೆದರೂ ಮರಳಿಬಾರದಿದ್ದಾಗ ರಾಜ ಎರಡನೆ ಮಗ ಕೃಷ್ಣನನ್ನು ಕರೆದು ವಿಷಯ ಹೇಳಿದ.

'ಅಪ್ಪಾಜಿ, ನಾನು ಹೋಗಿ ಚಿನ್ನದ ಹಕ್ಕಿಯನ್ನೂ, ಅಣ್ಣನನ್ನೂ ಹುಡುಕಿ ತರುತ್ತೇನೆ' ಕೃಷ್ಣ ಹೇಳಿದ.

ರಾಜನಿಂದ ಪ್ರಯಾಣಕ್ಕೆ ಬೇಕದ ಹಣ ಪಡೆದು ಅವನೂ ಅಣ್ಣ ಹಿಡಿದ ದಾರಿಯಲ್ಲಿ ನಡೆಯತೊಡಗಿದ. ನಡೆದೂ ನಡೆದೂ ಕಾಡಿಗೆ ತಲಪಿದ. ಅಗೋ, ದಾರಿಯಲ್ಲಿ ನರಿ ನಿಂತಿದೆ.

'ಎಲ್ಲಿಗೆ ಹೋಗುವುದು?' ನರಿ ಕೇಳಿತು.

'ಹೊನ್ನಹಕ್ಕಿಯನ್ನು ಹುಡುಕಿ ಹೋಗುತ್ತಿದ್ದೇನೆ' ಕೃಷ್ಣ ಉತ್ತರಿಸಿದ.

'ಓಹೋ, ನೀನು ಹೊನ್ನ ಹಕ್ಕಿಯನ್ನು ಹುಡಕಲು ಹೋರಟದ್ದಾದರೆ ನಿನಗೆ ಸಹಾಯ ಮಾಡಲು ನನಗೆ ಸಾಧ್ಯ. ಇಲ್ಲಿಂದ ನೇರ ನಡೆದರೆ ಸಂಜೆವೇಳೆಗೆ ಒಂದು ಛತ್ರದ ಬಳಿಗೆ ಹೋಗಬಹುದು. ಛತ್ರದ ಒಳಗಡೆ ಹಾಡು, ಕೂತ್ತು, ಆಟ, ಎಲ್ಲ ಇರುತ್ತದೆ. ಆದರೆ ನೀನು ಅದರೊಳಕ್ಕೆ ಹೋಗವಾರದು. ಛತ್ರದ ಮೆಟ್ಟಲೇರದೆ ನೇರ ನಡೆದರೆ ಜನರು ಖಾಲಿ ಮಾಡಿದ ಒಂದು ಮನೆಗೆ ತಲಪುತ್ತಿ. ಆ ರಾತ್ರಿಯನ್ನು ಅಲ್ಲಿ ಕಳೆಯಬಹದು. ಮುಂಜಾನೆ ಬೇಗನೆ ಅಲ್ಲಿಂದ ನಡೆಯತೊಡಗಿದರೆ ಹೊನ್ನಹಕ್ಕಿಯ ಊರಿಗೆ ತಲಪುವೆ'.

ನೇರ ಹೊರಟ ಕೃಷ್ಣ ಛತ್ರದ ಬಳಿಗೆ ಬಂದ. ಅಲ್ಲಿದೆ ಹಾಡು, ಆಟ ಎಲ್ಲ ಕೃಷ್ಣನೂ ಛತ್ರದೊಳಕ್ಕೆ ಹೋದ. ಎಲ್ಲ ಮರೆತು ಅಲ್ಲಿ ತಂಗಿದ.

ಬಹಳ ಕಾಲ ಕಳೆಯಿತು. ಇಬ್ಬರು ಅಣ್ಣಂದಿರೂ ಹಿಂದಿರುಗಿ ಬಾರದಿದ್ದುದರಿಂದ ಕೋಂದ ರಾಜನೊಡನೆ ಹೇಳಿದ, 'ಅಪ್ಪಾಜಿ, ನಾನು ಹೋಗಿ ಹೊನ್ನ ಹಕ್ಕಿಯನ್ನೂ ಅಣ್ಣಂದಿರನ್ನೂ ತರುತ್ತೇನೆ'. ಇಬ್ಬರು ಅಣ್ಣದಿರಿಗೂ ಸಾಧ್ಯವಾಗದ ಕೆಲಸ ಸತ್ವಹೀನನಾದ ಕೋಂದನಿಂದ ಹೇಗಾದೀತು ಎಂಬ ಸಂದೇಹದಿಂದಲೆ ರಾಜ ಕೋಂದನಿಗೆ ಪ್ರಯಾಣವೆಚ್ಚಕ್ಕೆ ಹಣವನ್ನು ಕೊಟ್ಟು ಕಳುಹಿಸಿದ. ಕೋಂದ ನಡೆದೂ ನಡೆದೂ ಕಾಡಿಗೆ ತಲಪಿದ. ಅಗೋ, ನರಿ ದಾರಿಬದಿಯಲ್ಲಿ ನಿಂತಿದೆ!

'ಎಲ್ಲಿಗೆ ಪಯಣ?' ನರಿಯ ಪ್ರಶ್ನೆ.

'ಹೊನ್ನ ಹಕ್ಕಿಯನ್ನು ಹುಡುಕಿ' ಕೋಂದ ಉತ್ತರಿಸಿದ.

"ಹಾಗಾದರೆ ನಿನಗೆ ಸಹಾಯ ಮಾಡಲು ನನಗೆ ಸಾಧ್ಯ. ನೇರ ನಡೆದರೆ ಸಂಜೆ ವೇಳೆಗೆ ಒಂದು ಛತ್ರದ ಬಳಿಗೆ ತಲಪಬಹುದು. ಛತ್ರದಲ್ಲಿ ಹಾಡು, ಕೂತ್ತ್, ಆಟ ಎಲ್ಲ ನಡೆಯುತ್ತಿರುತ್ತದೆ. ಅಲ್ಲಿಗೆ ಹತ್ತಿ

ಹೋಗಬೇಡ. ಅಲ್ಲಿಂದಲೂಮುಂದಕ್ಕೆ ನಡೆದರೆ ನಿರ್ಜನವಾದ ಒಂದು ಮನೆಗೆ ತಲಪುತ್ತಿ. ಅಲ್ಲಿ ರಾತ್ರಿ ಕಳೆದು ಬೆಳಗ್ಗೆ ಪಯಣ ಮುಂದುವರಿಸಿದರೆ ಹೊನ್ನಹಕ್ಕಿಯ ಬಳಿಗೆ ತಲಪುತ್ತೀ" ಎಂದಿತು ನರಿ.

ಕೋಂದ ಪಯಣ ಮುಂದುವರಿಸಿದ ನರಿ ಹೇಳಿದಂತೆ ಛತ್ರದ ಬಳಿಗೆ ಬಂದ. ನರಿ ಹೇಳಿದ ಮಾತನ್ನು ನೆನೆದು, ಅದರ ಒಳಕ್ಕೆ ಹೊಗಲಿಲ್ಲ. ಪುನಃ ಮುಂದಕ್ಕೆ ನಡೆದ ಅಗೋ, ನಿರ್ಜನವಾದ ಮನೆ ಕೋಂದ ಆ ರಾತ್ರಿ ಅಲ್ಲಿ ತಂಗಿದ ಬೆಳಗ್ಗೆ ಎದ್ದು ಪಯಣ ಮುಂದುವರಿಸಿದ. ದಾರಿಯಲ್ಲಿ, ಅಗೋ, ನರಿ ನಿಂತಿದೆ.

ನರಿ ಹೇಳಿತು, 'ನೀನು ನನ್ನ ಬೆನ್ನನ್ನೇರಿಕೊ ನಾನು ನಿನ್ನನ್ನು ಹೊನ್ನಹಕ್ಕಿಯಿರುವೆಡೆಗೆ ತಲಪಿಸುವೆ.'

ಕೋಂದನನ್ನು ಬೆನ್ನಮೇಲೆ ಹೊತ್ತು ನರಿ ಹೊರಟಿತು. ಅರ್ಧರಾತ್ರಿ ವೇಳೆಗೆ ಹೊನ್ನಹಕ್ಕಿಯಿರುವ ಅರಮನೆಯ ಬಳಿಗೆ ತಲಪಿತು. ಅರಮನೆಗೆ ಇಡಿಯಾಗಿ ಕಾವಲು ಹಾಕಿದ್ದರು.

ನರಿ ಹೇಳಿತು, 'ಶಬ್ದ ಮಾಡದೆ ಒಳಹೊಕ್ಕರೆ ದೊಡ್ಡದೊಂದು ಕೋಣೆಯನ್ನು ಕಾಣಬಹುದು. ಕೋಣೆಯ ಮಧ್ಯದಲ್ಲಿ ಚಿನ್ನದ ಸಂಕೋಲೆಯಿರುವ ಒಂದು ಚಿನ್ನದ ಗೂಡು ಇದೆ. ಅದರೊಳಗಿದೆ ಹೊನ್ನಹಕ್ಕಿ. ಅಲ್ಲೆ ಮೂರು ಚಿನ್ನದ ಮಾವುಗಳೂ ಇರುತ್ತವೆ. ಶಬ್ದ ಮಾಡದೆ ಮೆಲ್ಲಗೆ ನಡೆದು ಹೋಗಬೇಕು. ಹೊನ್ನ ಹಕ್ಕಿಗೆ ಉಪದ್ರವ ಆಗದಂತೆ ಕೈಹಾಕಿ ಫಕ್ಕನೆ ಹಿಡಿದು, ಮಾವುಗಳನ್ನು ಎತ್ತಿಕೊಂಡು ಸಾಧ್ಯವಿರುವಷ್ಟು ಬೇಗನೆ ಹಿಂದಿರುಗಬೇಕು.

ಕೋಂದ ಹೇಳಿದಂತೆ ಒಳಹೊಕ್ಕ. ಹೊನ್ನಗೂಡಿನಲ್ಲಿ ಹೊನ್ನಹಕ್ಕಿಯನ್ನು ಕಂಡು ತುಂಬ ಹರುಷವಾಯಿತು. ಶಬ್ದ ಮಾಡದೆ ಗೂಡು ತೆರೆದ. ಹೊನ್ನ ಹಕ್ಕಿಯನ್ನು ಹತ್ತಿರದಿಂದ ಕಂಡಾಗ ಅವನಲ್ಲಿ ವಾತ್ಸಲ್ಯ ಉಂಟಾಯಿತು. ಪ್ರೀತಿಯಿಂದ ಒಮ್ಮೆ ಅದರ ಮೈದಡವಿದ. ಆ ನಿಮಿಷದಲ್ಲಿ ಹಕ್ಕಿ ಕೂಗತೊಡಗಿತು. ಕೂಗೂ ಕೇಳಿ ಕಾವಲಿನವರು ಎಚ್ಚೆತ್ತರು. ಕಾವಲಿನಭಟರು ಅವನನ್ನು ಹಿಡಿದರು. ಭಟರು ಅವನನ್ನು ರಾಜನ ಸನ್ನಿಧಿಗೆ ತಲಪಿಸಿದರು.

'ಅರ್ಧರಾತ್ರಿಯಲ್ಲಿ ಹೊನ್ನಹಕ್ಕಿಯನ್ನು ಕದಿಯಲು ಬಂದ ಇವನು ಗಲ್ಲಿಗೇರಲಿ' ರಾಜ ವಿಧಿಸಿದ.

'ಅಯ್ಯೋ ನನ್ನನ್ನು ಗಲ್ಲಿಗೇರಿಸಬೇಡಿ, ತಾವು ಹೇಳುವ ಎನನ್ನೂ ನಾನು ಮಾಡುವೆ; ಕೋಂದ ರಾಜನಲ್ಲಿ ಅಂಗಲಾಚಿದ.

'ಹಾಗಾದರೆ ಒತ್ತಿನ ರಾಜ್ಯದ ರಾಜನ ಅರಮನೆಯೊಳಗೆ ಒಂದು ಹೊನ್ನಕುದುರೆ ಇದೆ. ಒಂದು ವಾರದ ಒಳಗೆ ಆ ಹೊನ್ನ ಕುದುರೆಯನ್ನು ತಂದಿತ್ತರೆ ನಿನ್ನನ್ನು ಬಿಟ್ಟುಬಿಡುವೆ.'

ಮರಣ ದಂಡನೆ ಒಂದಿಷ್ಟಾದರೂ ದೂರಗೊಂಡಿತೆಂಬ ಹರುಷದಲ್ಲಿ ಕೋಂದ ಹೇಳಿದ, 'ಹೊನ್ನಕುದುರೆಯನ್ನು ತಂದುಕೊಡುವೆ'.

ಹಾಗೆ ಕೋಂದ ಅರಮನೆಯಿಂದ ಹೊರಬಿದ್ದ. ಕಂಗಾಲಾಗಿದ್ದ ಕೋಂದನನ್ನು ಕಂಡ ನರಿ ಹೋದಕೆಲಸವೇನಾಯಿತು ಎಂದು ಕೇಳಿತು.

'ನಾನು ಪ್ರೀತಿಯಿಂದ ಒಮ್ಮೆ ಹೊನ್ನಹಕ್ಕಿಯ ಮೈದಡವಿದೆ. ಒಡನೆಯೆ ಅದು ಕೂಗಿತು. ಪಹರೆಯವರು ಎಚ್ಚೆತ್ತರು. ನನ್ನನ್ನು ಹಿಡಿದು ರಾಜ ಸನ್ನಿಧಿಗೆ ಒಯ್ದರು. ಗಲ್ಲಿಗೇರಿಸಲು ವಿಧಿಸಿದರೂ ಸದ್ಯಕ್ಕೆ ಬಚಾವಾದೆ. ಒತ್ತಿನ ರಾಜನ ಹೊನ್ನಕುದುರೆಯನ್ನು ಒಂದು ವಾರದ ಒಳಗೆ ರಾಜ ಸನ್ನಿಧಿಗೆ ತಲಪಿಸಬೇಕಾಗಿದೆ. ಇನ್ನು ಏನು ಮಾಡಬಹುದು?' ಕೋಂದ ದುಃಖದಲ್ಲೆ ಹೇಳಿದ.

'ಅದಕ್ಕೆ ದಾರಿ ಮಾಡೋಣ, ನನ್ನ ಬೆನ್ನಮೇಲೆ ಏರಿಕೊ. ಹೊನ್ನಕುದುರೆಯ ಬಳಿಗೆ ನಾನು ತಲಪಿಸುವೆ' ಎಂದಿತು ನರಿ.

ಅರ್ಧರಾತ್ರಿಯಾಗುತ್ತಲೆ ಅವರು ಹೊನ್ನಕುದುರೆ ಇರುವ ಅರಮನೆಯ ಹೊರಕ್ಕೆ ತಲಪಿದರು. ಅರಮನೆಯ ಒಳಕ್ಕೆ ಹೋಗುವದಾರಿಯನ್ನು ನರಿ ಹೇಳಿತು. ಅನಂತರ ಇಷ್ಟನ್ನೂ ಹೇಳಿಕೊಟ್ಟಿತು– 'ಯಾವ ಕಾರಣಕ್ಕೂ ಕುದುರೆಗೆ ಉಪದ್ರವಮಾಡುವುದೊ, ಅದರಲ್ಲಿ ಸಂತಸ ಹುಟ್ಟಿ ಅದಕ್ಕೆ ಉಪಚಾರ ಮಾಡುವುದೊ ಆಗಕೂಡದು. ಅದನ್ನು ಕಂಡೊಡನೆ ಓಡಿ ಹೋಗಿ ಅದರ ಬೆನ್ನನೇರಿ ಹೊರಕ್ಕೆ ದಾಟಿಕೊಳ್ಳಬೇಕು'.

'ಎಲ್ಲವೂ ಸರಿ' ಎಂದು ಹೇಳಿ ಕೋಂದ ಅರಮನೆಯ ಒಳಕ್ಕೆ ಹೋದ. ಅದೊ, ಹೊನ್ನಕುದುರೆ ಕೋಂದನಿಗೆ ಅಚ್ಚರಿಯಾಯಿತು. ಅದನ್ನು ಕಂಡ ಮಾತ್ರದಲ್ಲೆ ಅದರೊಂದಿಗೆ ಪ್ರೀತಿ ಹುಟ್ಟಿತು. ಮೆಲ್ಲಗೆ ಸಮಿಪಿಸಿ ಅದರ ಮೈದಡವಿದ. ಕುದುರೆ ಕೆನೆಯತೊಡಗಿತು. ಶಬ್ದ ಕೇಳೀ ಕಾವಲ ಭಟರು ಎಚ್ಚತ್ತರು. ಅವರು ಕೋದನನ್ನು ಹಿಡಿದು ರಾಜಸನ್ನಿಧಿಗೆ ತಲಪಿಸಿದರು.

ಹೊನ್ನಕುದುರೆಯನ್ನು ಕದಿಯಲು ಬಂದ ಕೋದನನ್ನು ಗಲ್ಲಿಗೇರಿಸಲು ರಾಜ ವಿಧಿಸಿದ.

'ನನ್ನನ್ನು ಗಲ್ಲಿಗೇರಿಸದಿರಿ, ದಯದೋರಿ ತಾವು ಮಹಿಸಿಕೊಡುವ ಯಾವ ಕೆಲಸ ಮಾಡಲೂ ನಾನು ಸಿದ್ದ; ಕೋಂದ ಅಳುತ್ತ ಹೇಳಿದ.

ರಾಜನಿಗೆ ಕನಿಕರ ಉಂಟಾಯಿತು.

'ಒತ್ತಿನ ರಾಜ್ಯದ ರಾಜನ ಅರಮನೆಯಲ್ಲಿ ಅತಿ ಸುಂದರಿಯಾದ ಒಬ್ಬ ರಾಜಕುಮಾರಿ ಇದ್ದಾಳೆ. ಅವಳನ್ನು ಒಂದು ವಾರದ ಒಳಗೆ ತಂದುಕೊಟ್ಟರೆ ನಿನ್ನನ್ನು ಬಿಟ್ಟುಬಿಡುವೆ' ಎಂದು ರಾಜ ಹೇಳಿದ.

ಸದ್ಯಕ್ಕೆ ಬದುಕಿಕೊಂಡೆನೆಂಬ ಸಂತಸದೊಂದಿಗೆ ಕೋಂದ ಆ ಕೆಲಸವನ್ನು ವಹಿಸಿಕೊಂಡ. ಅರಮನೆಯಿಂದ ಹೊರಬಂದು ವಷಾದದಲ್ಲಿ ಕುಳಿತ ಕೋಂದನನ್ನು ಕಂಡು ನರಿ ವಿಷಯ ಕೇಳಿತು. ನಡೆದದ್ದನ್ನೆಲ್ಲ ಕೋಂದ ವಿವರಿಸಿದ. ನರಿ ಅವನಿಗೆ ಸಮಾಧಾನ ಹೇಳಿತು–

'ದಾರಿಯಿದೆ. ನನ್ನ ಬೆನ್ನ ಮೇಲೆ ಏರಿ ಕೂತುಕೊ. ರಾಜಕುಮಾರಿಯ ಅರಮನೆಯಲ್ಲಿ ನಾನು ಇಳಿಸುವೆ'.

ಪಯಣ ಮುಂದುವರಿಯಿತು. ಅರ್ಧರಾತ್ರಿ ಮೇಳೆಗೆ ರಾಜಕುಮಾರಿಯ ಅರಮನೆ ಬಳಿಗೆ ತಲಪಿತು. ಅರಮನೆಯ ಒಳಕ್ಕೆ ತಲಪಿಸುವ ದಾರಿಯನ್ನೆಲ್ಲ ನರಿ ಹೇಳಿಕೊಟ್ಟು ಮನವರಿಕೆ ಮಾಡಿಸಿತು. ಹೀಗೆ ಉಪದೇಶಿಸಿತು–

'ಉದ್ಯಾನದಲ್ಲಿ ರಾಜಕುಮಾರಿ ಒಬ್ಬಳೇ ಕುಳಿತಿರುತ್ತಾಳೆ. 'ಜತೆಗೆ ಬಾ' ಎಂದು ಮಾತ್ರ ಹೇಳಿ ಅವಳ ಕೈಹಿಡಿದು ಒಡನೆಯೆ ಅರಮನೆಯಿಂದ ಹೊರಕ್ಕೆ ಬರಬೇಕು. ಅವಳಲ್ಲಿ ಪ್ರೀತಿಯುಂಟಾಗಿ ಮಾತನಾಡುವುದಕ್ಕೆಲ್ಲ ನಿಲ್ಲಬಾರದು'.

ಕೋಂದನ್ 'ಹಾಗೆಯೆ ಆಗಲಿ' ಎನ್ನುತ್ತ ಅರಮನೆಯ ಒಳಕ್ಕೆ ಹೋದ. ಹೇಳಿದಂತೆ ರಾಜಕುಮಾರಿ ಉದ್ಯಾನದಲ್ಲಿ ಒಬ್ಬಳೇ ಇದ್ದಳು. ಅವಳನ್ನು ಕಂಡ ಕೋಂದನಿಗೆ ಅವಳಲ್ಲಿ ಸ್ನೇಹವುಂಟಾಯಿತು. ಅವಳ ಬಳಿಗೆ ಹೋಗಿ ಆಕೆಯ ಪ್ರೇಮವನ್ನು ಯಾಚಿಸಿದ.

'ನಾನು ಈಗ ಬರುವೆ. ಅಪ್ಪಾಜಿಯಲ್ಲಿ ಒಂದು ಮಾತನ್ನು ಕೇಳಲಾ?' ಅವಳೆಂದಳು.

ಕೋಂದ ಅದಕ್ಕೊಪ್ಪಿದ.

ರಾಜಕುಮಾರಿ ಒಡನೆಯೆ ರಾಜನ ಬಳಿಗೆ ಹೋಗಿ ವಿಷಯ ತಿಳಿಸಿದಳು. ಉದ್ಯಾನಕ್ಕೆ ಒಬ್ಬ ಬಂದಿದ್ದಾನೆಂದೂ ತನ್ನೊಂದಿಗೆ ಒಯ್ಯಲು ಶ್ರಮಿಸುವನೆಂದು ಹೇಳಿದಳು.

'ಯಾರಲ್ಲಿ, ಅವನ್ನನ್ನು ಹಿಡಿದು ರಾಜಸನ್ನಿಧಿಗೆ ತಲಪಿಸಿರಿ' ರಾಜ ಆಳುಗಳಿಗೆ ಆಜ್ಞೆ ಮಾಡಿದ. ಆಳುಗಳು ಕೋಂದನನ್ನು ಹಿಡಿದು ಕಟ್ಟಿ ರಾಜನ ಮುಂದೆ ನಿಲ್ಲಿಸಿದರೂ ರಾಜ ನೇಣಿಗೇರಿಸಿ ಕೊಲ್ಲಲ್ಲು ಆದೇಶವಿತ್ತ.

ಕೋಂದ ದಯದೋರುವಂತೆ ರಾಜನಲ್ಲಿ ಅಂಗಲಾಚಿಸಿದ– 'ತಮ್ಮ ಯಾವುದೆ ಅಪೇಕ್ಷೆಯನ್ನು ನಾನು ನೆರವೇರಿಸಿಕೊಡುವೆ. ನನ್ನನ್ನು ಕೊಲ್ಲಬಾರದು'.

ರಾಜ ಹೇಳಿದ, 'ಹಾಗಾದರೆ ಒಂದು ಮಾಡಬಹುದು', ದೂರದಲ್ಲಿ ಕಾಣುವ ಬೆಟ್ಟವನ್ನು ತೋರಿಸಿ, 'ಆ ಬೆಟ್ಟವನ್ನು ಒಂದು ವಾರದೊಳಗೆ ಕಡಿದು ಬಯಲನ್ನಾಗಿ ಮಾಡಬೇಕು'. ಏನಾದರೂ ಒಂದು ವಾರದ ಸಮಯ ಇದೆಯಲ್ಲ, ಏನಾದರೂ ಮಾಡಬಹುದು ಎಂದು ಸಮಾಧಾನಪಟ್ಟುಕೊಂಡ.

ಹೊರಗೆ ಬಂದಾಗ ನರಿ ಎದುರಿನಲ್ಲೆ ನಿಂತಿದೆ. 'ರಾಜಕುಮಾರಿ ಎಲ್ಲಿ?' ಕೇಳಿತು ನರಿ.

ಆದದ್ದನ್ನೆಲ್ಲ ಕೋಂದ ವಿವರಿಸಿದ. ನರಿ ಕೋದನನ್ನು ಬೆಟ್ಟದ ಬಳಿಗೆ ಒಯ್ದಿತು ಹಾಗೂ ಅಲ್ಲಿಂದ ಹೊರಟುಹೋಯಿತು. ಕೋಂದ ಬೆಟ್ಟವನ್ನು ಕಡಿದ ಮಟ್ಟಸ ಮಾಡತೊಡಗಿದ. ಆರು ದಿನ ಮೈಮುರಿದು ದುಡಿದರೂ ಬೆಟ್ಟ ಮಾತ್ರ ಹಾಗೆಯೆ ನಿಂತಿದೆ. ಇನ್ನು ಬಾಕಿ ಉಳಿದಿರುವುದು ಒಂದೇ ರಾತ್ರ. ನಾಳೆ ಕೊನೆಗೊಳ್ಳುವ ತನ್ನ ಬದುಕಿನ ಬಗೆಗೆ ಆಲೋಚಿಸಿ ಕೋಂದ ಬೇಯತೊಡಗಿದ. ರಾತ್ರಿ ಯಾವಾಗಲೊ ನಿದ್ರೆ ಬಂದುಬಿಟ್ಟಿತು. ಬೆಳಗ್ಗೆ ಎದ್ದು ನೋಡುವಾಗ ಬೆಟ್ಟ ಕಾಣಿಸಲಿಲ್ಲ. ಎಲ್ಲ ಬಯಲಾಗಿ ಮಾರ್ಪಟ್ಟಿತ್ತು. ಎಲ್ಲವೂ ನರಿಯ ಮಾಯಾಜಾಲವಾಗಿತ್ತು.

ಕೋಂದನೂ ನರಿಯೂ ಅರಮನೆಗೆ ಹೋಗಿ ಬೆಟ್ಟವನ್ನು ಬಯಲಾಗಿ ಮಾಡಿರುವುದನ್ನು ತಿಳಿಸಿ ರಾಜಕುಮಾರಿಯನ್ನು ಕೊಡೆಂದು ಕೇಳಿದ. ರಾಜಕುಮಾರಿಯನ್ನೂ ಕೋಂದನನ್ನೂ ಬೆನ್ನಲ್ಲಿ ಏರಿಸಿಕೊಂಡು ನರಿ ಹೊನ್ನಕುದುರೆ ಇರುವ ಅರಮನೆಗೆ ತಲಪಿಸಿತು. ರಾಜಕುಮಾರಿಯನ್ನು ತಂದುದಾಗಿ ರಾಜನಿಗೆ ತಿಳಿಸಿದ. ರಾಜಕುಮಾರಿಯನ್ನು ಹೊನ್ನಕುದುರೆ ಮೇಲೆ ಏರಿಸಿ ಕೋಂದ ಕೂಡಲೆ ಅಲ್ಲಿಂದ

ಹೊನ್ನಹಕ್ಕಿ ಇರುವ ಅರಮನೆಗೆ ಧಾವಿಸಿದ. ಅಲ್ಲಿ ಹೊನ್ನಕುದುರೆ ತಂದ ವಿಚಾರ ತಿಳಿಸಿ ಹೊನ್ನಹಕ್ಕಿಯನ್ನೂ ಹೊನ್ನಮಾವುಗಳನ್ನು ಹಿಡಿದು ಹೊನ್ನಕುದುರೆಯನ್ನೇರಿ ಅಲ್ಲಿಂದ ತನ್ನ ನಾಡಿಗೆ ಮರುಪ್ರಯಾಣ ತೊಡಗಿದ. ನರಿ ಅವರಿಂದ ವಿದಾಯ ಬಯಸಿ ಜಾಗಖಾಲಿ ಮಾಡಿತು.

ಹಿಂದಿರುಗುವ ದಾರಿಯಾಗಿ ಕೋಂದ ಛತ್ರಕ್ಕೆ ಬಂದ. ತನ್ನ ಅಣ್ಣಂದಿರನ್ನು ಕಂಡು ನಡೆದುದನ್ನೆಲ್ಲ ವಿವರಿಸಿದ. ಅಣ್ಣಂದಿರನ್ನು ಒಡಗೊಂಡು ಅರಮನೆಗೆ ಮರಳತೊಡಗಿದ.

ದಾರಿಯ ನಡುವೆ ಅವರು ಒಂದೆಡೆ ವಿಶ್ರಮಿಸಿದರು. ಅಲ್ಲೊಂದು ಹಾಳುಬಾವಿ ಇತ್ತು. ಅಣ್ಣಂದಿರು ಕೋಂದನನ್ನು ಹಾಳುಬಾವಿಗೆ ತಳ್ಳಿ ರಾಜಕುಮಾರಿಯೊಂದಿಗೆ ಅರಮನೆಗೆ ಹೋದರು. ಹೊನ್ನಕುದುರೆ, ಹೊನ್ನಹಕ್ಕಿ, ಹೊನ್ನಮಾವುಗಳು, ರಾಜಕುಮಾರಿ, ಎಲ್ಲವನ್ನು ಕಂಡು ರಾಜನಿಗೆ ತುಂಬ ಸಂತೋಷವಾಯಿತು.

ಪಾಪ, ಕೋಂದ ಮೂರು ದಿನಗಳಿಂದ ಹಾಳುಬಾವಿಯಲ್ಲೆ ಸಹಾಯಕ್ಕಾಗಿ ಕೂಗಿ ಕರೆದ. ಯಾರು ಕೇಳಿಯಾರು? ಕೊನೆಗೆ ಆ ದಾರಿಯಾಗಿ ಬಂದ ನರಿಗೆ ಕೋಂದನ ದನಿಯ ಗುರುತು ಸಿಕ್ಕಿತು. ಒಂದು ಬಳ್ಳಿಯನ್ನು ಇಳಿಸಿಕೊಟ್ಟಿತು. ಅದನ್ನು ಹಿಡಿದು ಮೇಲೇರಿ ಕೋಂದ ಪಾರಾದ.

ಕೋಂದ ನಡೆದುದನೆಲ್ಲ ವಿವರಿಸಿದ. ನರಿ ಹೇಳಿತು, ನೀನು ನೇರ ಮನೆಗೆ ಹೋದರೆ ಅಣ್ಣಂದಿರು ನಿನ್ನ ಕೊಂದುಹಾಕುತ್ತಾರೆ. ಆದ್ದರಿಂದ ವೇಷ ಬದಲಿಸಿ ಅರಮನೆಗೆ ಸೇರಬೇಕು. ಸೂಕ್ತಕಾಲದಲ್ಲಿ ರಾಜನಿಗೆ ಎಲ್ಲವನ್ನು ಮನವರಿಕೆ ಮಾಡಿಕೊಡಬೇಕು'.

ಒಬ್ಬ ಭಿಕ್ಷುಕನ ವೇಷದಲ್ಲಿ ಕೋಂದ ಅರಮನೆಯ ಬಾಗಿಲಿಗೆ ತಲುಪಿದ. ಪಹರೆಯವರು ಅವನನ್ನು ಒಳಹೊಗಲು ಬಿಡಲಿಲ್ಲ. ಕಾವಲುಗಾರರ ಕಣ್ಣು ತಪ್ಪಿಸಿ ನಿಮಿಷದೊಳಗೆ ಕೋಂದ ಒಳಕ್ಕೋಡಿದ. ರಾಜನನ್ನು ಹಿಡಿದು ಅಳುತ್ತ ನಡೆದುದೆಲ್ಲವನ್ನೂ ವಿವರಿಸಿಸ. ಹಾಗೆ ಹೊನ್ನ ಮಾವು, ಹೊನ್ನಗಿಣಿ, ಹೊನ್ನಕುದುರೆ ಮತ್ತು ರಾಜಕುಮಾರಿ ದೊರೆತದ್ದು. ಕೊನೆಯಲ್ಲಿ ಅಣ್ಣಂದಿರು ತನ್ನನ್ನು ಹಾಳುಬಾವಿಗೆ ತಳ್ಳಿ ಎಲ್ಲವನ್ನು ಸ್ವಾಧೀನಪಡಿಸಿದರು ಎಂದು ವಿಶದವಾಗಿ ಹೇಳಿದ.

ಇದನ್ನು ಕೇಳಿ ರಾಜ ಕೋಪದಲ್ಲಿ ಕಿಡಿಕಿಡಿಯಾದ. ರಾಮನನ್ನೂ, ಕೃಷ್ಣನನ್ನೂ ನೇಣಿಗೇಇಸಿ ಕೊಲ್ಲಲ್ಲು ವಿಧಿಸಿದ.

ಕೋಂದನಿಗೆ ಸಂಕಟವಾಯಿತು. ಅವನು ತಂದೆಯಲ್ಲಿ ಬಿನ್ನವಿಸಿದ, 'ಅಣ್ಣಂದಿರಿಗೆ ಮಾಫು ಕೊಡಬೇಕು'.

ಕೊನೆಗೆ ರಾಜ ಇಬ್ಬರಿಗೂ ಕ್ಷಮಾದಾನ ನೀಡಿದ. ರಾಜ ಕೋಂದನೊಂದಿಗೆ ರಾಜಕುಮಾರಿಯ ಮದುವೆ ನಡೆಸಿದ. ಅವನಿಗೆ ಅರ್ಧರಾಜ್ಯವನ್ನು ನೀಡಿ ರಾಜನನ್ನಾಗಿ ಮಾಡಿದ. ಹಾಗೆ ರಾಜನೂ, ಮೂವರು ಮಕ್ಕಳೂ ರಾಜಕುಮಾರಿಯೂ ಸಂತಸದಲ್ಲಿ ಬಹುಕಾಲ ಬಾಳಿದರು.

ಕತೆಯ ಸ್ವಭಾವ

ತಮ್ಮದೆ ಸಾಂಘಿಕತೆಯನ್ನು ಕಾಯ್ದುಕೊಳ್ಳುತ್ತ, ಪಾಠಾಂತರ, ಮೌಖಿಕ ಪರಂಪರೆ ಮೊದಲಾದ ಜಾನಪದದ ಸಾಮಾನ್ಯ ಸ್ವಭಾವಗಳನ್ನು ಒಳಗೊಂಡಿರುವ ಕಥಾರೂಪಗಳು ನಾಡೋಡಿ (ಗ್ರಾಮೀಣ) ಕಥೆಗಳು. ಸಾಂಘಿಕತೆಯಿಂದ ಮೈವೆತ್ತುಕೊಳ್ಳುವ ಈ ಬಗೆ ಜತೆಗಳಲ್ಲಿ ಅವರದೆ ದೂರುಗಳು, ಕನಸುಗಳು, ಹಾರೈಕೆಗಳು ಇವೇ ಹಲವು ವೇಷಗಳಲ್ಲಿ ಕಾಣಿಸಿಕೊಳ್ಳೂವುದು.

ಭಾಷೆಯ ಮೇಲೆ ಪ್ರಭುತ್ವ ಇರುವವರಿಗೆಲ್ಲ ಕತೆ ಏನು ಎಂದು ತಿಳಿಯಲಾದೀತು. ಇವರಿಗೆಲ್ಲ ನಿಷ್ಪ್ರಯಾಸವಾಗಿ ಒಂದು ಕತೆಯನ್ನು ಹೇಳುವುದಕ್ಕೊ, ಕಥೆಯನ್ನು ಅರ್ಥಮಾಡಿಕೊಳ್ಳುವುದಕ್ಕೊ ಸಾಧ್ಯವಾಗುತ್ತದೆ. ಆದರೆ ಕಥೆ ಎಂದರೇನು ಎಂದಾಗಲಿ, ಕಥಾತ್ವ ಎಂದರೇನು ಎಂದಾಗಲಿ ಇನ್ನೊಬ್ಬರಿಗೆ ತಿಳಿಸಿಕೊಡುವುದು ಸುಲಭವಲ್ಲ.

ಅರಬಿಕತೆ, ಪಂಚತಂತ್ರ ಕತೆ, ಈಸೋಪನ ಕತೆ, ಬೀರ್‌ಬಲ್ ಕತೆ, ತೆನಾಲಿ ರಾಮನ ಕತೆ, ವಿಕ್ರಮಾದಿತ್ಯನ ಕತೆ, ಪೌರಾಣಿಕ ಕತೆ, ಮಾಂತ್ರಿಕ ಕತೆ, ಅದ್ಭುತ ಕತೆ, ಮೊದಲಾದ ಅನೇಕಾನೇಕ ಗ್ರಾಮೀಣ ಕತೆಗಳು ನಮ್ಮಲಿವೆ. ಈ ಎಲ್ಲ ಕತೆಗಳ ಆರಂಭ ಹೆಚ್ಚುಕಡಿಮೆ ಒಂದೇ ಸ್ವಭಾವದೊಂದಿಗಾಗಿರುತ್ತದೆ; ಒಂದಾನೊಂದು ಕಾಲದಲ್ಲಿ ಒಬ್ಬ ರಾಜ. . . . ರಾಜನಿಗೆ ಮಕ್ಕಳಾಗಲಿಲ್ಲ. . . ಎಂಬ ಹಾಗೆ.

ಮಕ್ಕಳಾದರೆ ಅವರಿಗೆ ಒಪ್ಪುವ ವಧುಗಳೊ, ವರಂದಿರೊ ಎಲ್ಲದಿರುವುದು. ಅಲ್ಲವಾದರೆ ಅವರು ಒಳ್ಳೆಯ ಸ್ವಭಾವದವರು ಅಲ್ಲದಿರುವುದು. ಅದೂ ಅಲ್ಲವಾದರೆ ಅವರನ್ನು ಯಾರಾದರೂ ಎತ್ತಿ ಒಯ್ಯುವುದು ಈ ಮೊದಲಾದವೆಲ್ಲ ಹೆಚ್ಚಿನ ಕಥೆಗಳಲ್ಲಿ ಇರುವುದು ಸ್ವಾಭಾವಿಕ. ಸಿಂಹ ಶಕ್ತಿಶಾಲಿಯಾದರೂ ಅಹಂಕರವುಳ್ಳದ್ದು ಆಗಿರುವುದು. ಮೊಲ ಬೇಗ ಇರುವ ಪ್ರಾಣಿಯಾದರೂ ಅಹಂಕಾರದಿಂದಿರುವುದು. ಆಮೆ ಅಹಂಕಾರ ಇಲ್ಲದಿದ್ದರೂ ವೇಗವಿಲ್ಲದ ಜೀವಿಯಾಗಿರುವುದು..... ಹೀಗೆ ಇರುವಿಕೆಯಿಂದಲೊ ಇಲ್ಲದಿರುವಿಕೆಯಿಂದಲೊ ರೂಪಗೊಳ್ಳುವ ಯಾವುದಾದರೂ ಒಂದು ಪ್ರಶ್ನೆಯನ್ನು ಮುಂದಿರಿಸಿಕೊಂಡೇ ಈ ಕಥೆಗಳೆಲ್ಲವೂ ಬೆಳೆದು ಬರುವುದು.

ಯಾವುದಾದರೊಂದು ವಾಸ್ತವತೆಯ ಇಲ್ಲದಿರುವಿಕೆಯಿಂದಾಗುವ ನ್ಯೂನಾವಸ್ಥೆಯಿಂದ ಕಥೆಯ ಆರಂಭವಾಗಿರುತ್ತದೆ. ಹೀಗೆ ಒಂದು ಅವಸ್ಥೆಯಿಂದ ಮೊದಲುಗೊಳ್ಳುವ ಕತೆ ಅದರ ಪರಿಹಾರದ ಕಡೆಗೆ ಸರಿಯುವುದು. ಅಡೆತಡೆಗಳಿಗೆ ಪ್ರವೇಶಿಸಿ ಹೆಚ್ಚು ಸಂಕೀರ್ಣತೆಗೆ ಸಿಲುಕುವುದು, ಆದರೆ ಇದನ್ನೆಲ್ಲ ಮೀರಿ ಸಾಗಿ, ಕಥಾರಂಭದಲ್ಲಿ ಇಡುವ ಪ್ರಶ್ನೆಗಳೆಲ್ಲ ಪರಿಹಾರವಾಗುವ ಘಟ್ಟಕ್ಕೆ ತಲಪಿ ಸಮಾಪನಗೊಳ್ಳುವುದು ಪದ್ಧತಿ. ಸಂಕ್ಷಿಪ್ತವಾಗಿ ಹೇಳುವುದಾದರೆ ಪ್ರಶ್ನೆಯೂ ಪ್ರಶ್ನೆಪರಿಹಾರವೂ ಒಳಗೊಂಡ ಆಶಯಘಟನೆ ನ್ಯೂನದಿಂದ ಆಧಿಕ್ಯಕ್ಕೆ ಸರಿಯುವ ಸ್ವರೂಪಘಟನವೇ ಕಥೆ ಎಂದು ಹೇಳಬಹುದು. ಆದರೆ ನ್ಯೂನದಿಂದ ಆಧಿಕ್ಯಕ್ಕೆ ನೇರ ಪ್ರಯಾಣ ಮಾಡುವ ಪ್ರಶ್ನೆಯೂ ಪರಿಹಾರವೂ ಎಂದೂ ಒಂದು ಕಥೆಯಾಗುವುದಿಲ್ಲ. ಹೂರಣದಲ್ಲೂ, ಸ್ವರೂಪಘಟನೆಯಲ್ಲೂ, ಅದು ಇದಿರಿಸುವ ಅಡೆತಡೆಗಳೂ, ಅವನ್ನು ಮೀರುವುದೂ,

ಅದು ನೀಡುವ ಸಂಕೀರ್ಣತೆಯೂ ಕತೆಯನ್ನು ಕತೆಯನ್ನಾಗಿ ಮಾಡುವವು. ಅಥವಾ ಅವೇ ಕಥೆಗೆ ಕಥಾತ್ವವನ್ನು ನೀಡುವವುಗಳು. ಸಂಕೀರ್ಣವಾದ ಘಟನವನ್ನೆ ವೈಶಿಷ್ಟ್ಯಪೂರ್ಣ ಅವಿಷ್ಕಾರ ಎಂದು ಆಗ ಸೂಚಿಸಿರುವುದು.

ಇನ್ನು 'ಕೋಂದ ಮತ್ತು ನರಿ' ಕಥೆಯನ್ನು ನೋಡುವ. ಉದ್ಯಾನದಲ್ಲಿ ಅತ್ಯಂತ ಅಮೂಲ್ಯವಾದ ಹೊನ್ನಮಾವು ನಗೂಢವಾಗಿ ಕಣ್ಮರೆಯಾಗುವುದು ಈ ಕಥೆಯಲ್ಲಿರುವ ಪ್ರಶ್ನೆ ಹೊನ್ನಮಾವು ನಷ್ಟವಾಗುವ ಮೂಲಕ ಇರುವ ನ್ಯೂನಾವಸ್ಥೆಯಿಂದ ಅವುಗಳನ್ನು ಮರಳಿ ಪಡೆದುಕೊಳ್ಳುವ ಅಧಿಕ್ಯಾವಸ್ಥೆಗೆ ನಡೆಯುವ ಪ್ರಯಾಣವೆ ಈ ಕಥೆ.

ಒಂದು ಕತೆಯೂ ಪ್ರಶ್ನೆಗೆ ನೇರ ಪ್ರವೇಶ ಮಾಡುವುದೊ ಪ್ರಶ್ನೆಯಿಂದ ನೇರ ತೊಡಗುವುದೊ ಮಾಡುವುದಿಲ್ಲ. ಇದು ಕತೆಗಳ ವೈಶಿಷ್ಟ್ಯ. ಕಥೆಯೊಳಗಿನ ಪ್ರಶ್ನೆಯ ಪರಿಸರಗಳ ಕುರಿತಾಗಿ ಸೂಚನೆ ನೀಡುತ್ತ ಮೆಲ್ಲಗೆ ಮೆಲ್ಲಗೆ ಪ್ರಶ್ನೆಯೊಳಕ್ಕೆ ನಡೆಸುವುದು ಎಂಬುದೇ ಸಾಮಾನ್ಯವಾಗಿ ಕಂಡುಬುರುವುದು. 'ಒಂದಾನೊಂದು ಕಾಲದಲ್ಲಿ ಒಬ್ಬ ರಾಜ..... ಮನೋಹರವಾದ ಉದ್ಯಾನ, ರಾಜ ಮತ್ತು ಉದ್ಯಾನಕ್ಕಿರುವ ಸಂಬಂಧ, ಉದ್ಯಾನದಲ್ಲಿ ಕಾವಲು ಇಡುವುದು ಇವುಗಳಿಂದ ತೊಡಗಿ ಮಾವಿನ ಫಲ ನಷ್ಟವಾಗುವ ವರೆಗಿನ ಇತರ ಎಲ್ಲ ವಿವರಣೆ ಕಥೆಯೊಳಗಿನ ಪ್ರಶ್ನೆಯ ಪರಿಸರದ ಕುರಿತ ವಿವರಣೆ ಮಾತ್ರ. ವಾಸ್ತವದಲ್ಲಿ ಕತೆ ತೊಡಗುವುದು ಹೊನ್ನಮಾವು ಕಾಣೆಯಾಗುವಲ್ಲಿಂದಲೇ.

ಹೊನ್ನಮಾವು ನಷ್ಟವಾಗುವುದು ಎಂಬಂತೆಯೆ ಇನ್ನೊಂದು ಪ್ರಶ್ನೆಯನ್ನೂ ಈ ಕತೆ ಒಳಗೊಂಡಿದೆ. ಸತ್ಯವಂತನೂ ಪ್ರಮಾಣಿಕನೂ ಆದರೂ ರಾಜನ ಕಿರಿಯ ಮಗ ಅತ್ಯಂತ ಕೊನೆಗೆ ಪರಿಗಣನೆ ಪಡೆಯುತ್ತಾನೆ. ಅಥವಾ ಕಿರಿಯ ಮಗನಿಗೆ ಕುಟುಂಬದಲ್ಲಿ ಅತ್ಯಂತ ಕೊನೆಗಷ್ಟೆ ಪರಿಗಣನೆ ದೊರಕೀತು ಎಂಬುದೇ ಆ ಪ್ರಶ್ನೆ. ಕೊಟ್ಟಕೊನೆಗೆ ಸೋದರರ ವರೋಧವನ್ನು ಮೀರಿ ಅವನು ವಿವಾಹಿತನೂ ರಾಜ್ಯಾಧಿಕಾರ ಉಳ್ಳವನೂ ಆಗುವುದರೊಂದಿಗೆ ಈ ಪ್ರಶ್ನೆ ಪರಿಹಾರ ಕಾಣುತ್ತದೆ. ಕೋಂದ ಮೂರು ಬಾರಿ ರಾಜಗುರುಗಳಿಂದ ಹಿಡಿಯಲ್ಪಡುವುದು, ಕೊನೆಯಲ್ಲಿ ಹಾಳು ಬಾವಿಗೆ ಬೀಳುವುದು ಪ್ರಶ್ನೆ ಪರಿಹಾರಕ್ಕೆ ಕಥೆಯಲ್ಲಿ ಕಾಣುವ ಅಡೆತಡೆಗಳು. ಈ ಪ್ರತಿಬಂಧಗಳೇ ಪ್ರಸ್ತುತ ಕಥೆಗೆ ಸಂಕೀರ್ಣತೆಯ ಪರಿವೇಶ ನೀಡುವುದು. ನರಿ ನೀಡುವ ಮುಂಗಾಣ್ಕೆಯ ಎಚ್ಚರಿಕೆಗಳನ್ನು ಅವಗಣಿಸಿದುದರಿಂದಲೆ ಹಲವು ಬಾರಿ ಕೋಂದ ಅಪಾಯಕ್ಕೆ ಸಿಲುಕಿರುವುದು. ಹೊಸ ಪ್ರತಿಜ್ಞೆಗಳನ್ನು ಕೈಗೊಳ್ಳುವುದರಿಂದಲೂ ನರಿಯ ಸಹಾಯದಿಂದಲೂ ಮಾತ್ರ ಅವುಗಳಿಂದಲೆಲ್ಲ ಕೋಂದ ಪಾರಾಗುವುದು.

ಪ್ರಸ್ತುತ ಕತೆಯಲ್ಲಿ ನಾಯಕ ನಾಲ್ಕು ಬಾರಿ ಬಂಧನಕ್ಕೊಳಗಾಗುತ್ತಾನೆ ಹಾಗೂ ಪಾರಾಗುತ್ತಾನೆ. ಇವು ಮೇಲಿಂದ ಮೇಲೆ ನೋಡಿದಾಗ ವ್ಯತ್ಯಸ್ತವೆಂದು ಎಣಿಸಬಹುದಾದರೂ ಅವು ನೆರವೇರಿಸುವ ಧರ್ಮವನ್ನು ಲೆಕ್ಕಕ್ಕೆ ತೆಗೆದುಕೊಂಡಾಗ, ನಾಲ್ಕು ಬಾರಿ ಪುನರಾವರ್ತನೆಗೊಳ್ಳುವ ವಿಭಿನ್ನ ಘಟನೆಗಳಿಗೂ ಒಂದೇಸ್ವಭಾವೆಂದು – ಸರಳವೂ ಋಜುವೂ ಆದ ಕಥಾಗತಿಯನ್ನು ಸಂಕೀರ್ಣತೆಗೆ ತಿರುಗಿಸಿಬಿಟ್ಟು ಕಥೆಯನ್ನು ಬೆಳೆಸಿದ್ದಾಗಿದೆ ಎಂದು ಕಾಣಲು ಸಾಧ್ಯವಿದೆ. ಮುನ್ನೆಚ್ಚರಿಕೆ ಪ್ರತಿಜ್ಞೆ ಇವುಗಳ ಉಲ್ಲಂಘನೆ

ಇವುಗಳಿಂದ ಬಂದು ಬೀಳುವ ಅಪಾಯಕರ ಅವಸ್ಥೆ, ಹೊಸ ಪ್ರತಿಜ್ಞೆಯ ಮೂಲಕವೊ, ಅನಿರೀಕ್ಷಿತ ಕೇಂದ್ರಗಳಿಂದ ಬರುವ ಸಹಾಯದಿಂದಲೊ ಆದ ಪಾರಾಗುವಿಕೆ, ವಿವಾಹ ಮೊದಲಾದ ಘಟನೆಗಳು ಈ ಕಥೆಯಲ್ಲಿ ಇರುವ ಹಾಗೆ ಹಲವು ಕಥೆಗಳಲ್ಲೂ ಒಂದೇ ಧರ್ಮದೊಂದಿಗೆ ಪುನರಾವರ್ತಿಸುವುದನ್ನೂ ಕಾಣಬಹುದು. ಭಾಷೆಗೆನ್ನುವಂತೆ ಕಥೆಗೂ ಒಂದು ಸಾಮಾನ್ಯ ವ್ಯಾಕರಣವಿರುವುದರಿಂದಲೇ ಹೀಗೆ ಸಂಭವಿಸುವುದು. 'ಅಯ್ಯೋ! ಹೀಗಾ ಕತೆ? ಇದು ಕತೆಯಲ್ಲ!' ಎಂದು ಪುಟ್ಟ ಮಕ್ಕಳೂ ಒಂದು ಕೆಟ್ಟ ಕತೆಯ ಬಗೆಗೆ ಪ್ರತಿಕ್ರಿಯೆ ನೀಡುವುದು ಕಥೆಯ ಈ ವ್ಯಾಕರಣ ಅವರಿಗೆ ತಿಳಿದಿರುವ ಕಾರಣವೇ ಆಗಿದೆ. ದಿನವೂ ಹೊಸ ಹೊಸ ಕತೆ ಹೇಳುವ ಮುತ್ತಜ್ಜಿಗೂ ಕಥೆಯ ವ್ಯಾಕರಣ ಗೊತ್ತು. ಆದ್ದರಿಂದ ಈ ವ್ಯಾಕರಣದ ಮೂಲಕ ಘಟನೆಗಳಿಗೆ ಕಥಾತ್ವವನ್ನು ವರ್ಗಾಯಿಸುವುದನ್ನೆ ಅವರು ಮಾಡುವುದು.

ಕಥಾಪಾತ್ರಗಳು

ಗ್ರಾಮೀಣ ಕತೆಗಳಲ್ಲಿ ಬರುವ ಕಥಾಪಾತ್ರಗಳನ್ನು ಸಾಮಾನ್ಯವಾಗಿ 'ನಾಯಕ', 'ಪ್ರತಿನಾಯಕ' ಮತ್ತು 'ದಾತಾರ' ಎಂದು ವರ್ಗೀಕರಿಸಬಹುದು. ಯಾವೊಂದು ಪ್ರಶ್ನೆಯನ್ನು ಕೇಂದ್ರೀಕರಿಸಿ ಕಥೆ ಬೆಳೆಯುವುದೊ ಆ ಪ್ರಶ್ನೆಯ ಪರಿಹಾರ ಶ್ರಮಗಳಿಗೆ ನೇತೃತ್ವ ನೀಡುವ ಕಥಾಪಾತ್ರವೆ ನಾಯಕ. ನಾಯಕನ ಶ್ರಮಗಳನ್ನೆಲ್ಲ ಹಾನಿಗೊಳಿಸಲು ನಿಂತು ಅವನನ್ನು ಸೋಲಿಸಲು ಶ್ರಮಿಸುವ ಕಥಾಪಾತ್ರವೆ ಪ್ರತಿನಾಯಕ. ಇವರಿಬ್ಬರ ವಿಭಿನ್ನ ಕಿಯೆಗಳೊಳಗಿನ ಸಂಘರ್ಷದ ಮೂಲಕವೆ ಕಥೆ ಬೆಳೆಯುವುದು. ದುರಂತ ಕತೆಗಳನ್ನು ಬಿಟ್ಟರೆ ಮತ್ತೆಲ್ಲ ಕತೆಗಳಲ್ಲಿ ಕೊಟ್ಟಕೊನೆಯ ವಿಜಯ ಹೆಚ್ಚಾಗಿ ನಾಯಕನದಾಗಿರುತ್ತದೆ. ಕೆಲ ಸಂದರ್ಭಗಳಲ್ಲಿ ನಾಯಕ ಪ್ರತಿನಾಯಕನಿಗಿಂತ ದುರ್ಬನಾಗಿರಬಹುದು. ಈ ಬಗೆ ಘಟ್ಟಗಳಲ್ಲಿ ನಾಯಕ ಮನುಷ್ಯಸಹಜವಾದ ಪರಿಮಿತಿಗಳಿಂದಾಗಿ ಪಾರಾಗಲು ಸಾಧ್ಯವಾಗದೆ ಅಪಾಯಕ್ಕೆ ಸಿಲುಕುತ್ತಾನೆ. ಅಂಥಲ್ಲಿ ನಾಯಕನಿಗೆ ಅಮಾನುಷಿಕ ಶಕ್ತಿ ಪ್ರದಾನಮಾಡಿ, ಪ್ರತಿನಾಯಕನಿಗೆ ಸಮಬಲನಾಗಲು ಸಹಾಯ ಮಾಡುವ ಕಥಾಪಾತ್ರಗಳು ಬರುತ್ತವೆ. ಈ ಕಥಾಪಾತ್ರಗಳನ್ನೆ 'ದಾತಾರ' ಎಂಬ ವರ್ಗದಲ್ಲಿ ಗುರುತಿಸುವುದು. ಅದರೆ ಕೆಲವೊಮ್ಮೆ ಇಂಥ ಕಥಾಪಾತ್ರಗಳು ಪ್ರತಿನಾಯಕನ ಕಡೆಯಲ್ಲೂ ಕಾಣಿಸಿಕೊಳ್ಳುವುದುಂಟು. ದಿವ್ಯವಾದ ಆಯುಧಗಳು, ಮಾಂತ್ರಿಕ ವಸ್ತುಗಳು, ಅದ್ಭುತ ಸಿದ್ಧಿಗಳು ಇತ್ಯಾದಿಯನ್ನು ನೀಡಿ ನಾಯಕ ಪ್ರತಿನಾಯಕ ಪಕ್ಷಗಳಲ್ಲಿ ನಿಂತು ಇವರ ಮೂಲಕ ಕಥಾಗತಿಯನ್ನು ಸ್ವಧೀನಪಡಿಸಿ ಹೆಚ್ಚು ಸಂಕೀರ್ಣತೆಗೆ ತರುವ ಕಥಾಪಾತ್ರಗಳುದಾತಾರರು. ಇವುಗಳಿಗೆ ಹೊರತಾಗಿ ನಾಯಕ ಪಕ್ಷದಲ್ಲೂ ಪ್ರತಿನಾಯಕ ಕಪಕ್ಷದಲ್ಲೂ ನಿಂತುಕೊಂಡು ಕಥೆಯ ಬೆಳವಣೆಯನ್ನು ನಿಯಂತ್ರಿಸುವ ಇತರ ಉಪಪಾತ್ರಗಳನ್ನೂ ಧಾರಾಳವಾಗಿ ಕಥೆಯಲ್ಲಿ ಕಾಣಲು ಸಾಧ್ಯ.

ನಾಯಕ ಸಾಮಾನ್ಯವಾಗಿ ಕಥೆಗಳಲ್ಲಿ ಕಾಣಿಸಿಕೊಳ್ಳುವುದು ಎರಡು ರೀತಿಗಳಲ್ಲಿ. ಒಂದೇ ಆತ ತಾನಾಗಿಯೆ ಒಂದು ಸಮಸ್ಯೆಗೆ ಸಿಲುಕಿ ಅದರ ಒಳಗಿದ್ದುಕೊಂಡೇ ಪ್ರಶ್ನೆಪರಿಹರಿಸಲು ಶ್ರಮಿಸುತ್ತಾನೆ. ಅದಲ್ಲವಾದರೆ ಆತ ತಾನು ಆ ಸಮಸ್ಯೆಗೆ ಸಿಲುಕಿಕೊಳ್ಳದೆ ಹೊರಗಿದ್ದುಕೊಂಡು ಪ್ರಶ್ನೆ ಪರಿಹಾರಕ್ಕೆ

ಯತ್ನಿಸುವವನೂ ಆಗಬಹುದು. ಇವರಲ್ಲಿ ಮೊದಲ ವಿಭಾಗದವನನ್ನು 'ಅರ್ಪಿತ ನಾಯಕ' ಎಂದೂ ಎರಡನೆ ವಿಭಾಗವನನ್ನು 'ಅನ್ವೇಷಕ ನಾಯಕ' ಎಂದೂ ಕರೆಯಬಹುದು. ಕಥೆಯ ಬೆಳವಣಿಗೆಯಲ್ಲಿ ಅನ್ವೇಷಕ ನಾಯಕನು ಅರ್ಪಿತ ನಾಯಕನಾಗಿಯೂ ಅರ್ಪಿತನಾಯಕನು ಅನ್ವೇಷಕ ನಾಯಕನಾಗಿಯೂ ಬದಲುವುದನ್ನೂ ಕಾಣಬಹುದು. 'ಕೋಂದ ಮತ್ತು ನರಿ' ಕತೆಯಲ್ಲಿ ಮೊದಲಿಗೆ ಕೋಂದ ಅನ್ವೇಷಕನಾಯಕನಾದರೆ ಸ್ವಯಂ ಅಪಾಯಕ್ಕೆ ಒಳಗಾಗುವ ಸಂದರ್ಭಗಳಲ್ಲಿ ಅರ್ಪಿತನಾಯಕನಾಗಿ ಬದಲುತ್ತಾನೆ. ಪಾತ್ರಸ್ವಭಾವ ಅನುಸರಿಸಿ ಕೋಂದನ ಸಹೋದರರು ಪ್ರತಿನಾಯಕ ಪಕ್ಷಕ್ಕೆ ಬರುವಾಗ ನರಿ ದಾತಾರ ಎಂಬ ವಿಭಾದಲ್ಲಿ ಕಾಣಿಸಿಕೊಳ್ಳುತ್ತಾನೆ.

ಕಥೆಗಳು ಹಲಬಗೆ

ಕಥಾಪಾತ್ರಗಳನ್ನು ಆಧರಿಸಿ ಕಥೆಗಳನ್ನು ಪ್ರಾಣಿಕಥೆ, ಮನುಷ್ಯಕಥೆ, ಮತ್ತು ಅಲೌಕಿಕ ಕಥೆ ಎಂದು ಮೂರು ವರ್ಗಗಳಲ್ಲಿ ವಿಂಗಡಿಸಬಹುದು. ಪ್ರಾಣಿಗಳು ಮಾತ್ರ ಕಥಾಪಾತ್ರಗಳಾಗಿ ಬರುವ ಕಥೆಗಳು ಪ್ರಾಣಿಕಥೆ (ಜಂತುಕಥೆ). ಮನುಷ್ಯರು ಕಥಾಪಾತ್ರಗಳಾಗಿ ಬರುವ ಕಥೆಗಳು ಮನುಷ್ಯಕಥೆ, ಯಕ್ಷರು, ಕಿನ್ನರರು, ಗಂಧರ್ವರು ಮೊದಲಾದ ಪಾತ್ರಗಳು ಹಾಗೂ ಇತರ ಅಲೌಕಿಕ ಜೀವಿಗಳು ಕಥಾಪಾತ್ರಗಳಾಗಿ ಬರುವ ಕಥೆಗಳು ಅಲೌಕಿಕ ಕಥೆಗಳು. ಈ ಮೂರೂ ಬಗೆ ಕಥಾಪಾತ್ರಗಳು ಸಂವಿಶ್ರವಾಗಿ ಕಾಣಿಸುವ ಕತೆಗಳೂ ಇವೆ. 'ಕೋಂದ ಮತ್ತು ನರಿ' ಇದಕ್ಕೆ ಒಂದು ಉದಾಹರಣೆ. ಹೂರಣವನನು ಆಧರಿಸಿ ಕಥೆಗಳನ್ನು ನೀತಿಕಥೆ, ಮಾಂತ್ರಿಕ ಕಥೆ, ಅದ್ಭುತಕಥೆ, ಪ್ರೇಮಕಥೆ, ನಗೆಕಥೆ ಎಂದು ವರ್ಗೀಕರಿಸಲೂ ಸಾಧ್ಯ. ನೀತಿಕತೆ (ಸದಾಚಾರಕತೆ)ಗಳಲ್ಲಿ ಸಾಮಾನ್ಯವಾಗಿ ಯಾವುದಾದರೂ ನೀತಿಬೋಧೆಯೊ, ಗುಣಬೋಧನೆಯೊ, ಸಂದೇಶವೊ ಇರಬಹುದು. ಮಾಂತ್ರಿಕ ವಸ್ತುಗಳನ್ನೊ, ಮಾಂತ್ರಿಕಲೋಕದಲ್ಲಿ ನಡೆಯುವ ತರ್ಕರಹಿತ ಘಟನಾವಳಿಗಳನ್ನೂ ತುಂಬಿಕೊಂಡಿರುವವುಗಳು ಮಾಂತ್ರಿಕ ಕಥೆ. ಒಬ್ಬ ವೀರನ ಶೌರ್ಯಗಾಥೆಯಾಗಿರುತ್ತದೆ ವೀರಕಥೆ. ಅದ್ಭುತಲೋಕದಲ್ಲಿ ನಡೆಯುವ ಬೆರಗಿನ ಘಟನೆಗಳು ತುಂಬಿಕೊಂಡಥದು ಅದ್ಭುತ ಕಥೆಯಾದರೆ ಪ್ರೇಮಕಥೆಯ ವಿಷಯ ಪ್ರಣಯವಾಗಿರುತ್ತದೆ. ನಗೆ ಕತೆಗಳು ವ್ಯಕ್ತಿಗಳನ್ನಾಗಲಿ, ಸಮುದಾಯವನ್ನಾಗಲಿ, ಇತರ ಸಮುದಾಯವನ್ನಾಗಲಿ ಕೇಂದ್ರೀಕರಿಸಿ ಇರುತ್ತವೆ. ಇದರಲ್ಲಿ ಅನೇಕ ವೇಳೆ ಯಾವುದಾದರೂ ಒಂದು ವಿಭಾಗ ಇನ್ನೊಂದು ವಿಭಾಗದ ಕಡೆಗೆ ಹೂಡಿಕಳುಹಿಸುವ ಗೇಲಿಯೋ ವಿಮರ್ಶೆಯೊ ಇರಬಹುದು. ಕಥಾಪಾತ್ರಗಳನ್ನೊ ಕಥಾವಸ್ತುವನ್ನೊ ಆಧರಿಸಿ ಮಾಡುವ ಈ ಬಗೆ ವರ್ಗೀಕರಣ ಸಂಪೂರ್ಣ ಶಾಸ್ತ್ರೀಯವೆಂದು ಹೇಳುವಂತಿಲ್ಲ. ಕಾರಣ ಈ ಮಾನದಂಡಗಳನ್ನು ಬಳಸಿಯೆ ಮಾಡಿದ ಬರ್ಗೀಕರಣದ ಬಳಿಕವೂ ಒಂದು ಕತೆ ಭಿನ್ನ ವರ್ಗಗಳಲ್ಲಿ ಕಾಣಿಸಿಕೊಳ್ಳಬಹುದು. ಆಗ ಹೆಚ್ಚು ವೈರುಧ್ಯಕ್ಕೆ ತಲಪುವ ಸಾಧ್ಯತೆ ಇದೆ. ಆದ್ದರಿಂದ ಕಥೆಗಳ ವರ್ಗೀಕರಣದಲ್ಲಿ ಪಾತ್ರಗಳು, ವಸ್ತು, ಕಥಾಸಂವಿಧಾನ, ಸ್ವಭಾವ ಮೊದಲಾದ ಸಾಧ್ಯವಾದ ಎಲ್ಲ

ಮಾನದಂಡಗಳನ್ನೂ ಪರಿಗಣನೆಗೆ ತೆಗೆದುಕೊಂಡು ಸಮಗ್ರವಾದ ಒಂದು ವರ್ಗೀಕರಣ ರೀತಿಯನ್ನು ಇನ್ನೂ ಕಂಡುಕೊಳ್ಳಬೇಕಾಗಿದೆ.

ಕಥೆಯ ಧರ್ಮ

ಧರ್ಮವಿಲ್ಲದ ಒಂದು ಜಾನಪದವೂ ಸಾಂಘಿಕತೆಯಲ್ಲಿ ನೆಲೆಸುವುದಿಲ್ಲ. ಘಟನೆಪರವಾದ ಅಥವಾ ಸಂದರ್ಭಪರವಾದ ಒಂದು ಅಧ್ಯಯನಕ್ಕಿಂತ ಧರ್ಮಪರವಾದ ಅಧ್ಯಯನ ಇಂದು ಪ್ರಸಕ್ತವಘಿದೆ. ಆಹ್ಲಾದಗೊಳಿಸುವ ಉದ್ದೇಶದ ಆಚರಣೆ ಬೇರೆಯೂ ಕೆಲ ಧರ್ಮಗಳನ್ನು ಕೂಡ ಕಥೆಗಳು ನೆರವೇರಿಸುತ್ತವೆ. ಮಕ್ಕಳಲ್ಲಿ ವಿಶೇಷಜ್ಞಾನ ತುಂಬಲು, ಧರ್ಮಪ್ರಜ್ಞೆಯೂ, ಸದಾಚಾರಪ್ರಜ್ಞೆಗಳನ್ನು ಬೆಳೆಸಲು ಕಥೆ ಒಂದು ಪರಿಧಿವರೆಗೆ ಪಾತ್ರವಹಿಸುತ್ತದೆ. ವಿಷ್ಣುಶರ್ಮ 'ಪಂಚ ತಂತ್ರ' ಕಥೆಯನ್ನು ಬರೆದುದರ ಕುರಿತಾದ ಕಥೆಯೆ ಇದನ್ನು ಸೂಚಿಸುತ್ತದೆ. ಅವಿಭಕ್ತ ಕುಟುಂಬವೂ, ಕುಟುಂಬ ವಿದ್ಯಾಭ್ಯಾಸವೂ ನೆಲೆಸಿದ್ದ ಒಂದು ಸಮೂಹದಲ್ಲಿ ಕಥೆಯಗಳನ್ನು ಬೋಧನಮಾರ್ಗವನ್ನಾಗಿ ಮಾಡಿ ಮಕ್ಕಳಿಗೆ ಕಲಿಸುತ್ತಿದ್ದುದು ಮುತ್ತಜ್ಜಿಯರಾಗಿದ್ದರು. ಮುತ್ತಜ್ಜಿ–ಮರಿಮಕ್ಕಳು, ಆ ಮೂಲಕ ಮುತ್ತಜ್ಜಿ–ಕುಟುಂಬ ಈ ಪರಸ್ಪರ ಸಂಬಂಧಗಳನ್ನು ದೃಢಗೊಳಿಸುವಲ್ಲಿ ಕತೆಹೇಳುವ ಪ್ರಕ್ರಿಯೆಗೆ ಸಕ್ರಿಯವಾದ ಪಾಲುಗಾರಿಕೆ ಇತ್ತು. ಮುತ್ತಜ್ಜಿಗಳೂ, ಮುತ್ತಜ್ಜಂದಿರೂ ಮೃದ್ಧಾಶ್ರಮಗಳಿಗೆ ಸೇರುವುದು ಮತ್ತು ಮುತ್ತಜ್ಜಿಕತೆಗಳು ಮಾರುಕಟ್ಟೆ ಸರಕಾಗಿರುವುದು ಸಂಭವಿಸಿರುವ ಈ ಕಾಲಘಟ್ಟದಲ್ಲಿ ಗ್ರಾಮೀಣ ಕತೆಗಳಿಗೆ, ಅದು ನಿರ್ವಹಿಸಿ ಬಂದ ಹಳೆಯ ಧರ್ಮಕ್ಕೆ ಇನ್ನು ಸ್ಥಿರ ನೆಲೆ ಅಸಂಭವ.

ಓದಿನ ಮೂಲಕವಾದರೂ ಬಾಯ್ದೆರೆ ಹೇಳುವಿಕೆಯಲ್ಲಾದರೂ ಕಥೆ ನಿರ್ವಹಿಸುವ ಇನ್ನೊಂದು ಧರ್ಮವೆಂದರೆ ಮಕ್ಕಳಿಗೆ ಕೆಲವೊಂದು ವಿಷಯಗಳನ್ನು ಕಲಿಸುವುದಾಗಿರುತ್ತದೆ. ಮಕ್ಕಳ ಮನಸ್ಸಿನಲ್ಲಿ ಭಾವನೆಯ ದೊಡ್ಡದಾದ ಲೋಕವನ್ನು ತೆರೆದಿಡುವುದೇ ಹೆಚ್ಚಿನ ಕತೆಗಳು, ವಿಶೇಷತಃ ಅದ್ಭುತ ಕತೆಗಳು ಮತ್ತು ಮಾಂತ್ರಿಕ ಕತೆಗಳು ಮಾಡುವಂಥದು. ಇವತ್ತಿನ ಸ್ಥಿತಿಯಲ್ಲಿ ಮಕ್ಕಳ ಓದಿನ ಪ್ರವೃತ್ತಿ ಬೆಳೆಯುವುದರಲ್ಲಿ ಕಥೆಗಳು ದೊಡ್ಡದಾದ ಪಾತ್ರ ವಹಿಸುತ್ತಿವೆ. ಹಳೆಯ ಗ್ರಾಮೀಣ ಕತೆಗಳ ಸ್ವಭಾವವನ್ನು ಪರಿಶೀಲಿಸಿರೆ ಮಕ್ಕಳಲ್ಲಿ ಧಾರ್ಮಿಕತೆ ಪ್ರಜ್ಞೆಯನ್ನು ಬೆಳೆಸುವುದರಲ್ಲಿ ಅವುಗಳಿಗಿದ್ದ ಪ್ರಭಾವ ಹೆಚ್ಚು ನಿಚ್ಚಳವಾಗಿದೆ. ಕಥೆಯನ್ನು ಓದುವ ಅಥವಾ ಕೇಳುವ ಮಕ್ಕಳ ಮನಸ್ಸು ಕಥಾನಾಯಕನೊಂದಿಗೆ ತಾದಾತ್ಮ್ಯ ಹೊಂದುವ ರೀತಿಯಲ್ಲಾಗಿರುತ್ತದೆ ಯಾವಾಗಲೂ ಕಥೆಯ ಹರಿವು. ಕಥೆ ಬೆಳೆಯುತ್ತಿರುವಂತೆ ಓದುವ ಮಗುವಿಗೆ ನಾಯಕನಲ್ಲಿ ಮಮತೆಯೂ ಪ್ರತಿನಾಯಕನಲ್ಲಿ ಒಲ್ಲದಿಕೆಯೂ ಬಲಗೊಳ್ಳುತ್ತದೆ. ನಾಯಕ ಎಲ್ಲ ಸದ್ಗುಣಗಳ ಬೆಳಸಿನ ಹೊಲವಾಗಿರುತ್ತಾನೆ. ಪ್ರತಿನಾಯಕ ಎಲ್ಲ ಕೆಡುಗಕುಗಳ ಪ್ರತಿಮೂರ್ತಿಯಾಗಿರುತ್ತಾನೆ. ನಾಯಕನೊಂದಿಗಿನ ಪ್ರೀತಿ ಒಳ್ಳೆತನಗಳ ಪ್ರೀತಿಯೂ ಪ್ರತಿನಾಯಕನೊಂದಿಗಿನ ಒಲ್ಲದಿಕೆ ಕೆಡುಕುಗಳೊಂದಿಗಿನ ಒಲ್ಲದಿಕೆಯೂ ಆಗಿ ಪರಿಣಮಿಸುವಾಗ ಕಥೆ ಮಗುವಿನ ಬದುಕಿನಲ್ಲಿ ಧಾರ್ಮಿಕ ಪ್ರಬೋಧನೆಗಿರುವ ಉಪಾಧಿಯಾಗಿ ನಿರ್ವಹಿಸುತ್ತದೆ. ಬೇತಾಳನ

ಕಥೆಯಂಥ ಪ್ರಶ್ನೆಯೊಂದಿಗೆ ಕೊನೆಗೊಳ್ಳುವ ಕಥೆಗಳ ಪ್ರಶ್ನೆಗಳು ಧಾರ್ಮಿಕ ಪ್ರಜ್ಞೆಯ ಜತೆಗೆ ಮಕ್ಕಳ ತರ್ಕಶಕ್ತಿಯನ್ನೂ ತರ್ಕಬದ್ಧ ಆಲೋಚನಾ ವಿಧಾನವನ್ನೂ ಕಲಿಸಿಕೊಡುತ್ತವೆ.

ನಮ್ಮ ಹೆಚ್ಚಿನ ಕತೆಗಳು ಪ್ರತೀಕಾತ್ಮಕ ಸ್ವರಭಾವ ಉಳ್ಳವುಗಳು. ಈ ಪ್ರತೀಕಾತ್ಮಕ ಸ್ವಭಾವ ಒಂದು ಬಗೆ ನಿಗೂಢವಾದ ಆನಂದವನ್ನು ಉಂಟು ಮಾಡುತ್ತದೆ ಹಾಗೂ ಮಾನಸಿಕವಾದ ಕೆಲ ಅಸ್ವಾಸ್ಥ್ಯಗಳನ್ನು ತಾತ್ಕಾಲಿಕವಾಗಿ ಶಮನಗೊಳಿಸುತ್ತವೆ. ಜೀವನದಲ್ಲಿ ಯಾವಾಗಲೂ ಶಕ್ತರು ದುರ್ಬಲರನ್ನು ಸೋಲಿಸುವಾಗ, ಕಥೆಯ ಲೋಕದಲ್ಲಿ ದುರ್ಬಲರು ಶಕ್ತರಿಂದ ಸೋಲೊಪ್ಪಿಗೆಯನ್ನು ಹೇಳಿಸುತ್ತಾರೆ. ಯಥಾರ್ಥವನ್ನು ತಲೆಕೆಳಗಾಗಿಸುವ ಮೂಲಕ ಜೀವನದಲ್ಲಿ ಒಮ್ಮೆಯೂ ನಿಜಗೊಳ್ಳಲಾರದಂಥ ಕನಸನ್ನು ಕಥಾಲೋಕದ ಮೂಲಕ ನಿಜಗೊಳಿಸಿ ಮಾನಸಿಕವಾದ ಒಂದು ಸಮೀಕರಣವನ್ನು ಸಾಶ್ಯಗೋಳಿಸುವುದನ್ನೆ ಸಾಂಘಿಕತೆ ಮಾಡುವುದು. ಮೊಲ ಸಿಂಹವನ್ನು ಬಾವಿಗೆ ಹಾರುವಂತೆ ಮಾಡುವ ಕತೆ, ಆಮೆ ಮೊಲವನ್ನು ಓಟದ ಸ್ಪರ್ಧೆಯಲ್ಲಿ ಸೋಲಿಸುವ ಕತೆ ಮೊದಲಾದ ಹೆಚ್ಚಿನ ಕತೆಗಳಲ್ಲಿ ಈ ವೈಶಿಷ್ಟ್ಯ ಅಂತರ್ಲೀನವಾಗಿರುವುದನ್ನು ಕಾಣಬಹುದು. ಈ ಬಗೆ ಕತೆಗಳನ್ನು ಹೇಳುವವರು ಮತ್ತು ಕೇಳುವವರು ಅನಿರ್ವಚನೀಯವಾದ ಮತ್ತು ನಿಗೂಢವಾದ ಒಂದು ಆನಂದವನ್ನು ಹಂಚಿಕೊಳ್ಳುತ್ತಾರೆ. ಇದನ್ನು ಅವರು ಜೀವನದಲ್ಲಿ ಇದಿರಿಸುವ ಭೌತಿಕವೂ ಸಾಮೂಹಿಕವೂ ಆದ ವಾಸ್ತವಗಳ ಜತೆಗೆ ಸೇರಿಸಿಕೊಂಡು ಓದಬೇಕಾಗಿದೆ.

ಕಥೆ ಹೇಳುವುದಕ್ಕೂ ಕೇಳುವುದಕ್ಕೂ ಸಹಜವಾದ ಆಸಕ್ತಿ ಎಲ್ಲ ಜನರಲ್ಲೂ ಇದೆ. ಅರಬಿ ಕಥೆಗಳ ನಿದ್ರೆಯಿಲ್ಲದ ಇರುಳುಗಳ ಕುರಿತಾದ ಕತೆ ಮನುಷ್ಯ ಮತ್ತು ಕಥೆಗಳೊಳಗಿನ ಈ ಸಂಬಂಧವನ್ನೆ ಹೇಳುವುದು. ಜೀವನದ ವಿಶಿಷ್ಟ ಸಂದರ್ಭದಲ್ಲಿ ಮತ್ತು ನಿತ್ಯಜೀವನದ ಕೆಲ ನಿಶ್ಚಿತ ಸನ್ನಿವೇಶದಲ್ಲಿ ಇದ್ದ, ಕಥೆ ಹೇಳುವುದೆಂಬುದು ಅನಂತರದ ಯಾವುದೊ ಕಾಲದಲ್ಲಿ ಮಾನುಷ ಸಂಸ್ಕೃತಿಯ ಒಂದು ಸ್ವಭಾವವಗಿ ಮಾರ್ಪಟ್ಟಿರಬಹುದು. ಸ್ಪರ್ಧೆಯಲ್ಲಿ ಒಬ್ಬನನ್ನು ಆಯ್ಕೆಕೊಳ್ಳಬೇಕಾದಾಗ, ವಿವಾಹದಂಥ ವಿಶಿಷ್ಟ ಸಂದರ್ಭಗಳಲ್ಲಿ, ಕಥೆ ಹೇಳುವುದು ಒಂದು ಚಡಂಗವಾಗುದಕ್ಕೆ ಬಹಳವಾದ ದೃಷ್ಟಾಂತಗಳಿವೆ. ನಿತ್ಯಜೀವನದಲ್ಲಿ ಬಿಡುವನ್ನು ಕಳೆಯುವುದಕ್ಕಾಗಿ ಕಥೆ ಹೇಳುವ, ಮಕ್ಕಳ ಮಾತ್ರವಾದ ಸಾಂಘಿಕತೆಯೂ, ಮಕ್ಕಳೂ ಹಿರಿಯರೂ ಸೇರಿರುವ ಸಾಂಘಿಕತೆಯೂ, ಒಂದು ಕಾಲದಲ್ಲಿ ಕೇರಳೀಯ ಜೀವನದ ಭಾಗವಾಗಿತ್ತು ಎಂದು ನಮಗೆ ಗೊತ್ತಿದೆ. ಮಬ್ಬಿನಲ್ಲಿ ಬಳಿಯಲ್ಲೊಂದು ವೀಳ್ಯದ ಪೆಟ್ಟಿಗೆಯೊಂದಿಗೆ ಕಾಲು ನೀಡಿ ಕುಳಿತು ಕತೆ ಹೇಳುವ ಮುತ್ತಜ್ಜಿಯೂ, ಕವಿಯ ಕುಂಡಲ ಅಲ್ಲಾಡುತ್ತ ಬರುವ ಅವಳ ನಗೆಯೂ, ಕೇಳಿ ಕುಳ್ಳಿರುವ ಮಕ್ಕಳೂ ನಮಗೆ ಇಂದು ನೆನಪಿನಲ್ಲಿ ಮಾತ್ರವಿರುವ ದೂರದ ದೃಶ್ಯ ಮಾತ್ರ ಆಗಿದೆ.

ಬದಲುವ ಕಥಾರೂಪ

ಕಥೆಯ ದೃಶ್ಯಮಾಧ್ಯಮದ ಪ್ರೋಷಣೆ ಸಂದರ್ಭದಲ್ಲೂ, ಪ್ರೇಕ್ಷಣ ಸ್ವಭಾವದಲ್ಲೂ ಎಂಬಂತೆ ಹೂರಣದ ವಿಷಯದಲ್ಲೂ ಸಂಭವಿಸುವ ಬದಲಾಣೆಗಳು ಗಮನಾರ್ಹವಾಗಿವೆ. ತಿಂಡಿಯನ್ನು

ಕಿತ್ತುಕೊಳ್ಳುವ ನರಿಯ ಉಪಾಯವನ್ನು ಸೋಲಿಸಿ ತಿಂಡಿಯನ್ನು ಕಾಲಿನ ಎಡೆಯಲ್ಲಿ ಇರುಕಿ ಹಿಡಿದು ಹಾಡನ್ನು ಹಾಡಿ ಗೆಲ್ಲುವ ಕಾಗೆಯ ಕಥೆ, ಓಟದ ಸ್ಪರ್ಧೆಯ ನಡುವೆ ನಿದ್ರಿಸಿ 'ದೀಪಂ' ಚಹಾಕುಡಿದು ಒಂದೆ ಓಟದಲ್ಲಿ ಆಮೆಯನ್ನು ಮೀರಿ ಕೊನೆಕ್ಷಣದಲ್ಲಿ ಗೆಲ್ಲುವ ಮೊಲದ ಕಥೆ ಮುಂತಾದವುವಸ್ತುವಿನ ತಿದ್ದುಗೆ ಮೂಲಕ ಹೊಸ ರೂಪ ಪಡೆಯುವ ಹಳೆ ಕಥೆಗಳಾಗಿವೆ. ಹಳೆಯ ರೀತಿಯನ್ನು ಅನುಸರಿಸಿ ಈಗ ರಚನೆಗೊಂಡು ಬರುತ್ತಿರುವ ಕಥೆಗಳಿಗೆ ಒಂದು ಉದಾಹರಣೆ ನೋಡಿರಿ: "ದಾರಿ ಬದಿಯ ಒಂದು ಹಾಳು ಬಾವಿಗೆನೋಡುತ್ತ ಒಬ್ಬ 'ತೊಂಬತ್ತೊಂಬತ್ತು', 'ತೊಂಬತ್ತೊಂಬತ್ತು' ಎಂದು ಹೇಳುತ್ತಿದ್ದ. ಆ ಕಡೆಗಾಗಿ ಹೋಗುತ್ತಿದ್ದ ದಾರಿಹೋಕ, ಏನನ್ನು ಎಣಿಸುತ್ತಿದ್ದೀರಿ ಎನ್ನುತ್ತ ಹತ್ತಿರಕ್ಕೆ ಹೋಗಿ ಬಾವಿಗೆ ಇಣುಕತೊಡಗಿದ. ಒಡನೆಯೆ ಎಣಿಸುತ್ತಿದ್ದವ ಇವನನ್ನು ಬಾವಿಗೆ ತಳ್ಳಿಹಾಕಿದ. ಆ ಮೇಲೆ 'ನೂರು', 'ನೂರು'ಎನ್ನತೊಡಗಿದ. ನೀತಿಪಾಠ – ಇತರರ ವ್ಯವಹಾರದಲ್ಲಿ ಅನಾವಶ್ಯಕವಾಗಿ ತಲೆ ಹಾಕಿದರೆ ಇದೇ ಪರಿಣಾಮ." ಇದೇ ರೀತಿ ಹಳೆಯ ಕಥೆಯ ಹೊಸ ರೀತಿಗಳು. ಆನೆ, ಇರುವೆ, ಕಂಪ್ಯೂಟರ್ ಮತ್ತಿತರ ಕಥಾಪಾತ್ರಗಳುಳ್ಳ ಹೊಸಕತೆಗಳೆಲ್ಲ ಹೊಸ ಸಾಂಘಿಕತೆಗೆ ಪರಸ್ಪರವೊ ಸಾಂಘಿಕತೆಯ ಒಳಗೋ ಉಂಟಾಗುವ ಮಾರ್ಪಾಟುಗಳ ಪ್ರತಿಫಲನವಾಗಿದೆ. ನಾಡಕಥೆ ಎಂದರೆ ಹಳೆಗಾಲದಿಂದಲೆ ಪ್ರಚಾರದಲ್ಲಿ ಇದ್ದ ವಿಶಿಷ್ಟವಾದ ಕಥಾರೂಪ ಮಾತ್ರವಲ್ಲ ಎಂದೂ ಇವತ್ತಿಗೂ ಹೊಸರೂಪದಲ್ಲೂ ಭಾವದಲ್ಲೂ ಅವು ತಯಾರಾಗುತ್ತಲೆ ಇರುವುದೆಂದೂ ನಾಗರಿಕ ಸಾಂಘಕತೆಯ ಈ ಬಗೆ ಕಥೆಗಳು ಸಹಾಯಕವಾಗಿರುವುದರಿಂದಲೆ ಇವುಗಳ ಅಧ್ಯಯನ ಪ್ರಾಮುಖ್ಯ ಪಡೆಯುತ್ತದೆ.

ಬೊಗಳುವ ನಾಯಿ ಕಚ್ಚುವುದಿಲ್ಲ

(ಗಾದೆ ಮಾತು)

ಕೆ. ಎಂ. ಅನಿಲ್

ಟಿಪ್ಪಣಿ

ಆಖ್ಯಾನ ರೂಪವಲ್ಲದ ಮೌಖಿಕಜ್ಞಾನಶಖೆ ಗಾದೆ ಮಾತು, ಒಗಟು, ಪ್ರಾದೇಶಿಕ ಉಪಬಾಷೆ (ಆಡುನುಡಿ) ಇತ್ಯಾದಿ. ಇತರ ಜಾನಪದ ರೂಪಗಳಿಗೆ ಇರುವ ವೈಶಿಷ್ಟ್ಯವೆಂದರೆ ಹೇಳಬೇಕಾದ ಸಂದರ್ಭದಲ್ಲಿ ಅವು ಮೈದೋರುತ್ತವೆ ಎಂಬುದಾಗಿದೆ. ಆದರೆ ಒಂದು ಗಾದೆ ಮಾತು ಒಬ್ಬರ ಸಂಭಾಷಣೆ ವೇಳೆ ಯಾವಾಗ ಕಾಣಿಸಿಕೊಂಡೀತು ಎಂದು ಪೂರ್ವಭಾವಿಯಾಗಿ ಹೇಳಲು ಸಾಧ್ಯವಿಲ್ಲ. ಆದರೂ ಒಂದು ಗಾದೆ ಮಾತು ಇಂಥಿಂಥ ಪರಿಸ್ಥಿತಿಯಲ್ಲೇ ಕಾಣಿಸಿಕೊಳ್ಳಲು ಸಾಧ್ಯ ಎಂದು ಆ ಗಾದೆಯ ವಿಭಿನ್ನವಾದ ಪಾಠಗಳಿಂದ ತಿಳಿಯಬಹುದು. ಹಾಗಿದ್ದರೂ ಆ ಬಗೆ ಸನ್ನಿವೇಶಗಳಲ್ಲೆಲ್ಲ ಅದು ಕಾಣಿಸಿಕೊಳ್ಳಬೇಕೆಂದು ಹಠಹಿಡಿಯಲೂ ಆಗುವುದಿಲ್ಲ. ಆದ್ದರಿಂದಲೆ ಅಲ್ಲವೆ ಗಾದೆಗೆ 'ಹಲವರ ಅರಿವು, ಒಬ್ಬನ ವ್ಯಂಗ್ಯೋಕ್ತಿ' ಎಂಬ ನಿರ್ವಚನ ಉಂಟಾಗುವುದು? ಆವರ್ತನೆಗೊಳ್ಳುವ ಜೀವನಾವಸ್ಥೆಗಳಿಂದ ಅರಿವುಗಳು ಉಂಟಾಗುವವು. ಸಾಧಾರಣೀಕರಣಗೊಳ್ಳುವ ಈ ಅರಿವು ಸಂವಾಹಕನಾದ ಒಬ್ಬನ ಸಂಭಾಷಣೆಯನ್ನು ಸಂದರ್ಭಕ್ಕೆ ಸರಿಯಾಗಿ ಅರ್ಥಪೂರ್ಣವನ್ನಾಗಿಯೂ ಮಾಡುವುದು. 'ಬಾಯ್ಬಿಡದ ಬೆಕ್ಕು ಮಡಕೆ ಒಡೆಯುತ್ತದೆ' (ಮಿಂಡಾಪ್ಪೂಚ್ಚ ಕಲಮುಡಕ್ಕುಂ) ಎಂಬುದು ಯಾವಾಗಲಾದರೂ ಒಬ್ಬರ ಸಂಭಾಷಣೆ ವೇಳೆ ಕಾಣಿಸಿಕೊಳ್ಳುವ ಮಾತಿನ ತುಣುಕಾದರೂ, ಅದು ದೀರ್ಘಕಾಲದ ಜೀವನ ನರೀಕ್ಷಣೆಯಿಂದ ಉದಿಸಿದ ಅರಿವಿನ ಫಲವಾಗಿದೆ.

ಒಂದು ಜನತೆಯ ನೈತಿಕ ಮೌಲ್ಯವನ್ನು ಸಂರಕ್ಷಿಸಿ ನೆಲೆನಿಲ್ಲಿಸುವುದರಲ್ಲಿ ಗಾದೆ ಮಾತುಗಳಿಗೆ ದೊಡ್ಡ ಪಾಲುಇದೆ. ಪಾರಂಪರ್ಯದಿಂದ ಜಾರಿಬೀಳುವ ಸಂದರ್ಭ ಉಂಟಾಗುವಾಗ ಅದರಿಂದ ಎಳೆದು ಮೂಲನೆಲೆಗೆ ತರುವ ಕೆಲಸ ಗಾದೆ ಮಾತಿನಿಂದ ಆಗುತ್ತದೆ. ಕೆಲ ನಿರಕ್ಷರಿ ಸಮೂಹಗಳಾದರೂ ತರ್ಕ ಪರಿಹಾರಕ್ಕೆ ಕೋರ್ಟುಗಳಲ್ಲಾದರೂ ಗಾದೆ ಮಾತು ಬಳಸುವುದನ್ನು ಕಾಣುತ್ತೇವೆ. ಸಂಭಾಷಣೆಯನ್ನು ಆಸ್ವಾದನೀಯ ಮಧುರ್ಯವುಳ್ಳದ್ದಾಗಿ ಮಾಡುವುದರಲ್ಲೂ ಗಾದೆಗಳಿಗೆ ಪಾಲು ಇದೆ.

ಗಾದೆ ಮಾತುಗಳ ಸ್ವಭಾವವನ್ನು ಗಣನೆಗೆ ತೆಗೆದುಕೊಂಡು ಅವುಗಳನ್ನು ರೂಪಕ ನುಡಿಗಳು, ಉಪಮಿತ ನುಡಿಗಳೂ, ಪ್ರಸ್ತಾವಗಳು, ಪಳಮೆಗಳು ಎಂದು ವರ್ಗೀಕರಿಸಬಹುದು. ಅವುಗಳ ಹೊಂದಿಕೆಯನ್ನನುಸರಿಸಿ ಅಧಿಸಮಾನತೆ, ನ್ಯೂನಸಮಾನತೆ, ಅಧಿಕಾರಣತ್ವ, ನ್ಯೂನಕಾರಣತ್ವ ಎಂದೂ ವಿಂಗಡಿಸಬಹುದು.

ಮಲಯಾಳದಲ್ಲಿ ಗಾದೆ ಮಾತುಗಳ ಸಂಗ್ರಹ ಪ್ರಕಟವಾಗಿರುವುದಾದರೂ ಗಾದೆಯ ಸನ್ನಿಹಿತವೊ, ವಿಶಾಲವೊ ಆದ ಸಂದರ್ಭಗಳನ್ನು ದಾಖಲಿಸಲಾಗಿಲ್ಲ. ಯಾವ ಜಾನಪದವೂ ಅರ್ಥವತ್ತಾಗಿ ಪರಿಣಮಿಸುವುದು, ಆಶಯ ಸಂವಹನ ಅದರ ಮೂಲಕ ಸಾಧ್ಯವಾಗುವುದು, ವಿಶಿಷ್ಟ ಸಂದರ್ಭದಲ್ಲಿ ನಿಲ್ಲುವಾಗ ಮಾತ್ರ. ಸಂದರ್ಭದಿಂದ ಕಿತ್ತು ತೆಗೆಯಲ್ಪಟ್ಟ ಯಾವ ಜಾನಪದವೂ ಜಡವಾಗಿರುತ್ತದೆ. ಸಂಭಾಷಣೆಯ ನಡುವೆ ಗಾದೆ ಮಾತು ಯಾವಾಗ ಕಾಣಿಸಿಕೊಳ್ಳಬಹುದು ಎಂದು ಕಣಿಹೇಳುವುದಕ್ಕೊ ಊಹಿಸುವುದಕ್ಕೊ ಆಗುವುದಿಲ್ಲವಾದ ಕಾರಣ ಸಂದರ್ಭ ಸಹಿತವಾದ ಗಾದೆ ಮಾತುಗಳ ಸಂಗ್ರಹಣ ತುಂಬ ಪ್ರಯಾಸಕರ. ಆದ್ದರಿಂದಲೆ ಗಾದೆ ಮಾತಿನ ಕುರಿತಾದ ಅಧ್ಯಯನಗಳೂ ಅಪೂರ್ವವೇ.

– ಸಂಪಾ

ದಕ

'ಬೊಗಳುವ ನಾಯಿ ಕಚ್ಚುವುದಿಲ್ಲ' (ಕುರಕ್ಕುಂ ಪಟ್ಟಿಕಡಿಕ್ಕಿಲ್ಲ) ಇದು ಮಲಯಾಳದಲ್ಲಿ ಬಹಳ ಹೆಚ್ಚು ಪ್ರಚಾರದಲ್ಲಿ ಇರುವ ಒಂದು ಗಾದೆ ಮಾತು. ಇತರ ಯಾವುದೆ ಗಾದೆಯ ಹಾಗೆ ಪ್ರಯೋಗ ಸಂಬಂಧವಗಿ ಈ ಗಾದೆಗೂ ಒಂದು 'ಸನ್ನಿಹಿತ ಸಂದರ್ಭವೂ', 'ವಿಶಾಲ ಸಂದರ್ಭವೂ' ಇವೆ. ಒಬ್ಬ ನಿರ್ದಿಷ್ಟ ವ್ಯಕ್ತಿ ಯಾವುದಾದರೂ ವಿಶಿಷ್ಟ ಸಂದರ್ಭದಲ್ಲಿ ಒಂದು ಗಾದೆ (ಪಂಚಿಂಚೊಲ್ಲ್) ಅನ್ನು ಪ್ರಯೋಗಿಸುತ್ತಾನೆ. ಆ ಸಂದರ್ಭವನ್ನು ಪ್ರಸ್ತುತ ಗಾದೆಯ ಒಂದು 'ಸನ್ನಿಹಿತ ಸಂದರ್ಭ' ಎನ್ನಬಹುದು. ಮೇಲೆ ಹೇಳಿದ 'ಬೊಗಳುವ ನಾಯಿ ಕಚ್ಚುವುದಿಲ್ಲ' ಎಂಬ ಗಾದೆಯ ಒಂದು ಸನ್ನಿಹಿತ ಸಂದರ್ಭಕ್ಕೆ ಉದಾಹರಣೆ ನೋಡುವ– ಇಬ್ಬರು ವ್ಯಕ್ತಿಗಳೂ ಗಡಿ ತಗಾದೆಯಲ್ಲಿ ಇದ್ದಾರೆ ಅನ್ಯೋಣ. ಈ ಸಂದರ್ಭದಲ್ಲಿ ಒಬ್ಬ ಕೆಲಸದಾಳು ಒಂದನೆಯವನ ನಿರ್ದೇಶ ಪ್ರಕಾರ ಗಡಿಯ ದಿಣ್ಣೆಗಳನ್ನು ಗಿಡಗಂಟಿಯನ್ನು ಕಡಿದು ಚೊಕ್ಕಚಮಾಡತೊಡಗುತ್ತಾನೆ. ಸಿಟ್ಟಗೊಂಡ ಎರಡನೆಯವನು ಕೆಲಸದಾಳನ್ನು ಹೆದರಿಸಿದ. ಹೆದರಿದ ಕೆಲಸದಾಳು ಒಂದನೆಯವನಲ್ಲಿಗೆ ಬಂದು ಈ ಕೆಲಸ ತನ್ನಿಂದಾಗದು ಎಂದ. ಆಗ ಆತನ ಉತ್ತರ, 'ಬೊಗಳುವ ನಾಯಿ ಕಚ್ಚುವುದಿಲ್ಲ. ನೀನು ಹೋಗಿ ನಿನ್ನ ಕೆಲಸ ಮಾಡು'. ಈ ಸನ್ನಿಹಿತ ಸಂದರ್ಭದಲ್ಲಿ ಪ್ರಸ್ತುತ ಗಾದೆಯ ಅರ್ಥವನ್ನು ಹೀಗೆ ಸಂಗ್ರಹಿಸಬಹುದು. ಹೆಚ್ಚುಮಾತನಾಡುವವರು ಆಡುವ ಮಾತನ್ನು ಕೆಲಸದಲ್ಲಿ ತರುವುದಿಲ್ಲ. ಸೇಡು ತೀರಿಸುತ್ತೇನೆ ಎಂದು ಬಾಯಲ್ಲಿ ಹೇಳುವವನ ಬಗೆಗೆ ಒಂದಿಷ್ಟೂ ಹೆದರುವ ಆವಶ್ಯಕತೆಯಿಲ್ಲ.

ಈ ಗಾದೆಯನ್ನು ಒಬ್ಬನೇ ವ್ಯಕ್ತಿ ಹಲವು ಸಂದರ್ಭಗಳಲ್ಲಿ ಬಳಸಬಹುದು. ಅಂತೆಯೆ ಭಿನ್ನ ವ್ಯಕ್ತಿಗಳು ವಿಭಿನ್ನ ಸಂದರ್ಭಗಳಲ್ಲಿ ಆ ಮಾತನ್ನು ಬಳಸಲೂಬಹುದು. ಅವುಗಳಲ್ಲಿ ಒಂದೊಂದೂ ಬಿಭಿನ್ನ ಸನ್ನಿಹಿತ ಸಂದರ್ಭಗಳಲ್ಲಿ ಬರುವಂಥದು. ಈ ಸಂದರ್ಭವೆ ಗಾದೆಯ ಅರ್ಥವನ್ನು ನಿರ್ಣಯಿಸುವಂಥದು ಒಂದೊಂದು ಸಂದರ್ಭದಲ್ಲೂ ಒಂದು ಗಾದೆ ವಿಭಿನ್ನ ಅರ್ಥಹೊಂದುವುದಾದರೂ ಅವೆಲ್ಲ ಪೂರ್ತಿ ಭಿನ್ನವಾದ ಅರ್ಥಗಳನ್ನೆ ನೀಡುವುದೆನ್ನಲಾಗದು. ಒಂದು ಗಾದೆಯ 'ಸನ್ನಿಹಿತ ಸಂದರ್ಭಗಳು' ವಿಭಿನ್ನವಾಗಿರುವಾಗಲೆ ಅವುಗಳಲ್ಲಿ ಸಮಾನತೆಯೂ ಇದೆ. ಹಾಗೆಯೆ ಒಂದೊಂದು ಸನ್ನಿಹಿತ ಸಂದರ್ಭದಲ್ಲೂ ಗಾದೆಯ ಅರ್ಥಗಳಲ್ಲಿ ಸಮಾನತೆ ಎಂಬುದಿದೆ. ಸಮಾನವಾದ ಈ ಸನ್ನಿಹಿತ ಸಂದರ್ಭಗಳನ್ನು ಸಾಮಾನ್ಯೀಕರಿಸುವ ಮೂಲಕ ನಾವು ಒಂದು ಗಾದೆಯ 'ವಿಶಾಲ ಸಂದರ್ಭ'ಕ್ಕೆ ತಲಪುತ್ತೇವೆ. ಒಂದೇ ಗಾದೆಯ ಸಮಾನವಾದ ಸನ್ನಿಹಿತ ಸಂದರ್ಭಗಳಲ್ಲಿ ಒಂದೊಂದೂ ಉತ್ಪಾದಿಸುವ ಅರ್ಥವನ್ನು ಸಾಧಾರಣೀಕರಿಸುವ ದಾರಿಯಾಗಿ ನಾವು ಅದೇ ಗಾದೆಯ ವಿಶಾಲ ಸಂದರ್ಭ ಉತ್ಪಾದಿಸುವ ಅರ್ಥಕ್ಕೂ ತಲಪುತ್ತೇವೆ.

ಒಂದು ಗಾದೆಯನ್ನು ವಿಭಿನ್ನ ಸಂದರ್ಭಗಳಲ್ಲಿ ಉಪಯೋಗಿಸುವುದು ಎಂಬ ಹಾಗೆ ಒಂದೇ ಸಂದರ್ಭಕ್ಕೆ ಬಳಸಬಹುದಾದ ವಿಭಿನ್ನ ಗಾದೆಗಳನ್ನೂ ಕಾಣಬಹುದು. 'ಬೊಗಳುವ ನಾಯಿ ಕಚ್ಚುವುದಿಲ್ಲ' ಎಂಬ ಗಾದೆ ಈ ಕೆಳಗಿನ ಗಾದೆಗೆ ಹೆಚ್ಚುಕಡಿಮೆ ಸಮಾನವಿದೆ–

ವಾಕ್ಕೆತ್ತುನ್ನೋನ್ಟೆ ನೋಕ್ಕೆತ್ತೂಲ್ಲ	ಮಾತು ತಲಪುವ ನೋಟ ತಲಪದು
ನೋಕ್ಕೆತ್ತುನೋನ್ಟೆ ವಾಕ್ಕೆತ್ತೂಲ್ಲ	ನೋಟ ತಲಪುವವನ ಮಾತು ತಲಪದು.

ಹೆಚ್ಚು ಮಾತನಾಡುವಾಗ ಯಾವುದರ ಬಗೆಗೆ ಮಾತನಾಡುತ್ತಾನೊ ಆ ವಿಷಯದ ಬಗೆಗೆ ಅವನ ಧ್ಯಾನ ಕಡಿಮೆಯಾಗುತ್ತದೆ. ಕಡಿಮೆ ಮಾತನಾಡುವವನು ವಿಷಯವನ್ನು ಗಮನವಿಟ್ಟು ವೀಕ್ಷಿಸುವವನಾಗುತ್ತಾನೆ ಎಂಬುದೇ ಈ ಗಾದೆ ಮಾತಿನ ಸಾಮಾನ್ಯ ಅರ್ಥ. 'ಬೊಗಳುವ ನಾಯಿ ಕಚ್ಚುವುದಿಲ್ಲ' ಎಂಬ ಪ್ರಯೋಗದಲ್ಲಿ ಬರುವ 'ನಾಯಿ' ಶಬ್ದ ಮಲಯಾಳಿಗಯನ್ನು ಸಂಬಂಧಿಸಿ ಹೇಳುವುದಾದರೆ ಅದು ಹೀನಾರ್ಥಕವಾದುದು. ಹಾಗಾಗಿ ಈ ಗಾದೆ ಯಾರ ಸಂಬಂಧವಾಗಿ ಬಳಕೆಯಾಗುತ್ತದೊ, ಆತನನ್ನು ಬಯ್ಯುವ ಉದ್ದೇಶವೂ ಅದರಿಂದ ನೆರವೇರುತ್ತದೆ. 'ಸುಮ್ಮನೆ ಬೊಗಳಬೇಡ', 'ಯಾಕೆ ಬೊಗಳುತ್ತಾ ಇರುವೆ?' 'ಯಾಕೆ ಬೊಗಳಿ ಓಡುವೆ?' ಮೊದಲಾದ ಪ್ರಯೋಗಗಳು ಈ ಗಾದೆಗೆ ಸಮಾನವಾದ ಕೆಲ ಮಾಗ್ರೂಢಿಗಳಾಗಿವೆ.

'ಬೊಗಳುವ ನಾಯಿ ಕಚ್ಚುವುದಿಲ್ಲ' ಎಂಬ ಗಾದೆಯ ನಿಷೇಧಾತ್ಮಕವಾದ ಗಾದೆ ಮಾತೇ– 'ಬಾಯ್ಬಿಡದ ಬೆಕ್ಕು ಮಡಕೆ ಒಡೆಯುತ್ತದೆ' (ಮಿಂಡಾಪ್ಪೂಚ್ಚ ಕಲಮುಡಕ್ಕುಂ). ಏನನ್ನೂ ಮಾತನಾಡದ ಮನುಷ್ಯ ತಾನೆಣಿಸಿದ ಕೆಲಸವನ್ನು ಮಾಡಿತೋರಿಸುತ್ತಾನೆ ಎಂಬುದೇ ಈ ಗಾದೆಯ ಪ್ರಾಥಮಿಕ ಅರ್ಥ. ಆದರೆ ತಗ್ಗಿಬಗ್ಗಿ ಕುಳ್ಳಿರುತ್ತ ಮನಸ್ಸಿನೊಳಗೆ ಕಾಪಟ್ಯವನ್ನು ಸಾಕುವ ಒಬ್ಬನೆಂದು ಸೂಚಿಸಲು ಕೂಡ 'ಮಿಂಡಾಪ್ಪೂಚ್ಚ' (ಬಾಯ್ಬಿಡದ ಬೆಕ್ಕು) ಎನ್ನುವುದುಂಟು. 'ಅನಿರೀಕ್ಷಿತವಾಗಿ ತೊಂದರೆ ತಂದುಕೊಳ್ಳುವುದು' ಎಂಬ ಅರ್ಥದಲ್ಲಿ 'ಮಿಂಡಾಪೂಚ್ಚ ಕಲಮುಡಕ್ಕುಂ' ಎಂದು ಬಳಕೆಯಲ್ಲಿದೆ.

ಒಂದೊಂದು ಗಾದೆ ಮಾತಿನ ಈ ಬಗೆ ಅರ್ಥಚ್ಛಾಯೆಯ ಮಾರ್ಪಾಟುಗಳನ್ನು ನಿರ್ಣಯಿಸುವುದು ಒಂದೊಂದು ಸನ್ನಿಹಿತ ಸಂದರ್ಭವಾಗಿದೆ. ಸೂಕ್ಷ್ಮವಾದ ಕ್ಷೇತ್ರಕಾರ್ಯದ ಮೂಲಕ ಮಾತ್ರ ಈ ಸನ್ನಿಹಿತ ಸಂದರ್ಭವನ್ನೂ ಅದು ಉತ್ಪಾದಿಸುವ ಅರ್ಥವನ್ನು ಕಂಡುಕೊಳ್ಳಲು ಸಾಧ್ಯ. ಇದು ಬಹಳ ಶ್ರಮ ತಗಲುವ ಕೆಲಸವಾಗಿದೆ. ಒಬ್ಬರು ಒಂದು ಗಾದೆ ಮಾತನ್ನು ಯಾವಾಗ ಬಳಸುವರೆಂದು ಮುಂದಾಗಿ ಎಣಿಸಲು ಸಾಧ್ಯವಿಲ್ಲ. ಇದೇ ಕ್ಷೇತ್ರಕಾರ್ಯವನ್ನು ತೊಡಕಿಗೆ ಒಡ್ಡುವ ಅಂಶ.

ಸಂದರ್ಭವೆಂಬುದೇ ಒಂದು ಗಾದೆ ಮಾತಿನ ಜೀವ. ಸಂದರ್ಭದಿಂದ ಕಿತ್ತು ತೆಗೆದರೆ ಗಾದೆ ಒಂದು ಸಾಮಾನ್ಯ ಹೇಳಿಕೆಯಾಗಿಬಿಡುತ್ತದೆ. 'ಆಡು ಮಲಗಿದ್ದ ಕಡೆ ರೋಮ ಕಾಣಿಸುತ್ತದೆ' (ಆಡು ಕಿಡನ್ನಿಡತ್ತ್ ಪೂಡಂ ಕಾಣುಂ) ಎಂಬುದನ್ನು ಸಂದರ್ಭದಿಂದ ಹೊರತೆಗೆದು ಇರಿಸಿದರೆ, ಅದೊಂದು ಸಾಮಾನ್ಯ ಹೇಳಿಕೆಯಾಗಿ ಬಿಡುತ್ತದೆ. ಆದರೆ ಒಬ್ಬ ಮಾಡಿವ ಕೆಡುಕಿನ ಬಗೆಗೆ ಈ ಗಾದೆಯ ಪ್ರಯೋಗವಾದರೆ ಎಷ್ಟು ಮುಚ್ಚಿಡಲು ಯತ್ನಿಸಿದರೂ ಮೊಸದ ಹೂರಣ ಹೊರಬೀಳುತ್ತದೆ ಎಂಬ ಅರ್ಥ ಇವರಿಂದ ಹೊರಪಡುತ್ತದೆ. ಸಂದರ್ಭದ ಬಗೆಗೆ ಸರಿಯಾದ ಗ್ರಹಿಕೆಯಿಲ್ಲದೆ ಹೋದರೆ ಗಾದೆಮಾತು ಬಳಸಲು ಬರುವುದಿಲ್ಲ. ಉಚಿತವಾದ ಸಂದರ್ಭದಲ್ಲಿ ಪ್ರಯೋಗಿಸುವಾಗ ಮಾತ್ರ ಗಾದೆಯ

'ಧರ್ಮ' ನಿರ್ವಹಿಸಲ್ಪಡುತ್ತದೆ. ಹೇಳಿದ ವಿಷಯವನ್ನು ಬೆಂಬಲಿಸುವುದು, ಕೇಳುವವನಿಗೆ ಉಪದೇಶವೀಯುವುದು, ಹೇಳಿದ್ದನ್ನು ಗಟ್ಟಿಮಾಡುವುದು, ಹೇಳಿದ್ದನ್ನು ವಿಶೇಷಿಸಿ ಚಂದಮಾಡುವುದು ಮುಂತಾದ ಅನೇಕ 'ಧರ್ಮ'ಗಳು ಗಾದೆ ಮಾತಿಗಿವೆ. ಈ ಧರ್ಮಗಳೆಲ್ಲ ಗಾದೆ ಮಾತನ್ನು ಬಳಸುವ ಸನ್ನಿಹಿತ ಸಂದರ್ಭಗಳನ್ನೆ ಆಶ್ರಯಿಸುವುದು.

ಮಲಯಾಳದ ಗಾದೆ ಮಾತುಗಳನ್ನು ಸೂಕ್ಷ್ಮವಗಿ ವಿಶ್ಲೇಷಿಸಿದರೆ ಕೇರಳ ಸಮೂಹರಚನೆ, ಭೂಪ್ರಕೃತಿ, ಹವಾಮಾನ, ಕೃಷಿ ಪದ್ಧತಿ, ಉದ್ಯೋಗ ಇಂತ ವಿವಿಧ ವೈಶಿಷ್ಟ್ಯಗಳೇ ಅವುಗಳನ್ನು ರೂಪಿಸಿರುವುದೆಂದು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

ಅಂಕವನ್ನೂ (ಯುದ್ಧವನ್ನೂ) ಕಾಣಬಹುದು ತಾಳಿ[1]ಯನ್ನೂ ಮುರಿಯಬಹುದು
(ಅಂಕವುಂ ಕಾಣಾಂ ತಾಳಿಯಮೊಡಿಕ್ಕಾಂ)
ಅಂಕ ಹೋರಾಡಿ ಕುಲಹಗೆ ತೀರಿಸಬೇಕು
(ಅಂಕಂ ಪೊರ್‌ದ್ ಕುಡಿಪ್ಪಗ ವೀಟ್ಟಣಂ)
ಅಂಕ ಹೋರಾಡಿದರಷ್ಟೆ ಊರನು ಹಿಡಿಯಲು ಸಾಧ್ಯ
(ಅಂಕ ವೆಟ್ಟಿಯೇ ನಾಡು ಪಿಡಿಕ್ಕೂ)

1. ತಾಳಿ – ಜಿಡ್ಡು ತೆಗೆಯಲು ಬಳಸುವ ಲೋಳೆಗೆ ಜಜ್ಜುವ ಗಿಡ.

ಇತ್ಯಾದಿ ಗಾದೆ ಮಾತುಗಳು ಯುದ್ಧಕ್ಕೂ, ಕೌಟುಂಬಿಕ ಹಗೆಗೂ ಪ್ರಾಮುಖ್ಯ ನೀಡಿದ ಊರ ಆಡಳಿತಗಾರರ ಸಮುದಾಯದ ಸೃಷ್ಟಿಗಳು ಎಂಬುದು ಸುವ್ಯಕ್ತ.

'ಅಂದ ಊಟ್ಟುಪ್ಪುರಕ್ಕ್ ಇಂದ ಸಂಧ್ಯಾವಂದನಂ' (ಆ ಊಟದಮನೆಗೆ ಈ ಸಾಂಧ್ಯಾವಂದನೆ) ಎಂಬ ಗಾದೆಯಲ್ಲಿ 'ಊಟ್ಟುಪ್ಪುರ' (ಊಟದ ಮನೆ) ಮತ್ತು 'ವಾರಸದ್ಯ' (ದಿನ ಜೌತಣ) ನಡೆಯುತ್ತಿದ್ದ ಕೇರಳದ ಬ್ರಾಹ್ಮಣರ ಶಬ್ದವೆ ಕೇಳುವುದು. ದೇವಾಲಯದ ಊಟದಮನೆಯಲ್ಲಿ ಸಿಗುವ ಊಟ ತೀರ ಹಾಳುಮಟ್ಟದಲ್ಲಿತ್ತು. ಆಗ ಸಂಧ್ಯಾವಂದನೆಯೂ ಅದಕ್ಕೆ ತಕ್ಕಷ್ಟು ಮಾತ್ರ ಉದ್ದಕ್ಕೆ ಚಾಚಿಕೊಳ್ಳುತ್ತದೆ ಎಂದೇ ಮೇಲಿನ ಗಾದೆಯ ವಾಚ್ಯಾರ್ಥ. ಆದರೂ ಊಟಕ್ಕೆ ಬೇಕಾಗಿ ಮಾತ್ರ ಸಂಧ್ಯಾವಂದನೆ ಎಂಬ ಧ್ವನಿ ಇಲ್ಲಿ ಮುಖ್ಯವಾಗಿ ಕಾಣುತ್ತದೆ.

ಗಂಡಿರುವಾಗ ಹೆಣ್ಣು ಆಳಿದರೆ
ಕಂಬವಿರುವಾಗ ಸೂರು ಕೆಳಗೆ
(ಆಣುಳ್ಳಪ್ಪೋಳ್ ಪೆಣ್ಣುಭರಿಚ್ಚಾಲ್
ತೂಣುಳ್ಳಪ್ಪೋಳ್ ಪುರತಾಟಿ)

ಚೆಲುವೆಯಾದವಳೂ ಕೆಲಸಕ್ಕಾಗಳು

(ಅಟಿಕುಳ್ಳ ಪೆಣ್ಣ್ ಪಣೆಕ್ಕಾಗ)

ಅಡುಗೆಮನೆ ಹುಡುಗಿಯ ಚೆಲುವು ನೋಡಬೇಕೊ?

(ಅಡುಕ್ಕಳಪ್ಪೆಣ್ಣಿನಟಿಕು ನೋಕ್ಕಣೋ?)

ಶುಂಠಿಯೂ ಹೆಣ್ಣೂ ಬೆಂದಷ್ಟೂ ಮೆದು

(ಇಂಜಿಯುಂ ಪೆಣ್ಣುಂ ಪದಕ್ಕುನ್ನಿಡತ್ತೋಳಂ ಪತಯುಂ)

ಇಟ್ಟಿಯಮ್ಮ ಓಡಿದರೆ ಹೆಬ್ಬಾಗಿಲವರೆಗೆ

(ಇಟ್ಟಿಯಮ್ಮ[1] ಚಾಡಿಯಾಲ್ ಕೊಟ್ಟಯಂಬಲಂ[2] ವರೆ)

ಈಯೆಲ್ಲ ಗಾದೆಗಳು ನಮ್ಮ ಸಮಾಜ ರಚನೆಯಲ್ಲಿ ಸ್ತ್ರೀಗೂ ಪುರಷನಿಗೂ ಕಲ್ಪಿಸುವ ಮೌಲ್ಯವೇನು ಎಂಬುದನ್ನು ಸೂಚಿಸುತ್ತವೆ. ಗಂಡುಸು ಆಳುವುದಕ್ಕೂ ಹೆಂಗಸೂ ಮನೆಯೊಳಗೆ ಇರುವುದಕ್ಕೂ ಯೋಗ್ಯರೆಂದು ವಿಧಿಸುವ ಸಮೂಹದಿಂದಲೆ ಈ ಬಗೆ ಗಾದೆಗಳು ಹುಟ್ಟಿಕೊಳ್ಳುವುದು.

---

1. ಸ್ತ್ರೀ →ಇಸ್ತ್ರೀ →ಇಟ್ಟಿ →ಇಟ್ಟಿಯಮ್ಮ (ಗರತಿ). 2. ಕೊಟ್ಟಿಯಂ ಬಲಂ →ಗೋಷ್ಠದ ಮನೆ → ಕೊಟ್ಟಿಗೆ ಬಳಿಯ ಪಡಿಪ್ಪುರ →ಹೆಬ್ಬಾಗಿಲು.

ಸಮಾಜದ ಉತ್ಪಾದನೆ ವ್ಯವಸ್ಥೆಯಲ್ಲಿ ಮಹಿಳೆ ವಹಿಸಿದ್ದ ಪಾಲುಗಾರಿಕೆಯನ್ನು ಮುಚ್ಚಿಡುವಂಥದು ಈ ಬಗೆ ಗಾದೆಗಳು. ಸಮಾಜ ವ್ಯವಸ್ಥೆಯ ವೈರುಧ್ಯಗಳು ಗಾದೆ ಮಾತುಗಳಲ್ಲಿ ಒಳಗೊಳ್ಳುತ್ತವೆ ಎಂಬುದರಲ್ಲೆ ಗಾದೆ ಮಾತುಗಳನ್ನು ಮುಂದಿಟ್ಟಿಕೊಂಡು ಸ್ತ್ರೀಪರ ಅಧ್ಯಯನಗಳು ಉಂಟಾಗುವುದು.

'ಬಡಗುಮನೆ ಏರಿದರೆ ತಂಕುಮನೆ ತಗ್ಗುತ್ತದೆ' ಇದು ಹಳೆಯ 'ನಾಲು ಕೆಟ್ಟು' ಮನೆಯ ವಾಸ್ತುವಿಗೆ ಸಂಬಂಧಿಸಿದ ಗಾದೆ ಮಾತೆಂದು ತೋರುತ್ತದೆ. (ವಡಕ್ಕಿನಿ ಪೊಂದ್ಯಾಲ್ ತೆಕ್ಕಿನಿ ತಾಮಿಂ) ಇಲ್ಲಿ ವಡಕ್ಕಿನಿ (ಬಡಗುವನೆ) ಸ್ತ್ರೀಯರ ವಾಸಸ್ಥಾನ. ತಕ್ಕಿನಿ(ತಂಕಮನೆ) ಪುರುಷರ ವಾಸಸ್ಥಾನ. ವಡಕ್ಕಿನಿ ಏರುವುದೆಂದರೆ ಸ್ತ್ರೀಯರ ಆಡಳಿತ ಎಂದೇ ಅರ್ಥ. ಅದು 'ತರವಾಡ'(ಮನೆತನವ)ನ್ನು ನಾಶಗೊಳಿಸುತ್ತದೆ ಎಂಬುದೇ ಸೂಚನೆ.

ಸ್ತ್ರೀಗೂ ಪುರುಷನಿಗೂ ಸಮಾಜ ಒಂದೊಂದು ಮೌಲ್ಯವನ್ನು ವಿಧಿಸಿದ ಹಾಗೆ ಒಂದೊಂದು ಜಾತಿಗೂ ಪ್ರತ್ಯೇಕ ಸ್ಥಾನವನ್ನು ಸಮಾಜದಲ್ಲಿ ಕೊಡಲಾಗಿತ್ತು. ಜಾತಿ ವ್ಯವಸ್ಥೆಯಿಂದ ವಿಂಗಡಿತವಾದ ಕೇರಳೀಯ ಸಮೂಹದ ಚಿತ್ರವನ್ನೂ ಗಾದೆ ಮಾತುಗಳಲ್ಲಿ ಕಾಣಬಹುದು.

'ಇಡಲ ಚೂಡಲಕ್ಕಾಗ, ಶೂದ್ರನ್ ಒಟ್ಟುಮಾಗ'

(ಸಮಿಧೆ ಸುಡುಗಾಡಿಗಾಗದು, ಶೂದ್ರನಿಗೆ ಹೇಗೂ ಆಗದು)

(ಇಡಲ ಎಂಬ ಹೋಮದ ಬಳಕೆಯ ಕಟ್ಟಿಗೆ. ತತಕ್ಷಣ ಉರಿದು ಹೋಗುವಂಥದು. ಅದು ಶವದ ದಹನಕ್ಕೆ ಸಾಕಾಗದು. ಶೂದ್ರನಿಗಂತು ಅದು ಹೇಗೂ ಆಗದು. ಯಾಕೆಂದರೆ ಆತನ ದೇಹಗಟ್ಟಿಮುಟ್ಟಾದುದು).

'ಇಡಚ್ಚೇರಿ ನಾಯರುಂ ಕುರುತ್ತೋಲ ಚ್ಚೊಟ್ಟುಂ ಇಡಕ್ಕು ಚೆಲ್ಲುಂಬೋಳ್ ಚದಿಕ್ಕುಂ' (ಇಡಚ್ಚೇರಿ ನಾಯರೂ ತೆಂಗಿನ ಎಳಸೋಗೆದೊಂದಿಯೂ ಎಡೆಗೆ ಸೇರುವಾಗಿ ವಂಚಿಸುವುದು ಖಚಿತ).

(ಕಿರಿಯಂ, ಇಲ್ಲಂ, ಸ್ವರೂಪಂ, ಪಾದಮಂಗಲಂ ಇವು ನಾಯರ್ ಜಾತಿಯ ನಾಲ್ಕು ವಿಭಾಗಗಳು. ಇವುಗಳಲ್ಲಿ ಒಂದು ಸ್ವರೂಪವೇ ಇಡಚ್ಚೇರಿಯವರು. ಈ ವಿಭಾಗದವರ ಬಗೆಗಿರುವ ಸಾಮಾನ್ಯ ಗ್ರಹಿಕೆಯನ್ನೆ ಮೇಲೆ ಗಾದೆ ಹೇಳುವುದು).

'ಆಂಡಿಮಗನೆ ಶಂಖೂದ್ಯಾನ್ ಪಠಿಪ್ಪಿಕ್ಕಣೋ?'

(ಆಂಡಿಮಗನಿಗೆ ಶಂಖಊದಲು ಕಲಿಸಿಕೊಡಬೇಕೋ?) (ಆಂಡಿ ಎಂಬ ಅಲೆಮಾರಿ ಪೂಜಕ–ಯಾಚಕ ವರ್ಗದ ಹುಡುಗನಿಗೆ ಶಂಖ ಊದುವ ತರಬೇತಿ ಅನಾವಶ್ಯಕ ಎಂಬ ಭಾವ. (ಇದನ್ನು ಕನ್ನಡದಲ್ಲಿ 'ದಾಸಯ್ಯನ ಮಗನಿಗೆ ಶಂಖ ಊದಲು ಕಲಿಸಿಕೊಡಬೇಕೆ?' ಎಂದು ಕೂಡ ಹೇಳಬಹುದು).

'ಜಾತ್ಯಾಲುಳ್ಳದ್ ತೂತ್ತಾಲ್ ಪೋಗುಮೋ?'

(ಹುಟ್ಟಿನಿಂದ ಇರುವುದು ಗುಡಿಸಿದರೆ ಹೋದೀತೆ?)

'ಅಡಿಮಕ್ಕ್ ಕುಪ್ಪ'

(ಗುಲಾಮನಿಗೆ ಗುಪ್ಪೆ)

'ಅಧಿಕಾರಿಯಡೆ ಕೋಟಿಮುಟ್ಟ ಕುಡಿಯಾನ್ಟೆ ಅಮ್ಮಯುಡಕ್ಕುಂ'

(ಪಠೇಲರ ಕೋಳಿಮೊಟ್ಟೆ ಒಕ್ಕಲಿನ ತಾಯಿ ಒಡೆಯುವಳು)

'ಅಮರಕ್ಕೊರು ಕೊಡಿ, ವಡವನ್ನೊರು ಕುಡಿ'

(ಅವರೆಗೆ ಒಂದು ಕುಡಿ, ವಡವನಿಗೆ ಒಂದುಗುಡಿಸಲು)

(ಅವರೆಗೆ ಒಂದು ಕುಡಿ ಹಾಕಿದರೆ ತತ್‌ಕ್ಷಣ ಅಗಲಕ್ಕೆ ಹರಡಿ ಬೆಳೆಯುತ್ತದೆ. ವಡವ ಜನರಿಗೆ ಒಂದು ಗುಡಿಸಲು ಹಾಕಲು ಬಿಟ್ಟರೆ ಅವರು ಬಲುಬೇಗನೆ ಊರುಪೂರ ತುಂಬಿಕೊಳ್ಳುವರು). ಇಂಥ ಗಾದೆ ಮಾತುಗಳು ಸಮೂಹದಲ್ಲಿರುವ ಒಂದೊಂದು ಜಾತಿಯನ್ನು ಗುರುತಿಸುವ ಕೆಲಸವನ್ನೆ ಮಾಡುವುದು.

ಒಬ್ಬ ವ್ಯಕ್ತಿಯನ್ನೂ ಆತನ ಸ್ವಭಾವವನ್ನೂ ಜಾತಿಯ ತಳಹದಿಯಲ್ಲೆ ಜಾತಿ–ಜನ್ಮಿ (ಭೂಮಾಲಕ) – ನಾಡುವಾಟಿ (ನಾಡದೊರೆ) ವ್ಯವಸ್ಥೆಯಲ್ಲಿ ಸಮೂಹ ವ್ಯಾಖ್ಯಾನಿಸುತ್ತಿದ್ದುದು. ಸಮೂಹದಲ್ಲಿರುವ ಕೆಲಸದ ವ್ಯವಸ್ಥೆ, ಅಧಿಕಾರವ್ಯವಸ್ಥೆ, ವರ್ಗಸಂಬಂಧಗಳು ಇತ್ಯಾದಿಗಳಿಗೆ ಸಂಬಂಧಿಸಿದ ವ್ಯಕ್ತವಾದ ಗ್ರಹಿಕೆಯಿದ್ದರೆ ಮಾತ್ರ ಈ ಬಗೆ ಗಾದೆಮಾತುಗಳ ಅರ್ಥ ಮನವರಿಕೆಯಾದೀತು.

'ಕುಂಭತ್ತಿಲ್ ಮಪಿಪೆಯದಲ್ ಕುಪ್ಪೇಲುಂ ಮಾಣಿಕ್ಯಂ' (ಕುಂಭ ಮಾಸದಲ್ಲಿ ಮಳೆಸುರಿದರೆ ಗುಪ್ಪೆಯಲೂ ಮಾಣಿಕ್ಯ).

'ಕೋರಿಯ ಕಿಣಜ್ಬಿಲೇ ಉಜಿವುಳ್ಳೂ' (ಗೋಡೆತ್ತಿದ ಬಾವಿಯಲ್ಲಷ್ಟೆ ಒರತೆಯದ್ದೀತು).

'ಕಳಯಿಲ್ಲಾತ್ತ ವಿಳಯಿಲ್ಲ' (ಕಳೆಯಿಲ್ಲದ ಬೆಳೆಯಿಲ್ಲ).

'ಕರ್ಕಿಟಕಂ ಕಟೆಇಞ್ಞಾಲ್ ದುರ್ಘಟನಂ ಕಟೆಇಞ್ಞು' (ಕರ್ಕಾಟಕ ತಂಗಳು ದಾಟಿದರೆ ಕುಟುಂಬದಲ್ಲಿ ದುರ್ಘಟನೆ ಕಳೆಯಿತು. ಅಂದರೆ ಮಳೆಗಾಲದ ಕಡುಬಡತನದ ಕಾಲ ಅದು).

'ಇತ್ತ್ಳ್ ಪಿಡಿಚ್ಚ ಮರಂ ಕೆಡುಂ' (ಬಂದಣಿಕೆ ಹಿಡಿದ ಮರ ಕೆಡುತ್ತದೆ)

'ಆಯಿರಂ ಕುಜುನ್ತೋಟ್ಟಿ ಕುಡಿಚ್ಚಾಲ್ ಅಯಲಜಿಯಾತೆ ಪೆಜುಂ'

(ಸಾವಿರ ಕಡಿರು/ಬಲಾ ಕುಡಿದರೆ ನೆರೆ(ಮನೆ)ಯರಿಯದೆ ಹೆತ್ತಾಳು) (ಸಾವಿರ ಕಡಿರು–ಪಕ್ಷೀರಬಲಾ) ಮೊದಲಾದ ಗಾದೆ ಮಾತುಗಳು ಕೇರಳೀಯ ಜನತೆ ತಮ್ಮ ಹವಾಮಾನ, ಭೂಪ್ರಕೃತಿ, ಸಸ್ಯಜಾಲ ಇತ್ಯಾದಿಯನ್ನು ಯಾವ ಬಗೆಯಲ್ಲಿ ಗ್ರಹಿಸುತ್ತದೆ ಎಂಬುದನ್ನು ಸೂಚಿಸುತ್ತದೆ.

ಪ್ರದೇಶ, ಸಮೂಹ ಮತ್ತು ಕಾಲ ಇವೇ ಗಾದೆಯೊಳಗಿರುವ ಸೂಚಕಗಳನ್ನು ನಿರ್ಣಯಿಸುವ ಘಟಕಗಳು. ಅದರಿಂದಲೇ ಸಾಮಾಜಿಕ ಪರಿವರ್ತನೆ ಗಾದೆ ಮಾತಿನಲ್ಲಿ ಮೂಲಭೂತ ಬದಲಾವಣೆಗಳನ್ನು ತುರತ್ತದೆ. ಜಾತಿ ಸಮುದಾಯಗಳ ನೆಲೆಯಿಂದ ಪ್ರಜಾತಾಂತ್ರಿಕ ಸಮುದಾಯದ ಕಡೆಗಿನ ಬೆಳವಣಿಗೆ ಜಾತಿಯನ್ನು ಕೇಂಂದ್ರೀಕರಿಸಿ ನೆಲೆ ನಿಂತಿದ್ದ ಗಾದೆ ಮಾತುಗಳಲ್ಲಿ ಹಲವನ್ನು ವಿಸ್ಮೃತಿಗೆ ತೂರುತ್ತದೆ. ಕೃಷಿ ಪದ್ಧತಿ, ಶ್ರಮ ವಿನಿಯೋಗ ಇಂಥವುಗಳಲ್ಲಿರುವ ಮಾರ್ಪಾಟು ಕೂಡ ಗಾದೆ ಮಾತನ್ನು ವಶಪಡಿಸಿಕೊಳ್ಳುತ್ತದೆ. ಗಾದೆ ಮಾತಿನ ರೂಪ ಹಳೆರೀತಿಯಲ್ಲಿ ಮುಂದುವರಿಯುವಾಗಲೂ ಅದು ಹೊಸ ಅರ್ಥದಲ್ಲಿ ಪ್ರಯೋಗ ಕಾಣುವುದಕ್ಕೆ ಮಲಯಾಳದಲ್ಲಿ ದೃಷ್ಟಾಂತಗಳಿವೆ. 'ಚಕ್ಕಿನ್ ವೆಚ್ಚತ್ ಕೊಕ್ಕಿನ್ ಕೊಂಡು' (ಚಕ್ಕಿಗೆ ಇಟ್ಟದ್ದು ಕೊಕ್ಕಿಗೆ ತಗಲಿತು) ಈ ಗಾದೆ ಮಾತು ಹುಟ್ಟಿದ್ದು ಗಾಣತಿರುಗಿಸುವ (ಚಕ್ಕಾಟ್ಟಲ್) ಕುಲವೃತ್ತಿ ಹೊಂದಿದ ಒಂದು ಸಮೂಹದಲ್ಲಾಗಿತ್ತು. 'ಚಕ್ಕ್' ಎಂದರೆ ಗಾಣದ ಮುಖ್ಯ ಭಾಗ. 'ಕೊಕ್ಕ್' ಎಂದರೆ ಅದರ ಒಂದು ಕಿರು ಭಾಗ. 'ಕೊಕ್ಕ್'ಎಂಬುದಕ್ಕೆ 'ಕೊಕ್ಕರೆ' ಎಂಬ ಅರ್ಥವೂ ಇದೆ. 'ಚಕ್ಕ್' ನಿರ್ಮಿಸಲು ಇರಿಸಿದ ಮರ ಅದರ 'ಕೊಕ್ಕ್' ತಯಾರಿಸಲು ಮಾತ್ರ ಬಳಕೆಯಾಯಿತು ಎಂದು ಅದರ ವಾಚ್ಯಾರ್ಥ. ಅಂದರೆ ದೊಡ್ಡದೊಂದು ಕೆಲಸಕ್ಕಾಗಿ ಮಾಡಿಕೊಂಡ ತಯಾರಿಯಲ್ಲಿ ಕೊನೆಗೂ ಆದ ಕೆಲಸ ಸಣ್ಣದು ಎಂಬುದನ್ನು ಸೂಚಿಲು ಈ ಗಾದೆಯ ಬಳಕೆ. ಆದರೆ 'ಕೊಕ್ಕ್' ಎಂಬುದರ ನಿಜವಾದ ಅರ್ಥವರಿಯದ ಆಧುನಿಕ ಸಮಾಜ ಈ ಗಾದೆಯನ್ನು 'ಒಂದಕ್ಕೆ ಗುರಿ

ಹಿಡಿದುದು ಇನ್ನೊಂದಕ್ಕೆ ತಾಗಿತು' ಎಂಬ ಅರ್ಥದಲ್ಲಿ ಬಳಸುತ್ತಿದೆ. ಸಾಮಾಜಿಕ ಪರಿವರ್ತನೆಯನ್ನು ಅನುಸರಿಸಿ ಗಾದೆ ಮಾತಿನಲ್ಲಿ ಬದಲಾವನೆ ಆದೀತು. ಹಳೆಯ ಸೂಚನೆಗಳಿಗೆ ಬದಲು ಹೊಸ ಸೂಚನೆಗಳನ್ನು ಪ್ರಯೋಗಿಸುವ ರೂಢಿ ರೂಪುಗೊಳ್ಳುವುದು ಸ್ವಾಭಾವಿಕವೇ ಆಗಿದೆ. ವಿಶದವಾದ ಕ್ಷೇತ್ರಕಾರ್ಯದಿಮದ ಮಾತತ್ತವೆ ಈ ಬಗೆ ಬದಲಾವಣೆಗಳನ್ನು ಗುರುತಿಸಲು ಸಾಧ್ಯ.

ಎಲ್ಲರೂ ತಿಳಿಯಬಹುದಾದ ಒಮದು 'ಸಾಮಾನ್ಯ' ವಿಷಯದಿಂದ 'ವಿಶೇಷ'ವಾದ ಒಂದನ್ನು ವಿಶದೀಕರಿಸುವುದನ್ನೇ ಗಾದೆಮಾತು ಮಾಡುವುದು. ಅಲಂಕಾರ ಶಾಸ್ತ್ರದಲ್ಲಿ ಬರುವ 'ಅರ್ಥಾಂತರನ್ಯಾಸ'ಕ್ಕೆ ಸಮಾನವಾದುದು ಇದು. ಸೂಚಿತವನ್ನು ಸೂಚಕದಿಂದ ಮರೆಮಾಡುವುದನ್ನೆ ಗಾದೆ ಮಾಡುವುದು. 'ಉಂಡ ಚೋಱಿಲ್ ಕಲ್ಲಿಡರುದ್' (ಉಂಡ ಅನ್ನಕ್ಕೆ ಕಲ್ಲನ್ನಿಕ್ಕಬಾರದು) ಈ ಗಾದೆಯಲ್ಲಿ ಎರಡು ಸೂಚಕಗಳಿವೆ 1.ಉಂಡ ಚೋಱ್ (ಉಂಡ ಅನ್ನ 2.ಕಲ್ಲಿಡುಕ (ಕಲ್ಲನ್ನು ಇಕ್ಕುವುದು). 'ಉಮಡ ಅನ್ನ' ಎಂಬುದು ಉಪಕಾರ ಮಾಡಿದವನನ್ನೆ ಸೂಚಿಸುವುದು. ಹಾಗೆಯ 'ಕಲ್ಲಿಕ್ಕುವು'ದೆಂದರೆ ಉಪ್ಪಳವೇಯುವುದು ಎಂದೇ ಅರ್ಥ. ಆದರೆ ನಿಜಾರ್ಥವನ್ನು ವ್ಯಾಖ್ಯಾಥ್ ಮರೆಮಾಡುವ ಕೆಲಸ ಇಲ್ಲಿ ಆಗಿದೆ.

ಹಿರಿಯ ತಲೆಮಾರಿನಿಮದ ಹೊಸತಲೆಮಾರಿಗೆ ಗಾದೆಯ ಹರಿವು ಇರುತ್ತದೆ. 'ಹಿಂದೆ ಯಾರೋ ಹೇಳಿದ ಹಾಗೆ', 'ಹಿಂದಿನವರು ಹೇಳಿದಂತೆ' ಎಂಬ ಮುನ್ನುಡಿಯ ಬಳಕೆಯೊಂದಿಗೆ ಗಾದೆ ಮಾತನ್ನು ರೂಪಿಸಿರುವುದುಂಟು. ಈ ಹಳಮೆಯ ಮಾತುಗಳಿಗೆ ರಚನೆಗೆ ಸಂಬಂಧಿಸಿ ಕೆಲ ವ್ಯತ್ಯಾಸಗಳಿವೆ. ಆದರೂ ಅವುಗಳಿಗೆ 'ಧರ್ಮ'ದಲ್ಲಿ ವ್ಯತ್ಯಾಸವಿಲ್ಲ. 'ಪನ್ನಿಕ್ಕುನ್ನ್ ಮಱಿಜ್ಞತುಪೋಲೆ' (ಹಂದಿ ಬೆಟ್ಟದಲ್ಲಡಗಿದಂತೆ), 'ಕರಕ್ಕಿಟ್ಟ ಮೀನ್ ಪೋಲೆ' (ದಡಕ್ಕೆ ಇಕ್ಕಿದ ಮೀನಿನ ಹಾಗೆ) ಮೊದಲಾದವು ಹಳಮೆಯ ರೂಢಿಯ ಮಾತುಗಳಿಎ ದೃಷ್ಟಾಂತಗಳು. ಆಗ ಸೂಚಿಸಿದ ಮುನ್ನುಡಿ ವ್ಯಾಕ್ಯದೊಂದಿಗೆ ಪ್ರಯೋಗಿಸುವುದರೊಮದಿಗೆ ಹಳಮೆಯ ನುಡಿಗಳಿಗೆ ಹೆಚ್ಚಿನ ಅಧಿಕೃತತೆ ದೊರೆಯುತ್ತದೆ. ಹಿರಿಯ ತಲೆಮಾರಿಗೆ ಎಳೆತಲೆಮಾರು ವಿಧೇಯತೆ ಹೊಂದಬೇಕು ಎಂಬ ಸಮೂಹ ವಿಧಿಸುತ್ತದೆ. 'ಮೂತ್ತವರ್ ವಾಕ್ಕುಂ ಮುದುನೆಲ್ಲಿಕ್ಕಯುಂ ಆದ್ಯಂ ಕೈಕ್ಕುಂ ಪಿನ್ನೆ ಮಧುರಿಕ್ಕು' (ಹಿರಿಯರ ಮಾತೂ ಬಲಿತ ನೆಲ್ಲಿಕಾಯಿಯೂ ಮೊದಲು ಕಹಿ ಮತ್ತೆ ಸಿಹಿ), 'ಪಱಂಚೊಲ್ಲಿಲ್ ಪದಿರಿಲ್ಲ' (ಹಳಮೆಎನುಡಿಯಲ್ಲಿ ಜಳ್ಳಿಲ್ಲ) ಎಂಬ ಗಾದೆ ಮಾತುಗಳೂ ಹಿರಿಯ ತಲೆಮಾರಿನೊಂದಿಗೆ ಎಳೆತಲೆಮಾರು ಹೊಮದಬೇಕಾದ ವಿಧೆಯತೆಯನ್ನೆ ಒತ್ತಿ ಹೇಳುವುದು. ಕಳೆದ ತಲೆಮಾರೆಗಳ ಅನುಭವವ ಸಂಪತ್ತಿನಿಮದ ಪಾಠ ಕಲಿಯದವರಿಗೆ ಇರುವ ಎಚ್ಚರಿಕೆ ಹೆಚ್ಚಿನ ಗಾದೆ ಮಾತುಗಳ ಅಡಿಟಿಪ್ಪಣಿಯಾಗಿದೆ.

ಒಂದೇ ಗಾದೆ ವಿಭಿನ್ನ ಅರ್ಥಗಳನ್ನು ನೀಡುತ್ತದೆಂದು ಆಗಲೆ ಸೂಚಿತವಾಗಿದೆಯಷ್ಟೆ? ಅದು ಒಂದೇ ಸಾಂಘಿಕತೆಯಲ್ಲಿ ಆಗಿರಲಿಕ್ಕಿಲ್ಲ. ಇದಕ್ಕೆ 'ಉರುಳುವ ಕಲ್ಲಿನಲ್ಲಿ ಪಾಚಿ ಹಿಡಿಯದು' ಎಂಬ ಮಿಲ್ನರ್ ಉದ್ಧರದಿಂದ ಗಾದೆ ಉದಾಹರಣೆಯಾಗಿದೆ. ಇಂಗ್ಲೆಂಡಿನಲ್ಲಿ ಈ ಗಾದೆ ಮಾತು, ಯಾವುದಾದರು ವಿಷಯದಲ್ಲಿ ಗಟ್ಟಿಯಗಿ ನಿಮತರೆ ಮಾತ್ರ ಕಾರ್ಯಸಿದ್ಧಿಸುತ್ತದೆ/ಸ್ಥಿರತೆ ಇಲ್ಲದ ಇಬ್ಬಾತ

ಏನನ್ನೂ ಸಾಧಿಸಲಾರ ಎಂಬ ಅರ್ಥದಲ್ಲಿ ಬಳಕೆಯಲ್ಲಿದೆ. ಇಂಗ್ಲೆಂಡಿನ ತೊರೆಗಳಲ್ಲಿ ಹರವಿ ಕಾಣಿಸಿಕೊಳ್ಳುವ ಕಲ್ಲುಗಳು ಅಲುಗಲು ಇಲ್ಲದವುಗಳಾಗಿವೆ. ಅವುಗಳ ಮೇಲೆ ಬೆಳೆಯುವ ಪಾಚಿಯನ್ನು ಇಂಗ್ಲೆಂಡಿನವರು ಸಂಪತ್ತೆಂದೂ, ಐಶ್ವರ್ಯವೆಂದೂ ಎಣಿಸುತ್ತಾರೆ. ಇದೇ ಗಾದೆ ಮಾತಿಗೆ ಸ್ಕಾಟ್ಲಂಡಿನಲ್ಲಿ ರೂಢಿಯ ಅರ್ಥ ಬೇರೆ. 'ನಿರಂತರ ಕೆಲಸ ಮಾಡುತ್ತಲೆ ಇರುವ ಒಬ್ಬನಿಗೆ ಮುದುಡಿಕೆ ಇಲ್ಲ' ಎಂಬುದು ಇಲ್ಲಿನ ಅರ್ಥ. ಸ್ಕಾಟ್ಲಂಡಿನ ಭೂಪ್ರಕೃತಿಯಲ್ಲಿ ಕಲ್ಲುಗಳಿಗೆ 'ಸಿಲಿಂಡರ್'ಆಕೃತಿಯಿದೆ. ಆದ್ದರಿಮದ ಅವು ಸುಲಭಗವಾಗಿ ಉರುಳುತ್ತವೆ. ಪಾಚಿ ನಿರುಪಯೋಗಿ ಎಂಬುದು ಸ್ಕಾಟ್ಲಂಡಿನವರ ಗ್ರಹಿಕೆ. ಆದ್ದರಿಮದಲೆ ಆ ಸಂಸ್ಕೃತಿಯಲ್ಲಿ ಪಾಚಿ ಹಿಡಿದ ಕಲ್ಲು ಮುದುಡಿದ ವ್ಯಕ್ತಿಗೆ ಹೋಲಿಕೆಯಾಗಿ ಬಳಕೆ. ಚುಟುಕಿನಲ್ಲಿ ಹೇಳುವುದಾದರೆ ಗಾದೆಯ ಅರ್ಥ ಸಂಸ್ಕೃತಿನಿಷ್ಠ ಎನ್ನಬಹುದು. ಒಮದು ಗಾದೆ ಮಾತಿನ ಅರ್ಥಗಳಲ್ಲಿ ಸೂಕ್ತವಾಗಿದುದರ ಆಯ್ಕೆಯ ನಿರ್ಣಯ ಆ ಗಾದೆಯು ಬಳಕೆಯಲ್ಲಿರುವ ಸಂಸ್ಕೃತಿಯೆ ಆಗಿರುತ್ತದೆ. ಒಂದೊಂದು ಸಾಂಘಿಕತೆಯೂ ತಮ್ಮ ಭುಪ್ರಕೃತಿಯನ್ನೂ ಜೀವನವನ್ನೂ ಕಂಡರಿಯುವುದನ್ನು ಅನುಸರಿಸಿಯೆ ಗಾದೆಯ ಪ್ರಯೋಗದ ಅರ್ಥ ಕಲ್ಪಿತವಾಗುವುದು.

ಎಲ್ಲ ಸಂಸ್ಕೃತಿಗಳಿಗೂ ಎಕಪ್ರಕಾರ ಅನ್ವಯವಾಗುವ ಒಮದು ವಿಧಾನ ಕಂಉಕೊಮಡು ಗಾದೆಯನ್ನು ನಿರ್ವಚಿಸಲು ಅಲನ್ ಡಂಡಸ್ ಶ್ರಮಿಸಿದ್ದಾರೆ. ಇದಕ್ಕಾಗಿ ಅವರು ಗಾದೆ ಮಾತುಗಳ ಘಟಕಗಳನ್ನು ವಿರುದ್ಧ ಸ್ವಭಾವವುಳ್ಳವುಗಳೆಂದೂ, ಸಮಾನ ಸ್ವಭಾವವುಳ್ಳವುಗಳೆದೂ ಎರಡಾಗಿ ವರ್ಗೀಕರಿಸುತತ್ತಾರೆ. ಮಲಯಾಳ ಗಾದೆಗಳಲ್ಲಿ ಕೆಲಸವನ್ನು ಇಲ್ಲಿ ಉದಾಹರಿಸಿ ಇದನ್ನು ವಿಶದಪಡಿಸಬಹುದು. 'ನಾರಿ ನಡಿಚ್ಚಿಡಂ ನಾರಕಂ ನಟ್ಟಿಡಂ' (ನಾರಿ ನಟಿಸಿದೆಡೆ, ಕಿತ್ತಳೆ ನಟ್ಟ ಎಡೆ) ಎಂಬ ಗಾದೆ ಸಮಾನ ಸ್ವಭಾವವುಳ್ಳ ಘಟಕಗಳನ್ನು ಹೊಂದಿವೆ.

ನಾರಿ ನಟಿಚ್ಚಿಡಂ = ನಾರಕಂ ನಟ್ಟಿಡಂ = ನಾಶವಾಗುತ್ತದೆ.

ಕಾರಣಕ್ಕೆ ತಕ್ಕವಾಗಿ ಕಾರ್ಯ ನಡೆಯಿತು ಎಂದು ಸುಚಿಸುವಾಗ ಸಮಾನ ಸ್ವಭಾವವಿರುವ ಘಟಕಗಳನ್ನು ಕಾಣಲು ಸಾಧ್ಯವಾಗುತ್ತದೆ. ಉದಾ: ಆಲ ಚಾರಿಯಾಲ್ ಚಾಣಕಂ ನಾಱುಂ (ಕೊಟ್ಟಿಗೆಗೆ ಆತು ನಿಂತರೆ ಮೈತಗೆ ಸೆಗಣಿ ನಾತ ಬರುತ್ತದೆ). ಇಲ್ಲಿ ಕೊಟ್ಟಿಗೆಗೆ ಆತುಕೊ – ಸೆಗಣಿ ನಾತ ತಗಲಿಸಿಕೊ ಎಂಬ ಸಮಾನ ಸ್ವಭಾವಗಳೇ ಇರುವ ಘಟಕಗಳಾಗಿವೆ. ಒಂದಕ್ಕಿಮತ ಒಮದು ಹೆಚ್ಚಿಮದು ಹೇಳುವವುಗಳೂ ಗಾದೆ ಮಾತಿನಲ್ಲಿ ಸಮಾನ ಘಟಕಗಳೆಂದೇ ತಿಳಿಯಬೇಕೆಂದು ಡಂಡಸ್ ಹೇಳುತ್ತಾರೆ. ಉದಾಹರಣೆತಗೆ 'ಅಮ್ಮ ತೋಡು ಕಡನ್ನಾಲ್, ಮಗಳ್ ಪುಱ ಕಡಕ್ಕುಂ' (ತಾಯಿ ತೋಡನ್ನು ದಾಟಿದರೆ ಮಗಳು ಹೊಳೆ ದಾಟುವಳು) ಎಂಬ ಗಾದೆಯನ್ನು ಈ ಖಾತೆಗೆ ಸೇರಿಸಬಹುದು. ಇಲ್ಲೂ ಕಾರ್ಯಕಾರಣಗಳಿಗೆ ನೇರ ಸಂಬಂಧವೆ ಇರುವುದು. ಆದರೆ 'ಕಾಕ್ಕ ಕುಳಿಚ್ಚಾಲ್ ಕೊಕ್ಕಾಗುಮೋ?' (ಕಾಗೆ ಮಿಮದರೆ ಕೊಕ್ಕರೆಯಾಗುವುದೆ?) ಈ ಗಾದೆಯಲ್ಲಿ ಕಾಗೆ x ಕೊಕ್ಕರೆ/ ಮೀಹ x ಬೆಳ್ಳಗಾಗದು ಹೀಗೆ ವಿರುದ್ಧ ಸ್ವಭಾವವಿರುವ ಘಟಕಗಳನ್ನು ಒ9ಳಗೊಂಡಿವೆ. ಇಲ್ಲಿ ಕಾರ್ಯ ನಡೆದರೂ ಕಾರಣ ನಡೆದಿಲ್ಲ. (ಮಿಂದಲ್ಲಿ ಬೆಳ್ಳಗಾಗಿಲ್ಲ) ಕೆಲ ಸಂದರ್ಭದಲ್ಲಿ ಈ ವಿರುದ್ಧ ಸ್ವಭಾವ ಇನ್ನೊಮದು ರೀತಿಯಲ್ಲಿ

ಬರಬಹುದು. 'ಕುರಕ್ಕುಂ ಪಟ್ಟಿ ಕಡಿಕ್ಕಿಲ್ಲ' (ಬೊಗಳುವ ನಾಯಿ ಕಚ್ಚುವುದಿಲ್ಲ) ಎಂಬ ಗಾದೆಯಲ್ಲಿ 'ಬೊಗಳುವಿಕೆ' ಎಂಬ ಸೂಚಕವು 'ಕಚ್ಚುವುದು' ಎಂಬ ಸೂಚಕವನ್ನು ತಳ್ಳಕಳೆಯುತ್ತದೆ. ಒಮದು ಘಟಿಸುವಗಿ ಇನ್ನೊಂದು ಘಟಿಸದಿರುತ್ತದೆ. (ಉರುಳುವ ಕಲ್ಲಿಗೆ ಪಾಚಿ ಹತ್ತದೆ ಎಂಬ ಗಾದೆ ಇದೇ ಬಗೆಯಲ್ಲಿ ಇರುವಂಥು). ಬೊಗಳುವ ನಾಯಿ ಮತ್ತು ಕಚ್ಚುವನಾಯಿ ಎಂದು ಗಾದೆಯಲ್ಲಿ ವಿರುದ್ಧಾಂಶಗಳನ್ನು ಕಾಣಬಹುದು. ಇಲ್ಲಿ ಒಮದರ ಸಾನ್ನಿಧ್ಯ = ಇನ್ನೊಂದರ ಅಸಾನಿಧ್ಯ ಎನ್ನಬಹುದು. ಈ ರೀತಿ ಗಾದೆ ಮಾತಿನ ಘಟಕಗಳನ್ನು 'ಸಮಾನ ಸ್ವಭಾವ ಇರುವವುಗಳು' ಮತ್ತು 'ವಿರುದ್ಧ ಸ್ವಭಾವಗಳಿರುವವು' ಎಂದು ಎರಡಾಗಿ ವರ್ಗೀಕರಿಸುತ್ತ ಗಾದೆಯ ರಚನೆಯನ್ನು ವಿವರಿಸಲುಡಂಡಸ್ ಶ್ರಮಿಸುತ್ತಾರೆ.

ಸ್ವರೂಪದ ದೃಷ್ಟಿಯಿಂದ ಒಗಟು ಮತ್ತು ಗಾದೆ ಮಾತುಗಳಲ್ಲಿ ಪರಸ್ಪರ ಸಾಮ್ಯವಿದೆ. ಆದರೆ ಅವುಗಳ 'ದರ್ಮ' ಸಂಪೂರ್ಣ ವಿಭಿನ್ನವಾಗಿವೆ. ಒಗಟುಗಳು ಮೂಲತಃ ಮಕ್ಕಳ ವಿನೋದಕ್ಕಾಗಿ ಇರುವವುಗಳು. ಆದರೆ ಗಾದೆ ಮಾತುಗಳು ದೊಡ್ಡವರ ಮಾತುಗಳ ನಡುವೆ ಕಾಣಿಸಿಕೊಳ್ಳುವಂಥವುಗಳು.

ಒಗಟಿನಲ್ಲೂ ಗಾದೆ ಮಾತಿನಲ್ಲೂ ವಿರುದ್ಧಾಂಶಗಳ ಸಂಯೋಜನೆಯೆ ಕಾಣಿಸಿಕೊಳ್ಳುವುದು. ಆದರೆ ಒಗಟಿನಲ್ಲಿರುವ ವೈರುಧ್ಯ, ಸಿಗುವ ಉತ್ತರದಿಮದ ಪರಿಹಾರಗೊಳ್ಳುತ್ತದೆ. ಆದರೆ ಗಾದೆ ಮಾತಿನ ವೈರುಧ್ಯ ಬಗೆಹರಿಯುವುದೇ ಇಲ್ಲ. ಸಂಕ್ಷಿಪ್ತತೆ, ನಿರ್ವೈಯಕ್ತಿಕತೆ, ವಸ್ತುನಿಷ್ಠತೆ, ಸಮೂಹಪರತೆ, ತಾಳಾತ್ಮಕತೆ, ವೈಜ್ಞಾನಿಕ ಮೌಲ್ಯ, ವ್ಯಕ್ತತೆ, ಸಾಧಾರಣೀಕರಣ, ಆಲಂಕಾರಿಕತ್ವ ಮೊದಲಾದ ವೈಶಿಷ್ಟ್ಯಗಳು ಒಗಟಿಗೂ ಗಾದೆಗೂ ಸಮಾನ. ಗಾದೆ ಮಾತಿನ ಅತ್ಯಂತ ಮುಖ್ಯ ವೈಸಿಷ್ಟ್ಯವೆಂದರೆ ಅದರ ಹಳಮೆ. ಒಗಟುಗಳೆಲ್ಲ ಹಳೆಯದಾಗಬೇಕೆಂದಿಲ್ಲ. ಹೊಸ ಒಗಟುಗಳೂ ತಯಾರಾಗಿ ಬರುತ್ತಿವೆ. ಆದರೆ ಹೊಸ ಒಗಟುಗಳ ತಯಾರಿ ಸಂಖ್ಯೆಯಲ್ಲಿ ಕಡಿಮೆಯೇ. ಒಗಟಿಗೆ ಸಂಬಂಧಿಸಿ ಹೇಳುವುದಾದರೆ ಅವುಗಳ ಬಳಕೆಯ ಸಂದರ್ಭಕ್ಕೆ ದೊಡ್ಡ ಮಹತ್ತ್ವವಿಲ್ಲ.

ಆದರೆ ಗದೆಯನ್ನು ಪ್ರಸಕ್ತವನ್ನಾಗಿ ಮಾಡುವುದು ಬಳಕೆಯ ಸಂದರ್ಭವೆ. ಗಾದೆಯ ಸೂಚಿತಗಳು ಪ್ರಕೃತಿಯಲ್ಲಿರುವ ವಸ್ತುಗಳೋ ವಾಸ್ತವಗಳೋ ಆಗಿರುತ್ತವೆ. ಒಗಟಿನಲ್ಲೂ ಗಾದೆಯಲ್ಲೂ ರೂಪಿಸುವಿಕೆ ಸಂಭವಿಸುವುದಾದರೂ ರೂಪಣಗಳಲ್ಲಿ ಒಮದು ಮೂಲಭುತ ವ್ಯತ್ಯಾಸವಿದೆ. ಒಗಟಿನ ರೂಪಣ ವಾಸ್ತವವನ್ನು ಮುಚ್ಚಿಡುತ್ತದಾದರೆ, ಗಾದೆಯ ರೂಪಣ ಆಶಯ ವ್ಯಕ್ತತೆಯನ್ನೆ ಸೃಷ್ಟಿಸುವುದು.

'ಹಲವರ ಅರಿವು ಒಬ್ಬನ ವ್ಯಂಗ್ಯೋಕ್ತಿ' ಎಂದು ಗಾದೆಯನ್ನು ನಿರ್ವಚಿಸಿರುವುದಿದೆ. ಹಲವರ ಅರಿವು ಎಂಬುದರಿಮದ ಸಮೂಹದ ಅರಿವು ಎಂದೇ ಉದ್ದೇಶಿಸುವುದು. ಸಂದರ್ಭಕ್ಕೆ ಸರಿಯಾಗಿ ಒಬ್ಬ ಉಪಯೋಗಿಸುವುದರಿಂದಲೆ ಗಾದೆಗೆ ಸ್ವಾರಸ್ಯ ಉಂಟಾಗುವುದು. ಅದೇ ಒಬ್ಬರ ಫಲಿತೋಕ್ತಿ (ವ್ಯಂಗ್ಯೋಕ್ತಿ) ಎಂಬುದರಿಮದ ಅರ್ಥವಾಗುಉದು. ಭೂತಕಾಲದ ಆಳಕ್ಕೆ ಬೇರನ್ನು ನೆಟ್ಟ ಸಮೂಹಾನುಭವಗಳ ಬೆಂಬಲದೊಂದಿಗೆ ಒಮದು ವಿಶಿಷ್ಟಜೀವನ ಸನ್ನಿವೇಶವನ್ನು ವಿಶದಗೊಳಿಸಲು ಯಾವನಾದರೊಬ್ಬ ವ್ಯಕ್ತಿ ನಡೆಸುವ ಪ್ರಯತ್ನವೇ ಒಮದು ಗಾದೆ ಮಾತು. ಅದರಿಮದಲೆ ಬರೆಯಲ್ಪಟ್ಟ

ನಿಯಮಗಳೂ ಕೋರ್ಟು ವ್ಯವಸ್ಥೆಯೂ ಇಲ್ಲದ ಸಮೂಹಗಳಲ್ಲಿ ವಿವಾದ ಪ್ರಕರಣಕ್ಕೆ ತೀರ್ಪುಕೊಡುವುದಕ್ಕಾಗಿ ಗಾದೆ ಮಾತುಗಳ ಬಳಕೆಯಾಗುವುದು. ನೈಜೀರಿಯದಲ್ಲಿ ಆರೋಪದ ವಿಚಾರಣೆಯಲ್ಲೂ ತೀರ್ಪು ನೀಡುವುದರಲ್ಲೂ ಗಾದೆಮಾತಿಗಿರುವ ಪ್ರಾಮುಖ್ಯ ಬಹಳ ಎಂದು ರಿಚಾರ್ಡ್ ಎಂ. ಡಾರ್ಸನ್ ಹೇಳುತ್ತಾರೆ. ಒಟ್ಟಿನಲ್ಲಿ ಅನೇಕ ತಲೆಮಾರುಗಳ ಜೀವನಾನುಭವದ ಆಳದಿಮದ ವರ್ತಮಾನ ಜೀವನಕ್ಕೆ ಸಾಂದರ್ಭಿಕವಾಗಿ ಮೇಲೆದ್ದು ಬರುವವುಗಳು ಗಾದೆಮಾತುಗಳು.

ತಾಯಿ ಕಲ್ಲಲ್ಲೂ ಮುಳ್ಳಲ್ಲೂ
ಮಗಳು ಮದುವೆ ಚಪ್ಪರದಲ್ಲಿ

(ಒಗಟು)

ಕೆ.ಎಂ. ಅನಿಲ್

ಟಿಪ್ಪಣಿ

ಗಾದೆ ಮಾತು ಒಬ್ಬರದೆ ಪ್ರಯೋಗ ವಿಷಯವಾದರೆ ಒಟಗಿನಲ್ಲಿ ಇಬ್ಬರ ಸಹಭಾಗಿತ್ವನ್ನು ಬಯಸುತ್ತದೆ. ಒಗಟಿಗೆ ಒಬ್ಬ ಪ್ರಶ್ನಕಾರ ಮತ್ತು ಒಬ್ಬ ಉತ್ತರದಾಯಿಕ ಅವಶ್ಯರಿರುತ್ತಾರೆ. ಗಾದೆ ಎಂಬುದು ಸರ್ವಜನೀನವಾದರೆ ಒಗಟಿನಲ್ಲಿ ಈಗ ಅಸ್ತಿತ್ವದಲ್ಲಿ ಇಲ್ಲದ ಹಲವು ಸಮೂಹಗಳಿವೆ. ಮೌಖಿಕ ಪರಂಪರೆಯ ಒಮದು ಬಗೆ 'ಕೇಳಿ'ಯೇ ಒಗಟು ವಸ್ತು/ವಾಸ್ತವಗಳನ್ನು ಮರೆಮಾಚಿ ಪ್ರಶ್ನೆಯ ರೂಪವನ್ನು ತಯಾರಿಸುವುದು, ಆ ಪ್ರಶ್ನೆಯಿಂದಲೆ ವಸ್ತು/ವಾಸ್ತವಗಳನ್ನು ಕಂಡರಿಯುವುದು ಇದರ ರೀತಿ. ಸಾಮಾನ್ಯವಾಗಿ ಮಕ್ಕಳ ವಿನೋದೋಪಾಧಿಯಾಗಿ ಒಗಟನ್ನು ಕಾಣುವುದಾದರೂ ಅಪೂರ್ವವಾಗಿ ಹಿರಿಯರ ಅಭ್ಯಾಸವಾಗಿಯೂ ಇದು ನೆಲೆಸಿದೆ. ಕರ್ನಾಟಕದ ಕೆಲವು ಸಮುದಾಯಗಳಲ್ಲಿ ಮದುವೆ ದಿವಸ ವಧೂವರರು ಒಗಟು–ಪರಿಹಾರ ವಿನಿಮಯ ಮಾಡಬೇಕೆಂಬ ವಿಧಿ ಇದೆ. ಸಾಂಘಿಕತೆಗೆ, ಸಾಂಘಿಕತೆ ಬಗೆಗೂ ಜೀವನ, ಜೀವನಪರಿಸರ ಇತ್ಯಾದಿಗಳೆ ಬಗೆಗೂ ಅರಿವು ದೊರೆಯುವುದರಲ್ಲಿ ಒಗಟಿಗೆ ಗಣ್ಯವಾದ ಪಾಲು ಇದೆ.

ಮಲಯಾಳದಲ್ಲಿ ಒಗಟುಗಳ ಬಗೆಗೆ ಬಹಳ ಪರಿಮಿತವಗಿಯಷ್ಟೆ ಅಧ್ಯಯನವಗಿದೆ. ಬಹುಶಃ ಗಂಭೀರವಾದ ಒಮದು ಜಾನಪದ ವಸ್ತುವಾಗಿ ಇದನ್ನು ಪರಿಗಣಿಸದಿದ್ದುದೇ ಇದಕ್ಕೆ ಕಾರಣವಾಗಿರಬಹುದು. ಕೇರಳದಲ್ಲಿ ಮಕ್ಕಳ ಒಮದು ಮನೋರಂಜನಾ ವಿಷಯವಾಗಿ ಮಾತ್ರ ಒಗಟು ಮೆಲೆಸಿದೆ. ಆದರೂ ಇವತ್ತಿಗೂ ಅದೊಂದು ಜೀವಂತ ಜಾನಪದ ರೂಪವಾಗಿದೆ. ಜೀವನದ ಪರಿಸರಗಳಲಿ ಬದಲಾವಣೆ ಉಂಟಾಗುವಾಗ ಈ ಜಾನಪದದ ಬಗೆಯನ್ನು ಕೈಬಿಡದೆ ಇದ್ದುದು ಮತ್ತು ಹೊಸ ರೂಪದಲ್ಲಿ ನೆಲೆಗೊಳಿಸಿದುದು ಇದಕ್ಕಾಗಿ ಸಿನೆಮಾ ಹೆಸರುಗಳ ಮೊದಲ ಅಕ್ಷರ ಹಿಡಿದು ಒಗಟು ಹೇಳುವ ರೀತಿ ಒಗಟಿಗೆ ಬಂದೊದಗಿದ ಹೊಸ ರೂಪವಾಗಿದೆ.

'ಮುಱ್ಱತ್ತೆ ಎಪ್ಪಿನಡಪ್ಪಿಲ್ಲ– ಕಿಣರ್' (ಅಂಗಳದ ಭಂಡಾರಕ್ಕೆ ಮುಚ್ಚಳವಿಲ್ಲ– ಬಾವಿ)

'ಅಮ್ಮ ಕಲ್ಲಿಲುಂ ಮುಳ್ಳಿಲುಂ ಮೋಳ್ ಕಲ್ಯಾಣಪ್ಪಂದಲಿಲ್' (ತಾಯಿ ಕಲ್ಲಲ್ಲೂ ಮುಳ್ಳಲ್ಲೂ – ಮಗಳು ಮದುವೆ ಚಪ್ಪರದಲ್ಲಿ– ತೆಂಗು ಮತ್ತು ಅದರ ಹೂಗೊನೆ.)

'ಆನ ಕೇಱೂಮಲ, ಆಳ್ ಕೇಱೂಮಲ

ಆಯಿರಂ ಕಾಂದಾರಿ ಪೂತ್ತಿಜ್ಜ್ – ಆಕಾಶತ್ತಿಲೆ ನಕ್ಷತ್ರಜ್ಞಳ್ (ಆನೆ ಏರದ ಬೆಟ್ಟ, ಮಂದಿ ಏರದ ಬೆಟ್ಟ, ಸಾವಿರ ಗಾಂಧಾರಿ (ಮೆಣಸು) ಹೊತ್ತು ಇಳಿಯಿತು – ಆಕಾಶದ ನಕ್ಷತ್ರಗಳು)

ಈ ಬಗೆ ಎಷ್ಟೆಷ್ಟೊ ಒಗಟುಗಳು ಕೇರಳದ ಮಕ್ಕಳ ನಾಲಿಗೆ ತುದಿಯಿಂದ ನಮಗೆ ಸಂಗ್ರಹಿಸಲು ಸಿಗುವವು. ಅವರಿಗೆ 'ಕಡಂ ಪಜಿಯಲ್' (ಒಗಟು ಹೇಳುವುದು) ಒಮದು ಮನೋರಂಜನೆ. ಮನೆಯಲ್ಲೂ ಶಾಲೆಯಲ್ಲೂ ಗುಂಪು ಸೇರಿ ಒಗಟು ಹೇಳುವ ಪದ್ಧತಿ ಮಕ್ಕಳ ನಡುವೆ ಇದೆ. ಒಬ್ಬ ಒಗಟು ಹೇಳುವುದು, ಇನ್ನೊಬ್ಬ ಅದರ ಉತ್ತರ ಹೇಳುವುದು ಹೀಗೆ ಇಬ್ಬರು ಒಗಟು ಹೇಳಿ ಆಡಬಹುದು. ಇನ್ನೊಮದು ಬಗೆ ಇದೆ. ಮಕ್ಕಳು ಎರಡು ಗುಂಪುಗಳಾಗಿ ವಂಗಡಗೊಂಡು ಒಗಟು ಹೇಳಿ ಸ್ಪರ್ಧಿಸುವುದಿದೆ. 'ಕಡಂಕಥ' ಎಂದರೆ 'ಸಾಲದ ಕಥೆ' ಎಂದರ್ಥ. ಒಬ್ಬರಿಗೆ ಒಗಟು ಬಿಡಿಸಲು ಆಗದೆಹೋದರೆ ಅವರ ಮೇಲೆ ಒಂದು ಸಾಲ (ಕಡಂ) ಹೇರಲ್ಪಡುತ್ತದೆ. ಸೋಲುವಾತ ಸಾಲಕ್ಕೆ ಸಿಲುಕುವ ಕಾರಣವೇ ಈ ಜಾನಪದ ವಾಙ್ಮಯ ರೂಪಕ್ಕೆ 'ಕಡಂಕಥ' ಎಂಬ ಹೆಸರು ಬಮದಿರಬಹುದು.

ಕಡಂಕಥೆಯನ್ನು ನಿರ್ವಚಿಸಲು ಅನೇಕ ವಿದ್ವಾಂಸರು ಪ್ರಯತ್ನಿಸಿದ್ದಾರೆ. ಡಾ. ಪೆಷ್, ಆರ್ಚರ್ ಟೇಯ್ಲರ್, ರಾಬರ್ಟ್ ಎಂ. ಜಾರ್ಜೆಸ್, ಅಲನ್ ಡಂಡಸ್ ಮೊದಲಾದವರ ಶ್ರಮಗಮನಾರ್ಹ. ಇವರ ನಿರ್ವಚನಗಳಲ್ಲಿ ಒತ್ತುಗಳ ವಿಷಯವಾಗಿ ವ್ಯತ್ಯಾಸವಿದೆಯಾದರೂ, ಎಲ್ಲಾ ನಿರ್ವಚನಗಳಲ್ಲಿ ಒತ್ತುಗಳ ವಿಷಯವಾಗಿ ವ್ಯತ್ಯಾಸವಿದೆಯಾದರೂ, ಎಲ್ಲಾ ನಿವ್ವನಗಳಲಿ ಮುರು ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ– 1)ಸೂಚಕ 2)ಸೂಚಿತ 3)ನಿಷೇಧ. ಪ್ರಪಂಚದಲ್ಲಿ ಒಂದು ಮಗು ಕಂಡುಕೊಳ್ಳುವ ಒಂದು ವಸ್ತು/ವಸ್ತುತತೆ ಇದೇ 'ಸೂಚಿತ'. 'ಸೂಚಕ'ದಿಂದ 'ಸೂಚಿತ'ಕ್ಕೆ ತಲುಪುವುದನ್ನು ತಡೆಯುವ ಪ್ರಕ್ರಿಯೆಯೇ 'ನಿಷೇಧ'. ಒಂದು ಉದಾಹರಣೆ– 'ಜ್ಞಟ್ಟಿಲ್ಲಾ ವಟ್ಟಯಿಲ' (ತೊಟ್ಟಿಲ್ಲ, ಉರುಟುಎಲೆ) ಎಂಬುದು ಗಾದೆಯ ಸೂಚಕ ಕೊಟ್ಟು ಇರುವುದು ಯಾವುದೆ ಎಲೆಯ ಸಾಮಾನ್ಯ ಸ್ವಭಾವವಾಗಿದೆ. ಇಲ್ಲಿ ಆ ಸಮಾನ್ಯ ಸ್ವಭಾವವನ್ನು ನಿರಾಕರಿಸಲಾಗಿದೆ. ಇದೇ 'ನಿಷೇಧ'. ಪ್ರಶ್ನೆಯಿಂದ ಉತ್ತರಕ್ಕೆ ತಲುಪುವುದಕ್ಕೆ ತಡೆಯಾಗುವ ಘಟಕವೇ ನಿಷೇಧ. ಈ ಮೂರೂ ಘಟಗಳು ಒಳಗೊಂಡು ಲಯಬದ್ಧವಾದ ಒಂದು ಜಾನಪದ ವಾಙ್ಮಯವೇ 'ಕಡಂಕಥ' (ಒಗಟು) ಎನ್ನಬಹುದು.

ಒಗಟಿನ ಧರ್ಮ

ಯಾವುದೆ ಜಾನಪದ ರೂಪದಂತೆ ಒಗಟನ್ನೂ ಒಂದು ಜನತೆ ಗುರುತಿರುವುದು ಅದರ ಧರ್ಮವನ್ನು ಮುಂದುಮಾಡಿಯೆ ಆಗಿರುತ್ತದೆ. ಒಗಟಿನ ಮುಖ್ಯ ದರ್ಮ ರಂಜನೆ. ಅಪೂರ್ವವಾಗಿ ಕೆಲ ಸಮುದಾಯಗಳಲ್ಲಿ ಆಚರಣೆಯ ಧರ್ಮವೂ ಅದಕ್ಕೆ ಇದೆ.

ಉಪನಿಷತ್ತುಗಳಲ್ಲೂ ವೇದಗಳಲ್ಲೂ ಕಾಣುವ ಒಗಟುಗಳು ಅನುಷ್ಠಾನ ಪರವಾದ ಒಗಟಿಗೆ ಪರಿಪೂರ್ಣ ನದರ್ಶನವಾಗಿವೆ. ಮಧ್ಯಪ್ರದೇಶದ ದುರ್ಗ್ ಜಿಲ್ಲೆಯ 'ಗೊಮಡ' ಜನರಲಿ ಪ್ರಚಲಿತವಾದ ಒಂದು ಬಗೆ ಒಗಟು ಬಳಕೆಯಾಗುವುದು ಮರಣಾನಂತರದ ಆಚರಣೆಗಳ ಅಂಗವಾಗಿ. ತಾಳಬದ್ಧವಾದ

ಒಂದು ಭಾಷೆಯಲ್ಲರಿಉವ ಈ ಒಗಟುಗಾನಗಳು ಇವತ್ತು ಹೆಚ್ಚುಕಡಿಮೆ ಇಲ್ಲವಾಗುತ್ತವೆ. ನಿಧನದ ದಿವಸ ರಾತ್ರಿ ವೇಳೆ ಗ್ರಾಮದ ಗಂಡಸರು ಅಗಲವಾದ ಒಂದು ಬಗೆಯ ಚೆಂಡೆಯನ್ನು ಬಾರಿಸುತ್ತ ಊರ ಪರಿಧಿ ಸಂಚರಿಸುತ್ತಾರೆ. ಎರಡು ಗುಂಪುಗಳಾಗಿ ವಿಂಗಡಗೊಳ್ಳುವ ಅವರು ಒಮದು ಭಗದಲ್ಲಿ ಹಿರಿಯ ಸಹೋದರರು ಮತ್ತು ಇನ್ನೊಂದುವಿಭಾಗದಲ್ಲಿ ಕಿರಿಯ ಸಹೋದರರನ್ನು ಪ್ರತಿನಿಧಿಸುತ್ತಾರೆ. ಒಂದು ವಿಭಾಗ ಹಾಡಿನ ಮೂಲಕ ಒಗಟನ್ನು ಒಡ್ಡುತ್ತದೆ. ಇದಿರು ತಂಡ ಒಗಟಿಗೆ ಉತ್ತರ ಗೊತ್ತಿದ್ದರೂ ಗೊತ್ತಿಲ್ಲದ ಹಾಗೆ ನಟಿಸುತ್ತ ಹಾಡನ್ನು ಉದ್ದಕ್ಕೆ ಬೆಳೆಸುತ್ತದೆ. ಈ ಬಗೆ ಹಾಡುಗಳಲಿ ಮರಣಾನಂತರ ಜೀವನ, ಪರಲೋಕ ಇತ್ಯಾದಿಗಳೇ ಮುಖ್ಯ ಆಶಯ. ಮಹಾರಾಷ್ಟ್ರದ ಠಾಣೆ ಜಿಲ್ಲೆಯ 'ವರಲಿ' ಆದಿವಾಸಿಗಳಲ್ಲಿ ಆಚರಣೆ ಅಂಗವಾಗಿ ಗಾದೆಗಳು ಬಳಕೆಯಗುವುದು ಇವತ್ತಿಗೂ ರೂಢಿಯಲ್ಲಿದೆ. ಮರದ ಬುಡದಲ್ಲಿ ದೇವ ಅಥಾವ ದೇವಿಯ ಪ್ರತಿಮೆಯನ್ನಿರಿಸಿ ಗಂಡಸರು ಮರದ ಸುತ್ತ ಕುಣಿಯುತ್ತಾರೆ. ಅದನ್ನು ಅನುಸರಿಸಿ ಒಂದು ಒಗಟಿನ ಸ್ಪರ್ಧೆ ಏರ್ಪಡುತ್ತದೆ. ಒಗಟನ್ನು ಕೇಳುವುದು ನರ್ತಕರಲ್ಲಿ,. ಅವೆಲ್ಲವೂ ಐತಿಹಾಸಿಕ ಕತೆಗಳನ್ನು ಆಧರಿಸಿದ ಒಗಟುಗಳಾಗಿರುತ್ತವೆ. ಉತ್ತರ ಕೇರಳದ 'ಮಱತ್ತು ಕಳಿ'ಯಲ್ಲಿ ಇಬ್ಬರು 'ಪಣಿಕ್ಕರ್'ಗಳು ಪರಸ್ಪರ ನಡೆಸುವ ವಾಗ್ವಾದ ಸ್ಪರ್ಧೆಯಲ್ಲಿ ಕೆಲವು ಒಗಟುಗಳನ್ನು ಕೇಳುಉದೂ ಇದೆ. ಇವನ್ನೂ ಆಚರಣೆ ವಿಭಗದ ಒಗಟುಗಳ ಜತೆಗೆ ಸೇರಿಸಬಹುದು. ಆದರೆ ನಮ್ಮ ಈಗಿನ ಸ್ಥಿತಿಯಲ್ಲಿ ಅವು ಸಂಖ್ಯೆಯಲ್ಲಿ ತುಂಬ ಕಡಿಮೆ.

ಜಾನಪದ ಒಗಟುಗಳಲ್ಲಿ ಹೆಚ್ಚಿನವು ವಿನೋದಪರವಾಗಿವೆ. ಅಗವುಗಳಲ್ಲಿ ಅಶ್ಲೀಲ ಒಗಟುಗಳೂ ಇವೆ. ವಿನೋದಪರವಾದ ಒಗಟುಗಳಲ್ಲಿ ಹೆಚ್ಚಿನವು ಪ್ರಪಂಚದ ಬಗೆಗೂ ಪರಿಸರದ ಬಗೆಗೂ ಅರಿವನ್ನು ನೀಡುವಲ್ಲಿ ಮುಖ್ಯಪಾತ್ರ ವಹಿಸುತ್ತವೆ. ಮಾತ್ರವಲ್ಲ, ಅವು ಬೌದ್ಧಿಕ ವಿಕಾಸಕ್ಕೂ ಅನುಕೂಲಿಸುತ್ತವೆ. ಪರಸ್ಪರ ಸಂಬಂಧವಿಲ್ಲದ ನಾಲ್ಕು ಮಾತನ್ನು ಒಬ್ಬ ಹೇಳುವುದು, ಇನ್ನೊಬ್ಬ ಆ ಮಾತುಗಳನ್ನು ಹೇಗಾದರೂ ಸಂಬಂಧಕ್ಕೆ ಒಳಪಡಿಸಿ ಹೇಳಿಕೆಯೊಂದನ್ನು ರೂಪಿಸುವ ಕಲೆಗಾರಿಕೆ 'ಉರ್ದು'ವಿನಲ್ಲಿದೆ. ಅವರಿದನ್ನು ವಿನೋದಪರವಾದ ಒಗಟಾಗಿಯೆ ಪರಿಗಣಿಸುವುದು. ಮಹಾರಾಷ್ಟ್ರದ ಹೆಣ್ಣುಮಕ್ಕಳೂ ಹಿರಿಯ ಸ್ತ್ರೀಯರೂ ಆಡುವ 'ಘುಗ್‌ಡಿ' ಎಂಬ ಆಟದಲ್ಲಿ ಒಗಟುಗಳನ್ನು ಬಳಸುವುದಿದೆ. ಎರಡು ಹುಡುಗಿಯರು ಕೈಕೈ ಹಿಡಿದು ವೃತ್ತಾಕಾರವಾಗಿ ತೀಗವ್ರ ವೇಗದಲ್ಲಿ ಚಲಿಸುವ ನೃತ್ತರೂಪವೇ 'ಘುಗ್‌ಡಿ'. ನೃತ್ತದ ಜತೆಗೆ ಅವರು ಒಗಟು ಸ್ಪರ್ಧೆಯಲ್ಲೂ ಎರ್ಪಡುತ್ತಾರೆ. ಇವುಗಳಲ್ಲದೆ ಸ್ಪರ್ಧಾತ್ಮಕವಾಗಿ ಒಗಟು ಗಾನಗಳನ್ನು ಹಾಡುವ ಪದ್ಧತಿ ಉತ್ತರಭಾರತದಲ್ಲಿದೆ. ಉತ್ತರ ಪ್ರದೇಶದ 'ಮಲ್‌ಹೋರ್' ಎಂಬ ಹೆಸರಿನ ಹಾಡುಗಳು ಇದಕ್ಕೆ ಉದಾಹರಣೆಯಾಗಿದೆ. ಕೃತಿಕಾ ಮಾಹೆಯಲ್ಲಿ ಕಬ್ಬಿನ ಹಾಲಿನಿಂದ ಬೆಲ್ಲ ತಯಾರಿಸುವ ವೇಳೆ ರಾತ್ರಿಯಲ್ಲಿ ಕೃಷಿಕರು ಈ ಒಗಟು ಹಾಡುಗಳನ್ನು ಹಾಡುವರು.

ಒಂದಿಷ್ಟು ಚರಿತ್ರೆ

ಪುರಾತನ ಬೆಬಿಲೋನಿಯದ ಮಕ್ಕಳ ಪಾಠ ಪುಸ್ತಕದಲ್ಲಿ ಇರುವ 'ತಿನ್ನದೆ ದಪ್ಪವಾಗುವುದು ಯಾವುದು? ಮಗುವಿಲ್ಲದೆ ಗಬ್ಬವಾಗುವುದು ಯಾವುದು? ಮೋಡ' ಇದೇ ದಾಖಲಾತಿಗೊಂಡವುಗಳಲ್ಲೆಲ್ಲ ಅತ್ಯಂತ ಪ್ರಾಚೀನ ಒಗಟು ಎಂದು ಹೇಳಲಾಗುತ್ತಿದೆ. ಪುರಾತನ ಭಾರತದ ವೇದೋಪನಿಷತ್ತುಗಳಲ್ಲಿ ಮಹಾಭಾರತ ಮೊದಲಾದ ಇತಿಹಾಸಗಳಲ್ಲೂ ಒಗಟುಗಳಿವೆ. ಮಹಾಭಾರತದಲ್ಲಿರುವ 'ಯಕ್ಷಪ್ರಶ್ನೆ' ಪ್ರಹೇಳಿಕೆಗಳಿವೆ ಉದಾಹರಣೆಯೆಂದು ಬೆಟಟುಮಾಡುವುದಿದೆ. ಸರಿ ಉತ್ತರ ಕೊಟ್ಟರೆ ಕೊಲ್ಲದೆ ಬಿಟ್ಟೇನು' ಎಂಬ ಒಡಂಬಡಿಕೆಯನ್ನೆ ಯಕ್ಷಪ್ರಶ್ನೆಯಲ್ಲಿ ಮಂಡಿಸುವುದು. ಬೈಬಲ್‌ನ ಸ್ಯಾಂಸನ್‌ನ ಕಥೆಯಲ್ಲೂ ಈ ಬಗೆಯ ಒಮದು ಒಡಂಬಡಿಕೆ ಕಾಣಿಸುತ್ತದೆ. ಈ ಬಗೆ ಒಗಟುಗಳನ್ನು Neck Riddles ಎಂದು ಆರ್ಚರ್ ಟೆಯ್ಲರ್ ಕರೆಯುತ್ತಾರೆ. ಬೌದ್ಧಸಾಹಿತ್ಯದಲ್ಲೂ, ಜೈನ ಸಾಹಿತ್ಯದಲ್ಲೂ ಪ್ರಹೇಳಿಕೆಗಳು (ಒಗಟುಗಳು) ಒಳಗೊಂಡಿವೆ. ಜಾತಕ ಕಥೆಗಳಲ್ಲೂ ಪಾರ್ಶ್ವನಾಥ ಚಚರಿತ್ರೆಯಲ್ಲಿ ಕಾಣುವ ಒಗಟುಗಳು ಇವುಗಳಿಗೆ ಉದಾಹರಣೆ. ಸಂಸ್ಕೃತ ಸಾಹಿತ್ಯದಲ್ಲಿ ಬರುವ ಕಥಾಸರಿತ್ ಸಾಗರದ ಅನೇಕ ಕತೆಗಳಲ್ಲಿ ಒಗಟುಗಳು ಕಾಣಬರುತ್ತವೆ. ಬಾಣನ 'ಕಾದಂಬರಿ'ಯಲ್ಲಿ ಶೂದ್ರಕರಾಜ ಏರ್ಪಡಿಸುತ್ತಿದ್ದ ಒಗಟಿನ ಸ್ಪರ್ಧೆಯ ಸೂಚನೆಯಿದೆ. 'ಕಾಮಸೂತ್ರ'ದಲ್ಲಿ ಸೂಚಿಸಿದ 64 ಕಲೆಗಳಲ್ಲಿ ಒಗಟು ರಚಿಸುವುದು ಮತ್ತು ಸಿಕ್ಕು ಬಿಡಿಸುವುದು ಒಳಗೊಂಡಿವೆ. 'ಕಾವ್ಯದರ್ಶ'ಕಾರನಾದ ದಂಡಿ ಒಗಟುಗಳನ್ನು 16 ವರ್ಗಗಳಾಗಿ ವಇಂಗಡಿಸುತ್ತಾನೆ. ಮಾತುಗಳು ವಿಭಜನೆ ಮೂಲಕವೂ ಶ್ಲಾಪೆ ಮೊದಲಾದ ಶಬ್ದಾಲಂಕಾರಗಳಿಮದಲೂ ಮಾತ್ರವೆ ಈ ಬಗೆ ಪ್ರಹೇಳಿಕೆಗಳಲ್ಲಿ ನಿಷೇಧವನ್ನು ಸೃಷ್ಟಿಸುವುದು. ಮಾತ್ರವಲ್ಲ ಇಂಥ ವಿಷಯಗಳು. ಪ್ರಕೃತಿ ನಿರೀಕ್ಷಣೆ, ಜೀವನಾನುಭವಗಳು ಇವುಗಳಿಮದ ರೂಪುಗೊಂಡಿರುವ ಗ್ರಾಮೀಣ ಒಗಟುಗಳಲ್ಲಿರುವ ಲಾಲಿತ್ಯ, ಸ್ವಾರಸ್ಯಗಳು ಸಾಂಸ್ಕೃತ ಸಾಹಿತ್ಯದ ಪ್ರಹೇಳಿಕೆಗಳಲ್ಲಿ ಇಲ್ಲ. ಇವು ಸಂಪೂರ್ಣ ಸಾಹಿತ್ಯಪರವಾಗಿರುವುದರಿಂದ ಗ್ರಾಮೀಣ ಒಗಟುಗಳೊಂದಿಗೆ ಪರಿಗಣಿಸಲೂ ಸಾಧ್ಯವಿಲ್ಲ.

ವರ್ಗೀಕರಣ

ಒಗಟುಗಳ ಧರ್ಮ, ರಚನೆ, ವಸ್ತು ಮೊದಲಾದವುಗಳನ್ನು ಆಧರಿಸಿ ಅವುಗಳನ್ನು ಹಲವು ಬಗೆಯಲ್ಲಿ ವರ್ಗೀಕರಿಸಬಹುದು. ಎಂ.ವಿ. ವಿಷ್ಣು ನಂಬೂತಿರಿ ಅವರು ಒಗಟುಗಳ ವಾಕ್ಯಗಳಲ್ಲಿರುವ ಕಾರ್ಯಕಾರಣ ಸಂಬಂಧ ಮತ್ತು ಧರ್ಮಗಳನ್ನು ಆಧರಿಸಿ ಅವನ್ನು ಹತ್ತು ಗುಂಪುಗಳಲ್ಲಿ ವಿಂಗಡಿಸಿದ್ದಾರೆ. ರಚನೆ ವಿಷಯವಾಗಿ ಇರುವ ವೈಶಿಷ್ಟ್ಯಗಳ ಮೇಲಿಂದ ಲಘು, ಸಂಕೀರ್ಣ, ದೀರ್ಘ ಎಂಬ ಮೂರು ಗುಂಪುಗಳನ್ನು ಮಾಡಿದ್ದಾರೆ. ಒಗಟುಗಳಲ್ಲಿರುವ ಸೂಚಕ, ಧರ್ಮ, ಸೂಚಿತ ಇವುಗಳನ್ನಾಧರಿಸಿ ಅವನ್ನು ಒಂಬತ್ತು ತೆರನಾಗಿ ವರ್ಗೀಕರಿಸಿದ್ದಾರೆ. ವಿಷಯ ವ್ಯಾಪ್ತಿಯನ್ನು ಆಧರಿಸಿ ಕೃಷಿಕ, ಜೈವಿಕ, ಗೃಹ್ಯ, ಶಾರೀರಿಕ, ಪ್ರಾಕೃತಿಕ, ಸಂಕೀರ್ಣ ಎಂದು ಒಗಟುಗಳನ್ನು ವರ್ಗೀಕರಿಸಿದ್ದಾರೆ. ಒಗಟಿನ ಪ್ರಶ್ನವಿಭಾಗದ ರಚನೆಯನ್ನು ಆಧರಿಸಿ ರಾಘವನ್ ಪಯ್ಯನಾಡ್ ಅವರು ಒಗಟುಗಳನ್ನು

ಪ್ರಶ್ನೆರೂಪ, ವಾಚಕರೂಒ, ದೀರ್ಘವಾಚಕರೂಪ, ಕಥಾರೂಪ, ಒಂಟಿ ಮಾತಿನಲ್ಲಿರುವುದು, ಸಮಸ್ಯಾರೂಪ ಎಂದೆಲ್ಲ ವಿಭಜಿಸಿದ್ದಾರೆ. ಪ್ರಶ್ನೆರೂಪ ಎಂಬುದರಿಂದ ಪ್ರತ್ಯಕ್ಷವಾಗಿಯೆ ಪ್ರಶ್ನೆಯ ರೂಪದಲ್ಲಿರುವ ಒಗಟುಗಳನ್ನೆ ಉದ್ದೇಶಿಸುವುದು. ಅವು ಅಪೂರ್ವವಾದರೂ ಹೊಸ ಒಗಟುಗಳಲ್ಲಿ ಹಲವು ಪ್ರಶ್ನೆರೂಪದಲ್ಲಿರುವವುಗಳಾಗಿವೆ. ಉದಾಹರಣೆ–

ಕಪ್ಪಯಿಲಿಲ್ಲ ಕುಪ್ಪಯಿಲುಂಡ್	ಕಪ್ಪಯಲಿ ಇಲ್ಲ ಕುಪ್ಪದಲ್ಲಿದೆ
ಚೊವ್ವಯಿಲಿಲ್ಲ ತಿಂಗಳಿಲುಂಡ್	ಮಂಗಳನಲ್ಲಿಲ್ಲ ತಿಂಗಳಿನಲ್ಲಿದೆ
ರವಿಯಿಲುಂಡ್ ಶಶಿಯಲಿಲ್ಲ	ರವಿಯಲ್ಲಿದೆ ಶಶಿಯಲ್ಲಿಲ್ಲ
ಮೂನ್ನಕ್ಷರಮುಳ್ಳ ಜನಾರ್? ಕುತಿರ	ಮೂರಕ್ಷರದ ನಾನಾರು? ಕುತಿರ

(ಕಪ್ಪ–ಪಪ್ಪಾಯಿ, ಕುಪ್ಪ–ಗುಪ್ಪೆ, ತಿಂಗಳು–ಸೋಮ, ಕುತಿರ–ಕುದುರೆ)

ನಿರೂಪಣೆಯ ರೀತಿಯಲ್ಲಿರುವ ವಸ್ತುವಿನ, ವಸ್ತುತೆಯ ವಿವರವೇ ವಾಚಕರೂಪ. ಉಧಾ– ಕಪ್ಪು ಬಂಡೆಗೆ ಬಿಳಿಬೇರಿಳಿಯಿತು – ಆನೆ ಮತ್ತು ಅದರ ದಾಡೆ.

ಎರಡು ಅಥವಾ ಹೆಚ್ಚು ವಾಕ್ಯಗಳಿರುವ ಒಗಟು ದೀರ್ಘವಾಚಕರೂಪ. ಉದಾ– 'ಆನೆಯೇರದ ಬೆಟ್ಟದಲ್ಲಿ, ಜನರು ಏರದ ಬೆಟ್ಟದ್ಲಿ ಸಾವಿರ ಗಾಂಧಾರಿ ಮೆಣಸು ಹೊತುಇಳಿಯಿತು– ಆಕಾಶದಲ್ಲಿ ನಕ್ಷತ್ರಗಳು' ಕಥಾರೂಪದಲ್ಲಿರುವ ಒಗಟುಗಳೆಲ್ಲ 'ಪ್ರಹೇಳಿಕಾ' ವಿಭಾಗದಲ್ಲಿ ಇರಬೇಕಾದವುಗಳು. ಭಾಷಿಕ ವಿಶೇಷತೆಗಳು ಒಳಗೊಂಡವುಗಳೇ ಕೊನೆಯವರ್ಗದವುಗಳು. ಉದಾಹರಣೆ–

– ಳ್ಳ

ಎಂಬ

ಮನುಷ

ಶ

– ಳ್ಳ

ಏನ್ನು

ಏರಿ

– ಳ್ಳ

ದಾಟಿ

– ಳ್ಳ

ಮನೆಗೆ

ಹೋದ

(ಪಿಳ್ಳ, ವಳ್ಳಂ (ದೋಣಿ), ವೆಳ್ಳಂ (ನೀರು), ತಳ್ಳ (ತಾಯಿ) ಎಂಬ ಶಬ್ದಗಳೇ ಕ್ರಮವಾಗಿ ಮೇಲೆ ಉದ್ದೇಶಿಸಿದ ಪೂರಣಗಳು)

ಒಗಟಿನ ಅಪರಾರ್ಥದ ರಚನೆಯನ್ನು ಅನುಸರಿಸಿ ಅವುಗಳನ್ನು ಒಂಟಿ ಶಬ್ದದಲ್ಲಿರುವುದು. ವಾಗ್ರೂಢಿ (ಶೈಲಿ) ರೂಪದಲ್ಲಿರುವಂಥದು ಮತ್ತು ವಾಚಕರೂಪದಲ್ಲಿ ಇರುವಂಥದು ಎಂದು ಮೂರಾಗಿ ವರ್ಗೀಕರಿಸಬಹುದು. ಹೆಚ್ಚಿನ ಒಗಟುಗಳ ಉತ್ತರ ಒಂದೇ ಶಬ್ದದಲ್ಲಿ ಇರುತ್ತದೆ. ಉದಾ– 'ಗೂನಿಗ ಒಂದು ಕಾಲುವೆ ತೋಡಿದ, ಹಲ್ಲಿಗ ಬಂದದ ತಟ್ಟಿ ಸಮಗೈದ – ಗದ್ದೆ ಎತ್ತು ಹಲಗೆ ಹಾಕುವುದು.' ಒಗಟಿನ ಉತ್ತರ ವಾಕ್ಯರೂಪದಲ್ಲಿದ್ದರೆ ಅದು ವಾಚಕ ಹಲಗೆ ಹಾಲಗೆ ರೂಪ ವರ್ಗಕ್ಕೆ ಸೇರುತ್ತದೆ. ಇದಕ್ಕೆ ಮಲಯಾಳದಲ್ಲಿ ಉದಾಹರಣೆ ಕಡಿಮೆ.

ಧರ್ಮವನ್ನು ಅನುಸರಿಸಿ ಒಗಟುಗಳನ್ನು ವಿನೋದಪರ, ಸಾಹಿತ್ಯಪರ ಎಂದು ವಿಭಜಿಸುತ್ತಾರೆ. ಇದರಲ್ಲಿ ವಿನೋದಕ್ಕಾಗಿಯೂ ಆಚರಣೆಗಾಗಿಯೂ ಬಳಸುವ ಒಗಟುಗಳನ್ನು ಹಿಂದೆ ಸೂಚಿಸಿದೆಯಷ್ಟೆ? ಸಂಸ್ಕೃ ಸಾಹಿತ್ಯದಲ್ಲೂ ಇತರ ಪುರಾಣಕೃತಿಗಳಲ್ಲೂ ಕಾಣುವ ಪ್ರಹೇಳಿಕೆಗಳನ್ನೆ ಸಾಹಿತ್ಯಪರ ಎಂಬ ವರ್ಗಕ್ಕೆ ಸೇರಿಸಿರುವುದು.

ವಿಶ್ಲೇಷಣೆ

ಒಂದನ್ನು ಇನ್ನೊಂದಾಗಿ ಅಧ್ಯಾರೋಪಿಸಿ ಹೇಳುವುದೆ ಒಗಟಿನ ಮುಖ್ಯ ರಚನಾವಿಧನ. 'ಬಾಯಿಲ್ಲದ ನಾಲಿಗೆ, ನಾಲಗೆ ಮೇಲೆ ಹಲ್ಲು– ಹೆರೆಮಣೆ' ಈ ಒಗಟಿನಲ್ಲಿ 'ನಾಲಿಗೆ' ಮತ್ತು 'ಹಲ್ಲು' ಇವು ಅಧ್ಯಾರೋಪಗಳಾಗಿವೆ. ಕೆಲವು ಒಗಟುಗಳಲ್ಲಿ ಒಂದು ಭಾಗ ವಾಸ್ತವವೂ ಇನ್ನೊಂದು ಭಾಗ ಅಧ್ಯಾರೋಪವೂ ಆಗಿರಬಹುದು. ಉದಾಹರಣೆಗೆ 'ತೆಂಗಿನಕಾಯಿ ಒಳಗೆ ಸೌತೆಮಿಡಿ– ತೆಂಗಿನೊಳಗಿನ ಮೊಳಕೆ' ಎಂಬ ಒಗಟಿನಲ್ಲಿ ತೆಂಗಿನಕಾಯಿ ವಾಸ್ತವವೂ ಸೌತೆಮಿಡಿ ಅಧ್ಯಾರೋಪವೂ ಆಗಿವೆ. ಅಧ್ಯಾರೋಪ ಉಪಯೋಗವಾಗುವಲ್ಲಿ ಒಗಟಿಗೆ ಕವಿತೆಯಲ್ಲಿರುವ ಅಲಂಕಾರದ ಸಾದೃಶ್ಯ ಬರುತ್ತದೆ. ಕಾರ್ಯ–ಹೇತುಗಳ ಹೊಂದಿಕೆಯ ಕೊರತೆಯನ್ನು ಸೂಚಿಸುವ ಅಲಂಕಾರ 'ವಿಷಮ' 'ಉರುಟಾಗಿ ಮೆಟ್ಟುವಾಗ ನೇರಕ್ಕೆ ಓಡುತ್ತದೆ–ಸೈಕಲ್' ಎಂಬ ಒಗಟಿಗೆ ವಿಷಮಾಲಂಕಾರದ ಸ್ವಭಾವವಿದೆ. 'ಅದು ಉಂಟಾದರೆ ಇದು ಉಂಟಾಗುತ್ತದೆ' ಎಂಬ ಹಾಗೆ ಹೇಳುವ ಒಗಟುಗಳಿವೆ. 'ಕಾಲಲ್ಲಿ ಹಿಡಿದರೆ ತೋಳಿನಲ್ಲಿ ಹತ್ತುತ್ತದೆ– ಕೊಡೆ' ಎಂಬ ಒಗಟಿನಲ್ಲಿ 'ಸಂಭಾವನ' ಎಂಬ ಅಲಂಕಾರವಿದೆ. ಕಾರಣವಿದ್ದೂ ಕಾರ್ಯ ನಡೆಯದು ಎಂಬಹಾಗಿರುವ ಅಲಂಕಾರ 'ವಿಶೇಷೋಕ್ತಿ'. ಇದೂ ಒಗಟಿನಲ್ಲಿ ಕಾಣಿಸುತ್ತದೆ. ಉದಾ– 'ನನ್ನ ತಾಯಿ ನನಗೊಂದು ಚಾಪೆಕೊಟ್ಟಳು. ತೋಯಿಸಿದರೂ, ತೋಯಿಸಿದರೂ ಒದ್ದೆಯಾಗದು– ಕೆಸುವಿನೆಲೆ'. ಅಸಂಗತೀ ನಿಬಂಧನ' ಎಂಬ ಅಲಂಕಾರದಲ್ಲಿ ಹೇತು ಬಲಗಳು ಎರಡು ಕಡೆಯಾಗಿ ಸಿದ್ಧಿಸುತ್ತವೆ. ಇದಕ್ಕೆ ಸಮಾನವಾದ ಉದಾಹರಣೆಗಳು ಒಗಟುಗಳಲ್ಲಿವೆ. ಉದಾ– 'ಇಲ್ಲಿ ಮಂತ್ರಿಸಿದರೆ ಅಲ್ಲಿ ಚೊಬ್ಬೆ– ಮೈಕ್' ಒಂದು ವಸ್ತು/ವಾಸ್ತವದ ನಾನಾ ವಿಧಗಳಾದ

ಸ್ವಭಾವವಿಶೇಷತೆಗಳಿಮದ ಅತ್ಯಂತ ಮುಖ್ಯವಾದ ಕೆಲವನ್ನು ಎತ್ತಿಕೊಮಡು ಸಮಾನವಾದ ವಸ್ತು/ವಾಸ್ತವಗಳೊಮದಿಗೆ ಸಂಯೋಜಿಸಿ ಯಥಾರ್ಥ ವಸ್ತು/ವಾಸ್ತವಗಳನ್ನು ಅಡಗಿಸಿಡುವ ಕೆಲಸವನ್ನೆ ಒಗಟು ಮಡುವುದು. ಅಲಂಕಾರದಲ್ಲಿ ಇದು ರೂಪಕಾತಿಶಯೋಕ್ತಿ ಅಲಂಕಾರಕ್ಕೆ ಸಮಾನ. 'ಎತ್ತು ಮಲಗುತ್ತದೆ, ಹಗ್ಗ ಓಡುತ್ತದೆ– ಕುಂಬಳ' ಈ ಒಗಟಿನಲ್ಲಿ ಕುಂಬಳದಲ್ಲಿ ಎತ್ತನ್ನೂ ಬಳ್ಳಿಯಲ್ಲಿ ಹಗ್ಗವನ್ನೂ ಆರೋಪಿಸಿದೆ ಅಥವಾ ರೂಪಕವನ್ನಾಗಿ ಮಾಡಲಾಗಿದೆ. ನಿಜವಾದ ವಸ್ತುಗಳನ್ನು ಆ ಮೂಲಕ ಮರೆಮಡಲಾಗಿದೆ. 'ಸರೋಜ ಯುಗಲವ ನೋಡು ಶರಗಳ ಸುರಿಯುತಿದೆ' ಎಂಬ ರೂಪಕಾತಿಶಯೋಕ್ತಿ ಅಲಂಕಾರದಲ್ಲಿ ಕಣ್ಣುಗಳೆಂಬ 'ತಾವರೆಯ ಜೋಡಿ', ನೋಟವೆಂಬ 'ಶರಗಳ ಸುರಿಯುವಿಕೆ' ಉಪಮಿತವಾಗಿವೆ. ಇಲ್ಲಿ ಕಣ್ಣು, ನೋಟಗಳೆಂಬ ಉಪಮೇಯಗಳನ್ನು ತಾವರೆ ಜೋಡಿ, ಶರಸುರಿವಿಕೆಗಳಿಮದ ಮರೆಮಾಡಿದೆ. ಅಂದರೆ ಉಪಮಾನಗಳಾದ ತಾವರೆಯುಗಲ ಮತ್ತು ಶರಗಳ ಸುರಿವಿಕೆಯನ್ನು ಮಾತ್ರ ಹೇಳಿದೆ. ಮೇಲಿನ ಒಗಟಿನಲ್ಲಿ ಸಂಭವಿಸುವುದು ಇದಕ್ಕೆ ಸಮಾನವಾದ ಪ್ರಕ್ರಿಯೆಯೇ. ಆದರೆ ರೂಪಕಾತಿಶಯೋಕ್ತಿ ಚಮತ್ಕಾರ ಪರವಾಗಿರುವುದರಿಮದ ಸಾಹಿತ್ಯದ ಸಂಕೇತ ಬಲ್ಲವರಿಗೆ ಮಾತ್ರ ಅದು ಗ್ರಾಹ್ಯವಾಗುತ್ತದೆ. ಒಗಟು ಗ್ರಾಮೀಣವಾಗಿರುವುದರಿಮದ ಅದು ಸಮೂಹದ ಎಲ್ಲರಿಗೂ ಪರಿಚಿತವಾಗಿರುತ್ತದೆ. ರೂಪಕಾತಿಶಯೋಕ್ತಿ ಅಲಂಕಾರ ಕವಿಯ ಆತ್ಮನಿಷ್ಠ (ವೈಯಕ್ತಿಕ) ಅನುಭವವಾಗಿರುತ್ತದೆ. ಒಗಟಾದರೆ ವಸ್ತುನಿಷ್ಠವಾಗಿರುತ್ತದೆ.

ಸಜಾತಿ ವಿಜಾತಿ ಭಾವಗಳನಡುವೆ ಸಂಬಂಧ ಏರ್ಪಡಿಸಿ ಯೋಚಿಸುವುದು, ಹೋಲಿಸುವುದು, ಅದರ ಬಗೆಗೊಮದು ಗ್ರಹಿಕೆ ಮೂಡಿಸುವುದು ಇತ್ಯಾದಿಯ ಪ್ರಾಥಮಿಕವಾದ ಮಾನಸಿಕ ಪ್ರಕ್ರಿಯೆಯೇ 'ರೂಪಣ' (ರೂಪಕಾಲಂಕಾರ) ಸ್ವಭಾವ. ಅದುವೇ ಒಗಟಿಗೂ ಆಧಾರ. ಕುಂಬಳ/ಎತ್ತು, ಬಳ್ಳಿ/ಹಗ್ಗ ಎಂಬ ಈ ದ್ವಂದ್ವಗಳಿಗೆ ಅಭೇದವನ್ನು ಕಲ್ಪಿಸುವುದು, ಮತ್ತೆ ಅದಕ್ಕೆ ಭೇದವಿದೆ ಎಂದು ತಓರಿಕೊಡುವುದು ಆಗುತ್ತದೆ. ಈ ಭೇದವೆ ಒಗಟಿನಲ್ಲಿರುವ ನಿಷೇಧ. ಕೆಲವೊಮ್ಮೆ ನಿಷೇಧ ನೇರವಾಗಿಯೆ ಒಗಟಿನಲ್ಲಿ ಕಾಣಿಸೀತು. ಕೆಲವೊಮ್ಮೆ ಅದು ಅರ್ಥತಲದಲ್ಲಿ ಆಗಬಹುದು. 'ಮುಳ್ಳಿದೆ ಹೊಂಗಾರಕ ಅಲ್ಲ, ಕಹಿಯಿದೆ ಕಾಸರಕನಲ್ಲ' ಎಂಬ ಒಗಟಿನಲ್ಲಿ ಇದೆ/ಇಲ್ಲ ಎನ್ನುತ್ತ ನಿಷೇಧವನ್ನು ಪ್ರತ್ಯಕ್ಷ ತಲದಲ್ಲೆ ನಿಬಂಧಿಸಿದೆ. ಆದರೆ 'ಎತ್ತು ಮಲಗುತ್ತದೆ ಹಗ್ಗ ಓಡುತ್ತದೆ' ಎಂಬ ಒಗಟಿನಲ್ಲಿ ನಿಷೆಧ ಪ್ರತ್ಯಕ್ಷ ತಲದಲ್ಲಿ ಅಲ್ಲ. ಮಲಗುವ ಎತ್ತಿನ ಹಗ್ಗ ಓಡಲಾರದು ಎಂಬ ಅನುಭವ ಸತ್ಯದ ನಿಷೇಧ. ಯಥಾರ್ಥ ವಸ್ತು/ವಾಸ್ತವ ಒಗಟಿನಲ್ಲಿ ಮರೆಮಾಡಲ್ಪಟ್ಟು ಹೊಸ ವಸ್ತು/ವಾಸ್ತವ ರಂಗಕ್ಕೆ ಪ್ರವೇಶಿಸುತ್ತದೆ. ವಸ್ತು/ವಾಸ್ತವಗಳಿಗೆ ನಮ್ಮನ್ನು ತಲುಪಿಸುತ್ತದೆ. ಈ ಎರಡು ಪ್ರಕ್ರಿಯೆಗಳು ಸಮಾಂತರವಾದ ಎರಡು ಮಾನಸಿಕ ಕಾರ್ಯಗಳಾಗಿವೆ ಒಗಟುಕಾರ ವಸ್ತುವನ್ನು ರೂಪಕವಾಗಿ ಮಾಡಿ ಮಿಥ್ಯೆಯನ್ನು ಮಂಡಿಸುತ್ತಾನೆ. ಉತ್ತರ ನೀಡುವವನು ಮಿಥ್ಯೆಯಿಮದ ವಸ್ತುವನ್ನು ಹೊರತೆಗೆಯುತ್ತಾನೆ. ಕೆಲ ಸಂದರ್ಭಗಳಲ್ಲಿ ಕೆಂದಿಲ್ಲ. ಉದಾ– 'ದೊಡ್ಡಿಯಲ್ಲೆಲ್ಲ ಬಿಳಿ ಎತ್ತು– ಹಲ್ಲು' ಎಂದಿರುವಲ್ಲಿ ಎತ್ತುಗಳೂ ಬಿಳಿಯಗಿರುವುದು ಅಸಂಭಾವ್ಯವಲ್ಲ. ಇಲ್ಲಿ ಒಗಟಿನ ಸಂದರ್ಭವೆ ಉತ್ತರ ನೀಡುಬೇಕಾದವನಿಗೆ

ನಿಷೇಧದ ಸೂಚನೆ ನೀಡುತ್ತದೆ. ಕೇಳುತ್ತಿರುವುದು ಒಗಟೆಂಬ ತಿಳಿವಳಿಕೆ ಇರುವುದರಿಂದ 'ದೊಡ್ಡಿ' ಮಾಮೂಲು ದೊಡ್ಡಿಯಲ್ಲವೆಂದೂ 'ಎತ್ತು' ಮಾಮೂಲು ಎತ್ತು ಅಲ್ಲವೆಂದೂ ಉತ್ತರನೀಡುವವರು ಊಹಿಸುತ್ತಾರೆ. ಸಂದರ್ಭವಶದಲ್ಲಿ ಇಲ್ಲಿ ನಿಷೇಧ ಸ್ವಯಂಕಲ್ಪಿತವಾಗಿದೆ. ಒಗಟು ಹೇಳುವ ಸಂದರ್ಭವಲ್ಲವಾದರೆ ಒಗಟಾಗಿ ಕಾಣಿಸಿದ ವಾಕ್ಯ ಒಗಟಾಗಿ ತೋರಬೇಕೆಂದಿಲ್ಲ. ಒಂದರೊಂದಿಗೆ ಇನ್ನೊಂದರ ಸಾಮ್ಯವನ್ನು ಹೇಳುವ ರೀತಿಯಲ್ಲೊ ಒಂದರ ಯಥಾರ್ಥ ಸ್ಥಿತಿಯ ಬಗೆಗೆ ಹೇಳುವ ರೀತಿಯಲ್ಲೊ 'ಪಿಷಿ' (ಒಗಟು) ಬರಬುದು' ಎಂದು ತಮಿಳಿನ 'ತೊಲ್‌ಕಾಪ್ಪಿಯಂ'ನಲ್ಲಿ ಒಗಟಿನ ಬಗೆಗೆ ನಿರ್ವಚನವಿದೆ. ಒಂದು ವಸ್ತಿವಿನ ಯಥಾರ್ಥಸ್ಥಿತಿಯ ಬಗೆಗೆ ಹೇಳುವುದು ಒಗಟಾಗುವುದು, ಪ್ರಸ್ತುತ ಸಂದರ್ಭ (Context)ದಲ್ಲಿ ಮಾತ್ರ.

ಒಂದು ವಸ್ತುವಿನ ಬಗೆಗೆ/ವಾಸ್ತವದ ಬಗೆಗೆ ಸೃಷ್ಟಿಗೊಳ್ಳುವ ಒಗಟು ಆ ವಸ್ತುವನ್ನು/ವಸ್ತುತೆಯನ್ನು ಪೂರ್ಣವಾಗಿ ಮಂಡಿಸುವುದಿಲ್ಲ. ಉತ್ತರಕ್ಕೆ ತಲಪಿಸಲು ಒದಗುವ ವಿರುದ್ಧ ಹೇಳಿಕೆಗಳು, ಅಪೂರ್ಣವಾದ ವಿವರಣೆಗಳು, ಅನಾವಶ್ಯಕವಿವರಣೆಗಳು ಎಂಬ ಈ ಘಟಕಗಳನ್ನು ಕೆಲವು ಒಗಟುಗಳಲ್ಲಿ ಕಾಣಬಹುದು. ಉತ್ತರಕ್ಕೆ ನಡೆಸದೆ, ದಾರಿಸಾಗದೆ ನಿಲ್ಲುವ ಈ ಬಗೆ ಸಂದಿಗ್ಧತೆಗೆ ಭಾಷಾಪರಿವೋ ಸಾಂಸ್ಕೃತಿಕವೋ ಕಾರಣವಿರಬಹುದು. ಭಾಷಾತ್ಮಕವಾದ ಸಂದಿಗ್ಧತೆ ಧ್ವನಿಮೆ, ರೂಪತೆ, ವಾಕ್ಯ ಎಂಬ ಮೂರು ತಲಗಳಲ್ಲಿ ಕೆಲಸ ಮಾಡುತ್ತದೆ.

ಸಾಂಸ್ಕೃತಿಕವೂ ಭಾಷಿಕವೂ ಆದ ಘಟಕಗಳೇ ಒಗಟನ್ನು ಒಮದು ನಿರ್ದಿಷ್ಟ ಉತ್ತರದಲ್ಲಿ ಅದುಮಿ ನಿಲ್ಲಿಸುವುದು. ಆದರೆ ಈ ಘಟಕಗಳು ನೆಲೆನಿಂತಿರುವಾಗಲೂ ಒಂದು ಒಗಟಿಗೆ ಹಲವು ಉತ್ತರ ಉಂಟಾಗಬಹುದು. ಆ ಉತ್ತರಗಳೆಲ್ಲ ಸರಿ ಉತ್ತರಗಳೇ ಇರಬಹುದು. ಉತ್ತರದಾಯಿಯ ಅನುಭವ ಪರಿಮಿತಿಯೊಳಗಿದ್ದು ಉತ್ತರ ಹುಡುಕುವುದಾದ್ದರಿಂದ ಒಂದು ಒಗಟಿಗೆ ಒಂದು ಸರಿಯುತ್ತರ ಎಂಬ ಪರಿಮಿತ ಉಂಟಾಗುವುದು.

ಉದಾಹರಣೆಗೆ 'ಇಲ್ಲತ್ತಮ್ಮ (ಬ್ರಾಹ್ಮಣಿ) ಮಿಂದು ಬರುವಾಗ ಬೆಳ್ಳಿ ಬಟ್ಟಲು ಕುಣಿಕುಣಿಯಿತು' ಎಂಬ ಒಗಟಿಗೆ 'ಅನ್ನಬೇಯುವುದು' ಎಂದೂ 'ಆಕೆಯ ಎದೆ ಕುಣಿಯುತ್ತದೆ' ಎಂದೂ ಎರಡು ಉತ್ತರಗಳು ಕಾಣಸಿಗುತ್ತವೆ. ಅಕ್ಕಿ ಬೆಂದು ಅನ್ನವಾದರೆ ಅದನ್ನು ಬಸಿಯುವುದಕ್ಕೆ 'ಬಸಿವಲಗೆ' (ಎಸಿಮುಚ್ಚಲು) ಬರಬೇಕು. ಬಸಿವಲಗೆ ತೊಳೆದು ಬರುವಷ್ಟರಲ್ಲಿ ಅನ್ನ ಬೆಂದು ಉಕ್ಕಿ ಹರಿಯಿತು ಎಂಬುದೇ ಒಗಟು ಹೇಳಿಕೆಯ ತಾತ್ಪರ್ಯ. (ಗಂಜಿ ಕುದಿಯುವಾಗ ಕಾಣಿಸುವ ಗುಳ್ಳೆಗಳೇ ಬೆಳ್ಳಿ ಬಟ್ಟಲುಗಳು). ಸಾಮಾನ್ಯವಾಗಿ ಬಸಿವಲಗೆ ಹಲಸಿನ ಕಾಂಡದಿಂದ ತಯಾರಾಗುತ್ತದೆ. ಹಗೆ ಅದು ಚಿನ್ನದಂತೆ ಕಾಣಿಸುವುದರಿಂದ ಅದನ್ನು 'ಇಲ್ಲತ್ತಮ್ಮ'ನಿಗೆ ಹೋಲಿಕೆ ಕೊಟ್ಟಿರಬೇಕು. ಅತ್ಯಂತ ಸೂಕ್ಷ್ಮವಾದ ಒಮದು ಸಾಂಸ್ಕೃತಿಕ ಅನುಭವವೇ ಈ ಒಗಟನ್ನು ಸೃಷ್ಟಿಸಿರುವುದು. ಈ ಅನುಭವಕ್ಕಿಂತ ವ್ಯತ್ಯಾಸ್ತವಾದ ಇನ್ನೊಮದು ಅನುಭವವೇ 'ಇಲ್ಲತ್ತಮ್ಮ' ಮತ್ತು ಮಿಂದು ಎದೆಮರೆಮಾಡದೆ ಆಕೆಯ ಆಗಮನ. ಮೊದಲ ಉತ್ತರದಲ್ಲಿ 'ಇಲ್ಲತ್ತಮ್ಮ' ಮತ್ತು 'ಬೆಳ್ಳಿಬಟ್ಟಲು' ಅಧ್ಯಾರೋಪ (Metaphorical)ಗಳಾಗಿವೆ.

ಎರಡನೆ ಉತ್ತರದಲ್ಲಿ 'ಇಲ್ಲತ್ತಮ್ಮ' ಯಥಾರ್ಥ ವಸ್ತುತತೆಯೂ ಬೆಳ್ಳಿ ಬಟ್ಟಲು ಅಧ್ಯಾರೋಪವೂ ಆಗಿರುತ್ತವೆ. ಉತ್ತರದ ಸರಿ–ತಪ್ಪುಗಳನ್ನು ನಿರ್ಣಯಿಸುವುದು ಸಾಂಸ್ಕೃತಿಕ ಸೀಮೆಯಾಗಿದೆ ಎಂದು ತಾತ್ಪರ್ಯ.

ಯಾವುದೊಂದು ಸಂಸ್ಕರತಿಯನ್ನೂ ರೂಪಿಸುವುದು ದೇಶ ಮತ್ತು ಕಾಲ. ಪ್ರದೇಶದಲ್ಲಿರುವ ವ್ಯತ್ಯಾಸ ಭೂಪ್ರಕೃತಿ, ಹವೆ, ಸಸ್ಯಜಾಲ, ಮನುಷ್ಯ ಮೃಗಗಳ ವಸತಿ ಇತ್ಯಾದಿ ಘಟಕಗಳನ್ನೆಲ್ಲ ಬದಲಿಸಿಬಿಡುತ್ತದೆ. ಇದು ಒಗಟಿನಲ್ಲೂ ವ್ಯತ್ಯಾಸವನ್ನು ಉಂಟುಮಾಡುತ್ತದೆ. ಉದಾಹರಣೆಗೆ 'ತೋಟದ ಅಮ್ಮನಿಗೆ ತೋಳಿನವರೆಗೆ ಬಳೆ' ಎಂಬ ಒಗಟಿಗೆ ವಯನಾಡಿನ ಪ್ರದೇಶಗಳವರು 'ಈಚಲು, ತೆಂಗಿನಮರ' ಎಂದೆಲ್ಲ ವಿಭಿನ್ನ ಉತ್ತರಗಳನ್ನು ನೀಡಿಯಾರು. ಒಂದೊಂದು ಸಾಂಘಿಕತೆಯೂ ವ್ಯತ್ಯಸ್ತ ರೀತಿಯಲ್ಲೆ ಸೂಚಿತವನ್ನು ಗುರುತಿಸುವುದು ಎಂಬುದನ್ನು ಇದು ತೋರಿಕೊಡುತ್ತದೆ.

'ಒಂದು ತಾಯಿಹೆತ್ತ ಮಕ್ಕಳೆಲ್ಲ ಟಿಪ್ಪಿಯವರು' ಎಂಬ ಒಗಟಿಗೆ ಬೆಂಕಿಪೊಟ್ಟಣ, ಅಡಕೆ ಎಂಬ ಎರಡು ಉತ್ತರಗಳನ್ನು ನೀಡುವುದು ಸಾಮಾನ್ಯ. ಕರಷಿ ವೃತ್ತಿಯಲ್ಲೆ ಧ್ಯಾನವಿರುವ ಒಂದು ಸಮೂಹದವರಿಗೆ ಎಂಬ ಹೊಸ ವಸ್ತು ಪ್ರಚಾರಕ್ಕೆ ಬರುವಾಗ ಕೃಷಿ ವೃತ್ತಿಯಿಂದ ಮೆಲ್ಲಗೆಯದರೂ ಹಿಂದೆ ಸರಿಯುವ ಸಮೂಹ ಪ್ರಸ್ತುತ ಒಗಟಿಗೆ ಉಚಿತ ಉತ್ತರವಾಗಿ 'ಬೆಂಕಿಪೊಟ್ಟಣ' ಎಂದು ಕಲ್ಪಿಸುವುದು ಸಾಧ್ಯ. ಇದು ಒಗಟಿನ ಉತ್ತರಕ್ಕೆ ಕಾಲವು ತರುವ ವ್ಯತ್ಯಾಸವಾಗಿದೆ.

ಹೊಸ ಒಗಟುಗಳು

ಹೊಸ ಕಾಲದಲ್ಲಿ ಹೊಸ ಒಗಟುಗಳು ತಯಾರಾಗಿ ಬರುತ್ತಿವ.ಎ ವಿಜ್ಞಾನ ತಾಂತ್ರಿಕತೆ ಸೀಮೆಗಳಲ್ಲೂ ಉಂಟಾಗುವ ಪರಿವರ್ತನೆ ಹಳೆಯ ಒಗಟುಗಳಲ್ಲಿ ಹಲವನ್ನು ವಿಸ್ಮರಾಣೆಗೆ ತಳ್ಳಿದೆಯಲ್ಲದೆ ಹೊಸ ಒಗಟುಗಳನ್ನು ಸೃಷ್ಟಿಸುತ್ತಲೂ ಇದೆ. 'ಈ ವರ್ಷ ಮುಂಡಾಸು ಕಟ್ಟಿದರೆ ಮುಮದಿನ ವರ್ಷದಲ್ಲಷ್ಟೆ ಮುಂಡಾಡು ಕಟ್ಟುವುದು' ಎಂಬ ಒಗಟಿನ ಉತ್ತರ 'ಗುಡಿಸಲಿಗೆ ಹುಲ್ಲುಹೊದಿಸುವುದು' ತೆಂಗಿನ ಸೋಗೆ, ಹುಲ್ಲು (ಕರಡ)ಗಳಿಮದ ಸೂರು ಹೊದಿಸುವ ಪದ್ಧತಿಯಿದ್ದ ಒಮದು ಸಮೂಹಕ್ಕೆ ಮಾತ್ರವೇ ಈ ಒಗಟಿನ ಪರಿಚಯವಿದ್ದೀತು. ತೆಂಗಿನ ಸೋಗೆ ಹೊದಿಸಿದ ನೂರಿನ ಬದಲು ಕಾಂಕ್ರೀಟು ಸೂರಿನ ಮನೆ ಅಭ್ಯಾಸವಾದ ಒಮದು ಮಗುವಿಗೆ ಈ ಒಗಟು ಗುರುತರಿಯದೆ ಹೋದೀತು. ಅದರೊಂದಿಗೆ ಹೊಸ ವಸ್ತು/ವಾಸ್ತವಗಳನ್ನು ಮುಂದುಮಾಡಿ ಹೊಸ ಒಗಟುಗಳು ತಯಾರಾಗಿ ಬರಲೂಬಹುದು.

'ಕಣ್ಣು ಹಳದಿಯಾಗುವ ಬೆಳಕಿನಲ್ಲಿ ಹುಟ್ಟಿತು. ನೋಡುವುದೋ ಕಾರ್ಗತ್ತಲೆಯಲ್ಲಿ– ಸಿನೆಮಾ' ಎಂಬ ಅರ್ಥದಲ್ಲಿರುವ ಒಗಟೊಂದು ತಮಿಳಿನಲ್ಲಿದೆ.

'ಬಾಲವಿಲ್ಲದ ಹಕ್ಕಿ ನೂರು ಯೋಜನ ಹಾರಿತು– ಪತ್ರ' ಎಂಬರ್ಥದ ಒಗಟು ತೆಲುಗಿನಲ್ಲಿದೆ. ಹೊಸ ಆಶಯಗಳನ್ನೆ ಈ ಬಗೆ ಒಗಟುಗಳಲ್ಲಿ ಒಳಗೊಳಿಸಿರುವುದು. ಮಲಯಾಳದಲ್ಲೂ ಇವುಗಳಿಗೆ ಉದಾಹರಣೆಗಳಿವೆ.

'ಕೆಳಕ್ಕೆ ಚುಚ್ಚಿದರೆ ತಲೆಯಲ್ಲಿ ಕಲೆ– ಟೈಪ್‌ರೈಟರ್'

'ಮೂಲೆಯಲ್ಲಿ ಕುಳ್ಳಿರುವ ಸುಂದರಿ ಹೆಣ್ಣಿನ ಮೂಗು ಹಿಡಿದರೆ ಹಾಡ ಹಾಡುವಳು – ರೇಡಿಯೋ'

'ಗಾಳಿಯಲ್ಲಿ ಓಡುವ ಡೊಳ್ಳು ಹೊಟ್ಟೆ – ಬೆಲೂನ್'

ಹೊಕ್ಕುಳು ಮುಟ್ಟಿದರೆ ಬಾಯ್ದೆರೆದು ನಕ್ಕು ತೋರಿಸುತ್ತಾನೆ – ಟಾರ್ಚು'

'ಪುಟ್ಟಕಾಲು ಮೆಲ್ಲಮೆಲ್ಲಗೆ, ಉದ್ದಕಾಲು ಲಗುಬಗನೆ –ವಾಚಿನ ಮುಳ್ಳುಗಳು'

ಹೂರಣದಲ್ಲಿ ಮಾತ್ರವಲ್ಲ ಒಗಟಿನ ರೂಪದಲ್ಲೂ ಕಾಲಾನುಸಾರಿಯಾದ ಮಾರ್ಪಾಟು ಉಂಟಾಗುತ್ತಲೆ ಇದೆ ಹೊಸ ರೀತಿಯ ಆಖ್ಯಾನ ಪದ್ಧತಿಗಳನ್ನು ಒಗಟಿನಲ್ಲಿ ಕಾಣಲು ಸಾಧ್ಯ.

'ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಸ್ಕೂಟರಿನಲ್ಲಿ ಹೋಗುತ್ತಾರೆ. ಆಕೆ ಕೇಳುವಳು, 'ನಿನ್ನ ಹೆಸರೇನು?'

'ರಘು' ಅವನೆಂದ ಮತ್ತು ಕೇಳಿದ–

'ನಿನ್ನ ಹೆಸರೇನು?'

'ತಲ (ತಲೆ) ತಿರುಗಿಸಿ ಓದಿದರೆ ಗೊತ್ತಾಗುತ್ತದೆ'– ಆಕೆಯ ಉತ್ತರ. 'ತಲ' ಎಂಬುದನ್ನು ತಿರುಗಿಸಿ ಓದಿದರೆ 'ಲತ' ಎಂದಾಗುತ್ತದೆ.

ಈ ಬಗೆಯ ಆಖ್ಯಾನಗಳನ್ನು ಮಕ್ಕಳು ಈಗ ಒಗಟಾಗಿ ಗುರುತಿಸುತ್ತಾರೆ. ಗ್ರಾಮೀಣವಾದ ಒಗಟುಗಳಿಗಿರುವ ಲಯಬದ್ಧ ಆಖ್ಯಾನಶೈಲಿ ಮೇಲಿನದರಲ್ಲಿಲ್ಲ ಎಂಬುದು ಗಮನಾರ್ಹ. ಆಧುನಿಕ ಕಾಲದಲ್ಲಿ ಒಗಟು ಒಂದು ಮೌಖಿಕಧಾರೆ ಮಾತ್ರವಾಗಿ ಪರಿಗಣಿತವಾಗಿಲ್ಲ. ಮಾಧ್ಯಮ ರಂಗಕ್ಕೆ ಬಂದಿರುವ ಪರಿವರ್ತನೆಗಳೂ ಸಂಪೂರ್ಣ ಸಾಕ್ಷರತೆಯೂ ಗ್ರಾಮೀಣ ಸಂಸ್ಕೃತಿಯನ್ನು ಹಲ ಬಗೆಯಲ್ಲಿ ವಶಪಡಿಸಿಕೊಂಡಿವೆ. ಅದರಿಂದಲೆ ಮೌಖಿಕಧಾರೆ ಮೂಲಕ ಎಂಬಂತೆ ಅಂಗಚೇಷ್ಟೆಗಳ ಮೂಲಕವೂ ಚಿತ್ರಗಳ ಮೂಲಕವೂ ಒಗಟುಗಳು ಮುಂಬರುತ್ತಿವೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ 'ಢ್ರೂಡಿಲ್' ಎಂದು ಹೆಸರಾದ ಈ ಬಗೆ ಒಗಟುಗಳು ಇಂದು ನಮ್ಮ ಮಕ್ಕಳನಿಯತಕಾಲಿಕೆಗಳಲ್ಲೂ ಕಾಣಿಸಿಕೊಳ್ಳುತ್ತಿವೆ.

ಇನ್ನಾವ ಗ್ರಾಮಿಣ ವಾಙ್ಮಯದ ಹಾಗೂ ಒಗಟುಗಳೂ ತಮ್ಮ ಬೇರುಗಳನ್ನು ಕಾಣುವುದು ಸಮೂಹದ ಸಾಂಸ್ಕೃತಿಕ ಜೀವನದಲ್ಲೆ. ರೂಪದಿಂದ ಬಲು ಚಿಕ್ಕದಾದರೂ ಸಾಂಘಿಕತೆ ಬಗೆಗೂ ಆ ಸಾಂಘಿಕತೆಯಲ್ಲಿ ಕಾಲ, ದೇಶ ವ್ಯತ್ಯಯಗಳಿಂದಾಗುವ ವ್ಯತ್ಯಾಸದ ಬಗೆಗೂ ಸೂಕ್ಷ್ಮವಾದ ಅರಿವುಗಳನ್ನು ನೀಡಲು ಒಗಟುಗಳಿಗೆ ಸಾಧ್ಯ. ಮಲಯಾಳದ ಮಟ್ಟಿಗೆ ಒಗಟುಗಳನ್ನು ಶೇಖರಿಸಲು ಇರುವ ಕೆಲ ಒಂಟಿ ಪ್ರಯತ್ನಗಳು ನಡೆದಿರುವುದನ್ನು ಒಟ್ಟರೆ ಅವುಗಳನ್ನು ಮುಂದುಮಾಡಿ ಬಹಳ ವಿಪುಲವಾದ ಸಾಂಸ್ಕೃತಿಕ ಅಧ್ಯಯನ ಇನ್ನೂ ನಡೆದಿಲ್ಲ.

ಆಡುನಿಡು

ನೇಣುಗೋಪಾಲ ಪಣಿಕ್ಕರ್

ಟಿಪ್ಪಣಿ

ಒಂದು ಸಾಂಘಿಕತೆಯ ತನ್ನ ತನದ ಅರಿಯುವಿಕೆಯೆ ಜಾನಪದ ಅಧ್ಯಯನದ ಗುರಿ ಎಂದಿರುವಾಗ ಗ್ರಾಮೀಣ ಭಾಷಾ ಅಧ್ಯಯನಕ್ಕೆ ಜಾನಪದದಲ್ಲಿ ಬಹಳ ಪ್ರಾಧಾನ್ಯತೆಯಿದೆ. ಒಂದು ಗುಂಪು ವ್ಯಕ್ತಿಗಳು ತಾವೆಲ್ಲ ಒಂದೆ ಸಾಂಘಿಕತೆಯ ಭಾಗವೆಂದು ಮನವರಿತುಕೊಳ್ಳುವಂತಾಗುವಲ್ಲಿ ಗ್ರಾಮೀಣ ಭಾಷೆಗೆ ಮಹತ್ತ್ವದ ಪಾಲು ಇದೆ. ಒಬ್ಬ ಕಾಸರಗೋಡಿನವನೊ, ಒಬ್ಬ ಕಣ್ಣೂರಿನವೊ ತಿರುವನಂತಪುರದಲ್ಲಿ ಸಂಪರ್ಕಕ್ಕೆ ಬಂದಾಗ ಆತ ತನ್ನ ಸಾಂಘಿಕತೆಗೆ ಸೇರಿದವನಲ್ಲ ಎಂದು ತಿರುವನಂತಪುರದವನಿಗೆ ಅನಿಸುವುದು ಅಥವಾ ಆತ ತನ್ನದೆ ಸಾಂಘಿಕತೆಯ ಭಾಗವೆಂದು ಗುರುತಿಸುವುದು ಆತ ಬಳಸುವ ಭಾಷೆಯ ಮೂಲಕವಾಗಿರುತ್ತದೆ. ಸಂಸ್ಕೃತಿಯ ಪ್ರತಿಫಲನವೇ ಭಾಷೆಯೂ, ಭಾಷೆಯ ಎಲ್ಲ ಸ್ತರಗಳೂ. ಆದ್ದರಿಂದ ಸಾಂಘಿಕತೆ ಅಧ್ಯಯನದಲ್ಲಿ ಗ್ರಾಮಿಣ ಭಾಷೆ ಹೆಚ್ಚು ಪ್ರಯೋಜನಕರ.

ಗ್ರಾಮೀಣ ಭಾಷೆಗೆ ಅನೇಕ ಪದರಗಳಿವೆ. ಆಚಾರ, ಉಪಚಾರಗಳಿಗೆ ಉಪಯೀಗಿಸುವ 'ಆಚಾರಭಾಷೆ', ಆರಾಧನೆ ಸಂದರ್ಭಗಳಲ್ಲಿ ಮಾತ್ರ ಎಉದ್ದುಕಾಣಿಸುವ 'ಅನುಷ್ಠಾನಭಾಷೆ', ಬಯ್ಯಲು ಬಳಸುವ ಬಯ್ಗುಳದ ಪ್ರಯೋಗಗಳು, ಸಾಕುಪ್ರಾಣಿಗಳ ಜತೆಗೂ ಮಿಕ್ಕ ಜೀವಜಾಲದ ಜತೆಗೂ ಸಂವಹಿಸಲು ಬಳಸುವ ವಿಶಿಷ್ಟ ಭಾಷೆ, ಬೀದಿವ್ಯಾಪಾರಿಗಳೂ, ಬೀದಿ ಸರ್ಕಸ್ಸಿನವರೂ ಬಳಸುವ ವಿಶಿಷ್ಟಭಾಷೆ, ಲಿಖಿತ ರೂಪದಲ್ಲಿ ತೋರುವ ದಸ್ತವೈಜು ಭಾಷೆ ಎಂದು ಅನೇಕ ವ್ಯತ್ಯಾಸ್ತ ರೂಪಗಳು ಗ್ರಾಮೀಣ ಭಾಷೆಗಿದೆ. ಇವೆಲ್ಲ ಅಧ್ಯಯನಕ್ಕೆ ಒಳಪಡುವಾಗ ಸಾಂಘಿಕತೆಯ ಸ್ವತ್ವ ಏನೆಂಬುದು ತಿಳಿದುಬರುತ್ತದೆ. ಈ ಬಗೆಯ ಅಧ್ಯಯನ ಮಲಯಾಳದಲ್ಲಿ ಇದುವರೆಗೆ ಆಗಿರುವುದಾಗಿ ತಿಳಿದಿಲ್ಲ.

– ಸಂಪಾ

ದಕ

ಕೇರಳದ ತೆಂಕು ಮತ್ತು ಬಡಗು ಪ್ರದೇಶಗಳಲ್ಲಿರುವ ಆಡುನುಡಿಗಳ ಬಗೆಗೆ ಕೆಲ ಪುಸ್ತಕಗಳು ಬಂದಿವೆ. ಇನ್ನು ಕೆಲ ಪುಸ್ತಕಗಳಲ್ಲಿರುವುದು ಒಂದೆಡೆಯಲ್ಲಿರುವ ಒಂದರ್ಥದ ಶಬ್ದ ಇನ್ನೊಂದೆಡೆಯವನು ಇನ್ನೊಮದೆ ಅರ್ಥದಲ್ಲಿ ಗ್ರಹಿಸಿ ಆದ ಅನಾಹುತಗಳ ವಿವರಣೆ. ಇದನ್ನೆಲ್ಲ ನೋಡುವಾಗ ಅನಿಸುವುದು, ಮಲಯಾಳ ಭಾಷೆಗಿರುವ ವ್ಯತ್ಯಾಸ ಕೆಲವೊಂದು ಪದಗಳಿಗೂ ಅವುಗಳಿಗಿರುವ ಪ್ರಯೋಗ ರೀತಿಗೂ ಮಾತ್ರ ಸೀಮಿತವಾಗಿದೆ ಅಂತ. ಇತರ ಭಾಷಿಕರು ಮಲಯಾಳ ನುಡಿಯುವಾಗ ಆಗುವ ಪರಿಹಾಸದ ಒತ್ತು ಇರುವುದು ಅವರ ಮಾತಿನಲ್ಲಿ ಅಲ್ಲ. ಬದಲು ಅವರ ಉಚ್ಚಾರಣ ರೀತಿ ಮತ್ತು ಮಾತಿನ ಧಾಟಿಯಲ್ಲಾಗಿರುತ್ತದೆ. ಇದೇ ರೀತಿ ಕೇರಳದಲ್ಲೆ ವಿವಿಧ ಪ್ರದೇಶಗಳವರ ಧಾಟಿಯನ್ನು ಅನುಕರಿಸಿ ನಗೆ ಮಾಡುವುದು ಇದೆ. ಹೆಚ್ಚಿನ ವೇಳೆ ಆ ಬಗೆ ವಿಡಂಬನೆಗಳು ಅತಿಶಯೋಕ್ತಿಯಾಗಿರುತ್ತದೆ. ಕೆಲ ಬರಿಯಾದರೂ ಪರಿಹಾಸಗೊಳ್ಳುವುದು ಕೆಲ ಸಮೂಹಗಣ ಅಥವಾ ಜಾತಿ ಆಗಿರುತ್ತದೆ.

ಯಾವುದೇ ಒಂದನ್ನು ಪ್ರಮಾಣವಾಗಿ ಸ್ವೀಕರಿಸಿಯೆ ಅಲ್ಲವೆ ಅದರಿಮದ ಅಗಲಿನಿಲ್ಲುವಂಥದನ್ನು ಗೇಲಿ ಮಾಡುವುದು? ಆ ಪ್ರಯಾಣ ಯಾವುದೆಂದು ಅನ್ವೇಷಿಸುವುದು ಸಂಗತವಾಗಿದೆ. ಅದೇ ರೀತಿ ಸಾಮೂಹಿಕವೂ ಪ್ರಾದೇಶಿಕವೂ ಆದ ಭಾಷಾ ವ್ಯತ್ಯಾಸಗಳ ಕುರಿತಾಗಿಯೂ, ಆ ವ್ಯತ್ಯಸ ಹೆಚ್ಚಾಗಿ ಮೌಖಿಕದ ಮೂಲಕವೆ ಬರುವುದೆಂಬ ವಾಸ್ತವದ ಕುರಿತಾಗಿಯೂ ನಮಗೆ ಗೊತ್ತಿದೆ ಎಂಬುದಕ್ಕೆ ನಮ್ಮ ಪ್ರತಿಕ್ರಿಯೆಗಳೇ ಪುರಾವೆ.

ಪ್ರಾದೇಶಿಕ–ಸಾಮೂಹಿಕ ಬೇಧಗಳು ಬಾಯ್ದೆರೆ ಮತಿನಲ್ಲಿ ಉಂಟಾಗುವುದು ಎಲ್ಲ ಭಾಷೆಗಳಿಗೂ ಸಂಗತವಾದುದೇ ಆಗಿದೆ. ಅದೇ ತೆಂಕಣ, ಬಡಗಣ ಎಂಬ ಹಾಗೆ ನಾವು ಅವ್ಯಕ್ತವಾಗಿ ಹೇಳುವಂಥದ್ದು. ಈ ಅವ್ಯಕ್ತತೆಯೊಳಗೂ ಕೆಲವು ವಾಸ್ತವತೆಗಳು ಉಂಟೆಂದು ತಿಳಿದೀತು. ಉದಾಹರಣೆಗೆ ಉತ್ತರ ಕೇರಳೀಯರು ತಮಗೆ ದಕ್ಷಿಣಭಾಗದಲ್ಲಿ ಇರುವುದನ್ನೆಲ್ಲ ಸಗಟಾಗಿ 'ತೆಕ್ಕನ್' (ತೆಂಕಣದು) ಕರೆಯುವುದಕ್ಕೆ ಕಾರಣ ತಮ್ಮ ಭಾಷೆಯಲ್ಲಿ ಅದಕ್ಕಿಂತ ಭಿನ್ನವಾದ ಕೆಲವು ಅಂಶಗಳು ಇರುವುದಾಗಿರಬಹುದು.

ಕೆಲವೊಮ್ಮೆ ಪ್ರದೇಶವನ್ನು ಬೆಟ್ಟುಮಾಡಿ ಹೇಳುವುದೂ ಇದೆ. ಇದು ತೃಶೂರ್ ರೀತಿ, ಇದು ತಿರುವನಂತಪುರಂ ಮಟ್ಟು ಎಂದೆಲ್ಲ.

ನಮ್ಮ ಪ್ರಾದೇಶಿಕ ಭೇದಗಳ ಹಾಗೆ ಇತರ ಭಾಷೆಗಳಿಗೂ ಪ್ರಾದೇಶಿಕ ಭೇದಗಳಿವೆ ಎಂದೆವಲ್ಲ? ದಿಲ್ಲಿಯಲ್ಲೂ, ಕಾಶಿಯಲ್ಲೂ ಇರುವ ಹಿಂದು ಒಂದೇ ತೆರನಲ್ಲ. ತಂಜಾವೂರಿನಲ್ಲೂ ಮಧುರೆಯಲ್ಲೂ ತಮಿಳಿನಲ್ಲಿ ವ್ಯತ್ಯಾಸ ಇದೆ. ಬಹಳ ಹಿಂದೆಯೆ ಪಾಂಡಿತಮಿಳು ಮತ್ತು ಚೋಳತಮಿಳು ವಿಭಿನ್ನವೆಂದು ನಮಗೆ ಗೊತ್ತಿದೆ.

ಒಂದು ಭೂಪಟದಲ್ಲಿ ಒಂದೊಮದು ಭಾಷಾ ಲಕ್ಷಣದ ಗಡಿಯನ್ನು ಗುರುತಿಸುತ್ತ ಹೋದರೆ ಲಕ್ಷಣಗಳು ಕೂಟವಾಗಿ ನಿಲ್ಲುವೆಡೆ ಭಾಷಾ ಭೇದದ ಗಡಿಯನ್ನು ಗುರುತಿಸಬಹುದು. ಈ ಬಗೆಯ ಒಂದು ಭೂಪಟವೇ ಭಾಷಾ ಭೇದ ಭೂಪಟ. ಎರಡು ಭಾಷಾಭೇದಗಳಲ್ಲಿ ಸಮಾನತೆ ಉಂಟೆಂದರೆ ಅದರ ಅರ್ಥ ಅವನ್ನು ಒಳಗೊಳ್ಳುವ ಹಲವು ಲಕ್ಷಣಗಳು ವ್ಯಾಪಿಸಿ ನೆಲೆಗೊಂಡಿವೆ ಎಂಬುದಾಗಿದೆ.

ಭಾಷಾ ವಿಜಾತೀಯತೆ ಹೆಚ್ಚಾಗಿ ಕಾಣಿಸುವುದು ಮೌಖಿಕವಾಗಿ ಎಂದು ಹೇಳೆವಷ್ಟೆ? ಬರಹದ ಭಾಷೆಯಲ್ಲಿ ವಿಜಾತೀಯತೆ ಕಡಿಮೆಯಾಗಿರುವುದರಿಂದಲೆ ಪತ್ರಿಕೋದ್ಯಮ, ಪುಸ್ತಕರಚನೆ ಇತ್ಯಾದಿ ಸುಗಮವಾಗುವುದು. ತುಂಬ ಭಿನ್ನವಾದ ಬಾಯ್ದೆರೆ ಮಾತಿನ ಬಳಕೆಯಿರುವ ಕಾಸರಗೋಡಿನವನೂ, ತೆಂಕಣ ಪಾಜಿಶ್ಯಾಲೆಯವನೂ ಒಮದೇ ವಾರ್ತಾಪತ್ರಿಕೆಯನ್ನು ಬಳಸಿಕೊಳ್ಳಬಲ್ಲರು. ಒಂದೇ ಪುಸ್ತಕವನ್ನು ಅಭ್ಯಸಿಸಲೂ ಬಲ್ಲರು. ಬರಹದಲ್ಲೂ ಪ್ರಾದೇಶಿಕ ಭಿನ್ನತೆಯ ನೆರಳು ಕಾಣಿಸಬಾರದೆಂದಿಲ್ಲ. ಇಂಗ್ಲಿಷು ಎರಡನೆ ಭಾಷೆಯಾಗಿರುವ ನಮಗೆ ಲಿಪಿವ್ಯತ್ಯಾಸದಿಮದಲೂ, ಶೈಲಿವ್ಯತ್ಯಾಸದಿಂದಲೂ ಇದು ಬ್ರಿಟಿಷ್ ಇಂಗ್ಲಿಷ್, ಇದು ಅಮೆರಿಕನ್ ಇಂಗ್ಲಿಷ್ ಎಂದು ಗುರುತಾಗುತ್ತದಷ್ಟೆ? ಆದರೂ ಅಮೆರಿಕನ್ ಇಂಗ್ಲಿಷಿನ ಕೃತಿ ಇಂಗ್ಲೆಂಡಿನಲ್ಲೂ, ಇಂಗ್ಲಂಡಿನದು ಅಮೆರಿದಲ್ಲೂ ಕಡಿಮೆ ಕ್ಲೇಶದೊಂದಿಗೆ ಓದಿ ಅರ್ಥಮಡಿಕೊಳ್ಳುತ್ತಾರೆ.

ಪ್ರಾದೇಶಿಕ ಭೇದಗಳನ್ನೂ ಸಾಮೂಹಿಕ ಭೇದಗಳನ್ನೂ ಉಲ್ಲಂಘಿಸುವ ಸಾಮಾನ್ಯ ಭಾಷಾರೀತಿ ಒಮದೊಮದು ಭಾಷೆಗೂ ರೂಪುಗೊಮಡು ಬರುವ ಮೂಲಕವೆ ವಿಶಾಲವಾದ ಸೀಮೆಗಳಿಗೆ ಸಂಪರ್ಕವಿಸ್ತರಿಸಲು ಸಾಧ್ಯವಾಗುವುದು. ಇನ್ನೊಮದು ರೀತಿಯಲ್ಲಿ ಹೇಳುವುದಾದರೆ ಈ ಬಗೆ ಸಂಪರ್ಕಕ್ಕಾಗಿಯೆ ಸಾಮಾನ್ಯಭಾಷೆ ರೂಪಗೊಳ್ಳುವುದು. ಬರಹ ಹೆಚ್ಚಿನ ಮಟ್ಟಿಗೆ ಸಾಮಾನ್ಯ ಭಾಷೆಯಲ್ಲೆ ಆಗಿರುತ್ತದೆ. ಸಾಂಸ್ಕೃತಿಕ ವಿಷಯದಲ್ಲಿ ಮಾದರಿಯೆನಿಸಿದ ಜನತೆಯ, ಅಧೀಶತ್ವವಿರುವ ವರ್ಗದ ಪ್ರಾಮುಖ್ಯವಿರುವ ಪ್ರದೇಶದ ಭಾಷಾರೀತಿಗೆ ಇದರಲ್ಲಿ ಮೇಲುಗೈ ದೊರೆಯುತ್ತದೆ. ಇವತ್ತು ಊರ್ಜಿತದಲ್ಲಿರುವ ಒಮದು ಸಆಮಾನ್ಯಭಾಷೆ ಇವತ್ತಿನ ಯಾವುದಾದರೂ ಒಮದು ಪ್ರದೇಶದ, ಒಂದು ಗಣದ ಭಾಷಾರೀತಿಯೊಂದಿಗೆ ನೇರವಾಗಿ ಋಣಿಯಾಗಿಲ್ಲ ಎನ್ನಬಹುದು. ಆದರೆ ಆ ಬಗೆ ಸಾಮಾನ್ಯ ಬರಹದ ಭಾಷೆ ಇವತ್ತು ಇರುವ ಎಲ್ಲ ಬರಹದ ಭಾಷೆಗಳಿಂದಲೂ ಅಗಲಿ ನಿಲ್ಲುತ್ತದೆ. ಆಗ ಸಾಮಾನ್ಯ ನುಡಿಗಾಗಿ ಇನ್ನೊಂದು ಬೆಲೆಯ ರೀತಿ ರೂಪಗೊಂಡು ಬರುತ್ತದೆ. ಈ ನಿಟ್ಟಿನಲ್ಲಿ ಅವಳಿ ನುಡಿ ಹಲವು

ಭಾಷೆಗಳಲ್ಲೂ ರೂಢಿಯಾಗುತ್ತದೆ. ಇದಕ್ಕೂ ಹೊರಗಿರುವಂಥದು ಪ್ರಾದೇಶಿಕ ನುಡಿಭೇದಗಳು. ಅರಬಿಯಲ್ಲೂ ತಮಿಳಿನಲ್ಲೂ ಸ್ಥಿತಿ ಇದೇ. ತಮಿಳು ಬರಹನುಡಿ, ಹಳೆಯ ಬರಹನುಡಿಯಲ್ಲಿ ಕಾಲಕಾಲಕ್ಕೆ ಆಗಿರುವ ಪರಿವರ್ತನೆಯ ಮೇಲೆ ಬಂದಿರುವಂಥದು. ಈ ಕಾಲದ ಭಾಯ್ದೆರೆನುಡಿಯ ಹಿಡಿತ ಅದರಲ್ಲಿರುವುದಾದರೂ ಅದು ಯಾವುದೆ ಪ್ರದೇಶದವರ, ಜಾತಿಯವರ ಸ್ವಂತ ನಾಡುನುಡಿಯಿಂದ ಹೊರಬುದಲ್ಲ. ಬೆಲೆಬರುವ ಬಾಯದೆರೆ ನುಡಿ ರೂಪ ಅದರಿಂದ ಭಿನ್ನವಾಗಿ ಒಂದು ಬೇರೆಯೆ ಇದೆ. ಬರೆಹನುಡಿಯಲ್ಲಿ ಮಾತನಾಡುವವನೂ ಬಾಯ್ದೆರೆ ನುಡಿಯಲ್ಲಿ ಬರೆಯುವವನೂ ಪರಿಹಾಸಕ್ಕೆ ಒಳಗಾಗುವರು.

ಮಲಯಾಳದಲ್ಲಿ ಅವಳಿ ನುಡಿಗಳಿವೆಯೆ? ಇದ್ದರೆ ಹೇಗಿವೆ? ಈ ಬಗೆ ಪ್ರಶ್ನೆಗಳಿಗೆ ವಿಶದವಾದ ಅನ್ವೇಷಣೆಯಷ್ಟೆ ಉತ್ತರವನ್ನು ನೀಡೀತು. ಅವಳಿನುಡಿ ಉಂಟೆಂಬುದಕ್ಕೆ ಪುರಾವೆಯೆ, ಅಚ್ಚಿನರೂಪದ ಭಾಷೆಯಲ್ಲಿ ನಡೆಯುವ ಮಾತು ನಮಗೆ ನಗೆಗೆ ವಸ್ತುವಾಗುತ್ತದೆಂಬ ವಾಸ್ತವ. ಬಹುಶಃ ಮಲಯಾಳದಲ್ಲಿ ಲಿಖಿತಭಾಷೆಗೂ ಸಾಮಾನ್ಯ ಮಾತಿನ ಭಾಷೆಗೂ ಅಂತರ ಕಡಿಮೆ ಎನ್ನಲಾದೀತು. ಕಾಲಕ್ರಮದಲ್ಲಿ ವ್ಯಾಪಕವಾಗಿ ಬಂದು ಸೇರಿದ ಪರಿವರ್ತನೆಯನ್ನು ಬರಹದಲ್ಲೂ ಅಂಗೀಕರಿಸಲು ನಮಗೆ ತಮಿಳರಿಗಿರುವಷ್ಟು ವಿಮುಖತೆ ಇಲ್ಲ ಎಂಬುದಾಗಬಹುದು ಇದರ ಅರ್ಥ. ಆದರೆ ಬರೆಹದಲ್ಲಿ ಮಾತ್ರವೇ ಸೂಕ್ಷ್ಮಾರ್ಥ ಭೇದಗಳಾದ ಅನೇಕಾನೇಕ ಸಂಸ್ಕೃತ ಪದಗಳು ಕಾಣಿಸುತ್ತವೆ. ಈಗ ಬರೆದ ವಾಕ್ಯವನ್ನು ಮಾತಿನ ರೀತಿಯಲ್ಲಿ ನಿರೀಕ್ಷಿಸಲು ಸಾಧ್ಯವಿಲ್ಲವಲ್ಲ? ಬದಲು ಪರಂಪರೆಯ ಮೂಲಕ ದೊರಕಿರುವ ದ್ರಾವಿಡ ಪದಗಳೂ ಸೇರಿಕೆಗಳೂ ಬರುತ್ತವೆ. 'ಅಱಕಿಯಱುಱ್ಕ' (ಚೆಲುವು ಉಂಟುಮಾಡುವುದು), 'ಎಡುತೋದುಕ' (ಎತ್ತಿಹೇಳುವುದು) 'ಹೊರುಳ್ ತಿರಿಯುಕ' (ಅರ್ಥ ಗೊತ್ತಾಗು) ಇದೆಲ್ಲ ಬರೆಹನುಡಿಯಲ್ಲಿ ಮತ್ರ ಕಾಣಿಸಿಯಾವು. ಅದೇ ಮೌಖಿಕದಲ್ಲಿ 'ಭಂಗಿವರುತ್ತುಕ', 'ಎಡುತ್ತ ವಱಯುಕ', 'ಅರ್ಥಂ ತಿರಿಚ್ಚಱಿಯುಕ' ಎಂದು ಆಗುತ್ತವೆ. ಬರೆಹನುಡಿ (ವರಮೊಙಿ)– ಬಾಇನುಡಿ (ವಾಯ್ಮೊಙಿ) ಭೇದ ನಿಘಂಟುವಿನಲ್ಲಿ ಮಾತ್ರವಲ್ಲ. ಅವ, ಇವ (ಅವು, ಇವು) ಎಂಬ ಹಾಗೆ ನಪುಂಸಕ ಬಹುವಚನ ರೂಪ ಬಾಯಿ ನುಡಿಗೆ ಪರಕೀಯವಾಗಿದೆ. ವ್ಯತ್ಯಾಸ ವ್ಯಾಕರಣ ಸಂಬಂಧವಾಗಿಯೂ ಇದೆ ಎಂದು ತಾತ್ಪರ್ಯ.

ಇಲ್ಲಿ ನೋಡಿದ ಬರೆಹನುಡಿ– ಬಾಯಿನುಡಿ ಪರಿಚಲನದ ಎಡೆಯಲ್ಲಿ ಹಲವು ಬಿಂದುಗಳೂ ಇವೆಯೆಂದು ನೆನೆಯಬೇಕು. ಉಪನ್ಯಾಸ ಬರೆಹನುಡಿಯಲ್ಲಿ ಸಾಗುವಾಗ ತರಗತಿಯ ಭಾಷೆ ಬಾಯಿನುಡಿಯ ಕಡೆಗೆ ಬಾಗುತ್ತದೆ. ಇಲ್ಲವಾದರೆ ಅವರ ಕ್ಲಾಸಿನಲ್ಲೂ ಭಾಷಣವೇ ಎಂಬ ದೂರು ಬರುತ್ತದೆ.

ಭಾಷಾಭ್ಯಾಸವೆ ಭಾಷಾ ವ್ಯತ್ಯಾಸಕ್ಕೆ ಕಾಣ. ಓದಿದವ ಜಾತಿಯ ಸೊಗಡಿನೊಂದಿಗೆ ಮಾತನಾಡಬಾರದು ಎಂಬುದು ನಮ್ಮ ಸಂಕಲ್ಪ ಪ್ರಾದೇಶಿಕ ಸೊಗಡೂ ಅವನಲ್ಲಿ ಕಡಿಮೆಯಿರುತ್ತದೆ.

ಕಲಿತವನ ಬಾಯಿನುಡಿ ಭಾಷೆಯ ಸಾಮಾನ್ಯ ನೆಲೆಗೆ ಹತ್ತಿರಗೊಳ್ಳುತ್ತದೆ. ಅದು ಬರಹನುಡಿಯೊಂದಿಗೆ ಹತ್ತಿರಗೊಂಡದ್ದೂ ಹೌದಷ್ಟೆ?

ಮಾತನಾಡುವವನಿಗೆ ಸಮೂಹದಲ್ಲಿರುವ ಸ್ಥನಮಾನ, ಯಾರೊಂದಿಗೆ ಮಾತನಾಡುವುದೇ ಆತನೊಂದಿಗೆ ಇರುವ ಸಾಮಾಜಿಕ ಸಂಬಂಧ, ಮತುಕತೆ ನಡೆಯುವ ಸಾಮಾಜಿಕ ಸಂದರ್ಭ ಇವೆಲ್ಲ ಮಾತಿನ ಸ್ವಭಾವವನ್ನು ನಿಯಂತ್ರಿಸುತ್ತವೆ. ತರಗತಿಯಲ್ಲಿ ಅಧ್ಯಾಪಕನೊಂದಿಗೆ ಹೇಳುವ ರೀತಿಯಲ್ಲಿ ವಿದ್ಯಾರ್ಥಿ ತನ್ನ ಜತೆಗಾರನೊಂದಿಗೆ ನುಡಿಯುವುದು. ಹಾಗೆಯೆ ಅಲ್ಲ ಮನೆಯುಲ್ಲಿ ತಾಯಿಯೊಂದಿಗೆ ಮಾತನಾಡುವುದು. ಒಡನಾಟದಲ್ಲಿ ಕಾಣಿಸುವ ಬದಲಾವಣೆಗೆ ಅನುಸಾರವಾಗಿ ಭಾಷಾ ಪ್ರಯೋಗ ರೀತಿಯೂ ಬದಲುತ್ತದೆ. ಸಮಾಜ ಶ್ರೇಣೀಬದ್ಧವಾಗಿದ್ದರೆ ಭಾಷೆಯಲ್ಲೂ ಅದರ ನೆಳಲು ಬೀಳದಿರದು. 'ಮೇಲಾಳ'ನಲ್ಲಿ 'ಆಚಾರ' ನುಡಿಯುವ ಪದ್ಧತಿಯನ್ನು ನೆನಪಿಸಿಕೊಳ್ಳಿರಿ. ಇಂದಿಗೂ ಅದರ ಪಳೆಯುಳಿಕೆ ನಮ್ಮ ಭಾಷೆಯಲ್ಲಿ ಇದೆ. ಆಫೀಸರ ಮೇಲೆ ಕೈಮಾಡಿದ ಸಿಪಾಯಿಯ ಬರೆಹವಿದು– 'ಯಜಮಾನರು ನನ್ನ ಮೀಸೆಹಿಡಿದು ಅಪ್ಪಣೆ ಮಡಿದಾಗಲೇ ನಾನು ರೂಲರ್ ಕೊತಡಿನಿಂದ ತಲೆಗೆ ಬೋಧಿಸಿದ್ದು.'

ಸಂದರ್ಭದ ಪ್ರಸ್ತುತತೆಯೇ ಔಪಚಾರಿಕ–ಅನೌಪಚಾರಿಕ ಎಂಬ ಕವಲುಗೊಳ್ಳುವಿಕೆಗೆ ಆಧಾರ. ವಿಷಯ ವ್ಯತ್ಯಾಸವೆ ತಮಾಷೆಯಾಗಿ ಗಂಭೀರ ವಿಚಾರಗಳನ್ನು ಹೇಳಬಾರದೆಂಬ ತಿಳಿವಳಿಕೆಯ ಆಧಾರ.

ಅಧಿಕಾರ, ಸಾಮಿಪ್ಯ ಇವುಗಳಣ್ನು ಸ್ಪಷ್ಟಪಡಿಸುವ ಸಂದರ್ಭವೇ ಮಧ್ಯಮಪುರುಷ ಸರ್ವನಾಮಗಳ ಆಯ್ಕೆ. 'ನೀನು' ಎಂದು ಉದ್ದೇಶಿಸುವುದು ಅಧಿಕಾರವೋ, ವಾತ್ಸಲ್ಯವೋ ಸಮಾನ ಪ್ರಮಾಣದಲ್ಲಿರುವ ಒಬ್ಬನೊಂದಿಗೆ ತನ್ನ ಸಾಮಿಪ್ಯವನ್ನೂ ಸೂಚಿಸಬಹುದು. ಮಕ್ಕಳಾದರೂ ತನ್ನಷ್ಟಾದರೆ 'ತಾನು' ಎಂದು ಕರೆಯಬಹುದು ಎಂಬ ಪ್ರಮಾಣ ಪ್ರಕಾರ 'ತಾನ್' ಎಂಬುದು ಆದರ ಸೂಚಕವೇ, ಅಷ್ಟೇ ಅಗಲಿಕೆಯೂ ಆಗಿರುತ್ತದೆ. ಅಪರಿಚಿತನಲ್ಲಿ 'ತಾನ್' (ನೀನು) ಎಂದರೆ ಮುಖ ಗಂಟಿಕ್ಕುವುದು ಖಚಿತ. ಆದರೆ ಕರೆದ ವ್ಯಕ್ತಿ ಹರೆಯವೇರಿದವರಾದರೆ, ಮೇಲಿನ ಸ್ಥಾನದವರಾದರೆ ಕ್ಷಮಿಸಲು ಎಡೆಯಿದೆ.

ಸಮಾಜದ ಎಲ್ಲ ಸಂಕೀರ್ಣತೆಗಳೂ ಭಾಷೆಯಲ್ಲಿ ನೆರಳುಗಟ್ಟುತ್ತದೆ. 'ಮಾತನ್ನಾಡುವವನ ಸಂಸ್ಕಾರದ ಮಟ್ಟ, ಸಾಮಾಜಿಕ ಸ್ಥಿತಿ ಇವುಗಳ ಕನ್ನಡಿಯೇ ಆತನ ಮಾತಿನ ಭಾಷೆ'. ಸಾಮಾಜಿಕ–ಸಾಂಸ್ಕಾರಿಕ ಸ್ಥಿತಿಯ ಅನುಸಾರ ಭಾಷೆಗೆ ವ್ಯತ್ಯಾಸ ಉಂಟಾಗುತ್ತದೆ. ಈ ವ್ಯತ್ಯಯವೇ ಸಾಮಾಜಿಕ ಭಾಷಾಶಾಸ್ತ್ರದ ವಿಷಯ.

ಕಾಕ್ಕಾರಿಶ್ಶಿ ನಾಟಕಂ

(ಜನಪದ ನಾಟಕ)

ಜಿ. ಭಾರ್ಗವನ್ ಪಿಳ್ಳ

ಟಿಪ್ಪಣಿ

ಕಥಾಪಾತ್ರಗಳು ರಂಗಕ್ಕೆ ಬಂದು, ಪರಸ್ಪರವಾದ ಕ್ರಿಯೆಯ ಮೂಲಕ ಯಾವುದಾದರೂ ಆಶಯವನ್ನು ನೋಡುಗರಿಗೆ ತಲುಪಿಸುವ ಸಂಕೇತವೆ ನಾಟಕ. ಪ್ರವಚನೀಯ ಸಾಹಚರ್ಯದಲ್ಲಿ ಮಾತ್ರ ಕಾಣಿಸುವುದು, ಪರಂಪರೆಯನ್ನು ಅನುಸರಿಸುವಾಗಲೂ, ದೇಶಕಾಲಾನುಸಾರಿಯಾದ ಹೊಸ ಹೊಸ ಪಾಠಾಂತರಗಳನ್ನು ಸೃಷ್ಟಿಸಿಕೊಂಡು ಕಾಲದ ಜತೆ ಹೆಜ್ಜೆಹಾಕಿ ಮುನ್ನಡೆಯುವಂಥದು ಎಲ್ಲ ಜನಪದ ನಟಕಗಳ ಲಕ್ಷಣ. ಹಲವು ತೆರನಾದ ಧರ್ಮಗಳನ್ನು ನಿರ್ವಹಿಸುವ ನಾಟಕಗಳು ಇರಬಹುದು. ನಿರ್ವಹಿಸುವ ಧರ್ಮಗಳಿಗೆ ಅನುಸಾರವಾಗಿ ನಾಟಕದ ಸ್ವಭಾವಕ್ಕೂ ವ್ಯತ್ಯಾಸ ಉಂಟಾಗಬಹುದು. ಅನುಷ್ಠಾನ ನಾಟಕ ನಿರ್ವಹಿಸುವ ಧರ್ಮವಲ್ಲ ಮತನಿರಪೇಕ್ಷಾ ನಾಟಕ ನಿರ್ವಹಿಸುವುದು. ಸಂಕೀರ್ಣವೂ ಎದುರೆದುರೇ ಪ್ರಕಟಿಸಲು ಆಗಲಾರದಂಥದೂ ಆದ ಆಶಯಗಳನ್ನು ಪುರಾವೃತ್ತಗಳ ಮೂಲಕವೂ ಅನುಷ್ಠಾನಗಳ ಮೂಲಕವೂ ಸಾಂಘಿಕತೆ ಪ್ರಸ್ತುತಪಡಿಸುತ್ತದೆ. ಅದರಿಂದಲೇ ಅನುಷ್ಠಾನ ನಾಟಕಗಳ ಉದ್ದೇಶ ಮನೋರಂಜನೆಯಲ್ಲ. ಮನೋರಂಜನೆ ಉದ್ದೇಶವಾಗಿರುವ ನಾಟಕಗಳೇ ಮತನಿರಪೇಕ್ಷವಾದ ಜನಪದ ನಾಟಕಗಳು. ಆ ಬಗೆಯ ಒಂದು ನಾಟಕ 'ಕಾಕ್ಕಾರಿಶ್ಶಿ ನಾಟಕಂ'.

'ಅಕ್ಕಂ' ಮತ್ತು 'ಪುಱಂ' ಎಂಬ ಸಂಕಲ್ಪ ಕೇರಳದ ಜನಪದನಾಟಕಗಳಲ್ಲಿ ಬಹಳ ಪ್ರಬಲವಾಗಿದೆ. ಆದ್ದರಿಂದಲೆ 'ಅನುಷ್ಠಾನ'ದ ಒಳಗೆ 'ಪುಱಂ' (ಹೊರ) ಉಂಟಾಗುವುದು. 'ಪೊಱಾಟ್ಟು' ಕೇರಳದ ಎಲ್ಲ ಅನುಷ್ಠಾನ ನಾಟಕಗಳ ರಚನೆಯೊಳಗಿರುವ ಒಂದು ವ್ಯವಸ್ಥೆಯಾಗಿದೆ. 'ತೆಯ್ಯಂ'ನಲ್ಲೂ 'ಪಡಯಣಿ'ಯಲ್ಲೂ 'ಪೊಱಾಟ್ಟು'ಗಳು ಪ್ರತ್ಯಕ್ಷಗೊಳ್ಳುವಾಗ 'ಮುಡಿಯೇಱ್ಱು'ನಲ್ಲಿ ಪುಱಾಟ್ಟಿನ ಧರ್ಮವನ್ನು ನಿರ್ವಹಿಸುವುದು 'ಕೂಳಿ' (ಪಿಶಾಚಿ) ಪಾತ್ರವಾಗಿದೆ. ಅನುಷ್ಠಾನದ ಭಾಗವಾಗಿ ಆದರೆ ಅನುಷ್ಠಾನ ಸ್ವಭಾವವಿಲ್ಲದೆ ಕಾಣಿಸಿಕೊಳ್ಳುವ 'ಪೊಱಾಟ್ಟು'ಗಳ ಸಾಮಾನ್ಯ ಸ್ವಭಾವ ಪರಿಹಾಸವಾಗಿದೆ. ವಿಶೇಷತಃ ಜಾತಿಗಳ ಕುರಿತಾದ ಗೇಲಿ. ಒಂದೊಂದೇ

ಜತಿಯನ್ನು ಪ್ರತಿನಿಧಿಸುವ ಕಥಾ ಪಾತ್ರಗಳು ರಂಗಕ್ಕೆ ಬಂದು ಆ ಜಾತಿ ವೈಶಿಷ್ಟ್ಯಗಳನ್ನು ಹೇಳಿ ಗೇಲಿ ಮಾಡುವುದೆ ಇದರ ರೀತಿ. ಅನುಷ್ಠಾನದೊಂದಿಗೆ ಸಂಬಂಧವಿಲ್ಲದ 'ಪೊಜೂಟ್ಟು' ನಾಟಕ ಮಾಡುವುದೂ ಇದನ್ನೆ.

ಇವುಗಳ ಹೆಜ್ಜೆ ಮೇಲೆ ಹೆಜ್ಜೆಯಿರಿಸುವ ಒಂದು ನಾಟಕರೂಪವೆ 'ಕಾಕ್ಕಾರಿಶ್ಶಿ' ಇಲ್ಲಿ ವಿಮರ್ಶಾವಿಷಯವಾಗುವುದು ಒಂದೇ ಸಮುದಾಯ– 'ಕಾಕ್ಕಾಲನ್ಮಾರ್' (ಹಾವಾಡಿಗರು ಅಥವಾ ಮಂಗನನ್ನಾಡಿಸುವವರು). ಆದರೆ, ಇವತ್ತು ಈ ನಾಟಕರೂಪ ಅದರ ಸ್ವಂತವಾದ ಪರಿಸರದಲ್ಲಿ ನೆಲೆಗೊಳ್ಳುವುದಿಲ್ಲ. ಒಂದು ಸಮುದಾಯವನ್ನು ಮತ್ರ ಗೇಲಿ ಮಾಡುವ ಒಂದು ಕಲಾರೂಪ ಏಕೆ ಒಂದು ಕಾಲದಲ್ಲಿ ಆಕರ್ಷಕವಾಗಿತ್ತು ಮತ್ತೆ ಅದೇಕೆ ಅಪ್ರಸಕ್ತವೆನಿಸಿಬಿಟ್ಟಿತು ಎಂಬುದು ಅನ್ವೇಷಣೆಗೆ ಯೋಗ್ಯವಾಗಿದೆ.

– **ಸಂಪಾದ**

ಕ

ಕಕ್ಕಾರಿಶ್ಶಿ ನಾಟಕಂ

ಕಕ್ಕಾರಿಶ್ಶಿನಾಟಕಂ, ಕಕ್ಕಾಲನಾಟಕಂ, ಕಾಕ್ಕಾರಿಶ್ಶಿ ಚರಿತಂ ಈ ಹೆಸರುಗಳಿರುವ ಜನಪದ ನಾಟಕಕ್ಕೂ **'ಕಾಕ್ಕಾಲನ್'** ಜನಾಂಗ (ಹಾವಾಡಿಗ, ಮಂಗನಾಡಿಗ ಜನಾಂಗ)ಕ್ಕೀ ಯಾವುದೆ ಸಂಬಂಧವಿಲ್ಲ. ಕಾಕ್ಕಾಲರು ಅಭಿನಯಿಸುವಂಥದೋ, ಅವರು ಬರೆದು ತಯಾರಿಸುವುದೋ ಆದ ಒಂದು ನಾಟಕ ಇದಲ್ಲ. ನಾಟಕದಲ್ಲೂ ಗ್ರಾಮೀಣಕಲೆಗಳಲ್ಲೂ ಆಸಕ್ತಿಯಿರುವ ಇತರರೇ ಊರುಗಳಲ್ಲಿ ಕಾಕ್ಕಾರಿಶ್ಶಿ ನಾಟಕ ಕಲಿತು ರಂಗಮಂಚವೇರುತ್ತ ಬಂದಿರುವುದು. ಅವಲರಲಿ ನಾಯನ್ಮಾರು, ಪಾಣರು, ಈಜೆವರು ಎಲ್ಲಾ ಇದ್ದಾರೆ. ಇತರ ನಡಕಲೆಗಳಿಗಿರುವಂತೆ ಈ ನಾಟಕವನ್ನೂರ್ಯು ಕಲಿಸಿಕೊಡುವುದಕ್ಕೆ ಗುರುಗಳಿದ್ದಾರೆ. ಅವರ ನೇತೃತ್ವದಲ್ಲಿ ಉರ ಕಲಾವಿದರು ಒಟ್ಟಿಸೇರಿ ಕಾಕ್ಕಾರಿಶ್ಶಿ ನಾಟಕವನ್ನು ಅಭ್ಯಸಿಸುತ್ತಾರೆ. ಇದರಲ್ಲಿ ಹೆಣ್ಣುವೇಷಗಳನ್ನು ಗಂಡಸರೇ ಧರಿಸುವುದು. ಶಿಸ್ತಿಗೆ ಸರಿಯಾಗಿ ತಳಬದ್ಧವಾಗಿ ಆಡಲೂ ಹಾಡಲೂ ಕಲಿತರೆ ಓಣಂ ಹಬ್ಬಕ್ಕೋ, ಶಿವರಾತ್ರಿಗೋ ದೇಗುಲದ ಆವರಂಣದಲ್ಲೋ, ಇತರ ಸಾರ್ವಜನಿಕ ಸ್ಥಳಗಳಲ್ಲೋ ಇದು ರಂಗವೇರುತ್ತದೆ.

ಮುಟ್ಟಸ ನೆಲದಲ್ಲಿ ಒಂದಿಷ್ಟು ಎತ್ತರಕ್ಕೆ ಎರಿಸಕಟ್ಟಿ ವೇದಿಕೆ ಅದಕ್ಕೊಂಚು ಪ್ರಸಾಧನ ಆವರಣವು ಇರುತ್ತದೆ. ಮಸಿ, ಸುಣ್ಣ, ಅಕ್ಕಿ ಹಿಟ್ಟು ಮುರಕಲ್ಲು(ಕೆಂಗಲಲು) ಇತ್ಯಾದಿ ಬಣ್ಣದ ವಸ್ತುಗಳು.

ಹಾಡುಗಾರ ಕಾಕ್ಕಾರಿಶ್ಯಿ ನಾಟಕದ ಒಂದು ಪ್ರಧಾನ ಕಥಾ ಪಾತ್ರ. ಆತನ ಅಭಿನಯಿಸಲು ಅಥವಾ ನರ್ತಿಸಲು ಬರುವುದಿಲ್ಲವಾದರೂ ಆತನ ಪ್ರಶ್ನೆಗಳಿಂದಲೂ ಕಥಾ ಪಾತ್ರಗಳಿಂದ ಆತ ಪಡೆಯುವ ಉತ್ತರಗಳಿಂದಲೂ ಕಥೆಯ ವಿಕಸನವಾಗುತ್ತದೆ. ಹಾಡಿಗೆ ನೇತೃತ್ವ ಆನತೇ.

ಕಥಾನಾಯಕ. ಸುಂದರನ್ ಕಾಕ್ಕಾನ್ ಆಗಿರುತ್ತಾನೆ. ಹೆಚ್ಚಿನ ಕಾಕ್ಕಾರಿಶ್ಯಿ ನಾಟಕದಗಳಲ್ಲೂ ಸುಂದರನ್ ಕಾಕ್ಕಾನ್ ಕಾಕಾತ್ತಿಗಳು(ಕಾಕ್ಕಾನೆನ ಸ್ತ್ರೀವಾಚಕ ಕಾಕ್ಕಾತ್ತಿ), ಬೇಡ ಇವರು ಮುಖ್ಯ ಪಾತ್ರಗಳುಯ.

ಕಾಕ್ಕಾಲರ ವರ್ಗದ ಪ್ರತಿನಿಧಿ ಸುಂದರನ್ ಕಾಕ್ಕಾನ್. ಆತ ಹೇಳುವ ಒಂದೊಂದು ಮಾತೂ ಹಳಗಾಲದ ಕಾಕ್ಕಾನ್ ಪ್ರತ್ಯಕತೆಯನ್ನು ಸೂಚಿಸುತ್ತದೆ. ತಾಳಕ್ಕೆ ತಕ್ಕವಾಗಿ ಹೆಜ್ಜೆಹಾಕಲೂ ತಿರುವಾದಿರ ಆಡಲೂ ನೃತ್ತವಾಡೆಲೂ

ಸುಂದರನ್ ಕಾಕ್ಕಾನ್‌ಗೂ ಇತರ ಕಾಕ್ಕಾನ್‌ಗಳಿಗೂ ಗೊತ್ತಿರಬೇಕು. ತಾಳದ ದ್ರುತಗತಿಗೆ ತಕ್ಕವಾಗಿ ಹೆಜ್ಜೆ ಹಾಕಲು ಆಗಾಗ ಸಂದರ್ಭಬರುತ್ತದೆ. ಅದಕ್ಕೆ ಬಏಕಾದ ಮೈಯ ಲಘವಕ್ಕಾಗಿ ಎಲ್ಲ ಕಲಾವಿದರೂ ಸಾಕಷ್ಟು ಪೂರ್ವಭಾವೀ ತಾಲೀಮನ್ನು ಕೈಗೊಳ್ಳಬೇಲಾಗುತ್ತದೆ.

ಹಾರ್ವೋನಿಯಂ ಮೃದಂಗ, ಖಂಜಿರ ಕೈಮಣಿ(ತಾಳ) ಇವು ಇಲ್ಲಿನ ತಾಳವಾದ್ಯಗಳು ರಂಗದ ಹಿಂದಿನ ಅಂಚಿನಲ್ಲಿ ಹಾಡುಗಾರ ಮೇಳವಿರುವತ್ತದೆ. ಅವರ ಮುಂದೆಯ ಪಾರಗಳು ನಿಂತು ಅಭಿನಯಿಸುವುದು. ಊರ ಪ್ರಮುಖ ರಂಗಮಂಚಕ್ಕೆ ಹತ್ತಿರವಾಗಿ ಪ್ರೇಕ್ಷರಕರಾಗಿ ಕುಳ್ಳಿರುತ್ತಾರೆ. ಏನಿದ್ದರೂ ಕಾಕ್ಕಾರಿಶ್ಯಿ ನಡೆಯುವ ಸ್ಥಳದಲ್ಲಿ ಕಟ್ಟೆಐಸುವುದು ಬಾಯ್ದೆರೆದು ನಗುವುದಕ್ಕೆ ತಯಾರಾಗಿಯೇ.

ಸಂಗೀತ, ನೃತ್ಯ, ಸಂಭಾಷಣೆ, ಆಂಗಿಕಾಭಿನಯ ಮೊದಲಾದವು ಚಏನ್ನಾಗಿ ಹೊಂದಿಕೊಳ್ಳುವ ಕಾಕ್ಕಾರಿಶ್ಯಿ ಆಟಕ ನಮ್ಮ ಗ್ರಾಮೀಣ ಕಲಾಕಾರದಲ್ಲಿ ಹಳಗಾಲದಿಂದಲೆ ಇದ್ದ ರಂಗ ಪ್ರಜ್ಞೆ ಮತ್ತು ಅಭಿನಯ ಪಾಟವಗಳಿಗೆ ಉತ್ತಮ ಉದಾಹರಣೆ ಗೇಲಿಮಾಡುವುದ, ಖುಷಿಪಡುವುದು, ಅದಕ್ಕಾಗಿ ಹಾಡುವುದು ಆಡುವುದು, ಮಾತನಾಡುವುಉದ ಅಭಿನಯಿಸುವುದು ಇಷಗ್ಟು ಮಾಥ್ರವೇ ಕಾಕ್ಕಾರುಶ್ಯಿ ರಂಗದ ಉದ್ದೇಶವಾಗಿತ್ತು. ಕೆಲವು ನಾಟಕಗಳಲ್ಲಿ ಕಾಕ್ಕಾನ್ ಮ್ತು ಕಾಕ್ಕಾತ್ತಿ ಸಭೇಗೆ ವಂದನೆ ಹೇಳುತ್ತ ರಂಗ ಪ್ರವೇಶಿಸುವ ಮೂಲಕವೆ ನಾಟಕದ ಆರಂಕೆಲವು ಪಾಠಭೇದ ಪ್ರಕಾರ ಕಾಕ್ಕಾತ್ತಿಗಳ ತಿರುವಾದಿರ ಕಾಣಿತದ ಮೂಲಕ ನಾಟಕ ಆರಂಭವಾಗುತ್ತದೆ. ನಾಟದಕ ಕಥಾ ಸಂದರ್ಭ ಅನುಸರಿಸಿ ತನ್ನದೇ ರಈತಿಯಲ್ಲಿ ಪುರಾಣಾಖ್ಯಾನ ನಡೆಸುವ ಪದ್ಧತಿ ಕಾಕ್ಕಾರಿಶ್ಯಿಯಲ್ಲೊಇದೆ ಒಂದು ಉದಾಹರಣೆ.

ಕಾಕ್ಕಾನ್: ತಂಬುರಾನೂ ಅಡಿಯನೆ ಕಾಕ್ಕಾತ್ತಿಮಾರ್ ಕ*ಚ್ಚುಪೋಯೇ. ಇನಿ ಯಡಿಯನ್ ಕಳಿಕ್ಕಾಂ (ಒಂದು ಬಗೆಯ ಶೃಂಗಾರ ನೆಗೆಯೊಂದಿಗೆ) ಅಡಿಯನೆ ಕಾಕ್ಕಾತ್ತುಮಾರ್ ಕೊಚ್ಚಲ್ಲಯೋ............	ಒಡೇರೆ ಗುಲಾಮನ ಕಾಕ್ಕಾತ್ತಿಗಳು ಕಳೆದುಹೋದರೋ! ಇನ್ನು ಗುಲಾಮ ಆಡಬಹುದು (ಒಂದು ಬಗೆ ಶೃಂಗಾರ ನಗೆಯೊಂದಿಗೆ) ಗುಲಾಮನ ಕಾಕ್ಕಾತ್ತಿಗಳು ಮಗುವಲ್ಲವೆ!
ಹಾಡುಗಾರ: ನಿನಕ್ಕೆ ಒಂದು ಪಾಟ್ಟುವಿದ್ಯಗಳ* ಯಾಮಲ್ಲೊ! ಅದು ಕೊಂಡ್ ನೀ ತನ್ನೆಯಾಗಟ್ಟೆ	ನಿನಗೆ ಒಂದು ಹಾಡು ವಿದ್ಯೆಗಳು ತಿಳಿದಿರುವುದಲ್ಲ! ಆದ್ದರಿಂದ ನೀನೆ ಹಾಡುವುದಾಗಲಿ.
ಕಾಕ್ಕಾನ್ : ತಂಬುರಾನೋ! ರಾಮಾಯಾಣಮಾಗಟ್ಟೆ.	ಒಡೇರೇ! ರಾಮಾಯಣವಾದಿತೇ?
ಹಾಡುಗಾರ: ಶರಿ. ರಾಮಾಯಣಂ ತನ್ನೆ ಯಾವಟ್ಟೆ	ಸರಿ! ರಾಮಾಯಣವೇಆಗಲಿ
ಕಾಕ್ಕಾನ್: ಎನೆ ಪಹವಾನೇ...... ನಳ ಚರಿತಮಾಯಾಲೋ. ವೇಂಡಾ.....ರಾಮಾಯಣಂ ತನ್ನೆಯಾಗಾಂ. ತಂಬು ರಾನೋ! ಒನ್ನು	ನನ್ನ ದ್ಯಾವ್ರೇ...... ನಳಚರಿತವಾದರೇನು? ಬ್ಯಾಡ...... ರಾಮಾಯಣವೇ ಆಗಬಹುದು. ಒಡೇರೇ ಒಮ್ಮೆ

ಕೊಡಿಕ್ಕೊಣ್ಣೇ......... ಸುಂದರಿಯಾಂ ಸೀತೆ ತನೆ ಮಾರ್ತಯಲ್ಪಂ ಚೋಲ್ಲಾಂ. ರಾಮದೇವನ್ ರಾನನತ್ತಿಲ್ ಪೋಕುಮೆನ್ನು ಚೊಲ್ಲಿ ಕಾನನತ್ತಿಲ್ ಪೋಗುಮೆಂಗಿಲ್ ಞೌನುಂ ಕೊಡಿಪ್ಪೋರುಂ ಕಾನನತ್ತಿಲ್ ಚೆನ್ನು ಪರ್ಣಶಾಲಯತುಂ ಕೆಟ್ಟೆ ತುಂಬಿಯಾಯ ಲಕ್ಷ್ಮಣನೆ ಕಾವಲಾಕ್ಕಿ ವೆಚ್ಚು ರಾಮದೇವನ್ ಕಾನನತ್ತಿನಲ್ ಮಾನ್ ಪಿಡಿಪ್ಪಾನ್ ಪೋಯಿ ಮಾನ್ ಪಿಡಿಪ್ಪಾನ್ ಚೆನ್ನವಸ್ಥೆ ರಾವಣನ*ಇಷ್ಠ.......	ಸೇರ್ರ್ಕೋಬೇಕೂ...... ಸುಂದರಿಯಹ ಸೀತೆಯವಳ ವಾರ್ತೆಯಲ್ಪ ಪೇಳ್ವೆ. ರಾಮದೇವ ಕಾನನದಲಿ ಪೋಪೆನಂದು ಪೇಳಿ ಕಾನನಕ್ಕೆ ಪೋಗೋದಾದ್ರೆ ನಾನೂ ಸೇರಿಬರುವೆ ಕಾನನಕ್ಕೆ ಪೋಗಿ ಪರ್ಣ ಶಾಲೆಯಾದನು ಕಟ್ಟೆ ತಮ್ಮನಾದ ಲಕ್ಷ್ಮಣನ ಕಾವಲಾಗಿ ಇಟ್ಟು ರಾಮದೇವ ಕಾನನದೋಳ ಜಿಂಕೆ ಹಿಡಿಯ ಹೋದ ಜಿಂಕೆ ಹಿಡಿಯ ಹೋದವಸ್ಥೆ ರಾಮಣತಾನರಿತ.......

ಒಂದು ಕಾಲಘಟ್ಟದಲ್ಲಿ ಅಲೆಮಾರಿಗಳಾಗಿ ಬದುಕಿದ್ದ ಕಾಕ್ಕಲನ್‌ನ ಜೀವನವನ್ನು ಇತರ ಸಾಂಘಿಕತೆಗಳು ಹೇಗೆ ನೀಡಿಕೊಂಡಿದ್ದವು ಎಂಬುದರ ಸೂಚನೆಯ ಕಾಕಕಾತ್ತಿಯ ಚಷಾರಿತ್ರ್ಯವನ್ನು ಸಂದೇಹಿಸುವ ಕಾಕ್ಕಾಲನ ಮತ್ತು ಕಾಕ್ಕಾತ್ತಿಯ ನಡುವಣ ಸಂಭಾಷಣೆಯಲ್ಲಿ ಪ್ರಕಟವಾಗುವುದು ಕಾಕ್ಕಾಲನೂ ಹಾಡುಗಾರನೂ ಆಡುವ ಸಂಭಾಷಣೆಯಲ್ಲಿ ಕಾಕ್ಕಾಲನೊಂದಿಗಿದ್ದ ಸಮೂಹದ ವೀಕ್ಷಣೆಯ್ನನು ಕಾಣಬಹುದು. ಕಾಕ್ಕಾನೆ ಕಾಕ್ಕಾತ್ತಿ ಸಂಭಾಷಣೆ ಕೆಳಗಿನಂತೆ

ಕಕ್ಕಾನ: ಚುರುಯುಉಡತೋರುಪಟ್ಟು ಪವಾಡದಿಪುಡಿ ಪೋಚಿದೆಡೀ ಕಾಕ್ಕಾತ್ತಿ, ಎಪ್ಪಡಿ ಪೋಚಿದೆಡೀ? ಕಾಕ್ಕಾತ್ತಿ: ಚುಳ್ಳಿಯೊಡಿಕ್ಕುವಾನ್ ಕಾಟ್ಟಿಲೆ ಪೋಯಪೋಳ್ ಮುಳ್ಳಿಲುಡಕ್ಕಿಯಡೆ ಕಾಕ್ಕಾನೆ ಮುಳ್ಳಿಎಡಕ್ಕಿಯೆಡಾ	ಸುತ್ತಿಯಟ್ಟ ಒಂದು ರೇಶ್ಮೆ ಪಾವಡೆಯದೆಂತು ಹೋಯ್ತೆಲಗೇ ಕಾಕ್ಕಾತ್ತಿ ಅದೆಂತು ಹೋಯ್ತೆಲಗೇ ಒಣಗೆಲ್ಲ ಮರಿಯಲು ಕಾಡಿಗೆ ಹೋದಾಗ ಮುಳ್ಳು ಚುಚ್ಚಿ ತಎಲಾ ಕಾಕ್ಕಾನೆ ಮುಳ್ಳದು ಚುಚ್ಚಿತೆಲಾ

ಕಾಕ್ಕಾನೆ ಮೂಕ್ಕಿಲ್ ಕಿಡನ್ನೂರು ಕಲ್ಲು ಮೂಕ್ಕುತ್ತಿಯ ತಎಪ್ಪಡಿ ಪೋಚ್ಚಿದೆಡೀ ಕಾಕ್ಕಾತ್ರತಿ ಎಪ್ಪಡಿಪೋಚಿದೆಡೀ	ಮೂಗಲಿ ಮಲಗಿದ್ದ ಕಲ್ಲು ಮುಕುತ್ತಿಯ ದೆಂತು ಹೋಯ್ತೆಲಗೆ ಕಾಕ್ಕಾತ್ತಿ, ಎಂತು ಹೋಯ್ತೆಲಗೆ
ಕಾಕ್ಕಾನ್: ಮೊಕ್ಕಿಲ್ ಕಿಡನೋರು ಕಲ್ಲು ಮೂಕ್ಕುತ್ತಿಯಿ ತೆಪ್ಪಡಿ ಪೋಚ್ಚಿದೆಡೀ ಕಾಕ್ಕಾತ್ತಿ ಎಪ[ಪಡಿ ಪೋಚಿದೆಡೀ	ಕೋಡದೋಲಗಿಹ ನೀರ ನೆಳೆದು ತಾ ಕೂಡಿದಾಗ ಕೋಡದೋಳಗೆ ಹೋಯಿತೆಲಾ
ಕಾಕ್ಕಾತ್ತಿ : ಮೊಂದಯಿಲೇ ವೆಳ್ಳಂ ಮೊಂದಿಕ್ಕುಡಿಚ್ಚಪ್ಪೋಳ್ ಮೊಂದಯಿಲ್ ಪೋಯಡೆಡಾ	ಕಾಕ್ಕಾನೆ ಕೊಡದೊಳಗೆ ಹೀಯಿತೆಲಾ
ಕಾಕ್ಕಾನೆ,ಮೊಂದಯಿಲ್ ಪೋಯಡೆಡಾ	ಇನ್ನು ನಿನ್ನ ದೇಶ (ಸ್ಥಳ)ವೊಂದರಿತರೆ ಚೆನ್ನು.
ಹಾಡುಗಾರ: ಇನಿಯಂ ನಿಣೆ ದೇಶಮೊನ್ನೆ*ಇಶ್ಞಾಲ್ ಕೊಳ್ಳಾಂ...	ಅಲ್ಲವೇ! ಗುಲಾಮನ ದೆಶ(ಸ್ಥಳ) ಉದ್ದೇಶವಹದಲ್ಲವೆ...ಒಡೇರೆ
ಕಾಕ್ಕಾನ್: ಅಲ್ಲೇ ! ಅಡಿಯನೆ ದೇಶಂ! ಉದ್ದೇಶಮಾಣಲ್ಲೋ..... ತುಂಬುರಾನೇ......	ನಿನ್ನದ್ದೇಶವೊಂದು ಇಲ್ಲಿ ನಡೆಯಲಾರದು ನೀನು ಎಲ್ಲಿಯವೆನಂದು ಒಂದು ತಿಳಿದರೆ ಆದೀತು.
ಹಾಡುಗಾರ: ನಿನುದ್ದೇಶಮೊನ್ನುಣ ಇವಿಡೊಕ್ಕತ್ತಲ್ಲ ನೀ ಎವಿಡತ್ತೆ ಕಾರನಾಣೆಣ್ಣ ಒನ್ನ*ಇಶ್ಞಾಲ್ ಕೊಳ್ಳಾಂ	ಅಲ್ಲವೆ! ಗುಲಾಮನ ಗೊತ್ತಿಲ್ಲವೇ?
ಕಾಕ್ಕಾನ್: ಅಲ್ಲೇ ! ಅಡಿಯನೆ ತಿ* ಯತ್ತಿಲ್ಲೇ!	ನಾನು ನಿನ್ನನ್ನು ತಿಳಿದಿಲ್ಲ.
ಹಾಡುಗಾರ: ಇೌನ್ ನಿನ್ನೆ ಅ*ಯತ್ತಿಲ್ಲ.	ಹಾಗಾದರೆ ಹೇಳ್ತೇನೆ .... ಗುಲಾಮ ಇಂದಿರೇಡ ದಲ್ಲಿರುವವನೆಲ್ಲೋ ಬಗ್ವಂತಾ
ಕಾಕ್ಕಾನ್ : ಎನ್ನಾಲ್ ಪ್ * ಯಾಂ..... ಅಡಿಯನ್ ಇಂದಿರೇಡತ್ತು ಕಾರನಾಣಲ್ಲೋ...... ಏಹವಾನೇ......	ಇಂದಿರೇಡದವೆನಂದು ಹೇಳಿದರರೆ ನಾನು ಹೇಗೆ ತಿಳಿದೇನು?
ಹಾಡುಗಾರ: ಇಂದಿರೇಡತ್ತುಕಾರನಾಣೆನ್ನು ಪ*ಇಶ್ಞಾಲ್ ಇೌನ್ ಎಜ್ಞನಾಣ*ಯುನ್ನತೆ!	ಗುಲಾನ ಅಕ್ಕು ಆಚೆ ಅಂಚಿನಲ್ಲೆ ಇರುವವನಲ್ಲೋ.....

ಕಾಕ್ಕಾನ್: ಅಡಿಯನ್ ಅಜ್ಞೆಯ* ತ್ತುಕಾರನಾಣಲ್ಲೋ.....ಪಹವಾನೇ!	ಬಗ್ವಂತಾ..
ಹಾಡುಗಾರ: ಆಜ್ಞೇಯ*ತ್ತು ಚೆನಾಲ್ ಅಜ್ಞೋಟ್ಟು ವೀಣುಪೋಕುಂ	ಆಚೆ ಅಂಚಿನ ಆಚೆಗೆ ಬಿದ್ದು ಬಿಡಬ ಹುದು.
ಕಾಕ್ಕಾನ್: ಎನ್ನಾಲೇ ಅಡಿಯನ್ ಇಜ್ಞೇ ಅ*ತ್ತುಕಾರನಾಣೇ.....	ಹಾಗಾದ್ರೇ. ಗುಲಾಮ ಈಚೆ ಅಂಚಿ ನವನಯ್ಯಾ.....
	ಈಚೆ ಅಂಚಿನಲ್ಲಾದರೂ ಹಾಗೇನೆ
ಹಾಡುಗಾರ: ಇಜ್ಞೇಯ*ತ್ತಾಯಲುಂ ಅಜ್ಞನೆತನ್ನೆ.	ಗುಲಾನ ಈ ..... ಊರಿನವನಯ್ಯಾ...
ಕಾಕ್ಕಾನ್ : ಅಡಿಯನೀ..... ಇಡಕ್ಕಾರ ನಾಣೀ	ಇವನೊಬ್ಬ ಕಳ್ಳನೆಂದು ತೋಗುತ್ತದಲ್ಲೋ ನೀಡಿ
ಹಾಡುಗಾರ: ಇವನೂರು ಕಳ್ಳನಾಣೇನ್ನೆ ತೋನ್ನುನ್ನಲ್ಲೋ ಕಂಡಿಟ್ಟಿ	ಅಯ್ಯೋ! ಗುಲಾಮನ ನೋಡಿದರೆ ಕೆಟ್ಟವನೆಂದು ತಓರುತ್ತದೋ ಬಗ್ವಂತಾ...
ಕಾಕ್ಕಾನ್: ಅಯ್ಯೋ! ಅಡಿಯನ್ ಕಂಡಾಲ್ ವೇಶಕ್ಕಾರ ನಾಣೆನ್ನೆ ತೋನ್ನುಮೋ ಪಹವಾನೋ...	ಅದೆಲ್ಲ ಇರಲಿ....ನಿನ್ನ ಸ್ಥಳಯಾವುದು ಎಂಬುದು ತಿಳಿಯಬೇಕಾಗಿದೆ.
ಹಾಡುಗಾರ: ಅದೇಕ್ಕೆಯಿರಿಕ್ಕಟ್ಟೆ..... ನಿನೆ ಸ್ಥಲಮಾಣ ಯಂಡತ್	ಗುಲಾಮ ಕಾ*ಣತ್ತಿನವನು......
ಕಾಕ್ಕಾನ : ಅಡಿಯನ್ ಕಾ*ಣತ್ತು ಕಾಕನ್	ಕಾ*ತ್ತಿನ ಒಬ್ಬ ಕುಂಟ ಕಾಕ್ಕಾನ್ ಬಗೆಗೆ ಕೇಳಿದ್ದೇನೆ. ಅವನಿಗೆ ನೀನು ಏನಾಗ್ಬೇಕು?
ಹಾಡುಗಾರ: ಕಾ*ಣತ್ತುಕಾರನ್ ಬರಮೊಂಡಿಕ್ಕಾಕ್ಕಾನೆ ಇಔನ್ ಕೇಟ್ಟಿಟ್ಟುಂಡ್ ಅವನೆ ಆರಾ ನೀಯ್?	ಗುಲಾಮ ಹೇಳ್ಳಿಕ್ಕೆ ಹೋಗ್ತಿದ್ದೆನೆ?
	ಹಾಗಾದರೆ ಹೇಳಿಬೀಡು
ಕಾಕ್ಕಾನ್ : ಡಿಯನ್ ಪರಯಾನ್ ಪೋವ್ವಾಣೇ......	ಗುಲಾಮ...ಕಾ*ಣತ್ತಿನವನಾದ..... ಕುಂಟಕಾಕ್ಕಾನ್‌ನ... ಚಿಕ್ಕಪ್ಪನ ಅಣ್ಣನ..... ಮಗ..... ಮಗ..... ನಾನು ತಾನು (ನೀನು)
ಹಾಡುಗಾರ ಎನ್ನಾಲಜ್ಞೆನ ಪ*	
ಕಾಕ್ಕಾನ್: ಅಡಿಯನ್..... ಕಾ*ಣ ತ್ತುಕಾರನ್......	

ಮೊಂಡಿಕ್ಕಾಕಾನ್...... ಚಿ*ಪ್ಪನೆ ಚೇಟ್ಟನೆ...ಮೋನ್..... ಇಇಔನ್ ...ತಾನ್ ಹಾಡುಗಾರ : ಇೌನವನೆ ಆರುಮಲ್ಲ.	ನಾನವನಿಗೆ ಯಾರು ಅಲ್ಲ.

(ಕಾಕ್ಕಾನ್ ಅಚೆಗೂ ಈಚೆಗೂ ನಡೆಯುತ್ತಾನೆ. ನಿಂತು ನಡುಗುತ್ತಾನೆ)

ಹೀಗೆ ಹೂರಣ ಅನೇಕ ವೇಳೆ ಕಾಕ್ಕಾನೆ ಜನರ ಜೀವನದೊಂದಿಗೆ ನಏರ ಸಂಬಂಧಪಡಿಸುವುದು ಅಥೌಆ ಕಾಕ್ಕಾನ್‌ಗಳ ಜೀವನದೊಂದಿಗೆ ಉಳಿದವರ ಪ್ರತಿಕ್ರಿಯೆಯನ್ನು ಸೂಚಿಸುವುದು ಆಗಿರುತ್ತದೆ. ರಂಗ ವಿಭಜನೆ, ಪಾತ್ರ ಪ್ರವೇಶ, ನಿಷ್ಕ್ರಿಮಣ ಮೊದಲಾದವುಗಳ ಅನುಕ್ರಮಣಿಕೆ, ಶಿಸ್ತುಗಳನ್ನು ಗಣಿಸುವುಆಗ, ಯಾವುದೊ ರಂಗ ಪ್ರಜ್ಞೆ ಇರುವ ಗ್ರಾಮೀಣ ಕಲಾಕಾರ ಕೆಲ ಪ್ರದರ್ಶನ ತತ್ತ್ವಗಳನ್ನು ತಿಳಿದೊ ತಇಳಿಯದೆಯೋ ಅವಲಂಬಿಸಿರಬೇಕೆಂದು ಭಾವಿಸುವಂತಿದೆ.

ಕಾಕ್ಕಾಲನೆ ಜನರ ಜೀವನವನ್ನು ಕೇಂದ್ರವಾಗಿಸಿ ಕಾಕ್ಕಾಲರಲ್ಲದ ಇತರ ಸಮುದಾಯಗಳವರು ತಯಾರಿಸಿದ ನಾಟಕವೆ ಕಾಕ್ಕಾರಿಶ್ಶಿ ಎಂದು ಹೇಳಿ ದಏವಲ್ಲ? ಹಳಗಾಲದ ಕಾಕ್ಕಾಲನ್ ಜನರ ಜೀವನದ ಕುರಿತಾಗಿಒರುವ ಸಾಮಾನ್ಯ ತಇಳಿವಳಿಕೆ ಈ ವಿಷಯವನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ.

ಕಾಕ್ಕಾಲನ್ ಕಾಕ್ಕಾಲನ್ಮಾರ್ ಕಾಕ್ಕಾ ಇತ್ಯಾದಿ ಜಾತು ಹೆಸರುಗಳಲ್ಲೆ ಇವರ ಗುರುತ ಇರುವುದ ಕೆಲ ಕಡೆಗಳಲ್ಲಿ ಕಾಕ್ಕಾಲಫಣಿಕ್ಕನ್ ಎಂದೂ ಹೆಸರಿರುತ್ತದೆ. ಇವಲ್ಲದೆ ಕಾಕ್ಕು*ವನ್ ಎಂದು ಕಾಕ್ಕಾಲಕ್ಕುವನ್ ಎಂದೂ ಮಲಭಾರಿ ಭಾಗದಲ್ಲಿ ಇವರಿಬೆ ಹೆಸರಿದೆಏ ತಮಿಳುನಾಡಿನಲ್ಲಿ ಕಾಕ್ಕಾಕ್ಕು* ಅವನ್ ಎಂದು ಇವರಿಗೆ ಹೆಸರು ಮಲಬಾರಿನ ಕು*ವನ್ ಮತ್ತು ತಿರುವಿದಾಂಕೋಡು ಪ್ರದೇಶದ ಕಾಕ್ಕಾಲನ್ ಎರಡು ಪ್ರತ್ಯೇಕ ವಿಭಾಗಗಳಿಏ ಸೇರಿದವರೆಂದು ಅವರೊಳಗೆ ಅಭಿಪ್ರಾಯವಿದೆ. ಕಾಕ್ಕಾಲ ಮಹಿಳೆಯನ್ನು ಕಾಕ್ಕಾತ್ತಿ ಎಂದೂ ಕಾಕ್ಕಾಲಚ್ಚಿ ಎಂದೂ ಕರೆಯುತ್ತಾರೆ.

ಕಾಗೆಯನು ತಿನ್ನುವ ಜಾತಿಯವನು ಮಂಗನ್ನು ಆಡಿಸುವ ವೃತ್ತಿ ಇರುವವನು ಎಂದು ನಿಘಂಟುಕಾರರು ಅರ್ಥ ಕೊಟ್ಟಿದ್ದಾರೆ. ಎಂಬುದು ಇವರ ಬಗೆಗೆ ಗುಂಡರ್ಟ್ ನೀಡಿದ ವಿವರಣೆ.

ಕಾಕ್ಕಾಲನ್ ಜನರು : ಐತಿಹ್ಯ ಮತ್ತು ಪುರಾವೃತ್ತ

ಮಾರ್ತಾಂಡವರ್ಮ ರಾಜನ ಕಾಲದಲ್ಲಿ ಇರಣಿಯಲ್ ಕಲ್ ಕ್ಕುಳಂ, ವಿಳವಾಂಕೋಡ್, ತೋವಾಳ, ಅಗಸಿ ಎಂಬು ಈ ತಾಲೂಕುಗಳನ್ನು ಸೇರಿದ ಭಾಗ ಒಬ್ಬ ಸಾಮಂತ ರಾಜನ ಆಳ್ವಿಕೆಯಲ್ಲಿತ್ತು. ಈ ರಾಜವಂಶಕ್ಕೆ ವೇಣಾಡು ರಾಜವಂಶ. ಆ*ಙ್ಙಲ್ ರಾಜವಂಶ ಮೊದಲಾದ ಹಲವು ರಾಜವಂಶಗಳ ಪರಿಚಯವಿತ್ತು. ಒಮ್ಮೆ ಈ ಸಾಮಂತ ರಾಜಕುಟುಂಬಕ್ಕೆ ಸೇರಿದ ಒಬ್ಬಾತ ಆ*ಙ್ಙಲ್ ರಾಜನ ಅರಮನೆಯಿಂದ ರಾಜಕುಮಾರಿಯೊಬ್ಬಳನ್ನು ಕದ್ದು ಕೊಂಡು ಹೋದ. ಸಿಟ್ಟಿಗೆದ್ದ ಆ*ಙ್ಙಲ್ ರಾಜರುಗಳೂ ಪಡೆಯೂ ತೋವಾಳಕ್ಕೆ ಸಾಗಿ ಆ ರಾಜಕುಮಾರನನ್ನು ಹಿಡಿದು ಅವನನ್ನು ಭ್ರಷ್ಟ ಗೋಳಿಸಿ (ನಾಗರಿಕ ಸ್ಥಾನಮಾನಚ್ಯುತ ಗೊಳಿಸಿ)ದರು ಕೊನೆಗೆ ಆತ ವೇಷ ಬದಲಿಸಿ ಚೆಂಬಕಶ್ಶೆರಿ ರಾಜನ ಬಳಿಗೆ ಬಂದ. ಆ ಕಾಲದಲ್ಲಿ ಚೆಂಬಕಶ್ಶೆರಿ, ಕಾಯಂಕುಳಂ, ವಡಕ್ಕನ್

ಕೂರ್, ತೆಕ್ಕನ್ ಕೂರ್, ದೇಶಿಂಗನಾಡು ವೊದಲಾದ ಪಾಳಯಗಾರ ರಾಜರು ಮಾರ್ತಾಂಡವರ್ಮ ರಾಜನ ಆಕ್ರಮಣವನ್ನು ಚಿಂತಿಸುತ್ತಾ ಹೆದರಿ ಇದ್ದರು. ಚೆಂಬಕಶ್ಯೇರಿ ರಾಜನ ಬಳಿ ಅಂದು ಮಸಮರ್ಥನಾದ ಸೇಆನಿ ಇಲ್ಲವಾಗಿದ್ದ ತನ್ನ ರಾಜಧಾನಿಗೆ ಒಬ್ಬ ಪರಾಕ್ರಮಿಯಾದ ವಈರ ಯೋದ ಬಂದಿದ್ದಾನೆಂದು ತಿಳಿದು ಅವನನ್ನು ಕರೆಸಿ ಅವನ ಯುದ್ಧ ಕಲೆಗಳ ಅರಿವನ್ನು ಪರೀಕ್ಷಿಸಿದ ರಾಜ ಕೊನೆಯಲ್ಲಿ ಸೇನಾಧಿಕಾರಿಯಾಗಿ ನೇಮಕವನ್ನೂ ಮಾಡಿಸ ಮೊದಲ ಯುದ್ಧದಲ್ಲಿ ಚೆಂಬಕಶ್ಯೇರಿ ಗೆದ್ದಿತು. ರಾಜ ಹೊಸ ಸೇನಾಧಿ ಕಾರಿಗೆ ಪಟ್ಟೆ ವಸ್ತ್ರ, ಬಳೆಗಳನ್ನಿತ್ತು ನೀಡಿದ ಕುಡಮಾಳೂರಿಗೆ ಹತ್ತಿರವಾಗಿ ಕಂದಾಯರಹಿತವಾಗಿ ಬಹಳವಾದ ಭೂಮಿಯನ್ನು ಆತನಿಗೆ ನೀಡಲಾಯಿತು. ಈ ಪ್ರಧಾನ ಕುಟುಂಬ ದೆಶಾಖೆಗಳು ಚೆನ್ನಂಗರಿ, ಪೆ*ವೂರ್. ಅಂಜಲ್ ಮೊದಲಾದ ಸ್ಥಳಗಳಿಗೆ ವಯಾಪಿಸಿದವು. ಕುಡಮಾಳೂರ್ ತ*ವಾಡಿನ ಕಾಕ್ಕಾಲನ್‌ಗಳನ್ನು ಮಾಣಿಪ್ಪ*ಯರ್ ಎಂದೂ ಅಚಿಜಲ್ ಮೊದಲಾದೆಡೆಗೆ ಹೊದವರನ್ನು ಕಾವಡಿಯಾರ್ ಎಂಬ ಉಪವಿಭಾಗಗಳಲ್ಲಿ ಅವರು ತಾವೇ ಗುರುತಿಸಿಕೋಂಡಿದ್ದಾರೆ. ಚೆಂಬಕಶ್ಯೇರಿ ಮೇಣಾಡ ವಡಕ್ಕ್ ಕಾರ್ ಎಂಬ ಈ ರಾಜರಲ್ಲಿ ಕಾಕ್ಕಾಲನ್‌ಗಳು ಕೆಲ ಪ್ರತ್ಯೇಕ ಹಕ್ಕುಗಳನ್ನು ಪಡೆದಿದ್ರು ಎಂದು ಕೆಲವರು ಹ ಏಳುತ್ತಾರೆ. ತಿರುವನಂತಪುರದ ನೀರಾಟದ (ಆರಾಟಿನ್) ದಿವನ ತಂತಿಯ ಮೇಲೆ ಆಟ ಆಡುವುದಕಕಾಗಿ ಅವರಿಗೆ ಬಹಳವಾದ ಪರಿತೋಷಗಳನ್ನು ಕೊಟ್ಟಿರುವುದಾಗಿಯೂ ಕೇಳುತ್ತೇವೆ.

ಪುರುಷರೂ, ಸ್ತ್ರೀಯರೂ ಅಮಲು ಪದಾರ್ಥಗಳ ಸೇವಿಸುವರು, ಕೃಷಿ ಅಥವಾ ಇತರ ಮುಖ್ಯ ಉದ್ಯೋಗಗಳು ಇವರಿಗೆ ಹಿಂದೆ ಇದ್ದರಲಿಲ್ಲ. ಹೊಟ್ಟೆ ಉರಿ ತಗ್ಗುವ ವರೆಗೆ ಅವರು ಅಲೆಯುವರು. ಬೆಳೆಗಳ ಕೊಯ್ಲಿನ ಹೊತ್ತು ಅವರು ಸಾರ್ವಜನಿಕರ ಮುಂದೆ ಗದ್ದೆ ತೋಟಗಳಲ್ಲಿ ಹಾಜರಾರಿ ಚೇಲುವಾದ ಮಾತನ್ನು ಹೇಳಿಯೂ ಅಂಗಲಚಿಯೂ ಸಿಗುವಂಥದ್ದನೆಲ್ಲ ಬಾಚಿ ಎತ್ತಿಕೊಳ್ಳುವವರು.

ಜಾತ್ರೆಗಳಲ್ಲೂ, ಸಂತೆ ಆಗುಲ್ಲೂ ತಂತಿ ಮೇಲಣ ಆಟಗಳು, ಇಂದ್ರಜಾಲ ವಿದ್ಯೆಗಳನ್ನು ತೋರಿಸುವರು. ಆ ಗದ್ದಲದ ನಡುವೆ ಕೆಲವು ಕಾಕ್ಕಾನ್‌ಗಳು ಎಲ್ಲಾದರೂ ಒಂದೆಡೆ ಬಗ್ಗಿ ಕೂತು ಗಿಣಿಯಿಂದ ಕಣಿ ಎತ್ತಿಸು ಮುಖಲಕ್ಷಣ ನೋಡಿ ಭವಿಷ್ಯ ನುಡಿಯುವವರು. ಒಂದು ರೀತಿಯಲ್ಲಿ 'ಕಂಡಲ್ಲಿ ಕೈಲಾಸ, ಕಂಡದ್ದೆಲ್ಲಾ ಕೋಲ' ಎಂಬ ತರದ ಒಂದು ಜೀವನ ಶೈಲಿಯಾಗಿತ್ತು ಇವರದು.

ಒಂದು ಕಾಲದಲ್ಲಿ ಸಮುದಾಯದ ತೆರವು ಸ್ಥಳಗಳಲ್ಲಿ ಅಲೆದು ತಿರಿದು ನಡೆದ ಕಾಕ್ಕಾಲರು ಎಲ್ಲೂ ಸ್ಥಿರ ವಾಸ್ತವ್ಯವಿಲ್ಲದೆ ದುಕಿದ್ದರು. ಹೀಗೆ ನಡು ಮನೆಗಳಿಲ್ಲದೆ ಅಲೆದುತಿರಿದ ಇವರನ್ನು ಜನರು ಸಂಶಯದೃಷ್ಟಿಯಲ್ಲಿಎ ನೋಡಿದರು. ಹೆದರಿಕೆಯೂ, ವೈರವೂ ಉಂಟಾಯಿತು. ಕಾಲಕ್ಷೇಪಕ್ಕೆ ಮಾರ್ಗವಿಲ್ಲದುದರಿಂದ ಇವರು ಕದಿಯುವರೆಂದೂ, ಜನಸಾಮಾನ್ಯರು ತಿನ್ನದ ಕ್ಷುದ್ರಜಂತುಗಳ, ಮೃಗಗಳ ಮಾಲಸವನ್ನಿವರು ತಿನ್ನುವರೆಂದೂ ಇತರರು ಪ್ರಚಾರ ಮಾಡಿದರು. ಅಲ್ಲದೆ ವಿಶ್ವಾಸಘಾತಕರೂ, ಕ್ರೂರಿಗಳೂ ಇವರೆಂದು ಆರೋಪಕ್ಕೊಳಗಾದರು. ಒಂದಿಷ್ಟು ವಾಸ್ತ ಅವುಗಳಲ್ಲಿ ಇರಬಹುದು. 'ಕಾಕ್ಕಾರಿಶ್ಶಿ ನಟಕ'ದಲ್ಲಿ ಸುಂದರನ್ ಕಾಕ್ಕಾನ್ ಇದಿರುಗೊಳ್ಳುವ ಪ್ರಶ್ನೆಗಳು, ಅವುಗಳಿಗೆ ಆತ ನೀಡುವ ಉತ್ತರ ಇವುಗಳು ಈ ಕಾಲದಲ್ಲಿ ಈ ಗುಂಪಿನವರಿಗೆ ಸಮಾಜದಲ್ಲಿ ಸ್ಥನ ಏನೆನ್ನುವುದನ್ನು ನಿರ್ಣಯಿಸಲು ಒದಗುತ್ತವೆ.

ಕಾಕ್ಕಲನ್ ಜನರ ಬಗೆಗಿರುವ ಇನ್ನೊಂದು ಕಥೆ ಹೀಗಿದೆ. ಹಿಂದೆ ಗರಿಡ ಮನುಷ್ಯರನ್ನು ಹಡಿದು ತಿನ್ನುತ್ತಿದ್ದನಷ್ಟೆ? ಆ ಗುಂಪಿನಲ್ಲಿ ಕೆಲ ಬರಾಹ್ಮಣರೂ ಸಿಕ್ಕಿಕೊಂಡರು. ಇದರಲ್ಲಿ ಅವನಿಗೆ ಬರಹ್ಮಹತ್ಯಾ ಪಾಪ ಬಂತೆಂದು ತಾಯಿ ವಿನತೆ ದುಂಖಿಸಿದಳು ಕೊಎನೆಯಲ್ಲಿ ತಿಂದ ಬರಾಹಣರನ್ನೆಲ್ಲ ಆಥ ವಾಂತಿ ಮೂಲಕ ಹೊರಹಾಕಿದ ಹಾಗೆ ಗರುಡ ಕಕ್ಕಿದ ಬರಾಹ್ಮಣರೆ ಕಾಕ್ಕಾಲನ್ ಜನರೆಂದು ಕೆಲವರು ಹಏಳುತ್ತಾರೆ. ಹೀಗೆ ಚರಿತ್ರಯೆ ಬಣ್ಣ ಇರುವಂಥದೂ ಹಾಗಲ್ಲವಿರುವಂಥದೂ ಆತ ಅನೇಕ ಕಥೆಗಳು ಕಕ್ಕಾಲನ್ ಕಾಲದವರ ಬಗೆಗೆ ಇವೆ.

ಕಾಕ್ಕಾಲನ್ ಜನರ ಜೀವನ ರೀತಿ

ಕೇರಳದ ಕಾಕ್ಕಾಲನ ಜನರು ಬಹಳ ಹಿಂದಿನಿಂದಲೇ ಭಿಕ್ಷಾಟನಕ್ಕೆ ಹೋಗುವರಾಗಿದ್ದರು. ಆರಭಂದ ದಿನಗಳಲ್ಲಿ ಅವರಲ್ಲಿ ಸಥರವಾಸಕ್ಕೆ ಬೇಕಾದ ಸೌಕರ್ಯಗಳು ದೊರಕಿದ ಸಂದರ್ಭ ತಈರ ವಇರಳ ಅವರನ್ನು ಅಲೆಮಾರಿ ವರ್ಗ ದಲ್ಲಿ ಸೇರಿಸಬಹುದು. ಮುಖಲಕ್ಷಣದ ಮೂಲಕ ಭಿವಿಷ್ಯ ನುಡಿಯುವುದು. ಕಟ್ಟು ಕಥೆ ಹೇಳಿ ಜನರಿಗೆ ಮೊಸ ಮಾಡುವುದು, ನಆಟಿ ವಐದ್ಯ ಏಕಮೂಲಿಕೆ ಪ್ರತೋಹದ ಚಿಕಿಸ್ತೆ ನಡೆಸುವದು ಗಇಣಿಯನ್ನು ಪಳಗಿಸಿ ಹಕ್ಕಿ ಭವಿಷ್ಯ ಹೇಳುವುದು ಮೃಗಗಳನಜ್ನು ಕೊಂದು ಬಏಯುಇಸಿತಿನ್ನುವುಉದ ಕವಿಗೆ ಸಊರಿಯುವುದ ದೇಹದಲ್ಲಿ ಹ ಚ್ಚೆ ಹಾಕುವುದು ಔತಣದ ಮೆನಗಳಿಗೆ ಹೋಗಿ ಪದ್ಧತಿ ಹೇಳಿ ಹೆಚ್ಚು ಆಹಾರವನ್ನು ವಶಕ್ಕೆ ತೆಗೆಕೊಳ್ಳವುದು ಇವೇ ಮುಂತಾದವು ಇವರ ಹಳೆ ಉದ್ಯೋಗಗಳು ಸಾಮಾನ್ಯವಾಗಿ ಕಪ್ಪು ಮೈಬಣ್ಣ ಕೆಲವರು ಕೈಯಲ್ಲಾ ಹಣೆಯಲ್ಲೂ ಎದೆಯಲ್ಲೂ ಹೀಗೆಲ್ಲ ಹಚ್ಚೆ ಹಾಕುತ್ತಾರೆ. ಕುಲ ಮುಖ್ಯಸ್ಥರು ಹಿಂದೆ ತಲೆಗೂದಲನ್ನು ಬಎಳೆಸಿ ಹಇಂದುಗಡೆ ಬಇಡುತ್ತಿದ್ದರು. ಧಾರಾಳ ವಿಳ್ಯದೆಲೆ ತಿನ್ನುತ್ತಾರೆ. ಕಾಕ್ಕಾತ್ತಿ ಬಳಿ ಸಂಚಾರದ ವೇಳೆಯಲ್ಲೆಲ್ಲ ಒಂದು ಬಗೆ ದಒಡ್ಡ ಬಟ್ಟಿ ಇರುತ್ತದೆ. ಏನು ಸಿಕ್ಕಿತೂ ಅದೆಲ್ಲ ಆ ಬಟ್ಟಟೆಯೋಳಗೆ ಸೇರುತ್ತದೆ. ಮಹಿಳೆಯರು ಮೂಗುತಿ ಮತ್ತು ಝುಮಕಿಗಳನ್ನು ಧರಿಸುತ್ತಾರೆ. ಕಡಿಮೆ ಬಎಲೆಯ ಮಾಲೆಗಳನ್ನು ಧಾರಾಳವಾಗಿ ಕೊರಳಿಗೆ ಹಾಕಿಕೊಳ್ಳುತ್ತಾರೆ.

ಪುರುಷರೂ, ಸ್ತ್ರೀಯರೂ ಅಮಲು ತರಿಸುವಂಥದನ್ನು ಸೇವಿಸುವರು. ಕೃಷಿ ಅಥವಾ ಇತರ ಮುಖ್ಯ ಉದ್ಯೋಗಗಳ ಅವರಿಗೆ ಹಿಂದೆ ಇದ್ದಿರಲಿಲ್ಲ ಹೊಟ್ಟೆ ಉರಿ ತಗ್ಗುವ ವರೆಗೆ ಅವರು ಅಲೆಯುವರು. ಬೆಳೆಗಳ ಕೊಯ್ಲಿನ ಹೋತ್ತು ಅವರು ಸಾರ್ವಜನಿಕರ ಮುಂದೆ ಗದ್ದೆ ತೋಟಗಳಲ್ಲಿ ಹಾರಾಗಿ ಚೆಲವಾದ ಮಾತನ್ನು ಹೆಳಿಯೂ ಅಂಗಲಾಚಿಯೂ ಸಿಗುವಂಥದ್ದನೆಲ್ಲ ಬಟಚಿ ಎತ್ತಿಕೊಳ್ಳುವರು.

ಜಾತ್ರೆಗಳುಲ್ಲೂ ಸಂತೆ ಆಗುವಲ್ಲೂ ತಂತಿ ಮೇಲಣ ಆಟಗಳು, ಇಂದ್ರಜಾಲ ವಇದ್ಯಗಳನ್ನು ತೋರಿಸುವ. ಆ ಗದ್ದಲದ ನಡುವೆ ಕೆಲವು ಕಾಕ್ಕಾನ್‌ಗಳು ಎಲ್ಲಾದರೂ ಒಂದೆಡೆ ಬಗ್ಗಿ ಕೂತು ಗಿಣಿಯಿಂದ ಕಣಿ ಎತ್ತಿಸುವರು ಮತ್ತು ಅದರ ಮೂಲಕ ಭವಿಷಯ ಹೇಳುವರು. ಕಾಕ್ಕಾತ್ತಿಗಳು ಹಸ್ತ ರೇಖೆ. ಮುಖಲಕ್ಷಣ ನೂಡಿ ಭವಿಷಯ ನುಡಿಯುವರು. ಒಂದು ರೀತಿಯಲ್ಲಿ ಕಂಡಲ್ಲಿ ಕೈಲಾಸ ಕಂಡದ್ದೆಲ್ಲಾ ಕೋಲ ಎಂಬ ತರದ ಒಂದು ಜೀವನ ಶೈಲಿಯಾಗಿತ್ತು. ಇವರದು.

ಒಂದು ಕಾಲದಲ್ಲಿ ಸಮುದಾಯದ ತೆರವು ಸಥಳಗಳಲ್ಲಿ ಅಲೆದು ತಿರಿದು ನಡೆದ ಕಳಕ್ಕಾಲರು ಎಲ್ಲೂ ಸಥಿರ ವಆಸ್ತವ್ಯವಿಲ್ಲದೆ ಬದುಕಿದ್ದರು. ಹೀಗೆ ನಾಡು ಮನೆಗಳಿಲ್ಲದೆ ಅಲೆದು ತಿರಿದ ಇವರನ್ನು ಜನರು ಸಂಶಯದೃಷಿಟಯಲ್ಲೆ ನೋಡಿದರು ಹಎದರಿಕೆಯೂ ವೈರವೂ ಉಂಟಾಯಿತು. ಮಕಾಲಕ್ಷೇಪಕ್ಕೆ ಮಾರ್ಗ ವಿಲ್ಲದುದುರಿಂದ ಇವರು ಕದಿಯುವರೆಂದು ಜನಸಾಮಾನ್ಯರು ತಿನ್ನದ ಕ್ಷುದ್ರಜಂತುಗಳ ಮೃಗಗಳ ಮಾಂಸವನ್ನಿವರು ತಿನ್ನುವರೆಂದೆ ಇತರರು ಪ್ರಚಾರ ಮಾಡಿದರೂ ಅಲ್ಲದೆ ವಿಶ್ವಶಘಾತಕರೂ ಕ್ರೂರಿಗಳು ಇವರೆಂದು ಆರೂಪಕ್ಕೊಳಗಾದರು ಒಂದಿಷ್ಟು ವಾಸ್ತವ ಅವುಗಳಲ್ಲಿ ಇರಬಹುದು. ಕಾಕ್ಕಾರಿಶ್ಶಯಿ ನಾಟಕ ದಲ್ಲಿ ಸಉಂದರನ್ ಕಾಕ್ಕಾನ್ ಇದಿರುಗೊಳ್ಳುವ ಪ್ರಶ್ನೆಗಳು ಅವುಗಳಿಗೆ ಆತ ನೀಡುವ ಉತ್ತರ ಇವುಗಳು ಆ ಕಾಲದಲ್ಲಿ ಈ ಗುಂಪಿನ ವರಿಗೆ ಸಮಾಜದಲ್ಲಿ ಸಥಾನ ಎನೇನ್ನುವುದನ್ನು ನಿರ್ಣಯಿಸಲು ಒದಗುತ್ತವೆ.

ನಾಟಕ ಕೇಂದ್ರಗಳು

ಪಂಪದಳಮ ಕರುನಾಗಪ್ಪಳ್ಳಿ, ವಳ್ಳಿಕ್ಕುನ್ನಂ ಕಆರಯ್ಯಾಡ್ ಮುನ್ನಾರ್, ಮೊಂಕೊಂಬೆ ಕಾಯಂಕುಳಂ, ಆಲಪ್ಪು* ಮೊದಲಾದೆಡೆ ಸ್ವಲ್ಪ ಹಿಂದೆ ಕಾಕಕಾರಿಶ್ಶಿನಾಟಕಂ ಆಡುತ್ತಿದ್ರು. ಇನ್ನು ಕೆಲವೆಡಗಳಲ್ಲಿ ಈ ನಾಟಕದ ಹಾಡುಗಳನ್ನೂ ಕೆಲವೊಂದು ಸಂಭಾಷಣೆಗಳನ್ನು ಅರಿತವರು ಈಗ ಕೂಡ ಜೀವಿಸುತ್ತಿದ್ದಾರೆ. ಆದರೆ ಇಂದು ಈ ಗ್ರಾಮೀಣ ನಾಟಕದವನ್ನು ಹಳೆಯ ಶೈಲಿಯಲ್ಲಿ ಎಲ್ಲೂ ಅಭಿಯಿಸುವ ಪದ್ಧತಿಯಿಲ್ಲ ತೃಶೂರ್ ಜಿಲ್ಲೆಯ ಕೆಲಭಾಗಗಳಲ್ಲಿ ಹಿಂದೆಎ ಕಾಕ್ಕಾರಿಶ್ಶಿ ನಾಟಕ ಆಡುತ್ತಿದ್ದರು. ಹಇಂದೆ ವರ್ಷೊಕ್ಕೊಮ್ಮೆ ಯಾದರೂ ಹಬ ಬದ ದಿನಗಳಲ್ಲಿ ಅಭಿನಯಿಸುತ್ತಿದ್ದ ಈ ನಆಟಕವನ್ನು ಇವತ್ತುಉ ಹಾರು ಅದೇ ರೀತಿಯಲ್ಲಿ ರಂಗಕ್ಕೆ ತರಲಾರರು ಎಂಬುದು ಗಮನಾರ್ಹ. ಇದು ಪ್ರತ್ಯೆಕ ಜಾತಿಯೊಂದರ ಅನುಷ್ಠನವೋ ಆಚಾರೊ ಆದ ಕಲೆ ಅಲ್ಲ. ಒಂದು ಜಾತಿಯ ಜ ಈವನ ಕ್ರಮಗಳನ್ನು ಸಂಬಂಧಗಳನ್ನು ಗಎಲಿಮಾಡುವ ಯಾವನೋ ಜಆನಪದ ಕವಿ(ಕಲಾಕಾರ) ಬರೆದ ಸಾಹಿತ್ಯಕೃತಿಯನ್ನು ಕಲಾಕುತೂಹಲಿಗಳಾದ ಹ ಲವು ಗ್ರಾಮೀಣರು ರಂಗದಲ್ಲಿ ಪ್ರದರ್ಶನಕ್ಕೆ ಅಳವಡಿಸಿದರು ಅಷ್ಟೇ. ತಲೆಮಾರುಗಳಿಂದ ಕೈಬದಲಿ ಪುನರುಜ್ಜೀವನ ಗೋಳಿಸಲು ಅಥವಾ ಪುನರಾವಿಷ್ಕರಿಸಲು ಯಾರೂ ಇಲ್ಲದೆ ಈ ಕಳೆದ ಕೆಲಕಾಲ ಅದು ಬದುಕಿದ್ದುದೇ ಅಚ್ಚರೊ ಅಇತ್ಯ ಜೀವನದ ಜಂಜಡದಲ್ಲಿ ಸಇಲುಕಿಕೊಂಡು ಬಇಡುವೆಂಬುದಿಲ್ಲದ ನಾಡಕಲಾಕಾರರು ಈ ನಾಟಕವನ್ನು ಅದರ ವಸ್ತುಗಳನ್ನು ಮರೆತುಕಳೆದಿದ್ದಾರೆ.(ಇದು ಪ್ರಜಾತಂತ್ರ ಪದ್ಧತಿ ತಂದಿರುವ ಮನೋಭಾವ ಪಲ್ಲಟವನ್ನು ಬೆಟ್ಟುಮಾಡಬಲ್ಲುದು)

ವೈಶಿಷ್ಟ್ಯಗಳು

ಹಾಡುಗಾರರು. ಹಿಮ್ಮೆಳದವರು ಹಿಂದುಗಡೆ ನಡೀನಟರು ಮುಂದುಗಡೆ ಪ್ರೇಕ್ಷಕರಿಗೆ ಅಭಿಮುಖವಾಗಿದ್ದು ನಡೆಸುವ ದೃಶ್ಯಕಲೆ ಕೇರಳದಲ್ಲಿ ಮಾತ್ರವಲ್ಲ ಇತರ ರಾಜ್ಯಗಳಲ್ಲು ಇವೆ. ಕೂತ್ತು. ಕೂಡಿಯಾಟ್ಟಂ. ಕಥಕಳೀ, ಓಟ್ಟನಂ ತುಳ್ಳಲ್ ಇತ್ಯಾದಿ ರಂಗಕಲೆಗಳಲ್ಲಿ ಹಾಡುಗಾರರು, ಹಿಮ್ಮೆಳದವರು ಹಿಂದೆ ಇರುತ್ತಾರತೆ. ಕಥಕಳೀಯಲ್ಲಿ ನಟರನನು ನಯಂತ್ರಿಸುವುದು ಹಾಡಗಾರರಲ್ಲವೆ? ಹಾಗೆಯೇ ಕಾಕ್ಕಾರಿಶ್ಶಿಯಲ್ಲಾ ಹಿಂದಿನಿಂದ ನಟೀನಟರ ನಿರ್ವಹಣೆಯನ್ನು ಗಮನಿಸುತ್ತ ಆವಶ್ಯಕತೆಗೆ ಬೇಕಾದ ಹಿಮ್ಮೇಳವಾದನದ ನೆರವು ಒದಗಿಸುತ್ತ ಹಾಡುಗಾರರ ಇರುತ್ತಾನೆ. ಹಾಮೊಳನಿಯಂ, ಮೃದಂಗ, ಕೈಮಣಿ(ಕಂಚಿನತಾಳ) ಮೊದಲಾದವು ಹಇಮ್ಮೇಳ ವಾನೋಪಕರಣಗಳು. ಈಗಿನ ಇತರ ನಾಟಕಗಳಂತೆ ಪಾತ್ರಗಳು ಮಾತ್ರ ಪರಸ್ಪರ ಸಂಭಾವಿಸುತ್ತ ಅಭಿನಯಿಸುವ

ಕ್ರಮವಲ್ಲ ಕಾಕ್ಕಾರಿಶ್ಶಿಯಲ್ಲಿರುವುದು. ಕಥೆಯ ಸೂತ್ರಧಾರನೆಂದರೆ ಹಾಡುಗಾರ. ಕಥಾಪಾಥ್ರಗಳು ಪರಸ್ಪರ ಸಂಭಾಷಣೆಯಲ್ಲಿರುವಾಗ ಹಾಡುಗಾರ ಮಧ್ಯಪ್ರವೇಶಿಸುತ್ತಾನಮೆ. ಆತನ ಪ್ರಶ್ನೆಗಳಿಗೆ ನಟೀನಟರು ನಈಡುವ ಉತ್ತರಗಳಿಂದಲೆ ಕಥೆ ಬೇಳೆಯುವುದ. ಕಾಕ್ಕಾಲನ್ ಜನರ ಎಲ್ಲ ಬಗೆ ಆಚಾರಗಳನ್ನು ಜೀವನರೀತಿಗಳನ್ನು ತನ್ಮಯತೆಯೊಂದಿಗೆ ಗೇಲಿ ಮಾಡುವ ಪ್ರಶ್ನೆಗಳು ಅವುಗಳಿಗೆ ತಕ್ಕುದಾದ ಕುರಿತಾದ ಉತ್ರಗಳು ಈ ನಆಟನಾಕದ ಉದ್ದಕ್ಕಲೂ ನಾಗವುದು. ಅಚ್ಚ ನಾಡ ಶೈಲಿಯಲ್ಲಿ ಹೈದಯಕ್ಕೆ ನಾಟುವ ಭಾಷೆಯಲ್ಲಿ ಖಾರ, ಹಆಳಿಗಳು ಬಎರೆತ ಸಂಭಾಷಣೆಯವೆಗೆದು ಬಸಿದು ನಗಿಳು ಅವಕಾಶ ಕೊಡುತ್ತದೆ. ಹಈಗೆ ಯಾವ ರೀತಿಯಲ್ಲೂ ಒಂದು ಸಂಗೀತ ನೈತ್ಯ ಹಾಸಯ ಸಮಾಜಿಕ ನಾಟಕ ಕಾಕ್ಕಾರಿಶ್ಶಿ ಒಳ್ಳೆಯ ಶಿಸ್ತು ತಾಳಬದ್ಧತೆಗಳಲ್ಲಿ ತಇರುವಾದಿರ ಪಾಟುಗಳೂ ಕಮ್ಮಿ ಪಾಟುಗಳೂ ಇದರಲ್ಲಿ ಬಹಳವಾಗಿ ಒಳಗೊಂಡಿವೆ. ಗರಾಮೀಣ ಗಾನಗಳು ದಸ್ತೆಗಳು, ಹಾಸ್ಯ ಪ್ರದಶನಗಳು ಇಲ್ಲವೆ. ಇವುಗಳನ್ನೆಲ್ಲ ಕ್ರಮಪ್ರಕಾರ ನಾಡನಾಟಕದ ಪರಂಪರೆಯನ್ನು ಆಧರಿಸಿ ಶಿಸ್ತಿಗೋಳವಡಿಸಿ ಸಂಘಟಿಸುವ ವಂಥದು ಕಾಕ್ಕಾರಿಶ್ಶಿ ನಾಟಕಂ.

ಹಿಂದೆ ಒಂದೂರಿಗೆ ಕಾಕ್ಕಾರಿಶ್ಶಿ ನಾಟಕ ತಂಡ ಬಂದರೆ ಮೊಲದು ದೇವ ಸ್ಥಾನದ ಆಸುವಾಸಿನಲ್ಲ ತಂಗುತ್ತದೆ. ಊರಗಣ್ಯರ ನೇರವಿನಿಂದ ಒಂದು ಆಟವನ್ನು ಉಚಿತವಾಗಿ ದೇವರ ಸೇವೆಯಾಗಿ ನಡೆಸುವರು. ಅಲ್ಲಿ ಶ್ರೀಮಂತರು ತಮ್ಮದ ಮನೆ ಬಳಿ ಆಡಲು ತಂಡಕ್ಕೆ ಆಮಂತ್ರಣವೀಯುತ್ತಾರೆ. ಅನಂತರ ಪ್ರೋತ್ಸಾಹದ ಮಹಾಪೂರವಿರುತ್ತದೆ. ಕೈಗಾಣಿಕೆ. ಸಂಮಾನ ಧಾರಾಳ ಹರಿದು ಬರುತ್ತದೆ. ಮಕರ, ಕುಂಭ, ಮೀನ(ಸುಮಾರಾಗಿ ಜನವರಿ–ಫದ್ರವರಿ–ಮಾರ್ಚ) ಮಾಸಗಳಲ್ಲಿ ಮಧ್ಯತಿರುವಿದಾಂಕ*ನ ಎಲ್ಲ ಗರಾಮಗಳಲ್ಲೂ ಕಾಕ್ಕಾರಿಶ್ಶಿನಾಟಕ ತಂಡಗಳು ಪರ್ಯಟನ ನಡೆಸುತ್ತವೆ.

ಕಾಕ್ಕಾರಿಶ್ಶಿ ಮತ್ತು ಇತರ ಗ್ರಾಮೀಣ ನಾಟಕಗಳು

ಗ್ರಾಮ ಪ್ರದೇಶಗಳಲ್ಲಿ ಕ್ರಮ ಕೆಲಸಗಳೆಲ್ಲ ಮುಗಿಯುವ ಹೊತ್ತಿಗೇ ಕಾಕ್ಕಾರಿಶ್ಶಿ ನಾಟಕ ರಂಗ ಪ್ರವೇಶಿಸುವದು ಪಾಲಕ್ಕಾಡ ಜಿಲ್ಲೆಯಲ್ಲಿ ಬಹುವಾಗಿ ಪ್ರಚಾರವಿರುವ ಪರೊಟಟು (ವಿಡಂಬನ) ನಾಟಕವೂ ಹೀಗೆಯೇ ಇವೇರಡೂ ಜಾಯ್ರಗಳಲ್ಲಿ ಸ್ಥಾನ ಹಿಡಿಯುತ್ತೆವೆ. ಓಣಂ ಹಬ್ಬದ ವೇಳೆಯೂ ಇತರ ಹಬ್ಬದ ದಿನಗಳಲ್ಲಾ (ಶಿಬರಾತ್ರಿ, ಮೀನಭರಣಿ) ಹಳೆಯ ಮನೆತೆನಗಳವರು ಮನೆಗೆ ಕರೆಸಿಕೊಂಡು ಆಟ ಆಡಿಸುತ್ತದ್ದರು. ಕಾಕ್ಕಾರಿಶ್ಶಿಗೆ ಬೇಕಾದ ಮೃದಂಗ, ಖಂಜಿರ, ಹಾರ್ಮೊನಿಯಂ, ಕೈಮಣಿ, ಕಂಚಿನತಾಳಇತ್ಯಾಧಿ ಪೊರಟ್ಟು ಆಟದಲ್ಲಿ ಬಳಕೆ ಆಗುತ್ತಿವೆಕಾಕ್ಕಾರಿಶ್ಶಿಯಲ್ಲಿ ಹಾಡುಗಾರ ನಟರೊಂದಿಗೆ ಸಂಭಾವಿಸುವುದಾದರೆ 'ಪೊರೊಟ್ಟು' ಆಟದಲ್ಲಿ ಇಬ್ಬರು ಹಿಮ್ಮೆಳವಾದಕರು ಪ್ರಶ್ನೆ ಕೇಳುಗರಾಗಿ ನಿರ್ವಹಿಸುತ್ತಾರೆ. 'ಪರೊಟ್ಟಿನ' 'ಕುರವನ್' 'ಕುರತ್ತಿಗಳಿಗೂ' 'ಕಾಕ್ಕಾರಿಶ್ಶಿಯ' 'ಕಾಕ್ಕಾಲನಿಗೂ'ಹೋಲಿಕೆಯಿದೆ. ದರೆ ಕಾಕ್ಕಾರಿಶ್ಶಿಯಲ್ಲಿಡುವ ನಗೆ ಗೇಲಿಗಳಿಗೆ ಅತ್ಯಂತ ಹತ್ತಿರದ ಹೋಲಿಕೆ ಇರುವುದು ಇನ್ನೊಂದು

ಬಗೆ ಗ್ರಾಮೀಣ ನಾಟಕವಾದ 'ಪಡೆನಿ' ಯೊಂದಿಗೆ (ಅನ್ಷುಷ್ಠಾನ ಕುರೂಪವಾದ 'ಪಡಯಣಿ' ಬೇರೆ ಅದು ಇದಲ್ಯ) 'ಪಡೇನಿ'ಯ 'ಪಣಗೆ ಮುದುಕ್ಕನ್ ಮತ್ತು ಕಾಕ್ಕಾರಿಶ್ಸಿಯ 'ಸುಂದರನ್' 'ಕಾಕ್ಕಾನ್' ಸಾದ್ರುಶ್ಯವಿರುವ ವೇಷಗಳಾಗಿವೆ.

ಕೇರಳಿಯ ಕಲೆಗಳ ವಸಂತದಲ್ಲಿ ಬೆಳೆದು ವಿಕಸಿತವಾದ ಒಂದು ಕಲಾರೂಪ ' ಕಾಕ್ಕಾರಿಶ್ಶಿ' ದೇಗುಲದ ಕಲೆಗಳಾದ ಕೂತ್ತ್, ಕೂಢಿಯಟ್ಟಂ ಕಥಕಳಿ ಮೊದಲಾದವು ಅಂದು ರಂಗವನ್ನು ಮುಡುಗಟ್ಟಿ ಸಾಗುತ್ತಿತ್ತು. ನಳಚರಿತಂ, ದಕ್ಷಯಾಗಂ ಮೊದಲಾದ ಆಟಕ್ಕಥಗಳ ಕೆಲ 'ಹದಗಳು ತುಳ್ಳಲಿನ ಹಾಸ್ಯವರ್ಣನೆಗಳಲ್ಲಿ ಆಯ್ದ ಒಳ್ಳೆಯ ಶ್ಲೋಕಗಳು ಕಾಕ್ಕಾರಿಶ್ಶಿ ಕೃತಿಗೆ ದಾಟಿ ಬಂದಿರುವುದನ್ನು ಕಾಣಬಹುದು. ದೇವಸ್ಥಾನದ 'ಸುತ್ತುಮದಿಲಿನ (ಚುರಂಬಲಂ) ಒಳಗೂ ಕೊತ್ತಂಬಲ (ನಾಟ್ಯಗ್ರುಹ) ದಲ್ಲೂ ಕೂತ್ತ್ (ನ್ರುತ್ಯ) ಕೂಡಿಯಟ್ಟಂ (ಪ್ರಾಚೀನವಾದ) ಇತ್ಯಾದಿ ನಡೆಯುವಾಗ ಜಾನಪದ ಕತೆಗಳು (ನಾಟ್ಯ, ನಾಟಕಗಳು) ಮದಿಲಿನ ಹೊರಗೆ ಠಿಕಾಣಿ ಹೂಡಿದವು. 'ಕಾಕ್ಕಾರಿಶ್ಶಿ' ನಾಟಕದ ಮೂಲಕ ಸಂಸ್ಕತ, ಆರ್ಯರು ಮತ್ತು ಅವರ ಪೂಜಾವಿಧಿಗಳ ಬಗೆಗೆ ಗೇಲಿ ಕುಡ ನಡೆಯುತ್ತದೆ.

ಸಂಭಾಷಣೆ ಮೂಲಕವೂ ಕ್ರಿಯೆಯು ಮೂಲಕವೂ ಕಥಾವ್ಯಾಖ್ಯಾನವನ್ನೊ ಜೀವನ ವ್ಯಾಖ್ಯಾನವನ್ನೊ ನಡೆಸುವ 'ಮುಡಿಯೇರ್' ಕಾಕ್ಕಾರಿಶ್ಶಿ ನಾಟಕಂ, ಪೊಯಾಟ್ಟ್, ಚವಿಟ್ಟುನಾಟಕಂ ಇತ್ಯಾದಿ ಸಾಮಾನ್ಯವಾಗಿ ಗ್ರಾಮೀಣ ನಾಟಕಗಳಾಗಿ ಗಣನೆಗೆ ಬರುತ್ತವೆ. ಪಡಯಣಿ, ತೆಯ್ಯಂ ಮೊದಲಾದ ಕಲರೂಪಗಳನ್ನು ಗ್ರಾಮೀಣನಾಟಕ ವರ್ಗಕ್ಕೆ ತರಬಹುದಾದರು ಅವುಗಳಲ್ಲಿ ನಾಟಕಾಂಶಕ್ಕಿಂತ ಹೆಚ್ಚಾಗಿ ಆರಾಧನಾಂಶಗಳು ಇರುವುದರಿಂದ ಅವುಗಳನ್ನು 'ಅನುಷ್ಠಾನ' ಕಲೆ ಎನ್ನುವ ವಿಭಾಗದಲ್ಲಿ ಪರಿಗಣಿಸಬೇಕು. ಅನುಷ್ಠಾನಗಳಿಗಿಂತ ಕಲಾಂಶಕ್ಕೆ ಪ್ರಾಧಾನ್ಯ ಹೊಂದಿರುವುದಾದರೂ ಹುರಣದ ವೈಶಿಷ್ಯದ ಕಾರಣವೂ ಪ್ರದರ್ಶನೋದ್ದೇಶ ಕಾರಣವೂ ಮತಿಯವಾದ ಅಂಶಗಳಿಗೆ ಪ್ರಾಮುಖ್ಯವುಳ್ಳದ್ದು 'ಚವಿಟ್ಟುನಾಟಕಂ' ಆದರೆ ಕಾಕ್ಕಾರಿಶ್ಶಿನಾಟಕ ಮತ್ತು ಪೊರಿಟ್ಟು ನಾಟಕವೂ ಮತನಿರಪೇಕ್ಷವಾದ ಗ್ರಾಮೀಣನಾಟಕಗಳು. ಇವು ಸಂಪೂರ್ಣವಾಗಿಯೂ ಮನೋರಂಜನಾ ಕಲೆಗಳು. ಕ್ರುಷ್ಣನಾಟ್ಯಂ' ಕಥಕಳಿ ಮೊದಲಾದ ಶಾಸ್ತ್ರೀಯ ಪರಂಪರೆಯುಳ್ಳ ನಾಟಕಗಳಿಗೆ ಪ್ರಸಿದ್ಧಿ ಇರುವ ಕೇರಳದಲ್ಲಿ ವಿಶಾಲ ಸಂಸ್ಕಾರದ ಇನ್ನೊಂದು ಮುಖವಾಗಿ ಈ ಗ್ರಾಮೀಣ ನಾಟಕಗಳು ನೆಲೆಗೊಂಡಿರುವುದು. ಶಾಸ್ತ್ರೀಯ ನಾಟಕ ರಂಗದ ಪ್ರಾಚುರ್ಯ, ವರೇಣ್ಯ ಸಂಸ್ಕಾರ ಮತ್ತು ಅಡಿಯಾಳು ಸಂಸ್ಕಾರದ ನಡುವೆ ಉಂಟಾದ ಕೊಡುಕೊಳುಗೆಯಲ್ಲಾದ ಬೆಳವಣಿಗೆ, ಆಧುನಿಕ ಕೆರಳದ ರೂಪೀಕರಣ, ಜನಪದ ನಾಟಕರಂಗದ ಪ್ರಾಚುಯ್ ಇತ್ಯಾದಿ ಕೇರಳದಲ್ಲಿ ಗ್ರಾಮೀಣ ನಾಟಕಗಳು ಕಡಿಮೆಯಾಗಲ ಕಾರಣವಾಗಿವೆ. ಇರುವವುಗಳಲ್ಲೂ ಅನುಷ್ಠಾನವನ್ನು ನೆಲೆನಿಲ್ಲಿಸುವ ವಿಶ್ವಾಸಗಳು ಪ್ರಬಲಗೊಳ್ಳುತ್ತಿರುವುದರಿಂದ ಮುಡಿಯೇರ್, ತೆಯ್ಯಂ, ಪಡಯೆಣಿ ಮೊದಲದವುಗಳು ಇವತ್ತೂ ಸ್ತಿರವಾಗಿ ಉಳಿದಿವೆ.

ಮುಡಿಯೇಱ್ಱ್

(ಅನುಷ್ಠಾನ ನಾಟಕ)

ರಾಘುವನ್ ಪಯ್ಯನಾಡ್

ಟಿಪ್ಪಣಿ

ಒಂದು ಕ್ರಿಯಾಂಶವು ಅನುಷ್ಠಾನ(ಆರಾಧನೆ)ವೊ, ಭೌತಿಖ ಬಾಳ್ವೆಯ ಭಾಗವಾದ ಒಂದು ಕೆಲಸವೊ ಎಂದು ತೀರ್ಮಾನಿಸುವುದು ಅದು ವಿನಿಮಯ ಮಾಡುವ ಆಶಯವನ್ನು ಅನುಸರಿಸಿ ಆಗಿರುತ್ತದೆ. ವಿಶಿಷ್ಟವಾದ ಒಂದು ಆಶಯದ ವಿನಿಮಯ ಮಾಡಲು ಪರ್ಯಾಪ್ತವಾಗಿ ಪರಿಣಮಿಸುವುದು ಸನ್ನಿವೇಶದ ಸಹಾಯದಿಂದ ಆಗಿರುತ್ತದೆ. ಬಲಿಕರ್ಮದ ಬಳಿಕ ನಡೆಸುವ ಸ್ನಾನ ಅನುಷ್ಠಾನವೆನಿಸುವುದು ಮತ್ತು ಪ್ರತಿ ಮುಂಜಾನೆ ನಡೆಸುವ ಸ್ನಾನ ಜೀವನದ ಚರ್ಯೆ ಮಾತ್ರವಾಗುವುದು ಹಗೆ 'ಮುಡಿಯೇಳ್' ಅನ್ನು ನೋಡುವಾಗ ಅದು ಅನುಷ್ಠಾನೇತರ ಕಲೆಯೆಂಬ ಭಾವನೆ ಬರುವುದು ಈ ಕಾರಣಕ್ಕಾಗಿಯೇ.

ಕಾಳಿ ದಾರಿಗಾಸುರ ಯುದ್ಧ ಮತ್ತು ಮುಂದುವರೆದು ದಾರಿಗ ವಧೆ ಇದು 'ಮುಡಿಯೇಳ್' ವಸ್ತು. ನಾರದ ಶಿವನಲ್ಲಿ ಸಂಕಟ ತೊಡಿಕೊಳ್ಳುವಲ್ಲಿಂದ ತೊಡಗಿ ಕಾಳಿ ದಾರಿಗನ ಮುಡಿ (ಶಿರೋಭೂಷಣ ಅಂದರೆ ತಲೆ) ತೆಗೆಯುವ ವರೆಗಿನ ಘಟನೆಗಳ ಅನುಕ್ರಮವಾದ ವಿಕಾಸ ಈ ನಾಟಕದ ವಿಷಯ. ರಂಗದಲ್ಲಿ ನಡೆಯುವ ಈ ನಾಟಕದ ನಿರ್ವಹಣೆಯನ್ನು ನಾವು ಒಂದು ಅನುಷ್ಠಾನವಾಗಿ ಪರಿಗಣಿಸುವುದಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ ಪ್ರಧಾನವಾದುದು ಈ ನಾಟಕದ ವಿಷಯ ಪುರಾವೃತ್ತವಾಗಿದೆ. ಎಂಬುದೂ ಇದನ್ನೂ ಅನುಷ್ಠಾನದಲ್ಲಿ

ಇರಿಸಿಕೊಳ್ಳುವುದೂ ದೇವತೆಯಿಂದ ವಿಶಿಷ್ಟವಾದ ಕೆಲ ಸಾಧ್ಯತೆಗಳನ್ನು ಉದ್ದೇಶಪಡಿಸುವುದು ಆಗಿವೆ. ವರ್ತಮಾನ ಕಾಲದಲ್ಲಿ ನಡೆಯುವ ಒಂದು ಕ್ರಿಯಾಂಶವಿದು. ಆದರು ಅದರ ಬೇರುಗಳ ಪುರಾವೃತ್ತದಲ್ಲೂ ವಿಶ್ವಾಸದಲ್ಲೂ ಆಳಕ್ಕೆ ಇಳಿದವುಗಳೂ ಅಭಿಷದಟಸಿದ್ಧಿಯನ್ನು ಉದ್ದೇಶಿಸಿ ಇರುವಂಥದೂ ಅಗಿದೆ. ಆದ್ದರಿಂದ ಒಂದು ಅನುಷ್ಠಾನ ನಾಟಕ ಎಂಬ ನೆಲೆಯಲ್ಲಿ ಮುಡಿಯೇಳ್' ಮೂರು ಕಾಲಗಳಿಗೆ ಚಾಚಿಕೊಂಡು ನೆಲೆಗೊಂಡಿರುವಂಥದ್ದಾಗಿದೆ. ಅನುಷ್ಠಾನ ನಾಟಕ ಸ್ವಯಂ ಅದರಲ್ಲೆ ಪರಿಮಿತಗೊಳ್ಳುವಂಥದ್ದಲ್ಲ. ಅನುಷ್ಠಾನ ಮಾತ್ರ. ಆದ್ದರಿಂದ ಯವುದೊಂದು ಅನುಷ್ಠಾನ ನಾಟಕ ದ ಕುರಿತಾದ ಆಲೋಚನೆಯೂ ಅದರಲ್ಲಿ ಮಾತ್ರ ಸಿಮಿತಗೊಂಡು ನಿಲ್ಲುವಂತದ್ದಲ್ಲ. ಮುಡಿಯೇಳ್' ನ್ನು ಒಂದು ನಾಟಕವಾಗಿ ನೋಡುವುದು ಅಕಾಡೆಮಿಕ್ ಸಮೂಹದವರು ಮಾತ್ರ ಅದು ಆಳುತ್ತಿರುವ ಜನತೆಯನ್ನು ಸಂಭಂಧಿಸಿ ಹೇಳುವುದಾದರೆ ಅದು ವಾರ್ಷಿಕ ಜೀವನದ ಭಾಗವಾಗಿ ತಮ್ಮ ಸ್ವಂತವಾದ ಕಾಳಿಯನ್ನು' ದಾರಿಗನನ್ನು ಕಣ್ಣು ತುಂಬ ನೋಡುವುದಕ್ಕಿಂತ ಒಂದು ಸಂದರ್ಭವಾಗಿದೆ. ಆ ರೀತಿಯಲ್ಲಿ ಅದನ್ನು ಕಾಣುವುದಕ್ಕೆ ಬೇಕಾಗಿರುವ ಪರಿಸರವನ್ನು ನಿರ್ಮಿಸಿಕೊಂಡುವಂಥದೇ ಅದರೊಂದಿಗಿನ ಇತರ ಎಲ್ಲಾ ಅನುಷ್ಠಾನಗಳು. ಮಧ್ಯಾಹ್ನ ಕಳದಲ್ಲಿ ಮಂಡಲ ಬರೆಯುವುದರೊಂದಿಗೆ ತೊಡಗಿ ಮರುದಿನ ಮುಂಜಾನೆ 'ದೇಶಮುಡಿಯೇಳ್' (ಮುಡಿ ತೆಗೆಯುವಿಕೆ) ನೊಂದಿಗೆ ಮುಗಿಯುವ ಇದರಲ್ಲಿರುವ ಅನುಷ್ಠಾನಗಳನ್ನು ಆ ರೀತಿಯಲ್ಲಿ ಮೌಲ್ಯಮಾಪನ ಮಾಡಬೇಕಾಗುತ್ತದೆ. 'ಮುಡುಯೇಳ್' ನ ಬಗೆಗೆ ಒಂದು ಜಾನಪದ ಅಧ್ಯಯನ ಇಷ್ಟು ವಿವರವನ್ನು ಮಾತ್ರ ಅಪೇಕ್ಷಿಸುವುದಿಲ್ಲ. ಅದನ್ನು ನೆಲೆಗೊಳಿಸಿ ಸಾಂಘೀಖಥೇಫೇ ಫಲಪ್ರದವಾದ ಆಶಯ ವಿನಿಮಯದ ಉಪಾಧಿಯಾಗಿ ವರ್ತಿಸಲ;ು ಸಹಾಯವನ್ನು ಮಾಡುವ ಎಲ್ಲ ಪರಿಸರವನ್ನೂ ಅದು ಗಮನಿಸುತ್ತದೆ.

ಕೇರಳವನ್ನು ಒಗೋಡಿಸಿ ಒಂದು ಸಾಂಘಿಕತೆಯಾಗಿ ಪರಿಗಣಿಸುವಾಗ ಅದನನು ಸಮಥಿಸುವ ಅತ್ಯಂತ ಸಫಲವಾದ ಜಾನಪದ ಘಟಕ ಕಾಳಿಯಲ್ಲಿರವ ವಿಶೌಆಸವು ಅದರ ಹಇಂದುಗಡೆ ಇರುವ ಪುರಾವೃಥ್ತವೂ ಆ ಪುರಾವೃತ್ತದ ವಿವಿಧ ರೀತಿಯಲ್ಲಿರುವ ರಂಗಪ್ರವೇಶಗಳೂ ಆಗಿದೆ. ಕೇರಳದ ಒಡಗಿನಿಂದ ತೆಂಕಣ ಅಂಚುಗಳಲ್ಲವರೆಗೂ ಕಾಳಿ ದಾರಿಗಹೋರಾಟಕ್ಕೆ ವಿಭಿನ್ನ ರಂಗಪ್ರಕಾರಗಳಿವೆ. ತೆಯ್ಯಂ, ಮಡಿಯೇ* ಪಡಯಣಿ ಇಂಥ ಅನೇಜ ಅನುಷ್ಠಬ ರೂಪಗಳು ಇದಕಕೆ ಉದಾಹರಣೆಯಾಗಿವೆ. ಅವುಗಳನ್ನು ವಇಶದವಾಗಿ ತಉಲನಾತ್ಮಕ ಅಧ್ಯಯನಕ್ಕೆ ಒಳಪಡಿಸಿದರೆ ಯಾತಕ್ಕಾಗಿ ಒಂದೇ ಆಶಯಕ್ಕೆ ವಿಭಿನ್ನ ರಂಗ ಪ್ರಕಾರಗಳು ಉಂಟಾದವು ಎಂದು ಅರ್ಥವಾಗುತ್ತದೆ. ಆ ಬಗೆ ಅಧ್ಯಯನ ವಿಭಿನ್ನ ಸಾಂಘಿಕತೆಗಳ ವಿಶುಷ್ಟ ಸ್ವಭಾವವನ್ನು ಕಂಡುಕೊಳ್ಳುವೆಡೆಗೆ ನಡೆಸುತ್ತದೆ. ತೌಲನಿಕ ಜಾನಪದ ಗುರಿ ಮಾಡುವುದು ಇದನ್ನೆ ಈ ಬಗೆ ವಇಷಯಗಳಲ್ಲಿ ತೌಲನಿಕ ಅಧ್ಯಯನ ಜಾನಪದ ಅಧ್ಯಯನದ ಸಾಧ್ಯತೆಗಳನ್ನೂ ಆವಶ್ಯಕತೆಯನ್ನು ಬೆಟ್ಟುವಾಗುತ್ತದೆ.

– **ಸಂಪಾದಕ**

ಮಧ್ಯಕೇರಳದಲ್ಲಿ ಕೊಚ್ಚಿ ರಾಜ್ಯದಲ್ಲೂ ತಿರುವಿದಾಂಕೂ*ನ ಉತ್ತರಭಾಗದಲ್ಲೂ ಇವತ್ತು ಸಂಖ್ಯೆಯಲ್ಲಿ ಕಡಿಮೆಯಾದರೂ ಸಾಂಘಿಕ ಜೀವನದ ಭಾಗವಾಗಿ ಸಂಭ್ರಮದಿಂದ ನಡೆಯುವ ಆಚರಣೆ ಮುಡಿಯೇ * ಹಳಗಾಲದಲ್ಲಿ ೨೨೮ 'ಕಾವು' (ದೇವಿ ಆಲಯ) ಗಳಲ್ಲಿ ಇದು ನಡೆಯುತ್ತಿತ್ತೆಂದು ಕಪಳುತ್ತೇವೆ. 'ಭಗವತಿ

ಕಾವು'ಗಳಲ್ಲಿ ವರ್ಷಕ್ಕೊಮ್ಮೆ ನಡೆಯುವ ಅಥವಾ ಹರಕೆಯಾಗಿ ನಡೆಯುವ ಒಂದು ಆಚರಣೆ ಇದು. ಜಾತಿ ಶ್ರೇಣೀಕರಣದಲ್ಲಿ ನಆಯಕರಿಂದ ಮೇಲಿನವರ ಅಧೀನತೆಯಲ್ಲಿರುವ ಭಗವತಿ ಕಾವುಗಳಲ್ಲಿ ಇದು ನಡೆದುಬರುತ್ತಿದೆ. ಈ ಅನುಷ್ಠನ ಕ್ರಮಕ್ಕೆ ವಿವಿಧ ಚಡಂಗಗಳನ್ನು ಕೈಗೊಳ್ಳುವುದು. ವೇಷಧರಿಸಿ ಪ್ರದರ್ಶನವೀಯುವುದು ಎರಡು ಜಾತಿಗಳಿಗೆ ಸೇರಿದವರು. ಕೊಚ್ಚಿರಾಜ್ಯದಲ್ಲಿ ಕುರುಪ್ಪನ ಜಾತಿಯವರು ಮತ್ತು ತಿರುವಿದಾಂಕೂ*ನ ಭಾಗದಲ್ಲಿ ' ಮೂರಾರ' (ಪದಾರ್ಥಿ ಅಥವಾ ದೇವಾಡಿಗ) ಸಮುದಾಯದವರು.

ಪುರಾವೃತ್ತ

ದಾರುಮತಿ ಮತ್ತು ದಾನವತಿ ಎಂಬ ಹೆಸರಿನ ಇಬ್ಬರು ಅಸುರ ಸ್ತ್ರೀಯರಿದ್ದರು. ದಾರುಮತಿಗೆ ದಾರಿಗನೂ ದಾನವತಿಗೆ ದಾನವೇಂದ್ರನೂ ಮಕ್ಕಳು. ಪರಾಕ್ರಮಶಾಲಿಗಳಾದ ಅವರು ಬ್ರಹ್ಮನನ್ನು ತಪಸ್ಸಿನಲ್ಲೂ ಮೆಚ್ಚಿಸಿ ಯಾರಿಂದಲೂ ಅಧಿನಗೋಳ್ಳದಿರಲು ಯಾರಿಂದಲೂ ಸಾವ ಗಳಿಸದರಿರಲು ವರಪಡೆದರು. ಆದರೆ ಸ್ತ್ರೀಯಿಂದ ವದೇ ಆಗಭಾರದೆಂಬ ವರ ಕೇಳಲಿಲ್ಲ. ಅವರು ಎಲ್ಲವನ್ನೂ ಧಿಕ್ಕರಿಸಿ ದರ್ಪದಿಂದ ಆಡಳಿತ ನಡೆಸಿದರಲ್ಲದೆ ಜನರ ನೆಮ್ಮದ ಕೆಡಿಸಿದರು. ಭೂಲೋಕದ ಸ್ಥಿತಿಯನ್ನು ತಿಳಿಯಲು ಬಂದ ನಾರದವಹರ್ಷಿ ದಾರಿಗ ದಾನವೇಂದ್ರರ ಪರಾಕ್ರಮವನ್ನು ಕಂಡುನಡುಗಿದ. ವಿಷಯವನ್ನು ಶಿವನ ಸನ್ನಿದಿಯಲ್ಲಿ ಅರಿಕೆ ಮಾಡಿದ. ಇದಕ್ಕೊಂದು ಪರಿಹಾರ ಉಂಟುಮಾಡುವುದಾಗಿ ಹೇಳಿದ ಶಿವ ತನ್ನ ಕಣ್ಣಿನಿಂದ ಭಗವತಿಯನ್ನು ಸಋಷ್ಟಿಸಿದ. ಯುದ್ಧಕ್ಕೆ ಕರೆಯುವ ದಾರಿಗ ದಾನವೆಂದ್ರರೊಡನೆ ಅವಳು ದಇರಾದಳು. ಕೊನೆಗೆ ಹೆದರಿ ಪಾತಾಳಕ್ಕೆ ಪಾರಾಗಿ ಅಡಿಗಿಕುಳಿತ ಆ ರಾಕ್ಷಸರ ತಲರ ಕಡಿದಳು. ಕೋಪಾಕ್ರಾಂತಳಾದ ಕಾಳಿಯನ್ನು ತಣಿಸಲು ದಆರಿಯಲ್ಲದಾಯಿತು. ಕೊನೆಗೆ ಶಿವ ಕಾಳಿ ಬರುವ ದಾರಿಯಲ್ಲಿ ಮಲಗುತ್ತಾನೆ.. ಒದೆಯಲು ಎಣಿಸುತ್ತಿದ್ದಂತೆ ಶಿವನೆಂದು ತಿಳಿದ ದೇವಿಗೆ ಕೋಪ ಶಮನವಾಗಿ ಶಿವನಿಂದ ಅನುಗ್ರಹ ಬೇಡುತ್ತಾಳೆ. ಈ ಇತಿವೃತ್ತವೇ ' ಮುಡಿಯೇ*' ಎಂಬ ಅನುಷ್ಠಾನಕ್ಕೆ ಆಧಾರ.

ಅನುಷ್ಠನ ಕ್ರಮ

ಮೇಲೆ ವಿವರಿಸಿದ ಪುರಾವೃತ್ತದ ರಂಗಾವಿಷ್ಕಾರವೆ ಮುಡಿಯೇ* ಎಂದು ಹೇಳಬಹುದಾದರೂ ಅದರ ಆರಂಭವಾಗುವುದು ಮಂಡಲ ಬರೆಯುವ ಮೂಲಕ. ಪೂಜೆ ದೇವತಾಸ್ತುತಿ ಇತ್ಯಾದಿಯ ಬಳಿಕ ಅಲಂಕರಿಸಿದ ಮಂಡಪದಲ್ಲಿ ಐದು ಬಣ್ಣಗಳ (ಪಂಚವರ್ಣ) ಪುಡಿಗಳಿಂದ ಕಾಳಿಯ (ನಾಲ್ಕು ಕೈಗಳಿಂದ ತೋಡಗಿ ಹದಿನಾರು ಕೈಗಳ ವರೆಗಿನ ಕಾಳೀ ರೂಪವನ್ನು ಬರೆಯುವುದುಂಟು) ಮತ್ತು ಕೆಲವೊಮ್ಮೆ ಇತರ ಕೆಲ ದೇವತೆಗಳ ರಊಪ ಬರಯುವತ್ತಾರೆ. ಬಳಿಕ ಕಳವನ್ನು ವಹಿಸಿಕೊಳ್ಳಲಾಗುತ್ತದೆ. ಮುಡಿಯೇ* ನಡೆಸುವವ್ಯಕ್ತಿ ಕಳವನ್ನು ಬರೆದ ವಯಕ್ತಿಯಿಂದ ವಹಿಸಿಕೊಳ್ಳುವ ಚಡಂಗವಿದು. ಮುಂಎ ', ಕಳ'ದ ಪೂಜೆ ಅರ ಬಳಿಕ ಒಂದು ಪಾತ್ರೆಯನ್ನು ಕೊಡಿಯೆಲೆಯಿರಿಸಿ ಭತ್ತ. ಅಕ್ಕಿ ಹಾಕಿ. ಎಣ್ಣೆಯಲ್ಲದ್ದಿಆದ ಕೋಲು ಬತ್ತಿ(ತಇರಿ) ಉರುಸಿ. ಮಂಡಲದ ಕಳಕ್ಕೂ ಕಳವನ್ನು ವಹಸಿಕೊಂಡವರಿಗೂ ಸಉಳಿದು ನಿವಾಳಿಸುತ್ತಾರೆ. ಇದು ' ತಇರಿಯ*ಚ್ಚಲ್' (ತಿರಿ ನಿವಾಳಿಕೆ). ಇನ್ನು ಮುಂದೆ 'ಕಾಳಂಪಾಟ್ಟು' (ಕಳದ ಹಾಡು). ಗಣಪತಿ ಸ್ತುತಿ, ಚಪ್ಪರ ರಚನೆ ರಊತಿ, ಭದ್ರಕಾಳಿಯ ಅಡಿಯಿಮದ ಮುಡಿವರೆಗೆ ಮುಡಿಯಿಂದ ಅಡಿವರೆಗೆ ವರ್ಣನೆ ಇವು ಪಾಟಿನ ವಸ್ತುಗಳು ಶಾಸ್ತಾವು' ವೊದಲಾದ ಇತರ ದೇವತೆಗಳು ಮಂಡಲದಲ್ಲಿ ಇರುವಲ್ಲಿ ಆ ದೇವತೆಗಳ ಸ್ತುತಿಯೂ ಸೇರಿಕೊಳ್ಳುತ್ತದೆ. ಚೆಂಡೆ ಚಕ್ರತಾಳ ಇವು

ಹಾಡಿಗೆ ಒದಗುವ ವಾದ್ಯೋಪಕರಣಗಳು. ಮತ್ತೆ ಚಪ್ಪರ ಅಲಂಕರಿಸಲು ಬಳಸಿದ ತೆಂಗಿನ ಎಳಗರಿಯಿಂದ ಮುಖ ಹೊರತು ಕಾಳಿ ಚಿತ್ರದ ಎಲ್ಲ ಭಾಗಗಳನ್ನು ಅಳಿಸುತ್ತಾರೆ. ಮುಖದ ಭಾಗದಲ್ಲಿರುವ ಚಇತ್ರದ ಪುಡಿಯನ್ನು ಭಕ್ತರಿಗೆ ನಾಮದ ಪ್ರಸಾದವಾಗಿ ವಿತರಿಸುತ್ತಾರೆ.

ನಾಟಕರೂಪ

'ಮುಡಿಯೇ*' ಸೇವಾರ್ಥಿ ಬಣ್ಣದ ಮನೆ(ಅಣಿಯ*) ಯಿಂದ ತುಂಬು ಜ್ವಾಲೆಯಿಂದ ಉರಿಯುವ ದಈಪವನ್ನು ಎತ್ತಿಕೊಂಡು ರಂಗಕ್ಕೆ ಬಂದು ರಂಗ ಬಎಳಗಿಸುವುದೆ(ಅರಂಜು ತೆಳಿಯಕ್ಕುನ್ನ) ರೊಂದಿಗೆ ಮಡಿಯೇ* ಎಂಬ ಅನುಷ್ಠಾನ ನಾಟಕದ ಆರಂಭ ರುಟುಚೆಂಡೆ ಬಾರಿಸುವ ಚೆಂಡೆ(ವೀಕು ಚೆಂಡ) ಚಕ್ರತಾಳ ಇವುಗಳನ್ನು ಬಳಸಿಯೇ ರಂಗಕೇಳಿ (ಅರಂಜು ಕೇಳಿ) ನಡೆಸುವುದು ವಾದನದವರು ಆಟದ ಬೆಳಕಿನ ಹಿಂದುಗಡೆ ನಿಲ್ಲುತ್ತಾರೆ.

'ರಂಗಕೇಳಿಯ ಬಳಿಕ ಅರಂಜು ವಾ*ಲ್' (ರಂಗ ಹೊಗಳಿಕೆ) ಹಿಡಿದ ತೆರೆಯ ಹಿಂದುಗಡೆ ಒಬ್ಬ ಹಾಡುಗಾರ ಹಾಡುವುದು ಮತ್ತು ಹೆಮ್ಮೇಳದವರು ವಾದ್ಯಸಹಾಯ ನೀಡುವುದು ಇದರ ರಈತಿ ಮಹಾದೇವ ತನ್ನ ಗಓಳಿಯ ಮೇಲೇರಿ ನಆರಾದನೊಂದಿಗೆ ತೆರೆಯ ಹಿಂದುಗಡೆಯಿಂದ ಪ್ರತ್ಯಕ್ಷಗೊಳ್ಳುವರು.

ನಾರದನಿಗೆ ತಲೆಯಲ್ಲಿ ಸಣ್ಣದಾದ ಒಂದು ಕಿರೀಟ ಬಿಳಿ ಮಂಡಲ(ಪಂಚೆ) ಉಟ್ಟು, ಬಿಳಿಗಡ್ಡ ಕಟ್ಟಿಕೊಂಡು ಕೈಯಲ್ಲಿ ಓಲೆ ಗ್ರಂಥವೊಂದನ್ನು ಹಿಡಿದು ಆತನ ಪ್ರವೇಶ ತೆರೆಯ ಮೇಲಂಚಿನಲ್ಲಿ ಗೋಳಿಯ ಮುಖವಾಡ ಮತ್ತು ಶಿವ ಕಾಣಿಸಿಕೊಳ್ಳುತತಾನೆ. ಶಿವನಿಗೆ ಮುಖದಲ್ಲಿ ಪ್ರತ್ಯಕ್ವಾಗಿ ಹಚ್ಚಲು ಎನೂ ಇಲ್ಲ. ಕಣ್ಣುಗಳಿಗೆ ಕಾಡಿಗೆ ಬರೆಯುವುದು. ಗೋಪಿನಾಮ ಹಾಕುವುದು. ಕಥಕಳಿಯಲ್ಲಿರುವಂಥ ಒಂದು ಕರೀಟ ಕಟ್ಟಿಕೊಳ್ಳುವುದು. ನಾರದನೂ ಮಹಾದೇವನೂ ಹೆಜ್ಜೆಯಿಕ್ಕಿ ಮುಗಿಸುವಾಗ ಹಿಮ್ಮೇಳದವರು. ಭೂಮಿಯಲ್ಲಿ ದಾರಿಗನ ಕೃತ್ಯಗಳ ಬಗೆಗೆ ನ ಈರಹಿತ ಅವಸ್ಥೆ ಬಗೆಗೆ ತಇಳಿದು ಬರಲು ಶಿವ ನಾರದನಿಗೆ ಆಜ್ಞಾಪಿಸಿದುದಾಗಿ ಹಾಡುತ್ತಾರೆ.(ಹಿಮ್ಮೇಳದವರೇ ಹಾಡುಗಾರರು ಕೂಡ) ಮುಂದೆ ಮಹಾದೇವನ ಪ್ರಶ್ನೆಗಳಿಗೆ ನಾರದ ಓಲೆ ನೋಡಿ ಓದಿ ಉತ್ತರ ಹೇಳುವುದಾಗಿ ಅಭಿನಯಿಸುತ್ತಾನೆ. ಈ ಸಂಭಾಷಣೆ ಸಾಮಾನ್ಯ ರೀತಿಯಲ್ಲಿ ಒಂದು ತಾಸಿನಷ್ಟು ಉದ್ದಕ್ಕೆ ಬೆಳೆಯುತ್ತದೆ. ಈ ಹೊತ್ತಿಲ್ಲ ಉರುಟುಚೆಂಡ ವಿಕ್ಕುಚೆಂಡ ಮತ್ತು ಕ್ರತಾಳ (ಕಂಸಾಳೆ) ವನ್ನೆ ಪಕ್ಕವಾದ್ಯವಾಗಿ ಬಳಸುವುದು.

ಮುಂದೆ ದಾರಿಗನ ಪು*ಪ್ಪಾಸು(ಹೊರಡುವಿಕೆ) ಕಥಕಳಿಯ ಕತ್ತಿವೇಸ(ರಾವಣನಂಥದು)ಕ್ಕೆ ಮಸಮನಾದುದು ದಾರಿಗನ ವೇಷ. ಉಡುಗೆ ಚಾಕ್ಯಾರ ಆಟದ ಹಾಗೆ ಎಡಗೈಯ ಕಂಕಣದೊಂದಿಗೆ ಧಾರಾಳ ಕಿಸ್ಗಾರ(ಕಿಸ್ಸಾರ) ಹೂವನ್ನು ಅಲಂಕರಿಸಿ ಕಟ್ಟಿಕೊಳ್ಳುತ್ತಾನೆ. ಎರಡೂ ಕೈಗಳಲ್ಲಿ'ಚುರಿಕ' (ಚೂರಿ) ಇರುತ್ತದೆ. ಬಕ್ಕೆ ಹಲಸು ಕೊರಡು ತುಂಡಿನ ತುರುಳು ಭಾಗವನ್ನು ಕೆತ್ತಿ. ಕುಸುರಿಕೆಲಸದ ಮೂಲಕ ತಯಾರಾದ ಕಿರೀಟಕ್ಕೆ ಹಳದಿ ಬೆಗಡೆ ನವಿಲಗರಿಗಳನ್ನು ಕುರಿಸಿ ಅಂಚ್ನು ಕೆಂಪು ಬಟ್ಟೆಮುಚ್ಚಿ ಚಂದಗೋಳಿಸುತ್ತಾರೆ. ತಿರನೋಟದ (ರೆತಗ್ಗಿಸ ನೋಡುವುದರ) ಬಳಿಕ ಪೀಠವನ್ನು ಎರಿನಿಂತು ಜಗದ ವಇಯವನ್ನು ತಇಳಿಸುತ್ತಾನೆ. ಉದಯಾಚಲ

ಮಳಅಸ್ತಾಚಲ ಮೊದಲಾದ ನಾಲ್ಕು ಪರ್ವದಗಳ ನೊಒರಿ ತನ್ನ ವಿರೋಧಿಸುವವರನ್ನು ಹೋರಾಟಕ್ಕೆ ಕರೆಯುವ ಸಂಕಲ್ಪವೂ ಇದಾಗಿದೆ.

ಕ್ಕಿ*ಕ್ಕ ಉದಯನಾಪರ್ವತತ್ತಿಂಗ ನಿನ್ನುಂ ಪಡಿಞ್ಞಾ* ಅಸ್ತಮಾನ ಪರ್ವತತ್ತಿಂಗನಿನ್ನುಂ ತೆಕ್ಕ್ ಯಮಕೂಟಾ ಪರ್ವತತ್ತಿಂಗ ನಿನ್ನುಂ ವಡಕ್ಕೆ ಮಹಾಮೇರು ಪರ್ವತತ್ತಿಂಗ ನಿನ್ನುಂ ಎನೆ ತಕಿಲುಂ ಮುಂಶುಂವನ್ನು ಪ*ಯುಂ ಅಡಿಯೆಡಾ ಅಡಿಪ್ಪೀರೇ......	ಮೂಡಣದ ಉದಯನಾಪರ್ವದಿಂದಲೂ ಪಡುವಣದ ಅಸ್ತಮಾನ ಪರ್ವತದಿಂದಲೂ ತೆಂಕಣದ ಯಮಕೂಟಾ ಪರ್ವತದಿಂದಲೂ ಬಡಗಣದಿ ಮಹಾಮೇರು ಪರ್ವತಿದಿಂದಲೂ ನನ್ನ ಭೇರಿಯೂ ಮದ್ದಳೆಯೂ ಬಂದೊರೆವುದು ಹೊಡೆಯೆಲಾ ಹೊಡೆವೀರನೇ.......

ಎಂಬ ಮಾತುಗಳು ಪದದಲ್ಲಿರುತ್ತವೆ. ದಾರಿಗ ತನ್ನ ವೀರ್ಯಪರಾಕ್ರಮಗಳನ್ನೆಲ್ಲ ಈ ದೃಶ್ಯದಲ್ಲಿ ಪ್ರದರ್ಶಿಸುತ್ತಾನೆ.

ಮುಖದ ಬಹುಭಾಗ ಮಸಿಯಿಂದ ಆವರಿಸುತ್ತದೆ. ಅಕ್ಕಿಯಿಟ್ಟು ಮತ್ತು ಸುಣ್ಣ ಸೇರಿಸಿ ತಯಾರಿಸಿದ ಅಚಿಟಿನಿಂದ 'ಚಉಟ್ಟಿ', ಸಾಲನ್ನಿಡುತ್ತಾರೆ. ಮೇಲಿನ ಒಂದು ಸಲು ಚುಟ್ಟಿ ಕೆಂಪಾಗಿರುತ್ತೆ. ಚುಟ್ಟಯಂಟೆಗೆ ಅರಸಿದ ಸೇರಸಿದರೆ ಅದು ಸಉಣ್ಣದ ಅಂಶದೊಂದಿಗೆ ಬಎರೆತು ಕೆಂಪಾಗುತ್ತದೆ. ಅಚಿಟಿನಿಂದ ಮೇಲು ಸಾಲಿನ ಚುಟ್ಟಿನ ತಯಾರಿ ನಓಡಿದರೆ ಸುಡಿಬಿನಂತೆಯ ತಓರಿತು. ಶಿವಯಲ್ಲಿ ಉರುಟು ಕುಂಡಲ ತೆಂಗಿನ ಎಳೆಗರಿಯಂದ ತಯಾರಿಸಿದ ದಾಡೆಹಲ್ಲು ಬಾಯಿಂದ ಹೊರಗೆ ಚಾಚಿರುತ್ತದೆ. ಸೊಂಟದ ಉಡುಗೆ ಮಡಿಬಟ್ಟೆಯಿಂದ ಮಾತ್ರ ಮಾಡುತ್ತಾರೆ. ಮಡಿಬಟ್ಟೆಯಂದಲೆ ಶಲ್ಯ(ಹೆಗಲವಲ್ಲಿ) ಎದೆಯಲ್ಲಿ ಮಾಲೆ ಫಲಕ (ಮುಲಪ್ಪಡಂ) ಅದರ ಮೇಲೆ ಹೊಮಾಲೆಗಳು ಎರಡು ಕೈಗಳಲ್ಲೂ 'ಕೈಉ*ಕ್ಕು' ಮ(ಕೈ+ಉ*ಕ್ಕು=ಮುಂತ್ರಿಸಿ ಬರೆದ ತಆಮ್ರ ಹಾಳೆಯ ಸುರುಳಿಯಕವಚ), ಅದರ ಮಏಲೆ ಬಳೆ. ಸೋಂಟದ ಉಡುಗೆಯ ಮೇಲೆ ನೇವಳಸೂತ್ರ(ಪಡಯರ ಇಞ್ಞಾಣ್) ಕಟಿಯಡುಗೆ ಕಣಗಲಿನ ವರೆಎಗೆ ಚಾಚಿಕೊಳ್ಳುದೆ. ಕೈಎಲ್ಲಿ ದೇವತೆಗಳ ಕೈಯಲ್ಲರುವ ಬಾಗಿದ ಖಡ್ಗ ಸುಮಾರು ಮೂರು ಅಡಿ ವಯಾಸದ ಉರುಟು ಕಿರೀಟ. ಈ ಕಿರೀಟವನ್ನು ಬಕ್ಕೆಹಸಲು ಕೊರಡಿನ ತಿರುಳಿನ ಭಾಗವನ್ನು ಕೆತ್ತಿ ಕುಸುರಿಕೆಲಸದಿಂಸದ ಸಿಂಗರಿಸಿ ಅದರ ಮೇಲೆ ಬಣ್ಣ ಒತ್ತಿ ಸೋಬಗುಗೊಳಿಸುತ್ತಾರೆ. ಹಿಂದುಗಡೆ ತೆಂಗಿನ ಎಳಗರಿಯಿಂದ ಮಾಡದ ಚಕುರವಿರುತ್ತದೆ. ಉರಿಯವ ಎರಡುದೊಂದಿಗಳ ಜ್ವಾಲೆಗಳ ನಡುವೆ ಪ್ರತ್ಯಕ್ಷಗೊಳ್ಳುವ. ' ಕಾಳಿ;ಯ ರೂಪ ಭಯ ಹುಟ್ಟಿಸುವಂಥದು. ದೇಗುಲ(ಕಾನ್‌ಮ ಮಧ್ಯದ ದೇವೀ ಆಲಯ)ದ ಮುಂದೆ ಹಾಜರಾಗಿ ಅರ್ಚಕನಿಂದ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ಖಡ್ಗವನ್ನು ಮಾಲೆಯನ್ನು ಪಡೆದ ಬಳಿಕ, ಆರ್ಭಟ, ಸಉತ್ತಲಿನವರ ಬೊಬ್ಬೆಗಳವಾದ್ಯ ಘೋಷದ ನಡುವೆ ಕಾಳಿ ಕಿರೀಟ ಧಾರಣೆ ಮಾಡುತ್ತಾಳೆ. ವಾಧ್ಯ ಘೋಷದ ಪರಿವಾರದೊಂದಿಗೆ ಯುದ್ಧಾಹ್ವಾನ (ಪೋರ್ ವಿಳಿ) ನೀಡುತ್ತ ಕಾವ್‌ಗೆ ಬಲ ಬಂದು (ಪ್ರದಕ್ಷಿಣೆಗೈದು) ಮಡಿಯೇ* ಕಳಕ್ಕೆ ಕಾಳಿ ಪ್ರವೇಶಿಸುತ್ತಾಳೆ. ದಾಅರಿಗನ ರಣಾಹ್ವಾನ ಕೇಳಿದ ಕಾಳಿ ರಂಗಕ್ಕೆ ಬಂದು ರೆರೆಯ ಮರೆಯಲ್ಲಿ ನಇಂತು, ರಣಾಹ್ವಾನಕ್ಕೆ ಉತ್ತ ಹೇಳುತ್ತಾಳೆರ. ಬಳಿಕ ತೆರೆತಗ್ಗಿಸಿ ಇಬ್ಬರೂ ಪರಸ್ಪರ ಕಂಡ ಬಳಿಕ, ದಆರಿಗ ಸೇನೆಯನು ಸಜ್ಜುಗೋಳಿಸಲು ಗಓಗುತ್ತಾನೆ. ಕಾಳಿ ತೆನೋಟ(ತೆರೆ ತಗ್ಗಿಸಿನೋಡ)ದ ಬಳಿಕ ರಂಗದಲ್ಲಿರವ ಫೀಠದಲ್ಲಿ ಕುಳ್ಳಿರುತ್ತಾಳೆ. ಪುನಃ ದಾರಿಗನನ್ನು ಕದನಕ್ಕೆ ಕರೆಯುತ್ತಾಳೆ. ಪೀಠವನ್ನು ಏರಿಇ ನಇಂತು........ ವನ್ ಪಿಳಿಕ್ಕಾನೆ ದಾರಿಗೂ ಪೋರಕ್ಕು ವಾಯೇ...........(ಬಂದು ಕರೆಯುತಿರುವೇ ದಾರಿಗಾ ಕಣಕೆ ಬಾರೋ) ಇದು ಕರೆಹದ ರೀತಿ ಅದ್ಕೆ ದಾರಿಗನ ಮರುತ್ತರವೂ ಇದೆ. ಈ ದೃಶ್ಯದಲ್ಲೆ ಕೊಯಿಂಬಡ ನಾಯರ್‌ರ

ರಂಗಪ್ರವೇಶ ಕಾಳಿಯ ಸಹಾಯಕ್ಕೆ ಬರುವ ಈ ಪಾತ್ರ ವೇಶಬದಲಿಸಿ ಬರುವ ನಂದಿಕೇಶ್ವರನೆಂದು ತಇಳಿಯಲಾಗುತ್ತದೆ. ಕೋಯಂಬಡ ನಾಯರದು ಬಲು ಸರಳ ವೇಷ ಬಿಳಿಮೂಂಡು(ಬಿಳಿಮುಚೆ) ಉಟ್ಟು ತಲೆಯುನ್ನು ಬಟ್ಟೆಯಿಂದ ಮುಚ್ಚಿ ಸಉತ್ತುಕಟ್ಟು ಕಟ್ಟಿ, ಹಣೆಯಲ್ಲಿ ಗೋಪಿನಾಮ ಹಾಕಿ ಎಡಗೈಲ್ಲಿ ಗುರಾಣಿಯೂ ಬಲಗೈಯಲ್ಲಿ ಗಎಂಗಿನ ಎಳಗರಿಯೂ ಇದ್ದು ಈ ಪಾತ್ರ ರಂಗ ಪ್ರವೇಶಿಸುತ್ತವೆ. ಕೋಯಿಂಬಟ ನಾಯರ್ ಸಂಭಾಷೆಗೆ ಹಾಸ್ಯ ಭರಿತವಾಗಿರುತ್ತದೆ. ತಾನು ಬಂದ ದಾರಿಯು ವಇಶೇಷತೆಗಳನ್ನು ಹೇಳುವಾಗ ಅದಕ್ಕೆ ಹಿಮ್ಮೇಳದವರು ತಕ್ಕ ಉತ್ತರ ನ ಈಡಿ ಒರೆಹವನ್ನು ಬಎಂಬಲಿಸುವರು. ಈ ದೃಶ್ಯದಲ್ಲಿ ದಆರಿಗನ ದೂತ ಕಾಣಿಸಿಕೊಳ್ಳುತ್ತಾನೆ. ನಂದಿ ಮಹಾಕಾಳನು ದೂತನ ಕೊರಳಿಗೆ ಸಉತ್ತಿಗೆ ನಏತುಕಟ್ಟಿ ಹೊಡಡೆಯುವ ದೃಶ್ಯ ಸ್ವಾಖುಸ್ಯಕರ ಗಣ;ಪತಿಯನ್ನು ಸತುತಿಸಿ ಹಾಡಿ ಹೆಜ್ಜೆಗಾರಿಕೆಯೊಂದಿಗೆ ಈ ದೃಶ್ಯದ ಮುಕ್ತಾಯವಾಗುತ್ತದೆ. ಮುಂದಿನ ದೃಶ್ಯ ದಾರಿಗನ ಅಣ್ಣನಾದ ದಾನವೇಂದ್ರನ ರಂಗ ಪ್ರವೇಶ ದಾನ ವೇಂದ್ರನಿಗೂ ಉಡುಗೆ, ಧಾರಾಣೆಗಳೆಲ್ಲ ದಾರಿಗನದೆ ರೀತಿ.

ಕಾಳಿಯ ಪರಿವಾರದಲ್ಲಿ ಸೇರಿದ ' ಕೋಳಿಯ' ಪ್ರವೇಶವಿದೆ. ಕೇರಳದ ಹೆಚ್ಚಿನ ಅನುಷ್ಠಾನ ಕಲೆಗಳಲ್ಲೂ ಕಾದಾಟದ ಅಭಿನಯವಿದೆ. ಆ ಬಗೆ ಹೋರಾಟದ ಧರ್ಮ ಕೂಡ ಕೋಳಿ ಕೈಗೋಡಿಸುತ್ತವೆ. ಮುಖಕ್ಕೆ ಮಸಿ ಕಿವಿಗಳಲ್ಲಿ ದೊಡ್ಡ ಕುಂಡುಗಳು. ತಲೆಯಲ್ಲಿ ವಸ್ತ್ರದಿಂದ ಗೊನೆಕಟ್ಟುವುದು ಬಟ್ಟೆಯಿಂದಲೋ ಗೆರಟೆಗಳಿಂದಲೋ ಎದೆ ಕಟ್ಟಲಾಗುತ್ತದೆ. ಇದು ಕೂಳಿ ವೇಷದ ಸ್ಥೂಲ ಚಿತ್ರ ಕೊಳಿಯ ಕೆಲಸವೆಲ್ಲ ಪ್ರೇಕ್ಷಕರಲ್ಲಿ ನಗೆಯನ್ನು ಉಕ್ಕಿಸುತ್ತದೆ. ರಂಗದಲ್ಲಿ ಬಹಳಷ್ಟು ಸ್ವಾತಂತ್ರ್ಯವಿರುವವೇಷ ಕೂಳಿ.

ಇನ್ನು ಕಾಳಿ ದಾರಿಗ–ದಾನವೇಂದ್ರರನ್ನು ಇದಿರಿಸಿ ಯುದ್ಧಮಾಡುವುದು. ಕಾಳಿಯ ಜತೆಯಲ್ಲಿ ಕೂಳಿ ಹಾಗೂ ಕೋಯಿಂಬಡ ನಾಯರು ಇರುತ್ತಾರೆ. ಕಾಳಿ ಮತ್ತು ದಾರಿಗ ದಾನವೇಂದ್ರ ಯುದ್ಧದ ನಡುವೆ ಕೂಳಿಯ ಕೆಲಸ ಹಾಸ್ಯವನ್ನು ಎಬ್ಬಿಸುತ್ತದೆ. ಕಾಳಿಯ ದಾಳಿಯನ್ನೆದುರಿಸಲು ಸಾಧ್ಯವಾಗದೆ ದಾರೊಗದಾನವೇಂದ್ರರು ಸೋತು ಪಾತಾಳದಲ್ಲಿ ಅಡಗಿಕೊಳ್ಳುವರು ಸಿಟ್ಟಿನ ಆವೇಶವೇರಿದ ಕಾಳಿ ಲೋಕವನ್ನು ನಶಾಮಾಡುತ್ತದತಾಳೆಂದು ನೆನೆದು ಕ ಒ ಯ ಇಂಬಡಸ ನಾಯರ್ ಕಾಳಿಯ ಮುಡಿಯನ್ನು (ಕೀರೀಟ) ಎಳೆದು ತೆಗೆಯುತ್ತಾನೆ ಹಾಗೂ ಆಕೆಯ ಖಡ್ಗವನ್ನು ನೆಲಕ್ಕೆ ಇರಿಯುವಂತೆ ಮಾಡುತ್ತಾನೆ.

ಅನಂತರ ಪುನಃ ಮುಡಿಯನ್ನು ಗಟ್ಟಿಯಾಗಿ ಕಟ್ಟಿಕೊಂಡು ಕಆಳಿ ಪಾತಾಳಕ್ಕೆ ತಲುತ್ತಾಳೆ. ಅನಂತರ 'ಪೇಶಲ್' (ಮಾತನಾಡುವುದು) ನಡೆಯಲು ಇದೆ. ಇದು ಕಆಳಿ ಮತ್ತು ದಾರಿಗು ದೇನವೇಂದ್ರರ ನಡುವೆ ನಡೆಯುವ ಮಾತಿನ ಕದನ. ಕೋಯಂಬಡ ನಾಯರ್ ಸಹಿತ ನಆಲ್ವರೂ ದಈಪಕ್ಕೆ ಸುತ್ತ ನಡೆಯುತ್ತ ' ಪೇಶಲ್' ಸಾಗುತ್ತದೆ. ಈ ಹೊತ್ತಿನಲ್ಲಿ ದಾರಿಗ ವಿನಯಾನ್ವಿತನಾಗಿ ದ್ರರ ತಲೆಕಡಿದು(ಕಿರೀಟ ಕಿತ್ತು) ತೆಗೆಯುತ್ತಾಳೆ. ಶಿವನೆಂಬ ಸಂಕಲ್ಪದೊಂದಿಗೆ ದಈಪಕ್ಕೆ ಮೂರು ಬಾರಿ ಮುಡಿಗಳನ್ನು(ಕಿರೀಟಗಳನ್ನು) ಸಉಳಿಯುತ್ತಾರೆ. ಅನಂತರ ಅವುಗಳನ್ನು ಅಲ್ಲಿ ಸಏರಿದ ಭಕ್ತಸಮೂಹಕ್ಕೂ ಕಿರೀಟ ಸುಳಿಯಲಾಗುತ್ತದೆ. ಇಲ್ಲಿಗೆ ಮುಡಿಯೇ ಎಂಬ ನಾಟಕರೂಪ ಕೊನೆಗೊಂಡಿತು ಎಂದು ಅರ್ಥ.

ಆದರೆ ಇದಕ್ಕೆ ಸಂಬಂಧಿಸಿದ ಆಚರಣೆಗಳು ಮುಂದುವರಿಯುತ್ತವೆ. ಮಡಿಯೇ*ನ ಸಮಾಪನದಲ್ಲಿ ಕುರುನೀರು ಚೆಲ್ಲುವ ವಿಧಿಯಿರುತ್ತದೆ. ಸಾಮಾನ್ಯವಾಗಿ ಕಾವಿನ ಒಡಗು ದಿಕ್ಕಿನಲ್ಲಿ 'ಕೋಳೀ'(ಬಲಿ) ಕುರುಇದ'

ನಡೆಯುವುದು ಪದ್ಧತಿ. ಆದರೆ ಈಗ ಹಲವೆಡೆ ಅದಕ್ಕೆ ಬದಲು ಕುಂಬಳವನ್ನು ಕೊಯ್ದು, ಸುಣ್ಣ ಅರಸಿನ ಬೆಲ್ಲಗಳನ್ನು ನೀರಿನಲ್ಲಿ ಕಲಸಿ ಕುರು ನಈರು ಮಾಡುತ್ತಾರೆ. ಕುರುದಿಗೆ ಮೊದಲು ಕಾಳಿ ವೇಷ ಧರಿಸಿದವನು ಕುರುಂಭಾ ಭಗವತಿಯನ್ನು ಸ್ತುತಿಸುವ ಕೆಲ ಸಾಲುಗಳನ್ನು ಹಾಡುತ್ತಾನೆ.

ಸಂಬಂಧಿಸಿದ ಮನೆಗಳಿಗೆ ಹೋಗಿ ನಆಲ್ಕು ಮೂಲೆಗಳಲ್ಲೂ ತಳಿದು ದೊಂಇದ ನಿವಾಳಿಸಿ ಮನೆಯೊಳಗಿನ ಉಪದ್ರವ ಇಲ್ಲದಂತೆ ಮಾಡಲಾಗುತ್ತದೆ. ಆನವಸತಿಯ ನಆಲುಕ ಗಡಿಗಳಲ್ಲೂ ಕೂಳೀ ಬಲಿ ಅರ್ಪಿಸಿ ಕೆಲ ಕರ್ಮಗಳನ್ನು ನಡೆಸುವುದಿದೆ. ಹೀಗೆ ದೇಶಮುಡಿಯೇ* ನಡೆಸಿ ಆ ಜನಪದ ಐಶ್ವರ್ಯ ನಿವಾತಂಕಗೋಳಿಸಲಾಗುತ್ತದೆ. ಇದಿಷ್ಟು ಮಡಿಯೇ* ಎಂಬ ಅನುಷ್ಠನ ನಾಟಕದ ವಿವರಣೆ.

ಕೇರಳದ ಅನುಷ್ಠಾನ ನಾಟಕಗಳು

ಮುಡಿಯೇಟ್ ನಂಥ ಸ್ವಯಂಪೂರ್ಣವೂ ಕ್ರಮಬದ್ಧವು ಆದ ಇನ್ನೊಂದು ಅನುಷ್ಠಾನ ನಾಟಕ ಕೇರಳದಲ್ಲಿ ಇದಕ್ಕೆ ಸಮಾನವೆನ್ನಬಹುದಾದ ನಿಣಬಲಿ ಎಂಬುದು ಇದೆ. ಉತ್ತರ ಕೇರಳದ ತಲಶ್ಶೇರಿನಾದಾಪುರಂ ಮೊದಲಾದೆಡೆ ಕಾಣಸಿಗುತ್ತದೆ. ದುಷ್ಟಶಕ್ತಿ ಉಚ್ಚಾಟನ ಕರ್ಮ ಭಾಗವಾಗಿ ನಡೆಯುವ ನಿಣಬಲಿಯ ಪ್ರದರ್ಶನ ವಸ್ತುವು ಕಾಳಿ–ದಾರಿಗ ಯುದ್ಧವೇ ಆಧರೆ ಮಡಿಯೇ*ನಷ್ಟು ವಿಶದ ಆಭರಣೆಯಲ್ಲ ಅದು.ಕಾಳಿ ಮತ್ತು ದಾರಿಗ ಈ ಎರಡು ಪಾತ್ರಗಳಷ್ಟು ರಂಗಕ್ಕೆ ಬರುತ್ತವೆಂಬುದೆ ಇಲ್ಲಿ ವೈಶಿಷ್ಟ್ಯ ತೆಯ್ಯಂ, ತಿ* ಕಾಳಿಯುಟ್ಟ್, ಪಡೆಯಣಿ ಮೊದಲಾದ ಅನುಷ್ಠಾನಗಳಿಗೆ ಬುನಾದಿ ಕಾಳಿ ದಾರಿಗ ಯುದ್ಧವೇ ಭದ್ರಕಾಳಿಕ್ಕಳಂ ಮಂಡಲ ಬರೆದು ಕಳಂಪಾಟು ಹಾಡುವುದು ಇದರದೇ ಇನ್ನೋಂದು ಪ್ರಭೇದ ಎನ್ನಬೇಕು. ಆದರೆ ಆದರೆ ಇವೆಲ್ಲವು ಮಡಿಯೇ*ನ ಹಾಗೆ ನಾಟಕದ ಲಕ್ಷಣಗಳನ್ನು ಪೂರ್ಣವಾಗಿ ಪಾಲಿಸುವಂಥವುಗಳಲ್ಲ.

ಮುಡಿಯೇಟ್ ಎಂಬ ಅನುಷ್ಠಾನ ನಾಟಕರೂಪ

ಮುಡಿಯೇಟ್‌ಗೆ ಆಧಾರವಾದ ಕಾಳಿ–ದಾರಿಗ ಸಂವಾದವೂ ಮುಂದುವರಿಯುವ ಯುದ್ಧವೂ ನಡೆಯುವುದ ಕಾವು(ದೇವೀ ಆಲಯದ) ಕೇಂದ್ರವಾಗಿರುವ ಪರಧಿಯೋಳಗೆ ಬರುವ ಒಂದು ಪ್ರತ್ಯೇಕ ಸ್ಥಳದಲ್ಲಾದರೂ ಅದರ ಆರಂಭವೂ ಸಮಾಪ್ತಯೂ ಕಾವಿನ ಮುಂಭಾಗದಿಂದ ಆರ್ಭಟ ಕೂಗುಗಳೊಂದಿಗೂ ತಾಲಪ್ಪೋಲಿ (ಎರಡು ಸಾಲುಗಳಲ್ಲಿ ಪಾತ್ರೆಯಲ್ಲಿ ಧಾನ್ಯ, ದೀಪಗಳನ್ನು ಹಿಡಿದ ಕನ್ಯೆಯರು ಬರುವ ಶೋಭಾಯಾತ್ರೆಯೊಂದಿಗೂ ವಾಧ್ಯಘೋಷದೊಂದಿಗೂ ಕಾಳಿ ಹೊರಟು ಬರುವುದರಲ್ಲಿರುವ ಸಂಕಲ್ಪ ಮಹಾದೇವ(ಶಿವ)ನ ಸಮೀಪದಿಂದ ದಾರಿಗ ವಧಕ್ಕಾಗಿ ಹೊರಟುಬರುವುದು ಎಂಬುದೇ ಆಗಿದೆ. ಅದರಿಂದಾಘಿ ಅದು ಕೂಡ ಈ ನಾಟಕದ ಒಂದು ದಋಶ್ಯವೇ ಕೈಲಾಸದಿಂದ ಪಾತಾಳದ ವರೆಗಿರುವ ವಿಭಿನ್ನ ಲೋಕಗಳನ್ನ ಕತೆ ಆವರಿಸುತ್ತದೆ. ದಾರಿಗವೇಯ ಬಳಿಕ ಗರಾಮದ ಗಡಿಗಳಿಗೆ ಹೋಗಿ ಕರುವಿ (ಉಚ್ಚಾಟನಾವಿಧಿ) ಪೊರಯಿಸಿ ಕಾವಿನ ಮುಂದೆ ಹಾಜರಾತ ಬಳಿಕವೆ ಅನುಷ್ಠಾನದ ಮುಕ್ತಾಯ ಕಾವಿನ ನಡೆ(ಪ್ರವೇಶದ್ವಾರ)ಯಿಂದ ಆರಂಭಿಸಿ ಗ್ರಾಮದ ಪರಿಧಿಗಡಿ ವರೆಗೆ ಬೆಳೆಯುವಂಥ ಚಡಂಗ ಮುಡಿಯೇ* ದ್ದು. ಮಿಜ್ಜ ಅನುಷ್ಠಾನ ನಾಟಕಗಳ ಸ್ವಭಾವವೂ ಹೀಗೆಯೇ ಸಾಂಘಿಕತೆಯ ಸಂಬಂಧಿಸಿದ ಮಟ್ಟಿಗೆ ಕಾಳಿಯ ಕಳಂ ಬರೆಯುವುದು(ಮಂಡಲ ಬರೆಯುವುದ) ಮೊದಲು ಗಒಂಡು ಕಾವಿನ ನಡೆಯಲ್ಲಿ ಮುಡಿಯೇ ಸಮಾಪ್ತಿಗೋಳ್ಳುವ ವರೆಗಿನ ಎಲ್ಲವೂ

ಒಂದೇ ಘಟನೆಯ ಅನುಕ್ರಮಣಿಕೆಯಾಗಿದೆ. ಸಾಂಘಿಕತೆಯ ಮನಸ್ಸಿನಲ್ಲಿ ಇರುವ ಕಾಳಿದಾರಿಗರ ಕುರಿತಾಗಿಯೂ ಇತರ ಕಥಾ ಪಾತ್ರಗಳ ಕುರಿತಾಗಿಯು ಅವರೆ ಕೃತ್ಯಗಳ ಕುರಿತಾಗಿಯೂ ಸಾಂಘೀಕತೆಯಲ್ಲಿರವ ಸಂಕಲ್ಪವೆ ವರ್ಷಕ್ಕೆ ಒಂದು ಬಾರಿ ಮುಡಿಯೇ* ಎಂಬ ಆಚರಣೆ ಮೂಲಕ ಹೊರಕ್ಕೆ ಬರುವಅವರ ಅಮೂರ್ತವಾದ ಸಂಕಲ್ಪಕ್ಕೆ ವರ್ಷಕ್ಕೆ ಒಮ್ಮೆ ಮೂರ್ತತೆ ಒದಗಿಬರುವ ಸಂದರ್ಭದವಿದು. ಆದ್ದರಿಂದ ನಿದೇಶಕ ಸಾಂಘಿಕತೆಯೇ ಸಾಂಘಿಕತೆಯ ಮಾನಸಿಕ ಸತರದಲ್ಲಿ ಸಂಭವಿಸುವ ಬದಲಾವಣೆ ಮುಡಿಯೆ* ಆಚರಣೆಯನ್ನು ಬಾದಿಸುತ್ತದೆ.

ಇಡಿಯ ಗ್ರಾಮವೇ ಮುಡಿಯೇ*ನ ಪ್ರೇಕ್ಷಕರು ಅವರು ಇಡಿಯಾಗಿ ಈ ಆಚರಣೆಯ ಭಾಗಿಗಳಾಗುವುದಲ್ಲ; ಹಲವು ಘಟ್ಟಗಳಾಗಿ ಅವರ ಸಹಭಾಗ ಇನ್ನು ಕೆಲವರು ಕಾವಿನಲ್ಲೋ ಅದರ ಹೊರಗೋ ನೇರ ಅನುಷ್ಠಾನಗಳಲ್ಲಿ ಭಾಗಿಗಳಾಗುವುದಿಲ್ಲವಾದರೂ ಹಲವು ಬಗೆಗಳಲ್ಲಿ ಅವರು ಪರೋಕ್ಷವಾಗಿ ಪಾಲುಗೊಳ್ಳುವವರು.

ಇನ್ನು ರಂಗದಲ್ಲಿ ನೆುಪ್ರಕ್ರಿಯೆ ಮುಡಿಯೇ*ನ ಪ್ರಸ್ತುತಿಯಕ್ರಮದ ಬಗೆಗೆ ಸಾ<ಂಘೀಕತೆಗೂ ಅದರ ಪ್ರದರ್ಶನದಲಿ ಪಾಲುಗೊಳ್ಳುವವರಿಗೂ ರಂಗಪಠ್ಯ ಮನಸ್ಸಿನಲ್ಲಿ ಇರುತ್ತದೆ. ಅದನ್ನು ಅನುಸರಿಸುವದುನ್ನಷ್ಟೆ ಅವರು ಮಾಡುತ್ತಾರೆ. ಅದಕ್ಕೆ ಸ್ಥಳೀಯವಾದ ಪಾಠಭೇದವೂ ನೆಲೆಸಿರುತ್ತದೆ. ವಿಭಿನ್ನ ಪರಂಪರೆಗಳಿಗೆ ಸ್ವಂತವಾಗಿ ಬರೆದ ಸಾಹಿತ್ಯ ಇರುವುದಾದರೂ ಅದೊಂದು ಮಾದರಿಯಾಗಿ ಮಾತ್ರ ವರ್ತಿಸುತ್ತದೆ. ಒಂದೊಂದು ದೃಶ್ಯಪಠ್ಯವೂ ಅದನ್ನನುಸರಿಸಿ ವರ್ತಿಸುವ ಅದರದೇ ವಿಸ್ತರಣೆಯೂ ಆಗಿಬಿಡುತ್ತದೆ.

ರಂಗಕ್ಕೆ ಬರುವ ಕಾಳಿ, ದಾರಿಗ ಮೊದಲಾದ ಕಥಾ ಪಾತ್ರಗಳಿಗೆ ಪರಂಪರಾಗತ ವಿಭಿನ್ನ ವೇಷವಿಧಾನನಗಳು ನೆಲೆಸಿವೆ. ಇವು ಸಾಂಘಿಕತೆಯ ಮನಸ್ಸಿನಲ್ಲಿ ಒಂದೊಂದು ಕಥಾಪಾತ್ರದ ಕುರಿತಾಗಿಯೂ ಪುರಾವೃತ್ತವನ್ನು ಅನುಸರಿಸಿ ರುಪುಗೊಂಡಿರುವ ರೂಢಮೂಲವಾದ ಗ್ರಹಿಕೆಯ ಆಧಾರವದಲ್ಲಿ ಇರುವಂಥವು. ಉದಾಹರಣೆಗೆ ಶ್ರೀ ಕುರುಂಬಾ ದೇವಿಯೇ ಭದ್ರಕಾಳಿ. ಸಿಡುಬು ಕಾಯಿಲೆಯ ಸಾಕಾರವೇ ಶ್ರೀಕುರುಂಬಾ ದೇವಿಯ ಸಂಕಲ್ಪ ಆದ್ದರಿಂದ ಅದಕ್ಕಿರುವ ಭಿಭತ್ಸತೆ ಕಾಳಿಯ ವೇಷಕ್ಕೂ ಅವಶ್ಯ. ಮುಖದಲ್ಲಿ ಸಿಡುಬಿನ ಹಏಳಿಕೆಯ ಚುಟ್ಟಿ ಇಡುವುದು ಅದಕ್ಕಾಗಿ ಕೋಯಿಂಖಡ ನಾಯರ್ ಎಂದರೆ ಶಿವ ಕಾಳಿಯ ಬೆಂಬಲಕ್ಕೆ ಕಳುಹಿಸುವ ನಂದಿ ಮಹಾಕಾಳನೆ? ರೂಪಬದಲಿಸಿ ಆತ ಖೋಯಿಂಖಡ ನಾಯರ್ ರೂಪದಲ್ಲಿ ಕಆಣಿಸಿಕೊಳ್ಳುತ್ತಾನೆ. ಆಧ್ದರಿಂದ ಆತನಿಗಿರುವುದು ತ್ಠಿಕ ವೇಸ ಈ ರೀತಿ ಒಂದೊಂದು ವೇಷವೂ ಕಥಾಪಾತ್ರದ ಕುರಿತಾಗಿ ಇರುವ ಸಂಕಲ್ಪಕ್ಕೆ ತಕ್ಕವಾಗಿಯು ರೂಪುಗೋಳ್ಳುತ್ತದೆ.

ಆಂಗೀಕ ವಾಚಿಕ ಸಾಸ್ತ್ವಿಕ ಅಭಿನಯ ರೀತಿಗಳಲ್ಲಿ ಮುಡಿಯ* ನಲ್ಲಿದೆ. ವಾಚಿಕಾಭಿನಯದ ವಿಚಾರವಾಗಿ ಹೇಳುವುದಾದರೆ ಕೇವೊಮ್ಮೆ ಕಥಾ ಪಾತ್ರದ ಬದಲು ಹಿಮ್ಮೇಳದವರ ಮಾತನಾಡಲೂ ಬಹುದು. ಗದ್ಯ ಪದ್ಯ ಭಾಷಣಗಳು ಇದರಲ್ಲಿ ಬಳಕೆಯಾಗುತ್ತದೆ. ಕೊಯಿಂಬಡ ನಾಯರ್ ಬಳಸುವುದು ನಾದ ಮತ್ತು ತಾಳಗಳು ಕಲೆ ತಇರುವ ಗದ್ಯ ವಿಭಿನ್ನ ಪಾತ್ರಗಳು ಬಳಸುವ ಭಾಷೆಯನ್ನು ಅವುಗಳ ಸಂಕಲ್ಪಗಳನ್ನು ಜತೆಯಲ್ಲಿರಿಸಿ ಅಧ್ಯನ ನಡೆಸಬಹುದಾಗಿದೆ.

ಕಾಳಿ–ದಾರಿಗ ಯುದ್ಧವೆ ಮುಡಿಯೇ*ನ ವಸ್ತುವಷ್ಟ? ಆದ್ದರಿಂದ ಇದರ ಮೂಲಕ ಭಯ, ಶೌರ್ಯ, ಕಾತ್ರ ಮೊದಲಾದವುಗಳಿಂದ ಮನಸ್ಸು ತುಂಬಿಕೊಳ್ಳುತ್ತದೆ. ಅವುಗಳನ್ನು ಸಮತೋಲನ ಮಾಡುವುದಕ್ಕಾಗಿಯೇ ಕೊಐಇಂಬಡ ನಾಯರ್ ಮತ್ತು ಕೂಳಿ ಇದರ ರಂಗದ ಕ್ರಿಯೆಗಳೆಂದು ಭಾವಿಸುಬಹುದು.

ಕಥಾ ಪಾತ್ರಗಳು ರಂಗದಲ್ಲಿ ನಡೆಸುವ ಚಲನೆಗಳೆರಲ್ಲ ಶೈಲಿಕೃತವಾದುದು. ಒಂದೊಂದು ಕಥಾ ಪಾತ್ರದ ಚಲನೇಕ್ರಮವೂ, ಅವಯವಗಳ ಚಲನರೀತಿಯೂ ವ್ಯತ್ಯಸ್ತವಾಗಿದೆ. ಹೀಗಿಲ್ಲದಿರುವುದು ದಾರಿಗೆ ದಾನವೇಂದ್ರ ಚಲನೆ ಅವು ಎರಡೂ ಒಂದರದೇ ಭಿನ್ನವರೂಪಗಳಾಗಿರುವುದೇ ಇದಕ್ಕೆ ಕಾರಣ.

ವೇಷ ಅಭಿನಯದ ರೀತಿಗಳು, ಚಲನಕ್ರಮಗಳು ಇವುಗಳಿಂದೆಲ್ಲ ಈ ನಾಟಕದ ಒಂದೊಂದು ಕಥಾ ಪಾತ್ರವೂ ಇತರ ಕಥಾ ಪಾತ್ರಗಳ್ನು ಅಪೇಕ್ಷಿಸಿ ವೈರುಧ್ಯವನ್ನು ತೋರುತ್ತದೆ. ಈ ಬಗೆಯ ಕಥಾ ಪಾತ್ರಗಳ ಸಮಾವೇಶ ಇಲ್ಲಿರುವುದರಿಂದ ಈ ಅನುಷ್ಠಾನ ಶಕ್ತವಾದ ಒಂದು ಪುರಾವೃತ್ತ ದ ಅಭಿವ್ಯಕ್ತಿ ಕೂಡಿ ಇದು ಆಗಿದೆವಷ್ಟೆ?

ಈ ಅನುಷ್ಠಾನ ನಾಟಕ ಫಕ್ಕನೆ ಆರಂಭಿಸುವಂಥದಲ್ಲ ಸಾಂಘಿಕತೆಯ ಮನಸ್ಸಿನಲ್ಲಿ ಲೀನವಾಗಿರುವ ಈ ಆಟಕ ಅದರದೇ ಸಂದರ್ಭ ಬರುವಾಗ ಕ್ರಮಾಗತ ವೃದ್ಧಿಯೊಂದಿಗೆ ಹೋರಕ್ಕೆ ಬರುವುದಾಗಿದೆ. ಆದ್ದರಿಂದ ಮಾನಸಿಕವೂ ಭೌತಿಕವೂ ಆದ ಒಂದು ಸಜ್ಜೀಕರಣ ಮುಡಿಯೇ* ನಡೆಯುವುದಕ್ಕೆ ಮೊದಲೇ ಸಾಂಘಿಕತೆಯಲ್ಲಿ ಆರಂಭವಾಗುತ್ತದೆ. ಆ ದಇವಸ ಮಧ್ಯಾಹ್ನದ ವೇಳೆಗೆ ಕಳ ಬರೆಯುವುದರೊಂದಿಗೆ ಆಚರಣೆ ಆರಂಭವಾಗುತ್ತದೆ. ಈ ನಾಟಕವನ್ನು ಶಕ್ತಿಶಾಲಿಯನ್ನಾಗಿ ಮಾಡುವ ಒಂದು ಘಟಕ, ನಾಟಕ್ಕೆ ಮೊದಲು ಡೆಯುವ ಕಳದ ಬರೆಹ ಮತ್ತು ಅದಕ್ಕೆ ಸಮಭಧಿಸಿ ನಡೆಯುವ ಕಳಂಪಾಟುಗಳು ಕಳಂಪಾಟಿನ ಮೂಲಕವೂ ಇತರ ವಿಧಿಗಳಿಂದಲೂ ದೇವತೆಯನ್ನು ಕಳದಲ್ಲಿ ಮಾಡಿದ ರೂಪಕ್ಕೆ ತಲಪಿಸುವುದ ಮತ್ತು ಮಲಗಿದ ಆ ರಊಪದಿಂದ ಎದ್ದುಬಂದು ದಾರಿಗನೊಂದಿಗೆ ಯುದ್ಧದಲ್ಲಿ ತಾಗುವವಳು ಕಾಳೀ.ಮೂರುಸ್ತರಗಳಲ್ಲಿ ವಿಕಾಸಗೊಳ್ಳುವ ಕಾಳಿ ಮಡಿಯೇ*ನಲ್ಲಿ ಇದ್ದಾಳೆ. ಮಡಿಯೇ* ಹತ್ತಿರವಾದಂತೆ ಸಾಂಘಿಕತೆಯ ಮನಸ್ಸಿನಲ್ಲಿ ತಉಂಬಿನಿಂ ತ ಕಾಳಿ ಮಆ ಬಳಿಕ ಆವಾಹನೆಗೊಂಡ ಸಥಿತಿಯಲ್ಲಿ ಕಲದಲ್ಲಿ ಪ್ರತ್ಯಕ್ಷಗೊಂಡು ಅನಂತರ ಮೂರ್ತಕಾಗಿ ರಂಗಪ್ರವೇಶಸಿ ದಾರಿಗನನ್ನು ವದದದದದದಿಸುತ್ತ ಗರಾಮಕ್ಕೆ ಅನುಗ್ರಹ ನಈಡುವುದನ್ನೂ ಮಾಡುತ್ತಾಳೆ. ಆದ್ದರಿಂದ ಮಉಡಿಯೇ* ಎಂದೆನ್ನುವ ಶಿವ–ನಾರ ಸಂವಾದದಲ್ಲಿ ಆರಂಭಗೊಳ್ಳುವ ಮಡಿಯೇ*ನಲ್ಲಿ ಅಮರಿನಿಲ್ಲುವ ಒಂದು ಅಧ್ಯಯನ ಅಪೂರ್ಣವೂ ಅಸತ್ಯಕ್ಕೆ ತಲಪಿಸುವಂಥದೂ ಆಗಿರುತ್ತದೆ.

ಈ ಅನುಷ್ಠಾನ ನಾಟಕದ ಕುರಿತಾದ ಅಧ್ಯಯನ ಕೇರಳದ ಅನುಷ್ಠಾನ ಕಲೆಗಳ ವಇಕಾಸದ ಬಗೆಗಿನ ಕೆಲವು ವಇಶಿಷ್ಟ ತಿಳಿವಳಿಕೆಗೆ ತಲಪಿಸುತ್ತದೆ. ಎನ್ನಬಹುದು. ಕಲವೂ, ಕಳಂಪಾಟೂ ಭದ್ರಕಾಳಿಗಾಗಿ ಇರುವಂಥದ್ದೇ ಮುಡಿಯೇ* ಎಂಬ ಅನುಞ್ಠಾನದ ಭಾಗವಾಗಿಯೂ ಕೇರಳದ(ಮಡಿಯೇ*ನ್ ಸಾಂಘಿಕತೆಯ)ಲ್ಲಿ ನೆಲೆನಿಲ್ಲುತ್ತಿದೆ. ಕಳಂ<ಪಾಟು ಭದ್ರಾಳಿಗೆ ಮಾತ್ರವಲ್ಲ ವೇಟ್ಟಕ್ಕೊರುಮಗನ್ ಶಾಸ್ತ್ರಾವು ಮಒದಲಾದ ದೇವತೆಗಳಿಗೂ ಗಂಧರ್ವ ಮೊದಲಾದ ದುರ್ದೇವತೆ(ನೀಚ ದಏವತೆ)ಗಳಿಗೆ ಬಏಕಾಗಿಜಯೇ ನಡೆಸುವುದಂಟು. ಅದಕ್ಕೆ ಸ್ವತಂತ್ರವಾದ ಅಸ್ತಿತವ ಉಂಟು ಎಂದರ್ಥ ಹಾಗೆ ಬರುವಾಗ ಮುಡಿಯೇಢ*ನ ಕಳಂಪಾಟು ಒಂದೇ ಅದಕ್ಕೆ ಸೇರಿಸಬಹುದು.

ಅಲ್ಲವಾ ದರೆ ಕಳಂಪಾಟಿನ ವಇಕಸಿತ ರಊಪವೇ ಮುಡಿಯೇ ಎಲ್ಲಿಯೂ ನೆಲೆಸಿಲ್ಲ. ಎಂಬುದರಿಂದ ಭದ್ರಕಾಳಿ ಕಳದ ವಿಕಸಿತ ರಊಪವೇ ಮುಡಿಯೇ* ಎಂಬ ನಿಲುಮೆಗೆ ತಲಪುವುಧೇ ಯುಕ್ತ.

ಸಿಡುಬಿಕೆ ಸಂ ಬಂಧಪಟ್ಟುದು ಮುಡಿಯೇ*ನ ಸಂಕಲ್ಪ ಕಾಳಿ:ಇ ಶ್ರೀಕುರುಂಬಾ ದೇವಿಯೇ ಎಂಬುದ್ಕೆ ಆಂತರಿಕವಾದ ಸಾಕ್ಷ್ಯಗಳಿವೆ/ ಇದೇ ದೇವತೆಯೇ ವುದಿಯ ಭಗವತಿ(ಹೊಸ ಭಗವತಿ) ಮತ್ತು ಬಿಂರ್ಬಗಳೆಂಬ ಸಂಕಲ್ಪಗಳಾಗಿ ಬದಲಿಸರುವುದೆಂದು ಪ್ರದಿಯಭಗವತಿಯ ಪುರಾವೃತ್ತದಲ್ಲಿದೆ ಕೊಡುವುದಕ್ಕೆ ಚಈಂರ್ಬಯೂ ತಎಗೆಯಲು ಪ್ರದಿಯ ಭಗವತಿ ಯೂ(ಕೊಡುಕ್ಕಾನ್ ಚಈಂರ್ಭಯುಂ ಎಡುಕ್ಕಾನ್ ಪ್ರದಿಯ ಭವತಿಯುಂ) ಎಂಬ ಅವಸ್ಥೆಯನ್ನು ವಇಧಿಸಿದಳು ಎಂದು ಪುದಿಯಭಗವತಿಯ ಪುರಾವೃತ್ತದಲ್ಲೆ ಹೇಳುತ್ತದೆ. ಸಇಡುಬನ್ನು ತಗ್ಗಿಸಲು ಮನುಷ್ಯ ಮನಸ್ಸಿಗಿದ್ದ ಬಲವತ್ತರವಾದ ಅಪೇಕ್ಷೆಗಳ ಸಾಂಕೇತ ಪ್ರತಿಕರಣವೇ ಕಾಳಿ ದಾರಿಗಯುದ್ಧ ಅದನ್ನು ಸುಧಿರ್ಘವೂ ಘಟನಾಪೂರ್ಣವೂ ಆದ ಒಂದು ನಾಟಕ ರಊಪಕ್ಕೆ ಪರಿವರ್ತಿಸಿಕೊಳ್ಳುವುದೇ ಮುಡಿಯೇ* ನ ಮೂಲಕ ಸಾಧ್ಯವಾಗಿರುವುದು.

ಒಪ್ಪನ (ಗ್ರಾಂಈಣ ನೃತ್ತ)

ಎನ್. ಕಾದಿರಿಕ್ಕೋಯ

ಟಿಪ್ಪಣಿ

ಸಂಘನೃತ್ಯ ಎರಡು ರೀತಿಗಳಲ್ಲಿ ಇದೆ. ಒಂದು ಸಾಲುನೃತ್ತ ಇನ್ನೊಂದು ವರ್ತುಲನೃತ್ತ. ಕಏರಳದಲ್ಲಿ ವರ್ತುಲ ನೃತ್ತಕ್ಕೆ ಪ್ರಾಧಾನ್ಯ. ವಯಕ್ತಿಗಳು ಪರಸ್ಪರ ಸೇರಿಕೊಂಡು ಸ್ವರ್ಯಪೂರ್ಣವಾದ ಒಂದು ಸಮೂಹವಾಗಿ ಕೆಲಸಮಾಡುವ ಸಮುದಾಯ ಎಂಬುದಕ್ಕನೆ ವರ್ತುಲ ನ್ರತ್ತ ಸೂಚಿಸುವುದ. ಕೇರಳದ ಪ್ರಮುಖವಾದ ಸಂಘ ನೃತ್ತಗಳೆಲ್ಲ (ಪ್ಪನ ಸಹಿತ)ವರ್ತುಲನೃತ್ತವಾಗಿವೆ. ಪೂರಕ್ಕಳಿ ಕೋಲ್‌ಕಳಿ ತಿರುವಾದರಕ್ಕಳಿ ಮೊದಲಾದವು ಇತರ ಉದಾಹರಣೆಗಳು

ಮದುವೆ ಸಂಗಾತಿಗಳು ಸಏರಿ ಮದುಮಗಳನ್ನು ಸಇಂಗರಿಸುವುದ ಮತ್ತು ಒಪ್ಪನ ಹೇಳವುದ(ಒಪ್ಪನ ವೆಕ್ಕುಕ) ನಡೆಯುತ್ತವೆ. ದಸಿಉ ಹಳೆ ರಈತಿ ಂದು ಜಾನಪದ ರೂಪ ಎಂಬ ನೆಲೆಯಲ್ಲಿ ಒಪನ ಯಾವಾಗ ಎಲ್ಲಿ

ನಡೆಯುತ್ತದೆರ ಎಂಬು ಹಿಂದೆಲ್ಲ ಊಹಿಸಿ ಹೇಳಬಹುದಿತತು. ಹಿಂದೆ ಸ್ವಭಾವಿಕವಾಗಿ ಒಂದು ಆಚರಣೆ ಎಂಬ ನೆಲೆಯಲ್ಲಿ ಮದುವೆ ಸಂಭ್ರಮದ ಭಾಗವಾಗಿ ಒಪ್ಪನ ನಡೆಯುವುದಿತ್ತು. ಇವತ್ತು ಪರಿಸ್ಥಿತಿ ಬದಲಿದೆ. ಮದುವೆಯಲ್ಲಿ ಪ್ರದರ್ಶನವಿಯಲು ಒಪನ ತಂಡಗಳು ಖರ್ಚುಕೊಟ್ಟರೆ ಬರುತ್ತವೆ. ಗಾಯನ ತಂಡಗಳು ಸಗಿವ ಹಾಗೆ ಈ ಹಿಂದೆ ತಾವೇ ಆಚರಣೆಗಾರರಾಗಿದ್ದ ಜನರು ಇದಕ್ಕಿಗ ಪ್ರೇಕ್ಷಕರಾಗಿ ಬದಲಿದರು. ಹಳೆಯ ಒಪನ ಎಂಬ ಸಥಳೀಯ ನೃತ್ತ ಇವತ್ತು ಅಸ್ತಿತ್ವದಲ್ಲಿ ಇಲ್ಲ ಎಂದದರ್ಥ. ಅದು ಅಸ್ವಾದಿಸಲು ಇರುವ ಒಂದು ಕಲಾರೂಪ ಮಾತ್ರವಾಗಿ ಮಾರ್ಪಟ್ಟಿದೆ. ಮಾಪ್ಪಿಳ ಸಮುದಯ್ಕೆ ಒಂದೊದಗಿದ ಸಾಂಸ್ಕ್ರತಿಕ ಪರಿವರ್ತನೆಯ ಫಲವಿದು.

ಮಾಪ್ಪಿಳಪಾಟಿನಲ್ಲಿ ಆಗಿರುವಂತೆ ಒಂದು ರಈತಿಯ ಸಾರ್ವಜನಿಕತೆ ಒಪನಕ್ಕೂ ದಒರಕಿದೆ. ಇವತ್ತು ಒಪ್ಪನ ಮಾಪ್ಪೀಳ ಸಮುದಯವರದು ಮಾತ್ರವಲ್ಲ ಗಡಿಗಳನ್ನು ಉಲ್ಲಂಘಿಸಿ ತನ್ನ ನೆಲೆಯ ಹೊರಗೆ ಅಉದ ರಂಗವೇ ತರೊಡಗಿದೆ. ಯುವಜನೋತ್ಸವ ಕ್ಲಪ್‌ವಾಷಿಕೋತ್ಸವ ಮತ್ತಿತರ ಹಬ್ಬಗಳಲ್ಲಿ ಇರುವ ಪ್ರದರ್ಶನ ವಿಷಯಗಳಲ್ಲಿ ಒಪ್ಪನ ಕೂಡ ಸೇರಿಕೊಂಡಿದೆ. ವಿವಾದದ ವೇಳೆ ಜೀವನದ ಒಂದು ವಿಶಿಷ್ಟ ಮುಹೂರ್ತದಲ್ಲಿ ನಡೆಯುತ್ತಿದ್ದ ಒಪ್ಪನವನ್ನು ರಂಗಕ್ಕೆ ದಾಟಿಸಿ ಆಸ್ವಾದಿಸಿಲು ಇರುವ ಮನೋರಂಜನಾ ಕಾರ್ಯಕ್ರಮವಾಗಿ ಬದಲಿಸಲಾಗಿದೆ. ವಿವಾಹದ ಯರ್ಥಾರ್ಥ ಸಂದರ್ಭದ ಅನುಕರಣೆ ಮಾತ್ರವಾಗಿ ರೂಪಾಂತರಗೊಂಡಿದೆ. ಇದರಿಂದ ಒಂದು ತಓರಬರುವ ಒಪನ ಒಂದು ನಾಡನೃತ್ತದಲ್ಲಿ ಅದೊಮದು ಸಾರ್ವಜನಿಕ ನೃತ್ತರೂಪ. ಒಂದು ನಾಡಕಲೆ ಹೇಗೆ ಸಾರ್ವಜನಿಕ ಕಲೆಯಾಗಿ ಬದಲಿತು ಎಂಬುಕ್ಕಿರುವ ಅತ್ಯಂತ ಉತ್ತಮ ಉದಾಹರಣೆ ಒಪ್ಪನ!

– ಸಂಪಾದಕ

.

ಒಪ್ಪನ

ಮಲಬಾರಿನ ಮುಸ್ಲಿಂ ಸಮುದಾಯದ ನಡುವೆ ಬಹಳ ಹಿಂದಿನಿಂದಲೂ ಪ್ರಚಲಿತವಾಗಿ ಇದ್ದ ಒಂದು ಕಲೆ ' ಒಪ್ಪನ' ನಿಖರವಾಗಿ ಇದು ಎಷ್ಟು ಹಳೆಯದು ಎಂಬುದಕ್ಕೂ ಒಪ್ಪನ ಎಂಬ ಹೆಸರು ಹಏಗೆ ಬಂತು ಎಂಬುದಕ್ಕೂ ಸ್ಪಷ್ಟವಾದ ಪುರಾವೆಗಳಿಲ್ಲಿ.

ಮಾಪ್ಪಿಳ ಪಾಟಿನ ಸಾಹಿತ್ಯದ ಒಂದು ಶಾಖೆಯ ಹೆಸರು 'ಒಪ್ಪನ' ಇದರಲ್ಲಿ ಒಪ್ಪನ ಮು*ಕ್ಕ (ಒಪ್ಪನ ಬಿರಿಯು) 'ಒಪ್ಪನ ಚಆಯರಲ್' (ಒಪ್ಪನ ಓರೆಯಾಗುವುದ) ಎಂಬ ರಈತಿ ಭೇದಗಳಿವೆ. ದ್ರತಗತಿಯಲ್ಲಿರವಂಥದು ಮು*ಕ್ಕುಂ' ವಿಲಂಬಗತಿಯಲ್ಲಿ ಹಾಡುವುದು ಚಾಯಲ್ ಸಾಹಿತ್ಯ, ಸಂಗೀತ ಮತ್ತು ತಾಳ ಇವುಗಳ ಸಂಗಮವೇ ' ಒಪ್ಪನ'

ಎರಡು ಕೈಗಳನ್ನು ಇದ್ದಕ್ಕೆ ನೀಡಿ ಅಂಗೈಗಳನ್ನು ಸೇರಿಸು ಎಂಬ ಅರ್ಥದಲ್ಲಿರವ ಅರಬಿ ಭಾಷೆಯ ಪದ ಹಫ್‌ನದಿಂದ ಒಪ್ಪನ ಬಂತು ಎಂಬ ಅಭಿಪ್ರಾಯವಿದೆ. ಸಮಿಳಿನಲ್ಲಿ ಒಪ್ಪನೆ ಎಂದೂ ಮಲಯಾಳದಲ್ಲಿ ಒಪ್ಪನ ಎಂದೂ ನೆಲಸಿದೆ ಒಪ್ಪನ ಎಂಬುದಕ್ಕೆ ಅಲಂಕಾರ ಎಂಬ ಅರ್ಥವೂ ಇದೆ.

'ಮೈಲಾಂಜಿ ಒಪ್ಪನ' (ಮದರಂಗಿ ಒಪ್ಪನ) ಎಂಬ ಹೆಸರಿನಲ್ಲಿ ಪ್ರಸಿದ್ಧವಾದ ಒಪ್ಪನ ಒಂದು ಕಾಲದಲ್ಲಿ ಬಹಳವಾಗಿ ಹರಡಿಕೊಂಡಿತ್ತು. ಮದುಮಗಳನ್ನು ಪರಿಚಾರಿಕೆಯರು ಸಿಂಗರಸಿ ಅಣಿಗೋಳೀಸುವುದೆ ಇದರ ಮುಖ್ಯವಾದ ಭಾಗ. ಆಡುವವರಲ್ಲಿ ಮುನ್ ಪಾಟುಕಾರ ರಉ(ಹಾಡಿನ ಮೊದಲಿಗರು) ಮತ್ತು ಪಿನ್ ಪಾಟುಕಾರರು (ಹಿಂಬಾಲಿಸಿ ಹೇಳುವವರು) ಇರುತ್ತಾರೆ. ಮುನ್ ಪಾಟು ಗಾರರು ಗಾಯಕರು ಪಿನ್ ಪಾಟುಗಾರರು ಚಪ್ಪಾಳೆ ತಟ್ಟಿ ತಾಳ ಹಿಡಿಯುವವರು. ಕುಳಿತು ನಿಂತೂ ಬಾಗಿಯೂ ಓರೆಯಾಗಿಯೂ, ಸಉತ್ತ ನಡೆಯುತ್ತಲೂ ಇವರೂ ಹೆಜ್ಜೆಯಿಕ್ಕುವರು. ಮೊದಲಿಗರು ಹಏಳುವ ಪದವನ್ನು ಇಡಿಯಾಗಿಯೂ ಯಾವುದೊ ತುಂಡನ್ನು ಮಾತ್ರವಾಗಿಯೂ, ಹಿಂಬಾಲಕರು ಹಾಡುತ್ತಾರೆ. ' ಚಾಯರ್' ಚಾಯಲ್ ಮು*ಕ್ಕುಂ ಹಾಡುವುದ ಶ್ರಮದಾಯಕ. ಹಾಗಾಗಿ ಅದನ್ನು ಹಿಂಬಾಲ ಕರು ಮುಟ್ಟಲಾರರು. ಹಾಡಿನ ಕ್ರಮಗತಿಯೆಂದರೆ ಚಾಯರ್ ಚಾಯಲ್ ಮು*ಕ್ಕು ಒಪ್ಪನ ಮು*ಕ್ಕು ಪುನಃ ಚಾಯಲ್ ಮುರುಕ್ಕಂ ಒಪನ ಮು*ಕ್ಕು?

ಮಾಪ್ಪಿಳ ಪಾಟುಗಳನ್ನೆ ಒಪ್ಪನಕ್ಕೂ ಬಳಸುವುದು ಕಂಬಿ (ಆದ್ಯಕ್ಷರಪ್ರಾಸ) ಕ*ತ್ತು (ದ್ರತೀಯಾಕ್ಷರ ಪ್ರಾಸ), ವಾಲ್ ಕಂಬಿ' (ಅಂತ್ಯಾಕ್ಷರ ಪ್ರಾಸ), ವಾಲುಮ್ಮಲ್ ಕಂಬಿ (ಅಂತಾದಿ) ಮೊದಲಾದ ಪ್ರಾಸಪದ್ಧತಿಗಳು ಈ ಪಾಟುಗಳಿಗೆ ಶ್ರುತಿಮಾಧುರ್ಯವನ್ನು ನೀಡುತ್ತವೆ. ' ಒಪ್ಪನ' ವಿವಿಧ ತರಗಳಲ್ಲಿ ಇರುವ ಕಾರಣ ಸಂದರ್ಭಕ್ಕೆ ಒಪ್ಪುವ ಹಾಗೆ ಪ್ರಸ್ತುತಿ ಇರಬೇಕು. ಕಿವಿಸುರಿಗೆ ಮದುವೆ ಸುನ್ನತ್ತ್‌ಮದುವೆ ವಿವಾಹ ಇತ್ಯಾದಿ ಹಿಂದೆ ನಮ್ಮ ಊರುಗಳಲ್ಲಿ ಒಪ್ಪನ ಪ್ರಸ್ತುತಪಡುವ ಹಬ್ಬಗಳು.

'ಒಪ್ಪನ್' ದಲ್ಲಿ ಪಾಟುಗಳಿಗೆ ಎಂಬ ಹಾಗೆ ವೇಷಭೂಷಣ ಸೋಗಸಿಗೂ ಚಲನೆಗಳಿಗೂ ಪ್ರಾಮುಖ್ಯವಿದೆ. (ವೇಷ ವೆಂದರೆ ವಿವಿಧ ಊರುಗಳಲ್ಲಿ ಹಳೆಗಾಲದ ಮುಸ್ಲಿಂ ಸ್ತ್ರೀಯರ ವಏಷವೇ) ಪರಂಪರಾಗತ ವೇಷಗಳನ್ನೆ ಒಪ್ಪನದಲ್ಲಿ ಬಳಸುವುದ ಹಳಗಾಲದಿಂದಲೆ ಮುಸ್ಲಿಂ ಸತ್ರೀಯರು ಆಭರಣ ಪ್ರಿಯರಾಗಿರುವುದರಿಂದ ಒಪ್ಪನ ದಲ್ಲೂ ಧಾರಾಳ ಆಭರಣಗಳ ಬಳಕೆಯಿದೆ. ಕುಮ್ಮತ್ತ (ಕಿವಿಯ ಆಭರಣ) ಕೊರಲಾರಂ (ಕೊರಳಹಾರ), ಚಏಂಗೆಲಸ್ಸ (ನೆಕಲೆಸ್ಸ) ಕಾ*ಕ್ಕಲ್ (ಕೊರಳಲ್ಲಿ ಧರಿಸುವ ಆಭರಣ), ಅರಇಞ್ಞಾಣಂ(ನೇವಳ) ಇತ್ಯಾದಿ ಅಂದಿನ ಆಭರಣಗಳು, ಕೈಗಳಲ್ಲಿ ಬಳೆಗಳೂ ಆವಶ್ಯಕ.

ಒಪ್ಪನ ಎಂದೊಡನೆ ನಮ್ಮ ಮನಸ್ಸಿಗೆ ಬರುವುದ ಸ್ತ್ರೀಯರು ನಡೆಸುವ ಒಇಪ್ಪನವೇ ಆದರೆ ಆರಭಂದಲ್ಲಿ ಗಂಡು ಒಪ್ಪನ ಸಂಘಗಳೇ ಇದ್ದವು. ಗಂಡಸರ ಒಪ್ಪನ ಹಾಡಿನಲ್ಲೂ ಪ್ರಸ್ತುತಿಶೈಲಿಯಲ್ಲೂ ಹೆಂಗಸರಿಗಿಂತ ಭಿನ್ನ.

ಗಂಡಸರ ಒಪ್ಪನದಲ್ಲಿ ಮದುಮಗನ ಸಾನ್ನಿಧ್ಯವಿರುತ್ತದೆ. ಹೆಂಗಸರು ವರ್ತುಲಾಕೃತಿಯಲ್ಲಿ ನಿಂತು ಬಾಗಿ ಓರೆಯಾಗಿ ರಾಗವಾಗಿ ಹ ಆಡಿ ಸುತ್ತಬರುತ್ತಾರಾದರೆ. ಗಂಡಸರು ನಿಂತು ಕುಳಿತು ಮಾತ್ರ ಒಪ್ಪನ ಹಾಡುತ್ತಿದ್ದರು. ಪಾಟು ಚಾಯಲ್ ನಲ್ಲಿ ಶುರುವಾಗಿ ಮು*ಕ್ಕುಂಗೆ ತಲಪುತ್ತಿರುವಂತೆ ಆವೇಶದೊಂದಿಗೆ ಮಂಡಿಯೂರಿಯೂ ಎದ್ದುನಿಂತೂ ಹಾಡುತ್ತಾರೆ. ಇವರ ವೇಷ ಪ್ರಾದೇಶಿಕವಾದ ಮಾಪ್ಪಿಳ ಜನರಲ್ಲಿ ಸಾಮಾನ್ಯವಾಗಿ ಕಾಣುವಂಥದೇ.

ಕೌಟುಂಬಿಕವಾದ ವಿವಿಧ ಹಬ್ಬಗಳ ಭಾಗಗಳಾಗಿ ಹಿಂದಿನಂತೆ ಇಂದಿಗೂ ಒಪ್ಪನ ಪ್ರಸ್ತುತಗೊಳ್ಳುವುದುಂಟು ಅದರಲ್ಲಿ ಈ ಕಾಲದಲ್ಲಿ ಈ ಉಂಟಾಗಿರುವ ವ್ಯತ್ಯಾಸವೆಂದರೆ ಒಂದು ಕಲಾಪ್ರದರ್ಶನ ಎಂಬ ನೆಲೆಯಲ್ಲಿ ಮನೆಗಳಿಗೆ ಹೋಗಿ ಒಪ್ಪನ ನಡೆಸಿಕೊಡುವ ತಂಡಗಳು ಕಾಣಿಸಕೊಂಡಿವೆ. ಎಂಬುಆಗಿದೆ.

ಸಿನೆಮಾ, ನಆಟಕ, ಟಿ.ವಿ. ಸಈರಿಯಲ್‌ಗಳು ಮೊದಲಾದವುಗಳಲ್ಲಿ ಒಪ್ಪನ ಜಾಗಹಿಡಿದು ಮೂರು ದಶಕಗಳೇ ಸಂದಿವೆ. ವೇಷ ಚಲನೆಗಳಲಲಿ ಹಲವು ಬಗೆ ಪರಿಷ್ಕರಣೆಗಳು ಉಂಟಾಗಿವೆ. ಸಆಮಾಜಿಒಕ ಹಬ್ಬ ಉತ್ಸವಗಳಲ್ಲಿ ಸದಾರ್ವಜನಿಕ ವೇದಿಕೆಗಳಲ್ಲಿ ಒಪ್ಪನ ಪ್ರರ್ಸನ ಸಾಮಾನ್ಯವಾಗಿಬಿಟ್ಟಿದೆ. ಒಂದು ಪ್ರತ್ಯೇಕ ಸಮುದಾಯದ ಒಂದು ಪ್ರತ್ಯೇಕ ಜೀವನ ಪರಿಸ್ಥಿತಿಯ ಕಲಾ ಆವಿಷ್ಕಾರ ಎಂಬದಲ್ಲಿಂದ ಒಪ್ಪನ ಮೆಲ್ಲಮೆಲ್ಲಗೆ ರೂಪ ಬದಲಿಸಿಕೊಳ್ಳುತ್ತಿದೆ.

ಕೋಲ್ಕಳ(ಕೋಲಾಟ)

ಇತರೆಲ್ಲ ಪ್ರದೇಶಗಳಲ್ಲಿರುವಂತೆ ಕೇರಳದಲ್ಲೂ ಕೋಲ್‌ಕ್ಕಳಿ' (ಕೋಲಾಟ) ಪ್ರಾದೇಶಿಕ ಕಲಾರೂಪವಾಗಿದೆ. ಇದಕ್ಕೆ ಸ್ಥಳೀಯ ಪಾಠಭೇದಗಳು ಪ್ರಚಲಿತವಾಗಿವೆ. ಅದಲ್ಲದೆ ವಿಶಿಷ್ಟ ಸ್ವಭಾವವಿರುವ, ಮೂಪ್ಪಿಳಗಳಿಗೆ ಮಾತ್ರವಾದ ಕೋಲಾಟವೂ ಇದೆ. ಮಾಪ್ಪಿಳಗಳಲ್ಲದೆ ಕೋಲಾಟದಲ್ಲಿ ತ್ರಿಮೂರ್ತಿಗಖ ಸಾನ್ನುಧ್ಯವನ್ನು ಸಂಕೇತಿಸಿ ಮೂರು ಬತ್ತಿಗಳುಳ್ಳ ದೀಪವನ್ನು ಉರುಸಿ ಅದರ ಸುತ್ತ ದೇವತಾ ಸ್ತೋತ್ರ ಹೇಳುತ್ತಲೇ ಆರಂಭಿಸುವುದು. ಭಕ್ತಿ ತುಂಬಿರುವುದರಿಂದ ಬಹುಶಃ ಇದಕ್ಕೆ ವೇಗ ಕಡಿಮೆ ಹರಿವೂ ಕಡಿಮೆ ಮಾಪ್ಪಿಳ ಕೋಲಾಟದಲ್ಲಿ ಎರಡನೆ ಸುತ್ತಿನಲ್ಲಿ ವೇಗ ಸೇರಿಕೊಳ್ಳುತ್ತದೆ. ಒಳ್ಳೆಯ ಹುಡಿಹಾರಿಸುವಿಕೆ. ಕಡುಪು ಅಭ್ಯಾಸಗಳು, ಸ್ವಂತ ಮನೋಧರ್ಮಗಳು ಇವೆಲ್ಲ ಒಗ್ಗೂಡಿದರೆ ಮಾಪ್ಪಿಳಕೋಲಾಟ ಸಂಪೂರ್ಣ ಗಮ್ಮತ್ತಿನ ವಿನೋದವಾಗಿರುತ್ತದೆ. ಅ*ಕ್ಕಲ್ ರಾಜನ ಸ್ಥಾನರೋಹಣ ಚಡಂಗಕ್ಕೆ ಗಾಂಭೀರ್ಯ ಸೇರಲು ಮಾಪ್ಪಿಳಗಳು ಒಟ್ಟು ಸೇರಿ ರೂಪಿಸಿರುವಂಥದು ಮಾಪ್ಪಿಳಕೋಲಾಟ ಎಂದು ನಂಬಲಾಗುತ್ತಿದೆ. ಆ ಕಾಲಘಟ್ಟದಲ್ಲಿ ಕಂಡೋಟ್ಟಿ ಓಟ್ಟು ಪಾರಕ್ಕಲ್ ಮೋಯನ್‌ಕುಟ್ಟಿ ವೈದ್ಯರು ಎಂಬವರು ಕಣ್ಣೂರಿನಲ್ಲಿದ್ದರು. ಅವರೇ ತಾಳವಿಲ್ಲದ ಒಪ್ಪನ ಕಳಿ ಎಂಬ ಹೆಸರು ಹೇಳದ ಒಪ್ಪನ ಚಾಯಲ್ ಮು*ಕ್ಕಂ ಆಗಿಕಳಿ ಪಾಟು ರಚಿಸಿದರು ಎಂದು ಐತಿಹ್ಯ ಹೇಳುತ್ತದೆ.

'ಮನ್ನಿಲ್ ಮಿಕಂದ ಬಹು ಮಾನಮೂಂ ಅ*ಕ್ಕಲ್ ಮಹಿಮಸುಖತ್ತಿಲ್ ವಾ* ಅಲಿ ರಾಜ ಹಬೀಬ್ ಸುಲ್‌ತ್ತಾನ್'	ನೆಲದಲಿ ಮಿಗುವ ಬಹು ಮನದಾ ಅ*ಕ್ಕಲ ಮಹಿಮೆಸುಖದಲಿ ಬಾಳುವ ಅಲಿ ರಾಜ ಹಬೀಬ್ ಸುಲ್ತಾನ್

ಇದು ಮು*ಕ್ಕಂನ ಮೊದಲ ಸಾಲು

ಉದತ್ತೆ ಮುಹಿಯುದ್ದಿನ್ ಪಳ್ಳಿಡೆಭಾತ್ತೆ	ಉದದ ಮುಹಿಯುದ್ದಿನ್ ಪಳ್ಳಿಯಭಾಗದಿ ಬಲವಾದಿ

ഊക്കായിട്ടോരു പന്തൽ യുന്തീതാനൻ	ಒಂದು ಚಪ್ಪರ ಮಾಡಿದ

ಹೀಗೆ 'ಮುಙುಕ್ಕಂ'ನ ಎರಡು ಚರಣ ಆರಂಭಗೋಳ್ಳುವುದು. ಮೂರು ಸಾಲು ದ್ರುತಗತಿಯಲ್ಲಿರುವ ವೃತ್ತಗಳಲ್ಲಿ ಹಾಡುವುದು ಪದ್ಧತಿ.

ಅಡಕ್ಕತಾಳದ ವರೆಗೆ ಪಾಟಿನಲ್ಲಿ ಒಳಗೊಳ್ಳುವ ಈ ಕಳಿಯನ್ನು ಸಮುದ್ರಕೆಲಸಗಾರನಾದ ಕಾಪ್ಪಾಟ್ಟಿನ ಪೋಕ್ಕನ್ ಕುರಿಕ್ಕಳ್ ಕಣ್ಣೂರಿನಲ್ಲಿ ಕರಿತು ಕಣ್ಣೂರಿನ ತೆಂಕುಭಾಗದ ತಿಕ್ಕೋಡಿ ಕೋಯಿಲಾಂಡಿ ಕಾಪ್ಪಾಡ್, ಕೋ*ಕ್ಕೋಡ್ ಮೊದಲಾದೆಡೆ ಶಿಷ್ಯರಿಗೆ ಕಲಿಕೊಟ್ಟರು.ಕೋಟಿಕ್ಕೋಡಿನವರಾದ ಹುಸೇನ್ ಕುರಿಕ್ಕಳ್, ಇಬ್ರಾಹಿಂ ಕುರಿಕ್ಕಳ್ ಮೊದಲಾದವರ ಬಳಿ ಅನೇಕ ಸಿಷ್ಯರುತಯಾರಾದರು ಇವತ್ತಿನ ಆಲಿಕ್ಕುಟ್ಟಿ ಕುರಿಕ್ಕಳ್ ವರೆಗೆ ಪರಂಪರೆ ಬೆಳೆಯಿತು.

ಮೊದಲಾಗಿ ಆಟ ಆರಂಭವಾಗುವುದು ತೆ*ಕ್ಕೋಲ್ ಮ*ಕೋಲಿನಲ್ಲಿ. ಅಲ್ಲಿಂದ ಚಲನೆ ಶುರುವಾಗುವುದು 'ತೆ*ಙ್ಙಡಿ ಮಿನಿಕ್ಕಳಿ' ಅನಂತರ ಅದರಲ್ಲಿ ಮಿನಿಪೋಕ್ಕು; ಕೊಡುತ್ತುಪೋಕ್ಕು ತಕರ್ತಾ ಪೋಕ್ಕು' ಇವು ಮುಗಿದರೆ ಒಂದು ಅಡಕ್ಕ ಆಯಿತು.

ಇದೇ ರೀತಿ ಅಂಜಡಕ್ಕಂ(ಐದು ಅಡಕ್ಕ) ಕಳಿಯಿದೆ ಒಂದರಿಂದ ಐದರ ವರೆಗೆ ಬಿಗಿವುಹೊಂದಿ ಕಳಿ ಮುಂಬರಿಯುತ್ತದೆ. ಕೊನೆಯ ಮಿನಿಪೋಕ್ಕು ಹೇಳಿ ಕಳಿ ಅಡಕಗೋಳಿಸುವುದು ಪದ್ಧತಿ.

ಅಡಕ್ಕೆ ತಾಳ ಹೀಗಿರುತ್ತದೆ
'ಇಡಿಪೊಡಿ ತಮರಂ ಇಮಾ ಅಲಿ
ವರವುಂ ಅಲಿಕೋಟ್ಟಿ ಪೊಳಿಯುಂ
ತಾಳ ತಾತಿಕ ತಿತ್ತ ಅಲ್ಲಿ
ತಕತ್ತೆತ್ತಂ ತೆಯ್ಯಂ ತಾ
ಇಲ್ಲಿಗೆ ಕಳಿ ಕೊನೆಗೊಳ್ಳುತ್ತದೆ

ಕೋಲಾಟಗಳಲ್ಲೆಲ್ಲ ಅತ್ಯಂತ ಕಠಿನವೂ ಕಲಿಯಲು ಮನಸ್ಸಿನ ದೃಢತೆಯೂ ಸಾಧಿಸುವ ಕೆಚ್ಚು ಆವಶ್ಯಕವಾಗಿರುವಂಥದುಮಾಪ್ಪಿಳ ಕೋಲಾಟ. ತಾಳ ಒಮ್ಮೆಗೆ ಗಟ್ಟಿಯಾದರೆ ಹೆಜ್ಜೆಬದಲಿಕೆ ಅದರೊಂದಿಗೆ ಹಾಡನ್ನು ಸೇರಿಸಿ ಹೆಣೆದುಕೊಂಡು ತಿರುಗಿ ಆಟವನ್ನು ಕೋದು ಕಲಿತುಕೊಳ್ಳಲು ಕಷ್ಟವಿಲ್ಲ.

ದಫಮುಟ್ಟ (ಡಪ್ಪು ತಟ್ಟು)

ಅರಬಿ ಸಂಸ್ಕೃತಿಯಿಂದ ಕೇರಳಕ್ಕೆ ಬಂದು ತಲಪಿದ ಒಂದು ಕಲಾರೂಪ ದಫ ಮುಟ್ಟಿ ಇದುಒಂದು ಸಾವಿರದ ನಾನ್ನೂರು ವರ್ಷಗಳ ಹಿಂದೆಯೆ ಮದೀನದಲ್ಲಿ ಪ್ರಚಾರದಲ್ಲಿತೆಂದು ದಾಖಲೆಯಿದೆ.ಈ ದಫ್ ಹಳಗಾಲದಲ್ಲಿ ಉಪಯೋದಲ್ಲಿದ್ದುದು ಪಳ್ಳಿ(ಮಸೀದಿ) ಗಳಲ್ಲೂ ಒಳಜಾಗಗಳಲ್ಲೂ ಮನೆಗಳಲ್ಲೂ ಜಗಲಿ ದಿನ್ನೆಗಳಲ್ಲೂ ಮಾತ್ರವಾಗಿತ್ತು. ಮತಾಚರಣೆಯ ಭಾಗವಾಗಿಮಾತ್ರ ಅದರ ಬಳಕೆಯಲ್ಲಿದ್ದರಬೇಕು. ಹಾಗಾಗಿ ಅಷ್ಟೆಕ್ಕೆ ಅದು ಸೀಮಿತವಾಗಿತ್ತು. ಕಳೆದ ಕಾಲಗಳಲ್ಲಿ (ಪೂರ್ವಿಕರು) ರೋಗ ನಿವಾರಣೆಗೂ ರೋಗಶಮನಕ್ಕೂ ಹರಕೆ

ಹೊತ್ತು ನಡೆಸುತ್ತಿದ್ದ ಒಂದು ಅನುಷ್ಠಾನವಾಗಿ ಮಾತ್ರವೆ ಇದನ್ನು ಗ್ರಹಿಸಿದ್ದರು. ಅನಂತರ ಸಂಭ್ರಮದ ವೇಳೆಗೂ, ಯುವಜನೋತ್ಸವದಲ್ಲೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಇದು ಕಾಣಿಸಿ ಕೊಳ್ಳತೊಡಗಿತು.

ಎಂಟು ಇಂಚು ವ್ಯಾಸ ನಾಲ್ಕು ಇಂಚು ಎತ್ತರ ಮತ್ತು ಮುಕ್ಕಾಲಿ ಇಂಚು ದಪ್ಪದ ಹಲಸಿನ ಬೇರಿನಿಂದ ಕೆತ್ತಿ ತೆಗೆದ ಕುತ್ತಿಗೆ ಆಡಿನ ಚರ್ಮವನ್ನು ಮುಚ್ಚಿ ತಲೆಗೆ ಹಿತ್ತಾಳೆಯಿಂದ ಕಟ್ಟಿ ತಯಾರಿಸುವ ಉಪಕರಣ ದಫ ಇದಕ್ಕೆ ಬಳಕೆಯಾಗುತ್ತಿದ್ದು ಅರಬಿ ಬಐತ್ತು(ಅರಬಿ ಹಾಡು) ಗಳಾಗಿದ್ದವು ಇದು ಸಲಾದೊಂದಿಗೆ ಶುರುವಾಗಿ ಅಷೇ*ಕ್ ನಲ್ಲಿ ಕೊನೆಗೊಳ್ಳುತ್ತದೆ.

ಸಾವಿರದ ನಾನ್ನೂರು ವರ್ಷಗಳ ಹಿಂದೆ ಮುಹಮ್ಮದ್ ನಬಿ ಮಕ್ಕದಿಂದ ಮದೀನಕ್ಕೆ ಪಲಾಯನಗೈದಾಗ ಮದೀನದ ಅನ್ಸಾರಿ ಹುಡುಗಿಯರು ಎಂಟು ಇಂಚು ವ್ಯಾಸದ ಸಣ್ಣ ದಫ್ ತಟ್ಟಿ ಬೈತ್ ಸೋಲ್ಲು ಹೇಳಿ ಸ್ವಾಗತಿಸಿದ್ದರು. ಆದರೂ ಕೇರಳದಲ್ಲಿ ಮುಸ್ಲಿಂ ಸ್ತ್ರೀಗಳು ದಫ್ ತಟ್ಟಿದುದಿಲ್ಲ.

ಈಚೆಗೆ ಕೆಲ ತಂಡಗಳು ಮಹಿಳೆಯರ ದಫ್ ಕಾರ್ಯಕ್ರಮ ಅಳವಡಿಸಲು ತಯಾರಾದವು ಮಹಿಳೆಯರು ದಫ್ ಅನ್ನು ತಲೆಯ ಮಏಲಕ್ಕೂ ಮೋಣಗಂಟಿಗಿಂತ ಕೆಳಗೂ ಒಯ್ಯುವ ಹಾಗಿಲ್ಲ. ಈ ನಿಯಮದೊಂದಿಗೆ ಬಾಗಿ, ಪಕ್ಕಕ್ಕೆ ಒಲೆದು ಮಂಡಿಯೂರಿ ಕುಳಿತು ಹೀಗೆಲ್ಲ ದಫ್ ಬಾರಿಸಿ ಆಡುವ ರೀತಿ ರೂಢಿಸಿಕೊಳ್ಳಲಾಯಿತು ಎಂಟು ಮಂದಿಗೆ ಕಡಿಮೆಯಿಲ್ಲದೆ. ಹತ್ತಕ್ಕೆ ಮಿಕ್ಕದೆ ಸ್ತ್ರೀಯರ ದಪ್ಪಿನಾಟ ನಡೆಯುತ್ತಿದೆ.

ಅ*ಬನ

ಇದೊಂದು ಭಕ್ತಿ ಪ್ರಧಾನ ಆಚರಣೆ ಅರೇಬಿಯದಿಂದ ಭಾರತಕ್ಕೆ ಮತಪ್ರಚಾರಕ್ಕಾಗಿ ಒಂದವರೊಂದಿಗೆ ಅ*ಬನ ಉತ್ತರಭಾರತದಲ್ಲೂ ಕೇರಳದಲ್ಲೂ ಪ್ರಚಾರಕ್ಕೆ ಬಂತು. *ತ್ತಿಬ್ ಕುತ್ತು*ತ್ತಿಬ್ *ಫಾ ಈಶೈಖಿನ ಹೆಸರಿನಲ್ಲಿ ನಡೆಯುವ *ತ್ತಿಬ್ ಮೊದಲಾದ ಆಚರಣೆಗಳೊಂದಿಗೆ ಅ*ಬಿನ ಪ್ರಸ್ತುಗೊಳ್ಳುತ್ತದೆ.

ಹದಿನೆಂಟು ಇಂಚು ವ್ಯಾಸ ಮೂರು ಇಂಚು ಎತ್ತರ. ಮುಕ್ಕಾಲು ಇಂಚು ದಪ್ಪ ಇರುವ ಐದು ಬಳೆಗಳನ್ನು ಸೇರಿಸಿ, ಚರ್ಮ ಮುಚ್ಚಿ ಮೇಲಿನ ಬಳೆ(ಕುತ್ತಿ)ಗೆ ಗಟ್ಟಿಯಾಗಿ ತಾಗಿಸಿ ಐದು ಗಗ್ಗರ ಜೋಡಿಸುತ್ತಾರೆ. ಅಯನಿ ಹಲಸಉ ಅಥವಾ ಪನಿಚ್ಚಿ ಮರದ ಬೇರಿನಿಂದ ಕುತ್ತಿ ತಯಾರಾಗುತ್ತದೆ. ಆಡಿನ ಚರ್ಮ ಮುಚ್ಚಿದರೆ ಹೆಚ್ಚಿನ ನಾದ ಸಿಗುತ್ತದೆ.

ಹಳಗಾಲದಲ್ಲಿ ಸಿಡುಬು ಕೊಲೆರಾ(ವಾಂತಿಭೇದಿ) ಇತ್ಯಾದಿ ಗುಣವಾಗದ ಕಾಯಿಲೆಗಳು ಹಬ್ಬುವಾಗ ದೇವರಲ್ಲಿ (ಅಲ್ಲಾಹುವಿನಲ್ಲಿ) ಸಾಮೂಹಿಕ ಪ್ರಾರ್ಥನೆ ಹಾಗೂ ಹರಕೆ ಸಲುವಳಿ ಕೂಟಗಳಲ್ಲಿ ಈ ವಬಾಧ್ಯ(ಅ*ಬಿನ) ತಟ್ಟುವುದಿತ್ತು. ಇದೊಂದು ಮತಾಚರಣೆ ಈ ಚೆಗೆ ಅ*ಬಿನ ಬಾರಿಸಿ ಆಡುವ ನೃತ್ಯ(ಕಳಿ) ಕಾರ್ಯಕ್ರಮವಾಗಿ ಬದಲಿರುವುದಾದರೂ. ಇವತ್ತೂ ಹರಕೆ ಹೇಳಿಕೊಂಡು ಆತ್ಮಶುದ್ಧಿ ಮಾಡಿಕೊಳ್ಳುವುದಕ್ಕಾಗಿ ಈ ಉಪಕರಣ ಸಹಿತವಾದ ಭಕ್ತಿ ಆಚರಣೆ ವಿರಳವಲ್ಲ.

ಇದರ ಗಾನಾಲಾಪದ ಆರಂಭ

ಮುಜಾದಿಯೂ.........ಮುಜಾದಿಯೂ.........ಮುಜಾದಿ...... ಎಂದು.

ಅನೇಕ ಬೈತ್ತ್ (ಅರಬಿ ಹಾಡು) ಗಳನ್ನು ಹಏಳಿ ಅ*ಬಿನವನ್ನು ಶರೀರದ ಎಲ್ಲ ಭಾಗಗಳಿಗೂ ತಟ್ಟಿ ತಾಳ ಕ್ರಮ ತಪಪ್ದೆ ದ್ರುತಗತಿಯ ಬೈತ್ತಿಗೆ ಸರಿಯಾಗಿ ದೇಹಭಾಗಗಳಲ್ಲಿ ಚಲನೆಗೊಳಿಸುವುದು ಇದರ ವೈಶಿಷ್ಟ್ಯ.

ಜಾತ್ತಿಬ್ ಎಂಬ ಅನುಷ್ಠಾನದಲ್ಲಿ ವಾದನ ಬಿರುಸು ಪಡೆದಂತೆ ಮಬ್ಬು ಬಎಳಕಿನಲ್ಲಿ ಒಂದು ಇಂಚು ದಪ್ಪದ ದಬ್ಬೂಸ್ (ಮೊನೆಯಿರುವ ಆಯುಧ)ದಿಂದ ಎದೆಗೆ ಚುಚ್ಚುವುದು ನಡೆಯುತ್ತದೆ. ಅಂತೆಯೆ ಹರಿತವಾದ ಕಠಾರಿಯಿಂದ ಹೊಟ್ಟೆಗೆ ತಿವಿಯುವುದು, ಸೂಜಿಯಂಥ ಸಾಧನವನ್ನು ತೋಳು, ಗಲ್ಲ, ನಾಲಿಗೆ, ಕಂಕುಳು ಮೊದಲಾದೆಡೆ ಸುರಿಯುವುದು ಇತ್ಯಾದಿ ನಡೆಯುತ್ತದೆ. ಈ ಬಗೆಯ ಪ್ರದರ್ಶನಗಳಿರುವ 'ಜಾತ್ತೀಬ'ನ್ನೆ 'ಕುತ್ತುಜಾತ್ತೀಬ್' ಎಂದು ಕರೆಯುವುದು. ಬೈತ್ತಿನ ಮತ್ತು ತಟ್ಟುಗೆಯ ಬಿರುಸು ಏರಿದಂತೆ ಆಯುಧ ಪ್ರಯೋಗವಾಗುತ್ತದೆ. ಗುಂಪಾಗಿ ಸೊಲ್ಲು ಹೇಳುವವರು ತಟ್ಟು (ತಾಳ) ಬಿಡದೆ ಹೇಳಿದರೆ ಮಾತ್ರ ಆಯುದ್ಧ ಬಳಸಲು ಸಾಧ್ಯ. ಆದ್ದರಿಂದ ಇದರ ಪ್ರದರ್ಶನದಲ್ಲಿ ಪರಿಣಿತಿ ಇರುವವರಷ್ಟೇ ಇದರಲ್ಲಿ ಪಾಲುಗೊಳ್ಳಬಲ್ಲರು.

'ಜಾತ್ತೀಬ್' ನ ಕೊನೆಯ 'ಬೈತ್'– 'ಸಲಾವತ್ತಿ ಅಲನ್ನಂಬಿ ವಸಲಾಮಿ'

ಬಾರಿಸುವಿಕೆ ಬಿರುಸಿನೊಂದಿಗೂ ಪ್ರಾರ್ಥನೆಯೊಂದಿಗೂ ಕೊನೆಗೊಳ್ಳುತ್ತದೆ.

ಪಡಯಣಿಯ ಕಾಲನ್ ಕೋಲು

(ಅನುಷ್ಠಾನ ನೃತ್ಯ)

ಎಜುಮಜೂರ್ ರಾಜರಾಜವರ್ಮ

ಟಿಪ್ಪಣಿ

ಗ್ರಾಮೀಣ ಕಲೆಗಳಲ್ಲಿ ನೃತ್ಯ (ನೈತ್ಯ), ನಾಟಿಕ ಎಂಬ ವರ್ಗೀಕರಣ ಹಲವೊಮ್ಮೆ ಅತಿವ್ಯಾಪ್ತಿಯದಾಗಿಬಿಡುವ ಸಾಧ್ಯತೆ ಇದೆ. ವಿಶೇಷತಃ ಅನುಷ್ಠಾನ ಕಲೆಗಳ ಮಟ್ಟಿಗೆ 'ಪಡಯಣಿ'ಯನ್ನು ಬೇಕಾದರೆ ಒಮದು ನಾಟಕರೂಪವೆಂದು ತೆಗೆದುಕೊಳ್ಳಬಹುದು. ಕಾರಣ ರಂಗಪ್ರಸ್ತುತಿಯ ಹಿಂದುಗಡೆ ಒಂದು ಕತೆಯಿದೆ. ಆ

ಕಥೆ ಪೂರ್ವಾಪದ ಸಂಬಂಧದೊಂದಿಗೆ ಪೂರ್ಣವಾಗಿ ರಂಗದಲ್ಲಿ ಪ್ರಸ್ತುತಪಡುವುದಿಲ್ಲ ಎಂಬುದು ಮಾತ್ರ ಗಮನಾರ್ಹ. ಆದರೆ ಮುಡಿಯೇಜ್ಹ್, ನಿಣಬಲಿ ಮೊದಲಾದ ಕಲಾರೂಪಗಳು ಪೂರ್ಣವಾದ ನಾಟಿಕಗಳಾಗಿವೆ. ಪಡಯಣಿಯಲ್ಲಿ ಕಾಳಿ ತನ್ನ ಪರಿವಾರದೊಮದಿಗೆ ಪ್ರದರ್ಶನ ಸ್ಥಳಕ್ಕೆ ತಲಪುವುದು, ಅನಂತರ ಆ ಗುಂಪಿನಲ್ಲಿರುವ ಯಕ್ಷಿ, ಮಜುತ, ಕಾಲನ್ ಮೊದಲಾದ ಒಂದೊಂದೇ ಪತ್ರ ಪ್ರತ್ಯೇಕವಾಗಿ ನೃತ್ಯ ಆಡುವುದು ಇರುತ್ತದೆ. ಇದಲ್ಲದೆ ಪಾತ್ರಗಳು ಪರಸ್ಪರ ವರ್ತನೆಯ ಮೂಲಕ ಕಥೆಯನ್ನು ಮುಮದಕ್ಕೆ ಒಯ್ಯುವ ರೀತಿ ಪಡಯಣಿಯಲ್ಲಿಲ್ಲ. ಆದ್ದರಿಮದಲೆ ಇದನ್ನು ನೃತ್ಯವಾಗಿ ಪರಿಗಣಿಸಲಾಗುತ್ತದೆ.

ಮನುಷ್ಯನು ಭೌತಿಕವಾಗಿ ಜೀವಿಸುವಾಗ ಆ ಜೀವನ ನಡೆಸುವುದರಲ್ಲಿ ಮಾನಸಿಕವಾದ ಯಥಾರ್ಥತೆಗಳಿಗೆ ದೊಡ್ಡ ಪಾಲು ಇರುತ್ತದೆ. ಅವನ ಭಾಗ್ಯವನ್ನು ನಿರ್ಣಯಿಸುವುದರಲ್ಲಿ ಭೌತಿಕವಲ್ಲ ಒಟ್ಟು ಹಲವಾರು ವಿಷಯಗಳು ಕೆರಲಸ ಮಾಡುತ್ತವೆಂದು ಆತ ಭಾವಿಸುತ್ತಾನೆ. ರೋಗ, ಮರಣ, ಬೆಳೆ ಅಥವಾ ಬೇಸಾಯ, ಸಂತತಿ ಇಲ್ಲದಿರುವಿಕೆ ಮೊದಲದ ಎಲ್ಲ ಕಠಿನಸ್ಥಿತಿಯೂ ಮಾನವನಿಗೆ ಉಮಟಾಗುವುದು ಅಲೌಕಿಕ ಶಕ್ತಿಯ ಹಸ್ತಕ್ಷೇಪದ ಕಾಣವೆಂದು ಎಣಿಸಿದ್ದರು. ಅವುಗಳಿಮದ ವಿಮುಕತಿ ಪಡೆಯುವ ದಾರಿಗಳಲಿ ಒಮದು ಆ ಬಗೆ ಶಕ್ತಿಗಳ ಅನುಷ್ಠಾನಗಳನ್ನು ಏರ್ಪಡಿಸಿ ಹಾಡಿ ಸಂತುಷ್ಟಗೊಳಿಸುವುದು ಎಂಬುದಾಗಿದೆ. ಅನುಷ್ಠಾನ ನೃತ್ಯಗಳ ಪ್ರಮುಖ ಧರ್ಮ ಅದೇ. ಆ ಬಗೆ ಒಂದು ಆಚರಣೆಯೇ 'ಪಡಯಣಿ'. ಆದ್ದರಿಮದ ಪಡಯಣಿ ಎಂಬ ನೃತ್ಯರೂಪದ ಕುರಿತಾಗಿ ಅಧ್ಯಯನ ನಡೆಸುವ ಮೂಲಕ ಪಡಯಣಿಯಲ್ಲಿ ಭಾಗಿಗಳಾಗುವ ಜನರ ಮಾನಸಿಕ ಅವಸ್ಥೆಯನ್ನು ತಿಳಿಯಲೂ ಸಾಧ್ಯವಿದೆ. ಸಾಂಘಿಕತೆಯ ಮನಸ್ಸಿನಲ್ಲಿ ಸಂದರ್ಭ ಬಂದಾಗ ಅರಳಲು ಪಕ್ವಸ್ಥಿತಿಯಲ್ಲಿ ಸಜ್ಜಾಗಿರುವ ವಿಭಿನ್ನ ಸಂಕಲ್ಪನೆಗಳಿವೆ. ಕಾಲೊನ್, ಯಕ್ಷಿ ಮೊದಲಾದ ಈ ಬಗೆ ರೂಪಗಳು ವರ್ಷಕ್ಕೊಮ್ಮೆ ರಾತ್ರಿಯಲ್ಲಿ ಮನಸ್ಸಿನಿಂದ ಹೊರಕ್ಕೆ ಇಳಿಯುತ್ತವೆ. ಆಡಿ ಹರಿಸಿ ಸೇರಿದವರನ್ನು ಸಂತೋಷಪಡಿಸಿ ಹಿಮದಿರುಗುತ್ತವೆ. ಅದರೊಮದಿಗೆ ಮನಸ್ಸಿನ ಒತ್ತಡದ ಬಿಗುವು ಸಡಲಿಸಿಕೊಂಡು ಆತಂಕ ನಿವಾರನೆಯಾಗುವುದು. ಅದೇ 'ಪಡಯಣಿ'

ಸಂಪಾದಕ

'ಪಡಯಣಿ'ಯಲ್ಲಿ ಬರುವ 'ಕೋಲ'ಗಳ ರಾಜನೇ 'ಕಾಲನ್ ಕೋಲಂ' ಹದಿನಾರು (ಕೆಂಗಿನ) ಹಾಳೆಗಳಲ್ಲಿ ಚಿತ್ರಬರೆದು ತಯಾರಾಗುವಂಥದ್ದು 'ಕಾಲನ್ ಕೋಲಂ' ಕಿರೀಟದ ಆಕೃತಿಯಲ್ಲಿರುವ ಈ ಕೋಲ (ಶಿರೋಭೂಷಣ)ಕ್ಕೆ ಎರಡೂವರೆ ಅಡಿ ಎತ್ತರವಿದೆ. ಕಡುಗೆ ಕೆಂಪು ಬಟ್ಟೆಯನ್ನು ಉಟ್ಟು ಮುಖಕ್ಕೆ ಅರ್ಧಾಳ ಹಚ್ಚಿ ಕುಂಡಿಗೆಯಂಥ ಕುಲಾವಿಯನ್ನು ತಲೆಗೆ ಕಟ್ಟಿ (ಹಾಗೆ ಮುಡಿಕಟ್ಟಿ) 'ಚುಟ್ಟ' ಸಿದ್ಧವಾಗುತ್ತದೆ. ಗಡ್ಡ ಕಟ್ಟುಗೆ, ಬೆನ್ನಕಟ್ಟುಗೆಗಳ ಬಳಕೈಲೆಯಲ್ಲಿ ಮಟ್ಟದ ಮೇಲೆ 'ಕೋಲ'ವನ್ನಿಟ್ಟು ಗಟ್ಟಿಯಾಗಿ ಕಟ್ಟುತ್ತಾರೆ. 'ಎದೆಮಾಲೆ' (ನೆಂಜುಮಾಲ) ಮತ್ತು ಕೋಣನ ಮುಖಬರೆದ ಕಟಿಮಾಲೆ (ಅರತ್ತಾಲಿ) ಕಟ್ಟಿಕೊಳ್ಳುವುದಕ್ಕಿದೆ. ಕಣ್ಣಿನ ಕಾಡಿಗೆ, ಖಾಯದಾಡೆ (ಹಲ್ಲು) ಧರಿಸಿ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ದೊಂದಿ ಮತ್ತು ಪಾಶವನ್ನು ಬೀಸುತ್ತ ಹೆಜ್ಜೆಯಿಕ್ಕುತ ಕಾಲನಿಗೆ ಹಾಡುಗಳನ್ನು ಇಡಿಯಾಗಿ ಹಾಡಿ ಕುಣಿಯಬೇಕಾದರೆ ಮುರು ಗಂಟೆ ಹೊತ್ತು ಬೇಕು.

ಕಾಲನ್ ಕೋಲದಲ್ಲಿ ಕಾಲನೂ, ಕಾಲಕಾಲನೂ (ಶಿವನೂ) ಒಳಗೊಂಡು ಇರುತ್ತಾರೆ. ಶಿರೋಭೂಷಣದಲ್ಲಿರುವ ನಾಲ್ಕು ಚಿತ್ರಗಳ ಸಹಿತ ಐದು ಮುಖಗಳಿರುತ್ತವೆ. ಪಾಶ, ಖಡ್ಗ, ಕೋಣನ

ಮುಖವಿರುವ 'ಅರತ್ತಾಲಿ' ಸೊಂಟದ ಪಟ್ಟು (ವೀರಗಾಸೆಯ ಸ್ಥಾನದ್ದು), ದಾಡೆಹಲ್ಲು ಇತ್ಯಾದಿ ಕಾಲನನ್ನು (ಯಮನನ್ನು) ಸಂಕೇತಿಸಿದರೆ, ತಲೆಮೇಲಿನ ಪಮಚ ಮುಖವೂ ಪ್ರಭೆಯೂ ದೊಮದಿಯೂ ಕಾಲಾಂತಕನಾದ ಶಿವನನ್ನು ಸಂಕೇತಿಸುತ್ತವೆ.

ಹಾಡು ಮತ್ತು ಕುಣಿತ (ಪಾಟು ಮತ್ತು ತುಳ್ಳಲ್)

'ಕಾಲನ್ ಕೋಲಂ ತುಳ್ಳಲ್ (ಕುಣಿತ' ಒಮದು ಮಹಾನಾಟಕದ ಉದಾತ್ತವಾದ ಪ್ರಸ್ತುತಿಯಾಗಿದೆ. ಒಬ್ಬ ಕುಣಿತಗಾರ (ತುಳ್ಳಲ್ ಕಾರನ್) ಹಾಡಿನೊಂದಿಗೆ ಬದಲುತ್ತ ಬರುವ ಐದು ದೃಶ್ಯಗಳ ಮೂಲಕ ಐದು ಕಥಾ ಪಾತ್ರಗಳನ್ನು ರಂಗದಲ್ಲಿ ಪ್ರಸ್ತುತಪಡಿಸುತ್ತಾನೆ. (ವಿಶೇಷವಾದ ವೇಷವಿಲ್ಲದೆ ಇನ್ನೊಬ್ಬ ದೊಂದಿಯನ್ನೂ, ಖಡ್ಗವನ್ನೂ ಪಡೆಯಲು ಬರುತ್ತಾನೆ)

ಅಷ್ಟಾದಶ ಪುರಾಣಗಳಲ್ಲಿ ಒಂದಾದ 'ಮಾರ್ಕಂಡೇಯ ಪುರಾಣ'ದಲ್ಲಿರುವ ಪ್ರಸಿದ್ಧವಾದ ಕತೆಯೇ 'ಪಾಟ' (ಹಾಡಿ)ನಲ್ಲಿರುವ ವಸ್ತು. ಅದೇ ಮಾರ್ಕಾಂಡೇಯನ ಕಥೆ. ಮೃಕಂಡು ಮುನಿ (ಮೃಗಂಡನ್) ತನಗೆ ಪುತ್ರ ಪ್ರಾಪ್ತಿಯಾಗಲೆಂದು ತಪಸ್ಸು ಮಾಡಿ ಶಿವನಿಮದ ವರ ಪಡೆಯುವುದು. ಅಲ್ಪಾಯುವಾಗಿ ಮಗ ಮಾರ್ಕಂಡೇಯ (ಮಾರ್ಕಂಡನ್) ಹುಟ್ಟುವುದು. ಶಿವಧ್ಯಾನದಲ್ಲೆ ಇರುವಾಗ ಅವನನ್ನು ಬಯ್ಯಲು 'ಕಾಲನ್' (ಯಮ) ಬರುವುದು, ಕಾಲನಿಗೂ ಶಿವನಿಗೂ ನಡುವೆ ಯುದ್ಧವಾಗುವುದು, ಶಿವನು ಕಾಲನನ್ನು ನಿಗ್ರಹಿಸಿ ಮಾರ್ಕಂಡೇಯನಿಗೆ ನಿತ್ಯಯೌವನದ ವರದಾನ ನೀಡುವುದು. ಈ ಕತೆಯನ್ನು ಇಲ್ಲಿ ನಾಟಕೀಯವಾಗಿ ಅಭಿನಯಿಸಲಾಗುತ್ತದೆ. ನಡನಡುವೆ ಶ್ಲೋಕಗಳಲ್ಲಿ ಸಂಕ್ಷಿಪ್ತ ಕಥೆ ಹೇಳುವುದಕ್ಕಿದೆ.

ಧಗಧಗಿಸಿ ಉರಿಯುವ ಕೈದೊಂದಿ (ದೀವಟಿಗೆ)ಯ ಮತ್ತು ತೆಂಗಿನ ಗರಿಗಳ ಪಂಜುಗಳ ಬೆಳಕಿನಲ್ಲಿ, ಆರ್ಭಟ, ಬೊಬ್ಬೆ, ಕೂಗುಗಳೊಮದಿಗೆ ಚೆಂಡೆಯ ಮೇಳ ಸೇರಿ ಮೆರವಣಿಗೆಯಲ್ಲಿ ಬಂದು 'ಕಳ'ಕ್ಕೆ ತಲಪುತ್ತದೆ. ಅಲ್ಲಿ ತಾಳವನ್ನು ದಪ್ಪು (ತಪ್ಪ್) ವಹಿಸಿಕೊಳ್ಳುತ್ತದೆ. ಹಾಡುಗಾರರು ಹಿಂದುಗಡೆ ನಿಂತುಕೊಂಡು ಹಾಡತೊಡಗುವರು.

ಗಣಪತಿ, ಸರಸ್ವತಿ, ಗುರು, ಶಿವ ಈ ದೇವತೆಗಳ ಸ್ತುತಿವಂದನೆ ಯಾದಬಳಿಕ ಮಾರ್ಕಾಂಡೇಯ ಬಾಲನ ಕತೆಯನ್ನು ಆನಂದದ ರಸ ಹರಿಸಲು ತೊಡಗಲು ಕವಿ ಹೊರಡುತ್ತಾನೆ. ಸಂತಾನಲಬ್ಧಿಗೆ ಬೇಕಾಗಿ ಮೃಗಂಡನ್ (ಮೃಕಂಡುಮುನಿ) ಕಾಡನ್ನು ಹೊಕ್ಕು ಮುನಿ ಶುಚಿಯಾಗಿ ಪ್ರತಿಷ್ಠಿತನಾಗಿ ಏಕಪಾದವನ್ನು ನೆಲಕ್ಕೂರು ಕೈಮುಗಿದು ಶಿವನನ್ನು ಧ್ಯಾನಿಸುತ್ತ ಪ್ರತ್ಯಕ್ಷನಾಗುತ್ತಾನೆ. ಶಿವ ಕೇಳುತ್ತಾನೆ, "ಬುದ್ಧಿಶಾಲಿಯೂ ಅಲ್ಪಾಯುವೂ ಆದ ಮಗ ಬೇಕೋ, ಮೂಢನೂ ದೀರ್ಘಾಯುವು ಆದ ಮಗ ಬೇಕೋ?" ಅದಕ್ಕೆ ಮೃಗಂಡನ್, 'ಒಬ್ಬರೂ ಇದಿರಿಲ್ಲದ ಬುದ್ಧಿಶಾಲಿಯನ್ನು ಕೊಡು' ಎಂದು ಬೇಡಿದ. ಶಿವನು ಆತ ಇಚ್ಛಿಸಿದ ವರಪಿತ್ತು ಮರೆಯಾದ. ಇಷ್ಟು ಕತೆಯನ್ನು ಹನ್ನೊಂದು ಶ್ಲೋಕಗಳಲ್ಲಿ ಸಂಕ್ಷೇಪಿಸಿದೆ. ಹಾಡಿನ ಆರಂಭ ಹೀಗೆ

ಏಜುಮೆರುದೇಜಿ ವಿಳಯಾಡುಂ ಹರನೋಡ
ಏರಿಬಹ ಎತ್ತನೇರಿ ಮೆರೆವ ಹರನೊಡ
ನಾದರದಿ ವರವ ವರಿಸಿಕೊಂಡ ಪಿಪ್ರದೇವ
ಬಹಳ ಹರುಪದಿಂದ ತನ್ನ ಮಂದಿರಕೆ ಹೋಗಿ

ಏಕರಮ್ಯವಾಗಿ ವಾಸಿಸಿದ ಪತ್ನಿಯೊಂದಿಗೆ ಕೂಡಿ

ಇದರೊಂದಿಗೆ ನೃತ್ಯವೂ ಆರಂಭವಾಗುತ್ತದೆ. ಮೊದಲ ರಂಗದಲ್ಲಿ 'ಮೃಗಂಡನ್'

ಪರಮಶಿವನ ಅನುಗ್ರಹ ಪ್ರಕಾರ ಮೃಗಂಡ ಪತ್ನಿ ಜನ್ಮನೀಡಿದ ಮಗನಿಗೆ 'ಮಾರ್ಕ್ಕಂಡನ್' ಎಂದು ಹೆಸರಿಟ್ಟಿತು. ಅತಿ ಮನೋಹರನು, ಅತಿಸುಶೀಲನೂ, ಅತುಲ್ಯವಿದ್ಯಾಶಾಲಿಯೂ ಆದ, ಅತಿಸುಖದಲ್ಲಿ ಬೆಳೆದ ಮಾರ್ಕಂಡನಿಗ ವಯಸ್ಸು ಹನ್ನೆರಡಾಯಿತು. ಮಗನಿಗೆ ಆಯಸ್ಸು ಹದಿನಾರೂ ವರ್ಷ ಎಂದರಿತಿದ್ದ ಮೃಗಂಡನಿಗೆ ಅನುದಿನ ದುಃಖ, ಆತಂಕ ಏರುತ್ತಲೆ ಬರುತ್ತದೆ. ಆತ ಶಿವನನ್ನು ಧ್ಯಾನಿಸುತ್ತ ದಿನಕಳೆಯುತ್ತಾನೆ.

ದೇವೀ ಸ್ತುತಿಯೊಂದಿಗೆ ಎರಡನೇ ದೃಶ್ಯಕ್ಕೆ ಪ್ರವೇಶ. ಇನ್ನು ರಂಗದಲ್ಲಿರುವುದು ಶಿವ. ಭದ್ರಕಾಳಿ ಜನ್ಮವೆತ್ತದ ಮೂರನೇಕಣ್ಣಿನ (ಮೂರನೆ ಕಣ್ಣಿನ) ಅಗ್ನಿಯನ್ನು ಸಂಕೀರ್ತಿಸುವ ಹಾಡನ್ನು ಹಾಡುವಾಗ ಒರಳಿನ ಮೇಲೆ ಏರಿ ನಿಂತು ಕೋಲದಾರಿಯು ಹೆಜ್ಜೆಗಳನ್ನಿಡುತ್ತಾನೆ. ಅಂಧಕಾರದಿಮದ ಬೆಳಕು ಒಡೆದು ಅರಳುವುದು, ಅಜ್ಞತೆಯೊಳಗಿಂದ ಜ್ಞಾನವುದಿಸುವುದು ಇವನ್ನು ಸಾಂಕೇತಿಕವಾಗಿ ಚಿತ್ರೀಕರಿಸುತ್ತ ದೊಮದಿಯ ಮಹಿಮೆಗಳನ್ನು ಹೊಗಳಸುತ್ತಿಸುವ ಆ ಹಾಡಿನ ಪಾಟಿನ ಪಾದಪಾದವೂ ಮಧುರ. ನೋಡಿರಿ–

ತಾವರೆಯ ಬೇರಿನ ಚೆಲುವೊಂದಾದ (ಪಮದಂ) ಸೂಟೆ (ದೊಂದಿ)
ಎಣಿಸಲೆರಡಾರ್ಗಿ ತಿರುಗಿದೊಮದು ದೊಂದಿ
ಪದಕ್ಷರಾನ ಬೆಳಕಾದ ದೊಂದಿ
ಕಾಳಿಗೆ ಮುಂಚಿತದಿ ಹುಟ್ಟಿದೊಂದು ದೊಂದಿ
ಕಾಲವನು ಸುಟ್ಟುರು ಮುಗಿಸದ ದೊಂದಿ
ಐವತ್ತೊಂದಕ್ಷರ ಸೇರುವಾ ದೊಂದಿ
ಪ್ರೇಮದಿಂ ಪೇಳುತ್ತ ತೆಗೆದುಕೊಳ್ಳುವ ದೊಂದಿ

ಸರ್ವ ವಿಜ್ಞಾನಕ್ಕೂ ಆಧಾರಭುತವಾದ ಆ ಬೆಳಕಿನ ಬಗೆಗಿರುವ ಚಿಂತನೆ ಭಾರತೀಯ ಸಂಸ್ಕೃತಿಯ ಒಂದು ಕರಿದಾದ ಮಣಿ ಹರಳಾಗಿದೆ. ಒರಳಿನ ಮೇಲೆ ನಿಮತು ಕಳಕ್ಕೆ ನೆಗೆದು ಓಡಿ ನಡೆಯುವ (ತುಳ್ಳಲ್) 'ಕುಣಿತ' ಅತ್ಯಾಕರ್ಷಕ. (ಪಾಟು) ಹಾಡು ಮುಗಿಯುವಾಗ ಕೋಲಧಾರಿಯ ಕೈಯಿಂದ (ಪಂದಂ) ಸೂಟೆಯನ್ನು ಪಡೆದುಕೊಳ್ಳುವುದರೊಂದಿಗೆ ಶಿವನ ನೃತ್ಯ ಕೊನೆಗೊಳ್ಳುತ್ತದೆ. ಮುಂದಿನ ನಾಲ್ಕು ಶ್ಲೀಕಗಳಲ್ಲಿ ದುಃಖಿಸುವುದೇಕೆಂದು ಕೇಳುವ ಮಗನಲ್ಲಿ ಮೃಗಂಡನ್ ಈ ಹಿಂದಿನ ಘಟನೆಯನ್ನು ಹೇಳುತ್ತಾನೆ. (ಪಾಟು) ಹಾಡು ಶುರುವಾಗುವಾಗ ಕೋಲ ಮಾರ್ಕಂಡನಾಗಿ ಕುಣಿಯತೊಡಗುತ್ತದೆ. ಮಾಕಂಡನು ತನ್ನ ಅಪ್ಪನನ್ನು ಸಮಾಧಾನಪಡಿಸುವುದು ಹೀಗೆ–

ಮರಿಕ್ಕಾದೆಯಿರಿಪ್ಪಾನುಂ ನಿನ ಚೆನ್ನಾಲ್
ಮರಣಕಾಣದೆ ಇರುವುದಕ್ಕು ನೆನೆದೆವಾದರೆ
ಜನಿಸುವುದಕ್ಕೆ ವರವ ಕೊಟ್ಟು ಕಳಿಸಿರವವನೆ ಭಜಿಸಿದರೆಯು
ಮರಣಗೊಳ್ಳದ ವರವ ಕೊಳ್ಳಬಾರದಿತ್ತೇ
ನದಿಯ ಮುಡಿದವನಿಮದ ತಾತ ಪಡೆದಿರುವಂಥ ಶರೀರವನ್ನು

ನಾಶಗೊಳದಂತೆ ವರವ ಪಡೆದು ಬರುವೆನು ನಾನು
ನೆನೆದರೀಶ್ವರನ ಕಾಣಲ್ ತನಗೆ ಒಡೆಯನು ಒಪ್ಪಿದರೆ
ಸಹಿಸಲಾಗದುದೇನು ಇಲ್ಲಿ ನೋಡಿದರೆ

ತಂದೆ ತಾಯಂದಿರು ಸುಕವಾಗಿ ವಾಸಿಸಲು ಒಪ್ಪಿದರು. ಅವರ ಆಶೀರ್ವಾದವನ್ನು ಪಡೆದು ಮಾರ್ಕಂಡೇಯನು ಶಿವನನ್ನು ಧ್ಯಾನಿಸಲು ಹೋಗುತ್ತಾನೆ.

ಮಾರ್ಕಂಡೇಯನು ಕಡವೂರ್ ದೇವಾಲಯಕ್ಕೆ ತಲಪಿ ಪರಮಶಿವನನ್ನು ಭಜಿಸುತ್ತಾನೆ. ಅಲ್ಲಿ ವಾಸಿಸಿದಾಗ ಅವನಿಗೆ ವಯಸ್ಸು ಹದಿನಾರಾಗುತ್ತದೆ. ಒಡನೆಯೆ ಯಮನ ನಿರ್ದೇಶ ಪ್ರಕಾರ ಅವನನ್ನು ಕರೆದೊಯ್ಯಲು ಬಮದ ಯಮಕಿಂಕರರನ್ನು ಮರಳಿಯಟ್ಟುವುದು, ಇದನ್ನು ತಿಳಿದು ಕಾಲನ್ ಕಾಲದಂಡವನ್ನು ಹಿಡಿದು ಕೋಣನ ಮೇಲೇರಿ ಬರುವುದು ಎಂಬುದನ್ನೆಲ್ಲ ವರ್ಣಿಸುವುದು ಶ್ಲೀಕಗಳಲ್ಲಿ.

ಕಾಲನ ಬರುವಿಕೆಯನ್ನು ಪ್ರಸ್ತುತಪಡಿಸುವ ಪಾಟು ಮತ್ತು ನೃತ್ತ ಮನೋಹರವಾದುದು. ಭಯಾನಕವಾದ ಆ ಸನ್ನಿವೇಶವನ್ನು ಕವಿ ಹೀಗೆ ಬಣ್ಣಿಸುತ್ತಾನೆ–

ಧೂಳಿಂದ ಆಗಸವು ದಿಕ್ಕೆಲ್ಲ ಪೂರ ಮುಚ್ಚಿತು
ಸ್ವಭಾವಗಳೆಲ್ಲ ಮಸುಗಿತ್ತೈ
ಒಡನದ ಕಂಡು ಮಳೆಮುಗಿಲಿನಲ್ಲಿಯೆ
ಅರುಣಜನತ್ತ ಮಳುಗಿದನ್ಯೆ
– – – – – – – – – – –
– – – – – – – – – – –
ಮಲೆಯೊಂದಿಗೆ ಲೋಕವು ನಡುಗಿತು
ಕಡಲುಗಳೂ ಕಲಕಿಹೋದವೋ
ಸಿಡಿಲಿಗೆ ಸಮನಾರ್ಭಟದಾ ನಾದ
ಲೋಕದೊಳೆಲ್ಲ ಬಜಸೇರಿದರು

ಮಾರ್ಕಂಡನ್ ಶಿವಲಿಂಗವನ್ನು ಅಪ್ಪಿಹಿಡಿದು ಪ್ರಾರ್ಥಿಸಿದ. 'ಅವುಡುಕಚ್ಚಿ ಕೋರೆಹಲ್ಲು ನಡುಗಿಸಿ ಅತಿ ಪಟುತ್ವದೊಂದಿಗೆ ಕರದಲ್ಲಿ ದಂಡವೊಲೆ ಹಿಡಿದು ಕಾಲನ್ ನಿಂತು ಕುಣಿಯುತ್ತಾನೆ.

ಶಿವ ಪ್ರತ್ಯಕ್ಷಗೊಳ್ಳುತ್ತಾನೆ. ಕಾಲನಿಗೂ ಶಿವನಿಗೂ ನಡುವೆ ಯುದ್ಧವಾಗುತ್ತದೆ. ಶಿವನ ಶೂಲ ಇರಿದು ಕಾಲನ್ ಮಣ್ಣಿಗೆ ಒರಗುತ್ತಾನೆ. ಈ ವೇಳೆ ಕೋಲ ಕುಣಿಯುವಾತ ನಡುಗಿ ಕುಣಿದು ಕಿರೀಟವನ್ನು ಕೀಳುತ್ತಾನೆ. ಮುಮದಿನದು ಖಡ್ಗದ ಹಿಡಿತ. ಅವನ ಕೈಯಿಂದ ಖಡ್ಗವನ್ನು ಕಿತ್ತು ತೆಗೆಯುವುದು ಕಾಲನನ್ನು ಶಿವ ತನ್ನ ಅಧೀನಕ್ಕೆ ತರುವುದರ ಸಂಕೇತ. ಕೋಲ ಕುಣಿಯುವನನ್ನು ಆಧರಿಸಿ ಒರಳಿನಲ್ಲಿ ಕುಳ್ಳಿರಿಸುವರು. ಕುಣಿದವ ಮೈಯಲ್ಲಿ ನಡುಗುತ್ತಲೆ ಇರುತ್ತಾನೆ. ಶಿವನು 'ಎಂದಿಗೂ ಹದಿನಾರು ವಯಸ್ಸು' ನಿನಗೆಂಬ ವರನ್ನು ನೀಡಿ, ಮಾರ್ಕಂಡೇಯನನ್ನು ಕಳುಹಿಸುವ ಪಾಟು ಮುಂದುವರಿಯುತ್ತದೆ. ಮುಂದೆ ಶಿವಸ್ತುತಿ. ಅದು ಹಾಡಿ ಮುಗಿಯುತ್ತಲೆ 'ಕಲಿ' (ಮೈನಡುಕ) ಇಳಿಯುತ್ತದೆ. ಕೋಲ 'ಕಳ'ವನ್ನು ತೆರವುಮಾಡುತ್ತದೆ.

ಕುಣಿಯುವವ (ತುಳ್ಳಲ್‌ಕಾರ)ನ ಪ್ರಾಯ, ಆರೋಗ್ಯಸ್ತಿತಿ ಮತ್ತು ಅಭ್ಯಾಸ ಪರಿಣತಿ ಇವುಗಳನ್ನು ಪರಿಗಣಿಸಿ ಹಾಡುಗಳನ್ನು ಇಡಿಯಾಗಿಯೋ ಅಷ್ಟಷ್ಟು ಭಾಗವಾಗಿಯೋ ಹಡಲಾಗುತ್ತದೆ. ದೊಂದಿ (ಪಂದಂ) ಬಗೆಗೆ ಬೇರೆಯೂ ಪಾಟುಗಳಿವೆ. ಅವುಗಳಲ್ಲಿ ಒಮದರ ಸೊಗಸನ್ನು ನೋಡಿರಿ–

ಬಹಲುಬಳಿದು ಅಗಲದೊಳು ಕೌತುಕದೊಳೊಡನೇರಿ
ಬಂಸ್ತ್ರ ಮುಂದುವರಿದಂಥ ಪಂಜು
ಚಂದ್ರನೊಡ ನೊರಸಿಯೊಡನೆಡನರಿದ
ದೇವೇಂದ್ರ ನಡೆದತ್ತ ತೆಗೆದೊಂದು ಪಂಜು

ದಂಡವನ್ನೂ ಪಾಶ (ಹಗ್ಗ)ವನ್ನೂ ಹಿಡಿದು ಸಿಂಹಾಸನ (ಒರಳು)ದ ಮೇಲೆ ಕುಳಿತುಕೊಳ್ಳುವ ಕಾಲನಿಗೆ ಕಲಿ (ನಡುಕ) ಹತ್ತುವ ಒಂದು ಹಾಡು ಇದೆ. ದಂಡಕರನ (ಯಮನ) ಆಲಯಕ್ಕೆ ತಂದ ಜನರಿಗೆ ಕೊಡುವ ಶಿಕ್ಷೆಗಳು ಇದರ ವಸ್ತು. ಶಿವನ ಸ್ತುತಿಗಾಗಿ ಇರುವ ಹಾಡುಗಳೂ ಹಲವಿವೆ.

ಸಂದೇಶ

ಮಾನವನಿಗೆ ಯಾವತ್ತೂ ಒಮದು ಒಗಟಿನಂತಿರುವ ಸಾವನ್ನು ಅಂಕೆಗೆ ತಂದುಕೊಳ್ಳಲೂ, ಅವನಿಗೆ ಅಮರತ್ವವನ್ನು ಪಡೆದುಕೊಳ್ಳಲಿರುವ ಅಭೀಪ್ಸೆಯ ಶಕ್ತವಾದ ಅಭಿವ್ಯಕ್ತಿಯಾಗಿದೆ 'ಕಾಲನ್‌ಕೋಲಂ ತುಳ್ಳಲ್' ಎಂದೂ, ಶೈವ ಸಂಸ್ಕೃತಿಯ ಬೆಳಕಿನಲ್ಲಿ ದೇವನೂ ಮಾನವನೂ ಅಭಿನ್ನರು ಎಂದೂ, ಅರಿವಿನ ಸೆಲೆಯಾದ ಅಗ್ನಿಯನ್ನೂ ಅದಕ್ಕೆ ಮೂಲಾಧಾರವಾದ ಶಕ್ತಿಯನ್ನೂ ಕಂಡರಿಯುವುದೆ ಮುಕತಿಮಾರ್ಗ ಎಂದೂ ಸಂದೇಶ ನೀಡುವುದೆ ಈ ಆಚರಣೆಯ ತಿರುಳು.

'ಪಡಯಣಿ'ಯ ಬಗ್ಗೆ

'ಪಡಯಣಿ' ಒಂದು ಅನುಷ್ಠಾನ ಕಲಾರೂಪವಾಗಿದೆ. ದ್ರಾವಿಡದ ತನ್ನತನ ತೊಳಗಿ ನಿಲ್ಲುವ ಈ ಕಲಾರೂಪದಲ್ಲಿ ನೃತ್ತ, ಸಂಗೀತ, ಚಿತ್ರ ಇತ್ಯಾದಿ ಕಲೆಗಳು ಸಮ್ಮಿಳಿತವಾಗಿವೆ. ತಗ್ಗುತಟ್ಟಿನ ಜನರೂ, ಉನ್ನತ ಸ್ಥಾನಪನ್ನರೂ ಸಹಿತ ನಾನಾ ಜಾತಿಮತಗಳ ಜನರ ಸಹಭತಗದಲ್ಲಿ ಇದು ನಡೆಯುವುದು ಗಮನಾರ್ಹ. ಪ್ರಾಚೀನ ಜನರ ಸೌಂದರ್ಯಪ್ರಜ್ಞೆಯ, ಭಕ್ತಿ ತುಂಬಿದ ದೇವಪೂಜೆಯ ತೀಕ್ಷಣವಾದ ಆವಿಷ್ಕಾರ ಇದರಲ್ಲಿದೆ. ಪ್ರಾಚೀನ ಕಾಲದಿಂದಲೂ ಮನುಷ್ಯ ಮಣ್ಣಿನೊಮದಿಗೂ ಪ್ರಕೃತಿಯೊಂದಿಗೂ ಸಹಜೀವಿಗಳೊಂದಿಗೂ ತಳೆದ ಮಾದರಿಯೆನಿಸುವ ಸಮೀಪನದ ರೂಪರೇಖೆಯೂ ಇದರಲ್ಲಿ ಬರೆಯಲ್ಪಟ್ಟಿದೆ.

ಆರಾಧನೆ ಮತ್ತು ಅವಿಷ್ಕಾರ

ಭೂಮಿದೇವಿ ಪುಷ್ಪಣಿಯಾಗುವ ಮೇಷ ಮಾಸದ ಕೃಷಿ ಹಬ್ಬವಾದ 'ವಿಷು'ವಿನೊಂದಿಗೆ ಸಂಬಂಧಿಸಿಯೆ 'ಪಡಯಣಿ ಮೇಳ' ಏರುವುದು. ಪ್ರಕೃತಿಯ ಕಣ್ಕೆಗಳು ಎಚ್ಚರಿಸಿಕೊಡುವ ಭಯ ಆತಂಕಗಳು, ಪ್ರಕೃತಿಯ ವಿಭವಗಳು ನೀಡಿದ ಸುಖಾನುಭಗಳು, ದೇವಪ್ರೀತಿಗಾಗಿ ಇರುವ ಅನುಷ್ಠಾನ (ಆಚರಣೆ)ಗಳು, ಸೌಂದರ್ಯ ಸಂಕಲ್ಪಗಳು, ತತ್ತ್ವಚಿಂತನೆ ಮೊದಲಾದ ಅನೇಕಾನೇಕ ವಿಷಯಗಳು 'ಪಡಯಣಿ'ಯ ನೃತ್ತರೂಪಗಳ (ಪಾಟು)

ಹಾಡುಗಳಲ್ಲಿ ಪ್ರತಿಪಾದಿತವಾಗಿವೆ. ಫಲವಮತಿಕೆಯಲ್ಲೂ ಫಲರಹಿತತೆಯಲ್ಲೂ ಮನುಷ್ಯನೊಂದಿಗೆ ಸೇರಿನೆಲೆಸಿದ ಕಾಳಿಯಮ್ಮನ ಸನ್ನಿಧಿಯಲ್ಲಿ ದುಃಖಗಳನ್ನು ಎತ್ತಿಹೇ ಆಯೂ ಪ್ರಾಯಶ್ಚಿತ್ತಗಳನ್ನು ಮಾಡಿಯೂ ಬನ್ನಕಳೆದು ಮಂಗಲ ಪಡೆಯಲು ಆಚರಿಸುವ 'ಪಡಯಣಿ' ಒಂದೇ ವೇಳೆ ಅವನ ಜೀವನಾಭಿವ್ಯಕ್ತಿಯೂ, ಆರಾಧನೆಯೂ ಆಗಿದೆ. ಪ್ರಾಚೀನ ಜನರು ಫಸಲುತೆಗೆಯುವಾಗ ಕಳ (ಅಂಗಳ)ದಲ್ಲಿ ಕಾಳಿಯನ್ನು ಪ್ರತಿಷ್ಠಿಸಿ ಪಾಟುಗಳನ್ನು ಹಾಡಿ ಆಡಿದುದು ಅನಂತರದ ಕಾಲಘಟ್ಟದಲ್ಲಿ ದೇಗುಲದ ಅಂಗಣದ ಉತ್ಸವವಾಗಿ ಬದಲಾಗಿರುಉದೇ 'ಪಡಯಣಿ'ಯ ವಿಕಾಸ ಪರಿವರ್ತನೆಗಳ ಕಥೆಯೆಂದು ತೋರಿಬರುವುದು.

ಐತಿಹ್ಯ

ಭದ್ರಕಾಳಿ ದಾರಿಗನನ್ನು ನಿಗ್ರಹಿಸಿದ ಪ್ರಸಿದ್ಧವಾದ ಪುರಾಣಕಥೆಯೇ 'ಪಡಯಣಿ'ಯ ಉದ್ಭವಕ್ಕೆ ಆಧಾರವೆಂದು ನಂಬಲಾಗುತ್ತಿದೆ. ಪುರುಷನಿಮದ ಅವಧ್ಯನೆಂದು ವರ ಪಡೆದ ದಾರಿಗ ಕ್ರೂರ ನಡೆಯಿಂದ ಲೋಕವನ್ನು ನಾಶಗೊಳಿಸುತ್ತಿರುವಾಗ, ಅವನನ್ನು ನಿಗ್ರಹಿಸಲು ಪರಮೇಶ್ವರ ಮೂರನೆ ಕಣ್ಣಿನಿಂದ ಕಾಳಿಗೆ ಜನ್ಮ ನೀಡಿದ. ದಾರಿಗನನನ್ನು ದಂಡಿಸಿದ ಕಾಳಿ ಕೋಪ ತಣಿಯದೆ ನಿಂತು ಕುಣಿದು ನಡುಗುತ್ತಿರುವಾಗ ಶಿವನೂ ಭೂತಗಣಗಳೂ ಬಗೆ ಬಗೆಯ ವೇಷಗಳನ್ನು ಧರಿಸಿ, ಕೋಲ (ಶಿರೋಭೂಷಣ)ಗಳನ್ನು ಬೆದು ಕಟ್ಟಿಕೊಂಡು ತಾಳಮೇಳಗಳೊಮದಿಗೆ ನೃತ್ತವಾಡಿದರೆಂದೂ, ಕ್ರಮೇಣ ಕಾಳಿಯ ಕೋಪ ತಗ್ಗಿತು ಎಂದೂ, ಅದರ ಸ್ಮರಣೆಗಾಗಿಯೆ ಪಡೆಯಣಿಯನ್ನೂ, ಅದರೊಂದಿಗಿರುವ ದಪ್ಪುಮೇಳವೂ, 'ಕೂಲಂ ತುಳ್ಳಲೂ' ನಡೆಸುತ್ತಿರುವುದು ಎಂದೂ ಐತಿಹ್ಯವಿದೆ.

ಪಡಯಣಿ ಇಂದು

ಮಧ್ಯ ತಿರುವಿದಾಂಕೂಜಿನಲ್ಲರುವ ಕಾಳಿ (ದೇವೀ) ಆಲಯಗಳಲಿ ಇಂದು 'ಪಡಯಣಿ' ಆಚರಣೆ ನಡೆಸುತ್ತಿದ್ದಾರೆ. ಹಿಂದೆ ಇಪ್ಪತ್ತೆಂಟು ದಿನಗಳ ಪಡಯಣಿ ಮೇಳ ಇತ್ತೆಂದು ಕೇಳಿದ್ದೇವೆ. ಇವತ್ತಿಗೆ ಅದು ಏಳರಿಂದ ಹತ್ತು ದಿವಸಗಳ ಕಾಲ ನಡೆಯುವ ಹಬ್ಬವಾಗಿ ಪರಿಮಿತಗೊಂಡಿದೆ. 'ವಿಷು' ದಿವಸ ಕೊನೆಗೊಳ್ಳುವ ಏಳು ದಿವಸಗಳ ಹಬ್ಬವಾಗಿ 'ಏಟುಮಜ್ಹೂರ್' ಪನಮಜ್ಜಂ ಕಾವಿನ (ಕ್ಷೇತ್ರದ) ಪಡಯಣಿ ಮೇಳ ನಡೆಯುತ್ತದೆ. ಕಡಮ್ಮನಿಟ್ಟ ಕಾವಿನಲ್ಲಿ ವಿಮವಿನಂದು ಆರಂಭಿಸಿ ಹತ್ತು ದಿವಸ ನಡೆಯುತ್ತದೆ. ಏಳು ದಿವಸದ ಪ್ರದರ್ಶನಗಳನ್ನು ಚೂಟ್ಟುವೆಪ್ಪ್ (ಪಂಉಜು ಉರಿಸಿಡು), ತಪ್ಪು, ಕೈಮಣಿ (ದಪ್ಪ, ಚಕ್ರಕಾಳ), ಗಣಪತಿ ಕೋಲಂ, ಪಂಚಕೋಲಂ, ಅಡವಿ, ಇಡಪ್ಪಡಯಣಿ, ನಿರ್ತುಪಡೋಣಿ ಎಂದು ವಿಭಜಿಸುತ್ತಾರೆ.

ಚಡಂಗ್‌ಗಳು (ವಿಧಿಗಳು)

ಚೂಟ್ಟುವೆಪ್ಪು (ತೆಂಗಿನ ಒಣಗರಿ ತೂಟೆ–ಪಂಜು ಇಡು), ತಪ್ಪು ಕೈಮಣಿ (ಡಪ್ಪು ತಾಳ), ಪುಲವೃತ್ತಂ (ಕೃಷಿ ಸಮೂಹನೃತ್ತ), ಕೋಲಂ ತುಳ್ಳಲ್ (ಕೋಲ ಕುಣಿತ), ಕೋಲಡ (ಕೋಲಾಟ), ಕುದಿರಕ್ಕಳಿ (ಕುದುರೆ ಆಟ), ಊರಾಳಿ ತುಳ್ಳಲ್ (ಊರಾಳನ ಕುಣಿತ), ಅಡವಿ (ಮರಸಗ್ನ ಸಮೂಹನೃತ್ತ), ತಜ್ಜಳುಂ ಪಡೆಯುಂ (ಮುಸ್ಲಿಂ ಗುರು ಮತ್ತು ಗುಂಪಿನ ಕುಣೀತ), ಪೂಪ್ಪಡ ವಾರಲ್ (ಹೂಗಳ ಅರ್ಚನೆ ಕುಣಿತ), ಕೋಣನ್

ತುಳ್ಳಲ್ ಇವುಗಳಲ್ಲದೆ ವಿನೋದಪರವಾದ ಕಣಿಯಾನ್ (ನಾಡಜ್ಯೋತಿವಾ), ಪರದೇಶಿ ಶರ್ಕರಕ್ಕುಡಕ್ಕಾರನ್ (ಬೆಲ್ಲದ ಕೊಡೆಯವನು), ಅಂತೋಣಿ, ಪಟ್ಟರ್, ನಂಬೂರಿಶ್ಶನ್, ವಂಚಿಮರಕ್ಕಾರ್, ಮೂಪ್ಪನ್ ಮೊದಲಾದವುಗಳೂ 'ಚಡಂಗ'ಗಳಲ್ಲಿ ಒಳಗೊಳ್ಳುತ್ತವೆ.

ದೇವಿಯೊಲುಮೆಗಾಗಿಯೂ ಮನದ ಅಪೇಕ್ಷಾಸಿದ್ದಿಗಾಗಿಯೂ ಆಧಿವ್ಯಾಧಿಗಳ ಸಮನಕ್ಕಾಗಿಯೂ ಲೋಕಕಲ್ಯಾಣಕ್ಕಾಗಯೂ ನಡೆಸುವ ಪ್ರಮುಖ ಹರಕೆ ಕಾಲನ್ ತುಳ್ಳಲ್. ಪಿಶಾಚ, ಯಕ್ಷಿ, ಪಕ್ಷಿ, ಮಱುತ, ಮಾಡನೆ, ಭೈರವಿ, ಕಾಲನ್ ಎಂದು ಏಳು ಮುಖ್ಯ ಕೋಲಗಳಿವೆ. ಒಂದೊಂದು ಕೋಲದ ತುಳ್ಳಲ್ (ಕುಣಿತ) ಒಂದೊಂದು ಫಲಸಿದ್ಧಿಯನ್ನು ಅಪೇಕ್ಷಿಸಿ ಆಗಿರುತ್ತ್ದೆ. ಈ ಎಲ್ಲ ಕೋಲಗಳಿಗಾಗಿ ಬೃಹತ್ತಾದ ಮತ್ತು ಮಹತ್ತ್ವದ ಗಾನ ಸಾಹಿತ್ಯ ಸಂಚಯವಿದೆ.

ವಾದ್ಯಗಳು

ಪಡಯಣಿಯ ವಾದ್ಯಗಳಲ್ಲಿ ಮುಖ್ಯವಾದುದು 'ತಪ್ಪ್' (ದಪ್ಪು ಅಥವಾ ಡಪ್ಪು). ಮೂರು ಇಂಚು ಎತ್ತರ ಆರು ಇಂಚು ವ್ಯಾಸವಿರುವ ಕೊರಡಿನ ಬಳಿಗೆ ಕಗ್ಗಲ್ಲಿನ ಪುಡಿ, ಪನಚ್ಚಿಕಾಯಿಯ ಸೊನೆ ಸೇರಿಸಿ ತಯಾರಿಸಿದ ಅಂಟನ್ನು ಬಳಸಿ ಎಳಗರುವಿನ ಚರ್ಮ ಹೊದೆದು ಬಗಿದು 'ತಪ್ಪ್' ನಿರ್ಮಿಸುತ್ತಾರೆ. ಬೆಂಕಿಯುರಿಸಿ ಆದ ಬಿಸಿಕೆಂಡದಲ್ಲಿರಿಸಿ ಬಿಸುಪು ಪಡೆದು ಪಾಣಲ್ ಸೊಪ್ಪಿನಿಂದ ಒರಸಿ ಬಾರಿಸುವಾಗ 'ತಪ್ಪ್'ನಿಂದ ಏಳುವ ಮಣಿನಾದ ಶುದ್ಧಿಯನ್ನೂ ಮಾಧೂರ್ಯವನ್ನೂ ಪಡೆದಿರುತ್ತದೆ. ಗಣಪತಿ, ವಲಿಯಗಣಪತಿ (ದೊಡ್ಡ ಗಣಪತಿ), ಮರ್ಮಂ, ದೀಪಂ ಹೀಗೆ ತಪ್ಪ್ ಮೇಳ (ವಾದನ)ದ ಬಗೆಗಳು ಹಲವು. ತಕಿಲ್ ಮದ್ದಳ, ಕೈಮಣಿ (ಚಕ್ರತಾಳ), ಉಡುಕ್ಕ್, ಚೆಂಡೆ ಇವು ಪಡಯಣಿಯಲ್ಲಿರುವ ಇತರ ವಾದ್ಯಗಳು.

ಕೋಲಂ ಬರವಣಿಗೆ

ಕಂಗಿನ ಹಸಿ ಹಾಳೆಯಲ್ಲೆ ಕೋಲಗಳು (ಶಿರೋಭುಷಣ, ಆಭರಣ) ಬರಹ (ಚಿತ್ರಣ). ತೆಂಗಿನ ಎಳಗರಿ ಕಡಿದುತೆಗೆದು, ಅದರ ಕಡ್ಡಿಯ ತುದಿಯನ್ನು ಜಜ್ಜಿ ಅದರಿಂದ ಬಣ್ಣ ಬರೆಯುತ್ತಾರೆ. ಹಸುರು, ಹಳದಿ, ಬಿಳಿ, ಕೆಂಪು, ಕಪ್ಪು ಇವೇ ಕೋಲ ಬರವಣಿಗೆಯಲ್ಲಿ ಬಳಕೆಯಾಗುವ ಬಣ್ಣಗಳು. ಹಸಿ ಹಾಳೆಯ ಹೊರಭಾಗವನ್ನು ಕೆತ್ತದೆ ಹಸುರು ಬಣ್ಣವನ್ನೂ, ಕೆತ್ತಿ ಬಳಿಬಣ್ಣವನ್ನೂ ಪಡೆಯುತ್ತಾರೆ. ಹಳದಿಗೆ ಅರಸಿನವನ್ನೂ, ಕೆಂಪಿಗೆ ಮುರಕಲ್ಲನ್ನೂ, ಕಪ್ಪುಬಣ್ಣಕ್ಕೆ ಮಾಪಿನೆಲೆ, ತುಣುಜ್ಜ ಇತ್ಯಾದಿಯನ್ನು ಸುಟ್ಟು ಚೂರ್ಣತಯಾರಿಸುತ್ತಾರೆ. ಕಂಗಿನ ಅನೇಕ ಹಸಿಹಾಳೆಗಳನ್ನು ತೆಂಗಿನ ಹಸಿಗರಿಯ ಕಡ್ಡಿಗಳಿಮದ ಕೋದು ಹೊಲಿದು ವಿವಿಧ ಆಕೃತಿಗಳಿಗೆ ಹಿಗ್ಗಿಸಿ ಭೈರವಿ, ಕಾಲನ್ ಇತ್ಯಾದಿ ಕೋಲಗಳನ್ನು ಕಂಗಿನ ಸೀಳುಗಳ ಅಟ್ಟೆಗೆ ಕಟ್ಟಿಗಟ್ಟಿಮಾಡಿ ತಯಾರಿಸುತ್ತಾರೆ. ಕೋಲ ಶುರುವಾಗುವಾಗ ದೇವತೆಗಳು ಅದರೊಂದಿಗೆ ಸ್ಥಳಕ್ಕೆ ಚಿತ್ತೈಸಿ ವಾಸಿಸಿ ಬಲಿಗಳನ್ನು ಸವೀಕರಿಸಿ, ಅನುಗ್ರಹ ನೀಡಿ ಹಿಂದಿರುಗುವವೆಂಬುದು ನಂಬಿಕೆ. ಅದರಿಂದ ಒಮ್ಮೆ ಕುಣಿದ ಒಂದು ಕೋಲ, ಮರುಬಳಕೆಗೆ ಬಾರದು. ದೇವೀ ಆಲಯದ ಆಲದಮರ, ಚಂಪಕ (ಚೆಂಬಕಂ) ಮೊದಲಾದ ಮರಗಳಿಗೆ ಅವುಗಳನ್ನು ನೇತುಹಾಕುತ್ತಾರೆ. ಒಂದು ಹಾಳೆಯಿಂದ ತೊಡಗಿ ಸಾವಿರದ ಒಂದು ಹಾಳೆಯ ವರೆಗೆ ವಿವಿಧ ಸಂಖ್ಯೆಯ ಹಾಳೆಗಳಲ್ಲಿ ತಯಾರಾಗಿವ ಕೋಲಗಳಿವೆ. ಸಾವಿರದೊಂದು ಹಾಳೆಯಲ್ಲಿ ಸಿದ್ಧಗೊಳ್ಳುವ ಭೈರವಿ ಕೋಲ ಅಟ್ಟೆಯಲ್ಲಿ ಕಟ್ಟಿ ನಿಲ್ಲಿಸುವುದು

ಮಾತ್ರ. ತಲೆಯಲ್ಲಿ ಧರಿಸುವ ಕೋಲ (ಶಿರೋಭೂಷಣ)ಗಳಲ್ಲದೆ ಅವುಗಳಿಗೆಲ್ಲಿ ಬೇಕಾದ ನೆಂಜುಮೂಲ (ಎದೆಹಾರ), ಅರತ್ತಾಲಿ (ಕಟಿಭುಷಣ), ತಾಲಿ (ಮಾಲಿಕೆ), ವಟ್ಟಕ್ಕಾದ್ (ಉರುಟು ಕಿವಿಯೋಲೆ), ಕೋಂಕಾದ್ (ಕೋಲುಗಿವಿ), ಕುಜಿ (ನಾಮ), ದಂಷ್ಟ್ರಂ (ದಾಡೆಹಲ್ಲು) ಇತ್ಯಾದಿ ಹಲವು ಭುಷಣಗಳೂ ಇರುತ್ತವೆ. ಕೋಲ ಚಿತ್ರಬರೆಯುವವರು ಮುಖ್ಯವಾಗಿ ಗಣಕ (ಕಣಿಯಾನ್) ಸಮುದಾಯದವರು. ಕೇರಳದ ಚಿತ್ರಕಲಾ ಪರಂಪರೆಯಲ್ಲಿ ಅತ್ಯುನ್ನತ ತುದಿಯಲ್ಲಾಗಿರುತ್ತದೆ ಕೋಲಬರೆಹದ ಸ್ಥಾನ.

ಕೋಲಂ ತುಳ್ಳಲ್ (ಕುಣಿತ)

ಪುರುಷರೂ, ಗಂಡು ಮಕ್ಕಳೂ ಮಾತ್ರ ಕೋಲಂ 'ತುಳ್ಳಲ್'ನಲ್ಲಿ ಪಾಲುಗೊಳ್ಳುತ್ತಾರೆ. ದೀರ್ಘಕಾಲದ ಕಲಿಯುವಿಕೆ, ತರಬೇತಿ ಇದಕ್ಕೆ ಆವಶ್ಯಕ. ಕೋಲ ಕುಣಿಯುವವರಿಗೆ ಕೈಗೊಳ್ಳಲು ವ್ರತಾನುಷ್ಠಾನಗಳಿವೆ.

ದೇವೀಆಲಯದ ಎದುರುಗಡೆ ವೃತ್ತಾಕೃತಿಯಲ್ಲಿ ಕುಳ್ಳಿರುವ ಊರವರ ನಡುವೆಯೆ ಕೋಲಂ ಕುಣಿಯುವುದು. ಕುಣಿಯುವವರಿಗಿರುವಂತೆ ಮುಖ್ಯ ಪಾತ್ರ ವಹಿಸಲು ಸಭೆಯವರಿಗೂ ಇದೆ. ನಮ್ಮ ನಾಟಕಗಳು ಹೆಜ್ಜೆಯನ್ನು ಬಲಪಡಿಸತೊಡಗಿದುದು 'ಪಡಯಣಿ'ಯಿಂದ ಆಗಿರಬೇಕೆಂದು ತೋರುತ್ತದೆ. ವೇದಿಕೆಯಲ್ಲಿ ಅಗ್ನಿಷ್ಟಕೆ ಹಾಕಿ, ದೇವಿಯನ್ನು ಕರೆದು ಇಳಿಸಿ, ಅಗ್ನಿಯಲ್ಲಿ ಪ್ರತಿಷ್ಠಾಪಿಸಿದ ಬಳಿಕವೇ ಕೋಲಂ ಕುಣಿಯಲು ಆರಂಭವಾಗುವುದು. ಕೋಲಗಳು ಮೂಡುದಿಕ್ಕಿಗೆ ತಿರುಗಿ 'ಗಣಪತಿ'ಯನ್ನೂ 'ಪಡಿವಟ್ಟಂ' ಅನ್ನೂ ಶುರುಮಾಡುವುದು. ಪಾಟು ಕೊನೆಗೊಳ್ಳುತ್ತಿರುವಂತೆ ಕೋಲಗಳ ಕುಣಿತ ಮುಗಿದು, ನಡುಗಿ ಕಳವನ್ನು ತೆರವುಗೊಳಿಸುತ್ತವೆ.

ಕೋಲ 'ಪಾಟು'ಗಳು

ತಮಿಳು ಆಧಿಕ್ಯವಿರುವ ಮಧ್ಯಕಾಲ ಮಲಯಾಳ್ ಭಾಷೆಯಲ್ಲೆ ಕೋಲದ 'ಪಾಟುಗ'ಳ ರಚನೆಯಾಗಿರುವುದು. ಕಾಲಗತಿಗನುಸರಿಸಿ ಕೂಡಿಸುವುದು, ಕಳೆಯುವುದು ಎಲ್ಲ ನಡೆದು ರೂಪವೂ ಭಾವವೂ ಮಾರ್ಪಾಟುಗೊಂಡು ಬಂದಿರುವ ಪಾಟುಗಳನ್ನೆ ನಾವಿಂದು ಕಾಣುವುದು. ಮೌಖಿಕದಿಂದ ಅವು ಬರೆಹಕ್ಕೆ ಬಂದಿರುವುದೇ ತೀರ ಈಚೆಗೆ. ಆಧುನಿಕ ಕಾಲದಲ್ಲಿ ವಿರಚಿತವಾದ ಪಾಟುಗಳೂ ಇವುಗಳ ಗುಂಪಿನಲ್ಲಿವೆ. ಅತಿಹೆಚ್ಚು ಪಾಟುಗಳು ಇರುವುದು ಭೈರವಿ ಕೋಲದಲ್ಲಿ. ಎರಡನೆ ಸ್ಥಾನ ಕಾಲನ್ ಕೋಲಕ್ಕೆ.

ಕುಟ್ಟಿಚ್ಚಾತ್ತನ್ ತಿಜೆ

(ಅನುಷ್ಠಾನ ನೃತ್ತ)

ಟಿಪ್ಪಣಿ

ಜಾನಪದವು ದೇಶಪರವಾಗಿಯೂ ಕಾಲಪರವಾಗಿಯೂ ಸಂಚರಿಸುತ್ತಲೆ ಇರುತ್ತದೆ. ಅದರ ಫಲವಾಗಿ ದೇಶಪರವೂ ಕಾಲಪರವೂ ಆದ ಹಲವಾರು ಪಾಠಭೇದಗಳು ಸೃಷ್ಟಿಗೊಳ್ಳುತ್ತವೆ. ಪಾಠಗಳು ಉಂಟಾಗುವುದು ಮತ್ತು ಶುದ್ಧಪಾಠ ಇಲ್ಲದಿರುವುದು ಜಾನಪದದ ವೈಶಿಷ್ಟ್ಯ. ಸುತ್ತಲೂ ಉಂಟಾಗುವ ಪರಿವರ್ತನೆಗೆ ಅನುಸಾರವಾಗಿಯೆ ಹೊಸ ಪಾಠಗಳು ಸೃಷ್ಟಿಗೊಳ್ಳುವುದು. ಜಾನಪದದ ಒಂದು ಪಾಠ ದೇಶ/ಕಾಲಪರವಾದ ಹೊಸ ಪರಿಸರಕ್ಕೆ ತಲಪುವಾಗ ಅಲ್ಲಿಗೆ ಅನುಸಾರವಾದ ಪಾಠ ರೂಪುಗೊಳ್ಳುತ್ತದೆ. ಇದನ್ನೆ ಸಾಮೂಹಿಕ ಪುನಸೃಷ್ಟಿ (Communal re-creation) ಎಂದು ಕರೆಯುವುದು. ಜಾನಪದವನ್ನು ಬಳಸಿಕೊಳ್ಳುವ ಸಾಂಘಿಕತೆಯ ವೈಶಿಷ್ಟ್ಯಗಳಿಗೆ ಅನುಸಾರವಾಗಿ ಹೊಸ ಪಠ್ಯ ರೂಪುಗೊಳ್ಳುತ್ತದೆ ಎಂಬುದರಿಂದ ಸಾಂಘಿಕತೆಯ ವೈಶಿಷ್ಟ್ಯವನ್ನು ಅರ್ಥಮಾಡಿಕೊಳ್ಳಲು ಪ್ರಸ್ತುತ ಪಠ್ಯದ ಅ?ಧ್ಯಯನದ ಮೂಲಕ ಸಾಧ್ಯವಾಗುತ್ತದೆ.

ಲಿವಿ ಸ್ಟ್ರಾಸ್ ಪುರಾವೃತ್ತಗಳ ಪಠ್ಯಗಳನ್ನು ಘಟನಾವಿಶ್ಲೇಷಣೆಗೆ ಒಳಪಡಿಸುವಾಗ ಎಲ್ಲ ಪಠ್ಯಗಳೂ ಒಂದೇ ಘಟನೆಯ ರಚನಾಂತರಗಳು ಆಗಿರುವುದಾಗಿ ವಿಶದೀಕರಿಸುತ್ತಾರೆ. ಈ ರಚನಾಂತರಕ್ಕೆ ಕಾರಣ ಸಾಂಘಿಕತೆಯ ವಿಶಿಷ್ಟ ಸ್ವಭಾವವಾಗಿದೆ. ಆಗ ಪಠ್ಯದ ಅಧ್ಯಯನ ಸಾಂಘಿಕತೆಯ ಸ್ವತ್ವದ ಅಧ್ಯಯನಕ್ಕೆ ತಲಪಿಸುತ್ತದೆ. 'ತೆಯ್ಯಂ' ಮತ್ತು 'ತಿಜೆ' ಇವು ವಿಭಿನ್ನವಲ್ಲಿ ಎಂಬ ಹಾಗೆ ಎರಡು ಹೆಸರುಗಳನ್ನೂ ಒಂದಕ್ಕೇ ಬಳಸುವ ಪ್ರದೇಶಗಳು ಉಂಟಾಗುವುದಕ್ಕೆ ಕಾರಣ ಅವರು ಎರಡನ್ನು ಭಿನ್ನವಾಗಿ ಕಾಣುವುದಿಲ್ಲ ಎಂಬುದರಿಂದಲೇ. ಇದಕ್ಕೆ ಉದಾಹರಣೆ ತಲಶ್ಶೇರಿ–ಮಾಹಿ ಪ್ರದೇಶ. ಕಾಸರಗೋಡಿನ ಕೆಲ ಭಾಗಗಳಲ್ಲಿ 'ಭೂತ' ಮತ್ತು 'ತೆಯ್ಯಂ' ಇವುಗಳನ್ನು ಪ್ರತ್ಯೇಕವೆಂದು ಗುರುತಿಸಲು ಆಗದ ಅವಸ್ಥೆಯಿದೆ. ತುಳುನಾಡಿನ 'ಭೂಕಪೂಕಣ್ಣೂರ್– ಕಾಸರಗೋಡು ಜಿಲಲೆಗಳ 'ತೆಯ್ಯಂ' ರೂಪವೂ, ಕೋಜಿಕ್ಕೋಡ್– ಮಲಪ್ಪುಱಂ ಜಿಲ್ಲೆಗಳ 'ತಿಱ'ಯೂ ಒಂದರದ್ದೇ ಪಾಠಭೇದಗಳೆಂದೂ ಇವುಗಳನ್ನು ದೇಶಪರವಾಗಿ ವ್ಯತ್ಯಸ್ತ ಕೋಣೆಗಳಾಗಿ ತಿರುಗಿಸಲು ಸಾಧ್ಯವಾಗದ ಹಾಗೆ ಒಂದು ಇನ್ನೊಂದರೊಳಕ್ಕೆ ಪ್ರವೇಶಿಸುವ ರೀತಿಯೆ ಇರುವುದೆಂದೂ ಇದು ತೋರಿಕೊಡುತ್ತದೆ. ಇವು ಒಳಗೊಂಡಿರುವ ವೈಶಿಷ್ಟ್ಯಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಾಗ ವಿಶ್ವಾಸದಾಢ್ಯಕ, ಪ್ರಕೃತಿಕ ಸ್ವಭಾವ ಮೊದಲಾದ ವಿಪಯಗಳಲಿ 'ಭೂತ'ವೂ, ಕಾಮೌಲ್ಯ, ಆಚರಣೆಯ ಬಿಗಿಕಟ್ಟು ಮೊದಲಾದ ವಿಷಯದಲ್ಲಿ 'ತೆಯ್ಯ'ವೂ ಸಶಕ್ತವಾಗಿವೆ ಎಂಬುದನ್ನು ಕಾಣಬಹುದು. 'ತಿಱ'ಕ್ಕೆ ಬರುವಾಗ ಹೆಚ್ಚಿನ ಘಟಕಗಳು ದುರ್ಬಲವಾಗಿಬಿಡುತ್ತವೆ. ಪಾಠಗಳಿಗೆ ಒದಗಿದ ಈ ಬಗೆ ಅವಸ್ಥಾವಿಶೇಷಗಳನ್ನು ಸೃಷ್ಟಿಸಿದ ಸಾಂಗಿಕತೆಯನ್ನು ಹತ್ತಿರದಿಂದ ತಿಳಿಯಲು ಸಾಧ್ಯವಾಗುತ್ತದೆ.

ತೆಯ್ಯವನ್ನೂ 'ತಿಱ'ವನ್ನೂ ಗ್ರಾಮೀಣ ನೃತ್ತರೂಪಗಳೆಂದು ಪರಿಗಣಿಸುತ್ತಾರಾದರೂ ಇವುಗಳ ಹಿಂದುಗಡೆ ಒಂದೊಂದು ಕಥೆ ಇದೆ ಎಂಬುದೂ, ಕೆಲವು ಸಂದರ್ಭಗಳಲ್ಲಾದರೂ ಈ ಕಥೆಯ ಕೆಲ ಭಾಗಗಳಿಗೆ ರಂಗಾವಿಷ್ಕಾರಗಳನ್ನು ನೀಡಲಾಗುತ್ತದೆ ಎಂಬುದೂ ಜಾನಪದ ನಾಟಕದೊಂದಿಗೆ ಇದಕ್ಕಿರುವ ಸಂಬಂಧವನ್ನು ಸೂಚಿಸುತ್ತದೆ. ಅಧ್ಯಯನದ ಸೌಲಭ್ಯಕ್ಕಾಗಿ ಗ್ರಾಮೀಣನೃತ್ತದ ವಿಭಾಗಕ್ಕೆ ಸೇರಿಸಲಾಯಿತು ಎಂಬುದಷ್ಟೆ ಗ್ರಾಹ್ಯ.

ಪುರಾವೃತ್ತ

ಕೇರಳದಲ್ಲಿ ಹಲವಾರು ಕಡೆಗಳಲ್ಲಿ ಆರಾಧನೆಗೊಳ್ಳುವ ಒಂದು ಮೂರ್ತಿ 'ಕುಟ್ಟಿಚ್ಚಾತ್ತನ್' ಸರಿಯಾದ ರೀತಿಯಲ್ಲಿ 'ಚಾತ್ತನ್' ಅನ್ನು ಪೂಜಿಸಿದರೆ ಆತ ಎಣಿಸಿದ ಕೆಲಸ ಸಿದ್ಧಿಸುತ್ತದೆ ಎಂದು ಹಳಗಾಲದಿಂದಲೂ ಬಂದ ನಂಬಿಕೆ.

ಕುಟ್ಟಿಚ್ಚಾತ್ತನ ಜನಪದ ಬಗೆಗೆ ವಿವರಿಸುವ ಒಂದು ನೀಳವಾದ 'ತೋಱ್ಱಂ ಪಾಟು' ಕೋಜಿಕ್ಕೋಡು ಜಿಲಲೆಯಲ್ಲಿ ಪ್ರಸರಿಸಿದೆ.

ಕಾಳಕಾಟ್ಟು 'ಇಲ್ಲಂ' (ಮನೆ)ನಲ್ಲಿ ಹೋಮ ನಡೆಸಿದಾಗ, ಅಲ್ಲಿನ ಕೃಷಿಕೂಲಿ ಎಂಗಸಾದ ಚೆಱುಮಿ ಎಂಬವಳಿಗೆ ಕೊಟ್ಟ ಮಂತ್ರಪಿಂಡ ತಿಂದ ಫಲವಾಗಿ ಅವಳು ಹಡೆದ ಮೂರ್ತಿಯೇ ಕುಟ್ಟಿಚ್ಚಾತ್ತನ್. ಭಯಾನಕವಾದ ಆ ರೂಪದ ಬಗೆಗೆ ಪಾಟಿನಲ್ಲಿ ಹೀಗೆ ವಿವರಿಸಿದೆ–

'ತಿರುಮಗನ್ ಪಿಜೆನ್ನು ಭುಮಿಯಿಲ್ ವೀಮಿಂ ಕಾಲಂ
(ಸಿರಿಮಗನು ಹಡೆದು ಭೂಮಿಯೊಳು ಬೀಳುವ ಕಾಲ)
ಜಿಡು ಜಿಡೆ ಜಿಟ್ಟಿ ಮೂನ್ನು ವೈರಂ ಕೊಂಡು
(ನಡ ನಡ ನಡುಗಿತು ಮೂರು ಬೊಬ್ಬೆಯಿಂದ)
ತಿರುಗಮಗನ್ ಪಿಱನ್ನು ಭುಮಿಯಲ್ ವೀಮಿಂಕಾಲಂ
(ಸಿರಿಮಗನು ಹಡೆದು ಭೂಮಿಯೊಳು ಬೀಳುವ ಕಾಲ)
ಐದಿನಾಲು ಲೋಕವುಂ ನಡುಙ್ಙಿಕ್ಕಂಡು
(ಹದಿನಾಲ್ಕು ಲೋಕವೂ ನಡುಗಿತಂದು)
ಮೂರ್ತಿಯಿಲ್ ವೂವುಂಡ್ವನು ಮೂನ್ನಾಂ ತೃಕ್ಕಣ್ಣ್
(ಮೂರ್ಧನ್ಯದಲ್ಲುಂಟು ಹೂವವಗೆ ಮೂರನೆ ಕಣ್ಣು)
ಮಂಜಾಡಿಕುರು ಪೋಲೆ ಚುಕನ್ನಕಣ್ಣ್
(ಮಂಚಡಿಗೆಬಿತ್ತಂತೆ ಕೆಂಪಗಿಹ ಕಣ್ಣು)
ವಲತ್ತೆ ಕಯ್ಯಿಲೊರು ಕಾಜ್ಞಿರಪ್ಪೊಂದಿ
(ಬಲದ ಕೈಯಲೊಂದುಕಾಸರಕ ಮರದ ಖಡ್ಗ)
ಇಡುತ್ತೆ ಕಯ್ಯಿಲೊರು ತೀಯುಂ ಕೊಟ್ಟಯುಂ
(ಎಡವ ಕಯ್ಯಲೊಂದು ಬೆಂಕಯೂ ಬಟ್ಟಿಯೂ)
ಕೂಂದಲುಂ ಪಿರಿಚ್ಚುಕೆಟ್ಟಿ ಕುಜಿಯ ಕುಟ್ಟಿ
(ಕೂದಲನು ತಿರುಪಿಕಟ್ಟಿದ ಗಿಡ್ಡದ ಮಗು)
ಕುಕ್ಕುಟಪ್ಪರಿಶಮಾಯಿ ಉರುಂಡುರುಂಡ್
(ಕೋಳಿಗುರಾಣಿಯೊಂದಿಗೆ ಉರುಳುರುಳ್ದು)
ವಲತ್ತೆ ತೃಕ್ಕಾಲ್ಕ್ಕೊರು ಪೊನ್‌ಚಿಲಂಬುಂಡ್
(ಬಲದ ಸಿರಿಗಾಲಿಗೊಂದು ಹೊನ್ನ ಗ್ಗರವು)
ಇಡತ್ತೆ ತೃಕ್ಕಾಲ್ಕ್ಕು ವೆಳ್ಳಿ ಚ್ಚಿಲಂಬುಂಡ್

(ಎಡದ ಸಿರಿಕಾಲಿಗೆ ಬೆಳ್ಳಿ ಗಗ್ಗರವುಯು)

ವಣ್ಣತ್ತಿಲೆತ್ರಯುಂ ವಳರ್ನೊರುವನ್

(ಅಡ್ಡಕ್ಕೆ ಎಷ್ಟೂ ಬೆಳೆದಂಥವೊಬ್ಬ)

ನೀಳತ್ತಿಲೊನ್ನು ಕುಜಿಯಕುಟ್ಟಿ'

(ನೀಟಕ್ಕೆ ಒಂದು ಗಿಡರ್ದದ ಪುಟ್ಟ)

ವಿಷಯ ಗೊತ್ತಾಗಿ ಕಾಳಕ್ಕಾಡರ್ (ಬ್ರಾಹ್ಮಣ) ಬಂದು ಮಗುವನ್ನು ನೋಡಿದರು–

'ಕಾಳಕ್ಕಾಡರ್ ತೀಂಡಿಚ್ಚೆನ್ನು ನೋಕ್ಕುನ್ನೇರಂ

(ಕಾಳಕಾಡರು ಮಡಿಯೆನ್ನದೆ ಬಮದು ನೋಡುವಾಗ)

ಕರಿಂಗಣ್ಣುರುಟ್ಟಿ ದೈವಂ ಮಿಜಿಚ್ಚು ನೋಕ್ಕುನು

(ಕರಿಗಣ್ಣನುರುಳಿಸಿ ದೈವ ತೆರೆದು ನೋಡುವ)

ಚೆಜುಮನುಮಲ್ಲ ಪೆಣ್ಣೇ ಚೆರುಮಿಯುಮಲ್ಲ

(ಕಿರುಮಗನಲ್ಲ ಹೆಣ್ಣೇ ಕಿರುಮಗಳೂ ಅಲ್ಲ)

ಇದೊರು ಕುಲದೈವಮಾಣೆಡಿ ಪೆಣ್ಣೇ

(ಇದೊಂದು ಕುಲದೈವವಾಗಿಹುದು ಹೆಣ್ಣೇ)

ಕೊಲ್ಲಾದೆ ಪೋಜ್ಜಿಕ್ಕೋ ಚೆಜುಮಗನ್ ಚಾತ್ತನೆ

(ಕೊಲ್ಲದೆ ಸಾಕಿಕೋ ಕಿರುಮಗನ ಚಾತ್ತನ)

ನೀ ಮೇಎಯ್‌ಕ್ಕುಂ ಕಾಳೇನ ಚೆರುಮನ್ ಮೇಯ್ಕುಂ'

(ನೀನು ಮೇಯಿಸುವ ಎತ್ತನ್ನು ಕಿರುಮಗ ಮೇಯಿಸುವನು)

ಅದ್ಭುತಕರವಾದ ಶಕ್ತಿಯೊಂದಿಗೆ ಬೆಳೆದುಬಂದ ಚಾತ್ತನ್ 'ಇಲ್ಲಂ'ನ ಎತ್ತುಗಳನ್ನು ಮೇಯಿಸಲೆಂದು ಹೋದರೂ ಕೊನೆಯಲಿ ಮನೆಯವರೊಂದಿಗೆ ವಿರಸವಾಯಿತು. ಅನಂತರ ಹಲವು ದಿಕ್ಕುಗಳಲ್ಲಿ ಸಂಚರಿಸಿ ಕೀಟಲೆ ತೋರುತ್ತಲೂ ಅಕ್ರಮಿಗಳನ್ನು ದಂಡಿಸುತ್ತಲೂ ಬಂದ ಬಳಿಕ 'ಚಾಲ'ದಲ್ಲಿ ಪೆರುಮಲಯನ ಮನೆಗೆ ಬಂದು ಅಲ್ಲಿ ಉಳಕೊಳ್ಳುತ್ತಾನೆ. ಇದು ಪಾಟಿನಲ್ಲಿ ಪ್ರತಿಪಾದಿಸುವ ನೀಳವಾದ ಕಥೆಯ ಸಾರ.

ಅನೀತಿಯೂ ಅಕ್ರಮವೂ ಎಲ್ಲಿ ಕಂಡರೂ ಅದನ್ನು ಎದುರಿಸುವುದ. ತನಗೆ ಸೇವೆ ನೀಡಿದವರಿಗೆ ಲೆಕ್ಕಮಿತಿಯಿಲ್ಲದೆ ಸಹಾಯ ನೀಡುವ ಕುಟ್ಟಿಚ್ಚಾತ್ತನ ಪರಾಕ್ರಮಗಳ ಕುರಿತಾಗಿ ಧಾರಾಳ ಕತೆಗಳಿವೆ. ಆದರೆ ಆ ಬಗ್ಗೆ ಕತೆಗಳಿಗೆ ಕಾಳತಾಡ್ 'ಇಲ್ಲಂ'ನೊಮದಿಗೆ ಯಾವುದೇ ಸಂಬಂಧವಿಲ್ಲ. ('ಇಲ್ಲಂ' ಎಂದರೆ ಬ್ರಾಹ್ಮಣನ ಮನೆ.)

ಪಯ್ಯನ್ನೂರಿನ ಹತ್ತಿರದ ಮೊಜಿಕ್ಕುನ್ನ್ ಎಂಬಲ್ಲಿ ಪ್ರಸಿದ್ಧವಾದುದು 'ಕಾಳಕಾಟ್ಟಿಲ್ಲಂ' ಇಲ್ಲಿ ಹೋಮಕುಂಡದಿಂದ ಕುಟ್ಟಿಚ್ಚಾತ್ತನ್ ಜನನಹೊಂದಿದ ಎಂದು ನಂಬಲಾಗುತ್ತಿದೆ. 'ಕಾಳಕಾಟ್ಟಿಲಂ'ನಲ್ಲಿ ಈ ದೇವನನ್ನು ಸಂಕಲ್ಪಿಸಿ ಆರಾಧಿಸಿ ಬದಲಾಗುತ್ತಿದೆ. ಆದರೆ ಇಲ್ಲಿ ಆರಾಧನೆಗೊಳ್ಳುವ ಕುಟ್ಟಿಚ್ಚಾತ್ತನ್ ಪಾಟಿನಲ್ಲಿ

ವಿವರಿಸಿದಂಥ ರೀತಿಯ ಕೀಟಲೆಗಾರನೊ ದಾಂಧಲೆಗಾರನೊ ಅಲ್ಲ. ಆತ ಸತ್ತ್ವಗುಣಮೂರ್ತಿ. ಪ್ರತಿವರ್ಷ ಜನವರಿ ಹತ್ತರಂದು ಕುಟ್ಟಿಚ್ಚಾತ್ತನ ತೆಯ್ಯಂ ನಡೆಸುತ್ತಾರೆ.

ಅನುಷ್ಠಾನ

ಚಾತ್ತನ್‌ನ ರೂಪ ಮುಖ್ಯವಾಗಿ ಮುರು ವಿಧ– ಕರಿಂಕುಟ್ಟಿ, ಪೂಕ್ಕುಟ್ಟಿ, ತೀಕ್ಕುಟ್ಟಿ. ಈ ದೈವ ವೈಷ್ಣವವೆಂದೂ ಶೈವವೆಂದೂ ವಿಭಿನ್ನ ಸಂಕಲ್ಪಗಳೊಂದಿಗೆ ಆರಾಧಿಸುತ್ತಾರೆ. ಕಾಳಕಾಟ್ಟ್ ಇಲ್ಲಂನಲ್ಲಿ ಆರಾಧನೆಗೊಳ್ಳುವುದು ವೈಷ್ಣವ ಸಂಕಲ್ಪವಾದ ಕರಿಂಕುಟ್ಟಿ.

ಮೂರು ಬಗೆ ಕುಟ್ಟಿಚ್ಚಾತ್ತನ್‌ಗಳನ್ನೂ ಪ್ರತಿಷ್ಠಿಸಿ ಆರಾಧನೆಗಳೂ 'ತಿಱ'ಗಳೂ ನಡೆಯುತ್ತವೆ. ಈ 'ತಿಱ'ಗಳ ಅಲಂಕರಣ, ಕಿರೀಟಗಳು ವಿಭಿನ್ನವಾಗಿವೆ.

ಮಧ್ಯಮ ಕರ್ಮಗಳನ್ನು ನಡೆಸಿಬರುವ ಕೆಲ ಸ್ಥಳಗಳಲ್ಲಿ ಕುಟ್ಟಿಚ್ಚಾತ್ತನ 'ವೆಳ್ಳಾಟ' ಕಟ್ಟಿ ಬಂದರೆ ಹಸಿಕೋಳಿಯನ್ನು ತಿನ್ನುವ ಒಂದು ಚಡಂಗ (ಆಚರಣೆ) ನಡೆಯುತ್ತಿತ್ತು. 'ಕೆಟ್ಟಿಯಾಟ್ಟಕ್ಕಾರನ್' (ವೇಷಕಟ್ಟಿ ಆಡುವವನು) ನಡುಗಿಕೊಳ್ಳುವುದರೊಂದಿಗೆ ಜವಾಬ್ದಾರರಿಮದ ಒಂದು ಕೋಳಿಯನ್ನು ಪಡೆದು ಅದರ ಕುತ್ತಿಗೆ ಕಚ್ಚಿ ತುಂಡರಿಸಿದ ಬಳಿಕ ತೆಂಗಿನಕಾಯಿ, ಅವಲಕ್ಕಿ, ಶರಾಬು ಇವುಗಳೊಂದಿಗೆ ಅದನ್ನು ತಿನ್ನುವುದಾಗಿ ತೋರಿಸುತ್ತಾನೆ.

ಕುಟ್ಟಿಚ್ಚಾತ್ತನ 'ತಿಱ' ಕಟ್ಟಿ ಆಡುವುದರ ನಡುವೆ ನಾಟಕೀಯತೆ ಬೆರೆತ ಒಮದು ಸಂದರ್ಭ ಬರುತ್ತದೆ. 'ತಿರ' ಕಟ್ಟುವವರ ಗುಂಪಿನ ಒಬ್ಬ ಅರ್ಚಕನ ವೇಷಧರಿಸಿ ಅಂಗಣದಲ್ಲಿ ಕೆಲ ಪೂಜೆಗಳನ್ನು ಮಾಡುತ್ತಾನೆ. ಇದನ್ನು ನೋಡುವ ಪರಸ್ಪರ ಕದನದಲ್ಲಿ ಇದಿರಾಗುತ್ತಾರೆ. ಅಷ್ಟರಲ್ಲಿ ಕರ್ಮಿ ನಡುಗಿ ಪ್ರಜ್ಞಾಶೂನ್ಯವಾಗಿ ಬೀಳುತ್ತಾನೆ. ಅತಿಪರಾಕ್ರಮಿಯಾದ ಚಾತ್ತನ ಶಕ್ತಿಯನ್ನು ಕುಂದಿಸಲು ಎದುರಾಳಿಗಳು ನಡೆಸಿರಬಹುದಾದ ಕೆಲ ಕರ್ಮಗಳನ್ನು ಈ ವಿಧಿ ನೆನಪು ಮಾಡಿಕೊಡುತ್ತಿರಬಹುದು.

'ಕಾಳಕಾಟ್ಟಿಲ್ಲಂ' ಅನ್ನು ಬಿಟ್ಟರೆ ಕೊಯಲಾಂಡಿ ಎಂಬಲ್ಲಿಗೆ ಸಮೀಪದ ಪೆರುವಟ್ಟೂರಿನ 'ಚಾಲೋಱ' ಕುಟ್ಟಿಚ್ಚಾತ್ತನ್ ಕ್ಷೇತ್ರ ಬಹಳ ಪ್ರಸಿದ್ಧ. 'ಕಾಳಕಾಟ್ಟಿಲ್ಲಂನಲ್ಲಿ ಜನಿಸಿದ ಕುಟ್ಟಿಚ್ಚಾತ್ತನ್ ಚಾಲೋಱಕ್ಕೆ ಓಡಿ ಏರಿದ' ಎಂದು ನಂಬಲಾಗುತ್ತಿದೆ.

ತಿರಯಾಟ್ಟಂ

ಉತ್ತರ ಕೇರಳದ ಪ್ರಧಾನ ಮನೆತನ(ತಱವಾಡು)ಗಳಲ್ಲೆಲ್ಲ ಮನೆಯ **'ಕನ್ನಿಮೂಲೆ'** (ನೈಋತ್ಯದಿಕ್ಕಿನ ಮೂಲೆ)ಯಲ್ಲಿ ಹಲವು ಮೂರ್ತಿಗಳನ್ನು ಸಂಕಲ್ಪಿಸಿದ ಮಂಡಪ ('ಮಂಡಕ')ಗಳನ್ನು ಕಾಣಬಹುದು. ಇನ್ನು ಕೆಲ ಮೂರ್ತಿಗಳನ್ನು ಮಂಡಪದ ಹೊರಗೆ ಒಂದೊಂದು ಕಟ್ಟೆಯ ಮೇಲೆ ನೆಟ್ಟ ಕಲ್ಲಿನಲ್ಲಿ ಸಂಕಲ್ಪಿಸಿರುತ್ತದೆ. ಮನೆತನದ ಅಳಿದ ಪ್ರತಾಪಿ ವ್ಯಕ್ತಿಗಳನ್ನು ಕಾರಣವರನ್ನು ಸ್ಮರಿಸಲು ಇರುವ ಮಂಡಪಗಳೂ ಇರುತ್ತವೆ.

ಈ ಬಗೆ ಆರಾಧನಾಲಯಗಳಲ್ಲಿ ಪ್ರತಿಷ್ಠಿಸಿರುವುದು ಸತ್ತ್ವಗುಣ ಮೂರ್ತಿಗಳಾದ ದೇವತೆಗಳಲ್ಲ. ವಿವಿಧ ರೂಪಗಳಲ್ಲೂ ಭಾವಗಳಲ್ಲೂ ಇರುವ ಭಗವತಿಯನ್ನೂ ಶಿವಸೃಷ್ಟಿಗಳಾದ ದೇವತೆಗಳನ್ನು ಇಲ್ಲಿ ಆರಾಧಿಸಲಾಗುತ್ತದೆ. ಹೊರಗಿರುವ ಕಟ್ಟೆಗಳಲ್ಲಿ ಕುಟ್ಟಿಚ್ಚಾತ್ತನ್, ಗುಳಿಕನ್, ವೀರಭದ್ರನ್ ಮೊದಲಾದ ಮೂರ್ತಿಗಳನ್ನು ಸಂಕಲ್ಪಿಸುತ್ತಾರೆ.

ಈ ದೇವಾಲಯಗಳಲ್ಲಿ ಪ್ರತಿವರ್ಷ ಹಲವು ಬಗೆ ಹರಕೇಗಳೂ, ಹಬ್ಬಗಳೂ ಆಚರಣೆಗೊಳ್ಳುತ್ತವೆ. ಇದರಲ್ಲಿ ಅತ್ಯಂತ ಮುಖ್ಯವಾದದು ಆ ದೇವತೆಗಳ ಪ್ರತೀಕಾತ್ಮಕವಾದ ಕೋಲ ಕಟ್ಟಿ ಆಡುವುದು. ಇದನ್ನೆ 'ತಿಱಯಾಟ್ಟಂ' ಎಂದು ಕರೆಯುವುದು. ಈ ಅನುಷ್ಠಾನ ಕಲೆ ಕೋಟಿಕ್ಕೋಡ್ ಜಿಲ್ಲೆಯ ಗ್ರಾಮ ಪ್ರದೇಶಗಳಲ್ಲೆ ಹೆಚ್ಚಾಗಿ ಕಾಣಬರುವುದು.

ಮೇಲು ಜಾತಿಯವರ ಕ್ಷೇತ್ರಗಳಲ್ಲಿ ಪ್ರಚಾರದಲ್ಲಿ ಇದ್ದುದು ಕೊತ್ತ್, ಕೊಡಿಯಾಟ್ಟಂ, ಕಥಕಳಿ ಮೊದಲಾದ ಕಲಾರೂಪಗಳಾದರೆ ತಱವಾಡುಗಳಲ್ಲೂ ಕಾವುಗಳಲ್ಲೂ 'ತಿಱ' ಮೊದಲಾದ ಅನುಷ್ಠಾನಗಳೆ ನಡೆಯುವುದು.

ಗ್ರಾಮೀಣರ ವಿಶ್ವಾಸಗಳಲ್ಲಿ ಅವಗಣಿಸಲು ಆಗದ ಒಂದು ಸ್ಥಾನವನ್ನು ಗಳಿಸಿರುವ 'ತಿಱಯಾಟ್ಟಂ' ಗಹಳ ಪ್ರಾಚೀನ ಆರಾಧನೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇದರ ಆರಂಭಕಾಲದ ಬಗೆಗೊ, ಆದಿಕಾಲದ ರೂಪದ ಬಗೆಗೊ ಸ್ಪಷ್ಟವಾದ ವಿವರಗಳೇನೂ ಲಭ್ಯವಿಲ್ಲ. ಇದರಲ್ಲಿ ಶಿವಾಂಶಗಳಾದ ದೇವತೆಗಳನ್ನೂ, ಭಗವತಿಯ ವಿವಿಧ ರೂಪಭಾವಗಳ ಮೂರ್ತಿಗಳನ್ನೂ ಆರಾಧಿಸುವುದು, ಆದಿಕಾಲದಲ್ಲಿದ್ದ ಶಿವನ ಮತ್ತು ಶಕ್ತಿಯ ಆರಾಧನೆಯ ಮುಂದುವರಿಕೆಗಳೆಂದು ತರ್ಕಿಸಬಹುದು. ಸವರ್ಣರು ಈ ಬಗೆ ದೇವತೆಗಳನ್ನು ಬೇರೆ ರೀತಿಗಳಲ್ಲಿ ಆರಾಧಿಸುವಾಗ ಇತರರು ದೇವಿಯ ಮತ್ತು ಶಿವನ ಪ್ರತಿರೂಪಗಳನ್ನು ಆರಾದಿಸುವುದು, ಅದರ ಭಾಗವಾಗಿ ಆ ದೇವತೆಗಳ ಕೋಲಗಳನ್ನು ಕಟ್ಟಿ ಆಡುವುದು ಇತ್ಯಾದಿಯನ್ನು ಮಾಡುತ್ತ ಬಂದರು. ಈ ಆರಾಧನಾ ಸಂಪ್ರದಾಯಕ್ಕೆ ದ್ರಾವಿಡರ ಕಾಲದಷ್ಟು ಹಳತನ ಉಂಟೆಂದೂ, ಕಾಲಾಂತರದಲ್ಲಿ ವಿವಿಧ ಸುಧಾರಣೆಗಳು ಪ್ರವೇಶಿಸಿ ಈಗಿನ ಸ್ವರೂಪಕ್ಕೆ ಬಂದಿದೆಯೆಂದೂ ಅನುಮಾನಿಸಲು ಎಡೆಯಿದೆ.

'ಧನು'ಮಾಸದಿಂದ 'ಮೇಡಂ' (ಮೇಷ)ಮಾಸದ (ಜನೆವರಿ–ಫೇಬ್ರವರಿ–ಮಾರ್ಚ–ಎಪ್ರೀಲ್) ವರೆಗೆ 'ತಿಱಯಾಟ್ಟಂ' ನೆಡಯುತ್ತದೆ. 'ತಿಱ' ನಡೆಸುವ ತಱವಾಡಿನ ಜವಾಬ್ದಾರ ಮುಂದಾಗಿಯೆ ಬಂದು ದಿವಸ ತೀರ್ಮಾನಿಸುತ್ತಾನೆ. ಅದು ಆಯಿತಾದರೆ ಮನೆಯಲ್ಲಿ ತುಂಬ ಸಿದ್ಧತೆಗಳನ್ನು ಮಾಡಲುಂಟು.

ಉತ್ಸವ ದಿವಸ ಬೆಳಿಗ್ಗೆ ಕಟ್ಟಿಯಾಡುವವರೂ, ವಾದ್ಯಗಾರರೂ, ಇತರ ಸಹಾಯಕರೂ ಸ್ಥಳಕ್ಕೆ ತಲಪುತ್ತಾರೆ. ಆ ಬಳಿಕ ತಿಱಯಾಟ್ಟದ ಪ್ರಾರಂಭ ಚಡಂಗಗಳು ಶುರುವಾಗುತ್ತವೆ.

ವೆಳ್ಳಾಟ್ಟ್

ಸಂಜೆಯಾಗುತ್ತಲೆ ಕಟ್ಟಿಯಾಟಗಳು ಆರಂಭಗೊಳ್ಳುತ್ತವೆ. ಇದರಲ್ಲಿ 'ವೆಳ್ಳಾಟ್ಟ್', 'ವೆಳ್ಳಕೆಟ್ಟ್', 'ತಜ' ಹೀಗೆ ಪ್ರತಿ ದೇವತೆಗೂ ಆಟದಲ್ಲಿ ಮೂರು ಘಟ್ಟಗಳಿವೆ. ಕೆಲವು ಸ್ಥಳಗಳಲ್ಲಿ 'ವೆಳ್ಳಾಟ್ಟ್' ಮತ್ತು 'ತಿಜ' ಮಾತ್ರ ಇರುವುದುಂಟು.

ತಿಜಯಾಟ್ಟದಲ್ಲಿ ಮೊದಲಾಗಿ ನಡೆಯುವುದು 'ವೆಳ್ಳಾಟ್ಟ್'. ಇದು ದೇವತೆಯ ಸಣ್ಣ ಹರೆಯವನನು ಸೂಚಿಸುವಂಥದು. 'ವೆಳ್ಳಾಟ್ಟ'ಕ್ಕೆ ವೇಷಧಾರಿ ತಲೆಗೆ ಕಿರಿದಾದ ಮುಡಿ, ಎದೆಯಲ್ಲಿ ಮಾಲೆಗಳು, 'ಪಟ್ಟು' ನಿರಿಯುಡುಗೆ ಉಟ್ಟು ತಯಾರಾಗುವ ವೇಷದಲ್ಲರುತ್ತಾನೆ.

'ವೆಳ್ಳಾಟ್ಟ್' ಅಂಗಳಕ್ಕೆ ಬಂದು ದೇವ ಪ್ರತಿಷ್ಠೆಗೆ ಎದುರಾಗಿ ನಿಂತು ಕೈಮುಗಿದ ಬಳಿಕ, ಒಬ್ಬ ವಾದ್ಯಗಾರ ಹೊಡೆಯುವ ತಾಳಕ್ಕೆ ಸರಿಯಾಗಿ ನೃತ್ತವಾಡಲು ತೊಡಗುತ್ತಾನಡ. ಚೆಂಡೆ ಮತ್ತು ಚಕ್ರತಾಳ ಮೂಖ್ಯವಾದ ವಾದ್ಯಗಳು. ತುಂಬ ಹೊತ್ತು ನೃತ್ತಗೈದು ಮುಗಿದರೆ. ಅಂಗಳದಲ್ಲಿರುವ ಅಕ್ಕಿ ಕಟ್ಟೆಯ ಮುಂದೆ ಬಂದು ಕೈಮುಗಿದು ನಿಲ್ಲುತ್ತಾನೆ. ಆಗ ಅವರ ಗುಂಪಿನ ಒಬ್ಬ ಆ ದೇವನನ್ನು ಸ್ತುತಿಸುವ ಅಂಜಡಿ (ಐದುಪೆಟ್ಟು) ಪಾಟು ಅಥವಾ 'ತೋಜ್ಜಿಂ' ಪಾಟು ಹಾಡುತ್ತಾನೆ. ಇದರ ನಡುವೆ ಚೆಂಡೆಯ ಘೋಷ ಮೊಳಗಿಕೊಂಡಿರುತ್ತದೆ. ಒಂದೊಂದು 'ಐದಡಿ'ಯ ಕೊನೆಯಲ್ಲೂ ಆ ಸ್ಥಳದ ಮತ್ತು ಮೂರ್ತಿಯ ಹೆಸರು ಹೇಳಿ ವಂದಿಸುತ್ತಾನೆ. ಉದಾಹರಣೆ–

"ಆದಿನಾಯಕನ್ ಶಿವನರುಳಿ ಚೆಯ್ತನೇರ
(ಆದಿನಾಯಕನಾ ಶಿವನೊರೆದನುಗ್ರಹಿಸಿದ ವೇಳೆ
ಮಾದರವೋಡೆ ದೇವಿಯತಿಮೋದಾಲ್
(ಗಾದರದೋಳು ದೇವಿಯತಿಮೋದದೊಳಗೆ)

ಅರಿಯ ಕುನ್ನಿಮಾಲ ಧರಿಚ್ಚುಮಾರ್‌ವಿಟತ್ತಿ
(ಶ್ರೇಷ್ಠದಾ ಗುಲಗುಂಜಿ ಮಾಲೆ ಧರಿಸಿಯೆದೆಯ)
ಲವಿಕುಂ ನೋಕ್ಕಿಕ್ಕೊಂಡವಳ್ ಪಿನ್ನೆ,
(ಚೆಲುವನು ನೋಡಿಕೊಂಡವಳು ಮತ್ತೆ)

ಕೊಟುಯುಮೆಡುತ್ತಿಟ್ಟು ಕೋಲುಮಾಯ್ ಹರನ್ ಮುಂಬಿಲ್

(ಕೋಪದ ತೆಗೆದಿಕ್ಕಿ ಶೋಭೆಯೊಂದಿಗೆ ಹರನೆ ಮುಂದೆ)

ಪುಷ್ಪಮೋದೇನ ನಿಲ್‍ಕ್ಕುನ್ನತು ಕಂಡು

(ತುಂಬಿದ ಮೋದದೊಳು ನೀತಿಹುದು ಕಂಡು)

ನೀಲಕಂಠನುಂ ಚಿರಿಚ್ಚರುಳಿ ಚೆಯ್ತನೇರಂ

(ನೀಲಕಂಠ ತಾ ನಕ್ಕು ನುಡಿದ ನಾಗ)

'ಲೀಲ'ಯೆನ್ನೊರು ನಾಮಮರುಳ್ ಚೆಯ್ತು

(ಲೀಲ' ಎನುವೊಂದು ಪೆಸರು ನಿನಗೆಂದು)

ಬಾಲಮೇದಿನಿ ದೇವಿ ಪೋಲನ್ನು ಧರೆಯಿಂಗಲ್

(ಬಾಲ ಮೇದಿನಿ ದೇವಿಯೋಲಂದು ಧರೆಯೊಳಗೆ

ಲೀಲಗಳ್ ಕಾಟ್ಟಿ ಕಾಟ್ಟಿಲ್ ನಟಕ್ಕುಂಬೋಳ್

(ಲೀಲೆಗಳ ತೋರಿ ಕಾಡೊಳೂ ನಡೆಯುವಾಗ)

ಮಾರಸಾಯಕಮೇಙ್ಙ ಮಂಗಯೆಪ್ಪುಣರ್‍ನ್ನಪ್ಪೋಳ್

(ಮಾರಸಾಯಕ ತಾಗಿ ಚೆಲುವೆಯೊಳು ಕೂಡಿದಾಗ)

ಮಾರನುಸಮನಾಯ ಮಗನುಂಡಾಯಿ

(ಮಾರಗೆಸಮನಾದ ಮಗನುಂಟಾದ)

ಪಾರಿತಿಲ್ ಬಾಲುಶ್ಶೇರಿ ಕೋಟ್ಟಯಿಲ್ ಮರುವೀಡುಂ

(ಧರೆಯೊಳು ಬಾಲುಶ್ಶೇರಿ ಕೋಟೆಯೊಳು ನೆಲೆಸಿಹ)

ಪರದೈವಮೇ ನಿತ್ಯಂ ವಣಙ್ಙುನ್ನೇನ್ "

(ಪರದೈವವೇ ನಿತ್ಯವು ಬಾಗಿಮಿಪೆನ್)

ಈಗ ತೋಙ್ಙಂ ಪಾಟಿಗೇ ಉದಾಹರಣೆ–ಸ

'ತೆಯ್. . . . . ತೆಯ್. . . . .

ಎಮಿನ್ನಳ್ಳಿ ವರಿಕಯೆನ್ಡೆ ಪೂಕ್ಕುಟ್ಟಿಚ್ಚಾತ್ತಾ

(ಶೋಭೆಯೊಳೆದ್ದು ಬಾ ಎನ್ನ ಪೂಕಟ್ಟಿಚ್ಚಾತ್ತಾ)

ತಾನ್ ವರುವಾನ್ ನಲ್ಲ ಸಮಯಮಾಣಿಪ್ಪೋಳ್

(ನೇನು ಬರುವರೆ ಸೊಗದ ಸಮಯವಹುದೀಗ)

ತಾನೆಮಿನ್ನಳ್ಳುನ್ನ ತಿರುನೆವಿಲಿಲೋ
(ನೀನೆದ್ದು ಬರುವಂಥ ಸಿರಿನೆಳಲಲಿ)
ಎಂದೆಲ್ಲಾ ಮೇಂದೆಲ್ಲಾಮೊರುಕ್ಕುಙ್ಙಳ್‌ಮೇಣಂ?
(ಏನೆಲ್ಲವೇನೆಲ್ಲ ಸಜ್ಜಾಗಬೇಕು?)

ನಾಲುಕಾಲುಳ್ಳತೊರು ಪಂದಲು ವೇಣಂ
(ನಾಲ್ಕುಕಾಲಿರುವೊಂದು ಚಪ್ಪರವು ಬೇಕು)
ಪಂದಲಿಲ್ ತೂಕ್ಕಿನೊರು ವಿತಾನಂ ವೇಣಂ
(ಚಪ್ಪರದಿ ನೇಲಿಸಲು ವಿತಾನವರು ಬೇಕು)

ಆಲಿಲ, ಮಾವಿಲಯೋ ಚೆಂಬಕ್ಕಯುಂ
(ಆಲದೆಲೆ, ಮಾವಿನೆಲೆ ಚಂಪಕವೂ)
ಒನ್ನಿಡವಿಟ್ಟಿಟ್ಟದಾ ಪೂವುಂ ತೂಕ್ಕುನ್ನು
(ಒಂದೆಡೆಬಿಟ್ಟದೋ ಹೂವ ತೂಗುವರು)

ನಿಱಚ್ಚುವೆಚ್ಚದದಾ ನಿಱಪಱಯಾಣ್
(ತುಂಬಿಸಿಟ್ಟೊಹುದದೊ ತುಂಬುಕಳಸಿಗೆಯು)
ತುಕ್ಕಿವೆಚ್ಚದದಾ ತುಡರ್‌ವಿಳಿಕ್ಕಾಣೇ
(ತುಗಿಸಿಟ್ಟಿಹುದದೊ ನಂದಾದೀಪವಹುದೊ)

ಇವಯೆಲ್ಲಾಂ ವೆಚ್ಚು ಞಙ್ಙಳ್ ಸ್ತುತಿಕ್ಕುನ್ನ ನೇರಂ
(ಇವನೆಲ್ಲಾ ಇರಿಸಿನಾವು ಸ್ತುತಿಗೈವ ವೇಳೆ)
ಇವಿಡೆ ವನ್ನೊರುವಟ್ಟಂ ವಿರುತುಱಯೇಣಂ
(ಇಲ್ಲಿ ಒಂದೊಂದು ಬಾರಿ ಶ್ರೇಷ್ಠದಿ ಇರಬೇಕು)

ಪೂರಾಡಂ ನಾಲಿಲಲ್ಲೇ ನೀ ಪಿಱನ್ನತ್?
(ಪೂರ್ವಾಷಾಢ ದಿನದಲ್ಲಲ್ಲೇ ನೀ ಜನಿಸಿದ್ದು?)
ಪೂರೋರುಟ್ಟಾದಿ ನಿನ್ಙೆ ಜನನಿನಾಳ್

(ಪೂರ್ವಭಾದ್ರೆಯು ನಿನ್ನ ಜನನಿದಿನವು)

ಪೂವಲ್ಲೆ ಕುಟ್ಟಿ ನಿನ್ಟೆ ತಿರುಮುಡಿಯಲ್ಲೇ? (ಕುಟ್ಟಿ = ಪುಟ್ಟ)
(ಹೂವಲ್ಲೊ ಕುಟ್ಟಿ ನಿನ್ನ ತಿರುಮುಡಿಯಲ್ಲೋ?)
ಚಾಂದಲ್ಲೇ ಕುಟ್ಟಿ ನಿನ್ಟೆ ತೊಡುಕುಱಿಯಾಣೋ
(ಚಂದನವಲ್ಲೊ ಕುಟ್ಟಿ ನಿನ್ನ ತೊಡೆವ ನಾಮವಹದೊ)

ನಾಲ್ಪತ್ತಿಮೂನ್ನಿಲ್ಲತ್ತು ಕುಡಿಯಿರುನ್ನೋನ್ನೇ
(ನಲ್ವತ್ತ ಮೂರು ಇಲ್ಲಂನೊಳು ನೆಲೆಸಿರುವವನೇ)
ತಿರುವಳ್ಳಂ ವಾಣ ಕುಟ್ಟಿ ಪೂಕ್ಕುಟ್ಟಿಚ್ಚಾತ್ತಾ
(ತಿರುವಲ್ಲ ಆಳಿದ ಕುಟ್ಟಿ ಪೂಕ್ಕುಟ್ಟಿಚ್ಚಾತ್ತಾ)

ಚಾಲಯೋಱ ವನ್ನಿಟ್ಟದಾ ಪಡಿಕಯಱುನ್ನು
(ಏರಿದ ಸಾನ್ನಿಧ್ಯ ಬಂದಿತದೋ ಹೊಸ್ತಿಲು ದಾಡುವನು)
ಮಣಿಪೀಠಂ ಮುಕಳಿಲದಾ ಕುಡಿಯಿರಿಕ್ಕುನ್ನು
(ಮನಿಪೀಠದ ಮೇಲೆಯದೊ ನೆಲೆಯಾಗಿಹನು)

'ಅಂಜಡಿ'ಗಳು ಧಾರಾಳ ಇರುವುದಾದರೂ ಅವುಗಳ ಕೊನೆಯಲ್ಲಿರುವ ದೇವನ ಮತ್ತು ತಱವಾಡಿನ ಹೆಸರುಗಳನ್ನು ಮಾತ್ರ ಬದಲಿಸಿ ಬೇರೆ ಸ್ಥಳಗಳಲ್ಲಿ ಇದನ್ನೆ ಬಳಸುತ್ತಾರೆ. 'ತೋಱ್ಱಂ' ಬಹಳ ದೀರ್ಘಬಂಧ ಆಗಿರುವುದರಿಂದ ಒಮ್ಮೆಯೂ ಪೂರ್ಣವಾಗಿ ಹೇಳಲು ಸಮಯ ಸಿಕ್ಕುವುದಿಲ್ಲ.

ಮೂರು ಅಥವಾ ನಾಲ್ಕು 'ಅಂಜಡಿ'ಗಳನ್ನೊ, ತೋಱ್ಱಂನ ಒಂದಿಷ್ಟು ಸಾಲುಗಳನ್ನೊ ಹೇಳುವಷ್ಟರಲ್ಲಿ ತನ್ನೊಳಗೆ ದೈವ ಚೈತನ್ಯದ ಆವೇಶವನ್ನು ಪಡೆಯುವ ದೈವದ 'ಕಟ್ಟುಗಾರ' ದೇವಪದವಿಗೆ ಏರಿ ನಡುಗಿ ಹಾರತೊಡಗುತ್ತಾನೆ. ಬಳಿಕ ಖಡ್ಗ, ಗುರಾಣಿ (ಪರಿಚ) ಮೊದಲಾದ ಆಯುಧಗಳನ್ನು ತೆಗೆದುಕೊಂಡು ಪ್ರಯೋಗಿಸಿದ ಬಳಿಕ, 'ಅರುಳಪ್ಪಾಡ್' (ದೈವದ ಒರೆಹ) ಹೇಳುತ್ತಾನೆ. ಕರ್ತೃಗಳೊಂದಿಗೂ, ಊರವರೊಂದಿಗೂ ದೈವಕ್ಕೆ ಹೇಳಲಿರುವುದನ್ನು ಹೇಳುವುದಕ್ಕೆ 'ಅರುಳಪ್ಪಾಡ್' (ಒರೆಹ) ಎಂದು ಹೆಸರು. ಅದು ಮುಗಿದರೆ ಅಕ್ಕಿ, ತೆಂಗಿನಕಾಯಿಗಳನ್ನು ಬೇಕಾದವರಿಗೆಲ್ಲ ಕೈಯೆತ್ತಿಕೊಟ್ಟು ಹರಸಿ, ಬೇಕಾದವರಿಗೆಲ್ಲ ಬೀಳ್ಯ, ಅಡಕೆ ಕೊಟ್ಟು, ಗುಡಿಗೆ ಮರಳಿ ವಂದಿಸುವುದರೊಂದಿಗೆ ಈ ಚಡಂಗದ ಮುಕ್ತಾಯ.

ವೆಳ್ಳಕ್ಕೆಟ್ಟ್

ಎಲ್ಲ ದೇವತೆಗಳಿಗೂ ಅನ್ವಯಿಸುವ 'ವೆಳ್ಳಾಟ್ಟ್' ಕಳೆದರೆ ಅನಂತರ ತೊಡಗುವುದು 'ವೆಳ್ಳಕ್ಕೆಟ್ಟ್'. 'ಅಂಜಡಿ' ಹೇಳಿ ಆವೇಶಗೊಳ್ಳುವುದರೊಂದಿಗೆ ಕರ್ತೃವಿನಿಂದ ಒಂದು ಹೊಸ ಬಿಳಿ ಪಂಚೆಯನ್ನು ಪಡೆದು, ಅದನ್ನು ತಲೆಯ ಮೇಲೆ ಬೀಸುತ್ತ ಬಹಳ ಹೊತ್ತು ನೃತ್ತವನ್ನಾಡಿ ಕೊನೆಗೆ ಅದನ್ನು 'ಕಟ್ಟುಗಾರ' ತಲೆಗೆ ಕಟ್ಟಿಕೊಳ್ಳುತ್ತಾನೆ. ಆ ಬಳಿಕ ಆಯುಧ ಪ್ರಯೋಗಗಳನ್ನು ನಡೆಸಿ, 'ಅರುಳಪ್ಪಾಡ್' ಹೇಳಿ, ವೇಗವಾಗಿ ಚಡಂಗವನ್ನು ಕೊನೆಗೊಳಿಸುತ್ತಾನೆ. ತಲೆಯಲ್ಲಿ ಹೊಸಬಟ್ಟೆ ಕಟ್ಟುವ ವಿಧಿ ಇರುವುದರಿಂದ ಇದಕ್ಕೆ 'ವೆಳ್ಳಕ್ಕೆಟ್ಟ್' (ಬಿಳಿದುಕಟ್ಟುಗೆ) ಎಂಬ ಹೆಸರು.

ತಱ

ಬಳಿಕ ತುಂಬ ಹೊತ್ತಿನ ವಿರಾಮದ ಮೇಲೆ 'ತಿಱಯಾಟ್ಟಂ' (ತಿಱ ಆಟ) ಆರಂಭ. 'ತಿಱ' ಎಂಬುದಕ್ಕೆ 'ಅರ್ಧವೃತ್ತಾಕಾರದ ತೆಳು ಮರದ ಹಲಗೆಯಿಂದ ತಯಾರಿಸಿ ತಲೆಯಲ್ಲಿ ದರಿಸುವ ಒಂದು ಭೂಷಣ' ಎಂಬ ಅರ್ಥವಿದೆ. ಬಣ್ಣದ ಬೆಗಡೆಹಾಳೆಗಳನ್ನು ಕೂರಿಸಿ ಸೊಗಸುಗೊಳ್ಳುವ 'ತಿಱ'ಯನ್ನು ತಲೆಗೆ ಕಟ್ಟಿಕೊಂಡ ಬಳಿಕ ಆಡುವ ಕ್ರಿಯೆಗೆ 'ತಿಱಯಾಟ್ಟಂ' ಎಂದು ಹೆಸರಾಗಿರಬೇಕು.

'ತಿಱ' (ವೇಷ)ದ ಬರುವಿಕೆ ದೊಡ್ಡ ಸಂಭ್ರಮ ಆಡಂಬರಗಳೊಂದಿಗೆ ನಡೆಯುತ್ತದೆ. ತಲೆಯಲ್ಲಿ ದೊಡ್ಡ 'ಮುಡಿ' (ಶಿರೋಭೂಷಣ), ಮುಖದಲ್ಲೂ ಎದೆಯಲ್ಲೂ ಕೌಶಲಭರಿತ ಬಣ್ಣಗಳ ಚಿತ್ರಬರೆಹ, ಮೈಗೆಲ್ಲ ಅನೇಕ ಬಗೆಯ ಆಭರಣಗಳು, ಕೈಗಳಲ್ಲಿ ಖಡ್ಗ, ಗುರಾಣಿಗಳ, ಕಟಿಯಲ್ಲಿ ಬಟ್ಟೆ ಸುತ್ತಿ ಕಟ್ಟಿ ಮಾಡಿದ ದೊಡ್ಡ 'ಉಡುಗೆಕಟ್ಟು' (ಉಡುತ್ತುಕೆಟ್ಟ್)ಇವೆಲ್ಲ ವೇಷಕ್ಕೆ ಗಾಂಭೀರ್ಯ ನೀಡುತ್ತವೆ. ಆ ವೇಳೆಗೆ ಕದೊನಿ, ವಾದ್ಯಗಳು ಬಿರುಸಾಗಿ ಮೊಳಗಿ ದಶದಿಕ್ಕುಗಳು ಅನುಸರಣಿಸುತ್ತವೆ. ಅದರೊಂದಿಗೆ ಉರಿಸ ಹಿಡಿದ ತೆಂಗಿನಗರಿಯದೊಂದಿಯ ಬೆಳಕಿನಲ್ಲಿ ತಿಱ'ಯ ವೇಷ ಅತ್ಯಾಕರ್ಷಕವಾಗಿ ಅಂಗಳವಿಡೀ ಅವರಿಸಿ ವಿರಾಜೀಸುತ್ತದೆ.

ಒಂದೊಂದು 'ತಱ'ಕ್ಕೂ ಪ್ರತ್ಯೇಕ ತಾಳಗಳೂ ಅದಕ್ಕೆ ಅನುಸಾರವಾದ ನೃತ್ತರೀತಿಗಳೂ ಇವೆ. ಆರಂಭದಲ್ಲೆ 'ನಡೆ'(ದೇಗುಲದ ಬಾಗಿಲು) ಯಿಂದ ಹೊರಟು ಕ್ಷೇತ್ರದ ಅಂಗಳದ ವರೆಗೆ ನೃತ್ತದೊಂದಿಗಾಗುವ ಬರೋಣವನ್ನು 'ನಡಯಾಟ್ಟಂ' ಎಂದು ಕರೆಯುತ್ತಾರೆ. ಅನಂತರ 'ಅರಿತಱ' (ಅಕ್ಕಿವೇದಿಕೆ) ಏರಿ 'ಗಣಪತಿಯಾಟ್ಟಂ', 'ಸರಸ್ವತಿ ವಂದನಂ'ಗಳನ್ನು ಮುಗಿಸಿ ಅಲ್ಲಿಂದಿಳಿದು 'ಮತಿಪ್ಪು' (ಸುತ್ತಲೂ ಸಾಗುವ ನೃತ್ತ) ನಡೆಯಿತ್ತದೆ. ಆ ಹೊತ್ತಿಗೆಲ್ಲ ಚೆಂಡೆಯಲ್ಲಿ ಅವಶ್ಯವಾದ ಒಂದೊಂದು ಬಗೆ ತಾಳ ನುಡಿಯುತ್ತದೆ. ಇವುಗಳಲ್ಲಿ ಕೆಲವೆಂದರೆ 'ಮುಕ್ಕಣ್ಣಿತ್ತಾಳಂ', 'ಚವಿಟ್ಟು ತಾಳಂ', 'ಚಾಮುಂಡಿತ್ತಾಳಂ',

‘ಇಳಕಿಯಾಟ್ಟಂ’ ಇತ್ಯಾದಿ. ನೃತ್ತ ಚಲನೆ ಬಿರುಸುಗೊಳ್ಳುವಾಗ ಚೆಂಡೆ ನುಡಿತವೂ ದ್ರುತಗತಿಯ ಮಾರ್ಧನ್ಯಕ್ಕೆ ತಲಪುತ್ತದೆ.

ಈ ನೃತ್ತಗಳು ಬಹಳ ಹೊತ್ತು ಸಾಗುತ್ತವೆ. ಅದು ಮುಗಿದರೆ ಹೆಚ್ಚುಕಡಿಮೆ ‘ವೆಳ್ಳಾಟ್ಟ್’ ನಡೆಸಿದ ಎಲ್ಲ ವಿಧಿಗಳ ಪುನರಾವರ್ತನೆಯಾಗಿ ಕೊನೆಗೊಳ್ಳುತ್ತದೆ.

ಕೆಂಪು ಬಣ್ಣ ಪ್ರಾಧಾನ್ಯ ಹೊಂದಿರುವ ವೇಷ, ಭಾವಚಲನೆಗಳು, ಆಡುವಾಗ ನಡನಡುವೆ ಅಟ್ಟಹಾಸ ಕೊಡುವುದು ಇತ್ಯಾದಿಗಳಿಂದ ‘ತಿಱಯಾಟ್ಟ’ಕ್ಕೆ ರೌದ್ರ ರಸಪ್ರಾಧಾನ್ಯ ಬರುತ್ತದೆ.

‘ತಿಱ’ಕ್ಕೆ ಬೆಂಕಿಯೊಂದಿಗೆ ಹತ್ತಿರದ ನಂಟು. ಕೆಲ ‘ತಿಱ’ಗಳ ಕೈಗಳಲ್ಲೂ, ಸೊಂಟದಲ್ಲೂ ಧಗಧಗಿಸುವದೊಂದಿಗಳು, ಆವೇಶಕರವಾದ ‘ಕನಲಾಟ್ಟ’ (ಕೆಂಡದಆಟ)ವೂ ಇದನ್ನು ಹೇಳುತ್ತದೆ.

ಇನ್ನು ಕೆಲ ‘ತಿಱ’ಗಳಿಗೆ ‘ಚಾಂದು ತೇಕ್ಕುಕ’ (ಚಾಂದು ಬಳಿಯುವುದು) ಎಂಬ ಚಡಂಗವಿದೆ. ಹುರಿದ ಬೆಳ್ತಿಗೆ ಅಕ್ಕಿ, ತೆಂಗಿನಗೆರಟೆಯ ಇದ್ದಲು, ಎಳನೀರು ಮೊದಲಾದವುಗಳನ್ನು ಅರೆದು ತಯಾರಿಸಿ ಒಂದು ಬಗೆ   ಕಪ್ಪು ‘ಬಂದ’ವೆ ‘ಚಾಂದ್’.

‘ತಿಱ’ ಆಡುವ ಕೊನೆಭಾಗದಲ್ಲಿ ಮೈಯ ಆಭರಣಗಳನ್ನು ಕಳಚಿ ‘ಅಂಜಡಿ’ ಹಾಡಿನ ಬಳಿಕ ಆವೇಶ ಧರಿಸಿ ಮುಗಿಸಿದರೆ, ಮೇಲೆ ಹೇಳಿದ ‘ಚಾಂದ’ನ್ನು ಸ್ವೀಕರಿಸಿ ಮೈಗೆಲ್ಲ ಪೂಸಲು ಇದೆ. ಮನೆ ಗೋಡೆಗಳಿಗೆಲ್ಲ ಈ ಕಪ್ಪು ಚಾಂದ್ ತಾಗಿಸಿಕೊಂಡ ಕೈಗಳಿಂದ ಹಸ್ತಗಳ ಮುದ್ರೆ ಒತ್ತಲಾಗುವುದು.

‘ಕೆಟ್ಟಿಯಾಟ್ಟ’ (ಕಟ್ಟುಆಟ)ದಲ್ಲಿ ಎಲ್ಲ ಕೋಲಗಳಿಗೂ ವಿಭಿನ್ನ ವೇಷಗಳಿರುತ್ತವೆ. ತಲೆಯಲ್ಲಿ ಧರಿಸುವ ‘ಮುಡಿ’ (ಶಿರೋಭೂಷಣ)ಗಳು, ಮುಖವರ್ಣಿಕೆಗಳು ಮತ್ತು ಎದೆಯಚಿತ್ರಗಳು, ಉಡುಗೆಕಟ್ಟುಗಳು, ಇತರ ಸಿಂಗಾರಗಳು, ಆಯುಧಗಳು, ವಿವಿಧ ಚರಂಗಗಳು ಇವುಗಳಲ್ಲೆ ‘ತಿಱ’ಗಳು ಒಂದಕ್ಕಿಂತ ಒಂದು ಭಿನ್ನವಾಗಿರುತ್ತವೆ. ಕೆಂಡದಲ್ಲಿ ಆಡುವ ‘ತಿಱ’ಗಳು ಸೊಂಟಕ್ಕೆ ತೆಂಗಿನ ಎಳೆಗರಿಗಳ ಸೀಳುಗಳಿಂದ ಸುತ್ತುವುದಕ್ಕಿದೆ. ಉದ್ದನೆಯ ಬಿದರ ಸಲಾಕೆಗೆ ತೆಂಗಿನ ಎಳಗರಿ ಹೊಲಿದುಕಟ್ಟಿ ಎತ್ತರದ ‘ಮುಡಿ’ಗಳನ್ನು ತಯಾರಿಸುವುದಿದೆ. ‘ಕೆಟ್ಟಿಯಾಟ್ಟ’ದ ವೇಷಗಳಿಗೂ ಚಡಂಗಗಳಿಗೂ ಪ್ರಾದೇಶಿಕವಾದ ವ್ಯಾತ್ಯಾಸಗಳೂ ಇರುತ್ತದೆ.

‘ತಿಱಯಾಟ್ಟ’ದಲ್ಲಿ ‘ಭಗವತಿ’, ‘ಕರಿಂಗಾಳಿ’, ‘ರಕ್ತೇಶ್ವರಿ’, ‘ಭಂಡಾರಮೂರ್ತಿ’, ‘ಚಾಮುಂಡಿ’, ‘ಕರಿಯಾತ್ತನ್’, ‘ವೀರಭದ್ರನ್’, ಕುಟ್ಟಿಚ್ಚಾತ್ತನ್’, ‘ಗುಳಿಕನ್’, ‘ಭೈರವನ್’, ‘ತಲಚ್ಚಿಲ್ಲೋನ್’, ‘ಪಾಂಬೂರಿಕ್ಕರುವೋನ್’, ‘ನೀಜ್ಜಿಲ್ಕ್ಕರುವೋನ್’, ‘ಕನ್ನಿಕ್ಕಲ್ಕರುವೋನ್’, ‘ಪೂವವಿಕನ್’, ‘ಅಟಿಮುಜಿಯನ್’ ಮೊದಲಾದ ಮೂರ್ತಿಗಳ ಕೋಲಗಳನ್ನು ಕಟ್ಟಿಯಾಡುತ್ತಾರೆ.

ಕಟ್ಟಿಯಾಡುವ ಉದ್ಯೋಗಿಗಳು ಮುಖ್ಯವಾಗಿ ಮುನ್ನೊಜ್ಜೂನ್ (ವೇಲನ್), ಮಣ್ಣಾನ್ (ವಣ್ಣಾನ್), ಪಾಣನ್ (ಮಲಯನ್) ಮೊದಲಾದವರು. ವಾದ್ಯದವರೂ ಈ ಸಮುದಾಯಗಳಿಗೆ ಸೇರಿದವರೇ.

ಕಟ್ಟಿಯಾಡುವುದರ ಚಡಂಗಗಳೂ, ಮೂಲಭೂತ ಪ್ರಮಾಣಗಳೂ ಪ್ರತಿಪಾದನೆಗೊಳ್ಳವ ಗ್ರಂಥಗಳೊಂದೂ ಇದುವರೆಗೆ ದೊರಕಿಲ್ಲ. ಎಲ್ಲವೂ ಪರಂಪರೆಯನ್ನು ಅನುಸರಿಸಿ ನಡೆದುಬರುತ್ತಿವೆ.

ಪುದಿಯ ಭಗವತಿ ತೆಯ್ಯಂ

(ಅನುಷ್ಠಾನ ನೃತ್ತಂ)

ರಾಮನ್ತಳಿ ರವಿ

ಟಿಪ್ಪಣಿ

ಎಲ್ಲೋ ಇರುವ ದೇವತೆಯನ್ನು ಕರೆದು ಬರಿಸಿ 'ತೋಙ್ಙಂ' ಹಾಡಿ ಸಂತೋಷಗೊಳಿಸಿ ಅನೇಕ ಅನುಷ್ಠಾನಗಳ ಮೂಲಕ 'ಕೋಲಕ್ಕಾರ' (ಕೋಲಕಟ್ಟುವವ)ನಲ್ಲಿ ತಲಪಿಸಿ, ಕೋಲಕ್ಕಾರ ತಾನೇ ದೇವತೆಯಾಗಿ ಆವೇಶಗೊಂಡು, ಕುಣಿದು ಸೇರಿ ನಿಂತ ಭಕ್ತರನ್ನು ಅನುಗ್ರಹಿಸಿ ಬಂದ ಹಾಗೆಯೆ ತಿರುಗಿ ಹೋಗುವುದು 'ತೆಯ್ಯಂ'ನ ಅನುಷ್ಠಾನ ಕ್ರಮ. ದೇವತೆ ಕೋಲಕಾರನ ಶರೀರದಲ್ಲಿ ಪೂರ್ಣವಾಗಿ ನೆಲೆಗೊಳ್ಳುವುದರೊಂದಿಗೆ ತೆಯ್ಯಂನ ಚಲನೆ ಕ್ರಮಬದ್ಧಗೊಳ್ಳುವುದು, ಅದು ವಿಶಿಷ್ಟ ನೃತ್ತರೂಪವಾಗಿ ಪರಿಣಮಿಸಿಯೂ ಇರುವುದು. ಅನಂತರ 'ಮುಡಿ' (ಶಿರೋಭೂಷಣ) ಕಳಚುವ ವರೆಗೆ ಇರುವ ಕೆಲಸಗಳೆಲ್ಲ ಇತರ ಅನುಷ್ಠಾನಗಳನ್ನೊ ನೃತ್ತಗಳನ್ನೊ ಬೇರ್ಪಡಿಸಿ ತಿಳಿಯಲು ಸಾಧ್ಯವಿಲ್ಲದ ರೀತಿಯಲ್ಲಿರುತ್ತವೆ. ಮುನ್ನೂರಕ್ಕೂ ಹೆಚ್ಚು 'ತೆಯ್ಯಂ'ಗಳಿವೆ. ಇವೆಲ್ಲವೂ ಸಂಪೂರ್ಣವಾಗಿ ಒಂದರಿಂದ ಒಂದು ವ್ಯತ್ಯಸ್ತವಾಗಿಲ್ಲವಾದರೂ ರೂಪ, ಭಾವ, ಅನುಷ್ಠಾನ ಕ್ರಮ, ಕಲಾಶ ಇತ್ಯಾದಿಗಳಿಂದ ಒಂದೊಂದು ತೆಯ್ಯವೂ ಸ್ವತ್ವಘಟಿತವಾಗಿ ಕಾಣಿಸಿಕೊಳ್ಳುತ್ತದೆ. ಒಂದು ದೇವತೆ ಒಳಗೊಂಡಿರುವ ಆಶಯವೂ ಆ ದೇವತೆಯ ರೂಪ, ಅನುಷ್ಠಾನಕ್ರಮ, ನೃತ್ತವೈಶಿಷ್ಟ್ಯ ಎಂಬಿತ್ಯಾದಿಗಳೂ ಪರಸ್ಪರ ಹೊಂದಿರುವ ಸಂಬಂಧವು ವಿಶೇಷವಾದ ಅಧ್ಯಯನಾವಕಾಶವನ್ನು ಪಡೆದಿವೆ.

ಈ ಲೇಖನದಲ್ಲಿ ವಿವರಿಸುರವ ಹಾಗೆ ಒಂದೊಂದು ತೆಯ್ಯಕ್ಕೂ 'ಕಲಾಶ' ವ್ಯವಸ್ಥೆಯಿದೆ. ತಾಳವೂ ತಾಳವನ್ನನುಸರಿಸಿ ಕರಚರಣಗಳ ಚಲನಕ್ರಮವೂ ಸೇರಿರುವುದಕ್ಕೇ 'ಕಲಾಶಂ' ಎಂಬ ಹೆಸರು. ಒಂದು ನೃತ್ತ ರೂಪ ಎಂಬ ನೆಲೆಯಲ್ಲಿ ಕಲಾಶದಲ್ಲಿರುವ ಚಲನಕ್ರಮವೂ ಆ ಚಲನ ಕ್ರಮವನ್ನು ನಿಯಂತ್ರಿಸುವ ತಾಳವೂ ಬಹಳ ಮುಖ್ಯ. ಆ ತಾಳ ಪ್ರತಿಕಾತ್ಮಕವೂ ಆಗಿದೆ. ಆದ್ದರಿಂದಲೆ ಮನೆಯಲ್ಲಿ ಕುಳಿತಿರುವಾಗಲೂ ಕಾವಿನಿಂದ ಬರುವ ಚೆಂಡೆಯ ತಾಳವನ್ನು ಕೇಳಿದರೆ, ಯಾವ ಅನುಷ್ಠಾನ ಕಾವಿನಲ್ಲಿ ನಡೆಯುತ್ತಿದೆಂದು ತೆಯ್ಯಂನ ಸಾಂಘಿಕತೆಗೆ ಸೇರಿದ ಒಬ್ಬರಿಗೆ ಹೇಳಲು ಸಾಧ್ಯವಾಗುವುದು. ಹಾಗೆಯೆ ಒಂದೊಂದು ತೆಯ್ಯಂನ ಸ್ವಭಾವವನ್ನು ಅನುಸರಿಸಿ ಇರುವ ರೂಪವೂ ವರ್ಣವೂ, ತಾಳವೂ, ಚಲನಕ್ರಮವೂ ರಚನೆಗೊಂಡಿರುವುದಾಗಿದೆ. ಒಂದೇ ತೆಯ್ಯಂ ಅನುಷ್ಠಾನದ ವ್ಯತ್ಯಸ್ತ ಘಟ್ಟಗಳಲ್ಲಿ ವ್ಯತ್ಯಸ್ತ ನೃತ್ತರೀತಿ ಕೈಗೊಳ್ಳುವುದನ್ನು ಕಾಣಬಹುದು. ಕೋಳಿಯನ್ನು ಕೈಯಲ್ಲಿ ಎತ್ತಿಹಿಡಿದು ನಡೆಸುವ

‘ಕೋಜೆಯಾಟ್ಟ ಕ್ಕಲಾಶ’ವೂ ಹರಸುವ ವೇಳೆಯ ‘ಕುಳುರ್ಮ ಕ್ಕಲಾಶ’ವೂ ಬಹಳ ವ್ಯತ್ಯಾಸ ಹೊಂದಿರುತ್ತದೆ.

ವ್ಯತ್ಯಸ್ತವಾದ ಅನೇಕ ‘ಕಲಾಶ’ಗಳು ‘ಬಾಯಿತಾಳ’ ಗಳಾಗಿಯೆ ಸಾಂಘಿಕತೆಯಲ್ಲಿ ಕಾಪುಗೊಳ್ಳುವುದು. ಆ ಬಗೆ ಬಾಯಿತಾಳಗಳೇ ಈ ಲೇಖನದಲ್ಲಿ ಉದ್ಧಯತವಾಗಿರುವುದ. ‘ತಕಿಟ’, ‘ತಕಧಿಮಿ’ ಮೊದಲಾದ ಶಾಸ್ತ್ರೀಯವಾದ ತಾಳಪದ್ದತಿಯಿಂದ ವ್ಯತ್ಯಸ್ತವಾದ ತಾಳವನ್ನು ಮನಸ್ಸಿನಲ್ಲಿ ಕಾಪಿಡುವುದಕ್ಕೂ ಬೇಕಾದಾಗ ಅದನ್ನು ಪುನಃ ಸೃಷ್ಟಿಸುವುದಕ್ಕೂ ತೆಯ್ಯಂನ ಸಾಂಘಿಕತೆ ಇನ್ನೊಂದೇ ತಾಳ ಪದ್ಧತಿಯನ್ನು ಶತಮಾನಗಳಿಂದ ತನ್ನೊಂದಿಗೆ ಒಯ್ದುತಂದಿದೆ. ಇದು ‘ತೆಯ್ಯಂ’ನ ವೈಶಿಷ್ಟ್ಯ ಮಾತ್ರವಲ್ಲ. ಕೇರಳದ ಎಲ್ಲ ಗ್ರಾಮೀಣ ನೃತ್ತಗಳಲ್ಲೂ ಇದು ಊರ್ಜಿತದಲ್ಲಿದೆ. ಒಂದೊಂದು ದಾಂಘಿಕತೆಗೂ ಒಂದೊಂದು ತಾಳ ಪ್ರಜ್ಞೆ ಇದೆ. ಆ ತಾಳ ಪ್ರಜ್ಞೆಗೆ ಅನುಸಾರವಾಗಿ ವಿಶಿಷ್ಟ ಸಂದರ್ಭಗಳಲ್ಲಿ ರಂಗಗಳಲ್ಲಿ ಕಾಣಿಸಿಕೊಳ್ಳುವ ನೃತ್ತ ರೂಪಗಳನ್ನು ವಾದ್ಯಪ್ರಯೋಗಗಳನ್ನು ಇನ್ನೊಂದು ತಾಳ ಪದ್ಧತಿಯಿಂದ ಅಳೆದು ಬೆಲೆಕಟ್ಟ ಬಹುದಾದುದಲ್ಲ. ಈ ದಿನದವರೆಗೂ ನಡೆದುಕೊಂಡು ಬಂದುದು ಇದಾಗಿದೆ. ಆದ್ದರಿಂದಲೆ ತೆಯ್ಯಂನಲ್ಲಿರುವ ಒಂದು ತಾಳ ಆದಿತಾಳವೆಂದೋ ಚಾಪುತಾಳವೆಂದೊ ಮುದ್ರೆಯಾತ್ತಲು ಹೊರಡುವುದು. ಒಂದು ವ್ಯವಹಾರ ರೂಪ ಎಂಬ ನೆಲೆಯಲ್ಲಿ ತೆಯ್ಯಂ ಎಂಬ ಗ್ರಾಮೀಣ ನೃತ್ತಕ್ಕೆ, ಸಾಂಘಿಕತೆ ಅದನ್ನು ಒಳಗೊಳ್ಳುವ ರೀತಿಯನ್ನನುಸರಿಸಿ, ಸ್ವಂತವಾದ ತಾಳಪದ್ಧತಿಯಿದೆ. ಅದನ್ನು ಆ ರೀತಿಯಲ್ಲೆ ತಿಳಿದುಕೊಳ್ಳುವ ಬದಲು ವೈಜ್ಞಾನಿಕವಾದ ಅಧಿಕಾರ ವ್ಯವಸ್ಥಯ ಅಧೀಶತ್ವ ಕೈಯಲ್ಲಿದೆ ಎಂಬುದರಿಂದ, ಇನ್ನೊಂದು ಅಳತೆಕೋಲಿನಿಂದ ಅಳೆಯಬಹುದಾದುದುಅಲ್ಲ, ಅದು ನಾವು ಅರಿತೂ, ಅರಿಯದೆಯೂ ನಡೆಸುವ ಅಕಾಡೆಮಿಕ್ ಆಸ ಮತ್ತು ಸಾಂಸ್ಕೃತಿಕವಾದ ಫ್ಯಾಸಿಸಂ ಆಗಿದೆ. ಒಂದು ಸಾಂಘಿಕತೆಗೆ ಆ ಸಾಂಘಿಕತೆಯ ಕುರಿತಾಗಿಯೆ ಇರುವ ತಿಳಿವಳಿಕೆ ಬಲು ಮುಖ್ಯ. ಅವರನ್ನು ಅವರದೆ ಕಣ್ಣುಗಳ ಮೂಲಕ ನೋಡಲು ಶ್ರಮಿಸುವಾಗಲೆ ಅವರನ್ನು ನಾವು ಹತ್ತಿರದಿಂದ ತಿಳಿಯುವುದು. ಜಾನಪದದ ಅಧ್ಯಯನ ರೀತಿ ಅದು.

– ಸಂಪಾದಕ

ಪರಾವೃತ್ತ

ಭಗವತಿಗಳಲ್ಲಿ ಸಂಹಾರರುದ್ರೆಯಾದವಳು 'ಪುದಿಯಭಗವತಿ' (ಹೊಸಭಗವತಿ). ಧಗಧಗಿಸುವ ಪಂಜುಗಳು, ಉರುಟು ಮುಡಿ (ಶಿರೋಭೂಷಣ)ಗಳೊಂದಿಗೆ ಕಾಣಿಸುವ ಈ 'ತೆಯ್ಯಂ' ರಂಗದಲ್ಲಿ ಹರಿದಾಡುವಂಥದ್ದು. ಸಂಹಾರಮೂರ್ತಿಯಾದ ಶಿವನು ಜನ್ಮನೀಡಿದ 'ಬೇಂರ್ಬ' (ಶೀಕುರುಂಬ) ದೇವಲೋಕದಲ್ಲಿ ಹೇಮಕುಂಡವನ್ನು ರಚಿಸಿ ಮಹಾದೇವ (ಶಿವ)ನನ್ನು ಭಜಿಸಿದರು. ಅಗ್ನಿ ಕುಂಡದಿಂದ ಹೊಸಬಳಾಗಿ ಉಂಟಾದವಳು 'ಪುದಿಯಭಗವತಿ' ಎಂದು ಐತಿಹ್ಯ. 'ವಸೂರಿ ಮಾಲೆ' (ಸಿಡುಬು)ಯಿಂದ ಜನರಿಗೆ ವಿಮೋಚನೆ ನೀಡಲು ಜನ್ಮವೆತ್ತಿದ ದೇವತೆ. ತೋಱ್ಱಂ ಪಾಟಿನಲ್ಲಿ ಹೇಳುತ್ತದೆ, 'ಕೊಡುವುದಕ್ಕೆ 'ಚೀಂರ್ಬ'ಯೂ, ತೊಲಗಿಸಲು ನಾಟ್ಟು ಪರದೇವತೆ (ಪುದಿಯ ಭಗವತಿ)ಯೂ ಎಂಬ ಕ್ರಮವನ್ನು ಕಲ್ಪಿಪಸಿತು.'

ಬಡಗು ಪ್ರದೇಶದ ಬೆಟ್ಟದ ಬಳಿ ಇರುವ 'ವಿಲ್ವಾಪುರ'ದ ಕೋಟೆಯಲ್ಲಿ ಆರು ಸೋದರರಿಗೆ ಎಳೆಯ ತಂಗಿಯಾಗಿ ಹುಟ್ಟು 'ಪುದಿಯ ಭಗವತಿ' ಭೂಮಿಗೆ ತಲುಪುತ್ತಾಳೆ. ಅಲ್ಲಿ ಜೀವಿಸುತ್ತಿರುವಾಗ ಕಾರ್ತಿಕ ಮಹಾಸುರ ಆರು ಮುಚ್ಚಿದ ಕೋಟೆಬಾಗಿಲನ್ನು ತಳ್ಳಿ ತೆರೆದಳು. ಭರಣಿಯಿಂದ ಎಣ್ಣೆ ತೆಗೆದು ತಲೆಮುಡಿಗೂ ಪಂಜಿಗೂ ಸುರಿದುಕೊಂಡಳು. ಕೋಟೆಗೆ ಕೊಳ್ಳಿಯಿಟ್ಟಳು. ಖಡ್ಗ, ಗುರಾಣಿಗಳನ್ನು ತೆಗೆದು, ಅಂಗಳದ ನಡುವೆ ಸ್ಥಾಪಿಸಿದ ಪೀಠ ಹತ್ತಿ ನೃತ್ಯ ಹೆಜ್ಜೆಹಾಕಿದಳು. ಅಟ್ಟಹಾಸದ ಮೂಲಕ ನಾಡನ್ನು ಎಚ್ಚರಿಸಿದಳು. ಕೋಟೆಯಿಂದ ಪ್ರಯಾಣ ಹೊರಡುವಾಗ 'ಭೂತತ್ತಾನ್' (ಭೂತಗಣ)ಗಳನ್ನು ನಾಲ್ಕು ಕಡೆಗಳಲ್ಲೂ ಕಾವಲು ನಿಲ್ಲಿಸಿದಳು. ಭಗವತಿ ನಾಡನ್ನೂ, ನಾಡಿನ ಜನರನ್ನೂ ನಡುಗಿಸುತ್ತ ದಕ್ಷಿಣದ ಕಡೆಗೆ ಹೊರಟಳು. ತಾತೋಡಾರ್ 'ನಲ್ಲಂಬಲಂ'ನ 'ವೀರಕಾಳಿಯಮ್ಮ'ನನ್ನು ಜತೆಗೆ ಕರೆಸಿಕೊಂಡಳು. ದಾರಿಯಲ್ಲಿ ಕಾಣಸಿಕ್ಕಿದ ಬ್ರಾಹ್ಮಣನನ್ನು ಪಾಡಾರ್‌ಕ್ಕುಳದ (ಪಾಡಾರ್ ಕೊಳದ) ಮೆಟ್ಟಲಲ್ಲಿ ಕಡಿದು ನುರಿದು ಕೊಂದಳು. ಸತ್ತ ಬ್ರಾಹ್ಮಣ ವೀರನಾಗಿ ಮರುಹುಟ್ಟು ಪಡೆದು ಭಗವತಿಯನ್ನು ಹಿಂಬಾಲಿಸಿದ. ಕೋಟ್ಟಿಕ್ಕುಳ ಎಂಬಲ್ಲಿ 'ಮುಕ್ಕುವ' (ಮೀಂಗುಲಿಗ)ರನ್ನು ಒಟ್ಟಾರೆ ಕೊಲೆಮಾಡಿದಳು. 'ಮಾತೋತ್ತ್' ನಲ್ಲಂಬಲದಲ್ಲಿ ಭಗವತಿಯನ್ನೂ ಸೇರಿಸಿಕೊಂಡು ನಾಲ್ವರಾಗಿ ಯಾತ್ರೆ ಮುಂದರಿಯಿತು. ಮತ್ತೆ ತಲಪಿದುದು 'ಅಳ್ಳಡಂ' ಸ್ವರೂಪದಲ್ಲಿ (ರಾಜ್ಯದ ರಾಜಧಾನಿಯಲ್ಲಿ). ಭಗವತಿಯ ಆಗಮನವನ್ನರಿತ ಕ್ಷೇತ್ರಪಾಲನ್ ಹೆದರಿ ನಡುಗಿದ. ಕ್ಷೇತ್ರಪಾಲನನ್ನು ಕರೆದಳು. ಮಾತಾಡಲಿಲ್ಲ. ಸುತ್ತುದರೆಯನ್ನು ತಟ್ಟಿ ಧ್ವಂಸಗೈದು ತನ್ನ ಸಾನ್ನಿಧ್ಯವನ್ನು ತಿಳಿಸಿದಳು. ಕ್ಷೇತ್ರಪಾಲ ಶರಣಾಗಿ ಕ್ಷಮೆಕೇಳಿದ. ಭಗವತಿ ಕ್ಷಮಿಸಿದಳು

ತನ್ನ ಬಲಭಾಗದಲ್ಲಿ ದೇವಿಗೆ ಆಸನವನ್ನು ಸಜ್ಜುಗೊಳಿಸಿದ. ಅಲ್ಲಿಂದ ಮತ್ತೆ ಪ್ರಯಾಣ ಮಂತ್ರವಾದಿಯಾದ ಮೂಲಚ್ಚೇರಿ ಕುರುಪ್ಪಿನ ಬಳಿಗಾಗಿತ್ತು. ಅಡಿಯುಡಿ ಧಗಧಗಿಸುವ ಬೆಂಕಿಯ ದೊಂದಿಗಳೊಂದಿಗೆ ಜೀವಿ ತನ್ನ ಅಂಗಳದಲ್ಲಿ ನಿಂತಾಗಲೆ ಕುರುಪ್ಪ್ ದೇವಿಗೆ ಸಾಷ್ಟಾಂಗವೆರಗಿ ಮಾಪು ಕೇಳಿದ. ಭಗವತಿಗೆ ಇಲ್ಲೂ ಆರೂಢ (ಸ್ಥಾನ)ವೆದ್ದಿತು. ಕೊಲ್ಲುತ್ತ, ಸುಡುತ್ತ ಮುಂದಕ್ಕೆ ಬಂದ ರೌದ್ರದೇವತೆಗೆ ಅನೇಕ ಕಡೆ ಸ್ಥಾನಗಳಾದವು. ಮುಖ್ಯವಾಗಿ ಕುನ್ನಚ್ಚೇರಿ (ತ್ರಿಕ್ಕರಿಪ್ಪೂರ್), ಮುಕ್ಕುವಚ್ಚೇರಿ (ಕವ್ವಾಯಿ) ಮೈಲಂಚೇರಿ (ಪುತ್ತೂರು), ಮಾವಿಚ್ಚೇರಿ (ಪಯ್ಯನ್ನೂರು), ಮೊದಲಾದೆಡೆ 'ಪುದಿಯ ಭಗವತಿ'ಯನ್ನು ಆರಾಧನಾಮೂರ್ತಿಯಾಗಿ ಆರಾಧಿಸುತ್ತಾರೆ. ಇಲ್ಲಿ ಅಲ್ಲದೆ ಅನೇಕ ಕಡೆ 'ಪಳ್ಳಿಯಜಿ' (ಮನೆತನ, ಗ್ರಾಮಗಳ ದೈವಗುಡಿ)ಗಳಲ್ಲೂ 'ಕಾವು'ಗಳಲ್ಲೂ ಪುದಿಯ ಭಗವತಿಯನ್ನು ಇತರ ತೆಯ್ಯಂಗಳ ಜತೆಯಲ್ಲಿ ಕಟ್ಟಿಯಾಡುತ್ತಾರೆ.

ಪುದಿಯ ಭಗವತಿ ಎಂಬ ನೃತ್ತರೂಪ

ಕಿಸ್ಗಾರದ ಕೆಂಬಣ್ಣವಿರುವ ಬಟ್ಟೆ, ತೆಂಗಿನ ಎಳಗರಿಗಳಿಮದ ಅಲಂಕರಿಸುವ ಉರುಟು ಶಿರೋಭೂಷಣ, ತುಂಬಿ ಉರಿಯುವ ಪಂಜುಗಳೊಂದಿಗೆ ಭಗವತಿಯ ಹೊರಡುವಿಕೆ. ಜತೆಯಲ್ಲಿ ವೀರ, ವೀರಕಾಳಿ, ಭದ್ರಕಾಳಿ ಇರುತ್ತಾರೆ. ಕೈಯಲ್ಲಿ 'ಪಳ್ಳಿವಾಳು' (ಖಡ್ಗ), 'ಪರಿಚ' (ಗುರಾಣಿ) ಇರುತ್ತವೆ. ಚೆಂಡೆ–ಚಕ್ರತಾಳಗಳು ಮೊಳಗಿ ಬಿರುಸಿನ ನಾದಾವರಣದಲ್ಲಿ ಆವೇಶ ಪಡೆದು ಆಡುವ ಭಗವತಿಗೆ 'ಕೋಜಿಕ್ಕುರುದಿ' (ಕೋಳಿ ಬಲಿಯ ಕುರುನೀರು) ಮತ್ತು 'ವಡಕ್ಕುಂ ವಾದಿಲ್' (ಬಡಗುಬಾಗಿಲು) ಎಂಬ ಚಡಂಗವೂ ಇರುತ್ತವೆ. ಬಾಳೆ ಗಂಟೆಗಳಿಂದ 'ಕಳ' ತಯಾರಿಸಿ ಒಂದೊಂದು ಕಣದಲ್ಲೂ ಉರಿಯುವ ಕೇಂದ್ರ ಬತ್ತಿಗಳನ್ನಿರಿಸಿ ಕಳಗಳಲ್ಲಿ ಅವಲಕ್ಕಿ, ಹೊದಲು, ಅಕ್ಕಿ, ತೆಂಗಿನಕಾಯಿ, ಎಳನೀರು, ನೈವೇದ್ಯದ ಅನ್ನ ಇತ್ಯಾದಿ ನೈವೇದ್ಯವಿರಿಸಿ ಅದರ ಮುಂಭಾಗದಲ್ಲಿ ಭಗವತಿ ಕುಳಿತು ಕೋಳಿಕಡಿದು 'ಕುರುನೀರು' ನಡೆಸುವುದು ಈ ಅನುಷ್ಠಾನ.

ಇನ್ನು ಈ ತೆಯ್ಯದ ಅನುಷ್ಠಾನ ಕ್ರಮವೂ ಒಂದು ನೃತ್ತ ಎಂಬ ನೆಲೆಯಲ್ಲಿ ಒಂದೊಮದು ಸಂದರ್ಭದಲ್ಲೂ ಅನಸರಿಸುವ ತಾಳವನ್ನು ವಿವರಿಸಬೇಕು.

1. ನಡಕೆಟ್ಟಿಕಲಾಶಂ (ಕೂಡಿಯಾಟ್ಟಂ): ಭಗವತಿ ಪೀಠದಿಂದ ಎದ್ದು ಒಡನೆಯ 'ವೆಳಿಚ್ಚಪ್ಪಾಡಿ'ಗೆ ಅಭಿಮುಖವಾಗಿ 'ನಡೆ'ಯಲ್ಲಿ ನಿಂತು ತಾಳದಲ್ಲಿ ನಾಲ್ಕು ಕಡೆಗಳಿಗೂ ತಿರುಗಿ ನೃತ್ತಗೈಯುತ್ತಾಳೆ. ಇದರ ಬಳಿಕವೆ 'ವೆಳಿಚ್ಚಪಾಡಿ'ನಿಂದ ಆಯುಧ ತೆಗೆದುಕೊಳ್ಳುವುದು.

ಡೈ/ಡೈಗಣ/ಇಂಡ್ವ್/ಇಂಡಯಿನ್/ಡೈಗಣತಕ/ತರಿಕಿಟತಕ

–ಈ ತಾಳವನ್ನು ಅನುಸರಿಸಿ ನೃತ್ತ ಸಾಗುತ್ತದೆ.

2. ಪ್ರದಕ್ಷಿಣೆ ನಡೆಸುವ 'ಕಲಾಶಂ': ವೆಳಿಚ್ಚಪ್ಪಾಡ್ ಮತ್ತು ಭಗವತಿ ಅಭಿಮುಖವಾಗಿ ನಿಂತು ನೃತ್ತಮಾಡುತ್ತ 'ಕಾವಿ'ಗೆ ಬಲಬರುವುದು ಈ 'ಕಲಾಶ'

ಡೈನ/ಡೈಂ ಡೈನ/ಡೈಂ ಡೈನ/ ಕಿಟತಕ

ಇನ್‌ಜ್ಕೈಂ / ಡೈಜ್ಕೈಂ/ ಕಿಟತಕ/ ತರಿಕಿಟ

ಇನ್‌ಜ ಡನ್‌ಡ ಡೈಂನ್‌ಜ/ ಡೈಜಿಜ ಇನ್ಡೈಂ ಡೈಜ್ಜಣ/ ಇನ್‌ಜ್ಕೈಂ ಡೈಜ್ಜಣ

ಇನ್ ಡೈಂ ಡೈಜ್ಜಣ/ ಇನ್ ಜ್ಕೈಂ/ ಕಿಟತಕ/ ತರಿಕಿಟ

– ಇದು ಅದರ ತಾಳ

3. ಅಸುರಾಟ್ಟಂ" ಪ್ರದಕ್ಷಿಣಿ ಮೂರನೆ ಸುತ್ತಿನಲ್ಲಿ ಪಡುವಣಭಾಗಕ್ಕೆ ಬರುವಾಗ 'ಅಸುರಾಟ್ಟಂ' ಕಲಾಶಂ ಕುಣಿಯಬೇಕು ಎಂಬುದು ಆಚಾರ. ಅದರ ಬಾಯಿತಾಳ ಹೀಗೆ

ಇನ್ ಜ್ಕೈಂ/ ಡೈಯ್‌ಜಣ/ ಡೈಯ್‌ಜಣ/ ಕಿಟತಕ

(೪) ಕುಳುರ್ಮ ಕಲಾಶಂ : ಮುಂದೆ 'ಕುಳುರ್ಮ ಕಲಾಶಂ'. (ಇದನ್ನು ಶಾಂತಿ ನೃತ್ತ ಎಂದು ಅರ್ಥವಿಸಬಹುದು. 'ಅಸುರಾಟ್ಟಂ' ಮುಗಿದ ಬಳಿಕ ಕಾವಿನ ಮುಂದೆ ಇದು ನಡೆಯುತ್ತದೆ. ಆಗಲೆ ಕೈಯನ್ನು ಬೆಂಕಿಗೆ ತೋರಿಸಿ ಅನುಗ್ರಹವಚನ ನೀಡುವುದು. ಆಗಿನ ನುಡಿತ–

'ಡೈಂ /ಡಯಿಂಕಿಟ / ಇನ್ಡೈಜಿ / ಇನ್ಡೈಂ ಡೈಂ / ಕಿಟಕಿ'

(೫) ಕೊಟಿಯ ಕಲಾಶಂ : ಮುಂದೆ ಬರುವ 'ಕೊಡಿಯ ಕಲಾಶಂನ'ನ ಬಾಯಿತಾಳ ಹೀಗಿದೆ–

'ಡೈಂ / ಡಕಡಕ / ಡೈಜಜಣ'

(೬) ಅಕ್ಕಿ ಚೆಲ್ಲುವ 'ಕಲಾಶಂ': ಅಸುರಾಟ್ಟಂ ಕಲಾಶದ ಬಳಿಕ ಭಗವತಿ ಅಕ್ಕಿಯನ್ನು ಬಾಚಿ ಚೆಲ್ಲುತ್ತಾಳೆ. ಆಗಿನ ಕಲಾಶದ ತಾಳಗತಿ ಸ್ವಭಾವ ಗ

'ಡೈಂ / ಡೈಯಜ / ಡೈಯ / ಡೈಂ'

(೭) ಕೋಜಿಯಾಟ್ಟಂ ಕಲಾಶಂ (ಕೋಳಿ ಬಲಿಕೊಳ್ಳುವ ನೃತ್ತ) : ಭಗವತಿ ಕೋಳಿಯನ್ನು ಕೈಗೆ ತೆಗೆದುಕೊಂಡು ಅದರೊಂದಿಗೆ ನೃತ್ತವಾಡುತ್ತಾಳೆ. ಆ ವೇಳಯ ತಾಳಗತಿ –

'ಇನ್ಡೈಯಜಜ / ಡೈನ / ಇಟ್ಟೈ ಟ್ಟೈನ'

ತೆಯ್ಯಂ

ಉತ್ತರ ಕೇರಳದಲ್ಲಿ ತುಲಾಮಾಸ ಹತ್ತನೆ ದಿನಾಂಕ (ಅಕ್ಟೋಬರ್–ನವೆಂಬರ್ ತಿಂಗಳ ನಡುವೆ) ಮುಗಿಯುತ್ತಲೆ, ದಟ್ಟ ಬಳ್ಳಿ ಪೊದೆಗಳು ಮರಗಳು ನೆಳಲನ್ನು ಹರಡಿ ಕಂಗೊಳಿಸುವ ಕಾವುಗೂ, ಕೋಟ್ಟಗಳು(ಕಿರಿದು ಗುಡಿಗಳು), ಕವಿಗಳು, ತಱವಾಡು ಅಂಗಳಗಳಲ್ಲಿರುವ ಪಳ್ಳಿಯಱ (ತೆಯ್ಯಂ ಗುಡಿಗಳು) ಉತ್ಸಾಹಗೊಳ್ಳುತ್ತವೆ. ಚೆಂಡೆಕೋಲುಗಳ ರೌದ್ರತಾಳಗಳೂ ತೆಯ್ಯಂಗಳ ಸೊಂಟದ ಗಂಟೆ ಒಲೆತದ ಸದ್ದುಗಳೂ, ಅಟ್ಟಹಾಸಗಳು ಬಾಯಿತಾಳಗಳೊಂದಿಗೆ ಅಂತರಿಕ್ಷ ಮುಖರಿತವಾಗುತ್ತದೆ. ಹೊತ್ತಿಸಿ ಹಿಡಿದ ಪಂಜುಗಳ ಬೆಳಕಿನಲ್ಲೂ, ಉರಿದು ಬೆಂಕಿಯ ಕೆನ್ನಾಲಿಗೆಗಳನ್ನುಗುಳುವ ಅಗ್ನಿಕುಂಡಗಳ ಬಳಸಿನಲ್ಲೂ ತೆಯ್ಯಗಳು ಆವೇಶ ಧರಿಸಿ ಕುಣಿಯುವುದರೊಂದಿಗೆ ಅತ್ಯುತ್ತರ ಕೇರಳ ಉತ್ಸವಾಹ್ಲಾದದ ಏರುತ್ಸಾಹಕ್ಕೆ ಸಿಲುಕಿರುತ್ತದೆ.

ಬಡಗು ಭಾಗದಲ್ಲಿ ಚಂದ್ರಗಿರಿ ಹೊಳೆಯ ತೆಂಕಣದಂಡೆಯಿಂದ ತೆಂಕಣದಲ್ಲಿ ವಳಪಟ್ಟಣಂ ಹೊಳೆಯ ಬಡಗಣ ದಂಡೆಯವರೆಗಿನ ಭೂಭಾಗದಲ್ಲಿ ಅನುಷ್ಠಾನವೆಂಬ ನೆಲೆಯಲ್ಲಿ ತೆಯ್ಯಂ ಹೆಚ್ಚಾಗಿ ಕಂಡುಬರುತ್ತದೆ. ಈ ಗಡಿಗಳ ಆಚೀಚಿನ ಭಾಗಗಳಲ್ಲೂ ತೆಯ್ಯಂ ಸಂಭ್ರಮದಲ್ಲಿ ರಂಗವೇರುವುದುಂಟು. ಆಟದಲ್ಲೂ, ಪಾಟಿನಲ್ಲೂ, ಅಲಂಕರಣದಲ್ಲೂ ಉತ್ತರ ಕೇರಳದ ತನ್ನತನವೂ ಆಚಾರವಿಚಾರಧಾರೆಗಳೂ ತೆಯ್ಯಂನಲ್ಲಿ ತುಂಬಿನಿಲ್ಲುತ್ತವೆ. ಇರುಳುಕಪ್ಪಿನಲ್ಲಿ ಕಾವುಗಳ ಕಡು ನಿಶ್ಶಬ್ದತೆಯಲ್ಲಿ ಬಿರುನುಡಿಯುವ ಚೆಂಡೆಯ ತಾಳದಲ್ಲಿ ಹೆಜ್ಜೆಯಿಡುವ ತೆಯ್ಯಂಗಳನ್ನು ಕಾಣುವಾಗ ಗ್ರಾಮೀಣ ಮನಸ್ಸುಗಳಲ್ಲಿ ಭಯಭಕ್ತಿಗಳು ಕುಂಬಿಡುತ್ತವೆ. ಸ್ಥಳ ಕಾಲಗಳೂ ತರ್ಕಪ್ರಜ್ಞೆಯೂ ಮರೆವೆಯಾಗಿ ಅವರು ತೆಯ್ಯಂಗಳನ್ನು ದೇವತೆಗಳ ಪ್ರತಿನಿಧಿಗಳೊಂದಿಗೆ ಕೈಮುಗಿದು ನಿಲ್ಲುತ್ತಾರೆ. ಕೆಲಸಲೂ ತೆಯ್ಯಂಗಳನ್ನು ಆಡಿಸುತ್ತಾರೆ. ಸಾಂಕ್ರಾಮಿಕ ವ್ಯಾಧಿಗಳು ಹರಡುವುದಕ್ಕೆ ಪ್ರತಿಬಂಧ ತರಲೂ ಪ್ರಕೃತಿವಿಕೋಪಗಳನ್ನು ದಾಟಿಕೊಳ್ಳುವುದಕ್ಕೂ ತೆಯ್ಯಂಗಳನ್ನು ಆಶ್ರಯಿಸುವುದಿದೆ.

ಆದಿಮ ಮನುಷ್ಯನಿಗೆ ಪ್ರಕೃತಿ ಉತ್ತರ ಸಿಗದ ಒಂದು ಒಗಟಾಗಿತ್ತು. ಪಳಗಿಸಲು ಸಿಗದ ಪ್ರಕೃತಿಯನ್ನುವರು ಪೂಜಿಸತೊಡಗಿದರು. ಆರಾಧನೆಗಳ ಮೂಲಕ, ಆಚರಣೆಗಳ ಮೂಲಕ, ಮಾನಸಿಕವಾಗಿ ಪ್ರಕೃತಿಯನ್ನು ತನ್ನ ಒಳಕ್ಕೆ ಆವಾಹಿಸಿಕೊಳ್ಳುವುದು ಮತ್ತು ವಶವರ್ತಿಯಾಗಿ ಮಾಡುವುದನ್ನೆ ಆತ ಸಾಧಿಸಿದ್ದು. ಒಣಗಿಬರಡಾದ ಮಣ್ಣನ್ನು ತೋಯಿಸಿ ಪಡೆಯಲು ಮಳೆಗಾಗಿ ಭೂಮಿಯನ್ನೂ ಆಕಾಶವನ್ನೂ ಆತ ಆರಾಧಿಸಿದ. ಪ್ರಕೃತಿಯ ಸಮೃದ್ಧಿಗಾಗಿ, ಮಣ್ಣಿನ ಬೆಳೆಸಿನ ಹೆಚ್ಚಳಕ್ಕಾಗಿ ಆತ ಮರಗಳನ್ನೂ ಕಾಡುಗಳನ್ನೂ ಪೂಜಿಸಿದ. ಪೂಜೆಗಳಿಗಾಗಿ ಕಠಿನ ವ್ರತಾನುಷ್ಠಾನಗಳನ್ನು ಪಾಲಿಸುವುದಕ್ಕೂ ಸಾಂಘಿಕತೆಯ ಕೈಮೈ ಮರೆತು ಕೆಲ ಆಟಗಳಲ್ಲಿ ತಲ್ಲೀನನಾಗಲೂ ಆತ ಮನಸ್ಸುಕೊಟ್ಟ. ಯಾದೃಚ್ಛಿಕವಾಗಿ ಉಂಟಾಗುವ ಅನುಕೂಲಕರ ಘಟನೆಗಳನ್ನು ತನ್ನ ಪೂಜಾನುಷ್ಠಾನಗಳಿಗೆ ಬಂದ ಫಲವೆಂದು ಆತನ ಗ್ರಹಿಕೆಗಳು ರೂಢಮೂಲವಾದವು. ಅದರೊಂದಿಗೆ ಇವುಗಳಿಗೆ ಆವರ್ತನ ಸ್ವಭಾವ ಸೇರಿಬಂತು. ಒಂದು ಚಡಂಗಗಳಲ್ಲೂ ಧಾನಯಗಳಿಗೆ ಆದ್ಯತೆ ದೊರೆಯುತ್ತದೆ. ತೆಯ್ಯಂನ ಪ್ರಾಕ್ ರೂಪಗಳು ಈ ಬಗೆ ಆರಾಧನೆಗಳಿಂದ ರೂಪಗೊಂಡಿರುವ ಸಾಧ್ಯತೆಯಿದೆ. ಕಾಲದ ಬೆಳವಣಿಗೆಯೊಂದಿಗೆ ಆರಾಧನಾ ಸಂಪ್ರದಾಯಗಳಿಗೂ ಬದಲಾವಣೆಗಳಿಂದ ಪೂರ್ವಿಕಾರಾಧನೆಗೂ, ಭೂತಾರಾಧನೆಗೂ, ಶೈವ ವೈಷ್ಣವ

ಆರಾಧನೆಗಳಿಗೂ ಬೆಳೆದುಕೊಳ್ಳಲಾಯಿತು. ಸ್ತ್ರೀಯರನ್ನು ಆದರಿಸುವುದು, ಸಾತ್ವಿಕ ಮೂರ್ತಿಗಳಾಗಿ ಪ್ರತ್ಯಕ್ಷಗೊಳ್ಳುವುದು.

ಜನರಲ್ಲಿ ಜಾತಿ ಪ್ರಭೇದಗಳು ಕೆನೆಗಟ್ಟುವುದರೊಂದಿಗೆ ಒಂದೊಂದು ಜಾತಿಗೂ ಆರಾಧನಾ ಕೇಂದ್ರಗಳು ಎದ್ದು ಬರುತ್ತವೆ. ಅವು ಕಾವುಗ'ಗಳು, 'ಕವಿಗಗಳು, 'ಕೋಟ್ಟಂ'ಗಳು, ಪಳ್ಳಿಯರ (ಗುಡಿ)ಗಳು ಎಂದು ಹೀಗೆ ಹೆಸರಾಗಿವೆ. ಈ ಆರಾಧನಾ ಕೇಂದ್ರಗಳನ್ನು ಸುತ್ತುವರಿದು ಅದಕ್ಕಂಟಿಕೊಂಡೇ ಅವರ ಸಾಂಸ್ಕೃತಿಕ ಜೀವನ ರೂಪುಗೊಳ್ಳುವ ಸ್ಥಿತಿಯುಂಟಾಯಿತು. ಕಾವು ಒಂದು ಸಂಗಮ ಕೇಂದ್ರವಾಗಿ ಕೆಲಸಮಾಡಲು ತೊಡಗಿತು. ಎಲ್ಲ ಪ್ರಶೆಗಳನ್ನೂ ಅಲ್ಲಿ ಚರ್ಚಿಸಲೂ, ಪ್ರತಿವಿಧಿಗಳು ನಿರ್ದೇಶಗೊಳ್ಳಲೂ ಎಡೆಯಾಯಿತು. ತಪ್ಪುಗಾರರಿಗೆ ಶಿಕ್ಷೆವಿಧಿಸುವ ಸಂಪ್ರದಾಯಗಳು ಕೂಡ ಈ ಕಾವುಗಳಲ್ಲಿ ಆಚರಣೆಗೆ ಬಂತು. ದಂಡ ಹಾಕುವುದು, 'ಔಷ್ಟ'ವಿಧಿಸುವುದು(ಜಾತಿಯಿಂದ ಹೊರಗಿಡುವುದು) ಇತ್ಯಾದಿಯಾಗಿದ್ದವು ಮುಖ್ಯ ಶಿಕ್ಷೆಗಳು.

'ತೆಯ್ಯಂ'ಗಳು ತುಳುನಾಡಿನ ಆರ್ಯತ್ತುನಾಡಿನಿಂದ ವಲಸೆ ಬಂದವುಗಳೆಂದು ಸೂಚಿಸುವ ಪರಾಮರ್ಶೆಗಳು ಕೆಲ 'ತೋಱ್ಱಂ ಪಾಟು'ಗಳಲ್ಲಿ ಕಾಣಿಸಿತ್ತಿದೆ. ಉತ್ತರ ಭಾಗದಿಂದ ಕೋಲತ್ತುನಾಡಿಗೆ ವಲಸೆಬಂದ ಈ ಕಲಾವಿಶೇಷವನ್ನು ಇಲ್ಲಿನ ನಿಪುಣರಾದ ಕಲಾಕಾರರು ಒಡೆದು ಮರಳಿ ಎರಕ ಹೊಯ್ದು ನವೀಕರಿಸಿದ ರೂಪವೆ ಇವತ್ತಿನ 'ತೆಯ್ಯಕ್ಕೋಲ'ಗಳಲ್ಲಿ ಕಾಣಿಸುವುದು. ಇದಕ್ಕೆ ಬೇಕಾದ ಪ್ರೋತ್ಸಾಹವನ್ನೂ ಸಹಾಯವನ್ನೂ ನೀಡಲು ಆಡಳಿತಾಧಿಕಾರಿಗಳಾಗಿದ್ದ 'ತಂಬುರಾನ್' (ಒಡೆಯರು)ಗಳು ಸದಾ ಸನ್ನದ್ಧರಾಗಿದ್ದರು. ತಮ್ಮ ಅಧೀಶತ್ವವನ್ನು ಅಂಗೀಕರಿಸುವುದು, ಹಾಡಿಹೊಗಳುವುದು ಆಡಳಿತಾಧಿಕಾರಿಗಳಿಗೆ ಬೇಕಾಗಿತ್ತು. ಅದನ್ನು ತೆಯ್ಯಂಗಳಲ್ಲಿ ಚ್ಯುತಿಯಿಲ್ಲದೆ ನಿರ್ವಹಿಸಲಾಗಿದೆ. ಪಾಲಪ್ಪರಪ್ಪೇನ್, ಮಣಕ್ಕಾಡನ್ ಗುರಿಕ್ಕಳ್, ಕೋಂದೋರ್ಮನ್, ಬಾಲಪ್ಪೆರುಮಲಯನ್ ಇವರು ತೆಯ್ಯಂ ಅನ್ನು ಇಂದಿನ ರೀತಿಗೆ ತಲಪಿಸಿದವರೆಂದು ಗುರುತಿಸಲಾಗಿದೆ. ಇವರಲ್ಲಿ ಒಬ್ಬರನ್ನು ಕೋಲತ್ತಿರಿ ರಾಜ ಪರೀಕ್ಷಿಸಿದ ಕತೆಯೊಂದಿದೆ. ಅದು ಹೀಗೆ ಮಣಕ್ಕಾಡನ್ ಅದ್ಭುತ ಸಿದ್ಧಿಯಿರುವ ಕೋಲಗಾರನೆಂದು ತಿಳಿದು ರಾಜ ಒಂದು ರಾತ್ರಿಯೊಳಗೆ ಮೂವತ್ತೊಂಬತ್ತು ತೆಯ್ಯಂಗಳನ್ನು ಕಟ್ಟಿ ಆಡಲು ಆಜ್ಞೆಮಾಡಿದ. ಅವುಗಳಿಗೆ ಬೇಕಾದ ಪುರಾವೃತ್ತಗಳು, 'ತೋಱ್ಱಂ' ಪಾಟು'ಗಳು, ಬಾಯಿತಾಳಗಳು ಇವನ್ನೆಲ್ಲ ದ್ರುತಕವಿತೆಗಳ ಹಾಗೆ ಹೊಸೆದು ಕೊಟ್ಟುದರಲ್ಲಿ ಸಂತುಷ್ಟನಾದ ಕೋಲತ್ತರಿ ಮಣಕ್ಕಾಡನಿಗೆ 'ಮಣಕ್ಕಾಡನ್ ಗುರಿಕ್ಕಳ್' (ಗುರುಗಳು) ಎಂಬ ಸ್ಥಾನದ ಹೆಸರನ್ನು ಕೊಡಮಾಡಿದ.

ಹಲಬಗೆ ಆರಾಧನಾ ಸಂಪ್ರದಾಯಗಳು ಪರಸ್ಪರ ಸೇರ್ಪಡೆಗೊಂಡು ರೂಪಗೊಂಡ ಒಂದು ಆರಾಧನಾ ಕ್ರಮವೆ ತೆಯ್ಯಂನಲ್ಲಿ ಕಾಣಿಸುವುದು. ತೆಯ್ಯಂನಲ್ಲಿ ಅನುಸರಿಸುವ ಅನುಷ್ಠಾನ ಕ್ರಿಯೆಗಳಲ್ಲಿ ಇವುಗಳಿಗೆ ಪುರಾವೆಯಾಗುವ ಸೂಚನೆಗಳನ್ನು ಕಾಣಬಹುದು. ವಾಚಿಕದಲ್ಲೂ, ಬಾಯಿತಾಳದಲ್ಲೂ, ಪುರಾವೆಯಾಗುವ ಸೂಚನೆಗಳನ್ನು ಕಾಣಬಹುದು. ವಾಚಿಕದಲ್ಲೂ, ಬಾಯಿತಾಳದಲ್ಲೂ, ತೋಱ್ಱಂಗಳಲ್ಲೂ ತುಂಬಿ ನಿಂತಿರುವಂಥದು ಸೂಚಿತ ಕಥೆಗಳ ಐತಿಹ್ಯಗಳಾಗಿವೆ. ಅಮ್ಮ ವನದೇವತೆಗಳು, ಮಂತ್ರಮೂರ್ತಿಗಳು, ಇತಿಹಾಸ ಪುರುಷರು, ಪೂರ್ವಿಕರು, ವೀರರು, ವಂಚಿತರು, ದಮನಕ್ಕೊಳಗಾದವರು ಮೊದಲಾದವರೆಲ್ಲ ತೆಯ್ಯಂಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಕಾವುಗಳಲ್ಲಿ ಅಮ್ಮದೈವಗಳಿಗೂ, ಭಗವತಿಗಳಿಗೂ ಪ್ರಧಾನ್ಯ. ಸಾತ್ವಿಕ ಭಗವತಿಗಳೂ, ಮಂತ್ರಮೂರ್ತಿಗಳೂ, ಚಾಮುಂಡಿಗಳೂ ಸಂಹಾರತಾಂಡವವಾಡುವ ದೇವತೆಗಳಾಗಿವೆ. ಆದರೆ ಜನರ ಹರಕೆ, ಭಯಭಕ್ತಿಗಳಲ್ಲಿ ಸಂತುಷ್ಟರಾಗಿ ಅವರಿಗೆ ಸಾಧ್ಯವಿರುವಷ್ಟೂ ಸಹಾಯಮಾಡುವವರು ಈ ದೈವಕೋಲಗಳು.

ವಣ್ಣಾನ್, ಮಲಯನ್, ಕೋಪ್ಪಾಳನ್ ಮೊದಲಾದ ಅವರ್ಣರೂ ದಲಿತರೂ ಆದರೇ ತೆಯ್ಯಂ ಕಟ್ಟುಗಾರರು. ಕಾವುಗಳಲ್ಲಿ ಹಬ್ಬವಾಗುವ ದಿನಾಂಕಗಳನ್ನು ಕಟ್ಟುಗಾರರಿಗೆ ತಿಳಿಸಲಾಗುತ್ತದೆ. ಕೋಲಗಾರ ಹಿಂದಿನನ ದಿನವೆ ಸಂಜೆ 'ಕೊಟ್ಟ್ಯಾಕ್ಕಲ' ಸ್ವೀಕರಿಸಬೇಕು. ಕೊಡಯೆಲೆಯಲ್ಲಿ ವೀಳ್ಯ, ಅಡಕೆ, ಅರಸಿನ ನಾಮದ ಪುಡಿ, ಅಕ್ಕಿ, ಉರಿಸಿದ ಕೋಲುಬತ್ತಿ(ತಿರಿ)ಗಳನ್ನು ಇರಿಸುತ್ತಾರೆ. ಅದನ್ನು ಕೆಂಪು ಬಟ್ಟೆಯುಟ್ಟ ಕೋಲಗಾರ ಸ್ವೀಕರಿಸಿ ದೈವದ ಸ್ಥಾನದ ಮುಂದೆ ಬಂದು ನಿಂತು 'ತೋಜ್ಙಂಪಾಟು' ಹೇಳುತ್ತಾನೆ. ಅದನ್ನು ಎತ್ತಿ ಪಾಟು ಮುಂದುವರಿಸುಲು ಅವನ ಪರಿವಾರದವರಿರುತ್ತಾರೆ. ಅದು ತೆಯ್ಯಂಗಳಲ್ಲಿ ತೋಜ್ಙಂ ಚಡಂಗದ ಬಳಿಕ ಕೋಲಗಾರ ಆವೇಶ ಪಡೆದು ಕುಣಿದು 'ಅಣಿಯಜಿ' (ವೇಷಕಟ್ಟುವ ಆತ ಮತ್ತು ಪರಿವಾರದವರಿರುವ ಆವರಣ)ಕ್ಕೆ ಬರುತ್ತಾನೆ. ಅನಂತರದ ಕೆಲಸ ನಾಳೆಯ ತೆಯ್ಯಂಗೆ ಮುಖವನ್ನು ಬರೆಯುವುದಾಗಿದೆ.

'ಚಾಯಿಲ್ಯಂ'(mercury sulphate– ಹಿಂಗುಲ ಅಥವಾ ಇಂಲೀಕ, ಕೆಂಪು ಬಣ್ಣ), 'ಕರಿ' (ಮಸಿ), ಅಕ್ಕಿಹಿಟ್ಟು, ಮನಯೋಲ(ಅರ್ದಾಳ) ಮೊದಲಾದ ಬಣ್ಣದ ಪುಡಿಗಳನ್ನು ತೆಂಗಿನೆಣ್ಣೆಯಲ್ಲಿ ಕಲಸಿ ಮುಖವರ್ಣಿಕೆಗೆ ಬಳಕೆಯಾಗುವ ಬಣ್ಣಗಳನ್ನು ತಯಾರಿಸುತ್ತಾರೆ. ಹಸಿ ತೆಂಗಿನಗರಿಯ ಹಿಡಿಕಡ್ಡಿಯನ್ನು ಕೆತ್ತಿ ಬಣ್ಣ ರೇಖಿಸುವ ಕುಂಚ ತಯಾರಾಗುತ್ತದೆ. ಬಣ್ಣವನ್ನು ರೇಖಿಸುವುದು ಮತ್ತು ತುಂಬಿಸುವುದು, ಚಿತ್ರ ತಯಾರಿಸುವುದು ಇತ್ಯಾದಿಗಳಲ್ಲಿ ಈ ಕಲಾಕಾರರು ಪರಂಪರಾಗತ ವಿಧಾನವನ್ನು ಚಾಚು ತಪ್ಪದೆ ಅನುಸರಿಸುವರಲ್ಲದೆ, ಅದನ್ನು ಬದಲಿಸಿ ಬರೆಯಲು ಸಾಮಾನ್ಯವಾಗಿ ತೆಯ್ಯಂ ಕಲಾಕಾರರು ಶ್ರಮಿಸಲಾರು. ಮುಖದಲ್ಲಿ ಬರೆದು ತಯಾರಿಸುವ ಚಿತ್ರಕ್ಕೆ ಪ್ರತ್ಯೇಕ ಹೆಸರು ಇರುತ್ತದೆ. ಒಳಿಕಣ್ಣ್, ಶಂಖುಂವೈರಿದ್ದಳಂ ಕುಜಿಯೆಮಿತ್ತ್, ತೇಪ್ಪುಂಕುಜಿ, ಕಟ್ಟಾರಂ ಪುಳ್ಳಿ ಮೊದಲಾದ ಹೆಸರುಗಳಿಂದ ವ್ಯವಸ್ಥೆಗೊಂಡ ಮುಖದ ಚಿತ್ರಣ ವಿನ್ಯಾಸಗಳಿವೆ.

ತೆಯ್ಯಂಗಳು ಹಲಬಗೆ ಆಕೃತಿಗಳ ಶಿರೋಭೂಷಣಗಳನ್ನು ಹೊಂದಿವೆ. ಅವುಗಳ ಸ್ವಭಾವ ಮತ್ತು ಸ್ಥಾನ ಮಹಿಮೆಯನ್ನು ಅನುಸರಿಸಿ 'ಮಡಿ' (ಶಿರೋಭೂಷಣ)ಗಳ ಆಕೃತಿ ಬದಲುತ್ತದೆ. ತೆಂಗಿನ ಎಳಗರಿ, ಹೂ ಮತ್ತು ಎಲೆಗಳಿಂದ ತಯಾರಾಗುವ ಕಿರುಗಾತ್ರದ ಮುಡಿಗಳಿಂದ ತೊಡಗಿ, ಬಿದಿರಿನ ಎತ್ತರಕ್ಕೆ ಕಟ್ಟುವ ಮುಡಿಗಳೂ ಇವೆ. ಬಟ್ಟೆಗಳು(ಪಟ್ಟು), ಹೂಗಳು, ಬಣ್ಣದ ಕಾಗದಗಳಿಂದ 'ಮುಡಿ'ಗಳನ್ನು ಅಲಂಕರಿಸುವರು. ಎಳಗರಿಯನ್ನು ಕೊಯ್ದು ತಯಾರಿಸುವ ಆಕೃತಿಗಳನ್ನು ಮುಡಿಗೆ ಕೋದು, ಹೊಲಿದು ಮನೋಹರವಾದ ಆಕೃತಿವಿನ್ಯಾಸ ತಯಾರಿಸುತ್ತಾರೆ. ಹಾಗೆಯೆ ಹೂಗಳಿಂದ ಅಂದಗೊಳಿಸಿದ ತೊಡುಗ ಆಭರಣಗಳನ್ನು ರಚಿಸುತ್ತಾರೆ. ಬಳೆಗಳು, ಮೂಲೆಗಳು, ಗಗ್ಗರ(ಚಿಲಂಬು)ಗಳು, ನೆತ್ತಿಯಪಟ್ಟಂ ಮೊದಲಾದವು ಬಣ್ಣಬರಿಸಿಯೆ ಧಾರಣೆಗೊಳ್ಳುವುದು. ವಾಳ್ (ಬಾಳ್–ಖಡ್ಗ), ಪರಿಚ(ಗುರಾಣಿ), ಅಂಬು(ಬಾಣ), ವಿಲ್ಲ್(ಬಿಲ್ಲು), ಕತ್ತಿ, ಶೂಲ ಮೊದಲಾದ ಆಯುಧಗಳನ್ನು ತೆಯ್ಯಂಗಳು ಬಳಸುತ್ತವೆ. ಗಂಜಿತಿಳಿಯಲ್ಲಿ ಮುಳುಗಿಸಿ ಪಟ್ಟುತ್ವ ಬರಿಸಿದ ಮಡಿ ಬಟ್ಟೆಯಿಂದ ಸೊಂಟದ ಉಡುಗೆಯನ್ನು ಬಿಗಿಯುತ್ತಾರೆ. 'ತೀಕ್ಕೋಲಂ'ಗಳಾದರೆ (ಬೆಂಕಿಯಲ್ಲಿ ಬಿದ್ದು ಆಡುವ ಕೋಲಗಳು) ಅನ್ನು ಧರಿಸುತ್ತವೆ. ಕೆಲವೆ ತರಯ್ಯಂಗಳಿಗೆ ಶರೀರದ ಅಲ್ಲಲ್ಲಿ ಬಾಳೆಯ ಹಂಬೆಗಳನ್ನು ಕಟ್ಟಿಕೊಳ್ಳಲಾಗುತ್ತದೆ.

ತೆಯ್ಯಂನ ಆರಾಧನೆಯ ಮೂಲಕ ಗ್ರಾಮೀಣ ಜನರು ಸ್ವಯಂಶಕ್ತಿಯನ್ನು ಪಡೆದುಕೊಳ್ಳುತ್ತಾರೆ. ಪ್ರತಿಭಟಿಸುವ, ಪ್ರತಿಕರಣ ಮೂಡುವ ಒಂದು ತಲೆಮಾರಿನ ಸ್ವರ ತೆಯ್ಯಂನಲ್ಲಿ ಸೇರಿಕೊಂಡುಲೀನವಾಗಿದೆ. ಪುರಾಣಗಳಲ್ಲೂ ಇತಿಹಾಸಗಳಲ್ಲೂ ಇರುವ ಕಥೆಗಳನ್ನು ಮಣ್ಣಿನ ಜನಜೀವನಕ್ಕೆ ಳಿಸಿತರುವುದನ್ನು ತೆಯ್ಯಂಗಳಲ್ಲಿ ಕಾಣಬಹುದು. ಸಾಮಾನ್ಯ ಜನರ ಭಾವಗಳೂ, ಅನುಭವಗಳೂ ಈ ತರಯ್ಯಂ ಕಥೆಗಳಂದಿಗೆ ಗೊಣಸುಹಿಡಿದು

ಕೊಳ್ಳುತ್ತವೆ. ಅದರಿಂದಾಗಿಯೇ ಆಧುನಿಕ ಮನುಷ್ಯನಿಗೆ ಅವುಗಳನ್ನೆಲ್ಲ ಅಂಧವಿಶ್ವಾಸವೆಂದು ಥಟ್ಟನೆ ತಳ್ಳಿ ಕಳೆಯಲು ಸಾಧ್ಯವಿಲ್ಲದಾಗುವುದು.

ಭೂತನ್ ಮತ್ತು ತಿಱ

(ಅನುಷ್ಠಾನ ನೃತ್ತ)

ಎಚ್.ಕೆ.ಸಂತೋಷ್

ಟಿಪ್ಪಣಿ

ದಾರಿಗಾಸುರನನ್ನು ವಧಿಸಿ ಭೂತಗಣಗಳೊಂದಿಗೆ ಬೀಭತ್ಸರೂಪದಲ್ಲಿ ಬರುವ ಕಾಳಿಯೂ ಪರಿವಾರವೂ ಕೇರಳೀಯ ಸಾಂಘಿಕತೆಗೆ ಪ್ರಿಯವಾದ ಒಂದು ಆಶಯವಾಗಿದೆ. ಈ ಆಶಯ ಕೇರಳದ ತೆಂಕಣ ಭಾಗದಿಂದ ಬಡಗಣ ಭಾಗದವರೆಗೆ ಪ್ರಚಾರದಲ್ಲಿರುವುದಾದರೂ ಅದು ಪ್ರತ್ಯಕ್ಷಗೊಳ್ಳುವುದು ಆ ಆ ಪ್ರದೇಶಕ್ಕೆ ಅನುಸಾರವಾಗಿ ಎನ್ನಬೇಕಾಗಿದೆ. 'ತೆಯ್ಯಂ'ನ ಅನೇಕ ಭಗವತಿಗಳು 'ತಿಱ'ಯಲ್ಲಿರುವ ಭಗವತಿಗಳು, ನಿಣಬಲಿ, ಪೂತನುಂ ತಿಱ, ಮುಡಿಯೇಱ್ಱ್ ಕಾಳಿಯಾಟ್ಟ್, ಪಡೇನಿ(ಪಡಯಣಿ) ಇಂಥ ಎಲ್ಲ ಅನುಷ್ಠಾನ ರೂಪಗಳಿಗೂ ಬುನಾದಿ ಕಾಳಿ–ದಾರಿಗ ಯುದ್ಧವಾಗಿದೆ. ಇವಲ್ಲದೆ ಕಥಾಗಾನ ರೂಪಗಳಾಗಿಯೂ ಹಲವು ರೀತಿಗಳಲ್ಲಿ ಈ ಆಶಯ

ಪ್ರಕಟಿತವಾಗುತ್ತದೆ. ಒಂದೇ ಆಶಯ ಯಾವುದರಿಂದ ವ್ಯತ್ಯಸ್ತ ಸಾಂಘಿಕತೆಗಳಲ್ಲಿ ಕಾಣಿಸಿಕೊಳ್ಳುತ್ತದೆ ಎಂಬುದು ಖಂಡಿತವಾಗಿಯೂ ಅನ್ವೇಷಿಸಲೇಬೇಕಾದ ಒಂದು ವಿಷಯವಾಗಿದೆ.

ಒಂದು ಜಾನಪ್ ರೂಪ ಒತ್ತಿನ ಸಾಂಘಿಕತೆಯೊಳಕ್ಕೆ ದಾಟಿ ಬರುವಾಗ ಸಾಮಾಜಿಕ ಪುನಃಸೃಷ್ಟಿಯ ಮೂಲಕ ಹೊಸ ಪಠ್ಯವನ್ನು ಸ್ವೀಕರಿಸುವುದು ಸಾಮಾನ್ಯ. ಆದರೆ ಸಮೀಪಸ್ಥ ಸಾಂಘಿಕತೆಗಳು ಒಂದೆ ಆಶಯವನ್ನು ವ್ಯತ್ಯಸ್ತವಾದ ಜಾನಪದ ರೂಪಗಳಾಗಿ ರೂಪಾಂತರಗೊಳಿಸಿ ಬಳಸಿಕೊಳ್ಳುವುದು ಹೆಚ್ಚು ಗಂಭೀರವಾದ ಚಿಂತನೆಯನ್ನು ಬಯಸುತ್ತದೆ. ಯಾಕಾಗಿ ವಳ್ಳುವನಾಡಿನಲ್ಲಿ ಮುಡಿಯೇಟ್ಟ್' ಕಾಣಿಸುತ್ತದೆ. ಅದಕ್ಕೆ ಒತ್ತಿನ ಭಾಗದಲ್ಲಿ 'ಪಡಯಣಿ' ನೆಲಸಿದೆ? ಈ ಅನ್ವೇಷೆ ಒಂದೊಂದು ಸಾಂಘಿಕತೆ ಆಂತರಿಕವೂ ಬಾಹ್ಯವೂ ಆದ ಅವಸ್ಥೆಗಳ ವೈಶಿಷ್ಟ್ಯಗಳಿಗೆ ತಲಪಿಸುತ್ತದೆ. 'ಪೂತನ್ ತಿಱಯೂ' ಅದರಲ್ಲಿ ಮಾತ್ರ ಅದುಮಿ ನಿಲ್ಲುವಂಥ ಒಂದು ಅವಸ್ಥೆಯಲ್ಲ. ಅದು ಪರಿಸರದ ಅವಸ್ಥೆಯೊಂದಿಗೆ ಜೀವನದ ಎಲ್ಲ ತಲಗಳೊಂದಿಗೂ ಸಂಬಂಧಿಸಿರುತ್ತದೆ. ಆದ್ದರಿಂದ 'ಪೂತನ್ (ಭೂತನ್) ಮತ್ತು ತಿಱ' ಅಧ್ಯನದ ಮೂಲಕ, ಪುನಃ ಅದನ್ನು ಸೃಷ್ಟಿಸುವ, ನೆಲೆನಿಲ್ಲಿಸುವ ಅವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿದೆ.

ಜಾನಪದವೂ ಸಾಹಿತ್ಯವೂ ಹೊಂದಿರುವ ಸಂಬಂಧ ಶತಮಾನಗಳ ಹಿಂದೆಯೆ ಜನತೆಯ ಹಳಮೆಯ ಅಧ್ಯಯನ(Popular Antiuities) ಕಾಲದಲ್ಲೆ ಚರ್ಚಾವಿಷಯವಾಗಿತ್ತು. ಮೌಖಿಕಶಿಸ್ತಿನಿಂದ ಭಿನ್ನವಾದ ಸಾಹಿತ್ಯ ಇಲ್ಲದಿದ್ದ ಅವಸ್ಥೆಯೂ, ಆ ಬಳಿಕ ಜಾನಪದವೆ ಒಂದು ಸಾಹಿತ್ಯವಾಗಿ ರೂಪಾಂತರಗೊಳ್ಳುವ ಅವಸ್ಥೆಯೂ, ಆ ಬಳಿಕ ಜಾನಪದವೆ ಒಂದು ಸಾಹಿತ್ಯದ ರಚನಾ ತಂತ್ರಗಳನ್ನು ಸಾಹಿತ್ಯವ ಉಪಯೋಗಿಸುವ ಅವಸ್ಥೆಯೂ, ಅಲ್ಲದೆ ಬಾಯ್ದೆರೆ ಸಾಹಿತ್ಯದ ರಚನಾ ತಂತ್ರಗಳನ್ನು ಸಾಹಿತ್ಯವು ಉಪಯೋಗಿಸುವ ಅವಸ್ಥೆಯೂ ಉಂಟಾಗಿವೆ. ಇವುಗಳಲ್ಲಿ ಜಾನಪದವನ್ನು ಪುನರಾವಿಷ್ಕರಿಸುವುದರ ಮೂಲಕ ಆಗುವ ಸಾಹಿತ್ಯಸೃಷ್ಟಿ ಬಹಳ ಮುಖ್ಯವಾದುದು. ಇದರ ಮೂಲಕ ಹಳತಿಗೆ ಹೊಸವ್ಯಾಖ್ಯಾನ ನೀಡುವುದಕ್ಕಾಗಿಯೆ ಸಾಹಿತಿಗಳು ಶ್ರಮಿಸಿದುದು. ಆಬಗೆ ಒಂದು ಕೆಲಸವನ್ನೆ ಇಡಶ್ಶೇರಿ 'ಪೂತನಪ್ಪಾಟ್ಟಿ'ನ ಮೂಲಕ ನಿರ್ವಹಿಸುವುದು. ಪೂತನ್ಗೆ ಹೊಸ ಅರ್ಥ, ಮಾನ ನೀಡುವುದನ್ನೆ ಅವರು ಪೂತನ್ ಪಾಟಿನ ಮೂಲಕ ಮಾಡಿರುವುದು. ಹಳೆಯ 'ಪೂತನ್'ನ ಗೂಡಿನಲ್ಲಿ ಹೊಸ ಪೂತನ್ ಒಳಪ್ರವೇಶಿಸುವಾಗ ಏನು ಸಂಭವಿಸುತ್ತದೆ ಎಂಬುದು ಹೊಂದಿರುವ ಪರಸ್ಪರ ಸಂಬಂಧವನ್ನು ಹೊರಪಡಿಸುವುದರೊಂದಿಗೆ ಪರಂಪರಾಗತ ವಿಷಯವನ್ನು ತೆಗೆದು ಉಪಯೋಗಿಸಿಕೊಳ್ಳುವುದರಲ್ಲಿ ಸಾಹಿತ್ಯಕಾರನ ಸ್ವಾತಂತ್ರ್ಯದ ಬಗೆಗಿನ ಚರ್ಚೆಗೆ ದಾರಿಯನ್ನೂ ಮಾಡುತ್ತದೆ.

– **ಸಂಪಾದಕ**

ಪೂತನುಂ ತಿಱಯುಂ

ಪಾಲಕ್ಕಾಡ್, ಮಲಪ್ಪುಱಂ, ತೃಶೂರ್ ಜಿಲ್ಲೆಗಳ ಬಹುಭಾಗಗಳು ಸೇರಿದ ಹಳೆಯ 'ವಳ್ಳುವ ನಾಡು' ಹೊಂದಿದ್ದ ಅನುಷ್ಠಾನಕತೆ 'ಪೂತನ್ ಮತ್ತು ತಿಱ' ಮಕರ ಮಾಸದ (ಜನವರಿ)ಕೊಯ್ಲು ಮುಗಿದ ಕಾಲದೊಂದಿಗೆ ಬರುವ ಹಬ್ಬವಿದು. ಭಗವತಿ ದೇಗುಲಗಳಲ್ಲೂ, ಕಾವುಗಳಲ್ಲೂ 'ಪೂರಂ', 'ತಾಲಪ್ಪೊಲಿ' ಮುಂತಾದ ಸಂಭ್ರಮಾಚರಣೆ ನಡೆಯುವಾಗ ಅದಕ್ಕೆ ಸಂಬಂಧಿಸಿ 'ಪೂತನೂ ತಿಱಯೂ' ಹೊರಡುತ್ತದೆ. ಮಕರ ಕೊಯ್ಲಿನ ವೇಳೆ ಮಾತ್ರವಲ್ಲ 'ವಿಷು' ವೇಳೆಯಲ್ಲೂ ವೃಶ್ಚಿಕ ಮಾಸದ 'ಪೂರಂ' ಹಬ್ಬಕ್ಕೂ 'ಪೂತನೂ ತಿಱಯೂ' ಕಟ್ಟಿ ಆಡುತ್ತಾರೆ. ಕೆಲಸದ ಹೊತ್ತು ಬರುತ್ತಿದೆ ಎಂಬ ಸೂಚನೆ ಕೊಡುವುದು ಇದರ ಉದ್ದೇಶ.

ಮಣ್ಣಾನ್ / ವಣ್ಣಾನ್ ಎಂದು ಹೇಳಲ್ಪಡುವ ಜಾತಿಯವರೇ 'ಪೂತನೂ ತಿಱಯೂ' ಕಟ್ಟುವುದು ಪದ್ಧತಿ. ಈ ಜಾತಿಯವರ ಕುಕಸುಬು ಮನೆ ಕಟ್ಟುವುದು. ಇವರ ಕುಲದೇವತೆ 'ಕರಿಂಕಾಳಿ' ಮಡಿಮಾಡುವುದು, ವೈದ್ಯ, ಮಂತ್ರವಾದ ಇವನ್ನು ಪರಂಪರಾಗತವಾಗಿ ಇವರು ಮಾಡಿಕೊಂಡು ಬರುತ್ತಾರೆ. ನಾಟಿವೈದ್ಯ(ಅದೇ ನಾಟ್ಟುವೈದ್ಯ), ಮಂತ್ರವಾದ, ಗರ್ಭಶುಶ್ರೂಷೆ ಮೊದಲಾದವನ್ನು ಸಂಬಂಧೀಸಿ ಹಲವಾರು ಅನುಷ್ಠಾನಗಳೂ

ಮಣ್ಣಾನ್ ವರ್ಗದವರಲ್ಲಿಡೆದುಕೊಂಡು ಬಂದಿವೆ. ಇವರು 'ಪೂತನೂ ತಿಜಿಯೂ' ಆಚರಣೆಯಲ್ಲಿ ಕಟ್ಟುಗಾರರಾದರೂ ಇತರ ಜಾತಿಗಳವರಿಗೂ ಇದರಲ್ಲಿ ತಮ್ಮ ತಮ್ಮ ಧರ್ಮವನ್ನು ತಯಾರಿಸುವ ಕೆಲಸ ಬಡಗಿಯದು.

ಪೂತನ್ ಕಳಿ

'ದುಡಿ'ವಾದನದ ತಾಳವನ್ನು ಅನುಸರಿಸಿ ಮುಖವಾಡಧರಿಸಿ ಮಾಡುವ ಒಂದು ಬಗೆ ನಾಡಕುಣಿತವೆ ವಾಡಿಕೆಯಲ್ಲಿ ಹೇಳುವ 'ಪೂತನ್ ಕಳಿ'(ಭೂತದ ಆಟ). 'ಪೂತನ್ ಕಳಿ'ಯಲ್ಲಿ ಭಾಗವಹಿಸುವವರು ಇಬ್ಬರೋ ಮೂವರೋ ಮಾತ್ರ. ಸಂಖ್ಯೇ ಇಲ್ಲಿ ಬಹಳ ಮುಖ್ಯವಲ್ಲ. ಹನ್ನೆರಡು ವಯಸ್ಸು ಮತ್ತು ನಲ್ವತ್ತೈದರ ನಡುವಣ ವಯಸ್ಸಿನವರು 'ಪೂತನ್' ಎಳೆಯ ತಲೆಮಾರಿನವರದೂ 'ತಿಜಿ' ಹಳೆತಲೆ ಮಾರಿನವರಿಗೂ ಸಲ್ಲುವ ವೇಷಗಳೆಂದು ಸಾಮಾನ್ಯ ಗ್ರಹಿಕೆಯಾಗಿದೆ. ಸಾಮಾನ್ಯವಾದ ಶಾರೀರಿಕ ಸಾಧನೆ, ಈ ಎರಡು ಆಟಗಳಿಗೂ ಆವಶ್ಯಕ. ಮಕ್ಕಳು ದೊಡ್ಡದಾದರೆ 'ಪೂತಂ' ಕಟ್ಟಿಸುವುದಾಗಿ ತಂದೆತಾಯಿಯರುಹರಕೆ ಹೇಳಿಕೊಳ್ಳುವುದಿದೆ. ಹನ್ನೆರಡು ವಯಸ್ಸಾಗುತ್ತಲೆ 'ಪೂತನ್' ಕಟ್ಟತೊಡಗುತ್ತಾರೆ. ಇದಕ್ಕೆ ತರಬೇತಿಯ ಘಟ್ಟದಲ್ಲಿ ಹೆಜ್ಜೆಗಾರಿಕೆ, ಆಂಗಿಕಾಭಿನಯಗಳನ್ನು ಕಲಿಸಿಕೊಡುತ್ತಾರೆ. 'ಪೂತನ್' ನೃತ್ತರೀತಿಗಳು ತುಲಾನಾತ್ಮಕವಾಗಿ ಋಜುವೂ, ಸರಳವೂ ಆಗಿವೆ.

'ಪೂತನ್' ನಲ್ಲಿ 'ಇಳಂಪೂತಂ'(ಎಳೆಯ ಭೂತ), 'ಪೆರುಂಪೂತಂ'(ಪೆಡಂಭೂತ), 'ವಡಕ್ಕನ್ ಪೂತಂ'(ಬಡಗಣ ಭೂತ) ಎಂದು ಮೂರು ಬಗೆ. ಭೂತಕಲ್ಪನೆಯ ದೊಡ್ಡ ಮುಖವಾಡಗಳನ್ನೆ 'ಪೂತನ್ ಕಳಿ'ಗೆ ಬಳಿಕೆ ಮೂಡುವುದು. ಮುಖವಾಡಕ್ಕೆ ಬಿಳಿ, ಕಪ್ಪು, ಕೆಂಪು ಬಣ್ಣಗಳನ್ನು ಬಳಸುತ್ತಾರೆ. ಮಣ್ಣು ಬಣ್ಣವನ್ನೂ, ಸುಣ್ಣವನ್ನೂ, ಇದ್ದಲು(ಮಸಿ)ಪುಡಿಯನ್ನು ಬಣ್ಣನೆಗೆ ಬಳಸುತ್ತಾರೆ. ಮುಖವಾಡದ ಕೆಳಕಾಲುಭಾಗ ಬಾಯಿ, ಗಡ್ಡಗಳಿಂದ ಆವರಿಸುತ್ತದೆ. ನಡುವಣ ಅರ್ಧಭಾಗದಲ್ಲಿ ಮೂಗು, ಕಣ್ಣು, ಹಣೆ ಇತ್ಯಾದಿಗಳಿರುತ್ತವೆ. ಮೇಲಿನ ಕಾಲುಭಾಗದಲ್ಲಿ ಸರ್ಪಗಳಲ್ಲಿ ಅಲಂಕರಿಸಿದ ಕಿವಿಗಳು ನೇತುಕೊಳ್ಳುತ್ತವೆ. ಮುಖವಾಡವನ್ನು ತಲೆಯಲ್ಲಿ ಕಟ್ಟುವುದಕ್ಕಿರುವ ದ್ವಾರ ಕಿವಿಯಭಾಗದಲ್ಲಾಗಿರುತ್ತದೆ. ಕಪ್ಪು, ಕೆಂಪು ಬಣ್ಣಗಳುಳ್ಳ ಸಮಭುಜ ತ್ರಿಕೋಣಗಳು ಬರೆದಿರುತ್ತವೆ. ಮುಖವಾಡದಲ್ಲೂ ಮೈಯ ಆಭರಣಗಳಲ್ಲೂ ಧಾರಾಳ ಕನ್ನಡಿ ಚೂರುಗಳನ್ನು ಕುಳ್ಳಿರಿಸುತ್ತಾರೆ. ನೂರಒಂದು ಕನ್ನಡಿ ಎಂಬ ಸಂಕಲ್ಪದಲ್ಲಿ ಮುಖವಾಡದಲ್ಲಿ ಕಪ್ಪು ಚುಕ್ಕಿಗಳನ್ನು ಇಡುತ್ತಾರೆ.

ಸಮೃದ್ಧವಾದ 'ಉಡುತ್ತುಕೆಟ್ಟು'(ಉಡುಗೆಕಟ್ಟುಗೆ)ಗಳು ಮತ್ತು ಮೆಯ್ಯಲಂಕಾರಗಳು 'ಪೂತನ್'ಗೆ ಇವೆ. ಪೊಡಿಯೂಡ, ಕಾಲುಕಟ್ಟು, ಚಿಜ್ಜೂಡ, ಅರತ್ತಾಲಿ, ಏಲಸ್ಸ್, ಅರಪ್ಪಟ್ಟ (ಸೊಂಟಪಟ್ಟಿ), ಮಾರ್ತಾಲಿ (ಎದೆಹಾರ), ವಾಚು, ಷರ್ಟು, ಗಗ್ಗರ ಈ ಮೊದಲಾಗಿ ಅಡಿಯಿಂದಮುಡಿಯವರೆಗೆ ತೊಂಬತ್ತಾರು ಕಟ್ಟುಗಳು ಎಂಬುದು ಪ್ರಮಾಣ. ಇದಲ್ಲದೆ ಒಂದು ಕೈಯಲ್ಲಿ ಮರದ ಖಡ್ಗ(ಪೊಂದಿಕ್ಕೋಲು), ಇನ್ನೊಂದು ಕಯ್ಯಲ್ಲಿ ಗುರಾಣಿ(ಪರಿಚ)ವನ್ನು ಧರಿಸುತ್ತಾನೆ. ಆಭರಣಗಳು ಮುಖಕ್ಕೆ ಬಡಿಯದಿರಲು ಮುಖಕ್ಕೆ ಬಟ್ಟೆಯಿಂದು ಸುತ್ತು(ಪಿರಿ) ಕಟ್ಟಿಕೊಳ್ಳಲು ಇದೆ. 'ಮಾಪ್ಪಿರಿ' ಕಟ್ಟಿಕೊಳ್ಳುವುದಕ್ಕೆ ತುಂಬ ಎಚ್ಚರಿಕೆ ವಹಿಸುತ್ತಾರೆ. ಮುಖವಾಡ ಅಲುಗದಿರಲು ಕಟಿದಾರ (ಕಟಿಚ್ಚರಟು)ಗಳಿಂದ ಕಟ್ಟಿಕೊಳ್ಳುತ್ತಾರೆ. ಕೆಂಬಣ್ಣದ ವಿಪುಲತೆ, ಕಪ್ಪಿನ ಮತ್ತು ಬಿಳುಪಿನ

ಸೀಮೆಗಳು, ನಡನಡುವೆ ಚಿನ್ನದ ಬಣ್ಣದ ಹಳದಿಯೂ ಕನ್ನಡಿಚೂರುಗಳಿಂದ ಹೊಳಪೂ ಸೇರಿಕೊಂಡು ಸೃಷ್ಟಿಸುವ ವರ್ಣವಿನ್ಯಾಸ 'ಪೂತಂ'(ಭೂತ)ಗೆ ಮಾಯಿಕವಾದ ಪರಿವೇಷವನ್ನು ನೀಡುತ್ತದೆ.

'ಪೂತಂ' ಕಟ್ಟಿಯಾಡುವವರಿಗೆ ಏಳು ದಿನಗಳ ವ್ರತಾನುಷ್ಠಾನಗಳಿವೆ. ಈವೇಳೆಯೆಲ್ಲ ಅವರು ಮತ್ಸ್ಯ, ಮಾಂಸ ಮೊದಲಾದವನು ತೆಗೆದುಕೊಳ್ಳಲಾರರು. ತೀರಿಹೋಗಿರುವ 'ತಱವಾಡು(ಮನೆತನದ) ಕಾರಣವರು' (ಹಿರಿಯರು)ಗಳನ್ನು ಧ್ಯಾನಿಸಿ ಕಾಲಕಳೆಯುವರು. ಪ್ರೇತಾರಾಧಾನೆ ಸಕ್ರಿಯವಾಗಿರುವ ಈ ಜನಾಂಗದಲ್ಲಿ ಒಂದೊಂದು ಮನೆಗೂ ತಱವಾಡಿನ ಕಾರಣವರುಗಳ ಪ್ರತ್ಯೇಕ 'ತಱ'(ಕಟ್ಟೆ) ಇರುತ್ತದೆ. ಅಲ್ಲೇ ವೇಷಧಾರಣೆ. ಈ ಕಟ್ಟುಗೆ ಎರಡು ತಾಸುಗಳಷ್ಟು ದೀರ್ಘವಾದ ಚಡಂಗವಾಗಿರುತ್ತದೆ. ಕಟ್ಟಕಟೆಯ ವಿಧಿ ಮುಖಕ್ಕೆ ಪಂಚೆ ಬಟ್ಟೆ ಸುತ್ತಿ ಮುಖವಾಡ(ಪೊಯ್ಮುಖಂ) ಕಟ್ಟಿಕೊಳ್ಳುವುದು. ಇದರ ಪರಿಭಾಷಡ 'ಮುಡಿಮುಱಿಪ್ಪಿಕ್ಕುಕ'. 'ಮುಡಿ'ಯನ್ನಿಡುವುದು ಪೂರ್ತಿಯಾದರೆ ಮತ್ತೆ ಪೂತಂ ಕಟ್ಟುವವನು ಮಾತನಾಡಲಾರ.

'ಕಾರಣವರ ಸ್ಥಾನ'ದಲ್ಲಿ ವಂದನೆ ಮುಗಿಸಿ 'ಪೊಂದಿ'(ಮರದಖಡ್ಗ)ಯನ್ನೂ 'ಪರಿಚ'(ಗುರಾಣಿ)ಯನ್ನೂ ಕೈಗೆ ಪಡೆದು ದುಡಿಯ ಬಜಾವಣೇಯ ತಾಳಕ್ಕೆ ಸರಿಯಾಗಿ 'ಕಾವಿಲಮ್ಮ'ನನ್ನು(ದುರ್ಗಾಲಯದ ದೇವಿಯನ್ನು) ವಂದಿಸಲು ನಡೆದು ಹೋಗುತ್ತಾನೆ.

'ಪೂತ'ನಿಗೆ ನಿಗೆ ನಿಯತವಾದ ರಂಗವಾಗು, ರಂಗಪಾಠವಾಗಲಿ ಇಲ್ಲ. 'ಕಾವಿಲಮ್ಮ'ನ ಮುಂದೆ ಅನುಷ್ಠಾನಾತ್ಮಕವಾದ ಹೆಜ್ಜೆಗಾರಿಕೆಯೊಂದಿಗೆ ವಂದನೆ ಸಲ್ಲಿಸಿದ ಬಳಿಕ ಊರ ದಾರಿಳಲ್ಲೆಲ್ಲ ನಡೆದು ಮನೆ ಮನೆಗೆ ಹೋಗಿ ಅಂಗಳದಲ್ಲಿ ಅನಿಷ್ಠಾನ ನೃತ್ತವಾಡಿ, ಮನೆಯೊಡೆಯ ನೀಡುವ ಭತ್ತ, ಹಣವನ್ನು ಪಡೆಯುತ್ತಾನೆ. ಇದು ಮಣ್ಣಾನ್ ನ ಹಕ್ಕು. ಸಂಜೆವೇಳೆಗೆ ಪುನಃ 'ಕಾವಿ'ಗೆ ತಲಪುತ್ತಾನೆ. ಇವನಿಗೆ ಇಡಿಯ ಊರೇ ರಂಗಭೂಮಿ. ಇದು ಬಲು ದೀರ್ಘವೂ ತುಂಬ ಸಡಿಲು ರೀತಿಯದೂ ಆದ ರಂಗಪ್ರದರ್ಶನವೂ ಆಗಿದೆ.

ತಿಱ ಕಳಿ(ಆಟ)

'ಪೂತನ್' ಗಿಂತ ಇನ್ನೂ ಒಂದಷ್ಟು ಹೆಚ್ಚು ಅನುಷ್ಠಾನ ಸ್ವಭಾವವಿರುವ ನೃತ್ತರೂಪ 'ತಿಱಕಳಿ'(ತಿಱಆಟ). ಅರ್ಧವೃತ್ತಾಕೃತಿಯಲ್ಲಿ ಮರದಹಲಗೆಯಿಂದ ತಯಾರಿಸುವ, ಹೆಚ್ಚುಭಾರವಾದ ಶಿರೋಭೂಷಣ 'ತಿಱ'ಯದು. ಇದನ್ನು ತಲೆಯಲ್ಲಿ ಹೊತ್ತು ನೃತ್ತವಾಡುವುದು ಅತ್ಯಂತ ಪ್ರಯಾಸಕರ. ಬಕ್ಕೆ ಹಲಸಿನ ಹದಿನಾರು ತುಂಡುಗಳನ್ನು ದಾರದಿಂದ ಕಟ್ಟಿ 'ತಿಱ' ಎಂಬ ಭೂಷಣವನ್ನು ತಯಾರಿಸುತ್ತಾರೆ. ದಾರಿಗವಧೆ ನಡೆಸಿದ ದೇವಿಯ ಪ್ರತಿಯವಾದವರು, ಮೈ ಸಾಧಕ ಉಳ್ಳವರೂ ಆದ ಶ್ರದ್ಧಾಳುಗಳು 'ತಿಱ' ಆಡುತ್ತಾರೆ. ಅಶ್ವತ್ಥಬೇತಾಳನ ಬೆನ್ನಲ್ಲೆ ದೇವಿ ದಾರಿಗವಧಕ್ಕಾಗಿ ಹೋಗಿರುವುದೆಂಬ ಸಂಕಲ್ಪದಿಂದಲೆ ಮುಂದಕ್ಕೆ ಚಾಚಿನಿಲ್ಲುವ 'ವೇತಾಳ ಮುಖ'ವು 'ತಿಱ'ದಲ್ಲಿ ಕೆತ್ತಿರುತ್ತದೆ. ಅದರ ಮೇಲೆ 'ದೇವೀ ರೂಪ' ಇರುತ್ತದೆ. ಭೂಷಣದ ಎರಡೂ ಕಡೆಗಳಲ್ಲಿ ಕಿವಿಗಳು ನೇತುಗೊಂಡಿರುತ್ತವೆ. ಮೊದಲು ತಲೆಯಲ್ಲಿ ಮುಡಿ ಕಟ್ಟಿ ಅದರ ಮೇಲೆ 'ತಿಱ'ವನ್ನು ಧರಿಸುವುದು.

ಮುಖವಾಡ ಬದಲು ಮುಖವನ್ನು ವರ್ಣಿಕೆಯಿಂದ ಅಲಂಕರಿಸುವುದು ಇಲ್ಲಿನ ಪದ್ಧತಿ. ಗಡ್ಡದ ಸ್ಥಾನದಲ್ಲಿ ಹಳದಿ, ಹಣೆಯಲ್ಲಿ ಶೂಲದ ಬರೆಹ, ಕಣ್ಣಲ್ಲಿ ಕಾಡಿಗೆ, ಹೀಗೆಲ್ಲ ಮುಖವರ್ಣಿಕೆ. ಕುಂಕುಮಪೂ(ಶಿಸ್ತಾರ) ಮೊಲೆ, 'ಅರಮಣಿ'(ಕಿಂಕಿಣಿಗೆಜ್ಜೆಮಾಲೆ) ಮೊದಲಾದವನ್ನು ಅಣಿದುಕೊಳ್ಳಲು ಇದೆ. ಅರಮಣಿ ದಾರಿಗನ ಕಡಿದುತೆಗದ ತಲೆಗಳ ಸಂಕೇತವೆಂದು ವಿಶ್ವಾಸ. ಸೊಂಟದಲ್ಲಿ ಕಟ್ಟುವ 'ತೊಜ್ಞಲು'(ಕುಚ್ಚು)ಗಳು ಇನ್ನೇನಲ್ಲ ದಾರಿಗನ ಕೈಗಳ ಪ್ರತೀಕಗಳು. ತೆರೆದ ಎದೆಯಲ್ಲಿ, ಭಗವತಿ

ನಾಮಕಾಣಬಹುದು. ಉತ್ಸವ ದಿನಗಳಲ್ಲಿ 'ಪಱ' (ಧರ್ಮವಾದ್ಯ) ನುಡಿಯುವ ತಾಳದಲ್ಲಿ ಮೆಯ ಅಂಗಳಕ್ಕೆ ಬಂದು ನಿಲ್ಲುವ 'ತಿಱ' ಅಕ್ಕಿಯನ್ನು ಚೆಲ್ಲಿ ಅನುಗ್ರಹ ಮಾಡುತ್ತದೆ.ಹಿಮ್ಮೇಳದ ಹಿಂಆಲಕರೆರೊಂದಿಗೆ ಆವೇಶ ಹೊಂದಿಕುಣಿದು ಬರುವ ಈ ವೇಷ ಕಾವಿನ 'ತಿರುಮುಱ್ಱ' (ಸಿರಿಯಂಗಳ)ಕ್ಕೆ ಪ್ರವೇಶಿಸದೆ, ಹಳೆಯ ಅಸ್ಪ್ರಶ್ಯತಾ ಆಚರಣೆಯನ್ನು ಪಾಲಿಸುತ್ತ, ಹೊರಗೆಯೆ ನೃತ್ತವಾಡಿ ದೇವಿಗೆ ವಂದನೆ ಸಲ್ಲಿಸಿ ಹಿಂದಿರುವುದು ಪದ್ಧತಿ.

ವಳ್ಳುವನಾಡಿನ ಜನರ ಒಳಮನಸ್ಸಿನಲ್ಲಿ ಪೂತನ್ ನ ಸಜೀವ ಆನ್ನಿಧ್ಯ ಇರುವದಕ್ಕೆ ಪುರಾವೆಯಂತೆ 'ಪೂತನ್' ಕುರಿತಾದ ಕಥೆಗಳು ಮತ್ತು ಇತರ ವಾಙ್ಮಯಗಳು ಇವೆ. ಪೂತನನ್ನು ಚೆನಾವಾರನೊಬ್ಬ ವಂಚಿಸಿದ ಕಥೆ, ಇಡಶ್ಶೇರಿಯ ಪೂತಪ್ಪಾಟ್ಟಿನಲ್ಲಿ ಮಗು ನಷ್ಟವಾಗುವ ಕಥೆ ಇತ್ಯಾದಿ ಅಂಥವುಗಳಲ್ಲಿ ಸೇರಿದವುಗಳು. 'ಪೂತನ್ ಕಳಿಕ್ಕುಕ' (ಬೂತ ಆಡುವುದು), 'ಪೂತನ್ ಕೆಟ್ಟುಕ' (ಭೂತ ಕಟ್ಟುವುದು) ಇತ್ಯಾದಿ ವಾಗ್ರೂಢಿಗಳನ್ನು ಇದರರೊಂದಿಗೆ ಸಂಬಂಧೀಸಿರುವವುಗಳೆಂದು ಹೇಳಬಹುದು.

'ಪೂತನ್'ಗೆ ಕೆಲವು ಪ್ಭೇದಗಳೂ ಇವೆ. ಮೈಯಲ್ಲೆಲ್ಲ ಸೊಪ್ಪು ಕಟ್ಟಿಕೊಳ್ಳುವಾತ 'ಚಪ್ಪಿಲ ಪೂತನ್'. ಇದೊಂದು ವಿನೋದಾತ್ಮಕವಾದ ವೇಷ. ಪಾಣರೂ ಒಂದು ಬಗೆ 'ಪೂತನ್' ಕಟ್ಟಿ ಆಡುವದುಂಟು. ಇದನ್ನು 'ಪಾಣ ಪ್ಪೂತಂ' ಎಂದು ಕರೆಯುವರು. ಅನುಷ್ಠಾನಾತ್ಮಕತೆ ಕಡಿಮೆತಿರುವ ಈ ರೂಪಕ್ಕೆ ಮುಖಾವರಣ ಬಳಸಲಾರರು. 'ಪರಯ' ಸಮುದಾಯದವರ 'ಪೂತನ್'ಗೆ ಅನುಷ್ಠಾನಾತ್ಮಕತೆ ಹೆಚ್ಚು.

ಒಟ್ಟಿನಲ್ಲಿ ಹೇಳುವುದಾದರೆ ಅನುಷ್ಠಾನಾತ್ಮಕತೆ ಕಡಿಮೆಯಿರುವ 'ಪೂತನುಂ ತಿಱಯುಂ' ಹಲವು ಬಗೆಯಲ್ಲಿ ನಾಟಕಕ್ಕೆ ಹತ್ತಿರವಾಗಿ ನಿಲ್ಲುತ್ತದೆ. ಆದರೆ ನಿಯತವಾದ ರಂಗಪಥ್ಯವೂ ರಂಗವೇದಿಕೆಯೂ ಇಲ್ಲದುದರಿಂದ ಇದು ನಾಟಕಕ್ಕಿಂತ ಭಿನ್ನ. ಉತ್ತರ ಕೇರಳದ ತೆಯ್ಯಂನೊಂದಿಗೆ ಇದಕ್ಕೆ ಕೆಲ ಸಾಮ್ಯಗಳಿವೆ. ತೆಯ್ಯಂನ ಮುಖಾವರಣವೂ ಪೂತನ್ ನ ಮುಖಾವರಣವೂ ಸಾದೃಶ್ಯ ಹೊಂದಿವೆ. ಆದರೆ ತೆಯ್ಯಂ ಹೆಚ್ಚು ಎತ್ತರದ ಅನುಷ್ಠಾನಾತ್ಮಕತೆಯನ್ನು ಕಾಯ್ದುಕೊಂಡಿದೆ. ಹೀಗೆ ಅನುಷ್ಠಾನದ ಮತ್ತು ನಾಟಕದ ಸ್ವಭಾವ ಒಳಗೊಂಡಿರುವ 'ಪೂತನ್' ವಳ್ಳುವ ನಾಡಿನ ಪರಂಪರಾಪ್ರಿಯ ಸಮೂಹದ ಸಾಂಘಿಕತೆಯನ್ನು ಪ್ರತಿಫಲಿಸುವ ಒಂದು ಅನುಷ್ಠಾನಾತ್ಮಕತೆ.

ಭದ್ರಕಾಳಿಕ್ಕಳಂ

(ಅನುಷ್ಠಾನ ಚಿತ್ರಕಲೆ)

ಕೆ. ಜನಾರ್ದನನ್

ಟಿಪ್ಪಣಿ

ಒಂದೊಂದು ಸಾಂಘಿಕತೆಯದೂ ಬಣ್ಣದ ಕುರಿತಾದ ಪ್ರಜ್ಞೆ ಪ್ರತ್ಯೇಕ. ಸುತ್ತಮುತ್ತ ಎಣಿಸಹೊರಟರೆ ಮುಗಿಯದಷ್ಟು ವರ್ಣಚ್ಛಾಗಳಿರುವುದಾದರೂ ಒಂದು ಸಾಂಘೀಕತೆ ಗುರುತಿಸುವುದು ಅವುಗಳಲ್ಲಿ ಪ್ರತ್ಯೇಕವಾದ ಹಸುರಾಗಿರುತ್ತದೆ. ಒಂದು ಸಸ್ಯದಲ್ಲೆ ಚಿಗುರೆಲೆ ಮತ್ತು ಬೆಳೆದ ಎಲೆಗಳ ಬಣ್ಣ ವೃತ್ಯಸ್ತ. ಆದರೆ ನಾವು ಇದೊಂದನ್ನೂ ಗುರುತಿಸದೆ ಎಲೆಯ ಬಣ್ಣ ಹಸುರು ಎನ್ನುತ್ತೇವೆ. ವೃತ್ಯಸ್ತ ಹಸುರುಗಳಿಗೆ ನಮ್ಮ ಜೀವನದಲ್ಲಿ ವಿಶಿಷ್ಟ ಧರ್ಮವೇನೂ ನಿರ್ವಹಿಸಲು ಇಲ್ಲದಿರುವುದರಿಂದಲೆ ನಾವು ಅವುಗಳನ್ನು ಪ್ರತ್ಯೇಕಿಸಿ ಗುರುತಿಸುತಿಲ್ಲ.

ಒಂದು ಕಾಲದಲ್ಲಿ ಬ್ರಿಟನಿನ ಜನರು 'ವಯಲಜ್ಜ್' ಎಂಬ ಬಣ್ಣವನ್ನು ಗುರುತಿಸಬಲ್ಲವರಾಗಿರಲಿಲ್ಲ ಎನ್ನಬೇಕು. ವಲತಜ್ಜ್ ಅವರಿಗೆ ನೀಲವಾಗಿತ್ತು. ಅದಕ್ಕೆ ಪುರಾವೆ 'ವಯಲಜ್ಜ್ ಆರ್ ಬ್ಲೂಸ್' ಎಂದು ವಿವರಿಸುವ ಜಾನಪದ ಹಾಡು. 'ವಯಲಜ್ಜ್' ಒಂದು ಹೂವಿನ ಹೆಸರು. ಆ ಹೂವಿನ ಬಣ್ಣವನ್ನು ನೀಲದಿಂದ ಭಿನ್ನವಾದ ಬಣ್ಣವಾಗಿ ಗುರುತಿಸತೊಡಗಿದಾಗ ಆ ಬಣ್ಣಕ್ಕೆ ಹೂವಿನದೆ ಹೆಸರಾಯಿತು. ಈ ರೀತಿಯಲ್ಲಿ ಬಣ್ಣದ ಪ್ರಜ್ಞೆಯ ವಿಷಯದಲ್ಲಿ ಒಂದೊಂದು ಸಾಂಘಿಕತೆಗೂ ಸ್ವಂತವಾದ ಸ್ವತ್ವ ಉಂಟಾಗುತ್ತಿರುವಾಗಲೂ ಸ್ವತ್ವಕ್ಕೆ ಬದಲಾವಣೆಯೂ ಉಂಟಾಗುತ್ತದೆ. ಒಂದೊಂದು ಬಣ್ಣಕ್ಕೂ ಸಂಸ್ಕಾರನಿಷ್ಠವಾದ ಅರ್ಥವಿದೆ, ಅವುಗಳ ಸೇರಿಕೆಗೂ, ಬಣ್ಣ ಸಂಬಂಧವಾದ ಸ್ವಂದರ್ಯಪ್ರಜ್ಞೆಯನ್ನು ನಿರ್ಣಯಿಸುವುದು ಈ ವರ್ಣಪ್ರಜ್ಞೆಯೇ.

ಕೇರಳೀಯನಿಗೆ ಚಂದ ಕೆಂಪು. ಅದರಿಂದ ಅವನು ಸೃಷ್ಟಿಸುವ ಎಲ್ಲ ಕಲೆಗಳಲ್ಲೂ, ಅದರಲ್ಲೂ ವಿಶೆಷತ– ಜಾನಪದ ಕಲೆಗಳಲ್ಲಿ ಕೆಂಬಣ್ಣ ಸಮೃದ್ಧವಾಗಿ ಕಾಣೀಸುತ್ತದೆ. 'ಅಮ್ಮ ಕರ್ರಗೂ ಮಗಳು ಬೆಳ್ಳಗೂ ಮಗಳಮಗಳೊಬ್ಬ ಸುಂದರಿಪುಟ್ಟಿ' (ಸುಂದರಿಕ್ಕೋದ) ಎಂದು ಬೆಳ್ಳೆಲೆಯ ತುದಿಯಲ್ಲಿರುವ ಕೆಂಪಿನಲ್ಲಿ ಚೆಲುವನ್ನು ಕಾಣುವ ಒಗಟು ಉಂಟಾಗುವುದು ಈ ಕಾರಣಕ್ಕಾಗಿಯೇ. ಕೆಂಪು ಚೆಲುವಾಗಿ ಪರಿಣಮಿಸುವುದಕ್ಕೆ ಹಸರು ಇರುವ ಪ್ರಕೃತಿಯೂ ಕಾಳಿತೊಂದಿಗಿನ ಮುಖಾಮುಖಿಯೂ ಹಾಗೆ ಹಲವು ಕಾರಣಗಳಿರಬಹುದು. ಈ ಬಗೆ ವಿಷಯಗಳನ್ನು ಅಧ್ಯಯಿಸುವ ಮೂಲಕ ಒಂದು ಸಾಂಘಿಕತೆಯ, ಬಣ್ಣದ ಕುರಿತಾದ, ಲೋಕವೀಕ್ಷಣೆಯನ್ನು ಅರ್ಥಮಾಡಿಕೊಳ್ಳಲುಸಾಧ್ಯ.

ಸಾಮಾನ್ಯವಾಗಿ ಚಿತ್ರಕಲೆ ಒಂದು ಪ್ರದರ್ಶನ ಕಲೆಯಲ್ಲ. ಕಲಾಕಾರ ತನ್ನ ಸ್ವಂತ ಕಲಾಕೃತಿಗೆ ಅಂತಿಮರೂಪ ನೀಡಿದ ಬಳಿಕವಷ್ಟೆ ಅದಕ್ಕೆ ಪ್ರೇಕ್ಷಕರು ರಂಗಕಲೆಗಳು ಕೂಡ ಆಗಿವೆ. ಆರಂಭದಿಂದ ಅಂತ್ಯದವರೆಗೆ ನೋಡುಗರನ್ನು ಸಾಕ್ಷಿಗಳಾಗಿ ನಿಲ್ಲಿಸಿಯೆ ಅವುಗಳ ರಚನೆಯ ನಿರ್ವಹಣೆಯಾಗುವುದು. ಮೆಲ್ಲಮೆಲ್ಲನೆ ಅಂಚವರ್ಣಗಳ ಮೂಲಕ ಕಾಳಿಯ ರೂಪ ತಿಳಿಗೊಳ್ಳುತ್ತ ಬರುವುದು. ಅನುಷ್ಠಾನ ನಿರ್ವಹಣೆಯೊಂದಿಗೆ ಅದು ದೇವತೆಯಾಗಿ ಬಿಡುತ್ತದೆ.

ತ್ರಿಮಾನ ಸ್ವಭಾವವು(ಮೂರು ಆಯಾಮಗಳು)ಳ್ಳ ಕಾಳಿ ತೆಯ್ಯಂ ತಿಱಂ, ಪಡಯಣಿ, ಮುಡಿಯೇಜ್ಟ್ ಮೊದಲಾದ ಕಲಾರೂರಗಳಲ್ಲಿ ಪ್ರತ್ಯಕ್ಷಗೊಳ್ಳುವುದುಂಟು. 'ತೋಱ್ಜಂ' ಅನ್ನು ಹಾಡಿ, ಕೋಲಕ್ಕೆ ಕರೆದು ಬರಿಸಿ ಕೋಲವನ್ನು ದೇವತೆಯನ್ನಾಗಿ ಮಾಡುವುದೆ ಕಳಂ ಪುಜೆಯಲ್ಲಾಗುವುದು. ಈ ಕಾರಣವಾಗಿ ಮೇಲೆ ಹೇಳಿದ ಎರಡೂ ಸಮಾನವಾಗಿವೆ. ಆದರೆ ಕಳದಲ್ಲಿರುವ ಕಾಳಿ ದ್ವಿಮಾನಕ್ಕೂ ತ್ರಿಮಾನಕ್ಕೂ ನಡುವೆ ಇರುವಂಥವಳು. ಮೂಗು, ಎದೆ ಮೊದಲಾದ ಅವಯವಗಳು ತ್ರಿಮಾನ ಸ್ವಭಾವದಲ್ಲಿ ಧೂಳಗಳಿಂದ ನಿರ್ಮಿತವಾಗುತ್ತವೆ. ಆದ್ದರಿಂದ 'ಕಳ ಬರೆಹ' ಒಂದರದೇ ಪರಿವರ್ತನೆಯ ಅಂತರಾಳ ದಶೆಯಾಗಿದೆಯೆಂದು ಅನುಮಾನಿಸಬಹುದು.

– ಸಂಪಾದಕ

ಮೊದಲಾಗಿ ಬರೆಯುವುದು ಬಾಹ್ಯರೇಖೆಗಳು. ಮುಖಬರೆಹದಿಂದ ಆರಂಭಿಸಿ ಪಾದಬರೆಹದೊಂದಿಗೆ ಕೊನೆಗೊಳ್ಳಬೇಕೆಂಬ ನಿಬಂಧನೆಯನ್ನು ಪಾಲಿಸಲಾಗುತ್ತದೆ. ಬರೆಯಲು ಒಮ್ಮೆ ಶುರುವಾದರೆ ಅರ್ಧಕ್ಕೆನಿಲ್ಲಿಸಿ ಮತ್ತೆ ಮುಂದುವರಿಸುವ ಎಂಬ ರಿಯಾತಿ ಇಲ್ಲಿಲ್ಲ. ಮುಖದ ರೂಪರೇಖೆ ತಯಾರಿಸಿದವನೆ ಪಾದಗಳನ್ನು ರಚಿಸಬೇಕಾಗುತ್ತದೆ. ಬರೆಹ ಪೂರ್ತಿಯಾದ ಬಳಿಕ ಕೊನೆಯ ಕೆಲಸವಾಗಿ ಕಣ್ಣು ತೆರೆಯಿಸುತ್ತಾರೆ. ಆ ಬಳಿಕದ ಕ್ರಮ 'ಕಳಂ ಪೂಜೆ'. ಬರೆಯುವಾಗ ರೇಖೆ ತಪ್ಪುವುದು ಅಥವಾ ತಪ್ಪನ್ನು ತಿದ್ದುವುದು ನಿಮಿದ್ಧ. ಆದ್ದರಿಂದ ಚೆನ್ನಾಗಿ ನೈಪುಣ್ಯ ಪಡೆದ ಕುಶಲ ಬರಹಗಾರನಷ್ಟೆ ಖುಖಖಾ ಚಿತ್ರ ರಚನೆಯನ್ನು ಎತ್ತರಿಸಿ ತೋರಿಸುವ ಶಿಲ್ಪದ ಹೋಲಿಕೆ ತೆಲೂ ಶ್ರಮ ಸಾಗುತ್ತದೆ.

ತಂತ್ರ (ಬ್ರಾಹ್ಮಣ) ನಡೆಸುವ ಪೂಜೆ ಆದೊಡನೆ ಕುಜುಪ್ಪಿನ 'ಪಾಟು' ಮತ್ತು 'ಕಳಂ ಪೊಲಿಕ್ಕಲ್' ನಡೆಯುತ್ತವೆ. 'ಅಮ್ಮಣಚ್ಚಾಯ', 'ಪಾಡಿವೆಕ್ಕಲ್', 'ನಿಜಜ್ಞಳ್' (ಬಣ್ಣಗಳು), 'ಕೇಶಾದಿಪಾದಂ' ತಲೆಗೂದಲಿನಿಂದ ಪಾದದವರೆಗೆ ವರ್ಣನೆ) ಪಾಟು ನಡೆಯುತ್ತವೆ. ಆ ಬಳಿಕ ಅಕ್ಕಿ, ದೀಪದ ಬತ್ತಿ, ಹೂವುಗಳು ಇವುಗಳಿಂದ ಮಂತ್ರೋಚ್ಚಾರಣೆ ಸಹಿತವಾಗಿ ಕುಜುಪ್ಪ್ 'ಕಳಂ' ಪೂಜೆ ಮಾಡುವನು. ಇದಾದ ಮೇಲೆ ಕಣ್ಣುಗಳನ್ನು ಅಳಿಸಲಾಗುತ್ತದೆ.

ಸ್ಥಳಿಯ ಪರಂಪರೆಗೆ ಸರಿಯಾಗಿ ಕೆಲವೆಡೆ ಮುಖವೂ, ಪಾದವೂ ಮುದಲು ಅಳಿಸುತ್ತಾರೆ. ಕುಱುಪ್ಪ್ 'ವೆಳಿಚ್ಚಪ್ಪಾಡ್'(ಪಾತ್ರಿ)ಆಗಿ ಖಡ್ಗ ಹಿಡಿದು ತಾಳದಲ್ಲಿ ನೃತ್ತವಾಡುತ್ತ ಕಳದ ಚಿತ್ರವನ್ನು ಅಳಿಸುತ್ತಾನೆ. ಕೆಲವೆಡೆಗಳಲ್ಲಿ 'ವೆಳಿಚ್ಚಪ್ಪಾಡ್' ಪೀಠದಲ್ಲಿ ಕುಳಿತು ತಾಳಬದ್ಧವಾಗಿ ಕಳದ ಮೇಲೆಸಿರಿಯುತ್ತಸಾಗುವುದುಂಟು. ಕ್ವವುಂಗಿನ ಹೂಗೊನೆಯಿಂದ ಪಾದವನ್ನು ಅಳಿಸಿದ ಮೇಲೆ ಮುಖವನ್ನು ಅಳಿಸುತ್ತಾನೆ. ಅಳಿಸುವವ ಎಂದಿಗೂ ತನ್ನಪಾದ ಚಿತ್ರದ ಮುಖದ ಮೇಲೆ ಹೋಗದಿರುದರ ಬಗೆಗೆ ಎಚ್ಚರಿಸುತ್ತಾನೆ. ಕಳದ ಚಿತ್ರ ಅಳಿಸಿ ರಾಶಿಸೇರಿಸಿದ ಪಂಚವರ್ಣ ಧೂಳನ್ನು ಪ್ರಸಾದವಾಗಿ ನೀಡುತ್ತಾರೆ. ಇದು ರೋಗಶಮನಕ್ಕಿರುವ ಔಷಧವೂ ಹೌದು. 'ವೆಳಿಚ್ಚಪ್ಪಾಡ್' ಅನಂತರ ದೇವರ ಆಜ್ಞೆಯನ್ನು ಹೇಳಿತತ್ತಾನೆ. ಎಳೆಯುವುದರೊಂದಿಗೆ ಈ ಅನುಷ್ಠಾನ ಮುಗಿಯುತ್ತದೆ.

ಧೂಳೀ ಚಿತ್ರರಚನೆ

ದಾರಿಗ ನಿಗ್ರಹದ ಬಳಿಕ ನಿಟ್ಟಿಳಿಯದೆ ಕೈಲಾಸಕ್ಕೆ ತಲಪಿದ ಕಾಳಿ ಶಾಂತಳಾಗುವುದು ತನ್ನ ಮಗ ಸುಬ್ರಹ್ಮಣ್ಯ ರಚಿಸಿದ ಸ್ವಂತ ಪ್ರತಿರೂಪವನ್ನು ನೋಡಿದಾಗ ಮಾತ್ರ. ದೂಳೀಚಿತ್ರದ ಆರಂಭ ಇಲ್ಲಿಂದ ಎಂದು ನಂಬಲಾಗುತಿದೆ. ಸಾಕ್ಷಾತ್ ಪರಶಿವನಿಂದಲೆ ಧೂಳೀ ಚಿತ್ರರಚನೆಯ ಕಲೆ ತಮಗೆ ದಾಟಿಬಂದುದೆಂದು 'ಕುಱುಪ್ಪನ್ಮಾರ್' ಹೇಳಿಕೊಳ್ಳುತ್ತಾರೆ. ಎಂಟನೆ ಮತ್ತು ಹದಿನಾಲ್ಕನೆ ಶತಮಾನಗಳ ನಡುವೆ ರಚನೆಗೊಂಡ 'ಭವಿಷ್ಯ ಪುರಾಣ', 'ಅಭಿಲಾಷ ಚಿಂತಾಮಣಿ', 'ಶಿಲ್ಪರತ್ನಂ' ಮಿದಲಾದ ಪ್ರಾಚೀನ ಗ್ರಂಥಗಳಲ್ಲಿ ಧೂಳೀಚಿತ್ರದ ಬಗೆಗೆ ಪರಾಮರ್ಶೆಗಳು ಇವೆ. ಇದರಿಂದ ಈ ಚಿತ್ರ ರಚನಾ ಶೈಲಿಗೆ ಶತಮಾನಗಳ ಹಳತನ ಇದೆಯೆಂದು ಮಾನ್ಯಮಾಡಬಹುದುದಾಗಿದೆ. ತಮಿಳುನಾಡಿನನಲ್ಲೂ, ಬಂಗಾಲದಲ್ಲೂ, ಒರಿಸ್ಸಾದಲ್ಲೂ, ಮಿಕ್ಕುಳಿದ ಪ್ರದೇಶಗಳಲ್ಲೂ ನೆಲೆಯಾಗಿರುವ 'ಕಳ ಬರಹ' ಮತ್ತು 'ಧೂಳೀ ಚಿತ್ರ'ಗಳ ಒಂದು ಫ್ಹೇದವೆ ಕೇರಳದೆಂದು ಹೇಳಬಹುದು.

'ಕೋಲ ಬರೆಹ'(ಕೋಲಮೆಮಿತ್ತ್) ಹೆಚ್ಚು ಪ್ರಚಾರದಲ್ಲಿರುವುದು ತಮಿಳುನಾಡಿನಲ್ಲಾದರೂ, ಕೇರಳದ ತಮಿಳು ಬ್ರಾಹ್ಮಣರು ಮನೆಯ ಅಂಗಳದಲ್ಲಿ 'ಕೋಲ'(ರಂಗೋಲಿ) ಬರೆಯುವುದುಂಟು. ಅಕ್ಕಿ ಹಿಟ್ಟಿನಿಂದ ಬರೆಯುವ ಕೋಲಗಳು ಮನೆಗೆ ಐಶ್ವರ್ಯ ತರುತ್ತದೆಂದು ನಂಬಲಾಗುತ್ತದೆ. ಬ್ರಾಹ್ಮಣ ಯುವತಿಯರಿಗೆ ಸಂಗೀತ, ನೃತ್ಯಗಳ ಅರಿವಿನ ಜತೆಗೆ 'ಕೋಲ' ಬರೆಯುವುದೂ ಗೊತ್ತಿರುವುದು ಅವರ ವಿವಾಹ ಮಾರುಕಟ್ಟೆಯಲ್ಲಿ ಒಂದು ವಿಶೇಷ ಬಂಡವಾಳವೆಂದೇ ಬಗೆಯಲಾಗುತ್ತಿತ್ತು. ಬಿಳಿ ಬಣ್ಣದ ಪುಡಿಯಿಂದ ಕೋಲ ಬರೆಯುವುದನ್ನು ಅಪೇಕ್ಷಿಸಿ, ಪಂಚವರ್ಣಗಳಲ್ಲೂ ಬರೆಯಲ್ಪಡುವ ಕೇರಳದ 'ಕಳ ಬರೆಹ'ಕ್ಕೆ ಅಥವಾ 'ಧೂಳೀ ಚಿತ್ರ ರಚನೆ'ಗೆ ಒಂದಿಷ್ಟು ಹೆಚ್ಚೇ ಮೇಲ್ಮೆಯನ್ನು ಹಚ್ಚಬಹುದುದಾಗಿದೆ. ದೇವತಾ ಪ್ರೀತಿಗಾಗಿ ಬರೆಯುವಂಥವು ಪದ್ಮಗಳು, ಚಕ್ರಾಬ್ಜ, ಶಕ್ತಿಮಂಡಲ, ದುರ್ಗಾಚಕ್ರ, ಸ್ವಸ್ತಿಕಮಾಲೆ ಅಥವಾ ವೀರಾಳಿ ಹೀಗಿಲ್ಲ ಬಗೆ ಬಗೆಯ ಪದ್ಮಗಳಿವೆ. ದೇವೀ ದೇವರ ರೂಪಗಳನ್ನು ಯಥಾರ್ಥವಾಗಿ ಬರೆಯುವುಧಾನ್ಯ ನೀಡಿ, ಮನುಷ್ಯರಿಂದ ಅತೀತರೆಂದು ಯೋತಿಸಲು ಕೈಗಳ ಸಂಖ್ಯೆಯನ್ನು ಹೆಚ್ಚಿಸಿಯೂ, ಮುಖದಲ್ಲಿ ರೌದ್ರಭಾವ ಬರಿಸಿಯೂ ರಚಿಸುವ ಈ ಚಿತ್ರಗಳು ಚಿತ್ರಕಲೆಯ 'ಸರ್ ರಿಯಲಿಸಂ'ನ ಹತ್ತಿರಕ್ಕೆನಿಲ್ಲುತ್ತವೆ. 'ನಾಗಕಳ' ಬರೆಯುವುದು. 'ನಾಗಕಾಳ' ವಿವಿಧ ಬಗೆಗಳಲ್ಲೂ ಇವೆ.

'ನಾಗಯಕ್ಷಿಕ್ಕಳಂ' , 'ನಾಗಭೂತಕ್ಕಳಂ' ಮೊದಲಾಗಿ ಎಂಬತೆರಡಕ್ಕೂ ಮಿಕ್ಕಿ 'ನಾಗ ಕಳ'ಗಳಿವೆ. ಪುಳ್ಳುವ ಕುಟುಂಬಗಳ ಕುಲಕಸುಬು ನಾಗಕಳ ಬರೆಹ. ಪ್ರತಾನುಷ್ಠಾನದ ಬಳಿಕ ಕಳ ಬರೆಹ ಪೂಜಾವಿಧಿಗಳೊಂದಿಗೆಯೆ 'ನಾಗಕಳ' ಬರೆಯತೊಡಗುವುದು. ಕಳ ಬರೆಹ ತೊಡಗುವ ಮೊದಲು 'ಪುಳ್ಳುವಕೊಡ' ಒಂದು ವಾದ್ಯ) ಬಡಿದು ಊರವರಿಗೆ ತಿಳಿಸುವುದು ಪದ್ಧತಿ.

ಕಳದ ಚಿತ್ರ (ಬರಹ) ಕೆಲವು ತಾಸುಗಳ ವರೆಗೆ ಮಾತ್ರ ಅಸ್ತಿತ್ವದಲ್ಲಿ ಇರುವುದಾದರೂ ಲೆಮೊರೆಗಳಿಂದ ಈ ಚಾತರ್ಯ ಗ್ರಾಮೀಣ ಜನತೆಯ ಕಲಾಸಾಂಸ್ಕೃತಿಕ ಪರಂಪರೆಯನ್ನೂ ವಿಶ್ವಾಸಗಳನ್ನೂ ಅರ್ಥಮಾಡಿಕೊಳ್ಳಲು ಉಪಕರಿಸಿತ್ತದೆ. ಇಲ್ಲಿ ಸಾಹಿತ್ಯವೂ, ಸಂಗೀತವೂ, ನೃತ್ತವೂ ಚಿತ್ರಕಲೆಯೂ ಒಂದೇ ವೇಧಿಕೆಯಲ್ಲಿ ಸಂಗಮಿಸುವುದನ್ನೂ ಕಾಣಬಹುದು.

ರೆಂಜೆಕಟ್ಟೆಯ ಮೇಳ

ಟಿಪ್ಪಣಿ

ನಾದವೂ ತಾಳವೂ ಸೇರಿರುವುದು ಸಂಗೀತ. ಒದು ಸಾಂಘಿಕತೆಯ 'ನಾದ–ತಾಳ ಪ್ರಜ್ಞೆ' ನಾಡಿನ ಭಾಷೆ, ನಾಡ ಪಾಟು, ವಾದ್ಯದ ಬಳಕೆ ವೇದಲಾದವುಗಳಲ್ಲಿ ತುಂಬಿನಿಲ್ಲುತ್ತೆ. ಅವುಗಳನ್ನು ಹಲವು ಬೃಷ್ಟಿಕೋನಗಳಿಂದ ಅಧ್ಯಯನಕ್ಕೆ ಒಳಪಡಿಸಬಹುದು. ಸೌಂದಯಶಾಸ್ತ್ರ ರೀತಿಯಲ್ಲೊ ಸಮಾಜಶಾಸ್ತ್ರ ರೀತಿಯಲ್ಲೊ ರಚನಾಪರವಾದ ರೀತಿಯಲ್ಲೊ ಅಧ್ಯಯಿಸಬಹುದು. ಈ ರೀತಿಯಲ್ಲಿರುವ ಸಾಂಘಿಕತೆಯ ವಿಶೀಷ್ಟ ಸ್ವಭಾವದೆಡೆಗೆ ಮೌಖಿಕಧಾರೆಗೆ ಸಂಬಂಧಿಸಿದ ಸಂಗೀತತದ ಬಗೆಗೇ ಜಾಪದ ಒಂದಷ್ಟು ಅಧ್ಯಯನ ಮಾಡಿದೆ. ವಾದ್ಯ ಸಂಗೀತದ ಬಗೆಗೇ ಮಾಡಿದ ಅಧ್ಯಯನ ವಿರಳ. ಪಾಶ್ಚಾತ್ಯ ರಾಷ್ಟಗಳಲ್ಲಿ ನ 'ದ ಡ್ರಂ' ನಂಥ ಅಧ್ಯಯನ ಗ್ರಂಥಗಳು ಆಗಿಲ್ಲ. ಆದರೆ ಇತರ ಜಾನಪದ ವಿಷಯಗಳನ್ನು ಅಪೇಕ್ಷಿಸಿ ಬಹಳ ಅಲ್ಪ ಅಧ್ಯಯನಗಳು ಮಾತ್ರ ನಡೆದಿವೆ. ಸಾಂಘಿಕತೆಯ ಸಂಗೀತಪ್ರಜ್ಞೆ ಕೇವಲವಾದ ಒಂದಲ್ಲ. ಅದು ಜೀವನದ ಇತರ ಎಲ್ಲ ತಲಗಳೊಂದಿಗೆ ಸಂಬಂಧಿಸಿರುತ್ತದೆ. ಈ ಸಂಬಂಧಗಳನ್ನು ಬಗೆದು ಕಂಡುಹಿಡಿಯುವ ಸಂಬಂಧಿಸಿರುತ್ತದೆ. ಗ್ರಾಮಿಣ ಸಣಗೀತ ಅಧ್ಯಯನ ಮುಖ್ಯವಾಗಿ ಉದ್ದೇಶಿಸುವುದು ಇದನ್ನೆ.

ಒಂದು ಸಾಂಘಿಕತೆಯ ಸಂಗೀತಪ್ರಜ್ಞೆಯಲ್ಲಿ ನಾದಕ್ಕೆ ಪ್ರಾಮುಖ್ಯವೂ, ತಾಳಕ್ಕೆ ಪ್ರಾಮುಖ್ಯವೂ ಎಂಬುದು ಯಾದೃಚ್ಛಿಕವಾದ ಒಂದು ವಿಷಯವಲ್ಲ. ಕೇರಳೀಯ ಗ್ರಾಮೀಣ ಸಂಗೀತ ತಾಳಪ್ರಧಾನವಾದುದು. ಕೇರಳದಲ್ಲಿ ಅಲ್ಲಿಂಇಲ್ಲಿವರೆಗೆ ಕಾಣೂವ ಧಾರಾಳ ತಾಳವಾದ್ಯಗಳೂ, ಅವುಗಳ ಸಾಮೂಹಿಕ ಪ್ರಯೋಗವೂ ಮಲಯಾಳ ಭಾಷಾಭೇದಗಳನ್ನು ಕೂಡ ಸಮರ್ಥಿಸುತ್ತವೆ. ಇದರ ಕಾರಣಗಳಿಗೆ ಇಳಿದು ತಡಕಾಡುವ ಅಧ್ಯಯನ ನಡೆಯಬೇಕು.

ಬೇಸಗೆಯಲ್ಲಿ ಬಂಡೆಗಳು ಕಾದುಹಣ್ಣಾಗುವುದು, ಗದ್ದೆಬಯಲುಗಳು ಬಿಟ್ಟ ಬಿರುಕುಗಳ ಮೇಲಿಂದ ಉರಿಗಾಳಿ ಏಳುವುದು ಸಂಭವಿಸುವಾಗ ಕೇರಳದ 'ಕಾವು'ಗಳಲ್ಲಿ 'ಪೂರಂ' ಹಬ್ಬದ ಹೊಸ ಬಾವುಟದ ಬಟ್ಟೆಗಳು ಏರತೊಡಗುತ್ತವೆ. ಇದು ತೃಶೂರ್ 'ಪೂರಂ' ಉರಿಯುವ ಮೇಷ ಮಾಸದ ಬಿಸಿಲು, ತೃಶೂರಿನ ಇತಿಹಾಸ ಪ್ರಸಿದ್ಧ ವಡಕ್ಕುಂನಾಥ ದೇವಾಉಯದ ಪೌಳಿಯಳಗೆ ಸಾಲಾಗಿ ನಿಂತ ಹದಿನೈದು ಆನೆಗಳು. ಅವುಗಳ ಮುಂದೆ ಸುತ್ತು ಅಂಗಳತುಂಬಿ ಹೊರಕ್ಕೆ ತುಳುಕುವ ಜನಸ್ತೋಮ. ತಾಳನ್ನಾಡಿಸುತ್ತ ನಿಲ್ಲುವ ಆನೆಗಳ ಮುಂದೆಲ್ಲ ಹೊಡೆದು ಬರುವ 'ಪಾಂಡಿಮೇಳ' (ಒಂದುಬಗೆವಾದನ ಪ್ರಬಂಧ) ಮಂದವೂ ವಿಂಬಿತವೂ ಆದ ಒಂದು ತಾರಕಕ್ಕೇರಿಯೂ ಕ್ರಮೇಣ ಭಯಾನಕವಾದ ಒಂದು ನುಗ್ಗಲು ಪ್ರವಾಹವಾಗಿ ಕಲಾಶಧ ಮೂರ್ಧನ್ಯಕ್ಕೆ ತಲಪಿ ಇಡೆದು ಛಿದ್ರಗೊಂಳ್ಳುತ್ತದೆ.

ಆ ಊರ್ಜವಿಸ್ಫೋಟನದ ಅಣಂತರದ ನೀರವವಾದ ಶಾಂತಿಯಿಂದ ಹಿಂದಿರುಗಿ ನೋಡುವಾಗ ನೋಡುಗರಿಗೆ ತಮಗರಿವಿಲ್ಲದೆ ಮಧ್ಯಾಹ್ನದ ಬಿರುಉರಿಯ ಎರಡು ತಾಸುಗಳ ಅವಧಿ ದಾಟಿರುತ್ತದೆ.

ಎಲ್ಲ ಬೇಸಗೆಗಳಲ್ಲೂ ತೃಶೂರಿನ ವಡಕ್ಕುನ್ಆಥನ್ ದೇವರ ಒಳಾಂಗಣದಲ್ಲಿ ಪುನರಾವರ್ತನೆಗೊಂಡು ಕಲ್ಪಿಸಿಕೊಳ್ಳಲೂಬಾರದ ಒಂದು ವಿಷಯ. ಎರಡು ತಾಸಿನಷ್ಟಕ್ಕೆ ಚಾಚಿ ನಿಲ್ಲುವ ಒಂದು ವಾದ್ಯ ಮೇಳವೆ? ನೆರೆಮನೆಯವನಾದ ತಮಿಳ ನಿಜಕ್ಕೂ ಅಚದಚರಿಗೆ ಬಿದ್ದಿರುತ್ತಾನೆ. ಎರಡು ಅಥವಾ ಮೂರು ತಾಸುಗಳಿಗೆ ವಿಸ್ತರಿಸುವ ಸಂಗೀತ ಕಚೇರಿಗಳನ್ನು ಆತ ಕಾಣುವುದುಂಟು. ಆದರೆ ಆ ಬಗೆ ಕಚೇರಿಗಳಲ್ಲವೂ ವಾದ್ಯಗಳು ಹಾಡಿನ ಪರಿವಾರವೆನಿಸಿದ ಉಪಾಂಗಗಳಾಗಿರುತ್ತವೆ. 'ತನಿಯಾವರ್ತನ'ದ ಕಿರು ಅವಧಿಗಳಲ್ಲಿ ಮಾತ್ರ ವಾದ್ಯಗಳಿಗೆ ಸ್ವಾಧಿಕಾರಸಿಗುವುದು. ಆದರೂ ಅತ್ಯಂತ ದೊಡ್ಡದೆನಿಸುವ ತನಿಯಾವರ್ತನ ಕೂಡ ಇಪ್ಪತ್ತು ನಿಮಿಷಗಳಿಗೆ ಬೆಳೆದರೆ ಸಾಕಾಗುತ್ತದೆ ಎಂಬುದೇ ಅವನ ಅನುಭವ. ಅದರ ಸ್ಥಾನದಲ್ಲಿ ಇದೇ ಇಪ್ಪತ್ತು ನಿಮಿಷವಲ್ಲ ಅದರ ಹತ್ತುಪಾಲು ಹೊತ್ತು ವಿಸ್ತರಿಸಿ ನಿಲ್ಲುವ ವಾದ್ಯಮೇಳ ಇಲ್ಲಿದೆ. ಹಾಡುಗಾರಿಕೆಯ ಪರಿವಾರವಾಗಿ ಮಾತ್ರ ಕೇಳಿ ಕೇಳಿ ಹೋಗುವ ಆತನ ಕಿವಿಗಳಿಗೆ ಇದೋ ಯಾವುದೊಂದರ ಪರಿವಾರವೂ ಅಲ್ಲದೆ ತನ್ನಲ್ಲಿ ತಾನೆ ಪೂರ್ಣವಾಗಿ ನಿಲ್ಲುವ ಒಂದು ವಾದ್ಯಘೋಷ. ಕಚೇರಿಗಳಿಗೆ ಪ್ರಶಸ್ತವಾದ ತನ್ನ ರಾಜ್ಯದ ಸಂಗೀತ ಪ್ರಧಾನವಾದ ಶ್ರವಣಸಂಸ್ಕಾರದಿಂದ ಎಷ್ಟೊ ಭಿನ್ನವಾದ ಒಂದು ಶಬ್ದ ಪ್ರಬಂಧದ ಹತ್ತರಲ್ಲಿ ಮೂರರಷ್ಟು ಮಾತ್ರ ತಾನು ಮುಳುಗಿ ಏಳುವಾಗ ಆತ ಅಚ್ಚರಿಯೊಂದಿಗೆ ಅರಿತುಕೊಳ್ಳುತ್ತಾನೆ.

"ಅಚ್ಚರಿಗೊಳ್ಳಬೇಡಿರಿ", ಯಾರಾದರೊಬ್ಬ ಮಲಯಾಳಿ ಆತನ ಭುಜ ತಟ್ಟಿಹೇಳೀಯಾನು, "ಕಾರಣ, ಅದೇ ನಮ್ಮ ಕೇರಳ. ಸ್ವರಕ್ಕಿಂತ ಹೆಚ್ಚುನಾದದ ಪರಿಚರ್ಯೆ ಮಾಡುತ್ತಬರುವ ಒಂದು ನಾಡು". ಹೆಚ್ಚಾಗಿ ವಾದ್ಯಕ್ಕೆ ಇಲ್ಲಿ ಪ್ರಧಾನ್ಯ ದೊರೆಯಿತು. ತಮಿಳುನಾಡಿನ ಸಂಗೀತ ಕಚೇರಿಗೆ ಬದಲಾಗಿ ಇಲ್ಲಿ ಬೇಳೇದು ಬಂದುದು

ಬಜಾವಣೆ ಕಚೇರಿಗಳಾಗಿತ್ತು. ಮನುಷ್ಯನ ಶಬ್ದವೂ ಅದರಿಂದ ಪುಟಿದು ಬರುವ ಅನಂತಸಾಧ್ಯತೆಯಿರುವ ಮಧುರಗಾನಲೋಕವೂ ಒಂದು ಆದರೆ ಅವರಿಗಾದರೂ ಸಂಶಯವಿಲ್ಲದಿರುವಂಥದು ಕೇರಳ ಸಂಪನ್ನವಾದ ವಾದ್ಯ ಪರಂಪರೆ ಬಗೆ. ಕೇರಳದ ಕಲಾಸಂಚಯದಲ್ಲಿ ಅತ್ಯಂತ ಪ್ರಧಾನವಾದುದು ಬಜಾವಣೆ(ಕೊಟ್ಟ್). ಸಂಗೀತ ಕಚೇರಿಗಳ ಹಾಗೆ ವ್ಯಕ್ತಿಯ ಏಕಾಂತ ಸೌಮ್ಯವಾದ ಪ್ರಕಟನೆಗಳಾಗಿ ಅಲ್ಲ ಎಂಬತ್ತು, ನೂರು ಮಂದಿಯಷ್ಟಾಗುವ ಮನುಷ್ಯ ಮಹಾಸಘಗಳು ಇಟ್ಟಾಗಿ ನಿಂತು ಏರುವ ದೈತ್ಯ ಶಬ್ದಗೋಪುರಗಳಾಗಿ ಅದು ಮಲಯಾಳಿಯ ಆಕಾಶಗಳಲ್ಲಿ ಹೊಮ್ಮಿ ಹೊಮ್ಮಿ ಬಂತು. ಮನುಷ್ಯ ಸ್ವರ ಒಂದು ಆಢ್ಯಕಲೆಯಾಗಿ ಇಲ್ಲಿ ವಿಕಸಿತವಾಗದುದ್ದರೂ ವಾದ್ಯಗಳ ನಾದ ಇಲ್ಲಿ ಪರಿಚರಿಸಲ್ಪಟ್ಟಿತು, ಸಂಸ್ಕರಿಸಲ್ಪಟ್ಟಿತು. Voice ಮತ್ತು Noice ಗೆ ಕೇರಳದ ಶಬ್ದ ಸಂಸ್ಕೃತಿಯಲ್ಲಿ ಪ್ರಾಮುಖ್ಯ ದೊರೆಯಿತು. 'ಸದ್ದ'ನ್ನು ನಾವು ಒಂದು ಕಲೆಯನ್ನಾಗಿ ಬೇಳೆಸಿದವು. ಒಂದೊಂದು ಮೇಳದ ಅಂತ್ಯದಲ್ಲಿ ಮೊಳಗುವ ಸಿಡಿಮದ್ದಿನ(ವೆಡಿಕಡಟ್ಟು) ಪ್ರದರ್ಶನದ ಭಯಾನಕವಾದ ಸೌಂದರ್ಯ, 'ಗದ್ದಲ' ಸೃಷ್ಟಿಸುವ ಕಲಾತ್ಮಕ ಚೆಲುವನ್ನರಿತ ಒಂದು ಸಮುದಾಯಕ್ಕಿಲ್ಲದೆ, ಮತ್ತಾರಿಗೆ ಅರ್ಥವಾಗಲು ಸಾಧ್ಯ?

ಕೇರಳದ ವಾದ್ಯಗಳ ವೈವಿಧ್ಯ ಸಂಪನ್ನವಾದ ಲೋಕವನ್ನು ಪರಿಶೋಧಿಸುವಾಗ, ಇಲ್ಲಿ ಜಜಾವಣೆ(ಕೆಟ್ಟ್)ಗಿರುವ ಪ್ರಾಮುಖ್ಯ ಇನ್ನಷ್ಟು ಬಯಲು ಗೊಳ್ಳುತ್ತದೆ. ವಾದ್ಯಗಳು ನಾಲ್ಕೆಂದು ವರ್ಗೀಕರಣ _ತತ, ಅವನದ್ಧ, ಕನ ಮತ್ತು ಸಿಷೀರ. ವೀಣೆಯೂ, ಪಿಟೀಲೂ ಮೊದಲಾದ ತಂತಿವಾದ್ಯಗಳು 'ತತ' ವರ್ಗದವು. ಚರ್ಮ ಎಳೆದು ಕಟ್ಟಿದ ಮದ್ದಳೆಯಂಥ ವಾದ್ಯಗಳು 'ಅವನದ್ಧ'. ಚಕ್ರತಾಳ(ಇಲತ್ತಾಳಂ) ಲೋಹದ ಉಲಕರಣಗಳು 'ಘನ'. ಕೊಳಲಿನಂಥ ರಂದ್ರಗಳಿರುವ ವಾಟೆಯ ಉಪಕರಣ 'ಸಿಮಿರ'. ಈ ನಾಲ್ಕು ಬಗೆ ವಾದ್ಯಗಳಲ್ಲಿ 'ತತ' ವಾದ್ಯಗಳೂ, ಅಂದರೆ ವೀಣೆಯೂ, ಕೊಳಲೂ ಶುದ್ಧ ಸಂಗೀತಕ್ಕೆ ಇರುವವುಗಳು. ನಾದ ಮತ್ತು ರಾಗಗಳನ್ನು ಸೃಷ್ಟಿಸಲು ಅವುಗಳ ಬಳಕೆ. ಅವನದ್ಧ ವಾದ್ಯಗಳೂ, ಘನವಾದ್ಯಗಳೂ ತಾಳಹಾಕಲು ಪ್ರಯೋಜನಕ್ಕೆ ಬರುವಂಥವು. ಕೇರಳದ ಪ್ರತ್ಯೇಕತೆ ತಾಳ ಹಾಕಲು ಇರುವ ವಾದ್ಯಗಳು ನಾದವನ್ನು ರಚಿಸಲಿರುವ ವಾದ್ಯಗಳಿಗಿಂತ ಎಷ್ಟೊ ಹೆಚ್ಚು ಎಂಬುದಾಗಿಗಿದೆ. ಪ್ರಚಾರದಿಂದಲೂ ಪ್ರಾಮಾಣ್ಯದಿಂದಲೂ ತಾಳವಾದ್ಯಗಳು ಗಾನ ವಾದ್ಯಗಳಿಗಿಂತ ಎದ್ದು ಕಾಣಿಸುವುದು. ಇಡಯ್ಕು (ಢಕ್ಕೆಯ ಪ್ರಭೇದ), ತುಡಿ(ದುಡಿ), ಚೆಂಡ(ಚೆಂಡೆ), ಮದ್ದಳಂ(ಮದ್ದಳೆ), ಪರ(ನಗಾರಿ) ಎಂಬಂತಿರುವ ಸುಪ್ರಸಿದ್ಧವಾದ ತಾಳವಾದ್ಯಗಳಿಗೆ ಹೊರಗೆ, ಹೆಚ್ಚು ಜನರು ಕೇರಳಿದ, 'ಇರುತಡಿವಿರಾಣಂ', 'ಪಂಚಮುಖವಾದ್ಯಂ', 'ಮರಂ' ಮೊದಲಾದ ಇನ್ನೂ ಹಲವು ಇವೆ. ತಾಳವಾದ್ಯಗಳ ಬಲುದೊಡ್ಡ ಸಂಗ್ರಹಾಲಯವೆ(museum) ಕೇರಳ. ಈ ವಾದ್ಯಗಳನ್ನು ಬಳಸಿ ಮತ್ತೆಲ್ಲೂ ಇಲ್ಲದ ಬೃಹದಾಕಾರದ ಶಬ್ದಶಿಲ್ಪಗಳನ್ನು ನಾವು ಮಾಡಿದ್ದೇವೆ. ಈ ಶಬ್ದಶಿಲ್ಪಗಳಾದರೊ ನಮ್ಮ ಸಂಗೀತವನ್ನೇ ಅಪ್ರಧಾನಗೊಳಿಸಿ ಬಿಟ್ಟಿವೆ. ಸಂಗೀತ ವಾದ್ಯಗಳಾಗಿ ಇತರೆಡೆ ಬೆಳೆಯಬಹುದಾಗಿದ್ದ ಹಲವು ವಾದ್ಯಗಳು ನಾವು ತಾಳಕ್ಕಾಗಿ ಬಳಸುತೇವೆ. 'ವಿಲ್ಲು' ತಾಂತ್ರಿಕವಾಗಿ ಒಂದು ತಂತಿವಾದ್ಯ. ಆದರೆ ನಮ್ಮ ಮಕ್ಕಳು 'ಓಣವಿಲ್ಲು' (ಓಣಂಹಬ್ಬದಬಿಲ್ಲು) ಬಾರಿಸುವುದು ಮಾತ್ರ ಪದ್ಧತಿ. ಬಿಲ್ಲಿನ ಮೇಲೆ ಒಂದು 'ತಾಯಂಬಕ' (ತಾಳಮೇಳO ಕೂಡ ಇಲ್ಲಿದೆ. 'ಪುಳ್ಳುವನ್'ನ' 'ಇಡಿಯಜಿ' ಎಂಬ 'ಇನ್ನೊಂದು ತಂತಿವಾದ್ಯವೂ ನಾದ ರಚನೆಗಿಂತ ಹೆಚ್ಚಾಗಿ ಹಾಕಲು ಬಳಕೆಯಾಗುತ್ತದೆ. 'ಕುಜುಂಖಕುವಿಲ್' (ಕಿಉಗೊಳಲ್ಲು ಮೌರಿಯಂಥವಾದ್ಯ) ಕೇರಳದಲ್ಲಿ ಸಾಮಾನ್ಯವಾಗಿರುವುದಾದರೂ ಅದನ್ನು ಬಳಸಿ 'ನಾದಸ್ವರ'ದಂಥ ರಾಗ ರಚನೆ ಪದ್ಧತಿ ಇದುವರೆಗೆ ಉಂಟಾಗಿಲ್ಲ. 'ಕುಜುಂಕುವಿಲ್' ಸ್ವತಂತ್ರವಾದ ಒಂದು ರಾಗರೂಪವನ್ನು ತಯಾರಿಸುವುದುದಕ್ಕಲ್ಲ, ಮೇಳಕ್ಕೆ ಬೆಂಬಲವಾಗಿ

ಸೇರಿಕೊಳ್ಳುಲು, ಬಳಕೆಯಾಗುತ್ತದೆ. ರಾಗಕ್ಕೆ ಬೆಂಬಲಿಗ ತಾಳ ಎಂಬ ಸಾಮಾನ್ಯ ನೆಲೆಯೂ ಬದಲಿ 'ತಾಳದ ದಾರ್ಢ್ಯಕ್ಕಾಗಿ ಸ್ವರ' ಎಂಬಲ್ಲಿವರೆಗೆ ತಲಪಿರುವಂಥದು. ಕೇರಳದಲ್ಲಿ ತಾಳವಾದ್ಯಗಳಿಗೆ ಇರುವ ಅಸಾಧಾರಣ ಪ್ರತಿಷ್ಠೆಯನ್ನು ಪ್ರಮಾಣ್ಯವನ್ನೂ ಇವೆಲ್ಲ ವ್ಯಂಜಿಸುವುದು. ಸಂಗೀತಕ್ಕೆ ಇಲ್ಲಿನ ಶ್ರವಣ ಸಂಸ್ಕಾರದಲ್ಲಿ ಹೆಚ್ಚಿನದಾದ ಪ್ರಾಮಾಣ್ಯವೇನೂ ದೊರೆತಿಲ್ಲ. ಬಿದಿರಮೆಳೆಗಳ ಕಾಡುಗಳು ಧಾರಾಳವಿದ್ದೂ ಕೊಳಲಿನ ಂಸ್ಕಾರ ಕೇರಳದಲ್ಲಿ ಗಟ್ಟಿಯಾಗಿ ಬೇರುಬಿಟ್ಟಿಲ್ಲ. ಶ್ರುತಿಗಿಂತ ಇಲ್ಲಿ ತಾಳ ಪ್ರಾಧಾನ್ಯ ಪಡೆಯಿತು.

ಬೇರೆಕಡೆಗಳಲ್ಲಿ ಇಲ್ಲದಷ್ಟು ಕೇರಳದಲ್ಲಿ 'ಬಾರಿಸುವುದಕ್ಕೆ' ಹೀಗೊಂದು ವಿಕಾಸ ಸಿದ್ಧಿಸಿರುವುದು ಏಕರಿಂದ? ಇದಕ್ಕೆ ಎರಡು ಕಾರಣಗಳನ್ನು ಹೇಳಬಹುದು. ಅದರಲ್ಲಿ ಮೊದಲನೆಯದು 'ಬಾರಿಸುವುದಕ್ಕೆ' ಇಲ್ಲೊಂದು ಜಾಇಯೆ ಉಂಟಾಯಿತು ಎಂಬುದಾಗಿದೆ. 'ಪೊದುವಾಳ್', 'ಮೂರಾರ್' ಎಂಬ ಕುಲಗಳಿಗೆ ವೃತ್ತಿಯೆ ವಾದ್ಯಕಲೆಗಳಷ್ಟೆ? ಅವರಿಗೆ 'ಬಾರಿಸುವ' ಕೆಲಸ ಮಾತ್ರ ಮಾಡಿದರಾಯಿತು. ಸಮೂಹದ ಒಂದು ವೃತ್ತಗಳಿಂದ ಅವರು ವಿಮುಕ್ತರು. ಇಡಿಯ ಸಮಯವನ್ನೂ ತಮ್ಮ ಕುಲವೃತ್ತಿಯಲ್ಲಿ ವಿನಿಯೋಗಿಸಲು, ಧ್ಯಾನವಿರಿಸಲು ಪರಂಪರೆಯಿಂದಲೆ ಸ್ವಾತಂತ್ರ್ಯಗಳಿಸಿದುದರಿಂದ ಕೇರಳದಲ್ಲಿ 'ಬಾರಿಸುವ ಕಲೆ'ಗೆ ಅವರು ಅಸಾಧಾರಣವಾದ ಒಂದು ವಿಶೇಷ ಮುಖವನ್ನು ಸಂಪ್ರದಾನ ಮಾಡಿದರು. ಬಾರಿಸಿವಿಕೆಯ ರಂಗದಲ್ಲಿ ಅವರು ಕಂಡುಕೊಂಡ ತಾಂತ್ರಿಕವಾದ ಮುನ್ನಡೆ ಬಾರಿಸುವುದು(ಉರಿಳಿಕೆ) ಎಂಬುದೇ ಈ ತಾಂತ್ರಿಕ ಮುನ್ನಡೆ, ಕೇರಳದ ಬಾರಿಸಿವಿಕೆಯ ದೇ ಪ್ರತ್ಯೇಕತೆಯಾಗಿದೆ 'ಉರುಳಿಸಿ ಬಾರಿಸುವಿಕೆ'. ಕೇರಳದ ಹೊರಗೋ ಕೇರಳದಲ್ಲಿ ಇವತ್ತೂ ಉಳಿದಿರುವ ಇತರ 'ಗೋತ್ರ ವಾದ್ಯಗಳಲ್ಲೂ' ಈ ರೀತಿ ಕಾಣುತ್ತಿಲ್ಲ. ಎರಡು ಕಡೆಗಳಲೂ ಕಾಣುವುದು ಚರ್ಮದ ಮುಚ್ಚಿಗೆ ಮೇಲೆ ಲಂಬವಾಗಿ ಕೋಲನ್ನಿಳಿಸಿ ಬಡಿಯುವುದನ್ನೆ ಮಾಡುತ್ತಾರೆ. ಬಾರಿಸುವಿಕೆಯ ವೇಗ ಹೆಚ್ಚಿಸಲು ಮಾತ್ರ 'ನೇರಕೋಲು' ಎಂಬ ಈ ತೆರನ ರೀತಿ ಸಾಧ್ಯ. ಈರೀತಿ ಪರಿಮಿತಿ ಇದರಲ್ಲಿ ಬಾರಿಸಬಹುದಾದ ಸಂಖ್ಯೆಗಳ ಪರಿಮಿತಿಯೂ, ಸೃಷ್ಟಿಸಬಹುದಾದ ಬಿರುಸಿನ ಪರಿಮಿತಿಯೂ ಆಗಿವೆ. ಈ ಪರಿಮಿತಿಯನ್ನು ದಾಟಿಹಾರಲು ಕೇರಳದ ಮೂರಾರೂ, ಪೊದುವಾಳರೂ ಕಂಡುಕೊಂಡ ಅನನ್ಯ ರೀತಿಯಾಗಿದೆ 'ಉರುಳುಕೈ'. 'ನ್ಯರಕೋಲು' ಬಳಕೆಯಲ್ಲದೆ, ಕೋಲು ಒಳಹೊರಗಾಗಿ ಮಗುಚುವ ಅಥವಾ ಉರುಳುವ ಜೋಡಿಗಳು ಕೂಡಿದ ಬಾರಿಸುವ ರೀತಿಯೆ 'ಉರುಳುಕೈ'. ಉರುಳುಕೈ ನೆಲೆಕಂಡ ಬಳಿಕ ಕೇರಳದ ವಾದ್ಯಕಲೆ ಹೊಸ ಆಗಸಗಳಿಗೆ ಬೆಳೆದುಕೊಂಡು ಎನ್ನಬಹುದು.

ಜಾತಿಯೆಂಬ ಸಾಮೂಹಿಕ ಸಾಹಚರ್ಯದಿಂದಲೂ 'ಉರುಳುಕೈ' ಎಂಬ ತಾಂತ್ರಿಕ ಮುನ್ನಡೆಯಿಂದಲೂ ಕೇರಳದಲ್ಲಿ ಬೆಳೆದು ವಿಕಸಿತವಾದ ವಾದ್ಯಕಲೆಗಳು ಯಾವುದೆಲ್ಲ? ಮುಖ್ಯವಾಗಿಯೂ ಅವು ಮೇಳಗಳು(ವಾದ್ಯಮೇಳಗಳು) ಎಂದು ಧಾರಾಳ ಹೇಳಬಹುದು. 'ಮೇಳ' ಎಂದರೆ ಮೇಲನಗೊಳ್ಳುವುದು, ಒಗ್ಗೂಡಿ ಸೇರಿಕೊಳ್ಳುವುದು ಎಂದು ಅರ್ಥ. ಒಂದಷ್ಟು ಜನರು, ಒಂದಷ್ಟು ವಾದ್ಯಗಳು, ಒಗ್ಗೂಡಿ ಸೇರಿ ನಿರ್ಮಿಸುವ ವಾದ್ಯ ಸೇರಿಕೆಗಳೇ ಒಂದೊಂದು ಮೇಳವೂ. ಚೆಂಡೆಯ ಎರಡು ಬದಿಗಳು, ಚಕ್ರತಾಳ(ಇಲತ್ತಾಳಂ) ಕೊಂಬು, 'ಕುಜುಂಕುಜಿಲ್' (ಕಿರುಗೊಳಲು) ಎಂಬೀ ವಾದ್ಯಗಳೇ ಚೆಂಡೆಮೇಳದಲ್ಲಿ ಮೇಲನಗೊಳ್ಳುವುದು. ಮುಖ್ಯವಾಗಿ ಏಳೂಬಗೆ ಮೇಳಗಳು ಇವತ್ತು ಕೇರಳದಲ್ಲಿ ಕೇಳಸಿಗುತ್ತವೆ. 'ಪಂಜಾರಿ ಮೇಳಂ', 'ಚೆಂಬಡ ಮೇಳಂ', 'ಪಾಂಡಿಮೇಳಂ', 'ಅಡಂದ ಮೇಳಂ', 'ಅಂಜಡಂದ ಮೇಳಂ', 'ಚಂಬ ಮೇಳಂ', 'ಧ್ರುವ ಮೇಳಂ' ಹೀಗೆ. ಇವೆಲ್ಲ ತಾಳಗಳ ಹೆಸರಿನಿಂದ ರೂಪಿತ ಹೆಸರುಳು. ಬಳಸುವ ಬುನಾದಿ ತಾಳದಲ್ಲಿ ಒಂದೊಂದೂ ನಿಧಾನ

ಕ್ರಮದಲ್ಲಿ ಬಿರುಸಿನಲ್ಲಿ ಹೋಗಿ ಒಡೆದು ಚದರುವುದು. ಕೇರಳದಲ್ಲಿ ಪ್ರಚಾರದಲ್ಲಿರುವ ಮತ್ತು ಪ್ರಚಾರ ಕಡಿಮೆಯಾಗಿರುವ ಮುಖ್ಯವಾದ ಮೇಳರೂಪಗಳ ರಚನೆ ಪಿ.ಎಸ್.ವಾರ‍್ಯರ್ ಅವರು ಬರೆದು ಕೇರಳ ಸರಕಾರದ ಸಾಂಸ್ಕೃತಿಕ ಇಲಾಖೆ ಪ್ರಕಟಿಸಿರುವ 'ಕೇರಳೀಯ ಮೇಳ ಕಲ: ಚೆಂಡ ಮೇಳಙಙಳ್' ಎಂಬ ಪುಸ್ತಕದಲ್ಲಿ ಲಭ್ಯವಿದೆ.

ಮೇಳಗಳಿಗೆ ಇನ್ನೊಂದು ಸ್ವಭಾವ ಕೂಡ ಇದೆ. ಅದು ಹೆಚ್ಚಾಗಿ ಕ್ಷೇತ್ರದ ಹಬ್ಬದ ಚಡಂಗಗಳೊಂದಿಗೆ ಪರಂಪರಾಗತವಾಗಿ ಸಂಬಂಧಿಸಿಕೊಂಡದ್ದು. ವಾದ್ಯ ಕಲೆಯಲ್ಲಿ ಅನಂತರದ ಕಾಲದಲ್ಲಿ ಬೆಳೆದುಬಂದ 'ತಾಯಂಬಕ' ಅಥವಾ 'ಪಂಚವಾದ್ಯ'ಕ್ಕೆ ಇಲ್ಲದಿರುವ ಪ್ರತ್ಯೇಕತೆ ಇದು. 'ತಾಯಂಕ' ಎಲ್ಲಿಯೂ ನಡೆದೀತು. ಯಾವ ಮಂತ್ರಿಯ ಸ್ವಾಗಕ್ಕೂ ಪಂಚವಾದ್ಯದ ಪರಿವಹನ ನಡೆಯಬಲ್ಲುದು. ಆದರೆ ಒಂದೊಂದು ದೇವಾಲಯದ ಇಂಥಿಂಥ ಚಡಗಗಳೊಂದಿಗೆ ಇಂಥಿಂಥ ಮೇಳರೂಪಗಳನ್ನೆ ಪ್ರಸ್ತುತಪಡಿಸಬೇಕೆಂಬ ಕಟ್ಟಲೆ ಇರುತ್ತದೆ. ದೇವನೊಂದಿಗಿನ ಸಂಬಂಧದ, ಒಂದು ಪಕ್ಷದಲ್ಲಿ ಸ್ಥೀಯ ಬಾರಿಸುವಿಕೆಯ ಆಧಾರವಾಗಿಯೂ, ಈ ಮೇಳಗಳಲ್ಲಿ ಶ್ರೇಷ್ಠ/ಅಲ್ಲದ್ದು ಎಂಬ ಮೇಲು-ಕೀಳು ಶಿಸ್ತುಗಳಿವೆ. ಅದರ ಪ್ರಕಾರ ಅತ್ಯಂತ ಶ್ರೇಷ್ಠವಾದುದು 'ಪಂಚಾರಿಮೇಳ', ಅತ್ಯಂತ ಶ್ರೇಷ್ಠವಲ್ಲದ್ದು 'ಪಾಂಡಿಮೇಳ' ಆಗಿವೆ. ದೇವಾಲಯದ ಆವರಣದೊಳಗೆ 'ಪಾಂಡಿಮೇಳ' ಸಲ್ಲದು ಎಂಬ ಸಾಮಾನ್ಯ ನಿಷೇಧವೂ ಇದೆ. ಈ ನಷೇಧವನ್ನು ಮೀರಿ 'ಪಾಂಡಿಮೇಳ' ದೇಗುಲದ ಆವರಣದೊಳಗೆ ಪ್ರವೇಶಿಸಿರುವ ಏಕೈಕ ಸ್ಥಳ ತೃಶೂರ್ ವಡಕ್ಕುನ್ನಾಥ ಕ್ಷೇತ್ರ (ಇದನ್ನು ಶೀ ಶಿವ ಪೇರೂರ್ ಕ್ಷೇತ್ರವೆಂದೂ ಹೇಳುತ್ತಾರೆ) ವಾಗಿದೆ. 'ತೃಶೂರ್ ಪೂರಂ' ದಿವಸ ಈ ದೇವಾಸ್ಥಾನದ ಒತ್ತಿರುವ ಪಾಱಮೇಕ್ಕಾವು ದೇಗಿಲದ ಭಾಗದವರು ವಡುಕ್ಕುನ್ನಾಥ ದೇಗುಲದ ಪಶ್ಚಿಮ ನಡೆಯಲ್ಲಿ, ಆವರಣದ ಒಳಗಿರುವ ರೆಂಜೆಮರಗಳ ಅಡಿಯಲ್ಲಿ ಬಾರಿಸುವುದು 'ಪಾಂಡಿಮೇಳ'. ಸುಪ್ರಸಿದ್ಧವಾದ 'ರೆಂಜೆ ಕಟ್ಟೆ ಮೇಳ'ದ ಪ್ರತ್ಯೇಕತೆ ಇದೇ.

'ತೃಶೂರ್ ಪೂರಂ' ಹಬ್ಬದಲ್ಲಿ ಪಾಲುಗೊಳ್ಳುವ ಚೆಂಡೆ ಮೇಳಗಳ ಪ್ರಮುಖರೆಂದರೆ 'ತಿರುವಂಬಾಡಿ'(ವಡಕ್ಕುನ್ನಾಥ) ಮತ್ತು 'ಪಾಱಮೇಕ್ಕಾವು' ದೇಗುಲಗಳ ಕಡೆಯವರು. ಪಾರಮೇಕ್ಕಾವು ದೇಗುಲದ ಆವರಣದ ಒಳಗಿಂದ ಹೊರಡುವ ಹಬ್ಬದ ಮೆರವಣಿಗೆ ಸುಮಾರು ಎರಡು ಗಂಟೆ ವೇಳೆಗೆ ರೆಂಜೆ ಕಟ್ಟೆಯ ಬಳಿಗೆ ತಲಪುವುದು. ಇದರ ಉದ್ದಕ್ಕೂ ಬಜಾವಣೆಗೊಳ್ಳುವುದು 'ಪಾಂಡಿಮೇಳ' ಆದರೆಅದು ಅಷ್ಟು ಶ್ರೇಷ್ಠವಲ್ಲ ಎಂಬ ಗ್ರಹಿಕೆಯಿಂದಲೆ ಇರಬೇಕು, ಮೊದಲು ಪೀಠಿಕೆಯಾಗಿ 'ಚೆಂಬಡ ಮೇಳಂ' ಬಾರಿಸಿ ಬಳಿಕವೆ 'ಪಾಂಡಿಮೇಳ' ಗೆ ದಾಟಿಕೊಳ್ಳುವುದು. 'ಕೋಲುಂವಲ್'ಎಂಬ ಹೆಸರಿನ ಆಮುಖವನ್ನು ಬಾರಿಸಿಯೆ ಪಾಂಡಿಮೇಳದ ಆರಂಭ. ಇದರಲ್ಲಿ ಚೆಂಡೆ, ಚಕ್ರತಾಳ, ಕೊಂಬು, ಕುಱುಂಕುಪಿಲ್ ಇವೆಲ್ಲವೂ ಇರುತ್ತವೆ. ಇವುಗಳ ಸಂಖ್ಯೆಗೆ ಒಂದು ಅನುಪಾತ ಕ್ರಮವಿದೆ-ಹದಿನೈದು ಚೆಂಡಗಳು ಮುಂದಿನ ಸಾಲಿನಲ್ಲಿ . ಇವರಿಗೆ 'ಉರುಟ್ಟು ಚೆಂಡಕ್ಕಾರ್' ಎಂದು ಹೆಸರು. ಆ ಸಾಲಿನ ಹಿಂದುಗಡೆ ಆ ಸಂಖೆಯ ಮೂರುಪಟ್ಟು ಮಂದಿ ಮೂರು ಸಾಲುಗಳಾಗಿ ತಾಳ ಕಾಯಿಸುವುದಕ್ಕಾಗಿ ಇರುತ್ತಾರೆ. ಅವುಗಳ ಎಡೆಗಳಲ್ಲಿ ಅಷ್ಟೇ ಸಂಖ್ಯೆಯ ಚಕ್ರತಾಳದವರು. ಇವರನ್ನು ಅಭಿಮುಖವಾಗಿ ನೀಡುತ್ತ ಬಾರಿಸುತ್ತಾರೆ ಎರಡು ಸಾಲುಗಳ್ಲಿ ನಿಲ್ಲುವ ಕುಱುಂಕುಪಿಲ್ ಮತ್ತು ಕೊಂಬಿನ ಕಲಾಕಾರರು. ಈ ದೊಡ್ಡದಾದ ಮೇಳದ ಸಮೂಹ ಜಾಗ ಗಟ್ಟಿ ಮಾಡಿಕೊಳ್ಳುವುದು ಸಾಲಾಗಿ ನಿಂತ ಹದಿಐದು ಆನೇಗಳ ಪರ್ವತಪಂಕ್ತಿಯ ಎದುರು ಹೀಗೆ ನೂರಕ್ಕೂ ಮಿಕ್ಕಿದ ಕಲಾವಿದರು ಒಂದು ಸೇರಿ

ಮೇಳಯಿಸುವ ಒಂದು ಬೃಹತ್ತಾದ 'ಆರ್ಕೆಸ್ಟ್ರಾ' ಬೇಸಗೆಯ ಉರಿಧಗೆಯ ಅಲೆಗಳು ಹರಡಿನಿಲ್ಲುವ 'ಪೂರಂ ಪಡಸಿ'(ತೆರವುಸ್ಥಳ)ನಲ್ಲಿ ಮೆಲ್ಲಮೆಲ್ಲನೆ ಬಾರಿಸಿ ಏರುವುದಾಗಿದೆ.

'ಕೋಲುಂಬಿನ' ಬೆಂಗಡೆಯಲ್ಲಿ ಬರುವುದು 'ಪಾಂಡಿಮೇಳ' ದ ಆರಂಭಿಕ ಘಟ್ಟವಾಗಿರುತ್ತದೆ. ಪಾಂಡಿಮೇಳ ರೂಪಗೊಂಡಿರುವುದು ಏಳು ಅಕ್ಷರಗಳ ಕಟ್ಟುಗಳು ಒಳಗೊಂಡ 'ಅಡಂದ' ತಾಳದಲ್ಲಿ ಏಳುಕ್ಷರ ಸಾಮಾನ್ಯ ಮಟ್ಟಿನಲ್ಲಿ ಇಚ್ಚರಿಸಿದರೆ ಅದು 'ಅಡಂದ' ತಾಳವಾಗುತ್ತದೆ. ಅದು ತುಂಬ ನಿಧಾನವಾದರೆ? ಸ್ವಲ್ಪ ವಿಲಂಬಿತವಾದ 'ಅಡಂದ' ಆಗುತ್ತದೆ. ಹಾಗೆ ಅದು ಹದಿನಾಲ್ಕು ಅಕ್ಷರ ಕಾಲವಿರುವ 'ವಿಲಂಬಿತವಾದ ಅಡಂದ' ಆಗುತ್ತದೆ. ಅದು ಇಮ್ಮಡಿಯಷ್ಟು ವಿಲಂಬಿತವಾಗಿ ಜಗ್ಗಿದರೆ ಇಪ್ಪತ್ತೆಂಟು ಅಕ್ಷರಗಳ ' 'ಅಡಂದ' ಆಗುತ್ತದೆ. ವಾಸ್ತವದಲ್ಲಿ ಪಾಂಡಿಮೇಳದ ಆರಂಭವಾಗುವಾಗ ತಾಳದ ಆವರ್ತನ ಇನ್ನೂ ಇಮ್ಮಡಿ ವಿಲಂಬವಾಗಿ ಐವತ್ತಾರು ಅಕ್ಷರಗಳ ಅಳತೆಯೊಂದಿಗೆ ಇರುತ್ತದೆ.ಅಂದರೆ ನಾಲ್ಕು ಕಾಲಗಳಲ್ಲಿ ಒಂದರಿಂದ ಒಂದು ದ್ವಿಗುಣಿತ ವೇಗದಲ್ಲಿ ಸಾಗುತ್ತದೆ. ಆರಂಭದಲ್ಲಿ ಮಂದಗತಿಯಲ್ಲೂ ನಿಧಾನವಾಗಿಯೂ ಕೊಲುಂಬಿ ಶುರುವಾಗುವ ಪಾಂಡಿಮೇಳ ಭಾರವನ್ನೂ ವೇಗವನ್ನೂ ಹೆಚ್ಚಿಸಿ ಬಿರುಸನ್ನೇರಿಸಿಕೊಳ್ಳುತ್ತದೆ. ಕೊನೆಯಲ್ಲಿ ಇನ್ನಷ್ಟು ಬಿಗಿತ ಅಸಂಭವ ಎಂಬ ನೆಲೆಗೆ ತಲಪಿದಾಗ ದೊಡ್ಡದಾದ ಶಕ್ತಿಯುತ ಆಸ್ಫೋಟನವಾಗಿ ಸಿಡಿಯುತ್ತದೆ. ರೆಂಜೆ ಕಟ್ಟೆ ಮೇಳದ ಈ ಆವೇಶವೇರಿಕೆಯ ಬಳಿಕ ಆನೆಗಳೂ ಮಢಳದವರೂ, ಪೂರಂ ಹಬ್ಬದ ಮುಂದಿನ ಚಡಂಗವಾದ ತೆಂಕಣ ಕಡೆಗೆ ಇಳಿತಕ್ಕೆ ಸಿದ್ಧರಾಗಿ ಪ್ರದಕ್ಷಿಣೆ ಸಿತ್ತಿನ ಮೂಲಕ ಸರಿಯುವರು.

ಪಾಂಡಿ ಮೇಳಕೂ 'ಪಂಜಾರಿ' ಮೊದಲಾದ ಇತರ ತಾಳಮೇಳಗಳಿಗೂ ನಡುವೆ ವ್ಯತ್ಯಾಸ ಇರುವಂತೆ, ಕಲವಾರು ಸಾಮಾನ್ಯ ಸಾಮ್ಯಾಗಳೂ ಇವೆ. ಎರಡೂ ಅತ್ಯಂತ ಮಂದಗತಿಗಳಲ್ಲಿ ಆರಂಭೀಸಿ, ಇಮ್ಮಡಿ, ಇಮ್ಮಡಿಗಳಾಗಿ ಆವರ್ತನಗೊಂಡು ತಾಳದ ಸುತ್ತುಗಳು ಹಂತಿಹಂತಿಯಾಗಿ ಬರುತ್ತವೆ; ಸಮಯ ಕಳೆಯುತ್ತಲೆ ತಾಳ ಸುತ್ತುಗಳ ದೀರ್ಘತೆ ಕಿರಿದುಗಲಳ್ಳುತ್ತ ಬರುತ್ತದೆ. ಒಂದೇ ಬಗೆ ಜಾತಿಗಳನ್ನು ಉದ್ದಕ್ಕೂ ಆವರ್ತಿಸಿ ಅದೇ ವೇಳೆ ಅವುಗಳ ವೇಗವನ್ನು ಹೆಚ್ಚಿಸುತ್ತ ಹೋಗುವುದು ಇದು. ಹಾಗೆ ನೋಡಿದರೆ ಆರ್ವನೆ ಎಂದೂ ಆರೋಹಣ ಎಂದೂ ಇರುವ ಎರಡು ಘಟಕಗಳು ಈ ಎಲ್ಲ ಮೇಳ ರೂಪಗಳಿಗೆ ಇವೆಯೆಂದು ವ್ಯಕ್ತವಾಗುತ್ತವೆ. ನಿರಾಳವಾದ ಒಂದು ತಲದಿಂದ ತಾಳಸುತ್ತುಗಳ ಮೇಲೆತಾಳ ಸುತ್ತುಗಳು ಬರಬರುತ್ತ ಒಬವಾದ ತಲಕ್ಕೆ ಕಾಲ ಏರುತ್ತ ವೇಗ ಸೇರಿಕೊಂಡು ಬರುವ 'ಜಾತಿ' ಗಳೂ ಹೀಗೆ ಮೇಳದ ವಾಸ್ತುಶಿಲ್ಪ ಪೂರ್ತಿಯಾಗುವುದು ನೀಟಕ್ಕೂ ಅಡ್ಡಕ್ಕೂ ಹೋಗುವ ಆವರ್ತನದ ಮತ್ತು ಆರೋಹಣದ ಪರಸ್ಪರ ವಿರುದ್ಧವಾದರೂ ಪರಸ್ಪರ ಪೂರಕವೂ ಆದ ಗತಿಗಳನ್ನು ಕಂಡು ನಿರ್ಮಿತವಾದ ಘಟಕಗಳೊಂದಿಗಾಗಿರುತ್ತದೆ. ಬಹಳ ವಿಶಾಲವಾದ ಒಂದು ಪಂಚಾಂಗದ ಮೇಲೆ ಆರಂಭಿಸಿ ಕ್ರಮೇಣ ಅದರ ಅಗಲ ಕಿರಿದಾಗುತ್ತ ಕೊನೆಗೆ ಮೊನಚಾದ ಸ್ತೂಪಿಕಾಗ್ರಕ್ಕೆ ತಲಪಿ ಸಮಾಪ್ತಿ ಕಾಣುವ ಒಂದು ದೊಡ್ಡ ಗೋಪುರದ ಛಾಯೆಯೂ ಈ ಮೇಳಕ್ಕೆ ಉಂಟೆಂದು ಹೇಳಬಹುದು. ಶಬ್ದದ ಒಂದು ದೊಡ್ಡ ಗೋಪುರ ಅದು. ಕಲ್ಲಲ್ಲೊ ಮಣ್ಣಿನಲ್ಲೂ ಕಟ್ಟಿದ ಭೀಮವಾದ ಗೋಪುರಗಳಲ್ಲೊಂದರಲ್ಲೂ ಶಬ್ದದ ಈ ಗೋಪುರಗಳನ್ನು ವಾತಾವರಣದಲ್ಲಿ ಎತ್ತರಿಸಿ ಕೊಂಡಿರುತ್ತಾನೆ.

ಗ್ರಾಮೀಣ ಸಂಗೀತ

ಟಿ.ವಿ.ಸುಕುಮಾರನ್

ಟಿಪ್ಪಣಿ

ಜಾನಪದ ಅಧ್ಯಯನದಲ್ಲಿ ಬಹಳವೇನೂ ಲಕ್ಷಿಸದೆಹೋದ ಒಂದು ವಿಭಾಗ ಗ್ರಾಮೀಣ ಸಂಗೀತ. ಲೋಕದಲ್ಲಿ ಅತಿಹೆಚ್ಚು ಸಂಗ್ರಹಕಾರ್ಯಗಳೂ ಅಧ್ಯಯನವೂ ನಡೆದಿರುವುದು ಗ್ರಾಮೀಣ ಪಾಟುಗಳಲ್ಲಿ ಬಾಯ್ದರೆ ಧಾರೆಯಾದ ಜಾನಪದ ಪಾಟುಗಳು ನೆಲೆಗೊಳ್ಳುವುದು ಅವುಗಳ ಸಂಗೀತದಲ್ಲಿ. ಒಂದು ಸಾಂಘಿಕತೆಯಲ್ಲಿ ಒಂದು 'ಪಾಟು'ನ್ನು ಮತೊಂದು 'ಪಾಟ'ನಿಂದ ಪ್ರತ್ಯೇಕಿಸುವುದು ವಸ್ತುವಿಗಿಂತ ಮಿಗಿಲಾಗಿ ಅದರ ನಾದ ವಿನ್ಯಾಸವೂ ತಾಳವೂ ಆಗಿದೆ. ಆದ್ದರಿಂದಲೆ, ಒಂದು ಹಾಡು ವ್ಯತ್ಯಸ್ತ ಗುಂಪುಗಳಲ್ಲಿ ಕಾಣಿಸಿಕೊಳ್ಳುವುದು. ತಿರುವರ್ಕಾಡು ಭಗವತಿಯ ಬಗೆಗಿರುವ ಒಂದು ಪಾಟು 'ಪೂರಕ್ಕಳಿ ಪಾಟು' ಆಗಿಯೂ 'ತೋಜ್ಜಂಪಾಟು' ಆಗಿಯೂ ಕಾಣಿಸಿಕೊಳ್ಳುವುದು ಅದನ್ನು ಹಾಡುವ ಸಂದರ್ಭದ ಜತೆಗೆ ಅದರ ಸಂಗೀತ ಕೂಡ ಬದಲುವ ಕಾರಣವಾಗಿದೆ. ಆದ್ದರಿಂದ, ಸಂಗೀತವನ್ನು ಪರಿಗಣಿಸದೆ ಗ್ರಾಮೀಣ ಪಾಟುಗಳ ಕುರಿತ ಅಧ್ಯಯನ ಅಪೂರ್ಣವಾಗಿದೆ. ಗ್ರಾಮೀಣ ಪಾಟು ಸಾಲುಗಳೂ, ತಾಳಗಳೂ ಒಂದೊಂದು ಸಾಂಘಿಕತೆಯಲ್ಲೂ ಆಶಯ ಪ್ರೇಷಣೆಗೆ ಇರುವ ಉಪಾಧಿ ಕೂಡ

ಆಗಿವೆ. ಆದ್ದರಿಂದಲೆ ವ್ಯತ್ಯಸ್ತ ಜೀವನ ಸಂದರ್ಬಗಳಲ್ಲಿ ವಿಭಿನ್ನ ಧಾಟಿಯಲ್ಲೂ ತಾಳದಲ್ಲೂ ಹಾಡುವುದು. ಆದ್ದರಿಂದ ಗ್ರಾಮೀಣ ಸಂಗೀತದ ಬಗೆಗೆ ನಡೆಯುವ ಯಾವ ಅಧ್ಯಯನವೂ ಪ್ರಸ್ತುತ ಸಮೂಕಿವನ್ನು ವ್ಯಾಖ್ಯಾನಿಸುವ ಅಧ್ಯಯನವಾಗಬೇಕು.

ಕೇರಳಕ್ಕೆ ತನ್ನದೇ ಆದ ಗ್ರಾಮೀಣ ಸಂಗೀತ ಪರಂಪರೆ ಇದೆ. ಈ ಪರಂಒರೆಯನ್ನು ಹತ್ತಿರದಿಂದ ತಿಳಿಯಲು ಗಂಭೀರವಾದ ಶ್ರಮಗಳು ನಡೆದಿಲ್ಲ. ಕೆಲವರೆಲ್ಲ ಶ್ರಮಿಸಿರುವುದು ಕರ್ನಾಟಕ ಸಂಗೀತದ ದೊಡ್ಡಿಯಲ್ಲಿ ಇದನ್ನೊಯ್ದು ಕಟ್ಟುವುದಕ್ಕೆ. ಗ್ರಾಮೀಣ ಸಂಗೀತ ಪಾರಂಪರ್ಯವೂ ಕರ್ನಾಟಕ ಸಂಗೀತ ಪಾರಂಪರ್ಯವೂ, ಅದೇ ರೀತಿಯಲ್ಲಿರುವ ಇತರ ಪರಂಪರೆಗಳೂ ಒಂದನ್ನು ಇನ್ನೂಂದರ ಮೇಲಿಟ್ಟು ಅಳೆಯಲು ಇರುವವುಗಳಲ್ಲ. ಒಂದೊಂದಕ್ಕೂ ತನದೇ ಆದ ಜೀವನ ಸಾಹಚರ್ಯಗಳ ಅನಿವಾರ್ತತೆ ಎಂಬ ನೆಲೆಯಲ್ಲಿ ಆಗಿರುವಂಥದೆಂದು ಅರ್ಥಮಾಡಿಕೊಳ್ಳಬೇಕಾಗಿದೆ.

ಗ್ರಾಮೀಣ ಸಂಗೀತದ ಕುರಿತಾಗಿ ಗಂಭೀರ ಅಧ್ಯಯನ ನಡಯದಿರುವುದರ ಮುಖ್ಯಕಾರಣ ಅದನ್ನು ಸಂಗ್ರಹಿಸುವುದರಲ್ಲಿರುವ ತೊಡಕುಗಳಾಗಿವೆ. ಅದನ್ನು ದಾಖಲಿಸುವುದು, ಅದರೊಂದಿಗೆ ಅದರ ಸಂದರ್ಭವನ್ನು ದಾಖಲಿಸುವುದು, ಜೀವನ ಹಿನ್ನೆಲೆಯಲ್ಲಿ ಅದಕ್ಕೆ ಮೌಲ್ಯಮಾಪನ ಮಾಡುವುದು ಆವಶ್ಯಕವಾಗಿವೆ. ಇತರ ಜಾನಪದ ರೂಪಗಳಿಂದ ವ್ಯತ್ಯಸ್ತವಾಗಿ ಗ್ರಾಮೀಣ ಸಂಗೀತ ಶ್ರೋತೃನಿಷ್ಠವೆಂಬುದರಿಂದ ಸಂಗ್ರಹದಿಂದಹಿಡಿದು ವಿಶ್ಲೇಷಣೆವರೆಗಿರುವ ಸಂಶೋಧನ ಕಾರ್ಯಗಳೆಲ್ಲ ಪ್ರಯಾಸಕರವಾಗಿವೆ. ನಮ್ಮ ನಾಡಿನ ಜಾನಪದ ರಂಗದಲ್ಲಿರುವ ಕೆಲಸಗಳು ನಡೆದಿರುವುದು ಮುಖ್ಯವಾಗಿಯೂ ವ್ಯಕ್ತಿಗಳು. ಅವರಿಗೆ ಮೇಲೆ ಸೂಚಿಸಿದ ರೀತಿಯಲ್ಲಿ ಸಂಶೋಧನೆ ಕೈಗೊಳ್ಳಲು ಬೇಕಾದ ತಾಂತ್ರಿಕ ತಿಳಿವಳಿಕೆಯೊ, ಸಾಹಚರ್ಯಗಳೊ ದೊರೆತರಲಿಲ್ಲ. ಹೊಸ ಸಾಹಚರ್ಯದಲ್ಲಿ ಗ್ರಾಮೀಣ ಸಂಗೀತ ರಂದಲ್ಲಿ ಅಧ್ಯಯನ ಕಾರ್ಯಗಳು ನಡೆಯುವವೆಂದು ನಿರೀಕ್ಷಿಸಬಹುದು.

– **ಸಂಪಾದಕ**

ಎಷ್ಟೋ ಹಾಡುಗಳು

'ಅರಿಪ್ಪೋ ತಿರಿಪ್ಪೋ' ಅಂಥ ಮಕ್ಕಳ ಪಾಟು, ಮಿಸ್ಲಿಮರ 'ಅಲಾಮಿಕ್ಕಳಿ ಪಾಟು', ಅರ್ಜುನ ನೃತ್ತದಲ್ಲಿನ 'ಕವಿತ್ತಂ', 'ಆದಿಪುರಾಣಂ', 'ಮಂತ್ರವಾದ ಪಾಟು', ಪೊನ್ನಿಐತ್ತಾಳ್ ಕಥ', 'ತಿರಿಯುಜಿಚ್ಚಲ್ (ನಿವಾಳಿಕೆ)ಪಾಟು', 'ಉಯ್ಯಾಲೆ ಪಾಟು', 'ಕೈಕೊಟ್ಟಿ(ಚಪ್ಪಾಳೆ)ಕ್ಕಳಿ ಪಾಟು', 'ಐವರ್ ಕಳಿ ಪಾಟು', 'ಒಪ್ಪನ ಪಾಟು', 'ಓಣಕ್ಕಳಿ ಪಾಟು', 'ವಡಕ್ಕನ್ ಪಾಟು', 'ತೆಯ್ಯತ್ತೋಙ್ಙಂ', ಕಣ್ಣೇಋ ಪಾಟು', 'ತಪ್ಪಾಣಿ ಪಾಟು', 'ಪೂರಕ್ಕಳಿ ಪಾಟು', 'ಕೋಲ್ ಕ್ಕಳಿ ಪಾಟು', 'ಮಂಗಲ ಪಾಟು', 'ಕ್ರೈಸ್ತರ ಮೈಲಾಂಜಿ(ಮದರಂಗಿ)ಪಾಟು' ಗಹೀಗೆ ಕೇರಳದಲ್ಲಿ ಎಷ್ಟಪ ಬಗೆ ಗ್ರಾಮೀಣ ಹಾಡುಗಳು ಇವೆ. ಕೆಲವು ಬಗೆಗಳಲ್ಲಿರುವ ಕವಲಗಳಿಗೆ ಲೆಕ್ಕವಿಲ್ಲ.

ನಾಡಿನ ಅಂತರಾತ್ಮನಾದಗಳು

ಗ್ರಾಮೀಣ ಹಾಡುಗಳಿಗಿರುವ ಅಸಾಮಾನ್ಯವಾದ ಸ್ಥಾನವನ್ನು ಗೊತ್ತು ಹಚ್ಚಿದವರಲ್ಲಿ ಮೊದಲಿಗರು ಜರ್ಮನಿಯ ಯೋನಾನ್ ಗಾಟ್ ಫ್ರೆಡ್ ಹೆರ್ಡರ್(೧೭೪೪–೧೮೦೩). ಹಲವೆಡೆಯ ಗ್ರಾಮೀಣ

ಕಥಾಗಾನಗಳನ್ನೂ, ಹಾಡುಗಳನ್ನೂ ಸಂಗ್ರಹಿಸುವುದರಲ್ಲೂ, ಅನುವಾಇಸುವುದರರಲ್ಲೂ, ಪ್ರಕಟಿಸುವುದರಲ್ಲೂ ಅವರು ನಿರತರಾಗಿದ್ದರು. 'ನಾಡಿನ ಹಾಡುಗಳು' ಆ ಆ ನಾಡಿನ ಅಂತರಾತ್ಮನನಾದಗಳಾಗಿವೆ' ಎಂದು ಹೇಳಿದುದು ಅವರೇ. ಹೆರ್ಡರ್ ಸಂಗ್ರಹವನ್ನು ತೊಡಗಿದಾಗ ಇಂಗ್ಲಂಡಿನಲ್ಲೂ ಆ ಕೇಲಸ ತೊಡಗಿತ್ತು. ಮುಂದೆ ವಿಶ್ವದ ಹಲವು ಭಾಗಗಳಲ್ಲಿ ಗ್ರಾಮೀಣ ಹಾಡುಗಳನ್ನು ಸಂಗ್ರಹಿಸಿದರು. ಅದು ಈಗಲೂ ಮುಂದುವರಿಯುತ್ತಿದೆ. ಕಳೆದ ಶತಮಾನದ ಪರ್ಸಿ ಮೆಕ್ವನ್ ಕೂಡ ವಡಕ್ಕನ್ ಪಾಟು ಸಂಗ್ರಹಿಸಿದರು. ಡಾ. ಚೇಲನಾಟ್ಟ್ ಅಚ್ಯುತ ವಿಶ್ವಂಭರನ್, ಚಿಱಕ್ಕಲ್ ಟಿ. ಬಾಲಕೃಷ್ಣನ್ ನಾಯರ್, ಎಂ.ವಿ..ವಿಷ್ಣು ನಂಬೂತಿರಿ ಇವರೆಲ್ಲ ಸಂಗ್ರಹಿಸಿದ ಹಲವು ಬಗೆ ಹಾಡುಗಳಿಗೆ ಲೆಕ್ಕವಿಲ್ಲ.

ನಾಡ ಸಂಗೀತದ ಮೇಲೆ ಗಮನ

ಆದರೆ ಒಂದುಂಟು. ಇವರೆಲ್ಲ ಹಾಡು ಗೊತ್ತಿದ್ದವರಿಂದ ಸಂಪಾದಿಸಿರುವುದು ಹಾಡಿನ ಸಾಹಿತ್ಯಾಂಶವನ್ನಾಗಿತ್ತು. ಆದರೆ ಗ್ರಾಮೀಣ ಹಾಡುಗಳ ಸಂಗೀತಾಂಶವೂ ಪ್ರಧಾನವಲ್ಲವೆ? (ಪ್ರೊ| ಗುಪ್ತನ್ ನಾಯರ್ ಹಿಂದೆ ಕೆಲವನ್ನು ಸ್ವರ ಹಾಕಿ ಕೊಟ್ಟಿದ್ದರು ಎಂಬುದನ್ನು ಮರೆಯುವುದಿಲ್ಲ). ಪಶ್ಚಿಮದವರು ಈ ವಿಷಯವನ್ನು ಆಗಲೆ ಅರ್ಥಮಾಡಿಕೊಂಡಿದ್ದರು. ಪೋಲಂಡಿನಲ್ಲಿ ೧೩ನೆ ಶತಮಾನದಲ್ಲೆ ಗ್ರಾಮೀಣ ಸಂಗೀತದ ಸ್ವರ ಲೇಖನವನ್ನು ಪ್ರಕಟಿಸಿದ್ದರು. ಹದಿನೈದನೆ ಶತಮಾನದಲ್ಲಿ ಜರ್ಮನಿಯಲ್ಲೂ ಈ ನಿಟ್ಟಿನಲ್ಲಿ ಕೆಲ ಪ್ರಯತ್ನಗಳಾದವು. ಸ್ಕಾಟಿಷ್ ಮಧ್ಯದಲ್ಲಿ ದೇಶಿಯ ಪ್ರಸ್ಥಾನಗಳು ಉದಿಸುವುದರೊಂದಿಗೆ ಪಶ್ಚಿನದಲ್ಲಿ ಎಲ್ಲೆಲ್ಲೂ ಗ್ರಾಮೀಣ ಹಾಡುಗಳಿಗೆ ಹೊಸ ಜೀವನ ಬಂತು. ಅದರೋಮದಿಗೆ ಗ್ರಾಮೀಣ ಸಂಗೀತ ಸ್ವರ ಹಾಕಿ ಕಾಪಿಟ್ಟುಕೊಳ್ಳುವುದರಲ್ಲಿ ಒಂದು ಇಬ್ಬರವೆ ಕಾಣಿಸಿಕೊಂಡಿತು.

ಅಭಿಲೇಖನದ ಪ್ರಾಧಾನ್ಯ

ಈ ಪ್ರಯತ್ನಗಳಿಗೆಲ್ಲ ಕೊರತೆ ಕಾಣಿಸಿದ್ದೂ ನಿಜವೇ. ಸ್ವರಹಾಕುವಾಗ ಪಂಡಿತರು ಕಲಾಪರತೆಯಲ್ಲಿ ನೆಟ್ಟುಕೊಂಡರು. ಕಲಾ ಸಂಗೀತದ ರಾಗನಿಷ್ಠೆ ಮನಸ್ಸಿನಲ್ಲಿರಿಸಿ ಅವರು ಹಾಡಿನ ಧಾಟಿಯಲ್ಲಿ ತಿದ್ದುಪಾಡು ತಂದರು. ಹೀಗೆ ಮಾಡಿದುದು ತಪ್ಪಾಗಿತ್ತು ಎಂದು ಇಂದಿನ ಗ್ರಾಮೀಣ ಸಂಗೀತ ಶಾಸ್ತ್ರಜ್ಞರಿಗೆ ಚೆನ್ನಾಗಿ ತಿಳಿದಿದೆ. ಈಗ ಪ್ರಚಾರದಲ್ಲಿರುವ 'ಅಭಿಲೇಖನ ವಿದ್ಯೆ'ಯನ್ನು ಬಳಸಿಕೊಂಡು ಪ್ರಸ್ತುತಿಯನ್ನು ಬಳ್ಳಿಚುಕ್ಕಿಯೂ ತಪ್ಪದೆ ನಕಲು ತೆಗೆಯುವುದರಲದಲಿ ಧ್ಯಾನವಿಟ್ಟರು.

ಸಿಲಿಂಡರ್ ಫೋನೋಗ್ರಾಫ್ ೧೮೭೭ರಲ್ಲಿ ಆವಿಷ್ಕಾರ ಕಂಡಿತು. ಡಿಸ್ಕ್ ಫೋನೋಗಾಫ್ ಅನ್ನು ೧೮೯೦ರಲ್ಲಿ ಕಂಡುಹಿಡಿದರು. ಬೇಲಾ ವಿಕಾರ್ ಎಂಬ ಹಂಗೇರಿಯನ್ ಸಂಗೀತತ ಶಾಸ್ತ್ರಜ್ಞ ೧೮೯೨ರಲ್ಲಿ ಮೊದಲಾಗಿ ಸಿಲಿಂಡರ್ ಫೋನೋಗ್ರಾಫ್ ಉಪಯೋಗಿಸಿ ಗ್ರಾಮೀಣ ಹಾಡುಗಳ 'ಅಭಿಲೇಖನ' ನಡೆಸಿದರು. ಆ ಬಳಿಕ ಸಿಸಿಲ್ ಶಾರ್ಪ(cicil sharp) ಇಂಗ್ಲಿಷ್ ಗ್ರಾಮೀಣ ಸಂಗೀತವನ್ನು ವಿಸ್ತರಿಸಿ ಅಭಿಲೇಖಿಸಿಕೊಂಡರು. ಈಗ ಗ್ರಾಮೀಣ ಸಂಗೀತ ಸಂಗ್ರಹದ ರೀತಿ ಹೀಗೆಯೆ.

ಸಂಗ್ರಹಣೆಯ ಶಾಸ್ತ್ರೀಯ ವಿಧಾನ

ಮೊದಲಾಗಿ ಮಾಹಿತಿದಾರ (informant)ಹಾಡುಗಾರನ ಹಿನ್ನೆಲೆಯನ್ನು ದಾಟಿಸಿಕೊಡುತ್ತಾನೆ. ಅಂದರೆ ಆತ ಹೇಗೆ ಹಾಡುಗಳನ್ನು ಕಲಿತರು, ಪ್ರಾವೀಣ್ಯ ಪಡೆದರು, ಸಮೂಹದಲ್ಲಿ ಆತನ ಹಾಡು ನಿರ್ವಹಿಸುವ ಧರ್ಮಯಾವುದು ಇತ್ಯಾದಿ ಸಂಗತಿಗಳನ್ನು ಅವರನ್ನು ಕಂಡ ಹೇಳಿಸಿ ಅವುಗಳ ದಾಖಲಾತಿ ನಡೆಯುತ್ತದೆ. ಕೆಲವೆಡೆ ವಿಚಿತ್ರ ಸ್ವರ ಬಂತು ಎಂದು ಗೊತ್ತಾದೀತು. ಆಗ ಅದಕ್ಕೆ ಹೊಸ ಸಕೇತವಿತ್ತು ದಾಖಲಿಸಬೇಕು.

ವಂಶೀಯ ಸಂಗೀತ(Ethn–Music) ಅಧ್ಯಯನವನ್ನು ಕೂಡ ಈ ದಾರಿಯಾಗಿ ಅಭಿಲೇಖವೂ ಸ್ವರಹಾಕುವುದೂ ಕೈಗೂಡಿಸಾಗಿ ಬರತ್ತಿದೆ. ಈಗ ಕಂಪ್ಯಟರಿನ ಸಹಾಯವೂ ಕಡಿಮೆಯೇನಲ್ಲ.

ಗ್ರಾಮೀಣ ಸಂಗೀತದ ವೈಶಿಷ್ಟ್ಯಗಳು

ಗ್ರಾಮೀಣ ಸಂಗೀತವನ್ನು ಕಿವಿಯಿಂದ ಕಿವಿಗೆ ದಾಟಬರುವ ಸಂಗೀತವೆ ಗ್ರಾಮೀಣ ಸಂಗೀತ. ಅದರಲ್ಲಿ ಉಪಕರಣ ಸಂಗೀತವೂ ಸೇರುತ್ತದೆ(ಉದಾ ಹರಣೆಗೆ ಪುಳ್ಳುವ ವೀಣೆ). ಆದ್ದರಿಂದ ಗ್ರಾಮೀಣ ಸಂಗೀತವು ಗ್ರಾಮೀಣ ಸಾಹಿತ್ಯದಂತೆ ವಕ್ತೃನಿಷ್ಠ(aural)ಅಲ್ಲ, ಶ್ರೋತೃನಿಷ್ಠ(aural). ನೆನಪಿನಿಂದ ಹೊರತೆಗೆದು ಇದನ್ನು ಪ್ರಸ್ತುತಪಡಿಸಲಾಗುತ್ತದೆ. ಲಿಖಿತಪಠ್ಯ ಇದಕ್ಕೆ ಆಧಾರವಾಗಲಾರದು ಒಂದು ನಿರಕ್ಷರಿಗಳಾಗಿದ್ದಾಗ ಪ್ರಯೋಗದಲ್ಲಿ ಇದ್ದುದರಿಂದಲೆ ಲಿಖಿತ ಪಠ್ಯವೂ ಸ್ವರಲೇಖನವೂ(Musical acoring) ಇಲ್ಲದಿರುವುದು. ಒಂದು ಪ್ರಾದೇಶಿಕ ಸಮೂಹದ ಉಪಸಂಸ್ಕ್ರತಿಯ (Sub–culture) ಸಂಪತ್ತಿಯೇ (ಸಾಂಘೀಕತೆಯೂ) ಒಂದೊಂದು ಉಪಸಂಸ್ಕ್ರತಿಯೂ ಯಾವ ಹಾಡುಗಳ ಸಂಚಯವೂ ಆಗಿದೆ. ಆಗ ಒಂದೊಂದು ಉಪಸಂಸ್ಕ್ರತಿಯೂ ಹಾಡುಗಳ ಪ್ರಸ್ತುತಿಯ ತನ್ನ ತನವನ್ನು ಸಂರಕ್ಷಿಸಿಕೊಂಡಿರುತ್ತದೆ. ಅದೇ ಹಾಡುಗಳನ್ನು ಇನ್ನೊಂದು ಸಾಂಘಿಕತೆ ಪ್ರಸ್ತುತಪಡಿಸುವಾಗ? ಆಗ ಪ್ರಸ್ತುತಿಯ ಸ್ವಂತಿಕೆ ಬೇರೆಯೆ ಆಗಿರುತ್ತದೆ. ಈ 'ತನಿಮೆ' ಭಾಷಾ ಶಾಸ್ತ್ರದ ದೃಶ್ಯಭೇದ(ಡಯಲಕ್ಟ್)ಗೆ ಬದಲಿಯಾಗಿದೆ. ಇದೇ ಗ್ರಾಮೀಣ ಸಂಗೀತಕ್ಕೆ ಬರುವಾಗಿ ಶಾಸ್ತ್ರೀಯವಾಗಿ ಇದನ್ನು 'ವ್ಯತಿರೇಕ'(Variant) ಎಂದು ಕರೆಯುತ್ತಾರೆ. ಸರಿಯಾದ ಜಾನಪದ ಸಂಗೀತವೇ? ಹೌದಾದರೆ ಅದು ಕಾಲಕಳೆಯುತ್ತಿರುವಂತೆ ಅಲ್ಪಸ್ವಲ್ಪ ನದಲಾವಣೆಗೆ ಸಿಲುಕಿಕೊಂಡಿತು ಎಂದಾಗಬಹುದು. ಸಾಲದ್ದಕ್ಕೆ ಹಾಡುವವರು ಕೆಲ ಮನೋಧರ್ಮವನ್ನು ಸೇರಿಸಿಕೊಳ್ಳಲೂ ಬಹುದು. ಮನೋಧರ್ಮ ಗ್ರಾಮೀಣ ಸಂಗೀತ ಶಾಸ್ತ್ರಜ್ಞರ ಪರಿಗಣನೆಗೆ ವಿಷಯವಲ್ಲ. ಗ್ರಾಮೀಣ ಸಂಗೀತದ ಸಾಮೂಹಿಕ ಧರ್ಮ ಕಲಾಸಂಗೀತದ್ದೂ ಕೂಡ ಆಗಿದೆ. ಹಿಟ್ಟಿದಾಗಲೂ ತೆಗೆದುಕೊಂಡು ಅಳುವುದೂ ಪ್ರಚಾರದಲ್ಲಿತ್ತು. (ಈ ಬಗೆ ಹಾಡುಗಳೇ dirges). ಜೋಗುಳ ಹಾಡುಗಳು ಎಲ್ಲ ಕಡೆಗಳಲ್ಲೂ ಕಾಣಿಸುತ್ತವೆ. ಫ್ರೆಂಚ್ ಹಾಡುಗಳಿವೆ. ಮಕ್ಕಳು ಬೆಂಬಲಕ್ಕಿರುತ್ತದೆ. ವಡಕ್ಕನ್ ಪಾಟುಗಳು ನಟ್ಟಿಹಾಡುಗಳೂ, ಹಿಟ್ಟುಕಡೆಯುವ ಹಾಡುಗಳೂ ಆಗಿ ಇವತಿಗೂ ಇವೆ.

ಕೇರಳದ ಗ್ರಾಮೀಣ ಸಂಗೀತ

ಆಗಲಿ, ನಾವೀಗ ಕೇರಳದ ಗ್ರಾಮೀಣ ಸಂಗೀತದ ಬಗೆಗೆ ಒಂದಿಷ್ಟು ಆಲೋಚಿಸುವ. ಡಿಸೆಂಬರ್ ಮಧ್ಯದಿಂದ ನಾಲ್ಕೈದು ತಿಂಗಳು ಉತ್ತರ ಕೇರಳದಲ್ಲಿ ತೆಯ್ಯಂ ಶ್ರಾಯವಾಗಿದೆ. ಕೊಪಾಳನ್ನಿಂದ ತೊಡಗಿ ಪೆರುವಣ್ಣಾನ್ ನೂರುಗಟ್ಟಲೆ ತೆಯ್ಯಂಗಳಿವೆ. ತುಳುವೋ, ಮಲಯಾಳವೋ ಆಗಿವೆ ಅವುಗಳು ಒಮ್ಮೆ ಕೇಳಿನೋಡಬೇಕಾದದ್ದು. ಒಂದೊಂದು ತೋಱ್ಱಂದ್ದೂ ಪ್ರಸ್ತುತಿ, ಅದು ಸಂಬಂಧಿಸಿದ ತೆಯ್ಯಂನ ವ್ಯಕ್ತಿತ್ವಕ್ಕೆ ಸೇರಿದ್ದಾಗಿರುತ್ತದೆ. 'ಗುಳಿಕನ್' ತೋರಱ್ಱಂ ಪಾಟಿನ ಧಾಟಿಯಲ್ಲ 'ಮುಚ್ಚಿಲೋಟ್ಟು ಭಗವತಿ'ಯ 'ತೋಱ್ಱಂ'ನದು. ಮೊದಲಿನದಕ್ಕೆ ರಾಜಸ ಅಂಶ ಸೇರುವುದಾದರೆ ಎರಡನೆಯದಕ್ಕೆ ಸಾತ್ವಿಕಾಂಶ ಸೇರುತ್ತದೆ. 'ಮೂಕ್ಕಪ್ಪೋದಿ'ಯ ತೋಱ್ಱಂ ಶೋಕಭಾವ ಪ್ರಧಾನವಾದದು. ಸಾವಿರಗಟ್ಟಲೆ ಮಹಿಳೆಯರು ಆರೇಳುಗಂಟೆಗಳ ಕಾಲ ಅದನ್ನು ಕೇಳುತ್ತ ಆವೇಶಗೊಳ್ಳುವರು. ತೆಯ್ಯಂ ತೋಱ್ಱಂಗಳು ಅನುಷ್ಠಾನಪರವಾದುದು. ಅನುಷ್ಠಾನೇತರವಾದ ಪಾಟುಗಳು? ಅವು ಈ ಕೇರಳದ ತೀರದಲ್ಲಿ ಸಮುದ್ರದಂತೆ ತೆರೆಹೊಡೆಯುತ್ತದೆ.

ಸೋಪಾನ ಸಂಗೀತ

ಅನೇಕ ಪಂಡಿತರು ಕೇರಳಕ್ಕೊಂದು ಸ್ವಂತ ಸಂಗೀತ ಇದೆಯೆಂದೂ ಅದು ಸೋಪಾನ ಸಂಗೀತವಾಗಿದೆ ಎಂದೂ ಹೇಳುವುದುಂಟು. ಇದು ವಿಶ್ಲೇಷಣೆಗೊಳಪಟ್ಟರೆ ಎಷ್ಟರ ಮಟ್ಟಿಗೆ ಸರಿಯೆನಿಸೀತು?

'ಸೋಪಾನ ಸಂಗೀತಂ' ಎಂದರೆ ದೇಗುಲದ ಸೋಪಾನದ ಬಳಿ ಆಲಾಪನೆಗೊಳ್ಳುವ ಸಂಗೀತ. ಸೋಪಾನವೆಂದರೆ ದೇಗುಲದ ಗರ್ಭಗುಡಿಯ ಮೆಟ್ಟಲು. 'ಕ್ಷೇತ್ರನಡೆ'ಯಲ್ಲಿ' ಭಕ್ತರು ದೇವನಿಗೆ ಸುಪ್ರಭಾತ ಹೇಳುವಾಗಲೊ ದೇವನಿಗೆ ವಾದ್ಯಪಾಟುಗಳ ಸೇವೆ ನೀಡುವಾಗಲೊ 'ಸೋಪಾನ ಪಾಟು' ಗಳನ್ನು ಆಲಪಿಸುತ್ತಾರೆ. ಆದರೆ ಕೇರಳದ ಎಷ್ಟು ದೇವಾಲಗಳು ಮಾತ್ರವೇ ಈ ಪರಶುರಾಮಕ್ಷೇತ್ರದಲ್ಲಿ ಇರುವುದೆ? ಲೆಕ್ಕವಿಲ್ಲದಷ್ಟು 'ಕಾವು'ಗಳೂ 'ಕೋಟ್ಟಂ'ಗಳನ್ನು ಲೆಕ್ಕದಲ್ಲಿ ಹೊರತಳ್ಳುವಷ್ಟು ಮತನಿರಪೇಕ್ಷವಾದ ಗಾನಗಳೂ ನಮ್ಮಲ್ಲಿವೆ. ವಡಕ್ಕನ್ ಪಾಟುಗಳು ಈ ವರ್ಗಕ್ಕೆ ಸೇರುತ್ತವೆ. ಅವುಗಳದೆಲ್ಲ ಸ್ವಕೀಯ ಪ್ರಸ್ತುತಿರೀತಿ ಅವಗಣಿತವಾಗುವುದು ಹೇಗೆ?

ಇಲ್ಲಿ ಗ್ರಹಿಸಲು ಇರುವುದು ಇದು– ಕೇರಳದ ದೇವಾಲಯಗಳು ತ್ರೈವರ್ಣಿಕರದು. ಬ್ರಾಹ್ಮಣ, ಅಂಬಲವಾಸಿ, ನಾಯರ್ ಎಂಬವರ ಪರಿಪಾಲನೆಯಲ್ಲಿ ಇರುವಂಥದು. ತ್ರೈವರ್ಣಿಕರ ಕಡೆಯಿಂದ 'ಮಣಿಪ್ರವಾಳ' ಎಂಬ ಒಂದು ಸಾಹಿತ್ಯರೂಪ ಉಂಟಾಗಿದೆಯಲ್ಲವೆ? ಅದೇ ರೀತಿ ಸಂಗೀತ ವಿಭಾಗದಲ್ಲಿ ಕಾಣಿಸಿಕೊಂಡುದ್ದು ಅವರದ್ದಾದ 'ಸೋಪಾನ ಸಂಗೀತಂ'. ಕರ್ಣಾಟಕ ಸಂಗೀತದೊಂದ ಭಿನ್ನವಾಗಿ ಏನಲ್ಲ ವೈಶಿಷ್ಟ್ಯಗಳು ಸೋಪಾನ ಸಂಗೀತ ಸೋಪಾನ ಸಂಗೀತದ ಮಟ್ಟುಗಳಲ್ಲಿ ಇರವುದಷ್ಟೆ? ಅವುಗಳಲ್ಲಿ ಹಾಡುವ ಕೆಲ ಪದಗಳು ಕರ್ಣಾಟಕ ಸಂಗೀತವನ್ನು ಥಟ್ಟನೆ ಹಿಂಬಾಲಿಸಿ ಅಲ್ಲ. ಶುದ್ಧ ಕಲಾವಾದಿಗಳು ಇದರಲ್ಲಿ ಕೈಹಾಕದಿರಬೇಕು. ಎಂಬಲ್ಲೇ ಕೃಷ್ಣನ್ ಕುಟ್ಟಿ ಪೊದುವಾಳ್ ಗಟ್ಟಿಯಾಗಿ ನಿಂತುದು. ('ಮೇಳಪ್ಪದಂ'ನೋಡಿರಿ) ಹೈದರಾಲಿಯ(ಕಥಕಳಿ ಭಾಗವತರಾಗಿದ್ದರು) ಮತವೂ ಬೇರೆ ಅಲ್ಲ ಎಂದೂ ತಿಳಿಯಲಾಗಿದೆ. ವಿಶದವಾದ ಒಂದು ಅಭಿಲೇಖನ ಪ್ರಸ್ಥಾನವೆ ನಮ್ಮ ಗ್ರಾಮೀಣ ಸಂಗೀತದಲ್ಲಿ ನಡೆಯಬೇಕು. ಆವಾಗ? ಸೋಪಾನ ಸಂಗೀತದ ಪರಿಮಿತಿಯೂ ಯಥರ್ಥವಾದ ಬೆಲೆಯೂ ಸ್ಫುಟವಾಗುತ್ತದೆ.

ತಾಳವಾದಯ ಸಂಗೀತ

ಗ್ರಾಮೀಣ ಸಂಗೀತದ ಬಗೆಗೆ ಮಾತ್ರವಲ್ಲ, ಸಂಗೀತದ ಬಗೆಗೆ ಸಾಮಾನ್ಯವಾಗಿ ಮಾತನಾಡುವಾಗಲೂ ಪಶ್ಚಿಮದಲ್ಲಿರುವವರ ರೂಢಿಯನ್ನು ಇಲ್ಲಿ ತಂದುನಿಲ್ಲಿಸಲಾಗುತ್ತದೆ. ತಾಳವಾದ್ಯ ಸಂಗೀತದ ಬಗೆಗೆ ಅವರು ಮಾತೇ ಆಡುವುದಿಲ್ಲ. ವಿಜ್ಞಾನ(Science) ಇದಕ್ಕೆ ಸಹಾಯಕವೂ ಆಗಿದೆ. ಮನುಷ್ಯನಾದ ಶಾಸ್ತ್ರಕ್ಕೂ ಸುವಿರತತಂತು ವಾದ್ಯಗಳ ನಾದಕ್ಕೂ ಆಪೇಕ್ಷಿಕತೆ(Sound Perspective) ಇರುವಾಗ, ಅರ್ಥಾತ್ ಈ ನಾದಗಳು ಅನುಮಂದ್ರ,ಮಧ್ಯ, ತಾರ, ಅತಿತಾರ ಎಂಬ ಈ ಸ್ಥಾಯಿಗಳಲ್ಲಿ ಸಂಚರಿಸುತ್ತವೆ. ತಾಳವಾದ್ಯಗಳ ನಾದಕ್ಕೆ ಅದಿಲ್ಲ ಎಂಬುದೇ ಇದಕ್ಕೆ ಕಾರಣ. ಆದರೆ ಸಂಗೀತ ಚರಿತೆ ಹೇಹುವಾಗ ಪಶ್ಚಿಮದಲ್ಲಿರುವವರು ತಾಳವಾದ್ಯದಿಂದಲೆ ಆರಂಭಿಸುವುದು. ನಿಜಕ್ಕು ವಿರೋಧಾಭಾಸವೇ. ಆಗ ನಾವು ತಾಳವಾದ್ಯಗಳ ಬಗೆಗೆ ಕೆಲವಂಶಗಳನ್ನು ಹೇಳಬಹುದು.

ಮೃದಂಗ, ತವಿಲು, ತಬಲ ಮೊದಲಾದುವನ್ನೂ ಟ್ರಿಪ್ಪಲ್ ಡ್ರಂ, ಜಾಸಸ ಮೊದಲ ದೇಶೀ ವಾಅ ಹೊರಗಿಟ್ಟರು ಮಗೆ ಘನವಾದಯ ಸಂಪತ್ತು ಇದೆ. ತುಡಿ(ದುಡಿ), ತಪ್ಪ್(ದಪ್ಪು), ಅಜಿಬನ, ಇಲತ್ತಾಳಂ(ಚಕ್ರತಾಳ ಅಥವಾ ಕಂಸಾಳೆ), ಜಾಗಟೆ, ಶುದ್ಧಮದ್ದಳಂ ತೊಪ್ಪಿಮದ್ದಳಂ(ಕೃಷ್ಣಗಾಟ್ಟಂನಲ್ಲಿ ಬಳೆಯಿದೆ), ಚಂಡರಂ(ನಗಾರಿ), ಪಾಣಿ, ಎಡಕ್ಕ, ಮಿಜೂವು ಎಂದು ಹೀಗೆ ಇವುಗಳ ಉದ್ದವಾಗುತ್ತದೆ. ದೇವಾಲಯದ ಒಳಗಾದರೂ ಹೊರಗಾದರೂ ತಾಳಾವಾದ್ಯ ಮೇಳಗಳೂ ನಮಗೆ ಧಾರಾಳ ಇವೆ. ದವಾಲಯದ ಉತ್ಸವಕ್ಕೆ ಸಂಬಂಧಿಸಿ ಬಳಕೆ ಬುವವುಗಳು ಜಾಗಟೆ ಶುದದ್ಧಮದಳಂ (ಕಥಕಳಿಯಳಿಕೆಯದು), ಎಡಕ್ಕೆ, ತಿಮಿಲ, ಪ್ರಾಣಿ ಇತ್ಯಾದಿ. ಮಿಜಾವು 'ಕೂತ್'(ನೃತ್ಯ)ಗೂ, ಕೂಡಿಯಾಟ್ಟಕ್ಕೂ ಹಿಮ್ಮೇಳವಾಗಿದೆ. ಚೆಂಡೆಗೆ ಸರ್ವತ್ರ ಸಥಾನವಿದೆ. ನಿರ್ಮಾಣದಲ್ಲಿ ಸಂಕೀರ್ಣತೆ ಕಡಿಮೆಯಾದ ಉಪಕರಣವಾದರೂ ಚೆಂಡೆಯನ್ನು ವಾದನದಲ್ಲಿ ಅತ್ಯನ್ನತ ಕೌಶಲದ ತಲಕ್ಕೆ ತಲಪಿಸಿದ್ದಾರೆ. ಕಥಕಳಿಯಲ್ಲಿ ಚೆಂಡೆಯಿಂದ ನೀಡುವ ರಸಪ್ರತೀತಿ ಇದಕ್ಕೆ ಪುರಾವೆ.

ದೇಗುಲಗಳಲ್ಲಿ ತಾಳವಾದ್ಯ ಬಾರಿಸುವುದು 'ಮೂರಾನ್' ಗಳಷ್ಟೆ? ದೇಗುಲದ ಹೊರಗೆ ಮಲಯರೂ, ಪುಲಯರೂ ಇತರರೂ ಬಾರಿಸುತ್ತಾರೆ. ಇವರ ವಾದನಗಳಲ್ಲರುವ ವ್ಯತ್ಯಾಸ ಕೇಳರಿಯಬೇಕಾದುದು. ಮೂರಾನ್ಗಳ ಆಳ ಹೆಚ್ಚು, ಬಾರಿಕೆಯಲ್ಲಿ ಆಳ ಹೆಚ್ಚಿರುವಲ್ಲೆ ನಾಡಿನ ತನಿಮೆಯಿರುವುದು.ಅಂದರೆ ಮಲಯರೂ ಪುಲಯರೂ ಬಾರಿಸುವುದರಲ್ಲಿ ಎಂದರ್ಥ.

ಸ್ವಲ್ಪ ವಂಶೀಯ ಸಂಗೀತ ಚಿಂತನೆ

ಕೇರಳದಲ್ಲಿರುವ ಮಲಯನ್ ಕಪ್ಪಗಿರುವವ, ತಮಿಳನಾಡಿನ ಪಿಳ್ಳೆ ಕರ್ರಗೆ. ಆಫ್ರಿಕದ ನೀಗ್ರೋ ಕಪ್ಪು. ಇತಿಹಾಸ ಪೂರ್ವ ಯುಗದಲ್ಲಿ ಸಂಭವಿಸಿದ ಒಂದು ರಕ್ತಬಂಧದ ಫಲವಾದ ಕಪ್ಪು ಇದು ಎಂಬುದು ವಂಶೀಯತಾ ಶಾಸ್ತ್ರಜ್ಞರ(Ethnologists) ನಿರ್ಣಯ. ಅರಬಿ ಸಮುದ್ರ ಆದುದು ಭೀಮಿಯ ಒಂದು ಭಾಗ ಕೆಳಕ್ಕೆ ತಗ್ಗಿದುದರಿಂದ, ಅಥವಾ ಆಫ್ರಿಕವೂ ಭಾರತವೂ ಸೀಳೆ ಅಗಲಿದುದರಿಂದ. ಯಾವ ರೀತಿಯಲ್ಲಾದರೂ ಇದು ಸಂಭವಿಸುವ ಹಿಂದೆ ನೀಗ್ರೋವಿನ ಕಪ್ಪು 'ತಮಿಳಿಕ'ದ ವರೆಗೆ ವ್ಯಾಪಿಸಿತ್ತು ಎಂದರ್ಥ ಮಲಯನ

ಹೊಡೆಚೆಂಡೆಗೆ ಮಂದ್ರತೆ ಹೆಚ್ಚು. ಆಫ್ರಿಕನ್ ನೀಗ್ರೋವಿನ ಮುಂದರಿಕೆಯಾದ ಅಮರಿಕನ್ ನೀಗ್ರೋವಿನ 'ಜಾಸ್ಸಿ'ನ ಬ್ರಾಸ್ ಡ್ರಮ್ಮಿಗೆ ಮಂದ್ರತೆ ಹೆಚ್ಚು– ಈಸಾಮ್ಯ ವಂಶೀಯ ಸಾಮ್ಯದ ಫಲವೇ.

ಗ್ರಾಮೀಣ ಸಂಗೀತವೂ ಜನತಾ ಸಂಗೀತವೂ

ಗ್ರಾಮೀಣ ಸಂಗೀತವೂ ಜನತಾ ಸಂಗೀತವೂ(Popular Music)ದೇಅಲ್ಲ. ಜನತಾ ಸಂಗೀತ ಇತ್ತೀಚಿನ ಒಂದು ಉತ್ಪನ್ನ ಕೆಲವೊಮ್ಮೆ ಗ್ರಾಮೀಣ ಸಂಗೀತವನ್ನು ಪರಿಷ್ಕರಿಸಿ ಇದನ್ನು ತೆಳುಮಾಡಿ ಕೂಡ ರೇಡಿಯೋ, ಸಿನೆಮಾ, ನಾಟಕಗಲ ದಾರಿಯಾಗಿ ಸಂಗೀತ ನಿರ್ದೇಶಕರು ಜನತಾ ಸಂಗೀತವನ್ನು ನಿರ್ಮಿಸಿ ಸಾಕಷ್ಟು ಪ್ರಚಾರಕ್ಕೆ ತಂದಿದ್ದಾರೆ.

ಅಧ್ಯಾಯ ಮೂರು

ಆಚಾರಾನುಷ್ಠಾನಗಳು

ಕಣ್ಣೇಟೆ (ದೃಷ್ಟಿತಾಗು)

(ನಂಬಿಕೆ)

ಎಸ್.ಕೃಷ್ಣಕುಮಾರ್

ಟಿಪ್ಪಣಿ

ಈ ದೃಷ್ಟಿಗೋಚರವಾದ ಜೀವನದ ಅವಸ್ಥೆಗಳ ಹಿಂದೆ ನಂಬಿಕೆಯದೇ ಒಂದು ದೊಡ್ಡ ಲೋಕ ಕೆಲಸಮಾಡುತ್ತದೆ. ಮೂರ್ತವಾದ ಜೀವನಾವಸ್ಥೆಗಳನ್ನು ನಿರ್ಣಯಿಸುವುದರಲ್ಲಿ ಇದಕ್ಕೆ ದೊಡ್ಡ ಪಾಲು ಇದೆ. ಒಂದು ಸಾಂಘಿಕತೆಯ ವ್ಯತಿರಿಕ್ತತೆ ನಂಬಿಕೆಯನ್ನು ಆಶ್ರಯಿಸಿ ಕೂಡ ನಿಲ್ಲುತ್ತದೆ. ಆದ್ದರಿಂಲೆ ನಂಬಿಕೆಗಳ ಕುರಿತಾದ ಅಧ್ಯಯನ ಜಾನಪದ ಅಧ್ಯಯನದಲ್ಲಿ ಬಹಳ ಮುಖ್ಯವಾಗುವುದು. ನಂಬಿಕೆಯ ತಲದಲ್ಲಿ ಸಂಭವಿಸುವ ಕಿದುಚಲನಗಳು ಮೂರ್ತವಾದ ಜೀವನವನ್ನು ಗಂಭೀರವಾಗಿ ಬಾಧಿಸುವುದುಂಟು. ಉದಾಹರಣೆಗೆ 'ಪಿಳ್ಳತಿನ್ನಿ' (ಗಭಸ್ಥ ಶಿಶುವನ್ನು ತಿನ್ನುವಂಥದೆಂದು ನಂಬಲಾದ ಪಿಶಾಚ), 'ಕರುಕಲಕ್ಕಿ' (ಗರ್ಭಕಲಸುವಂಥದು) ಮೊದಲಾದ ದುರ್ದೇವತೆಗಳೇ ಗರ್ಭಛಿದ್ರಕ್ಕೆ ಕಾಎಣ ಎಂದ ಹಿಂದೆ ನಂಬಿಕೆಕೊಂಡಿದ್ದರು. ಆದ್ದರಿಂ ಅದರ ನಿವಾರಣೇಗೆ

ಎಂಬನೆಲೆಯಲ್ಲಿ ಈ ದುರ್ದೇವತೆಗಳನ್ನು ನಿವಾರಿಸುವುದಕ್ಕಿರುವ ಕರ್ಮಾಚರಣೆ ಬಾಧೆ ಉಚ್ಚಾಟನೆ ಚಡಂಗಗಳು ನಿಂತುಹೋಗಿವೆ. ಶಬದಲು ಆಧುನಿಕ ಚಿಕಿತ್ಸಾ ಸಂಪ್ರದಾಯ ಪ್ರಚಾರಗೊಂಡು ಬಂದಿದೆ.

ಕಾರ್ಯಕಾರಣ ಸಂಬಂಧದಲ್ಲಿ ಎಲ್ಲವನ್ನೂ ಗಟ್ಟಿಮಾಡಿ ನಿಲ್ಲಿಸುವುದು ಮನುಷ್ಯ ಮನಸ್ಸಿನ ವೈಶಿಷ್ಟ್ಯ. ತರ್ಕರಹಿತವಾಗಿ ತೋರಬಹುದಾದ ಎಲ್ಲವನ್ನೂ ತರ್ಕದಲ್ಲಿ ಬಂಧಿಸಿಡಲು ಅದು ಪ್ರಯತ್ನಿಸುತ್ತದೆ. ದೈವ, ವುಧಿ, ಅನುಷ್ಠಾನ, ಪುರಾವೃತ್ತ ಇತ್ಯಾದಿಗಳು ನಿರ್ವಹಿಸುವ ಧರ್ಮ ಇದೇ ಆಗಿದೆ. ತಾನು ಸಹಿತವಾದ ಪ್ರಕೃತಿಯ ಅವಸ್ಥೆಗಳಲ್ಲಿ ಉಂಟಾಗುವ ಬದಲಾವಣೆಗಳನ್ನು ತರ್ಕದ ದಾರಗಳಿಂದ ಬಂಧಿಸುವುದನ್ನೆ ಹಲವು ವಿಶ್ವಾಸಗಳು ಮಾಡುವುದು. ರೋಗ, ಹಾನಿ ಮೊದಲಾದವುಗಳಿಗೆ ಭೌತಿಕವಾದ ತರ್ಕ ಬೆಟ್ಟುಮಾಡಲು ಸಾಧ್ಯವಿಲ್ಲ ಎನ್ನುವಾಗ ಮನುಷ್ಯ ಸ್ವಂತವಾದ ಕೆಲ ತರ್ಕಗಳನ್ನು ಕಂಡುಕೊಳ್ಳುತ್ತಾನೆ. ಅಂಥ ತರ್ಕಗಳಲ್ಲಿ ಒಂದು 'ಕಣ್ಣು ತಾಗು' ಅಥವಾ 'ದೃಷ್ಟಿತಾಗು' (ಕಣ್ಣೇಱ್). ದೃಷ್ಟಿಗೋಚರವಲ್ಲದ ಹಲವು ಸಂಗತಿಗಳು ಲೋಕದಲ್ಲಿ ಇವೆಯೆಂದೂ ಅವು ಜೀವನವನ್ನೂ ಪ್ಪೃತಿಯನ್ನೂ ನಿಯಂತ್ರಿಸುತ್ತವೆಯೆಂದೂ ವಿಶ್ವಾಸವೋಂದು ಅವುಗಳಿಗೆ ಪ್ರಾಕೃತಿಕ ಅವಸ್ಥೆಗಳನ್ನು ಬದಲಿಸಿಬಿಡಲು ಸಾಧ್ಯವಿದೆ ಎಂದೂ ನಂಬಲಾಗುತ್ತದೆ. ಅಂಥ ಒಂದು ನಂಬಿಕೆ 'ದೃಷ್ಟಿ ತಾಗು'ವುದು. ಇ ನಂಬಿಕೆಯ ವೈಶಿಷ್ಟ್ಯಕ್ಕೆ ತಕ್ಕವಾಗಿ ಅದಕ್ಕಿರುವ ಪ್ರತಿವಿಧಿಯೂ ಪ್ರತಿರೋಧ ತಂತ್ರವೂ ಉಂಟಾಗುತ್ತವೆ. ಮಗುವಿನ ಗಲ್ಲಗಳಿಗೆ ಬೊಟ್ಟು ಇಡುವುದರಿಂದ ತೊಡಗಿ, ಹೊಸ ಕಟ್ಟಡದ ಮುಂದೆ ದೊಡ್ಡದೊಂದು ರೂಪವನ್ನು ಇಡುವ ವರೆಗೆ ಇರುವ ಕೆಲಸಗಳಿಗೆಲ್ಲ ಅಸ್ತಿವಾದ ಇದೇ. ಮೆಣಸನ್ನು ಸುಳಿದು ಒಲೆಗೆ ಹಾಕುವುದರೊಂದುಗೆ ತೊಡಗಿ 'ತಚ್ಚು ಮಂತ್ರ' (ಔಷಧೀಯ ಸೊಪ್ಪಿನ ಗೊಂಚಲಿನಿಂದ ಅಂಗಾಂಗಗಳಿಗೆ ಮಂತ್ರಿಸುತ್ತ ಹೊಡೆಯುವುದು) ವರೆಗೆ ಸಣ್ಣದೂ, ದೊಡ್ಡದೂ ಆದ ಹಲಬಗೆ ಇಲ್ಲವಾಗಿರುವುದಾದರೂ 'ದೃಷ್ಟಿತಾಗು' ವುದರಲ್ಲಿರುವ ನಂಬಿಕೆ ಹಳಗಾಲದಂತೆ ಇವತ್ತೂ ಶಕ್ತವಾಗಿಯೆ ಉಳಿದಿರುವಂತೆ ತೋರುತ್ತಿದೆ. ಪ್ರತಿನಿಧಿ ಎಂಬ ನೆಲೆಯಲ್ಲಿ ನಡೆಯುತ್ತಿದ್ದ ಅನುಷ್ಠಾನಗಳು ಇಲ್ಲವಾಗುತಿವೆಯಾದರೂ ಪ್ತಿರೋಧ ತಂತ್ರ ಎಂಬ ನೆಲೆಯಲ್ಲಿರುವ ಬೆರ್ಚು(ನೋಕ್ಕುಕುತ್ತಿ)ಗಳನ್ನು ನಿಲ್ಲಿಸುವುದು ಇತ್ಯಾದಿ ಹಿಂದಿನಂತೆ ಇಂದೂ ನೆಲೆಗೊಂಡಿವೆ. ದೃಷ್ಟಿತಾಗು ಅಧ್ಯಯನಕ್ಕೊಳ ಪಡಿಸುವುದರಿಂದ ಸಾಂಘಿಕತೆಯನ್ನು ತಿಳಿಯಲು ಸಹಾಯವಾತ್ತದೆ.

– **ಸಂಪಾದಕ**

ಕೇರಳದಲ್ಲಿ ಈಗಲೂ ಊರ್ಜಿತದಲ್ಲಿ ಇರುವ ದೋಷವಿಶ್ವಾಸಗಳಲ್ಲಿ ಒಳಗೊಂಡಿವೆ ಕಣ್ಣುದೋಷ ಮತ್ತು ನಾಲಗೆದೋಷ. ಕೆಲವರ ನೋಟದ ಮೂಲಕ ದೋಷತಟ್ಟುತ್ತದೆ ಎಂಬ ನಂಬಿಕಯೆ 'ನಾಲಗೆ ದೋಷ'. ಕಣ್ಣುದೋಷ ಸಂಭವಿಸುವುದುಕ್ಕೆ 'ಕಣ್ಣೇಱ್' ಎಂದೂ ನಾಲಗೆ ದೋಷ ತಾಗುವುದಕ್ಕೆ 'ನಾವೇಱ್' ಎಂದೂ ಹೆಸರು. 'ಏಱ್' ಎಂದರೆ ಎಸೆತ ಅಥವಾ ಹೊಡೆತ ಕಣ್ಣಿನಿಂದಾಗುವ ಹೊಡೆತ 'ಕಣ್ಣೇಱ್', 'ನಾವ್' ಎಂದರೆ ನಾಲಗೆ. ಅದರಿಂದಾಗುವ ಹೊಡೆತ 'ನಾವೇಱ್', 'ನೋಡಿಕೊಲ್ಲು' ವುದಕ್ಕೂ ಕೆಲವರಿಗೆ ಯೋಗ್ಯತೆ ಇದೆ ಎಂಬ ನಂಬಿಕೆಯೇ 'ಕಣ್ಣೇರ್'(ದೃಷ್ಟಿತಾಗು)ನಲ್ಲಿ ಇರುವುದು. 'ನಾವೇಱ್'ಗೆ 'ಹೇಳಿಕೊಲ್ಲು'ವುದಕ್ಕೆ ಮತ್ತು ಹೇಳೀ ಅಳಿಸುವುದಲಕ್ಕೆ ಕೆಲವರಿಗೆ ಸಾಧ್ಯವೆಂಬ ವಿಶ್ವಾಸವೇ ಆಧಾರ. ಇವೆರಡು ವ್ಯಕ್ತಿಗಳಿಗೋ ಅವರ ಸಂಪತ್ತಿಗೋ ದೋಷ ಉಂಟಾಗುವುದಕ್ಕೂ ಐಶ್ವರ್ಯಹಾನಿ ಉಂಟಾಗುವುದಕ್ಕೂ ಕಾರಣವಾಗುವುದುಂಟೆಂದು ಹಲವು ಸಾಂಘಿಕತೆಗಳು ಭಾವಿಸುತ್ತವೆ. ಇದರಿಂದ ಅನೇಕ ಪ್ರತಿರೋಧ ವಿಧಿ, ಕರ್ಮಗಳನ್ನು ಅವರು ಆಚರಿಸಿಕೊಂಡು ಬರುವುದನ್ನು ಕಾಣಾತ್ತೇವೆ. ಕಣ್ಣೇಱ್‌ಗೂ ನಾವೇಱ್‌ಗೂ ಇರುವ ಪ್ರತಿರೋಧ ಶಕರ್ಮ(ಮುಂದಾಗಿಯೆ ತಡೆ

ತರುವುದು) ಮತ್ತು ಪ್ರತಿವಿಧಿ ಕರ್ಮ(ಸಂಭವಿಸಿದ ಮೇಲಿನ ಸವಾರಣೆ ಕ್ರಮ)ಗಳಿಗೆ ಅನೇಕ ವೇಳೆ ಸಮಾನ ಸ್ವಭಾವ ಉಂಟಾಗಿರುತ್ತದೆ ಅಥವಾ ಅವೆರಡೂ ಒಂದೇ ಆಗಿರುತ್ತದೆ. ಇವುಗಳಿಗೆ ಕಾರಣವಾಗುವ ಶಕ್ತಿಯ ಕುರಿತ ವಿಶ್ವಾಸ ಸೂಕ್ಷ್ಮ ತಲದಲ್ಲಿ ಒಂದೆಂದು ಕಾಣಬಹುದು. 'ಕಣ್ಣೇಱ್'ನಲ್ಲಿ ನೋಟದ ಮೂಲಕ ಒಬ್ಬ ತನ್ನ ಪಭಿಪ್ರಾಯ ನೀಡುತ್ತದೆ ಎಂಬುದಕ್ಕೇ ಒತ್ತು ಇರುವುದು. 'ನಾವೇಱ್'ನಲ್ಲಿ ಈ ಅಭಿಪ್ರಾಯ ಮಾತಿನ ರೂಪದಲ್ಲಿ ಹೊರಗೆ ಬರುತ್ತದೆ ಎಂದಷ್ಟೆ ಅರ್ಥ. ಈ ವಾಸ್ತುವಗಳು 'ಕಣ್ಣೇಱ್' ಅನ್ನೂ 'ನಾವೇಱ್' ಅನ್ನೂ ಒಂದೇ ನಂಬಿಕೆಯ ಎರಡು ಮುಖಗಳನ್ನಾಗಿ ನೋಡಲು ಪ್ರೇರಿಸುತ್ತವೆ. ಉಳಿದ ಸಂಸ್ಕೃತಿಗಳಿಂದ ಇದಕ್ಕೆ ಪುರಾವೆ ಪಡೆಯಲು ಸಾಧ್ಯವಿದೆ. ಪಾಶ್ಚಾತ್ಯ ರಾಷ್ಟಗಳಲ್ಲಿ ಇವೆರಡನ್ನೂ ಉದ್ದೇಶಿಸಲು 'ಕರಿಂಗಣ್ಣ್' (ಕಪ್ಪುಗಣ್ಣು) ಎಂಬುದಕ್ಕೆ ಸಮನಾದ 'ಇವಿಲ್ ಅಯ್' (Eril Eye) ಎಂಬ ಶಬ್ಬ ಪ್ರಯೋಗ ಮಾತ್ರ ಚಾಲತಿಯಲ್ಲಿ ಇದೆ. ಸಮಶೀತೋಷ್ಣ ಪ್ರದೇಶದ ರಾಷ್ಟ್ರಗಳ 'ಕಣ್ಣೇಱ್' ನಂಬಿಕೆ ಬಗೆಗೆ ಅಧ್ಯಯಿಸಲು ಶ್ರಮಿಸಿದ ಅಲನ್ ಡಂಡಸ್ 'ಕಣ್ಣೇಱ್'ಗೆ ನೀಡಿದ ನಿರ್ವಚನವೂ ಈ ವಾಸ್ತವವನ್ನು ಸಮರ್ಥಿಸುತ್ತದೆ.

ಒಬ್ಬ ವ್ಯಕ್ತಿಗೆ ಸ್ವಯಂ ಆಗಿಯೊ, ಅಲ್ಲದೆಯೊ ಇನ್ನೊಬ್ಬರಿಗೆ ದೋಷ ತಲಪಿಸುವ ಶಕ್ತಿ ಇದೆಯೆಂಬ ಗ್ರಾಮೀಣ ನಂಬಿಕೆಯೇ 'ಕಣ್ಣೇಱ್'ನ ಅಸ್ತಿವಾರ ದೋಷ ವ್ಯಕ್ತಿಗೋ, ಆತನ ಸ್ವತ್ತಿಗೋ ತಟ್ಟಬಹುದೆಂದು ಭವಿಸಲಾಗುತ್ತದೆ. ಇದು ಎಲ್ಲ ಹೊತ್ತಿನಲ್ಲೂ ಉದ್ದೇಶ ಪೂರ್ವಕ ಮಾಡ ಬರುತ್ತದೆ ಎಂದು ಭಾವಿಸಲೂ ಆರರು'.

'ಕಣ್ಣೇಱ್'ನ್ನೂ 'ನಾವೇಱ್'ನ್ನೂ ಏಕೀಕರಿಸಿ ಸೂಚಿಸುವ ಒಂದು ಮಾತಾಗಿಯೇ ಈ ಪ್ರಬಂಧದಲ್ಲಿ 'ಕಣ್ಣೇಱ್' ಅನ್ನು ಬಳಸಲಾಗುತ್ತದೆ.

ವ್ಯತ್ಯಸ್ತ ಹೆಸರುಗಳು

ಕೇರಳದಲ್ಲಿ ಈ ನಂಬಿಕೆಗೆ ಹಲವೆಡೆ ಹಲವು ಹೆಸರುಗಳಿವೆ. ಉತ್ತರ ಕೇರಳದಲ್ಲಿ ವಾಡಿಕೆಯಲ್ಲಿರುವ ಮುಖ್ಯ ಹೆಸರುಗಳೆಂದರೆ 'ಕಣ್ಣೇಱ್', 'ಪೊಟ್ಟಿಕ್ಕಣ್ಣ್', 'ಕರಿಂಗಣ್ಣ್' ಇತ್ಯಾದಿ. ದಕ್ಷಿಣ ಕೇರಳದಲ್ಲಿ 'ಕಂಬೇಱ್', 'ಪೊಟ್ಟಿಕ್ಕಣ್ಣ್', 'ಕರಿಂಗಣ್ಣ' ಇತ್ಯಾದಿ. ದಕ್ಷಿಣ ಕೇರಳದಲ್ಲಿ 'ಕಂಬೇಱ್', 'ಕರಿನೆಕಣ್ಣ್' ಎಂಬ ಹೆಸರುಗಳೂ ಇವೆ ಇಡುಕ್ಕಿ ಜಿಲ್ಲೆ ಹಾಗೂ ಇನ್ನು ಕೆಲವು ಮಲೆನಾಡ ಜಿಲ್ಲೆಗಳಲ್ಲಿ 'ಎದಿರೇಱ್ಱ' ಎಂಬ ಹೆಸರಿನ ಬಳಕೆಯನ್ನು ಕಾಣಬಹುದು. 'ನಾವುದೋಷಂ', 'ನಾಂದೋಷಂ', 'ಕಣ್ಣು ತಟ್ಟಲ್', ಮೊದಲಾದ ಹೆಸರುಗಳೂ ಇದಕ್ಕೆ ಇವೆ.

ಕಣ್ಣೇಱ್ ಕೇರಳದಲ್ಲಿ

ಭಾರತದ ಇತರ ಸಂಸ್ಕೃತಿಗಳಲ್ಲೆಂಬಂತೆ ಕೇರಳದಲ್ಲೂ ಕಣ್ಣೇಱ್ ಸಕ್ರಿಯವಾಗಿ ನೆಲೆಗೊಂಡಿರುವ ಒಂದು ಪರಂಪರಾಗತ ವಿಶ್ವಾಸವಾಗಿದೆ. ಮಲಯನ್, ವೇಲನ್, ಕಾಣಿಕ್ಕಾರ್, ಪಾಣನ್, ಪುಳ್ಳುವನ್ ಮೊದಲಾದ ಸಮುದಾಯಗಳಿಗೆ ತಮ್ಮದೇ 'ಕಣ್ಣೇಱ್ ಅನುಷ್ಠಾನ'ಗಳಿವೆ. ಸಾಮಾನ್ಯ ಜನರ ನಡುವೆ ಈ ವಿಶ್ವಾಸಕ್ಕಿರುವ ಪ್ರಚಾರವನ್ನು ಸೂಚಿಸುವಂಥವುಗಳು 'ನೋಕ್ಕುಕುತ್ತಿ'ಗಳು (ಬೆರ್ಚುಗಳು). ಇದರ ಹಿಂದಿರುವ ತತ್ತ್ವವೇಂದರೆ

ಗಮನವನ್ನು ಬೇರೆಡೆಗೆ ಸೆಳೆದು ಕಣ್ಣೇಱ್‌ನಿಂದ ಪಾರಾಗುವುದು. ಇದರ ಹೊರತಾಗಿ ಲೆಕ್ಕವಿಲ್ಲದಷ್ಟು ಪ್ರತಿವಿಧಿ ಕರ್ಮಗಳೂ, ಪ್ರತಿರೋಧಿ ಕ್ರಿಯೆಗಳೂ ಕೇರಳದಲ್ಲಿ ಬಳಕೆಯಲ್ಲಿವೆ. 'ದೃಷ್ಟಿತಾಗು'ವುದಕ್ಕೆ ಸಂಬಂಧಿಸಿ ಅಸಂಖ್ಯ ಕತೆಗಳೂ ಹಾಡುಗಳೂ ಅನಿಷ್ಠಾನಗಳೂ ಕೇರಳದ ಹೆಚ್ಚಿನ ಸಾಂಘಿಕತೆಗಳಲ್ಲಿ 'ದೃಷ್ಟಿತಾಗು' ಒಂದು ಜೀವಂತ ಜಾನಪದ (Lively Folklore) ಆಗಿರುವುದಾಗಿ ಈ ವಸ್ತುಸ್ಥಿತಿಗಳು ವ್ಯಕ್ತಗೊಳಿಸುತ್ತವೆ.

ಒಬ್ಬ ನೋಡುವಾಗಲೋ, ಹೊಗಳುತ್ತಿರುವಾಗಲೊ, ನೋಡಿ ಆಸೆಪಡುವಾಗಲೊ 'ದೃಷ್ಟಿ ಬೀಳುವುದು' ಸಂಭವಿಸುತ್ತದೆ ಎಂಬವಿಶ್ವಾಸವೆ ಇಲ್ಲಿ ಇರುವುದು. ಮನುಷ್ಯರು, ಮಕ್ಕಳು, ಗರ್ಭಿಣಿಗಳು, ಮಾಲೇಯೂಡುವ ಕಾಟ ಎಂದು ಭಾವಿಸಲಾಗುತ್ತದೆ. ಮನೆ, ವಾಹನಗಳಿಗೂ, ಸಾಕು ಪ್ರಾಣಿಗಳಿಗೂ ದೃಷ್ಟಿತಾಗುವುದು ಎಂಬುದು ಇದೆಯೆಂಬ ವಿಶ್ವಾಸವೂ ನೆಲಸಿದೆ.

ಮಕ್ಕಳ ಚೆಲುವೂ, ಮುದ್ದುತನವೂ ದೃಷ್ಟಿತಾಗುವಿಕೆಯನ್ನು ಸ್ವಾಗತಿಸುತ್ತದೆ ಎಂಬ ವಿಶ್ವಾಸವಿರುವುದುದರಿಂದ, ಅಪರಿಚಿತರು ಮಕ್ಕನ್ನು ನೋಡುವ ಸಂದರ್ಭಬರುವಾಗಲೂ, ಅವರನ್ನು ಯಾರಾದರೂ ಹೊಗಳುವಗಲೊ ಹೆತ್ತವರಿಗೆ ಹೆದರಿಕೆ ಆಗುವುದುಂಟು. ಇದನ್ನು ಯಾರಾದರೂ ಹೊಗಳುವಾಗಲೊ ಮಗುವಿನ ಗಲ್ಲದಲ್ಲಿ ಕಪ್ಪು ಬೊಟ್ಟು ತಗಲಿಸುವುದು. ಇನ್ನೊಂದು ಪ್ರತಿರೋಧ ವಿಧಿಯೆಂಬುದು, ಮನೆಯಿಂದ ಹೊರಡುವಾಗ ಗುಡಿಸಲಿನ ಮೇಲೆ ಅಥವಾ ಒಲೆಯಲ್ಲಿ ಹಾಕುವುದು. ಪ್ರಯಾಣ ಹೊರಡುವ ಮೊದಲು ಮಗುವಿನ ಮುಖಕ್ಕೆ ಉಗುಳುವ ಹಾಗೆ ವಟಿಸುವುದು ಕೂಡ ರಕ್ಷಣೆಯ ದಾರಿಗಳ್ಲಿ ಒಂದಂದು ತಿಳಿಯಲಾಗುತ್ತದೆ. ಮಗುವಿನ ಅನಿರೀಕ್ಷಿತ ಚಲನೆ ನಿಲುಗಡೆ, ಅಕಾರಣವಾಗಿ ಅಸ್ವಾಸ್ಥ್ಯ ಇತ್ಯಾದಿ ಕಣ್ಣುತಾಗಿದ (ಆಲಂ), ಹೆಜ್ಜೆಯಡಿಯ ಮಣ್ಣು, ಗುಡಿಸಲಿನ ಸೂರಿನ ತುದಿಯ ಕಡ್ಡಿ, ಸಾಸಿವೆ, ಮೂರು ದಾರಿಗಳು ಕೂಡುವ ಸ್ಥಳದ ಮಣ್ಣು ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಹಲವನ್ನು ಕೈಗೆ ತೆಗೆದು ಮಗುವಿನ ತಲೆಗೆ ಸಿಳಿದು ನಿವಾಳಿಸಿ ಬೆಂಕಿಗೆ ಹಾಕುವ ಪದ್ಧತಿ ಇದೆ. ಮನೆಯಲ್ಲಿ ಇರುವವರೆ ನಡೆಸುವ ಈ ಪ್ರತಿವಿಧಿ ಕ್ರಿಯೆಗೆ 'ಉಜಿಜ್ಜಿಡಲ್' (ನಿವಾಳಿಕೆ) ಎಂದುಹೆಸರು. ಇದಕ್ಕೆ ಮಂತ್ರವಾದಿಯ ಮೂಲಕ ನೀರು ಜಪಿಸಿ ತಳಿಯುವ 'ವೆಳ್ಳಮೋದಲ್' ಎಂಬ ಅನುಷ್ಠಾನ ಚಿಕಿತ್ಸೆ ಇದಕ್ಕೆ ನಡೆಯುವುದಿದೆ. ಕೆಲವೆಡೆ ರಕ್ತತರ್ಪಣ (ಪ್ರಾಣಿ ಬಲಿ) ಸಹಿತ ಉಚ್ಚಾಟನ ಮಂತ್ರವಾದ ಪ್ರತಿವಿಧಿಯೂ ನಡೆಯುವುದಿದೆ.

ಗರ್ಭಿಣಿಗಳಿಗೂ, ಮೊಲೆಯೂಡುವ ತಾಯಂದಿರಿಗೂ ಕಣ್ಣುತಾಗುವುದು ಸಂಭವಿಸದಿರಲೆಂದು ತಾಳೆಯೋಲೆಯಲ್ಲಿ ಯಂತ್ರ ಬರೆದು ಸುರುಳಿ ಮಾಡಿ ತಾಯಿತವನ್ನು ಕೊರಳಿಗೆ ನೇತುಕಟ್ಟುವುದಿದೆ. ಮೊಲೆಯೂಡುವ ತಾಯಂದಿರಿಗೆ ಕಾರಣವಿಲ್ಲದೆ ಹಾಲು ಬತ್ತುದೇ ಕಣ್ಣುತಾಗಿದುದರ ಲಕ್ಷಣ. ಆಗ ನಿವಾಳಿಸುವುದು, ಪೂಜಾರಿಯಿಂದ ಭಸ್ಮ ಹಾಕಿಸುವುದು ಮೊದಲಾದ ಅನುಷ್ಠಾನಗಳನ್ನು ಕಥಗೊಳ್ಳುತ್ತಾರೆ ಪಾಂಜಿ ಸಸ್ಯದ ಸೊಪ್ಪೆ ಅಥವಾ ಬೇವಿನ ಸಿಪ್ಪೆಯಿಂದ ಸಿಪ್ಪೆನಿವಾಳಿಕೆ' (ತೋಲುಜಿಚ್ಚಲ್) ನಡೆಸುವ ಪದ್ಧತಿ ಪ್ರಚಲಿತವಿದೆ.

ಸಾಮಾನ್ಯವಾಗಿ ಬಳಕೆಯಾಗುವ ಇನ್ನೊಂದು ಪ್ರತಿರೋಧ ಮಾರ್ಗವಾಗಿದೆ 'ಕುಜಿ' (ಕೊರೆ). ತುಂಬಿಕೊಂಡಿರುವ ಯಾವುದಕ್ಕೂ ಕಣ್ಣುತಾಗೀತೆಂಬ ನಂಬಿಕೆಯಿಂದ ಕಣ್ಣು ತಾಗುಬಾರದೆಂದು ಅವಲಂಬಿಸುವ ದಾರಿಯಿದು. ಬಡಗಿಗಳೂ, ನಿರ್ಮಾಣ ಕೆಲಸದವರೂ, ಶಿಲ್ಪಿಗಳು ಚಿತ್ರಕಾರರೂ ಹಲವು ಬಗೆಯ 'ಕಜಿ'ಗಳನ್ನು ಅನುಷ್ಠಿಸುವುದಿದೆ. ಕೆಲಸಗಾರರೂ, ಚಿತ್ರಕಲಾಕಾರರೂ ತಮ್ಮ ನಿರ್ಮಾಣ ಅಥವಾ ಕೃತಿಗಳಲ್ಲಿ ಎಲ್ಲಾದರೂ ಒಂದು

ಕೊರೆಯನ್ನು ಗುರುತಿಸಬಹುದು. ನೃತ್ತ ಅಥವಾ ಇತರ ಯಾವುದೆ ಗುರುಗಳು 'ಕುಱ' ಬರಿಸುವುದು ಇದೆ. ಚೆಲುವೆಯರೂ ಮಕ್ಕಳೂ ಗಲ್ಲದಲ್ಲಿ ಕಪ್ಪು ಚುಕ್ಕಿ ತಾಗಿಸಿಕೊಳ್ಳುವುದು ಇದರ ಇನ್ನೊಂದು ಉದಾಹರಣೆ. ನರ್ತಕಿಯರು ಗದ್ದದ ಕೆಳಗೆ ಎಡಭಾಗದಲ್ಲಿ ಕಪ್ಪು ಚುಕ್ಕಿ ಇಡುತ್ತಾರೆ.

ಬೆಳೆಗಳನ್ನು ಕಣ್ಣುತಾಗುವುದರಿಂದ ರಕ್ಷಿಸುದಕ್ಕಾಗಿಯೆ 'ಕಡಿಮೆ'ಯೆಂದು ಹೇಳುವುದು. ಬೆಳೆ ಎಷ್ಟು ಉತ್ತಮವಾಗಿ ಬಂದಿರುವುದಾದರೂ, ಯಾರಾದರೂ 'ಹೇಗಿದೆ ಬೆಳೆ' ಎಂದು ಕೇಳಿದರೆ, 'ಸಾಲದು' ಎಂಬುದೇ ಸಾಮಾನ್ಯವಾಗಿ ಸಿಗುವ ಉತ್ತರ. ಬೆಳೆಗಳನ್ನು ಇತರರನೋಟದಿಂದ ತಪ್ಪಿಸಲು ಬೇಲಿ ಕಟ್ಟುವಾಗಲೆ ಮುಂಜಾಗರೂಕತೆಯಾಗಿ ಒಂದು ಕೆಲಸ ಮಾಡುತ್ತಾರೆ. ಕಪ್ಪು ಮಡಕೆಗೆ ಸುಣ್ಣದಿಂದ ಉರುಟು ರೇಖೆಗಳನ್ನು ಹಾಕಿ ಅದನ್ನು ಬೆಳೆಗಳಿಗೆ ಹತ್ತಿರವಾಗಿ ಇಡುವುದು ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾದ ಪದ್ಧತಿ. ಮಡಕೆಯಲ್ಲಿ ಕಣ್ಣು, ಮೂಗು ಬರೆದು 'ನೋಕ್ಕುಕುತ್ತಿ' (ಬೆರ್ಚು ಅಥವಾ ಬೆರ್ಚಪ್ಪ) ತಯಾರಿಸಿ ನಾಟುವ ರೂಢಿ ಇದೆ. ಬೆರ್ಚುಗಳನ್ನು ಮಾನವ ಆಕೃತಿಯಲ್ಲಿ ತಯಾರಿಸಿಡುವುದು ದಕ್ಷಿಣ ಕೇರಳದಲ್ಲಿ ಹೆಚ್ಚಿನವು 'ಗುಳಿಗ'ನ ಅಥವಾ ಇನ್ನಾವುದಾದರೂ ಭಯಾನಕ ರೂಪದ ಮುಖವಾಗಿರುತ್ತದಲ್ಲದೆ. ತೆಯ್ಯಂನ ಮುಖವರ್ಣಿಕೆಯನ್ನು ನೆನಪು ಮಾಡಿಕೊಡುವ ರೀತಿಯಲ್ಲಿ ಬರೆದು ರಚಿತವಾಗುತ್ತದೆ.

ಬೆರ್ಚುಗಳ ಬದಲು ಕೆಲವೊಂದು ಬರಹಗಳನ್ನು ತೋರುವಂತೆ ಬರೆದಿಡುವುದು ಕೇರಳದ ಉದ್ದಕ್ಕೂ ಕಾಣಿಸುತ್ತದೆ. 'ಕರಿಂಗಣ್ಣಾ ಠೋ' (ಕರಿಂಗಣ್ಣುಳ್ಳವನೇ ನೋಡುಬೇಡಾ), ಕರಿಂಗಣ್ಣಾ ನೋಕಲ್ಲೇ (ಕರಿಂಗಣ್ಣುಳ್ಳವನೇ ನೋಡಬೇಡಾ), 'ನೋಕ್ಕುನ್ನವನ್ಱೆ ಕಣ್ಣು ಕುತ್ತಿ ಕುತ್ತಿಪ್ಪೋಟ್ಟೇ' (ನೋಟಗಾರನ ಕಣ್ಣು ಕಿತ್ತು ಹೋಗಲಿ) ಎಂದೆಲ್ಲ ಬರೆದಿಡಲಾಗುತ್ತದೆ.

ಗಬ್ಬದ ದನವನ್ನು ಹೊರಗೆ ಕೊಂಡುಹೋಗುವಾಗ ಅಳ್ಳಗೋ ಹಣೆ ಮೇಲೊ ಸುಣ್ಣದಿಂದ ಒಂದು ವೃತ್ತ ಬರೆದು ಅದಕ್ಕೆ ತಾಗಬಹುದುದಾದ ಕೆಟ್ಟದೃಷ್ಟಿಯನ್ನು ತಡೆಯಲು ಮುಂಜಾಗರೂಕತೆ ಕೈಗೊಳ್ಳುವರು. ಮಂತ್ರವಾದಿಯ ಮೂಲಕ ದಾರವನ್ನು ಜಪಿಸಿ ಕಟ್ಟುವುದು. ಶಂಖ ದಾರ ಜಪಿಸಿ ಕಟ್ಟುವುದು, ತಾಳೆಯೋಲೆಯಲ್ಲಿ ಬರೆದ ಯಂತ್ರಗಳನ್ನು ಕಟ್ಟುವುದು ಮೊದಲಾದ ವಿಭಿನ್ನ ಮಾರ್ಗಗಳನ್ನು ಸಾಕುಪ್ರಾಣಿಗಳಿಗೆ ದೃಷ್ಟಿತಾಗುವುದನ್ನು ತಡೆಯಲು ಹಿಡಿಯುವುದುಂಟು. ಗಬ್ಬದ ದನ ಮಲಗುವ ಕೊಟ್ಟಿಗೆಯ ಮುಂದೆ ಕಳ್ಳಿಯ ಗೆಲ್ಲನ್ನೊ, ಹಿಡಿಸೂಡಿ(ಪೊರಕೆ)ಯನ್ನೊ ತೂಗುಹಾಕುವುದು ಹೆಚ್ಚು ಪ್ರಚಾರವಿರುವ ಇನ್ನೊಂದು ಪ್ರತಿವಿಧಿ.

ಮನೆಯ ನಿರ್ಮಾಣವನ್ನು ತೊಡಗುವಾಗಿನಿಂಲೆ ದೃಷ್ಟಿತಾಗುವುದನ್ನು ತಡೆಯುವುದಕ್ಕಿರುವ ಮುಂಜಾಗರೂಕತೆ ವಹಿಸುವುದು ಸಾಮಾನ್ಯವಾಗಿ ಕಾಣಿಸುವ ಸಂಗತಿ. ಕೆಲಸ ಸಾಗುವುದು ಇತರರಿಗೆ ಕಾಣದಿರಲು ಮರೆ ಕಟ್ಟುವುದು, ಬೆರ್ಚುಗಳನ್ನೊ, ಕಳ್ಳಿಗಿಡಗಳನ್ನೊ ಅದರ ಮುಂದೆ ಇಡುವುದು ಇತ್ಯಾದಿ ಕಣ್ಣಿಗೆ ಕಾಣಿಸುವ ಪ್ರತಿವಿಧಿಗಳು.

ಮನೆಯ ಕಟ್ಟೋಣ ಕೆಲಸ ಮುಗಿದಾಗ ಗಣಹೋಮದಲ್ಲಿ ಪೂಜಿಸಿ ತಂದ, ಅಥವಾ ಹಾಗೆ ಮಾಡದ ಕುಂಬಳ ಕಾಯಿಯಲ್ಲಿ ಮುಖಬರೆದು ಎದುರಿನಲ್ಲಿ ತೂಗಹಾಕುವುದು ಹಿಂದುಗಳು ಹೆಚ್ಚಾಗಿ ಅನುಷ್ಠಸುವ ಒಂದು ಪ್ರತಿವಿಧಿ. ಕಳ್ಳಿಗಿಡ ಕಟ್ಟುವುದು, ಕೌತುಕಪೂರ್ಣ ಪ್ರತಿಮೆ ಇಡುವುದೂ ಇದಕ್ಕೆಯೇ.

ವಾಹನಗಳನ್ನು ದೃಷ್ಟಿಮುಟ್ಟುವುದರಿಂದ ಪಾರುಮಾಡಲು ಕಪ್ಪು ಕಂಬಳಿಯ ದಾರ, ನಿಂಬೆಹಣ್ಣಿನ ಆಕೃತಿಯ ಉಂಡೆ, ನಿಂಬೆ ಮತ್ತು ಹಸಿಮೆಣಸು ಕೋದುಕಟ್ಟಿದ್ದು, ವ್ಯಾಳೀಮುಖ, ಭೀಕರ ರೂಪ ಇತ್ಯಾದಿಯನ್ನು ತೂಗಿಕಟ್ಟುವುದುಂಟು. ತಮಿಳುನಾಡಿಗೆ ನಿರಂತರ ಹೋಗಿಬರುವ ಲಾರಿಗಳಿಗೆ ಮುಂದಕ್ಕೂ ಹಿಂದಕ್ಕೂ ಬರೆದಿಡುವ ಚಿತ್ರಗಳು, 'God is Love, God Bless Us', 'ಪುಂಜಿರಿಯಿಲ್ ವಂಜನ ಅರುದ್' (ಮುಗುಳು ನಗೆಯಲ್ಲಿ ವಂಚನೆ ಕೂಡದು), 'ಆರುಂ ಅನ್ಯರಲ್ಲ' (ಯಾರೂ ಅನ್ಯರಲ್ಲ) ಮೊದಲಾದ ಕೌತುಕ ಪೂರ್ಣ ವಾಕ್ಯಗಳು ಇವು ದೃಷ್ಟಿತಾಗುವದನ್ನು ತಡೆಯುವ ಧರ್ಮ ಉಳ್ಳವುಗಳೇ ಆಗಿವೆ. ಮನುಷ್ಯನ ಸಂಪತ್ತಿಗೆ ಎಂಬಂತೆ ಕಲಾಕೃತಿಗಳಿಗೂ ದೃಷ್ಟಿತಾಗುವುದು ಉಂಟೆಂಬ ನಂಬಿಕೆ ಕೇರಳದಲ್ಲೂ ಕಾಣಿಸಿವ 'ಕೋಮಾಳಿ' (ವಿದೂಷಕ) ಇದಕ್ಕೆಪುರಾವೆ. ಸರ್ಕಸ್ಸಿನ ಕ್ಲೌನ್ನೂ ದೃಷ್ಟಿತಾಗುವುದನ್ನು ತಡೆಯುವ ಅದಕ್ಕಾಗಿ ದೃಷ್ಟಿಯನ್ನು ತನ್ನೆಡೆಗೆ ಸೆಳೆಯುವ ಉದ್ದೇಶವಿದೆ. ತಿರುವನಂತಪುರದ ಶ್ರೀ ಪದ್ಮನಾಭ ದೇವಸ್ಥಾನದ 'ಆಜೂಟ್ಟು' (ಜಲಕೇಳಿ) ಮೆರವಣಿಗೆಯಲ್ಲಿ ಮಹಾರಾಜನಿಗೆ ದೃಷ್ಟಿತಾಗದಿರಲು ಒಂದು 'ಆಜಾಟ್ಟು ಮುಂಡನ್' ಮುಂದೆ ನಡೆಯುವುದು ಪದ್ಧತಿ.

ದೃಷ್ಟಿತಾಗುವುದರ ಸಂಬಂಧವಾದ ಹಾಡುಗಳನ್ನು 'ಕಾಣಿಕ್ಕಾರ್' ಜನಾಂಗದ 'ಕೊಕ್ಕರಪಾಟು', 'ಮಲಯನ್' ಜನಾಂಗದ 'ಕಣ್ಣೇಜ್ ಅನುಷ್ಠಾನ'ದಲ್ಲೂ ಕಾಣಬಹುದು. 'ಕಣ್ಣೇಜುಪಾಟು' ಗಳಿಂತ 'ಕರಿಂಗಣ್ಣಿ' ಕಥೆಗಳೆ ಹೆಚ್ಚು ಪ್ರಚಾರದಲ್ಲಿರುವುದು ಪರಂಪರೆಯಾಗಿ ಪೀಳಿಗೆಗಳಿಗೆ ಹರಿದು ಬರುವ ಅಸಂಖ್ಯ 'ಅನುಭಕತೆ'ಗಳು ಒಂದೊಂದು ಪ್ರದೇಶಗಳಲ್ಲೂ ಕಾಣಸಿಗುತ್ತವೆ.

ಕರಿಂಗಣ್ಣರೂ ಕರಿನಾಲಗೆಯವರೂ

'ಕಣ್ಣುತಾಗು' ಮತ್ತು 'ನಾಲಗೆತಾಗು'ಗಳನ್ನು ತಲಪಿಸುವವರ ಹೆಸರು 'ಕರಿಂಗಣ್ಣನ್ಮಾರ್' ಮತ್ತು 'ಕರಿನಾಕ್ಕನ್ಮಾರ್'(ನಾಕ್ಕನ್–ನಾಲಗೆಯುಳ್ಳವ). ಕರಿಂಗಣ್ಣರಿಗೆ ಬಾಹ್ಯವಾಗಿ ಯಾವುದೆ ಪ್ರತ್ಯೇಕತೆ ಇರುವುದಾಗಿ ನಂಬಿಯಿಲ್ಲ. ಆದರೆ 'ಕರಿನಾಕ್ಕನ್'ಗಳಿಗೆ ಅವರ ನಾಲಗೆಯ ಅಡಿಯಲ್ಲಿ ಕಪ್ಪು ಮಚ್ಚೆ ಇರುವುದಾಗಿ ಕೆಲವರು ಭಾವಿಸುತ್ತಾರೆ. ಅನುಭವದಿಂದ ಒಮ್ಮೆ ಗುರುತಿಸಿಬಿಟ್ಟರೆ 'ಕರಿಂಗಣ್ಣ'ರಲ್ಲೂ 'ಕರಿನಾಕ್ಕ'ರಲ್ಲೂ ಮಾತನಾಡುವಾಗ ಜನರು ತುಂಬಾ ಎಚ್ಚರ ವಹಿಸತೊಡಗುತ್ತಾರೆ. ಅವರಿಗೆ ತಪ್ಪುಗ್ರಹಿಎ ಬರುವ ಹಾಗೆ ಮಾಡಲು ಮತ್ತು ಸಾಧ್ಯವಿರುವಷ್ಟೂ ವಿಷಯವನ್ನಡಗಿಸಲು ಜನರು ಶ್ರಮಿಸುವರು. ಮಕ್ಕಳನ್ನು ಕರಿಂಗಣ್ಣರ ಮುಂದೆ ತರಲಾರರು. ಹೀಗೆಲ್ಲ ಹೌದಾದರೂ ಹಲವರಿಗೆ ಅವರೊಂದಿಗೆ ಸಹಾನುಭೂತಿಯೂ ಇದೆ. ಲೆಕ್ಕವಿಲ್ಲದಷ್ಟು 'ಕರಿಂಗಣನ್ ಕಥೆ'ಗಳು ಕೇರಳದಲ್ಲಿ ಆದ ಇದಿರೇಟು, ಕರಿಂಗಣ್ಣನು ಬಂಡೆಯನ್ನು ಒಡೆದುದು ಇತ್ಯಾದಿ ಕೆಲವು ಪ್ರಸಿದ್ಧ ಕತೆಗಳು.

ಕಣ್ಣೇಉು ವಿಭಿನ್ನ ಸಂಸ್ಕೃತಿಗಳಲ್ಲಿ

ಕಣ್ಣೇಜಿಗೆ ಜನರನ್ನು ಕೊಲ್ಲುವ ಶಕ್ತಿ ಇದೆ ಎಂದು ಅರಬಿ ಜನರು ನಂಬುತ್ತಿದ್ದರು. ಆದರೆ ರೋಮಿನಲ್ಲಿ ಕರಿಂಗಣ್ಣರನ್ನು ದಂಡಿಸಲು ಪ್ರತ್ಯೇಕ ಕಾಯಿದೆಗಳೇ ಇದ್ದವು. ಮಕ್ಕಳಿಗೂ, ಸಾಕುಪ್ರಾಣಿಗಳಿಗೂ 'ದೃಷ್ಟಿತಾಗು' ಹೆಚ್ಚು ಎಂಬ ನಂಬಿಕೆ ಗ್ರೀಸ್, ಅಯರ್ಲಂಡ್, ಸ್ಕಾಟ್ಲಂಡ್, ರೋಮ್ ಮೊದಲಾದ ರಾಷ್ಟ್ರಗಳಲ್ಲಿ ನೆಲಸಿದೆ. ಶ್ರೀ ಲಂಕೆಯ ಸಿಂಹಳಿಗಳಲ್ಲೂ ಮುಸ್ಲಿಮರಲ್ಲೂ 'ದೃಷ್ಟತಾಗು' ನಂಬಿಕೆ ಮತ್ತು ಅನುಷ್ಠಾನಗಳು ನೆಲಗೊಂಡಿರುವುದಾಗಿ

ಸೂಚನೆಗಳಿವೆ. ಮುಸ್ಲಿಂ ರಾಷ್ಟ್ರಗಳಲ್ಲಿ 'ದೃಷ್ಟಿತಾಗು' ಸಂಭವಿಸದಿರಲು ಖುರಾನ್ ಸಾಲುಗಳನ್ನು ಬರೆದ ತಗಡನ್ನು ಮನೆಯಲ್ಲಿ ನೇತುಹಾಕುವುದು ಪದ್ಧತಿ. ಪೋಪ್ ಪಾಯಸ್ ದ್ವಿತೀಯರಿಗೆ ದೃಷ್ಟಿಸೋಕಿದುದರ ಬಗೆಗೆ ವಿಸ್ತೃತವಾಗಿ ಬರೆದುದು ಇಟಾಲಿಯನ್ ಚರಿತ್ರೆಯಲ್ಲಿ ಕಾಣಿಸುತ್ತದೆ. ಒಂಟೆಗಳಿಗೆ ದೃಷ್ಟಿತಾಗದಿರಲು ಮತ್ತು ತಾಗಿದ ದೋಷ ಕಳೆಯಲು ಅರಬಿಗಳು ಅಸಂಖ್ಯ ಅನುಷ್ಠಾನ ಉಳ್ಳವರಾಗಿದ್ದಾರೆ. ದೃಷ್ಟಿತಾಗಿದ ಧಾರಾಳ ಒಂಟೆಗಳಿಗೆ ಚಿಕಿತ್ಸೆ ನಡೆಸಿ ಗುಣಮಾಡಿದ ಕರ್ನಲ್ ಟಿ.ಇ.ಲಾರೆನ್ಸ್‌ಗೆ ಅರಬಿಗಳು 'ಲಾರೆನ್ಸ ಆಫ್ ಅರೇಬಿಯ' ಎಂಬ ಬಿರುದನ್ನು ನೀಡಿದ್ದರು.

ಬುಡಕಟ್ಟು ಜನರಲ್ಲಿ ಪ್ರಬಲವಾಗಿದ್ದ 'ದೃಷ್ಟಿತಾಗು' ನಂಬಿಕೆ ಮತ್ತು ಅನುಷ್ಠಾನಗಳು ಆಧುನಿಕ ಕಾಲದಲ್ಲಿ ಮಾಯವಾಗುತ್ತಿರುವುದಾಗಿ ಜಾನ್ ರಾಬರ್ಟಹೇಳುತ್ತಾರೆ. ೧೯೭೬ರಲ್ಲಿ ನಡೆಸಿದ ಒಂದು ಸಮೀಕ್ಷೆ ಮೂಲಕ 'ದೃಷ್ಟಿತಾಗು' ನಂಬಿಕೆ ನೆಲೆಸಿದ್ದ ವಿಶ್ವದ ೧೮೬ ಸಂಸ್ಕೃತಿಗಳಲ್ಲಿ ಸಧ್ಯ ೩೬ ಸಂಸ್ಕೃತಿಗಳಲ್ಲಿ ಮಾತ್ರ ಅದು ಪ್ರಚಾರದಲ್ಲದೆ ಎಂದು ಅವರು ಕಂಡುಕೊಂಡಿದ್ದರು. ಅವುಗಳಲ್ಲಿ ಮುಖ್ಯವಾದವು ಯೂರೋಪಿನಲ್ಲೂ ಭಾರತದಲ್ಲೂ ಇವೆ.

ವಿಶ್ಲೇಷಣೆ

'ದೃಷ್ಟಿತಾಗು'ವುದರ ಹಿಂದಿರುವ ಮಾನಸಿಕ ವ್ಯಾಪಾರ ಏನು ಎಂಬುದರ ಕುರಿತ ಅನ್ವೇಷಣೆ, ಐಶ್ವರ್ಯ ಬರುವಾಗ ಮನಷ್ಯನಲ್ಲಿ ಬರುವ ಭಯದ ಕಡೆಗೆ ನಮ್ಮನ್ನು ತಲುಪಿಸುತ್ತದೆ. ಸಂಪತ್ತೋ, ಸೌಂದರ್ಯವೋ ಹೆಚ್ಚಿನ ಪ್ರಮಾಣದಲ್ಲಿ ಇರುವಾಗ ಇತರವಾಗ ಇತರರಿಗೆಅದರಲ್ಲಿ ಆಸಕ್ತಿ ಉಂಟಾಗುವುದೆಂದೂ ಅದು ಅಸೂಯೆಯಾಗಿ ಬೆಳೆದೀತೆಂಬ ಚಿಂತೆಗಳು ಹೆಚ್ಚಿನ ಜನರ ಮನಸ್ಸಿನ ಒಳತಲದಲ್ಲಿ ಇರುತ್ತವೆ. ಈ ಭೀತಿ, ಆಶಂಕೆಗಳು ನಸ್ಸಿನ ಸಮತೋಲನವನ್ನು ತಪ್ಪಿಸುತ್ತದೆ. ದೃಷ್ಟಿತಾಗುವುದರ ಸಂಬಂಧವಾದ ನಂಬಿಕೆ ಈ ವಸ್ತುಸ್ಥಿತಿಗಳನ್ನು ಅವಲಂಬಿಸಿ ನೆಲೆನಿಂತಿದೆ ಎಂದು ತೋರುತ್ತದೆ.

ಒಂದು ವಸ್ತುವಿನಲ್ಲಿ ಇಷ್ಟವಾಯಿತಾದರೆ ಅದು ತನ್ನದಾಗಬೇಕೆಂದು ತೋರುವುದು ಸ್ವಾಭಾವಿಕವಷ್ಟೆ? ಎಲ್ಲ ಐಶ್ವರ್ಯಗಳೂ ಸುಖಗಳೂ ತನ್ನದಾಗ ಬೇಕೆಂಬ ಮೂಲಭೂತ ಕಾಮನೆಯೆ ಅದಕ್ಕೆ ಕಾರಣವಾಗುವುದು. ಸುಖಾಸಕ್ತಿಯಲ್ಲಿ ಅಧಿಷ್ಠಿತವಾದ ಈ ಆಗ್ರಹವನ್ನು 'ಕೊದಿ' ಎಂದು ಕರೆಯಬಹುದು. ತನಗೆ ದಕ್ಕದೆಂದು ಖಚಿತವಾದ ಅನ್ಯನ ವಸ್ತು ಇಲ್ಲವಾದುದನ್ನು ಕಾಣಲು ಇರುವ ಅತ್ಯಾಸೆಯೆ ಇದರ ಋಣಾತ್ಮಕ ಬೆಳವಣಿಗೆ. ಇದೇ ಅಸೂಯೆ. ಆದರೆ ಸಮೂಹಜೀವಿಯಾದ ಮನುಷ್ಯ ಈ ಓಳಮನಸ್ಸಿನ ವಿಕಾರದ ಉದಾತ್ತೀಕೃತ ರೂಪವೇ ಪ್ರಶಂಸೆ. ಅಂದರೆ ಒಬ್ಬರು ಒಂದನ್ನು ಆಶಿಸುವಾಗ ಅದರ ಸಂಬಂಧ ಅಸೂಯೆ ಹೊಂದಿರುವಾಗಲೂ ಅದು ನೇರವಾಗಿ ಪ್ರವರ್ತಿಸುವ ಬದಲು ಅದನ್ನು ಪ್ರಶಂಸಿಸುವ ಕೆಲಸ ಸಾಗುತ್ತದೆ. ಇಲ್ಲಿ ಸಂಭವಿಸುವುದು ಪ್ರಾಕೃತಿಕ ವಾಸನೆಯ ಉದಾತ್ತೀಕರಣ. ಒಟ್ಟಿನಲ್ಲಿ ಪ್ರಶಂಸೆಗಳಲ್ಲಿ ಇರುವುದು ಉದಾತ್ತಿಕರಿಸಿದ ಅಭಿವಾಂಛೆಯೂ, ಅಸೂಯೆಯೂ ಆಗಿವೆ. ಇದನ್ನು ಗುರುತಿಸಿದ ತಿಳಿವಿನ ಒಡೆಯರಾದ ಸಾಂಘಿಕತೆಗಳು ಖಂಡಿತವಾಗಿಯೂ ಪ್ರಶಂಸೆಗಳ ಬಗೆಗೆ ಹೆದರಿಕೊಂಡಿರಬೇಕು. ಹೊಗಳಿಕೆಯ ಹಿಂದೆ ಅವಿತಿರುವ ಅಸೂಯೆಯನ್ನು ವಿನಾಶಕಾರಿಯಾದ ಒಂದು ಶಕ್ತಿಯಾಗಿಯೆ ಗುರುತಿಸಿರಬೇಕು. ಮಾತಿನಲ್ಲಿ ಇರುವಂತೆ ನೋಟದಲ್ಲೂ ಅಸೂಯೆಯ ಬಹಿಸ್ಫುರನ ಸಂಭವಿಸಬಹುದೆಂಬ ಭಯ ಮುಂದುವರಿದು ಅವನಲ್ಲಿ ಉಂಟಾಗಿರ ಬಹುದೆಂದು ಗ್ರಹಿಸಲು ಸಾಧ್ಯವಿದೆ. ಹೀಗೆ ಇತರರ ನೋಟ ಕೊಡ ತಮಗುಂಟಾಗುವ ನಷ್ಟಕ್ಕೆ ಹೇತುವೆಂದು ಕಾಣಲು

ಬುಡಕಟ್ಟು ಗುಂಪುಗಳು ಪ್ರೇರಿತವಾದುವೆಂದು ಅರ್ಥವಿಸಬಹುದು. ಇಲ್ಲಿ ನೋಟವೂ ಅಸೂಯೆಯೂ ಪರಸ್ಪರ ಸಂಬಂಧಿಸಿಕೊಂಡವುಗಳು. ಈ ವಿಧಾನ ನಮ್ಮ ಕೆಲ ಗರಾಂಇಣ ಶಬ್ದ ಪ್ರಯೋಗಗಳಲ್ಲಿ ಪ್ರಕಟವಾಗಿಯೆ ಇದೆ. 'ಅಸೂಯೆ' ಕುರಿತಾದ ಗ್ರಾಮೀಣ ಪ್ರಯೋಗಗಳಲ್ಲಿ ಒಂದು 'ಕಣ್ಣುಕಡಿ'(ಕಣ್ಣುಕಚ್ಚು). ಜನರು ಇಲ್ಲಿ 'ನೋಟ'ವನ್ನೂ 'ಅಸೂಯೆ'ಯನ್ನೂ ಒಂದರಲ್ಲಿ ಒಂದನ್ನು ಕೂರಿಸುತ್ತಾರೆ. ಪಾಶ್ಚಾತ್ಯ ಸಂಸ್ಕೃತಿಯಲ್ಲೂ ಈ ಬಗೆ ಭಾಷಾಪರವಾದ ಪುರಾವೆಗಳಿವೆ. 'ಅಸೂಯೆ' ಎನ್ನುಲು ಇರುವ ಇಂಗ್ಲಿಷ ಪದ envy ಎಂಬುದು 'ನೋಡು' ಎಂಬರ್ಥದ 'envidere' ಎಂಬ ಲಾಟಿನ್ ಪದದಿಂದ ನಿಷ್ಪನ್ನ ಎನ್ನಲಾಗಿದೆ.

ಪ್ರಶಂಸೆ, ನೋಟಗಳಿಂದ ಹೊರಕ್ಕೆ ಬರುವ ಮನುಷ್ಯನ ಅಸೂಯೆ ವಿನಾಶಕಾರಿ ಎಂಬ ವಿಶ್ವಾಸದ ಫಲವೇ 'ದೃಷ್ಟತಾಗು' ಎಂಬ ಸಂಕಕ್ಪವೆಂದು ತಿಳಿಯಬಹುದು. ಅಸೂಯೂಜನ್ಯವೂ, ಐಶ್ವರ್ಯ ನಾಶಕವೂ ಆದ ನೋಟಕ್ಕೂ ಪ್ರಶಂಸೆಗೂ ಸಾಂಘಿಕತೆ ಕಲ್ಪಿಸಿರುವ ಹೆಸರು 'ಕಣ್ಣೇಜ್'(ದೃಷ್ಟತಾಗು).

ಪಾಶ್ಚತ್ಯ ಸಂಸ್ಕೃತಿಗಳಲ್ಲಿ 'ದೃಷ್ಟತಾಗು' ವುದನ್ನು ಮನಃ ಶಾಸ್ತ್ರೀಯವಾಗಿ ವೀಕ್ಷಿಸಲು ಶ್ರಮಿಸಿರುವ ಎರಿಕ್ಸನ್, ಸ್ಪೂನರ್ ಮೊದಲಾದವರ ಕಂಡುಕೊಳ್ಳುವಿಕೆ ಮೇಲೆ ಸೂಚಿಸಿದ ವಿವೇಣೆಯೊಂದಿಗೆ ಸಹಮತ ಉಳ್ಳದ್ದಾಗಿದೆ. ಈ ನಂಬಿಕೆಯನ್ನು ಸೂಚಿಸಲು Evil Eye ಎಂಬಂತೆ Eye Bite ಎಂಬ ಒಂದು ಪದವೂ ಪಾಶ್ಚಾತ್ಯರಲ್ಲಿದೆ. ಇಲ್ಲೂ ಆಂತರಿಕ ಆಧಾರ ಅಸೂಯೆಯೆ ಆಗಿದೆ.

ಕಣ್ಣುತಾಗುವುದರಲ್ಲಿ ಅಂತರ್ಭವಿಸಿರುವ ಅಸೂಯೆಯೆ ತಡೆಯಬೇಕಾದ ಅಂಶ. ಆದರೆ ಅದು ಅಮೂರ್ತವೂ ನಿರ್ಣಯಕ್ಕೆ ಸಿಗದಿರುವಂಥದೂ ಆಗಿದೆ. ಆದ್ದರಿಂದ ಹೊಟ್ಟೆಕಿಚ್ಚನ್ನು ಇಲ್ಲದಹಾಗೆ ಮಾಡಲು ಅಥವಾ ಹೊಟ್ಟೆಯುರಿಯುವ ವ್ಯಕ್ತಿಯನ್ನು ಕಂಡುಹಿಡಿದು ಶಿಕ್ಷಿಸಲು ಸಾಧ್ಯವಿಲ್ಲ. 'ಅಸೂಯೆಗೂ ಬಕ್ಕತಲೆಗೂ ಮದ್ದಿಲ್ಲ' (ಅಸೂಯಕ್ಕುಂ ಕಷಂಡಿಕ್ಕುಂ ಮರುನ್ನಿಲ್ಲ) ಎಂಬ ಮಾತು ಇದರೊಂದಿಗೆ ಇರಿಸಿ ಆಲೋಚಿಸುವಂಥದ್ದಾಗಿದೆ. ಹೊಟ್ಟೆಕಿಚ್ಚಿನವನಂತೆ ಹೊಟ್ಟೆಕಿಚ್ಚನ್ನೂ ಅಳಿಸಲು ಸಾಧ್ಯವಿಲ್ಲ ಎಂದು ಇದು ವ್ಯಕ್ತಗೊಳಿಸುತ್ತದೆ ಹೀಗೆ ನೊಟುವಾಗ ಅಸೂಯೆಯ ವ್ಯಕ್ತರೂಪದಗಳಾದ 'ನೋಟ' 'ಪ್ರಶಂಸೆ' ಇತ್ಯಾದಿಯನ್ನು ತಡೆಯಲಾದರೂ ಸಾಧ್ಯವಾದರೆ 'ದೃಷ್ಟಿತಾಗು' ವುದರ ಕುರಿತಾದ ಭಯವನ್ನು ನಿವಾರಿಸಲು ಸಾಧ್ಯವಾಗುತ್ತದೆ ಇದರ ಫಲ ಸ್ವರೂಪವೇ ದೃಷ್ಟಿ ದೇವಿ ಪರಿಹಾರೋಪಾಯಗಳು ಚೆರ್ಚುಗಳು, ಹಾಸ್ಯಗಾರರು ಕೋರೆ ಮೊದಲಾದ ವಿಭಿನ್ನ ಮಾರ್ಗಗಳಲ್ಲಿ ವಿಭಿನ್ನ ಪ್ರತಿಕಾತ್ಮಕ ರೀತಿಗಳ ಮೂಲಕ ನೊಟವನ್ನು ಪ್ರಶಂಸೆಯನ್ನು ತಡೆಯುವುದೇ ಫಲಿತಾಂಶ ಇದು ದೃಷ್ಕಿತಾಗುವುದರ ಕುರಿತ ಪರಂಪರಾಗತವಾದವುಗಳು ಮನಸ್ಸಿನ ಆಳಗಳಲ್ಲಿ ತಂಗಿಕೊಳ್ಳುವುಗಳು ಆದ ಭಯಗಳನ್ನು ನಿವಾರಿಸಲು ನೆರವಾಗುತ್ತವೆ ಹೀಗೆ ಅಸೂಯೆ ಹುಟ್ಟಿಸುವ ಒಂದು ಆಶಂಕೆಯೂ ಆ ಆಶಂಕೆಯನ್ನು ಪ್ರತಿರೋಧಸಿಸುವುದಕ್ಕಿರುವ ತಂತ್ರವೂ, ಆಶಂಕೆ ಯಥಾರ್ಥವಾಗಿ ಕಾರ್ಯದಲ್ಲಿ ಸಂಭವಿಸಿತು ಎಂದು ಅನಿಸಿದರೆ ಕೈಗೊಳ್ಳುವ ಪ್ರತಿವಿಧಿ ಮಾರ್ಗಗಳೂ ಸೇರಿರುವಂಥದು 'ಕಣ್ಣೆ'(ದೃಷ್ಟಿತಾಗು) ಎಂಬ ಜಾನಪದ ರೂಪ

ಮರಣಾನಂತರ ಜೀವನ (ನಂಬಿಕೆ)

ಕೆ.ಪಿ. ಮೋಹನನ್

ಟಿಪ್ಪಣಿ

ಕಾಣಸಿಗುವ ಮತ್ತು ಸಿಗದ ಭೌತಿಕ ಜೀವನದ ವಾಸ್ತವಗಳ ಹಿಂದುಗಡೆ ನಂಬಿಕೆಯದೇ ಆದ ದೊಡ್ಡದೊಮದು ಲೋವಿಕೆ, ವಿಶೇಷತ ಅನುಷ್ಠಾನಾಚಾರಗಳ ಹಿಂದುಗಡೆ ಸಾಂಘಿಕತೆಯದೆನಿಸುವ ಯಾವೊಮದು ಕೆಲಸದ ಹಿಂದುಗಡೆಯೂ ಅದರ ಸ್ವಮತವಾದ ತರ್ಕವೋ, ನಂಬಿಕೆಯೋ ಕೆಲಸ ಮಾಡುತ್ತಿರಬಹುದು. ನಂಬಿಕೆ ಇರುವಲ್ಲಿ ಮತ್ತೆ ತರ್ಕದ ಅವಶ್ಯಕತೆ ಇರುವುದಿಲ್ಲ ದೇವರು ಉಮಟೇ ಎಂಬ ಪ್ರಶ್ನೆಗೆ 'ಉಂಟೆಮದೇ ವಿಶ್ವಾಸ' ಎಂಬ ಯುತ್ತರ ದೊರೆತರೆ ಈ ಕುರಿತು ಇನ್ನು ತರ್ಕಕ್ಕೆ ಪ್ರಶಸ್ತಿ ಇರಲಾರದು ನಂಬಕೆಯ ವಿಷಯದಲ್ಲಿ ತಪ್ಪು – ಸರಿ ಎಂಬುದಿಲ್ಲ ಅದರಿಂದಾಗಿಯೆ ವಿಶ್ವಾಸ ಮತ್ತು ಅಂಥವಿಶ್ವಾಸ ಬೇರೆ ಬೇರೆ ಇಲ್ಲ. ಮೇಲು ವರ್ಗದವರೆಂದು ತಾವೇ ನಂಬುವ ಜನರು ಸ್ವಂತ ವಿಶ್ವಾಸದಿಂದ ಭಿನ್ನವಾದುದೆಲ್ಲವೂ ಅಂಧವಿಶ್ವಾಸ ಎಂದು ಭಾವಿಸುವರು ಅದರಿಂದ ಬ್ರಿಟಿಷರು ಇಲ್ಲಿನ ವಿಶ್ವಾಸಗಳನ್ನೆಲ್ಲ ಸಗಟಾಗಿ ಅಂಧವಿಶ್ವಾಸ ಎಂದು ಗ್ರಹಿಸಿದಾದ, ಇಲ್ಲಿನ ಸವರ್ಣರು (ಮೇಲುವರ್ಗದ) ಜನರು 'ಕೀ___ ಳ' ರಾದ (ಕೆಳವರ್ಗದ) ಜನರು ನಂಬಿಕೆಗಳನ್ನು ಅಂಧವಿಶ್ವಾವೆಂದು ಹೇಳುತ್ತರೆ. ಕೋಡುಜ್ಞಾಲ್ಲೂರ್ ದೇಗುವಲದ ಸವರ್ಣರು ಕ್ಷೇತ್ರಾಚಾರಗಳು ಮಹತ್ತಾದುದೂ, ಅವರ್ಣರಾದ ಜನರ ಕ್ಷೇತ್ರಾಚಾರಗಳು ಅಂಧ ವಿಶ್ವಾಸವೆಂದು ವಾದವುಮಟಾಗುವುದು ಮೇಲ್ಕಾಣಿಸಿದ ಕಾರಣಗಳಿಂದಾಗಿದೆ.

ಮರಣ ಅನಿವಾರ್ಯವೆಂದು ಎಲ್ಲಾ ಸಾಂಘಿಕತೆಗಳಿಗೂ ಗೊತ್ತಿದೆ ಆದರೆ ಮರಣವಾಗುವರೊಂದಿಗೆ ಏನು ಸಂಭವಿಸುತ್ತದೆ ಎಂಬ ವಿಷಯದಲ್ಲಿ ಒಂದೊಂದು ಸಾಂಘಿಕತೆಯವರೂ ವಿಭಿನ್ನ ಅಭಿಪ್ರಾಯದವರು ಮರಣದ ಮೂಲಕ ಸಂಭವಿಸುವ ವಿಷಯಗಳ ಕುರಿತು ಒಂದು ಸಾಂಘಿಕತೆಗಿರುವ ನಂಬಿಕೆಯ ತಳಹದಿಯ ಮೇಲೆಯೆ ಮರಣಾನಂತರ ಚಡಂಗಗಳು ಕ್ರಮೀಕರಣಗೊಂಡಿರುವುದು ಇದರಿಂದ ಈ ವಿಷಯದಲ್ಲಿ ವಿಭಿನ್ನ ವಿಶ್ವಾಸುವುಳ್ಳ ಒಂದು ಸಮುದಾಯದ ಒಬ್ಬಾತನಿಗೆ ಮರಣಾ ನಂತರ ಆತನ ಸಾಂಘಿಕತೆಗೆ ಸೇರದ ಪದ್ದತಿಯ ಚಡಂಗಗಳನ್ನು ನಡೆಸಿದಾಗ ಅದು ಅಸಂಬದ್ದ ಎಂದು ಭಾವಿಸುತ್ತಾರೆ ಜನಾನಪದ ಮರಣಾ ನಂತರದ ಜೀವನದ ಎಲ್ಲಾ ಪಥ್ಯಗಳೂ ಸತ್ಯವೆಂದೂ ವಿಭಿನ್ನ ಪಥ್ಯಗಳು ಉಂಟಾಗುವುದು ವಿಭಿನ್ನ ಸಾಂಘಿಕತೆಗಳ ಸ್ವತ್ವವನ್ನೇ ತೋರಿಸುವುದು ಎಂದು ನಂಬುತ್ತದೆ.

ಭೌತಿಕವಾದ ಈ ಕೋಕದ ಆಚೆಗೆ ಲೊಕಗಳಿವೆ ಎಂಬು ಹಲವು ಸಾಂಘಿಕತೆಗಳು ನಂಬುತ್ತವೆ. ಆ ಬಗೆ ಲೋಕಗಳನ್ನು ಒಟ್ಟಿಗೆ ಸೇರಿಸಿಕೊಮಡೇ ಸಾಂಘಿಕತೆ ಜೀವನವನ್ನು ಕ್ರಮೀಕರಿಸಿರುವುದು. ಎಂಬುದರಿಮದ ಈ ಲೋಕಗಳೂ ನಿಜವೋ ಸುಳ್ಳೋ ಎಂಬ ಪ್ರಶ್ನೆ ಅವುಗಳನ್ನು ಕಾಡುವುದೇ ಇಲ್ಲ ಹುಟ್ಟುವುದಕ್ಕೆ ಮೊದಲು ಒಬ್ಬ ಎಲ್ಲಿದ್ದ ಎಂದೂ ಸತ್ತ ಬಳಿಕ ಆತ ಆನಾಗಿಬಿಡುತ್ತಾನೆ. ಎಂದು ಮನುಷ್ಯ

ಅನ್ವೇಷಿಸಿರುವುದಿದೆ ಒಂದೊಂದು ಸಾಂಘಿಕತೆಯ ಪರಿಸರ ಮತ್ತು ಲೋಕ ವಿಕ್ಷಣೆಗಳಿಗೆ ಅನುಸರಿಸಿ ವಿಭಿನ್ನವಾದ ಕಂಡುಕೊಳ್ಳುವಿಕೆ ಉಂಟಾದವು ಈ ಅರಿವೆಗೆ ಅನುಸಾರ ಆಚಾರಾನುಷ್ಠಾನಗಳು ಉಂಟಾದವು ಇದನ್ನು ಅನುಸರಿಸಿ ಜೀವನ ಸಂದರ್ಭಗಳು ಉಂಟಾದವು ಅದ್ದರಿಂದಲೇ ಯಾವುದಾದರೂ ಒಂದು ವಿಶ್ವಾಸದ ಕುರಿತಾದ ಅಧ್ಯಯನ ಸಾಂಘಿಕತೆಯ ಜೀವನವನ್ನು ಒಟ್ಟಾರೆಯಾಗಿ ಸಂಬಂಧಿಸಿದಕೊಂಡಿರುವ ಒಂದು ಕೆಲಸ ಆಗಿಬಿಡುವುದು.

ಕೇರಳದ ಒಂದು ಪ್ರತ್ಯೇಕ ಸಮುದಾಯದ ಪಿಷಾಕೊಡಿ ಸಮುದಾಯದ– ಮರಣಾನಂತರ ಜೀವನದ ಕುರಿತಾದ ಗ್ರಹಕೆಗಳು ಈ ಪ್ರಬಂಧದ ಮುಖ್ಯ ವಿಷಯ ಮರಣಾನಂತರ ಜೀವನದ ಕುರಿತಾದ ಗ್ರಹಿಕೆಗಳು ಮುಖ್ಯವಾಗಿ ಪ್ರತಿಫಲಿಸುವುದು ಮರಣಾನಂತರ ಚಡಂಗಗಳಲ್ಲಿ ಅದ್ದರಿಂದ ಅದನ್ನು ಬುನಾದಿ ಮಾಡಿಯೆ ಈ ಪ್ರಬಂಧ

ಸಂಪಾದಕ

ಮರಣಾನಂತರದ ಚಡಂಗಗಳು

(ಪಿಷಾರೊಡಿ ಸಮುದಾಯದಲ್ಲಿ)

ಮರಣ ಸುಮುರಾರಿ ನಿಶ್ಚಯಗೊಳ್ಳುವ ವೇಳೆ ಕೊನೆಯ ಮೂರು ಊರ್ಧ್ವಶ್ವಾಸಗಳಲ್ಲಿ ಮೂರನೆಯದು ನೆಲದಲ್ಲಿ ಹುಲ್ಲಿನಲ್ಲೊ, ಮಳಲಿನಲ್ಲೊ ಮಲಗಿದ್ದು, ಕೊಂಡು ಆಗತಕ್ಕದ್ದು ಎಂಬುದರಿಮದ ಅವರನ್ನು ಎತ್ತಿ ಮಲಗಿಸುತ್ತಾರೆ' ವಿಶ್ವಂಭರೇ' ಭಗವತಿ ಅಸ್ಯ ಪುರುಷಸ್ಯ ವಿಷ್ಣು ಸಾಯುಜ್ಯಂ ಕುರುಕುರು' ಎಂಬ ಮಂತ್ರವನ್ನು ಹೇಳುತ್ತಲೆ ಈ ಕ್ರಿಯೆ ಮರಣ ಹತ್ತಿರವಾದ ವ್ಯಕ್ತಿಯ ಬಲ ಕಿವಿಯಲ್ಲಿ ನಾರಾಯಣ ಮಂತ್ರವನ್ನು ಹೇಳುತ್ತಾರೆ. ಕಣ್ಣ ರೆಪ್ಪೆಗಳನ್ನು ಮೆತ್ತಗೆ ಮುಚ್ಚಿ ದೇಹದ ಬಿಸುಪು ಆರುವ ಮೊದಲು ಶರೀರವನ್ನು ಪದ್ಮಾಸನದಲ್ಲಿ ಪೂರ್ವಕ್ಕೆ ಮುಖಮಾಡಿ ಕುಳ್ಳಿರಿಸಿ ಬಟ್ಟೆಯಿಂದ ಮುಚ್ಚುತ್ತಾರೆ ಈ ಸಂದರ್ಭದಲ್ಲಿ ಗರಿಕೆ ಮತ್ತು ಕೃಷ್ಣ ಕಾಂತಿಯನ್ನು ಧರಿಸುವ ಹಾಗೆ ಮಾಡುತ್ತಾರೆ. ಈ ಪದ್ಮಾಸನದಲ್ಲಿ ಕುಳ್ಳಿರಿಸುವಿಕೆ ವೈಷ್ಣವ ಸನ್ಯಾಸಿತ್ವದ ಪರಂಪರೆಯ ಹಕ್ಕು ಸ್ಥಾನೆಯ ಸೂಚನೆಯಾಗಿದೆ ಈ ದೇಹವನ್ನು ಧಫನ ಮಾಡುವುದು ಪದ್ಧತಿ ಒಂದೂಕಾಲು'ಕೋಲು' ಅಳತೆಯ ಚೌಡಕ ಎರಡೂವರೆ ಕೋಲು ಆಳ ಇರುವ ಕುಣಿಯಲ್ಲಿ ಪೂರ್ವಕ್ಕೆ ಮುಖಮಾಡಿಕುಳ್ಳಿರಿಸುವುದು (ಇದಕ್ಕೆ ಮೊದಲು ಮಣ್ಣಿನಿಂದ ತಯಾರಿಸಿದ ಪೀಠಕ್ಕೆ ಪ್ರಾಣವನ್ನು ಹೊರಡಿಸಿ ಆವಾಹಿಸುವ ವಿದಿಯಿದೆ 'ಓಂ ನಮೋ ಭಗವತೇ ವಾಸುದೇವಾಯ ನಾರಾಯಣದಾಸ ಗೊತ್ತೇ . . . . (ಮೃತನ ಹೆಸರು ಹೇಳಿ) ನಾಮ ದಾಸ್ ಪ್ರೇತ್‌ಜೀವಾತ್ಮ ನೇ ನಮಃ ಎಂಬ ಮಂತ್ರದೊಂಇದಗೆ ಜಲ –ಗಧ–ಪುಷ್ಪ ಆರ್ಚನೆಯೊಂದಿಗೆ, ಈ ಆವಾಹನೆ ಕ್ರಿಯೆ ನಡೆಯುತ್ತದೆ. ಅನಂತರ . . . . . (ಮೃತನ ಹೆಸರು ಹೇಳಿ) ದಾಸಸ್ಯ ಪ್ರಾಣದ್, ಇಹಸ್ಥಿತಃ ಸರ್ವೇಂದ್ರಿಯಾಣಿ, ವಾಙ್‌ಮನಃ ಚಿರಂ ತಿಷ್ಠಂತು–ಸ್ವಾಹಾ' ಎಂಬ ಮಂತ್ರದೊಂದಿಗೆ ಈ ಪ್ರಾಣ ಚೈತನ್ಯವನ್ನು ಸಕ್ಕರೆ ನೈವೇದ್ಯ ಪೂರ್ವಕ ಪಂಚಭೂತಗಳಲ್ಲಿ ನಿಲಯನ ಗೋಳಿಸಲಾಗುತ್ತದೆ.

ಪೃಥ್ವೀ ಪೃಥ್ವೀ ಸಮಯಾತು

ಅಪ ಅಪಸ್ಯಯಮಾಯತು

ವಹ್ನಿ ವಹ್ನಿಂ ಸಮಾಯಾತು

ವಾಯು ವಾಯು ಸಮಾಯತು

ಆಕಾಶಂ ಆಕಾಶ ಸಮಾಯತ – ಎಂದು ಇದರ ಮಂತ್ರ

ಅನಂತರ ಔರ್ಧದೇಹಿಕ ಚಡಂಗ ನಡೆಸುವ ಪಿಂಢ ಕರ್ತೃ (ಪ್ರಧಾನ ಕರ್ಮಿ) ತಾನೇ ಕುಣಿಯನ್ನು ತೋಡಿದ್ದೆಂಬ ಸಂಕಲ್ಪದಲ್ಲಿ ಎರಡು ಹಾರೆ ಮಣ್ಣನ್ನು ಕುಣಿಯಿಂದ ಮೇಲೆ ಎತ್ತಿ ಹಾಕುತ್ತಾನೆ. ಮತ್ತೆ 'ಕಳೇ ಬರವನ್ನು (ಇಲ್ಲಿ ಶವವೆಂದೋ, ಶರೀರ ಎಂದೋ ಸಂಭೋಧಿಸಲಾರರು) ಕುಣಿಗೆ ಇಳಿಸುವ ಕ್ರಿಯೆ

'ವರಾಹೋಣೋದ್ಧೃತಾ ಪೂರ್ವಂ

ಮಹಾದೇವಿ ಮಹೋದಧೇ

ಮಹಾತ್ಮ್ಯಂ ಮಾನನೀಯಾಸಿ

ಗ್ರಹಾಣೇತಂ ಕಲೇವರಂ – ಎಂಬ ಮಂತ್ರದೊಂದಿಗೆ ಕುಣಿಗೆ ಇಳಿಸುವುದು ಆ ಬಳಿಕ ಮೊದಲಿಗೆ ಉಪ್ಪಿನಿಂದ ಮುಚ್ಚುವುದು.

'ಲವಣಸ್ಯ ಪಿತಾ ಸಿಂಧು

ಮಾತ ತಸ್ಯ ವಸುಂಧರಾ

ಲವಣೇ ಲೀಯ ಮಾನೇತು

ಕುತೋ ನಿದ್ರಾ ಕುತೋರತಿ – ಎಲ್ಲಾ ಭೌತಿಕ ವೃತ್ತಿಗಳಿಂದಲೂ ನಿವೃತ್ತಿ ಬಯಸಿ ಭೂಮಿಯ ಉಪ್ಪಾಗಿ ಬದಲಿಕೊಳ್ಳುವ ಹಾರೈಕೆ ತೋಡಿಕೊಳ್ಳುವ ಮಂತ್ರವಿದು

ಅನಮತರ ಒಂದು ತೆಂಗಿನ ಕಾಯಿ ಹೋಳಿನಲ್ಲಿ ತುಪ್ಪ ಸುರಿದು ಬತ್ತಿ ಉರಿಸಿ ಮಣ್ಣಿನಿಂದ ಕುಣಿತುಂಬಿಸಿ, ಪ್ರಾಣನನ್ನು ಪುನಃ ಆವಾಹಿಸಲಾಗುತ್ತದೆ ತೆಗೆದವರನ್ನು ಆದರಿಸುವಾಗ ಚಡಂಗವಿದೆ ಇದು ಯಾವುದೋ ಕಾಲ ಘಟ್ಟದಲ್;ಲಿ ಮತ್ತೆ ಪ್ರಕ್ಷಿಪ್ತವಾಗಿ ಸೇರಿದ ಚಡಂಗವಿರಬೇಕು ಆ ಬಳಿಕೆ ಪ್ರೇತಮಂತ್ರದೊಂದಗೆ ಉದಕಕ್ರಿಯೆ ನಡೆಸಿ ಒಂದು ಮಣ್ಣ ದಿನ್ನೆಯಲ್ಲಿ ಪತ್ರೇತವನ್ನು ವಾಹಿಸಿ ಆರಾಧಿಸಿ ನಿವೇಧ್ಯವನ್ನು ನೀಡುತ್ತಾರೆ ಆನಂತರ ಶವ ಸಂಸ್ಕರಿಸಿದ ಭೂಮಿಯ ಎಂಟು ದಿಕ್ಕುಗಳನ್ನು ಕಾಲಯ ಅಷ್ಟದಿಕ್ಪಾಲಕರನ್ನು 'ಸಾಯುಧ ವಾಹನ ಸ ಪರಿಹಾರ'ವಾಗಿ ಬರಿಸುವ ಭಿನ್ನಹದ ಬರೆಹವಿದೆ ಬಳಿಕೆ ಮಣ್ಣ ಕಟ್ಟೆಯಿಂದ ಒಂದು ಉರುಳಿ (ಪಾತ್ರೆ)ಗೆ ಆವಾಹನ ಮಾಡಲು ಈ ಕೆಳಗಿನ ಮಂತ್ರ ಹೇಳುತ್ತಾರೆ.

' . . . . (ಹೆಸರು ಹೇಳಿ) ನಾಮ ದಾಸಸ್ಯ ಪ್ರೇವಾತ್ಮನಂ ಅಸ್ಮಾತ್ ಪೀಠಾತ್, ಅಸ್ಮೀನ್ ಪಾತ್ರೇ ಆವಾಹಯಾಮಿ'

ಆ ಬಳಿಕ ಆ ಉರುಳಿಯನ್ನು ತಲೆಯಲ್ಲಿ ಹೊತ್ತು ಅಂಗಳದ ಮಧ್ಯದಲ್ಲಿ ಆಗ್ನೇಯ ದಿಕ್ಕಿನಲ್ಲಾಗಿ ಉರುಳಿಯನ್ನು ಪ್ರತಿಷ್ಠಿಸಲಾಗುತ್ತದೆ ಅನಂತರ ಉರುಳಿಯಿಂದ ಪ್ರೇತವನ್ನು ನಾಟಿದ ಬಟ್ಟೆಗೆ ಆವಾಹಿಸುತ್ತಾರೆ. ಮುಂದುವರಿದು ಆಯುಧದ ಪ್ರತ್ಯೇಕವಾಗಿ ಒಂದು ಕಬ್ಬಿಣದ ಮೊಳೆಯನ್ನು ಇರಿಸಿ ಬಟ್ಟೆಯನ್ನು ಮುಚ್ಚುತ್ತಾರೆ.

'ಹೇ ಆಯಃ ಯೇನಂ ಪ್ರೇತ ರೂಪಂ ರಕ್ಷ' –ಇದು ಕಬ್ಬಿಣದ ಕುರಿತಾದ ಮಂತ್ರ ಅಷ್ಟದಿಕ್ಪಾಲರಿಗಲ್ಲದೆ 'ಮುಪ್ಪತ್ತು ಮುಕ್ಕೋಟಿ (ಮೂವತ್ತು ಮುಕ್ಕೋಟಿ) ದೇವತೆಗಳನ್ನೂ ಈ ಬಲಿಪೀಠದ ಕಾವಲುಗಾರರನ್ನಾಗಿ ಮಾಡುವರು

'ತತ್ ಬಹಿಃ ತ್ರಯ ತ್ರಿಂಶಾದಾದಿ ದೇವತಾ ರಕ್ಷಂತು ಸ್ವಾಹಾ' ಎಂಬುದು ಇಲ್ಲಿನ ಮಂತ್ರ

ಮುಂದೆ 'ಸಾಯುಧ ವಾಹನ ಸ್ವಪರಿವಾರಂ' ಆತ್ಮನನ್ನು ಗುರಿಮಾಡಿ ಇರುವ ಯಾತ್ರೆಯ ಅರಂಭ ಹನ್ನೆರಡುದಿನಗಳ ಯಾತ್ರೆ ಅದು ಒಂದೊಂದು ದಿನವೂ ಕೋಳಿಮೊಟ್ಟೆ ರೂಪದ ಎರಡು ಅನ್ನದ ಪಿಂಢಗಲನ್ನು ಉದಕಕ್ರಿಯೆಯನ್ನೂ ಪ್ರಧಾನ ಮಾಡಲಾಗುತ್ತದೆ. ಹ್ನೆರಡನೆ ದಿನ ಪುನಃ ಬಟ್ಟೆ 9ಪಟ್ಟ0 ಹರಿದು ಪುನಃ ಉರುಳಿ ಗೆ ಅವಾಹಿಸಿ ಉರುಳಿಯನ್ನು ತೆಗೆಯುವ ವಿಧಿ ಉರುಳಿಯಿಂದ ಗಂಗಗೆ ಕಳುಹಿಸುವ ವಿಧಿ ಅನಂತರದ್ದು

'. . . . (ಹೆಸರು ಹೇಳಿ) ನಾಮ ದಾಸ ಪ್ರೇತ ಜೀವಾತ್ಮಾನಂ

ಈ ಆತ್ಮವನ್ನು ಸ್ವೀಕರಿಸೆಂದು ಗಂಗೆಯ ಕೋರಿಕೆ ಸಲ್ಲಿಸುವ ಮಂತ್ರವೂ ಇದೆ

'ಯೇಹಿ ಗಂಗೆ ನಮಸ್ತುಭ್ಯಂ

ಪ್ರೇತರೂಪಮಿಂ ಮಮ

ಆಗಮಿಷ್ಯಾಮ್ಯಹಂ ತಾವದ್

ರಕ್ಷಂಆ ಕುರು ತ್ವಮನಘೇ – 'ನಾನು ಬರುವವರೆಗೂ ಈ ಪ್ರೇತ ರೂಪವನ್ನು ಸಂರಕ್ಷಿಸು ಪಾಪರಹಿತಳೇ' ಎಂಬ ಪ್ರಾರ್ಥನೆ ಇಲ್ಲಿ

ಹದಿಮೂರನೇ ದಿವಸ – ಪಿಂಡದಿವಸ ಎರಡು ಪದ್ಮಪೀಠಗಳನ್ನು ಸಿದ್ದಪಡಿಸಿ ಒಂದರಲಲಿ ಪ್ರೇತಪೂಜೆಯನ್ನು ಇನ್ನೊಂದರಲ್ಲಿ ಮೂರ್ತಿಪೂಜೆಯನ್ನು ನಡೆಸುವುದು ಅಷ್ಟದಳ ಪದ್ಮಾಕೃತಿಯನ್ನು ಐದು ಮೆಟ್ಟಿಲುಗಳ ಮೂಲಕ ಪೀಠಗಳನ್ನು ನಿರ್ಮಿಸುತ್ತಾರೆ. ದ್ವಾದಶ ಮೂರ್ತಿಗಳನ್ನು ಅಷ್ಟದಿಕ್ಪಾಲಕರನ್ನೂ ಪರಿವಾರವನ್ನಾಗಿ ಮಾಡಿ ವಿಷ್ಣುವನ್ನು ಆವಾಹಿಸುವುದು ಮೂರ್ತಿ ಪೂಜೆಯಲ್ಲಿರುವ ಸಂಕಲ್ಪ ಪ್ರೇತರೂಪವನ್ನು ಮೂರ್ತಿಯೊಳಕ್ಕೆ ಆವಾಹಿಸುವುದು ಮುಂದಿನ ಚಡಂಗ

ಪ್ರೇತ ಜೀವಾತ್ಮಾನಂ ಅಸ್ಮಾತ್ ಪೀಠಾತ್

ಶ್ರೀ ವಾಸುದೇವ ಮೂರ್ತಿನಾ ಸಹ ಸಾಯುಜ್ಯಂ ನಯಾಮೀ – ಎಂಬ ಮಂತ್ರೋಚ್ಚಾರಣೆಯೊಂದಿಗೆ ಪ್ರೇತರೂಪ ಪಿತೃರೂಪವಾಗಿ ಬದಲುತ್ತದೆ ಎಂಬುದು

ಸಂಕಲ್ಪ

'ಪಿತೃರೂಪಂ ಅಮುಂ ವಿಷ್ಣುಂ

ವಿಷ್ಣೋ ಸಾಯುಜ್ಯತಾಂ ನಯೇತ್

ಸಾಯಜ್ಯತಾಂ ಆಯಂ ಯದ್ಯ

ಪೂರ್ವೈ ಸಹ ಸಹಸ್ರಪಾದ್ – ಎಂದು ಅನಂತರ ಹೇಳುವ ಮಂತ್ರಗಳೆಲ್ಲ ವಿಷ್ಣುರೂಪ ಸಾಯುಜ್ಯ ಪಡೆದ ಪಿತೃರೂಪದ ಕುರಿತಾದ ಸಂಕಲ್ಪವೇ

ಪದ್ಮ ಪೀಠದಿಂದ ಪುನಃ 'ಉರುಳಿಗೆ' ಆವಾಹಿಸಲು ಇದೆ ಅನಂತರ ಉರುಳಿಯನ್ನು ದೇವಸ್ಥಾನಕೆಕ ಒಯ್ಯುವುದು ಅನಂತರದ ಚಡಂಗಗಳೆಲ್ಲ ನಂಬೂತಿರಿ ಪುರೋಹಿತರ ಮೂಲಕ ನಡೆಯುವಂಥದು ಎಂಬುದು ನಿಯಮ ಅದುವರೆಗಿನ ಚಡಂಗಗಳಲ್ಲಿ ಪ್ರೇತರೂಪಕ್ಕೆ ನಡೆದುಕೊಳ್ಳುವುದರಲ್ಲಿ ಕರ್ಮಿ ಮಾಡಿದ ತಪುಗಳೇನಾದರೂ ಇದ್ದಲ್ಲಿ ಮನ್ನಿಸಬೇಕೆಂದು ಕೋರಿಯೂ, ವ್ಯಕ್ತಿ ಸಾವಿಗೆ ಮೊದಲು ಜೀವನಾವಧಿಯಲ್ಲಿ ಮಾಡಿದ ತಪ್ಪುಗಳನ್ನು ಮನ್ನಿಸಬೇಕೆಂದೂ ಕೋರಿಯೂ ಪ್ರಾರ್ಥನೆ ಗೈದ ಬಳಿಕವೆ ನಂಬೂತಿರಗಳ ನೇತೃತ್ವದ ಕ್ರಿಯೆ ಮುಂಬರಿಯುವುದು ಕೋರಿಕೆ ಮಂತ್ರ –

'ಅಜ್ಞಾನಾದ್ ವಾ ಪ್ರಮಾದಾದ್ ವಾ

ವೈಕಲ್ಯಾದ್ ಸಾಧನ ಸ್ಯವಾ

ಯನ್ನ್ಯೂನಮತಿರಿಕ್ತಂ ಚ

ತತ್ ಸರ್ವಂ ಕ್ಷಂ ತುಮರ್ಹಸಿ' – ಎಂದು ಪಿಂಡಕರ್ತವಿನ (ಕರ್ಮಿಯ) ಪರವಾಗಿಯೂ

'ಇದಂ ಪೂರ್ವಂ ದೇಹ ಪ್ರಾಣಬುದ್ದಿಂ ದ್ರಿಯಾದಧಿಕಾರಿತೋ

ಜಾಗೃತ್ ಸ್ವಪ್ನ ಸುಷುಪ್ತ್ಯವಸ್ಥಾನು ಮನಸಾವಾಚಾ ಕರ್ಮಣಾ

ಹಸ್ತಾಭ್ಯಾಂ, ಪದ್ಬಾಂ, ಉದರೇಣ, ಶಿಶ್ನೇನಯತ್

ಯತ್ ಸ್ಮೃತಂ ಯದುಕ್ತಂ ಯತ್‌ಕೃತಂ ಯದ್ ಅನುಷ್ಠಿತಂ

ತತ್ ಸರ್ವಂ ಬ್ರಹ್ಮಾರ್ಪಣಂ ಭವತು –ಸ್ವಾಹಾ – ಎಂದು ಪ್ರೇತರೂಪದ ಪರವಾಗಿ ಕ್ಷಮಪಣ ಮಂತ್ರವನ್ನು ಉಚ್ಚರಿಸುತ್ತಾರೆ ಕೊನೆಯ ಉದಕ ಕ್ರಿಯೆ ಬಹುಶಃ ಎಂದೆಂದಿಗೂ ಬೇಕಾಗಿರುವ ಒಂದು ಎಂಬುದಾಗಿ ಸಂಕಲ್ಪಿತವಾಗಿದೆ.

' ಆ ಬ್ರಹ್ಮಸ್ತಂಭ ಪರ್ಯಂತಂ ಜಗದೇತಚ್ಚರಾಚರಾ

ಮಯಾದತ್ತೇನ ತೋಯೆನ ಇಷ್ಟಮಿಮೇವಾಭಿಗಚ್ಚತು– ಇಷ್ಟು ಮಂತ್ರಗಳು ಅನುಷ್ಠಾನಗಳೂ ಸಾಮಾನ್ಯ ಮರಣದಲ್ಲಿ ಇವೆ

ಶರೀರ ಪಡೆಯಲು ಸಾಧ್ಯವಾದ ಸ್ಥಿತಿಯಲ್ಲಿ ಮೊದಲ ಅನುಷ್ಠಾನಗಳನ್ನು ನಿರ್ವಹಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಪಲಾಶ(ಮುತ್ತುಗ) ದ ಎಲೆ ದಂಟಿನೊಂದಿಗೆ 360 ಸಂಖ್ಯೆಯಲ್ಲಿ ಪಡೆಯುವುದು

ತಲೆ –30

ಕುತ್ತಿಗೆ–30

ಹೃದಯ –20

ಎದೆ–30

ಕೈ(ಎರಡು)–50 ತಲಾ

ಬೆರಳುಗಳು–10

ಶಿಶ್ನ–4

ವೃಷ್ಣ–6

ತೊಡೆ (ಎರಡು) –20 ತಲಾ

ಮೊಣಕಾಲು (ಎರಡು) – 20 ತಲಾ

ಕಾಲಬೆರಳು –10 ಈ ಲೆಕ್ಕಗಳಲ್ಲಿ ಇರುವ ಕಡ್ಡಿಗಳ ಕಟ್ಟುಗಳಿಂದ ಕುಳಿತ ವ್ಯಕ್ತಿಯ ರೂಪದಲ್ಲಿ ಕಟ್ಟಿ ಈ ಹಿಮದೆ ವಿವರಿಸಿದ ಎಲ್ಲಾ ಚಡಂಗಗಳನ್ನು ಅನುಷ್ಠಿಸಬೇಕು

ಈ ಚಡಂಗಗಳನ್ನು ಒಟ್ಟಾರೆಯಾಗಿ ಪರಿಶೀಲಿಸಿದರೆ ಎಲ್ಲರೊಂದಿಗೆ ತಪ್ಪು ಅಪರಾಧಗಳ ಕ್ಷಮಾಪಣೆ ಕೋರಿಕೆಯಿಟ್ಟು ಅಂತ್ಯಯಾತ್ರೆ ಕೈಗೊಳ್ಳುವ ಒಬ್ಬ ತನ್ನ ಗಮ್ಯ ಸ್ಥಾನಕ್ಕೆ ತಲಸಿ ವಿಶ್ರಮಿಸುವುದರ ಚಿತ್ರಸಿಗುತ್ತದೆ ಎಲ್ಲಾ ಜನವಿಭಾಗಗಳಲ್ಲೂ ಈ ಬಗೆಯ ಒಮದು ಸಾಂತ್ವನಗೊಳಿಸುವಿಕೆಯನ್ನು ಕಾಣಬಹುದು ಮರಣವನ್ನು ಹಿಂದಿಕ್ಕಲು ಪರಮಾವದಿ ಶ್ರಮಿಸಿದಾಗಲೂ ಅದು ಕೊನೆಗು ಅನಿವಾರ್ಯವಾಗಿಬಿಡುವಾಗ ಒಮದು ದಾರಿತಿರುಗಿಸಿ ಬಿಡುವ (sublimation) ಶ್ರಮವೇ ಈ ಎಲ್ಲಾ ಅನುಷ್ಠಾನ ಚಡಂಗಗಳು

ವಿಶ್ಲೇಷಣೆ

ಆತ್ಮ – ಶರೀರ ಎಂದು ನಮಗೆ ಇಂದು ಚಿರಪರಿಚಿತವಾಗಿರುವ ಸಂಕಲ್ಪದಲ್ಲಿ ದೇಹ –ದೇಹಿ ಸಂಬಂಧದ ಒಂದು ಅನ್ಯತ್ವವೂ ತಾತ್ಕಲಿಕತೆಯೂ ಸೂಚಿವಾಗುತ್ತದೆ ಸೂರ್ಯ ಬೆಳಗ್ಗೆ ಮುಡದಣದಿಂದ ಪಡುವನ ಕಡೆಗೆ ತೇರನ್ನು ಓಡಿಸಿ ಹೋಗುವ ಒಬ್ಬ ರಥಿಕ (ತೇರಾಳಿ) ಆಗಿದ್ದಾನೆಂದು ಭಾವಿಸಿದ್ದ ಪ್ರಾಕೃತ ಮನಸ್ಸಿಗೆ, ಆತ್ಮ ಒಂದು ಪಂಜರದ ಗಿಣಿಯೆಂದು ಭಾವಿಸಲು ಸಾಧ್ಯವಾಗಿತ್ತು. ನಯಗೊಳಿಸಿದ ಎಲ್ಲಾ ಕಾವ್ಯ ರೂಪಕಗಳೆಲ್ಲವೂ ಮೊದಲು ಹುಟ್ಟಿಕೊಂಡಿದ್ದು ನಿಷ್ಕಳಂಕವಾದ ಪ್ರಾಕೃತ ಮನಸ್ಸುಗಳಿಮದ ಎಂದು ಇವತ್ತು ನಾವು ಗುರುತಿಸುತ್ತೇವೆ. ಶರೀರ ಆತ್ಮನ ಒಂದು ತಾತ್ಕಲಿಕ ಕಾಪುಕೇಂದ್ರ ಮೂತ್ರವೆಂಬ ಸಂಕಲ್ಪವೆ ಮೃತ್ಯಭೀತಿಯಿಂದ ರಕ್ಷಿಸಕೊಳ್ಳುವ ಒಮದು ಸ್ವಯಂ ಸಾಂತ್ವನ ಪ್ರಕ್ರಿಯೆಯಾಗಿದೆ. ನಷ್ಟವಾದ ಯಾವುದನ್ನೂ ಪುನರ್ನಿರ್ಮಿಸುವುದಕ್ಕೋ ಮರಳಿ ಪಡೆಯುವುದಕ್ಕೋ ವ್ಯಗ್ರತೆ ಮನುಷ್ಯನ ಮನಸ್ಸಿಗೆ ಇದೆ ಪ್ರಾಕೃತ ಚಿತ್ರಕಲೆಯಲ್ಲಿ, ತನ್ನನ್ನು ಹಿಂಬಾಲಿಸಿದ ಒಂದು ಹಿಂಸ, ಜಂತುವನ್ನು ಮನುಷ್ಯ ಸೋಲಿಸಿದುದು ಆ ಜಂತುವಿನ ಒಂದು ಚಿತ್ರ ಬರೆದು ಅದರ ಮೇಲೆ ಆಯುಧ ಪ್ರಯೋಗ ನಡೆಸಿ ತಾನು ಗೆಲ್ಲುವುದನ್ನು ಪ್ರಸ್ತುಪಡಿಸಿದ್ದಾಗಿದೆ ಜೀವನದಲಲಿ ನಷ್ಟಗೊಳ್ಳುವ ಹಲವನ್ನೂ ಮಂತ್ರೋಪಾಧಿಕವಾಗಿ ಮನುಷ್ಯ ಮರಳಿ ಕರೆಸಿಕೊಳ್ಳುವ ಸ್ವ –ಪ್ರತ್ಯವನ ಕರ್ಮ (ಚಿಣಣಂ ،ಣರಂಂಘಣುಂಟ) ಗಳನ್ನು ಪ್ರಾಕೃತವೂ ಪರಿಷ್ಕೃತವೂ ಆದ ಎಲ್ಲಾ ಜನವಿಭಾಗಗಳಲ್ಲೂ ಕಾಣಬಹುದು ಉದಾಹರಣೆಗೆ ಹೆತ್ತು ಬೀಳುವ ಮಗುವನ್ನು ಮಡಿಲಲ್ಲಿ ಮಲಗಿಸಿ ಜಾತಕರ್ಮ ನಡೆಸುವ ಒಬ್ಬ ತಂದೆ

'ಆತ್ಮಾ ವೈ ಪುತ್ರನಾಮಾಸಿ ಸಜೀವ ಸರದಶ್ಯತಂ' ನಾನೇ ಪುತ್ರನೆಂಬ ಹೆಸರಿನಲ್ಲಿ ಬಂದಿರುವವ ನೀನು ಅಂಥವ(ನೀನು) ನೂರು ವರ್ಷ ಜೀವಿಸು ಎಂಬ ಅರ್ಥದ ಈ ಮಂತ್ರವನ್ನು ಹೇಳುವಾಗ – ಪುನರ್ಜನ್ಮದ ಮೂಲಕ ಮೃತ್ಯವನ್ನು ಸೋಲಿಸುವುದನ್ನೆ ಕಾಣುವುದು ಪ್ರಾಕೃತ ಜನ ವರ್ಗಗಳಲ್ಲಿ ಈ ಬಗೆ ಆತ್ಮ ಪ್ರತ್ಯಯದ ಕ್ರಿಯೆಗಳ ಮಂತ್ರಗಳು, ಅನುಷ್ಠಾನ ರೀತಿಗಳು ಇತ್ಯಾದಿ

ಪ್ರಾಕೃತಗಳಾಗಿರಬಹುದಾದರೆ ಪರಿಷ್ಕೃತ ಜನವರ್ಗಗಳಲ್ಲಿ ಅದೇ ಇನ್ನೂ ಒಂದಿಷ್ಟು ಹೆಚ್ಚು ಕಾವ್ಯತ್ಮಕತೆಯನ್ನು ರೂಪ ಕತ್ವವನ್ನೂ (ಟಜಣಚಿಖಿಂಡುಭಿಚಿಟ) ಹೊಂದಿರುತ್ತದೆ ಅವುಗಳ ನಡುವಣ ವ್ಯತ್ಯಾಸ ಇದೊಂದು ರೂಪಾಂತರ ಪ್ರಾಪ್ತಿಯ ಮೂಲಕ ಮನುಷ್ಯ ಪಡೆಯಬಯಸುವ ಶಾಶ್ವತತೆಯನ್ನು ಕವಿತೆಯಲ್ಲಿರುವ ಶಿಶು ಪ್ರೂಪಗಳೂ ಆದಿ ಪ್ರೂಗಳು ಬೆಟ್ಟುವಾಗಡುತ್ತವೆ. ಈ ರೂಪಾಂತರ ಪ್ರಾಪ್ತಿ ಪ್ರೂಪಕ್ಕೆ ಐದು ವಿಭಾಗಗಳು ಇವೆಯೆಂದು ಯುಂಗ್ ವ್ಯಕ್ತಗೊಳಿಸುತ್ತಾರೆ ದೇಹಾಂತರ ಪ್ರಾಪ್ತಿ (metamorphosis) ಪುರ್ನನ್ಯ ಸಂಕಲ್ಪ (re-incarnation) ಪುನರುಜ್ಜೀವನ (re-surrection) ನವೀಕೃತ ಜನ್ಮ (re-birth) ಅನುಷ್ಠಾನಗಳ ಮೂಲಕ ಸಿಗುವ ಹೊಸತನ (Transformation through participation rites) ಎಂಬವುಗಳೇ ಅವು ಮಂತ್ರೋಪಾಧಿಕವಾದ ಸ್ವಪ್ರತ್ಯಯನ ಚಡಂಗಗಳೆಲ್ಲ ಈ ಕೊನೆಯ ವಿಭಾಗಕ್ಕೆ ಸೇರುವಂಥವು.

ಸಂಪರ್ಕ ಮಂತ್ರವಾದದ ಮೂಲತತ್ವವೇ – ಒಮ್ಮೆ ಸಂಬಂಧಕ್ಕೆ ಬಂದ ವಸ್ತುಗಳು ಎಂದೆಂದಿಗೂ ಸಂಬಂಧಿಸುತ್ತಲೆ ಇರುತ್ತವೆ. ಎಷ್ಟೆಷ್ಟು ಅಗಲಿಸಿದರೂ ಅನ್ಯೋನ್ಯ ಸಂಬಂಧ ಕೊನೆಗಳೊಳ್ಳುವುದಿಲ್ಲ ಎಂಬುದಾಗಿದೆ ಮರಣಾ ನಂತರ ಅನುಷ್ಠಾನಗಳಲ್ಲಿ ಹಲವಕ್ಕೂ ಈ ಬಗೆ ಸಂಪರ್ಕ ಮಂತ್ರವಾದದೊಮದಿಗೆ ಹೆಚ್ಚು ಸಮೀಪ ನಂಬು ಇದೆ ಆಗಲೇ ಸೂಚಿಸಿದ ಸ್ವ ಪತ್ರಕ್ಯಯನ ಚಡಂಗಗಳಲ್ಲಿ ಒಬ್ಬ ವ್ಯಕ್ತಿ ತನ್ನದೆ ಹೊಸ ಹುಟ್ಟಿದ ಮೂಲಕ ಅನಶ್ವರತೆಯನ್ನು ಹಾರಯಿಸುವುದಾದರೆ ಮರಣಾ ನಂತರ ಅನುಷ್ಠಾನಗಳಲ್ಲಿ ಒಮದು ಗುಂಪು ನಷ್ಟೌಆದವನನ್ನು ಮರಳಿ ತಂದು ಸಾಂತ್ವಾನ ಪಡೆಯುವುದನ್ನೆ ನಾವು ಕಾಣುವುದು ಮರಣವು ತಮ್ಮಿಂದ ಆಗಲಿಸಿದ ಒಬ್ಬ ವ್ಯಕ್ತಿಯನ್ನು ದೀರ್ಘ ಹಾದಿಯ ಪಯಣಿಗನನ್ನಾಗಿ ಸಂಕಲ್ಪಿಸಿ ಆತ ಅತ್ಯಮತಿಕವಾಗಿ ತಲಪಬೇಕಾದ ಒಂದು ಅಭಯಸ್ಥಾನಕ್ಕೆ ತಲಪುವುದಾಗಿ ಸಂಕಲ್ಪಿಸುವುದೇ ಈ ಬಗೆ ಅನುಷ್ಠಾನಗಳ ಒಂದು ಸಾಮಾನ್ಯ ಸ್ವಬಾಗ ಈ ಯಾತ್ರೆಗೆ ತಗುಲುವ ಸಮಯವೇ 'ಹೊಲೆ' ಆಗಿ ಆರಣೆಗೊಳ್ಳುವ ದಿನಗಳು ಅ ಯಾತ್ರೆಗೆ ಅವಶ್ಯಕವಾದ ಆಹಾರ, ಅಕ್ಷತೆ ಮೊದಲಾದ ರೂಗಳಲ್ಲಿ ನಿತ್ಯವೂ ನಿವೇಧನೆಗೊಳ್ಳುತ್ತದೆ. ಪ್ರತಾಪ ಪೂರ್ಣವಾದ ಆ ಯಾತ್ರೆಯಲ್ಲಿ 'ಸಾಯುದ' ವಾಹನ, ಸಪರಿವಾರ' ಸಕಲ ದೇವತೆಗಳಲ್ಲೂ ಪಾಲುಗೊಳ್ಳಲು ಇಲ್ಲಿಂದ ಕೋರಿಕೆಯ ಹೋಗುತ್ತದೆ. ಒಂದು ಸುರಕ್ಷಿತ ಸ್ಥಾನಕ್ಕಾಗಿ ಇರುವ ಈ ಯಾತ್ರೆಯ ಪರಿಸಮಾಪ್ತಿಯೇ ಪಿಂಡ ಪ್ರಧಾನ ಚಡಂಗಗಳಲ್ಲಿ ಕಾಣುವುದು ಮತ್ತೆ ಒಂದೊಂದು ಶ್ರಾದ್ಧಾ ದಿನಗಳಲ್ಲೂ ಹೊಟುಹೋದ ಒಂದೊಂದು ಸ್ಥಳಕ್ಕಿರುವ ಮರು ಭೇಟಿಯೂ ಸಂಪರ್ಕ ಮಂತ್ರವಾದ ಚಡಂಗದ ಮೂಲಕವಾದ ಒಂದು ಸ್ವಯಂ ಸಾಂತ್ವನಗೊಳಿಸುವುವಿಕೆಯಾಗಿದೆ. ಈ ಮರಣಾನಂತರ ಅನುಷ್ಠಾಗಳೆಲ್ಲವೂ ಪ್ರಾಕೃತ– ಪರಿಷ್ಕೃತ ವಿಭಾಗಗಳು, ಪರಿಷ್ಕೃತ ವಿಭಾದಲ್ಲೂ ಶೈವ, ವೈಷ್ಣವ ಕಾವಲುಗಳು ಎಂಬಂಥ ವ್ಯತ್ಯಾಸವನ್ನು ಅನುಸರಿಸಿ ಯಾತ್ರೆಗೆ ತಗಲುವ ದಿನಗಳಿಗೂ, ಗಮ್ಯಸ್ಥಾನಕ್ಕೂ ಎಲ್ಲಾ ವ್ಯತ್ಯಾಸ ಇರುವುದಾದರೂ ಉದಕ ಕ್ರಿಯಾ ಚಡಂಗಗಳ ಸಾಮಾನ್ಯ ರಚನೆಯಲ್ಲಿ ಈ ಬಗೆ ಒಂದು ಏಕರೂಪತೆ ಉಂಟಾಗಿರುತ್ತದೆ.

ಮಣ್ಣಾಪ್ಪೇಡಿ ಪುಲಪ್ಪೇಡಿ (ಆಚಾರ)

ಶಶಿಧರನ್ ಕ್ಲಾರಿ

ಟಿಪ್ಪಣಿ

ಸಾಂಘೀಕತೆಗೆ ಒಂದು ಮಾನಸಿಕ ಲೋಕವಿದೆ ಈ ಮಾನಸಿಕ ಲೋಕಕ್ಕೆ ವರ್ತಮಾನ ಕಾಲ ಜೀವನದ ಮೇಲೆ ಬಲವಾದ ನಿಯಂತ್ರಣವಿದೆ ಆಧರಿಸುವಿಕೆ, ನೆಳಲಾಗುವಿಕೆ, ಭಯವೂ ಕಾರೂಣ್ಯವೂ ಇಂಥ ಎಲ್ಲಾ ಮಾನಸಿಕಲೋಕ ಸಾಂಘೀಕತೆಯ ವರ್ತ್ಮಾನ ಕಾಲ ಜೀವನವನ್ನು ನಿರ್ಣಯಿಸುತ್ತದೆ ಆದ್ದರಿಮದ ಜಾನಪದ ಅಧ್ಯಯನದಲ್ಲಿ ಮೂರ್ತವಾದ ವಸ್ತುಗಳ ಸಂಗ್ರಹದೊಮದಿಗೆ ಸಾಂಘೀಕತೆಯ ಮನಸ್ಸಿನಲ್ಲಿ ಜೀವನಂತವಾಗಿ ಇರುವ ಅಮೂರ್ತವಾದ ಆಶಯಗಳನ್ನು ಕೂಡ ಅರ್ಥವಿಸಿಕೊಳ್ಳಬೇಕಾಗುತ್ತದೆ ಅದು ಜಾನಪದದ ಭಾಗೌಪಿ ಕ್ಷುಲ್ಲಕ ಎಂದು ತೋರಬಹುದಾದ ಈ ಬಗೆ ಆಶಯಗಳು ಜೀವನ್ನು ಗಮಭೀರವಾಗಿಯೇ ಬಾಧಿಸುತ್ತವೆ. ಕಾಲದ ಭರವೇರಿದ ಪ್ರವಾಹದಲ್ಲಿ ಪೂರ್ಣವಾಗಿಯೂ ಅಪ್ರತ್ಯಕ್ಷವಾದ ಹಲವು ಸಂಗತಿಗಳು ಮನಸ್ಸಿನ ಭಾಗವಾಗಿ ಜೀವನದ ಗತಿಯನ್ನೂ ಸ್ವಭಾವವನ್ನೂ ನಿಯಂತ್ರಿಸಿಕೊಂಡಿರುತ್ತವೆ ಹೀಗೆ ಭೌತಿಕವಾಗಿ ನೆಲಸದೆಯೂ ಆದರೆ ಮಾನಸಿಕ ತಲದಲ್ಲಿ ಮಾತ್ರ ನೆಲೆಗೊಂಡಿರುತ್ತಲೂ ಇರುವ ಜನಾನಪದ ರೂಪವನ್ನೇ ಮೃತ ಜಾನಪದ ಎಂದು ಕರೆಯುವುದು. 'ಮಣ್ಣಾಪ್ಪೇಡಿ'ಯೂ 'ಪುಲಪ್ಪೋಡಿ' ಯೂ ಇವತ್ತು ಆ ಬಗೆಯಲ್ಲಿರುವ ಒಂದು ಜಾನಪದವಾಗಿದೆ ಇನ್ನೂ ಒಂದಷ್ಟೂ ಕಾಲ ಕಳೆದರೆ ಇವತ್ತು ಅದು ನಿರ್ವಹಿಸುತ್ತಿರುವ ಧರ್ಮ ಅನಿವಾರ್ಯವಲ್ಲ ಎಂದಾದರೆ ಸಾಂಘೀಕತೆಯ ಮನಸ್ಸಿನಿಂದ ಈ ಆಶಯ ಮಸುಗಿ ಮಸುಗಿ ಇಲ್ಲದಾಗಿಬಿಡುತ್ತದೆ. ಹಾಗೆ ಅದು ಅಜ್ಞಾತ ಜಾನಪದವಾಗಿರುತ್ತದೆ.

ಸಂಪಾದಕ

ಕೇರಳದ ಗ್ರಾಮಗಳಲ್ಲಿ ಶಮಾನಹಗಳ ಹಿಂದೆ ನೆಲೆನಿಂತಿದ್ದ ಒಂದು ನಂಬಿಕೆಯೂ ಆಚಾರವು ಆಗಿದ್ದವು 'ಮಣ್ಣಾಪ್ಪೇಡಿ' ಮತ್ತು 'ಪುಲಪ್ಪೇಡಿ' ಕೆಲವೆಡೆಗಳಲ್ಲಿ 'ಪ__ಪ್ಪೇಢಿ'ಯೂ ನೆಲಸಿತ್ತು 'ಮಣ್ಣಾಪ್ಪಿಡಿ'ಪುಲಪ್ಪಿಡಿ ಎಂಬ ಹೆಸರುಗಳಲ್ಲೂ ಈ ಆಚಾರವನ್ನು ಕರೆಯುವುದಿತ್ತು 'ಮಣ್ಣಾಪ್ಪೇಡಿ'ಗೆ 'ಮಣ್ಣಾನ್ ಜಾತಿಯವನನ್ನು ಕುರಿತಾಗಿ ಹೆದರುವುದು ಎಂದೂ 'ಮಣ್ಣಾಪ್ಪಿಡಿ' ಗೆ 'ಮಣ್ಣಾನ್' ಹಿಡಿಯುವುದು' ಎಂದೂ ಅರ್ಥ ಮಣ್ಣಾನ್ ಹಿಡಿಯುತ್ತಾನೆ ಎಂಬ ಭಯವೇ 'ಮಣ್ಣಾಪ್ಪೇಡಿ' ಎಂಬ ಆಚಾರ ಸಮೂಹದಲ್ಲಿದ್ದ ಮಣ್ಣಾನ್, ಪುಲಯನ್ ಪ__ ಯನ್ ಮೊದಲಾದವರು ಹಿಡಿದು ಕೊಂಡುಹೋಗುವರು ಎಂಬ ಭಯದಿಮದ ಸವರ್ಣ ಸ್ತ್ರೀಯರು ಸಂಜೆಯ ಬಳಿಕೆ ಮನೆಯಿಂದ ಹೊರಕ್ಕೆ ಇಳಿಯುತ್ತಿರಲಿಲ್ಲ ಮಾತ್ರವಲ್ಲ ಈ ಹೆದರಿಕೆಯ ಕಾರಣ ಆ ಬಗೆಯವರ ಮನೆಗಳ 'ಪಡಿಪಿರೆ' ಗಳನ್ನೂ (ಆವರಣದ ಹೊರಬಾಗಿಲು) ಮನೆ ಬಾಗಿಲು ಬೀಗ ಜಡಿಯುವುದು ನೆಡೆಯುತ್ತಿತ್ತು.

ಕೆಲವು ಚರಿತ್ರೆ ಸೂಚನೆಗಳು

ವರ್ಷದ ಕೆಲಸವು ತಿಂಗಳುಲ್ಲಿ ರಾತ್ರಿ ವೇಳೆ ಯಾವಳಾದರೂ ನಾಯರ್ ಸ್ತ್ರೀಯನನ್ನು ಮುಟ್ಟುವುದಕ್ಕಾಗಿ ರಹಸ್ಯವಾಗಿ ಎಲ್ಲಾ ಶ್ರಮಗಳನ್ನೂ ನಡೆಸುವುದಿತ್ತು ಅದು ಆಕೆಗೆ ಕುಲನಷ್ಟ ದೋಷವನ್ನು ತಲುಪಿಸುವುದಕ್ಕಾಗಿಯೇ, ಸ್ತ್ರೀಯನ್ನು ಮುಟ್ಟುವುದಕ್ಕಾಗಿ ಒಳಪ್ರವೇಶವುದಕ್ಕಾಗಿ ಅವು ನಾಯರ್ ಮನೆಗಳ ಹತ್ತಿರ ಅವಿತು ವಾಸಿಸಿ ತಕ್ಕ ಸಂದರ್ಭವನ್ನು ಕಾಯುವರು ಆ ನಿರ್ದಿಷ್ಟ ತಿಂಗಳುಗಳಲ್ಲಿ ನಾಯರ್ ಮಹಿಳೆಯರು ತಮ್ಮ ಸುರಕ್ಷಿತತೆಯನ್ನು ನೋಡುವುದಿತ್ತು ಪುಲಯ ಯಾವಳಾರೂ ಸ್ತ್ರೀಯನ್ನು ಮಉಟ್ಟಿದರೆ, ಅದನ್ನು ಯಾರು ನೊಡದಿದ್ದರು ಕೂಡ, ಅವಳು ತಾನಾಗಿಯೆ ಘಟನೆಯನ್ನು ಕೂಗಿ ಹೇಳಿ ಮರಳಿ ಮನೆಯ ಒಳಹೋಗದೆ ಮುಟ್ಟಿದ ಪುಲಯನ ಜತೆಯಲ್ಲಿ ಓಡಿ ಹೋಗುತ್ತಾಳೆ, ಆಕೆಯ ಕಾರಣ ಕುಟುಂಬದ ಇತರಿಗೂ ಭ್ರಷ್ಟತೆ (ಭ್ರಷ್ಟ್) ಬರಬಹುದೆಂದು ಭಾವಿಸಯೆ ಹೀಗೆ ಮಾಡುವುದು ಇದಕ್ಕೆ ಇನ್ನೊಂದು ಕೋನದ ಗ್ರಹಿಕೆಯೂ ಇದೆ ಕುಟುಂಬದಲ್ಲಿರುವಾಗ ಬಂಧುಗಳಿಂದ ಪ್ರಾಣಭಯ ಇದಿರಾದಾರ, ಯಾರಿಗಾದರೂ ತನ್ನನ್ನು ಮಾರುತ್ತಾರೆ. ಎಂದು ಖಚಿತವಾದಾಗ ಇದರಿಮದ ಪಾರಾಗಳು ಸ್ತ್ರೀಯರೂ ಈ ದಾರಿ ಹಿಡಿಯುತ್ತಿದ್ದರ ಮುಟ್ಟುವುದರ ಬದಲು ಪುಲಯ ಎಸೆದ ಕಲ್ಲೋ, ಕೋಲೋ ಆಕೆಗೆ ತಾಗಿದರೂ ಸಾಕು ಆಕೆಯನ್ನು ಆತ ಮುಟ್ಟಿದನೆಂದೂ ಅವಳು ಭ್ರಷ್ಟಳಾದಳೆಂದೂ ತಿಳಿಯಲಾದೀತು ಕ್ರಿಸ್ತೀಯ ಹದಿನಾರನೇ ಶತಮಾನದಲ್ಲಿ ಪೋರ್ಚುಗೀಸ್ ಪ್ರವಾಸಿಡು ಆರ್ತೇ ಬರ್ಬೋಸ ದಾಖಲಿಸಿದ ಮಾಹಿತಿ ಇದು.

'ಪುಲಪ್ಪೇಡಿ'ಯ ಕುರಿತಾದ ಇನ್ನೊಂದು ಪರಾಮರ್ಶೆ ಕಾಣೀಸುವುದು ಪನ್ನಾನಿಯ ಷೇಕ್ ಸೈನುದ್ದೀನ್ ಎಂಬ ಚರಿತ್ರಕಾರನದು ಆತನ 'ತುಹಫತ್ತ್ ಉಲ್ ಮುಜಾಹಿದ್ದೀನ್' ಎಂಬ ಗ್ರಂಥ ಕೇರಳದ ಹಳಗಾಲದ ಚರಿತ್ರೆಯೆಂಬ ನೆಲಯಲ್ಲಿ ಹೆಚ್ಚು ಗಮನಾರ್ಹವಾದುದು ಎ.ಡಿ. 1498 ರಿಂದ 1583 ರ ವರೆಗಿನ ಕಾಲ ಘಟ್ಟದಲ್ಲಿ ಪೋರ್ಚುಗೀಸರು ಕೇರಳವೂ ಹೊಂದಿದ್ದ ಸಂಬಂಧವನ್ನು ಚಿರತ್ರೆ ದೃಷ್ಟಿಯಿಂದ ನೋಡುವ ಈ ಕೃತಿಯ ಮೂರನೇ ಅಧ್ಯಾಯದಲ್ಲಿ ಮಲಬಾರಿನ ಹಿಂದುಗಳ ಆಚಾರಗಳನ್ನು ಪ್ರತ್ಯೇಕ ಸ್ವಭಾವಗಳನ್ನು ನಂಬಿಕೆಗಳನ್ನೂ ದಾಖಲಿಸಲಾಗಿದೆ ಅವುಗಳೊಂದಿಗೆ 'ಪುಲಪ್ಪೇಡಿ'ಯ ಬಗೆಗಿನ ಪರಾಮರ್ಶೆ ಇರುವುದು ಅದು ಈ ರೀತಿಯಲ್ಲಿದೆ.

'ವರ್ಷದ ಕೆಲವು ರಾತ್ರಿಗಳಲ್ಲಿ ಕೆಳಜಾತಿಗೆ ಸೇರಿದ ಗಂಡನು ತನ್ನದೇ ಜಾತಿಗೆ ಸೇರಿದ ಅಥವಾ ಮೇಲುಜಾತಿಗೆ ಸೇರಿದ ಸ್ತ್ರೀಯ ಕೊಠಡಿಗೆ ಪ್ರವೇಶಿಸಿದರೆ ಅವರೊಳಗೆ ಶಾರೀರಿಕ ಸಂಬಮಧ ಏರ್ಪಡದಿದ್ದರು. ಅವಳು ಗರ್ಭವತಿ ಆಗಿಲ್ಲವಾದರೂ ಕುಡ ಅವಳು ಭ್ರಷ್ಟವಳೆನಿಸುತ್ತಾಳೆ ನಾಡ ದೊರೆ ಅವಳನ್ನು ಹಿಡಿದು ಮಾರಾಟ ಮಾಡಬಹುದು ಅಲ್ಲವಾದರೆ ಅವಗಳು ನಮ್ಮ ಬಳಿಗೆ ಒಮದು ಇಸ್ಲಾಂ ಮತದಲ್ಲಿ ಸೇರುವುದು ಅಥವಾ ಯೋಗಿನಿಯಾಗಿ ಬದಲುವುದು ಇತ್ಯಾದಿಯನ್ನು ಮಾಡುತ್ತಾಳೆ, ಮೇಲುಜಾತಿಯ ಒಬ್ಬಳು ಸ್ತ್ರೀಯೊಂದಿಗೆ ಶಾರೀರಿಕ ಸಂಬಂಧ ಏರ್ಪಟ್ಟರೂ ಆಕೆಗೆ 'ಬೀಳು' ತಗಲಿ ಮೇಲೆ ಹೇಳಿದ ಯಾವುದಾದರೂ ದಾರಿ ಹಿಡಿಯುವುದು ಅನಿವಾರ್ಯವಾಗುತ್ತದೆ.

ಗುಂಡರ್ಟ್ ನಿಘಂಟುವಿನಲ್ಲಿ 'ಪುಲಪ್ಪೇಡಿ' ಕುರಿತು ಪರಾಮರ್ಶ ಹೀಗೆ ಸೂರ್ಯಸ್ತದ ಬಳಿಕೆ ಒಬ್ಬ ಗುಲಾಮ (ಅಡಿಯನ್) ದೇಹಕ್ಕೆ ಕಲ್ಲು ಹಾಕಿದರೆ ತಮ್ಮ ಪಾಲಿನ ಜಾತಿಯ ಮೇಲ್ಮೇ ನಷ್ಟವಾಗುವುದೆಮದು ಸ್ತ್ರೀಯರು ಹೆದರುವ ಕಾಲ 'ಕರ್ಕಾಟಕ ಮಾಸ' ಕೆ.ಪಿ. ಪದ್ಮನಾಭ ಮೇನೋನ್ ತಮ್ಮ 'ಕೇರಳ ಚರಿತ್ರಂ'ನಲ್ಲಿ ಈ ಆಚಾರದ ಬಗೆಗೆ ದಾಖಲಿಸಿರುವುದು ಹೀಗೆ 'ಪಳ್ಳಂ' ಓಚ್ಚಿರ ಮೊದಲದೆಡೆಯ ಯುದ್ಧ ಭೂಮಿಗಳಲ್ಲಿ ವಿವಿಧ ಜಾತಿಗಳವರು ವರ್ಷಕ್ಕೊಮ್ಮೆ ಒಟ್ಟು ಸೇರಿದಾಗ ಪ್ರೇಕ್ಷಕರಾದ ಮೇಲು ಜಾತಿಯ ಹೆಣ್ಣುಗಳನ್ನು ಸಾಧ್ಯವಾದರೆ ಹಿಡಿದುಕೊಂಡು ಹೋಗಲು ಮತ್ತು ಆಕೆಯೊಂದಿಗೆ ಸಂಸಾರ ನಡೆಸಲು ಕೆಳಜಾತಿಯ ಗಂಡುಗಳಿಗೆ

ಅನುಮತಿ ಇತ್ತು ಎಂಬ ನಂಬಿಕೆ ಪ್ರಚಾರದಲ್ಲಿ ಇತ್ತು ಇದರಿಂದ ಉಂಟಾದುದು ಫೆಬ್ರವರಿ, ಮಾರ್ಚ ತಿಂಗಳಲ್ಲಿ ಒಬ್ಬ ಪುಲಯ ಒಬ್ಬ ಶೂದ್ರಸ್ತ್ರೀ ಯನ್ನು ಏಕಾಕಿಯಾಗಿ ಕಂಡರೆ ಆಕೆಯನ್ನು ಆತ ಹಿಡಿದುಕೊಂಡು ಹೋಗಬಹುದು ಎಂಬ ಸಾಮಾನ್ಯ ಗ್ರಹಿಕೆ ಮೂಡಿದುದು.

ಇಳಂಕುಳಂ ಕುಞನ್ ಪಿಳ್ಳ ಈ ಆಚಾರದ ಸ್ವಭಾವ, ಉದ್ಭವ ಎಂಬ ವಿಷಯಗಳನ್ನು ವಿಶಧೀಕರಿಸುತ್ತಾರೆ " ದಕ್ಷಿಣ ತಿರುವಿದಾಂಕೂರಿನಲ್ಲಿ 'ಮಣ್ಣಾಪ್ಪೇಡಿ' ಎಂದು ಹೇಳುತ್ತಾರೆ ಬಡಗಣ ಪ್ರದೇಶಗಳಲ್ಲಿ 'ಪುಲಪ್ಪೇಡಿ' ಪಱಪ್ಪೇಡಿ ಎಂದು ಹೇಳುತ್ತಾರೆ, ಪುಲಪ್ಪೇಡಿ ಯ ಕಾಲ ಕರ್ಕಾಟಕ ಮಾಸ

ಎಂದು ಗುಮಡರ್ಟ್ ಹೇಳುತ್ತಾರೆ 'ಉಚ್ಚಾರ ದಿನದ ಮಧ್ಯಾಹ್ನದಿಂದ ಹತ್ತನೇ ದಿನದ ಉದಯದ ವರೆಗೆ ಎಂದು ನಾನು ಕೇಳಿದ ಮಾತು ಆ ಕಾಲದಲ್ಲಿ ಸಂಜೆಯಾದರೆ ಪುರುಷ ಸಹಾಯವಿಲ್ಲದೆ ನಾಯರ್ ಸ್ತ್ರೀಯರು ಮನೆಯ ಹೊರಕ್ಕೆ ಹೊರಡುತ್ತಿರಲಿಲ್ಲ ಒಬ್ಬ ಮಣ್ಣಾನ್ ಎಲ್ಲಾದರೂ ಅಡಗಿಕೂತು ಕಂಡೆ ಕಂಡೇ (ಕಂಡೆನು, ಕಂಡೆಯ) ಎಂದು ಕೂಗಿಹೇಳಿದರೆ ನಾಯರ್ ಸ್ತ್ರೀ ಗೆ ಭ್ರಷ್ಟತೆ ಉಂಟಾಗುತ್ತದೆ. ಕೇಲು, ಕಲ್ಲು ಇನ್ನಾವುದೇ ಆಗಬೇಕೆಂದು ಕೆಲವೆಡೆಯ ಪದ್ಧತಿ ಯಾವುದಾದರೂ ಆಕೆಗೆ ಮರಳಿ ಮನೆಗೆ ಪ್ರವೇಶವಿಲ್ಲ ತತ್‌ಕ್ಷಣ ಅವಳು ಬಂಧುಗಳ ಕೈಗೆ ಸಿಕ್ಕಿದರೆ ಅವರು ಅವಳನ್ನು ತತ್‌ಕ್ಷಣ ಕೊಂದು ಮುಗಿಸುವರು ಮಣ್ಣಾನ ಪತ್ನಿಯಾಗಿ ಬಿಡುವುದು ಅಕ್ಷೇಪಣಾರ್ಹ ಎಂದು ತಿಳಿದು ಹಾಗೆ ಮಾಡುತ್ತಿದ್ದುದು ಆದ್ದರಿಂದ ಆ ಸಾಧು ಸ್ತ್ರೀಗೆ ಮಣ್ಣಾನೊಂದಿಗೆ ಅಥವಾ ಪುಲಯನೊಂದಿಗೆ ಓಡಿ ಅಡಗದೆ ನಿರ್ವಾಹವಿರಲಿಲ್ಲ

ಚರಿತ್ರೆ ಕೃತಿಗಳಿಂದ ಮಾತ್ರವಲ್ಲ, ಬಾಯೆರೆ ದಾರೆಯಲ್ಲೂ ಸಾಹಿತ್ಯ ಕೃತಿಗಳಲ್ಲೂ ಪುಲಪ್ಪೇಡಿ! ಮಣ್ಣಾಪ್ಪೇಡಿ ಮೊದಲಾದ ಆಚಾರಗಳ ಕುರಿತು ಸಾಕ್ಷ್ಯಗಳು ದೊರೆಯುತ್ತವೆ. ಮಣ್ಣಾಪ್ಪೇಡಿಯ ಬಗೆಗೆ ಪರಾಮರ್ಶೆಯಿರುವ ಒಂದು 'ವಡಕ್ಕನ್ ಪಾಟು' ಮಲಬಾರಿನ ಕಡತ್ತನಾಡ್ ಭಾಗದಲ್ಲಿ ಪ್ರಚಾರದಲ್ಲಿದೆ ಅದರಲ್ಲಿನ ಕಥೆ ಹೀಗೆ

ಚಿರಕ್ಕಲ್ ಅರಮನೆಗೆ ಏಳನೆ ವಯಸ್ಸಿನಲ್ಲಿ 'ಪುಡಮುಜಿ' (ಮದುವೆ)ಯಾಗಿ ಬಂದವಳು ಕನದ ಕುಂಕಿಚ್ಚಿ (ಕುಂಗಿಚ್ಚಿ) ಒಮ್ಮೆ ಸ್ವಗೃಹಕ್ಕೆ ಹೋಗುವ ದಾರಿಯಲ್ಲಿ, ಕುಞ್ಞಲಿ ಮರಕ್ಕಾರನ ಕೋಟೆಯ ಮುಂಭಾಗಕ್ಕೆ ತಲುಪಿಸಿದಾಗ ಮರಕ್ಕಾರ್ ಅವರನ್ನು ಕೋಟೆಯೊಳಕ್ಕೆ ಬರಲು ಆಹ್ವಾನಿಸಿದ ಆದರೆ ಕುಂಕಿಚರ್ಚ್ಚಿ ಆಹ್ವಾನ ಸ್ವೀಕರಿಸಲು ನಿರಾಕರಿಸಿದಳು ಅಪಮಾನಿತನಾದ ಮರಕ್ಕಾರ್ ವಳ್ಳೂರ್ ನಡಮೇಲೆ ಮೊಲ ಕೊಱಂಬನನ್ನು ಕರೆಸಿ 'ಕೆಟ್ಟಿಲಮ್ಮ' ನ (ಒಡತಿಯ) ನ್ನು 'ಪಜ್ಕ್ಕಡಕ್ಕ' (ಹಣ್ಣಡಕೆ) ಎಸೆದು ಮುಟ್ಟಲು ಹೇಳಿದ ಕುಂಕಿಚ್ಚಿಯ ಸಹೋದವರಿಗೂ ಅದು ಸಾಧ್ಯವಾಗಲಿಲ್ಲ, ನಾಲ್ಕನೇ ದಿವಸ ಕುಞ್ಞೈಳೇಪ್ಪನ್ ಮನೆಯಲ್ಲಿ ಇಲ್ಲದ ಹೊತ್ತು ನೋಡಿ ಉಪಾಯ ಹುಡಿ ಕುಂಕಿಚ್ಚಿಯನ್ನು ಮನೆಯಿಂದ ಯೊರಕ್ಕೆ ಬರಿಸಿ ಕುಱುಂಬ ಆಕೆಯನ್ನು ಮುಟ್ಟುತ್ತಾನೆ ವಿಷಯ ಗೊತ್ತಾಗಿ ಕುಞ್ಞೈಳೇಪ್ಪನ್ ಪಲಕುರಂಬನನ್ನೂ ಬಳಗವನ್ನೂ ಕಡಿದು ಕೊಂಡ ರಾಜ ಅವಳಿಗೆ ಮಾಫು ನೀಡಲು ತಯಾರಾದರೂ ಆಕೆ ಕಲ್ಲುಮ್ಮ ಕಲ್ಲೇರಿ ಮಮ್ಮಿಯೊಂದಿಗೆ ಹೋದಳು

ಕುಟ್ಟನಾಡಿನ ಹಿನ್ನೀರ ಗ್ರಾಮಗಳಲ್ಲಿ ಪ್ರಚಾರದಲ್ಲಿದ್ದ ಕೆಲ ಕತೆಗಳಲ್ಲಿ ಈ ಆಚಾರದ ಕುರಿತಾದ ಪರಮಾರ್ಶೆಗಳನ್ನು ಕಾಣಬಹುದು.

ಗುಲಾಮರಾರಿದ್ದ ಪುಲಗಿರಗೂ ಪಱಯಿಗೂ ಸಣ್ಣದೊಮದು ಸ್ವಾತಂತ್ರ್ಯವನ್ನು ನಿಡಲಾಗಿತ್ತು ಆದರೆ ಅವರು ಅದನ್ನು ಸಿಕ್ಕಾಬಟ್ಟೆ ಬಳಸ ತೊಡಗಿದರು. ಯಾರು ಅವರನ್ನು ದಂಡಿಸಲು ಇರಲಿಲ್ಲ ,

ಅವರ ಉಪಟಳ ಒಂದಿಷ್ಟು ಮೇಲೆ ಮೀರಿದರೂ ಸಹಿಸಿ ಸುಮ್ಮನಿರುವುದು ಮಾತ್ರ ದಾರಿಯಾಗಿತ್ತು ಮಕರ ಮಾಸದ ಇಪ್ಪತ್ತೆಂಟು ಉಚ್ಚಾರ ತೊಡಗಿದರೆ 'ಪೇಡಿಕ್ಕಾಲಂ' (ಭಯದ ಕಾಲ) ವಾಗಿತ್ತು ಆ ಕಾಲಗಳಲ್ಲಿ ಪಱಯರೂ ಪುಲಯರೂ ಸವರ್ಣರ ಮನೆಗಳನ್ನು ಹೊಕ್ಕು ಸ್ತ್ರೀಯರನ್ನು ಹಿಡಿದೊಯ್ಯಲು ಶ್ರಮಿಸಿವರು ನೇರ ಮನೆಗೆ ಪ್ರವೇಶಿಸಲು ಸಾಧ್ಯವಿಲ್ಲದಲ್ಲಿ ದೂರದಿಂದ ಭೂಮಿಯಲ್ಲಿ ದರೆ ತೋಡಿ, ಸುರಂಗ ರಚಿಸಿ ಒಳಪ್ರವೇಶಿಸಲು ಯತ್ನ ನಡೆದುದೂ ಇದೆಯಂತೆ

ಬಹಳ ಹಿಂದೆ ಒಂದೆಡೆ ದೊಡ್ಡ 'ತಜಿವಾಡು'(ಮನೆತನ) ನಾಲು ಕೆಟ್ಟು ಮತ್ತು ಪಡಿಱರೆ (ಸುತ್ತುಮದಿಲಿವೆ) ಮನೆಯದು ಯಾವಾಗಲೂ ಪಡಿಪರೆ ಕಾಯಲು ನಾಲ್ಕೈದು ಮಂದಿ ಇರುತ್ತಾರೆ ಖಡ್ಗ ಈಟಿ ಇತ್ಯಾದಿ ಆಯುಧಗಳಿಂದ ಸಜ್ಜಿತರು ಆ ತಜಿವಾಡಿನಲ್ಲಿ ಸುಂದರಿಯಾದ ಒಬ್ಬಳು ಪುಟ್ಟಿ

ಹೇಗೋ ಅವಳನ್ನು ಕಂಡ ಪಜೆಯ ಹುಡುಗನಿಗೆ ಮನಸ್ಸಿನಲ್ಲಿ ಆಸೆ ಅಂಕುರಿಸಿತು. ಆತ ತಂಡ ಕಟ್ಟಿದ ಒಂದು ಸಂಜೆ ಮನೆಯ ಹಿಂದುಗಡೆ ಸೇರಿದರು.

ಭೂಮಿಯ ಅಡಿಯಿಂದ ಸಾಲು ತೆರೆದರು ಕೊನೆಯೊಳಕ್ಕೆ ಹೋಗಲು ಶ್ರಮಿಸಿದರು ಅಪಾಯದ ಸುಳಿವರಿತ ಹುಡುಗಿ, ಪಿಳ್ಳಮುಜಿ(ಪುಟ್ಟ ಕೋಣೆ) ಪ್ರವೇಶಿಸಲು ಯತ್ನಿಸಿದ ಒಬ್ಬೊಬ್ಬ ಪಜೆಯನ ತಲೆಗೂ ಕುದಿಯುವ ತುಪ್ಪ ಸುರಿದು ಪಾರಾದಳು

ನೆಡುಮುಡಿಯಲ್ಲಿನ ಕಳರಿ (ಗರಡಿ) ಯ ಕರಿಂಕಾಳಿ ದೇಗುಲದ ಮುಂದಿನ ಆಲದ ಮರಕ್ಕೆ ಸಂಬಂಧಿಸಿದ ಕತೆಯೊಂದು ಈ ಆಚಾರವನ್ನು ಕೇಂದ್ರಿಕರಿಸಿದೆ ಹಿಂದೊಮ್ಮೆ 'ತೆರಮತುತ' ಮನೆಯ ಒಬಾಕೆ ಸಂಜೆ ಬಳಿಕ ದನದ ಹಾಲು ಕರೆಯುತ್ತಿದ್ದಳು, ಆಹೊತ್ತಿಗೆ ಹೊರಗೆ ಪಜೆಯರು ತಲುಪಿದರು ಮನೆಯಲ್ಲಿ ಗಂಡಸರು ಯಾರು ಇಲ್ಲ, ದನವನ್ನು ಕರೆಯುತ್ತಿದ್ದ ಹುಡುಗಿ ಅಪಾಯವನ್ನು ಕಂಡು ಕೊಂಡಳು ಪಱಪ್ಪೇಡಿಯ ಹಲವು ಕತೆಗಳು ಅವಳಿಗೆ ಗೊತ್ತಿದೆ.

ಹಾಲು ಕರೆಯುವುದು ಮುಗಿಯಲು ಆಯಿತು. ಪಱಯರು ಕಾದು ಕಾದು ತಾಳ್ಮೆ ಕೆಟ್ಟಿತು. ಹೊತ್ತು ಕಪ್ಪಾಗತೊಡಗಿತು . ಇಂಥ ಒಂದು 'ಹಾಲು ಕರೆಹ' ಉಂಟೇ?

ಪಱಯನು ಕೊಟ್ಟಿಗೆಗೆ ಹೋದ ಅಲಲಿ ಕರೆಯದಲ್ಲಿದ್ದ ಹುಡುಗಿ ಇಲ್ಲ ಉಟ್ಟ ಬಟ್ಟೆಯನ್ನು ಒಮದು ಗೂಟಕ್ಕೆ ಹೋದಿಸಿದ್ದಳು ಯಾರೋ ಒಬ್ಬ ಕೂತಿರುವ ಹಾಗೆ ದೂರದಿಂದ ಅದು ಕಾಣುತ್ತಿತ್ತು .

ಆ ಪೆಣ್ಣುಪಿಳ್ಳ (ಹುಡುಗಿ) ಆಗಲೇ ಅಲ್ಲಿಂದ ಪಾರಾಗಿದ್ದಳು ಪಱಯರು ಅವಳನ್ನು ಹುಡುಕಿ ನಾಲ್ಕು ಕಡೆಗಳಲ್ಲೂ ಅಲೆದರು.

ಮನೆಯ ಒತ್ತಿನಲ್ಲಿರುವ ಕೊಡುಂಕಾಳಿ ದೇಗುಲದ ಬಾಗಿಲು ತಳ್ಳಿ ತೆರೆದು ಹುಡುಗಿ ಗರ್ಭಗುಡಿಯಲ್ಲಿ ಆಶ್ರಯ ಪಡೆದಳು ಅವಳು ಕೊಟ್ಟಿಗೆಯೆಂದು ತೊಡಗಿ ದೇಗುಲದ ವರೆಗೆ ನೆಲದ ಮೇಲೆ ಉರುಳಿಕೊಂಡೇ ಹೋಗಿದ್ದಳು ಪೂರ್ತಿ ನಗ್ನೆಯಾಗಿ.

ಪಜಿಯು ದೇಗುಲದ ಒಳಕ್ಕೆ ಉಹೋದರು ಕೊಂಡುಕಾಳಿಯನ್ನು ಅಪ್ಪಿ ಹಿಡಿದಿದ್ದ ಹುಡುಗಿಗೆ ಉಪಟಳವಿತ್ತರು.

ಅರ್ಭಟದೊಂದಿಗೆ ಒಂದು ಬಿರುಗಾಳಿಯೆದ್ದಿತು ಮರುದಿನ ನೊಡಿದಾಗ ದೇವಿಯನ್ನು ಅಪ್ಪಿಹಿಡಿದ್ದ ಹುಡುಗಿ ಅಲ್ಲೆ ಸತ್ತಿದ್ದಳು ದೇಗುಲದ ಆಲದ ಮರದಲ್ಲಿ ಅವರು ಪರಯರು ಸತ್ತು ಓರೆಯಾಗಿ ಮಲಗಿದ್ದರು.

ಭಗವತಿ ತೋರಿದ ಶಿಕ್ಷೆ

ಪಜಿಪ್ಪೇಡಿಯ ಕಾಲ ಕಳೆದಿದೆಯಾದರೂ ಅದನ್ನು ನೆನಪಿಸುವ ಒಂದು ಆಚಾರ ಕುಟ್ಟನಾಡಿನಲ್ಲಿ ಈಚಿನ ಕಾಲದ ವರೆಗೆ ಇತ್ತೆಂದು ಹಳಬರು ಹೇಳುತ್ತಾರೆ.

ಮಕರ ಮಾಸದ ಇಪ್ಪತ್ತೆಂಟನ್ನೇ ದಿನ ತೊಡಗಿದರೆ ಪುಲಯರೂ ಪಜಿಯರೂ ಗುಂಪುಕೂಡಿ, ದಾರಿಗಳ ಸಂದುಗೊಂದುಗಳಲ್ಲೂ ಗದ್ದೆಗಳ ಹುಣಿಗಳನ್ನೂ ಹಾಡನ್ನು ಹಾಡಿ ಬೊಬ್ಬರಿದು ನಡೆಯುತ್ತಿದದರು ಹಾಡುವುದೆಂದರೆ ಹೊಯ್ಯಾ ಹೇಯ್. . . ಹೋಯ್ಯಾ ಹೋಯ್ ಎಂದು ಶಬ್ದ ಮಾಡುವುದು ಈ ಆಚಾರ ಇಂದು ಉಳಿದಿಲ್ಲವಾದರೂ ಹಿಂದೆ ಇಂಥದರಲ್ಲಿ ಭಾಗವಹಿಸಿದ್ದ ಕೆಲವರಾದರೂ ಇವತ್ತೂ ಕುಟ್ಟನಾಡಿನಲ್ಲಿ ಬದುಕಿದ್ದಾರೆ.

ದಕ್ಷಿಣ ಮಲಬಾರಿನ ಹಳೆಯ ಪೊನ್ನಾನಿ ತಲೂಕಿನಲ್ಲಿ ಮಣ್ಣಾನ್, ಪಜಿಯನ್ ಎಂಬೀ ಜಾತಿಗಳವರನ್ನು ಮೇಲು ಜಾತಿಗಳ ಸ್ತ್ರೀಯರು ವಿಶೇಷತ ಗರ್ಭಿಣಿಯರು ಬಹಳ ಭಯದಿಮದಲೇ ನೋಡುತ್ತಿದ್ದರು ಮಂತ್ರವಾದ, ಒಡಿ (ಮಾಟ) ಮಾರಣ ಮೊದಲಾದ ದುಷ್ಕರ್ಮ ಮಾಡುವ ಜನರು ಇವರೆಂಬ ನಂಬಿಕೆಯ ಈ ಭಯದ ಕಾರಣ ಇವರು ಮನೆಯೊಳಗೆ ನಿದ್ರೆಯಲ್ಲಿರುವ ಗರ್ಭಿಣಿಗಳನ್ನು ಮಂತ್ರವಾದದ ಮೂಲಕ ಹೊರಕ್ಕೆ ಭರಿಸಿ ಹೊಟ್ಟೆಯಿಂದ, ಮಗುವನ್ನು ಹೊರಕ್ಕೆ ತೆಗೆದ ಬಳಿಕೆ ಅವರನ್ನು ಸ್ವಸ್ಥಾನದಲ್ಲಿ ಮಲಗಿಸುತ್ತಾರೆ ಎಂಬುದರಿಮದ ಗರ್ಭಿಣಿಯರು ರಾತ್ರಿ ವೇಳೆ ಹೊರಕ್ಕೆ ಬರಲಾರರು,.

ಈ ಕಡೆಗಳಲ್ಲಿ ಮಾತೊಂದು ಪ್ರಚಾರದಲ್ಲಿದೆ 'ಪುಲಯನ್ ನಯಿಚ್ಚಾ ಪಜಿಯನ್ ತಿನ್ನುಂ' (ಪುಲಯ ದುಡಿದು ಪಜಿಯ ತಿಂಬ) ಅಂತ ಸಾಮಾನ್ಯ ವಾಗಿ ಪುಲಂದರು ಕೃಷಿಕರು ಒಳ್ಳೆಯವರಾಗಿ

ದುಡಿದು ಬಾಳುವವರು ಆದರೆ ಮಂತ್ರವಾದದ ಮೂಲಕ ಪಱಯರು ಪುಲಯರು ಬೆಳೆದ ಧಾನ್ಯಾದಗಿಳನ್ನುಒಳಗೆ ಹಾಕುವರು ಎಂಬುದು ಮೇಲಿನ ಮಾತಿನ ಸಾರ.

ಪಱಯರ ಹಾಗೆ 'ನಾಯಾಡಿ' ಎಂಬ ಜನಾಂಗದವರನ್ನೂ ಮೇಲು ಜಾತಿಯವರು ಬಹಳವಾಗಿ ಹೆದರಿಯೇ ನೋಡುತ್ತಿದ್ದರು ಕೆಳಜಾತಿಗಳಲ್ಲಿ ಅತ್ಯಂತ ದೂರದಲ್ಲಿ ನಿಲ್ಲ ಬೇಕಾದವರಾಗಿದ್ದರು. ದಕ್ಷಿಣ ಮಲಬಾರಿನ ನಾಯಾಡಿ'ಗಳು (ಬೇಟೆಗಾರರು) ಮಕ್ಕಳು ಅತ್ತರೆ, ನಾಯಾಡಿ ಹಿಡಿದುಕೊಂಡು ಹೋಗ್ತಾನೆ ಎಂದು ಹೇಳಿ ಈಗಲೂ ತಾಯಮದಿರು ಹೆದರಿಸುವುದುಂಟು ಮಾತ್ರವಲ್ಲ 'ನಾಯಾಡಿ ಹಿಡಿದು ಕೊಂಡು ಹೋಗಿ ಬಾಯಿಯಲ್ಲಿ ಉಗುಳಿ ಮಗುವನ್ನು ಅವರ ಗುಂಪಿಗೆ ಸೇರಿಸುತ್ತಾನೆ. ಎಂಬ ನಂಬಿಕೆ ನೆಲಸಿದ್ದರಿಂದ ಮಕ್ಕಳೂ ಸ್ತ್ರೀಯರೂ ಹೆದರಿ ಒಳಗಿನಿಂದ ಹೊರಗೆ ಬದಲೂ ಹಿಂಜರಿಯುತ್ತಿದ್ದರು.

ಸಾಹಿತ್ಯ ತಕಱ ಶಿವಶಂಕರ ಪಿಳ್ಳ ಅವರ 'ಕಯರ್' ಕಾದಂಬರಿಯಲ್ಲಿ ಈ ಕೆಳಗಿನಂತೆ ವಿವರಣೆ ಇದೆ

"ಒಬ್ಬೊಬ್ಬ ಪಱಯನಿಗೂ ಪುಲಯನಿಗೂ ಒಂದೊಂದು ತಱನಾಡಿನವರು (ಗುಲಾಮರಾಗಿ) 'ಅಡಿಯಾನ್' ಗಳಾಗಿ ಗುಲಾಮರಾಗಿ ಬರೆದುಕೊಂಡು ಹೋಗುವಾಗ ಅದನ್ನು ಒಲ್ಲದೆ ಒಂಟಿಗಳಾಗಿ ಪತ್ಯೇಕ ನಿಂತ ಕೆಲ ಪಱಯರು ಇದ್ದರು ಅವರು ಹೆಸರು ಹೇಳಿದರೆ ಅಳುವ ಮಕ್ಕಳು ಅಳು ನಿಲ್ಲಿಸುತ್ತಿದ್ದವು ಹೆಂಗಸರು ಅಡಗಿಕೊಳ್ಳುವರು .

ಮರಕ ಮಾಸ 28 ನೆ ದಿನಾಂಕದಿಂದ ಇರುಪತ್ತೆಟ್ಟಿಚ್ಚಾರಂ ತೊಡಗುತ್ತದೆ ಅಂದಿನಿಂದ ಪಱಯರು ಕೆಲವು ಸ್ವಾತಂತ್ರ್ಯ ತೆಗೆದುಕೊಳ್ಳುತ್ತಾರೆ. ಬರೆಸಿಕೊಂಡ ಅಡಿಯಾನ್‌ಗಳ ಸಹಿತ 'ಅಡಿಯಾನ್' ಆಗಿ ಬರೆಸಿಕೊಳ್ಳದ ಪಱಯನಿರುವ ಎನಾದರೆ ಆತ ರಂಬಾಟದೊಂದಿಗೆ ಬಾಚಿ ನಡೆಯುತ್ತಾನೆ. ಅವನನ್ನು ಕೇಳಲು ಯಾರಿದ್ದಾರೆ?

ಮೃಗಗಳಿಗೆ ಕೆಲವು ಸ್ವಾತಂತ್ರ್ಯಗಳನ್ನು ಕೊಡಬೇಡವೇ? ಕನ್ನಿ (ಕನ್ಯಾ) ಮಾಸದಲ್ಲಿ ವಾತ್ಸಲ್ಯದೊಂದಿಗೆ ಸಾಕುವ ನಾಯಿ ಕೂಡ ಹಿಡಿತ ತಪ್ಪಿಸಿಕೊಂಡು ಹೋಗುವುದಿಲ್ಲವೆ? ಹಾಗೆ ಆಗಿರಬಹುದು.

'ಪಱಪ್ಪೇಡಿ'

ಇರುಪತ್ತಿಟ್ಟಿಚ್ಚಾರಂ (28 ನೇ ದಿನ) ಬಂತಾದರೆ 'ಪಱಪ್ಪೇಡಿ' ಜಾಗ್ರತೆ ಇರಬೇಕು 'ಪಱಪ್ಪೇಡಿ' ಊರು ತುಂಬ ಆಚರಣೆಗೊಳ್ಳುತ್ತದೆ. ಅದಕ್ಕೆ ಮೊದಲೆ ಸಜ್ಜಾಗಲು ಇದೆ ಏನೂ ಆದೀತು

'ಇರುಪತ್ತೆಟ್ಟಿಚ್ಚಾರಂ' ಶುರುವಾದರೆ ಹುಸಿಬಿಸಿಲಿಗೂ ಹಳದಿ ಬಣ್ಣ ನಾಡೆಂಬ ನಾಡೆಲ್ಲ ಹಳದಿಯಾಗಿರುತ್ತದೆ ಅಗಲಕ್ಕೆ ಹರಡಿ ಮಲಗಿದ ಗದ್ದೆಗಳೆಲ್ಲ ತೆಳುವಾದ ಹಲದಿ ರೇಶ್ಮೆ ಬಟ್ಟೆ ಹಾಸಿದಂತಿರುತ್ತದೆ.

ಮತ್ತೆ ಹೆಂಗಸರು ಗದ್ದೆಗಿಳಿಯಲಾರರು, ಹುಲ್ಲು ಕೆತ್ತುವುದಕ್ಕೆ ಸಂಜೆಯಾಯತಾದರೆ ಹೆಂಗಸರು ಪುರೆ (ಗುಡಿಸಲು) ಯಿಂದ ಹೊರಗಿಳಿಯಲಾರರು'

ಮೇಲೆ ಉದ್ದರಿಸಿದ ಬರಹದಿಮದ ಕೇರಳದ ತೆಂಕು–ಬಡಗು ಭೇದ ವಿಲ್ಲದೆ ಎಲ್ಲೆಡೆ ನೆಲಸಿದ್ದ ಒಂದು ಆಚಾರವಾಗಿತ್ತು ಪುಲಪ್ಪೇಡಿ ಮತ್ತು ಮಣ್ಣಾಪ್ಪೇಡಿ ಎಂಬುದು ವ್ಯಕ್ತವಾಗುತ್ತದೆ ಕೇರಳದ ಜಾತಿ ರಚನೆಯಲ್ಲಿ ಕೆಳತಲದಲ್ಲಿದ್ದ ಮಣ್ಣಾನ್, ಪುಲಯನ್, ಪಱಿಯನ್, ಎಂಬ ವಿಬಾಗದ ವರೇ ಈ ಆಚಾರದಲಲಿ ಪಾಲುಗೊಳ್ಳುತ್ತಿದ್ದವರು 'ಮಣ್ಣಾನ್' ಜನರೂ ಉತ್ತರ ಕೇರಳದ 'ವಣ್ಣಾನ್' ಜಾತಿಯವರೂ ಒಮದೇ ವರ್ಗದವರು ಎನ್ನುತ್ತಾರೆ. ಇವರ ಕುಲವೃತ್ತಿ ವಯದ್ಯ ಮತ್ತು ಮಂತ್ರವಾದ ಮಲಬಾರಿನಲ್ಲಿ 'ತೆಯ್ಯಂ' ತಿಱಗಳನ್ನು ಕಟ್ಟಿ ಆಡುವ ಇವರು ಒಳ್ಳೆಯ ವಾದ್ಯವಾದಕರೂ ಹೌದು ಇವರ ಸ್ತ್ರೀಯರು ಮಡಿ ಮಾಡಿವ (ಒಗೆಯುವ) ಕೆಲಸ ಮಾಡುತ್ತಾರೆ. ' ವಣ್ಣಾತ್ತಿ ಮಾಱ(ವಣ್ಣಾನ್ ಒಗೆತದವಳು ಕೊಟ್ಟು) ಮಾಱ (ಮಡಿ) ಉಟ್ಟರೆ ಅಶುದ್ದಿ ತೊಲಗಿತು ಎಂದು ಬ್ರಾಹ್ಮಣರದೂ ನಂಬಿಕೆಯಾಗಿತ್ತು ಪುಲಯನ್ ಜನರು ಪರಂಪರೆಯಿಂದಲೇ ಮಂತ್ರವಿದ್ಯೆ ತಿಳಿದವರು ತೆಯ್ಯಂ ತಿಱ ಮೊದಲಾದ ಅನುಷ್ಠಾನ ಕಲೆಗಳಲಿ ಕೋಲಂ ಕಟ್ಟಿ ಆಡುವವರು ಪಱಿಯನ್ ಬಿದಿರಿನಿಂದ ಬಟ್ಟೆ ಮೊರಗಳನ್ನು ಹೆಣೆದು ಮಾರಿ ಜೀವಿಸುವವರು ಅನುಷ್ಠಾನ ಕಲೆಗಳಲ್ಲಿ ಭಾಗವ ಹಿಸುವ ಇವರೂ ಮಂತ್ರವಾದಿಗಳೇ 'ಒಡಿ' 'ಮಾರಣ' ಮೊದಲಾದ ದುರ್ಮಂತ್ರವಾದಗಳಲ್ಲೂ ಇವರು ಸಮರ್ಥರಾಗಿದ್ದರು ಎಂದು ನಂಬಿಕೆ ವ್ಯಾಪಿಸಿದೆ

'ಪೇಡಿ' (ಭಯ) ಕ್ಕೆ ಒಳಗಾಗುವ ಸ್ತ್ರೀಯರು ಸಾಮಾನ್ಯವಾಗಿ ಅಂದಿನ ಮೇಲುಜಾತಿಯವರಾಗಿದ್ದರು ಎನ್ನಬಹುದು ಬರ್ಬೊಸ ಮತ್ತು ಇಳಂಕುಳಂ ಅವರು ವ್ಯಕ್ತವಾಗಿ ಅದು ನಾಯರ್ ಜಾತಿಯವರೆಂದು ಹೇಳಿದ್ದಾರೆ ಬ್ರಾಹ್ಮಣ ಸ್ತ್ರೀಯರು ಮೊದಲೆ 'ಅಂರ್ತನಂ' ಹಸರಿನೊಂದಿಗೆ ಮನೆಯ ಒಳಗೆ ಬಾಳಿ ಹೊರಗೆ ಕಾಣಿಸಿಕೊಳ್ಳದ ಸ್ವಭಾವದವರು ಅವರು ದೇಗುಲಗಳಿಗೆ ಹೋಗುವಾಗ ದೇವಹನ್ನಿಡಿಯಾಗಿ ಬಟ್ಟೆಯಿಂದ ಮುಚ್ಚಿ ಮರೆಕೊಡೆಯಿಂದ ಮುಖವೂ ಇತರರಿಂದ ಮೆರೆಮಾಡಿ ನಡೆಯುವವರು ನಾಯರ್ ಸ್ತ್ರೀಯರು ಉತ್ಸವಗಳಿಗೂ ಪೂರಂ ಹಬ್ಬಕ್ಕೂ ಹೋಗುವಾಗ ಜತೆಯಲ್ಲಿ ಒಬ್ಬಳೆ ಇಬ್ಬರೋ ಕೆಲಸದವರು (ಸಖಿಯರು) ಇರುತ್ತಿದ್ದರು ಗಂಡಸರ ರಕ್ಷನೆಯಲ್ಲೇ ಹಲವು ಬಾರಿಯೂ ಹೋಗುವುದು, ಬರುವುದು

'ಪುಲಪ್ಪೇಡಿ' ಯ ಕಾಲದ ಕುರಿತು ವ್ಯತ್ಯಾಸ್ತ ಅಭಿಪ್ರಾಯಗಳು ನೆಲಸಿವೆ ಆದರೆ ಈ ಭಿನ್ನ ಅಭಿಪ್ರಾಯಗಳ ನಡುವೆ ಒಂದು ಸಾಮಾನ್ಯ ಅಭಿಪ್ರಾಯ ಕಾಣಿಸುತ್ತದೆ ಅದು ಕೊಯ್ಲು ಮುಗಿದ ಅಥವಾ ಕಾವುಗಳಲ್ಲಿ ತೆಯ್ಯಂ, ತಿಟ, ಪಡಯಣಿ ಇತ್ಯಾದಿ ಅನುಷ್ಠಾನಗಳು ನಡೆಯುವ ಅವಧಿಯಲ್ಲೇ 'ಪುಪ್ಪೇಡಿ' ಆಚರಿಸುವುದೆಂಬುದು ಈ ಕಾಲಗಳಲ್ಲಿ ಸಾಮಾನ್ಯವಾಗಿ ಜಾತಿ ವ್ಯವಸ್ಥೇಯ ನಿಷೇಧಗಳು ಸಡಿಲವಾಗಿರುತ್ತವೆ. ಕೋಲವನ್ನು ಕಟ್ಟಿದ ಮೇಲೆ ಈ ಕೆಳಜಾತಿಯವರಿಗೆ ಮೇಲು8 ವರ್ಗದವರ ಮನೆಯಂಗಳಕ್ಕೆ ಪ್ರವೇಶವಿದೆ ವರ್ಷಕ್ಕೊಮ್ಮೆ ಪುಲಯರಿಗೆ ಹೆಚ್ಚು ಸ್ವಾತಂತ್ರ್ಯ ನೀಡಿದ್ದು ಉಂಟೆಂಬ ಅಭಿಪ್ರಾಯವೂ ಇದೆ ಇದು 'ಉಲಯ ಶನಿಯಾಳ್ಚ(ಪುಲಯ ಶನಿವಾರ) ಎಂಬ ಹೆಸರಿನಲ್ಲಿ ಕರೆಸಿಕೊಳ್ಳುತ್ತಿತ್ತು ಶುಕ್ರವಾರ ಮಧ್ಯಾಹ್ನ ಸ್ತ್ರೀಯರೂ ಮಕ್ಕಳು ಒಂಟಿಯಾಗಿ ಹೋಗುವುದನ್ನು ಮನೆತನದ ಹಿರಿಯರು ನಿಷೇದಿಸಿದ್ದರೂ ಆ ದಿವಸ ಏನನ್ನಾದರೂ ಕಂಡು ಹೆದರಿದರೆ ಅಥವಾ ಯಾರನ್ನಾದರೂ ಹೆದರಿಸಿದರೆ ಮರಣ ಕುಡ ಉಂಟಾದೀತೆಂಬ ನಂಬಿಕೆ ಮಲಬಾರಿನಲ್ಲಿ ಹರಡಿತ್ತು ಇದೆಲ್ಲಾ ಹೌದಾದರೂ 'ಪುಲಪ್ಪೇಡಿ' ಆಚರಣೆ

ಸಂಜೆಯ ಮೇಲೆಯೆ ಎಂಬುದೇ ನಿರ್ಣಯ

'ಪುಲಪ್ಪೇಡಿ' ಅಚರಿಸುತ್ತಿದ್ದ ರೀತಿ ಬೆಗೆ ಮತಭೇದಗಳಿವೆ ಮಣ್ಣಾನ್ ಮುಟ್ಟಿರುವುದು ಗರ್ಭಿಣಿ ಸ್ತ್ರೀಯರನ್ನಾದರೆ ಆಕೆ ಹೆರುವವರೆಗೆ ಅವಳನ್ನು ಆತ ಪತ್ನಿಯಾಗಿ ಸ್ವೀಕರಿಸಲಾರ ಆಕೆಗೆ ಆತ ಪ್ರತ್ಯೇಕ ಗುಡಿಸಲು ಕಟ್ಟಿ ಅಲ್ಲಿ ಇರಿಸುತ್ತಾನೆ. ಅವಳು ಹೆತ್ತುದುಗಂಡಾದರೆ ಅವಳು ಮರಳಿ ತನ್ನ ಮನೆಗೆ ಹೋಗಬಹುದು ಹೆಣ್ಣನ್ನು ಹೆತ್ತರೆ ಆಕೆ ಮಣ್ಣಾನ್ ಹೆಂಡತಿಯಾಗಿ ಮುಂದುವರಿಯಬೇಕು

ಕೆಲವು ಸಿದ್ದಾಂತಗಳು

'ಪೇಡಿ' ಆಚರಣೆ ಹುಟ್ಟಿಕೊಂಡುದರ ಬಗೆಗೆ ವಿಭಿನ್ನ ಸಿದ್ದಾಂತಗಳು ನೆಲಸಿವೆ ಇವುಗಳಲ್ಲಿ ಅತ್ಯಂತ ಮುಖ್ಯವಾದವುಗಳು ಇಳಂಕುಳಂ ಕುಞ್ಞನ್ ಪಿಳ್ಳ ಅವರು ರೂಪಿಸಿರುವವುಗಳಾಗಿವೆ ಚಾತುರ್ವರ್ಣ್ಯ ಕೇರಳದಲ್ಲಿ ರೂಪುಗೊಳ್ಳುವ ವರೆಗೆ ಎಲ್ಲಾ ವರ್ಗಗಳು ಸಾಧಾರಣವಾಗಿ ಸಮಾನ ಸ್ಥಾನಮಾನ ಉಳ್ಳವುಗಳಾಗಿದ್ದವು ಬ್ರಅಹ್ಮಣ ಮತ ಪ್ರಾಬಲ್ಯಕ್ಕೆ ಬಂದ ಬಳಿಕವೆ ಜಾತಿ ವ್ಯವಸ್ಥೇ ಪ್ರಬಲವಾದುದು ಪುಲಯರು ನಾಯರು ತಮ್ಮೊಳಗೆ ಭೇದವಿಲ್ಲದೆ ಕಾಲದಲ್ಲಿ ಎಲ್ಲಾ ಸ್ತ್ರೀಪುರುಷರಿಗೆ ವರ್ಷಕ್ಕೊಮ್ಮೆ ಅನಿಯಂತ್ರಿತ ಸ್ವಾತಂತ್ರ್ಯ ಇದ್ದಿರಬೇಕು ಜಾತಿ ವ್ಯವಸ್ಥೆ ಊರ್ಜಿತಕ್ಕೆ ಬಂದ ಬಳಿಕವೂ ಮುಂದುವರಿದು ಬಂದ ಈ ಸ್ವಾತಂತ್ರ್ಯವಾಗಿರಬೇಕು 'ಪುಲಪ್ಪೇಡಿ' ಎಂಬುದು ಮೊದಲ ಸಿದ್ದಾಂತ ಹಲವು ಯುರೋಪಿಯನ್ ರಾಷ್ಟ್ರಗಳಲ್ಲೂ ಕೆಲವು ಪ್ರತ್ಯೇಕ ದಿವಸಗಳಲ್ಲಿ ಜನರಿಗೆ 'ಅನಿಯಂತ್ರಿತವಾದ ಸ್ವಾತಂತ್ರ್ಯ' ಇರುವುದಾಗಿ 'ಕಾರ್ನಿಮೆ' ಅವರ ಬರಹವನ್ನು ಬೆಟ್ಟು ಮಾಡಿ ಅವರು ಪ್ರತಿಪಾದಿಸಿದ್ದಾರೆ.

ಎರಡನೇ ಸಿದ್ಧಾಂತ 'ಅಡಿಮ ಸಂಪ್ರದಾಯ' (ಗುಲಾಮ ಪದ್ಧತಿ) ಸಂಬಂಧವಾಗಿ ರೂಪಿತ ಹನೊಂದನೇ ಶತಮಾನದಲ್ಲಿ ನಡೆದಿರುವುದಾಗಿ ಹೇಳಲಾಗುವ ಚೇರ ಚೋಳ ಯುದ್ದನ ವರೆಗೂ ಪುಲಯರೂ ನಾಯರೂ ಎಲ್ಲಾ ಕೃಷಿ ಕೆಲಸವನ್ನು ಮಾಡಿಕೊಳ್ಳುತ್ತಿದ್ದರು ಯುದ್ದ ಬಂದೊಡನೆ ನಾಯರುಗಳು ಯುದ್ದಕ್ಕೆ ಹೋಗುವ ಅನಿರ್ಯತೆಗೆ ಸಿಲುಕಿದರು ಕೃಋಷಿಯು ಇವರು ಪುಲಯರು, ಪಱಯರು ಮೊದಲಾದ ಅಡಿಯಾಳುಗಳು ಮಾತ್ರ ಮಾಡುವ ಕೆಲಸವಾಗಯಿತು ಇದರಿಂದ 'ಅಡಿಮಗಳ' ಸಂಖ್ಯೆ ಹೆಚ್ಚಾಗ ಬೇಕಾದ ಅವಶ್ಯಕತೆ ಬಂತು ಸಮಾಜಕ್ಕೆ ಆಧಾರಭೂತವಾದ ಭತ್ತದ ಉತ್ಪಾದಕರು ಪುಲಯರೂ

ಪಱಯರು ಮಾತ್ರವಾಗಿದ್ದು ಮಧ್ಯ ಕಾಲ ಘಟ್ಟದಲ್ಲಿ ಅವರ ಜನಸಂಖ್ಯೆಯಲ್ಲಿ ಬರುವ ಕೊರತೆ ಒಂದು ಸಾಮಾಜಿಕ ಪ್ರಶ್ನೆಯೇ ಆಗಿರಬೇಕು ಈ ಪರಿಸ್ಥಿತಿಯಲ್ಲಿ ನಾಯರ್ ಸ್ತ್ರೀಯರನ್ನು ಹಿಡಿದು ಕೊಂಡು ಹೋಗಲು ಅವಕಾಶವನ್ನು 'ಅಡಿಮ' ಜಾತಿಗಳವರಿಗೆ ಅಳರ ಸರೆ ಶಾಸನಾತ್ಮಕವಾಗಿ ಒದಗಿಸಿದರು.

ಇನ್ನೊಂದು ಸಿದ್ದಾಂತ ಮಾರ್ಕ್ಸನ ವರ್ಗಸಂಘವಿನ ಸಿದ್ದಾಂತೊದೊಂದಿಗೆ ಸಂಬಂಧಿಸಿರುವಂಥದು ಈ ವಾದ ಪ್ರಕಾರ ಆ ರೀತಿ ಮಾಡುವುದು ವರ್ಗದ್ವೇಷವನ್ನು ಪ್ರಕಟಿಸಲು ಇರುವ ಉಪಾಧಿಯಾಗಿ ನಾಯರ್ – ಪುಲಯ ಸಂಘರ್ಷದ ನೆನಪಾಗಿಯೂ ವರ್ಗದ್ವೇಷ ಪ್ರಕಟನೆಗಿರುವ ಆಚಾರ ವಿಶ್ವಾಸಗಳ ಉಲ್ಲಂಘನೆಯಾಗಿಯೂ ಈ ಆಚಾರಕ್ಕೆ ಬೆಲೆಕಟ್ಟುತ್ತಾರೆ.

ಮತ್ತೊಂದು ಸಿದ್ದಾಂತ 'ಪೇಡಿ' ಆಚಾರವನ್ನು 'ಮರುಮಕ್ಕತ್ತಾಯಂ' (ಅಳಿಯ ಕಟ್ಟು) ಅವಿಭಕ್ತ ಕುಟುಂಬ ಪದ್ಧತಿಯೊಂದಿಗೆ ಜೋಡಿಸಿರುವುದಾಗಿದೆ 'ಮರುಮಕ್ಕತ್ತಾಯಂನಲ್ಲಿ ಆಸ್ತಿಯ ಸ್ವಾಮ್ಯ 'ತಱವಾಡಿನ' (ಮನೆತನದ) ಹೆಣ್ಣು ಸಂತತಿಯದಾಗಿತ್ತು ತಱವಾಡಿನ ಹಿರಿಯ ಗಂಡು ಮತ್ತು ಆತನ ತಂಗಿಯಂದಿರಲ್ಲಿ ಹಿರಿಯಳು ಅಥವ ಹಿರಿಯ ಹೆಣ್ಣು ಸಂತತಿ ಹೇಳಿದ ಹಾಗೆ ಕುಟುಂಬದ ಎಲ್ಲರೂ ವಿಧೇಯರಾಗಿ ಬಾಳಬೇಕು ಈವ್ಯವ್ಥೆಯ ವಿರುದ್ದ ಸೊಲ್ಲುತೆಗೆದ ಅಥವಾ ನಿಯಮವನ್ನು ಧಿಕ್ಕರಿಸಿದ ಯುವತಿಯನ್ನು, ತಱವಾಡಿನ ಮಾನ ಕಳೆದವಳೆಂದೂ, ತಪ್ಪಿತಸ್ಥಳೆಂದೂ ಮುದ್ರೆಯೊತ್ತಿ ಆಕೆಯನ್ನು ಹೊಲೆ ಮುಟ್ಟಿತು ಎನ್ನುವಂತೆ ಮಾಡಿ, ಆಕೆಯನ್ನು ಕೊಲ್ಲುವುದು ಅಥವಾ ಪುಲಯನಿಗೆ ಹಿಡಿದುಕೊಡುವುದು ಇತ್ಯಾದಿಯನನು ಮಾಡುತ್ತಿದ್ದರಿಬೇಕು8 ಈ ಬಗೆಯಲ್ಲಿ ತಱವಾಡಿನ ಹಿರಿಯನಿಗೆ ಅವಿಧೇಯತೆ ತೋರಿದ ಸ್ತ್ರೀಯರನ್ನು ಹದ್ದುಬಸ್ತಿಗೆ ತರಲು ಇದ್ದ ಆಚಾರವಾಗಿಬಹುದು 'ಪುಲಪ್ಪೇಡಿ'

ನಿಷೇಧ

'ಪೇಡಿ' ಆಚಾರದ ಕಠೋರತೆಯನ್ನು ಅರ್ಥ ಮಾಡಿಕೊಂಡಾಗಿರಬಹುದು ಕ್ರಿಸ್ತ ಯ 1969 (ಕೊಲ್ಲಂ ವರ್ಷ 871) ರಲ್ಲಿ ವೇಣಾಡಿನ ರಾಜ ಉಣ್ಣಿಕ್ಕೇರಳ ವರ್ಮ ಈ ಆಚಾರವನ್ನು ನಿಷೇಧಿಸಿದ

ತಿರುವಿದಾಂಕೋಡ್ ರಸ್ತೆ ಬದಿಯಲ್ಲಿ ಸ್ಥಾಪಿಸಿದ ಒಂದು ಶಿಲಾ ಫಲಕದಲ್ಲಿ ಈ ನಿಷೇಧಶಾಸನವನ್ನು ದಾಖಲಿಸಿ ಇರಿಸಿದೆ ಅದರ ಪಾಠ ಹೀಗಿದೆ.

"ಕನ್ನಿಗುರು ನಿಂತ ಕೊಲ್ಲಂ (ಶಕ) 871 ನೇ ವರ್ಷ ತೈಮಾಸಂ 25 ನೇ ದಿನಾಂಕ ವೀರಕೇರಳ ವರ್ಮ ಚಿಐವಾದ್ದತ್ತ ತಂಬುರಾನ್ (ಒಡೆಯ) ಕಲ್‌ಕುಳದಲ್ಲಿ ಆಗಮಿಸಿ ಉಪಸ್ಥಿತರಿದ್ದು ಆದೇಶವಿತ್ತ ಹಾಗೆ ಎರಡು ಬಗೆ ಮಹಾಜನವೂ ಕೂಡಿ ವಿಧಿಸಿದ ಮೊಜಿವು (ಶಾಸನ) ಇದು ತೋವಾಳಕ್ಕೆ ಸ್ಥಳನಾನು ಪಡುಭಾಗದಲ್ಲಿ ಕಣ್ಣೇಟಗೆ (ಸ್ಥಳನಾನು) ಪೂರ್ವ ಬಾಗದಲ್ಲಿ ಕಡಲಿಗೂ ಮಲೆಗೂ ಒಳಗಡೆ ಸೇರಿದ ನಾಡಿನಲ್ಲಿ 'ಪಿಲಪ್ಪೇಡಿ'ಯೂ 'ಮಣ್ಣಾಪ್ಪೇಡಿ'ಯೂ ಇಲ್ಲ ಎಂಬುದು ತಂಬೂರಾನ್ (ಒಡೆಯ) ಶ್ರೀಮನ್ನು ವಿಧಿಸಿದ ಪ್ರಕಾರ ಎರಡು ಬಗೆ ಮಹಾಜನ ಕೂಡಿ ವಿಧಿಸಿ ಕಲ್ಲು ಕಡಿದು ನಾಟಿದ ಆಜ್ಞೆ (ಇದನ್ನು) ಮಿರಿ 'ಪಿಲಪ್ಪೇಡಿಯೂ'ಮಣ್ಣಾಪ್ಪೇಡಿ' ಯೂ ಉಂಟಾಗುವ ಕಾಲದಲ್ಲಿ ಪಿಲಯರು, ಮಣ್ಣಾರ, ವಟಿಪ್ಪಿಳ (ಮೀನುಗಾರ) ಆದಿಯಾಗಿ ತಿವಿದು ಕಡಿದು ಹಾಕಲಾಗುವುದು ಈ ಆಜ್ಞೆ ಮೀರಿ ಪಿಲಪ್ಪೇಡಿಯೂ ಮಣ್ಣಾಪ್ಪೇಡಿಯೂ ಎಂಬಂಥದು ಹೆಣ್ಣುಮಕ್ಕಳಿಗೆ ಉಂಟಾದಲ್ಲಿ ಹೆಣ್ಣುಮಗಳು ಮಿಂದು ದಡವರಿದರೆ ದೋಷವಿಲ್ಲ ಎಂದು ವಿಧಿಸಿದೆ ಈ ರೀತಿ ಹುಲ್ಲೂ ಭೂಮಿಯೂ ಕಲ್ಲೂ ಕಾವೇರಿ (ನದಿ)ಯೂ ಇರುವ ಕಾಲದಲ್ಲಿ (ವರೆಗೆ) ನಡೆಯುವ ಹಾಗೆ ವಿಧಿಸಿತು ಭೇದ ಗೈದವರು ಗಂಗೆಯ ತೀರದಲ್ಲಿ ಕಾರವಾಸ ಹೊಂದುವರು, ಸೂರ್ಯಸ್ತದ ನೀರಿಗೆ ಹೋಗು (ಜಲಸಮಾಧಿಯಾಗು)ವರು

ಸವರ್ಣರು ಮತ್ತು ಅವರ್ಣರ ಪ್ರತಿನಿಧಿಗಳನ್ನು ಸೇರಿಸಿ ಪರ್ಯಾಲೋಚಿಸಿಯೆ ರಾಜ ಈ ಆಜ್ಞೆಯನ್ನು ಹೊರಡಿಸಿರುವುದು ಹಾಗಿದ್ದರೂ ಸಣ್ಣ ರೂಪದಲ್ಲಿ ಈ ಆಚಾರ ತಿರುವಿದಾಂ ಕೂಜಿನಲ್ಲಿ ಮತ್ತೆಯೂ ನೆಲಸಿತ್ತೆಂದು ಗೊತ್ತಾಗುತ್ತದೆ. ಈ ಆಚಾರ ತಿರುವಿದಾಂಕೂಜಿನಲ್ಲಿ ಮತೆಯೂ ನೆಲಸಿತ್ತೆಂದು ಗೊತ್ತಾಗುತ್ತದೆ 'ಪೇಡಿ' ನಿಷೇಧದ ವಿರುದ್ಧ ಗುಲಾಮರು ಹೋರಾಟ ಮುಮದುವರಿಸಿದ್ದರೆಂದೂ ಗೊತ್ತಾಗುತ್ತದೆ.'ವಲಿಯ ಕೇಶಿ ಕಥ' 4ಎಂಬ ಜಾನಪದ ಹಾಡಿನಲ್ಲಿ 'ಅಡಿಮ' 9ಅಡಿಯಾಳು) ಗಳ ಹಕ್ಕನ್ನು ಅದುಮಲು ಯುದ್ದಮಾಡಿ ವೀರಮರಣವನ್ನೈದಿದ ರಾಜಭಕ್ತನಾದ ಒಬ್ಬ ಅವರ್ಣ ವೀರನ ಕಥೆಯನ್ನು ವಿವರಿಸುತ್ತದೆ ಕೊಚ್ಚಿಯಲ್ಲೂ ಮಲಬಾರಿನಲ್ಲೂ ಬ್ರೀಟಿಷರ ಆಳ್ವಿಕೆ ಬಂದುದರೊಮದಿಗೆ 'ಪೇಡಿ' ಆಚಾರ ಕೊನೆಗೊಂಡಿತು.

ಪಣಿಯರ ಮದುವೆ

(ಆಚಾರ)

ಪಿ.ಸೋಮಶೇಖರನ್ ನಾಯರ್

ಟಿಪ್ಪಣಿ

ಭೌತಿಕಾವಸ್ಥೆಗಳು, ಕ್ರಿಯಾಂಶಗಳು ಇವೆರನ್ನೂ ಖಾಯಂಗೊಳಿಸುವ ನಂಬಿಕೆಗಳ ಮತ್ತು ಆಸಯಗಳ ಮಾನಸಿಕ ಲೋಕ ಇವೇ ಸಾಂಘೀಕಯತೆಯ ಜೀವನದ ಘಟಕಗಳು, ಇವುಗಳನ್ನು ಆಚಾರಗಳು ಕ್ರಿಯಾಂಶಕ್ಕೆ ಸೇರುತ್ತವೆ. ಆಚಾರಗಳನ್ನು ನೆಲೆನಿಲ್ಲಿಸುವುದು. ನಂಬಿಕೆಯಂಥ ಆಶಯಗಳಾಗಿವೆ. ಆಚಾರ ಅನುಷ್ಠಾನ ಮತ್ತಿತರ ಕೆಲಸಗಳು ಇವೇ ಕ್ರಿಯಾಂಶಗಳು ಒಳಗೊಳ್ಳುವಂಥವು ಜೀವನದ ಒಂದು ಕೆಲಸ ಅನುಷ್ಠಾನವೋ, ಆಚಾರವೋ, ಇವೆರಡಿರಂದಳೂ ಭಿನ್ನವಾದ ಚಟುವಟಕೆಯೋ ಎಂದು ತೀರ್ಮಾನಿಸುವುದು ಅದರ ಸ್ವಭಾವವನ್ನು ಆಧರಿಸಿಯೇ ಅಲೌಕಿಕವೋ, ದೇವತಾಪರವೋ ಆದ ಪ್ರತೀಕಾತ್ಮಕ ಕೆಲಸಗಳನ್ನೇ 'ಅನುಷ್ಠಾನ' ಎನ್ನುವುದು ಅದ್ದರಿಂದಲ ಅದು ತರ್ಕಾತೀತವಾಗುವುದು ತರ್ಕಾತೀತವೇ ಆಗಿರುವಾಗಲೂ ಅಲೌಕಿಕವಾದ ಕಟ್ಟುಪಾಡುಗಳೆಂದೂ ಇಲ್ಲದಿರುವುದು ಪ್ರತೀಕಾತ್ಮಕವೂ ಆದ ಕ್ರಿಯಾಂಶಗಳನ್ನು 'ಆಚಾರ'ಎಂದು ಕರೆಯಬಹುದು ಪಿತೃಗಳಿಗಾಗಿ ಇರುವ 'ಬಲಿಕರ್ಮ' (ಪಿಂಡಪ್ರಧಾನ) ಒಂದು 'ಅನುಷ್ಠಾನವೂ' ತಿಂಡಲ್ (ಮುಟ್ಟುವುದು) ಎಂಬುದು 'ಆಚಾರ' ವೂ ಆಗಿಬಿಡುವುದು ಈ ಅರ್ಥದಲ್ಲಿ ಆದರೆ ಅಡುಗೆ ಎಂಬುದು ಕ್ರಿಯಾಂಶ ಹೌದಾದರೂ 'ಆಚಾರ'ವೋ 'ಅನುಷ್ಠನ'ವೋ ಅಲ್ಲ ಅದು ಜೀವನದೊಂದಿಗೆ ರೇಖೀಯ ಸಂಬಂಧದಲ್ಲಿ ಇರುತ್ತದೆ ಆದರೆ ಇದೇ ಅಡುಗೆ ಎಂಬುದು ಹುಟ್ಟುಹಬ್ಬದ ಔತಣಕ್ಕಿರುವ ವಿಶಿಷ್ಟ ಅಡುಗೆ ಆಗುವುದಾದರೆ ಅದು 'ಆಚಾರ'ವೂ 'ಭಗವತಿ ಕಾವುಗಳಲ್ಲಿ 'ಕಲಂ ಕನಿಕ್ಕಲ್' (ಮಡಕೆ ಉರಿಸುವುದು) ಅಂದರೆ ಅನ್ನ ಬೇಯಿಸುವುದು 'ಅನುಷ್ಠಾನ' ಎನಿಸುತ್ತದೆ ಮೇಲೆ ವಿವರಿಸಿದ ಮೂರು ಕ್ರಿಯಾಂಶಗಳು ವ್ಯತ್ಯಸ್ತ ವಿಭಿನ್ನ ತಲದಲ್ಲಿರುವ ಆಶಯವಿನಿಮಯ ವಿನಿಮಯವನ್ನೇ ನಿರ್ವಹಿಸುವುದು ಎಂದರ್ಥ 'ಅನುಷ್ಠಾನ'ದ ತಲದವರೆಗೆ ಕೆಲ ಸಂದರ್ಭಗಳಲ್ಲಿ ತಲಪಬಹುದಾದರೂ 'ವಿವಾಹ'ವನ್ನು ಆಚಾರವಾಗಿಯೇ ಪರಿಗಣಿಸುವುದ ವಿವಾಹ ಎಂಬ ಆಚಾಉದ ಮೂಲಕ ಎರಡು ವಿಭಿನ್ನ

ಪರಸ್ಪರ ಸಂಬಂಧ ಸ್ಥಾಪಿಸುವುದಾದರೂ ಅದರ ಮೂಲಕ ವ್ಯಕ್ತಿ ಕುಟುಂಬವೆಂಬ ಒಂದು ಉಪಸಾಂಘೀಕತೆಯಿಂದ ಮತ್ತೊಂದು ಉಪಸಾಂಘಿಕತೆಗೆ ಕಿತ್ತು ನೆಡಲ್ಪಡುವುದಾಗಿಯೇ ಆಗ

ಉಂಟಾಗುವ ಭೌತಿಕವೂ ಮಾನಸಿಕವೂ ಆದ ಬವಣೆಗಳನ್ನು ಸಹನೀಯವನ್ನಾಗಿ ಮಾಡುವಂಥದು ವಿವಾಹಚಾರಗಳಲ್ಲಿ ಹೆಚ್ಚಿನವು ವ್ಯಕ್ತಿಯನ್ನು ಕುಟುಂಬವೆಂಬ ಒಂದು ಉಪಸಾಂಘಿಕತೆಯಿಂದ ಕಿತ್ತು ತೆಗೆಯುವುದಕ್ಕಿರುವ ವಿಯೋಗಚಾರಗಳೂ ಮತ್ತೊಂದು ಉಪಸಾಂಘಿಕತೆಯಲ್ಲಿ ಸೇರಿಸುವುದಕ್ಕಿರುವ ಸಂಯೋಗಚಾರಗಳೂ ಆಗಿವೆ ವಿವಾಹಚಾರಗಳೆಲ್ಲ ದಾಯಕ್ರಮ, ಉತ್ಪಾದನೆ ಮಾರ್ಗಗಳು, ಪರಿಸರ ಮೊದಲಾದ ಹಲವು ವಿಷಯಗಳಲ್ಲಿ ನಿರ್ಣಯಿಸಲ್ಪಡುವಂಥದು ವಿವಾಹಚಾರದ ಸ್ವಭಾವಗಳು

ಸಂಪಾದಕ

ಚಡಂಗಗಳ ವಿಶುದ್ದಿಯ್ಯೂ ಅವು ಎರೆದುಕೊಡುವ ಮಹತ್ತಾದ ಜೀವನದರ್ಶನಗಳನ್ನೂ ಮರೆತು ವಿವಾಹವನ್ನು ಸಡರಗದ ಮತ್ತು ಅಂತಸ್ತಿನ ಬಾಹ್ಯಪ್ರದರ್ಶನವಾಗಿ ಕಾಣುತ್ತಿರು ಇವತ್ತಿನ ಲೋಕಕ್ಕೆ, ಆದಿವಾಸಿಗಳ ವಿವಾಹ ಚಡಂಗಗಳು ವಿಚಿತ್ರವೆಂದು ತೋರರಬಹುದು ಒಂದೊಂದು ಆದಿವಾಸಿ ಸಮೂಹಕ್ಕೂ ವಿವಾಹದೊಂದಿಗೆ ಅನುಬಂಧಿಸಿ ಅನೇಕಾನೇಕ ಆಚಾರ ಅನುಷ್ಠಾನಗಳು ಇವೆ ನಾಗರಿಕತೆಯ ಅಡಂಬರ ಪ್ರದರ್ಶನ ಆದಿವಾಸಿಗಳಲ್ಲಿ ಇದೆಯಾದರೂ ಇವತ್ತೂ ಅವರು ಸ್ವಂತ ಆಚಾರ, ಅನುಷ್ಠಾನಗಳಲ್ಲಿ ನಂಬಿಕೆ ಉಳ್ಳವರಾಗಿದ್ದಾರೆ. ಹೆಚ್ಚು ಕಡಿಮೆ ಅವುಗಳನ್ನು ಅನುಸರಿಸುವುದರಲ್ಲಿ ಶ್ರಮಿಸುತ್ತಲೂ ಇದ್ದಾರೆ.

ಕೇರಳದ ವಯನಾಡಿನ ಆದಿವಾಸಿ ವರ್ಗವಾದ ಪಣಿಯರ ವಿವಾಹ ಪದ್ದತಿಐ ವಿವಾಗದೊಂದಿಗೆ ಜೊಡಿಕೊಂಡಿರುವ ಚಡಂಗದಲ್ಲಿ ಸೇರಿದ ಸಾಧಾರಣ ಮನುಷ್ಯನ ವಿಜ್ಞನವೂ ಈ ಲೇಖದನದ ಮೂಲಕ ಬಯಲುಗೊಳ್ಳ ಬಯಸುತ್ತವೆ.

ವಿವಾಹ ಚಡಂಗಗಳು

ಇತರ ಎಲ್ಲಾ ಆದಿವಾಸಿ ವರ್ಗಗಳಲ್ಲೂ ಉರ್ಜಿತದಲ್ಲಿರುವಂತೆ 'ಪಣಿಯ್‌ನ್' ಜನಾಂಗದಲ್ಲೂ ಸಗೋತ್ರವವಿವಾಹ ನಿಷಿದ್ದವಾಗಿದೆ ಪಿತೃಪದ್ದತಿ (ಮಕ್ಕತಾಯಂ)ಗೆ ಸೇರಿದ ಪಣಿಯರು ಮಾವನ ಮಗಳನ್ನೂ ತಮದೆಯ ಸಹೋದರಿ (ಅತ್ತೆ) ಯ ಮಗಳನ್ನೋ ಮದುವೆ ಆಗಲಾರರು ಏಕಪತ್ನಿವ್ರತವನ್ನು ಕಠಿನವಾಗಿ ಪಾಲಿಸುವವರು ಈ ವರ್ಗದವರು ಅಪೂರ್ವವಾಗಿ ಮಾತ್ರವೆ ಒಂದಕ್ಕಿಂತ ಹೆಚ್ಚು ವಿವಾಹವನ್ನು ಇವರು ಆಗುತ್ತಿದ್ದರು ಒಬ್ಬ ಸ್ತ್ರೀ ಬೇಕಾದಷ್ಟು ಗಂಡಂದಿರನ್ನು ಹೊಂದಬಹುದೆಂಬ ಸಂಪ್ರದಾಯ ಇವರಲ್ಲಿ ನಿಷಿದ್ದ ಬೇರೆ ಆದಿವಾಸಿ ಪಮುಡಗದವರನ್ನು ಇವರು ವಿವಾಹವಾಗಲಾರರು

ವರದಕ್ಷಿಣೆಗೆ ವಿರುದ್ದವಾಗಿ ಕನ್ಯಾಶುಲ್ಕ (ಪೆಣ್ಪಣಂ) ಕೊಟ್ಟು ಒಂದು ರೀತಿಯಲ್ಲಿ ಹೇಳುವುದಾದರೆ, ವಧುವನ್ನು ಬೆಲೆಗೆ ಖರೀದಿಸುವುದನ್ನೇ (ಟಚಿಡಿಡಿಉಚಿರಿಜ ಛಿಥಿ ಠಿಚಿಡಿಛಿಚಿಜ) ಒಬ್ಬ ಪಣಿಯನ್ ವಿವಾಹದ ಮೂಲಕ ಮಾಡುವುದು

ಹುಡುಗಿ ಮೈನೆರೆಯುವುದಕ್ಕೆ ಮೊದಲು ನಡೆಯುವ ವಿವಾಹ ಪಣಿಯನ್‌ಗಳಲ್ಲಿ ಇಲ್ಲವಾದರೂ ಅವಳು ವಯಸ್ಸು ತಿಳಿವಂತೆ ಮಾಡಿದರೆ ಆಕೆಗೆ ವಿವಾಹದ ಪ್ರಯವಾಯಿತೆಂದು ಗಣಿಸುತ್ತಾರೆ. ಸಾಮಾನ್ಯವಾಗಿ ಪಣಿಯನ್ ಹುಡುಗನಿಗೆ 'ಕುಞ್ಞಿಕ್ಕುಟ್ಟಿ' (ಕಿರಿಯಪುಟ್ಟಿ –ವಧು) ಯನ್ನು ಹುಡುಕಹೋಗುವುದು ಅವನ ತಾಯಿಯ ಸಹೋದರ ಅವನಿಗಿರುವ ಬಂಧುತ್ವದ ಹೆಸರು 'ಮುನ್ನೇನ್' ಊಣುಕ್ಕು' ಒಬ್ಬ ಬುಳಿ, ಪೊಣ್ಣುಕ್ಕು ಮೂನ್ನು ಬುಳಿ' (ಊಟಕ್ಕೆ ಒಂದೆ ಕರೆಹ, ಹೆಣ್ಣಿಗೆ ಮುರು ಕರೆಹ) ಎಂಬ ಪಣಿಯನ್ ಜಾತಿಯ ಪ್ರಮಾಣಕ್ಕೆ ಅನುಸಾರವಾಗಿ ಮೂರು ಘಟ್ಟಗಳಾಗಿ ವಧೂ ಅನ್ವೇಷಣೆ ನಡೆಯುತ್ತದೆ ಮೊದಲಬಾರಿ ಹೆಣ್ಣಿನ ಮನೆಗೆ ಹೋದಾಗ ಮನೆಯ ಜಗಲಿಯ ನೆಲದಲ್ಲಿರುವ ಅವರು ಕುಳ್ಳಿರುತ್ತಾರೆ. ಎರಡನೇ ಬಾರಿಯ ಭೇಟಿ ಹುಡುಗಿಯ ಮನೆಯವರು ಒಪ್ಪಿಗೆ ಪಡೆಯುವ ಸಲುವಾಗಿ ಮೂರನೇ ಬಾರಿ ಹೋಗುವಾಗ ತಂಡದಲ್ಲಿ ವರನ ತಂದೆಯ ಸಹೋದರಿ ಅವರಜತೆಗಾಗಿಯರು 'ಮುನ್ನೇನ್' ಮತ್ತು ಆತನ ಜತೆಗಾರರು ಇರುತ್ತಾರೆ,. ಹಾಗೂ ಈ ಭೇಟಿಯಲ್ಲಿ 'ಗುರುತನ್ನು ಕಟ್ಟುವುದು' (ಅಡಯಾಳಂ ಕೆಟ್ಟುಕ) ಎಂಬ ಚಡಂಗ ನಡೆಯುತ್ತದೆ. ನಿಗದಿತ ವಧುವಿಗೆ ಆಭರಣಗಳನ್ನು ತೊಡಿಸಿ ಅವಳ 'ಅರಾಟ್ಟಿ ತ್ತುಂಬ' (ಸೊಂಟದಲ್ಲಿ ಕಟ್ಟುವ ಬಟ್ಟೆ ತುದಿ) ದಲ್ಲಿ 'ಪೈಸ್‌ತ್ತುಟ್ಟ್' (ಪೈಸೆ ದುಡ್ಡು) ಕಟ್ಟು ವಿಧಿ ಇದು 'ಗುರುತವನ್ನು ಕಟ್ಟಲ' ಹೋಗುವಾಗ ಮದುಮಗನ್ನನ ಕಡೆಯಿಂದ ಮದುವಣ ಗಿತ್ತಿಗೆ ಒಂದು ತಲುಮಡು ಬಟ್ಟೆ (ಮುಂಡ್ – ಪಂಚೆ ಹಾಗೆ) ಅಕ್ಕಿ, ಉಪ್ಪು, ಅಮಗಡಿಯಲ್ಲಿ ಕೊಳ್ಳಲು ಸಿಗುವ ತಿಂಡಿತಿನಿಸುಗಳು, ತೆಂಗಿನೆಣ್ಣೆ, ವೀಳ್ಯದೆಲೆ, ಅಡಕೆ, ಕೊರಳಲ್ಲಿ ಅಣಿಯುವ ಮುತ್ತು ಹರಳುಗಳನ್ನು ಕೋದ ಮಾಲೆ, ನಾಲ್ಕು ಪಣ (ಒಂದು ರೂಪಾಯಿ) ನಗದು ಇವುಗಳನ್ನು ಕೊಡುವುದು ಕ್ರಮ 'ಅಡಯಾಳಂ' ಕಟ್ಟಿ ಅಯಿತಾದರೆ ಮದುಮಗ ಮದುಮಗಳಿಗೆ ವೆಚ್ಚಕ್ಕೆ ಕೊಡಬೇಕೆಂಬುದು ನಿಯಮ ಆದ್ದರಿಂದ ಈ ಚಡಂಗ ಆದೊಡನೆ ವರನೂ ಜತೆಗಾರನೂ 'ಮುನ್ನೇನೂ' ವದುವಿನ ಮನೆಗೆ ಕಟ್ಟಿಗೆ ಸಹಿತ ಎಲ್ಲ ಮನೆ ಬಳಕೆಯ ಸಾಮಾಗ್ರಿಗಳನ್ನು ತಲಪಿಸುತ್ತಾರೆ.

ಮದುವೆ ಸಾಮಾನ್ಯವಾಗಿ ಬೆಸಗೆಯ ರಾತ್ರಿ ಕಾಲದಲ್ಲೇ ನಡೆಯುವುದು ಮದುವೆದಿನ ಮದುಮಗ ಮನೆಯಿಂದ ಒಂದು ಕಳಸಿಗೆ ಭತ್ತ, ಹತ್ತು ರೂಪಾಯಿ ನಗದು, ಒಂದು ಚೇಲ (ಸೀರೆ), ಆರಾಟ್ಟಿ (ಸೊಂಟಕ್ಕೆ ಕಟ್ಟುವ ಃಣ) ಕಲ್ಲ, ಮಾಲ (ಹರಳು ಮಾಲೆ), ಬಳೆ, ಮುಪ್ಪೊಟ್ಟಿ (ಮೂಗ್ಗಟ್ಟು) ಒಲೆ (ಕಿವಿಯೋಲೆ), ತಾಮ್ರದಿಂದ ಮಾಡಿದ ಹತ್ತು ಉಂಗುರುಗಳು ಇತ್ಯಾದಿಯನ್ನು ಮದುಮಗಳ ಮನೆಗೆ ಒಯ್ಯುತ್ತಾನೆ. ದುಡಿಬಾರಿಸುವಿಕೆ, ಕೊಳಲೂದುವಿಕೆ, ಕುಣಿತಗಳೊಂದಿಗೆ ವರನ ದಿಬ್ಬಣಿಗರು ಮದುವಣಗಿತ್ತಿ ಮನೆಗೆ ಸರಿಯುತ್ತಾರೆ. ಈ ದಿಬ್ಬಣದ ಸದ್ದು ಕೇಳಿದೊಡನೆ ವಧುವಿನ

‘ಮುನ್ನೇನ್’ವರನನ್ನೂ ದಿಬ್ಬಣಿಗರನ್ನೂ ಸ್ವಾಗತಿಸುತ್ತಾನೆ. ವರನ ಮಾಮಿ ಹೆನ್ಣಿನ ಅಲಂಕಾರ ಮಾಡುತ್ತಾಳೆ, ವರನನ್ನೂ ವಧುವನನ್ನು ಒಂದು ಚಾಪೆಯ ಮೇಲೆ ಕುಳ್ಳಿರಿಸಿ ಇಬ್ಬರಿಗೂ ಒಂದೇ ಎಲೆಯಲ್ಲಿ ಊಟ ಬಡಿಸುವರು ಅವರಿಬ್ಬರೂ ಒಮದೇ ಎಲೆಯಲ್ಲಿ ಬಡಿಸಿರುವುದನ್ನು ನಾಮ ಮಾತ್ರವಾದರೂ ಉಣ್ಣ ಬೇಕು ಇದರ ಬಳಿಕೆ ಇಬ್ಬರದೂ ‘ಮುನ್ನೇನ್ ಗಳು ಅಂಗಳದಲ್ಲಿ ಕಟ್ಟಿರುವ ಕಿರಿಯ ಚಪ್ಪರಕ್ಕೆ ವಧೂವರರನ್ನು ಇಳಿಸಿ ನಿಲ್ಲಿಸುತ್ತಾರೆ ಮತ್ತು ಮುನ್ನೇನ್‌ಗಳು ಹೇಳುತ್ತಾರೆ

“ಪೆಣ್ಣು ಎಂದೇಲುಮೊರು

ಕುಚ್ಚಂಜೆಯತ್ತಲೋ

ಆಣುನ್ನ ಮುನ್ನೇನಕ್ಕೂಡ ಪಜಿಯಾಣಂ

ಕುಚ್ಚಂಜೆಯತ್ತಲೋ

ಪೆಣ್ಣನ್ನ ಮುನ್ನೇನ ಕ್ಕೂಡ ಪಜಿಯಾಣಂ”

ವರನೋ, ವಧುವೋ ಏನಾದರೊಂದುತ ಪ್ಪನ್ನು ಎಸಗಿದರೆ ಅನದನು ಮನೆಯವರು ಪರಸ್ಪರ ತಿಳಿಸಬೇಕೆಂಬುದು ಮೇಲಿನ ಮಾತುಗಳ ಅರ್ಥ ಮದುವೆ ಮುಗಿದೊಡನೆ ವಧುವನ್ನು ವರ ತನ್ನ ಮನೆಗೆ ಕರೆದೊಯ್ಯುತ್ತಾನೆ. ವರನ ಮನೆಗೆ ತಲುಪಿದೊಡನೆ ಅವಳನ್ನು ಅಂಗಳದಲ್ಲಿ ನಿಲ್ಲಿಸುವರು. ಅನಂತರ ಕುಟುಂಬದ ‘ಕಾಣ್ಣೇರ್’ ಆಗಿರುವ ವರನ ತಂದೆಯ ‘ಮಾಮನ್’ ‘ಚೋಯಿಮಲ ಮಾರಪ್ಪಟ್ಟೋಲತ್ತೆಯ್ಯಂ’ ‘ಬೊಳ್ಳಂಗೊಲ್ಲಿ ಮಾರಪಟ್ಟೋಲತ್ತೆಯ್ಯಂ’ ಗಳೆಂಬ ಕುಲದೈವಗಳನ್ನು ಕರೆದು ಆವೇಶಗೊಂಡು ನಡುಗಿ ಕುಣಿದು, ವಧುವರರನ್ನು ಒಟ್ಟಾಗಿ ಒಂದು ತೆಂಗಿನಕಾಯಿಯಿಂದ ಸುಳಿದು, ಅದನ್ನು ಮನೆ ಬಾಗಿಲ ಹೊಸ್ತಿಲಿಗೆ ಬಡಿದು, ಅದರ ನೀರಿನಿಂದ ‘ಕಾಣ್ಣೇರ್’ ವಧುವರರ ಕಾಲುಗಳನ್ನು ತೊಳೆಯುತ್ತಾನೆ. ಕಾಣ್ಣೇರ್ ವಧುವರರ ಕಯಗಳನ್ನು ಹಿಡಿದು ಒಳಕ್ಕೆ ಒಯ್ಯುತ್ತಾನೆ. ಮನೆಯೊಳಗಿರುವ ಎತ್ತರಿಸಿ ಕಟ್ಟಿದ ದಿಣ್ಣೆ (ತಿಣೆ)ಗೆ ಇಬ್ಬರೂ ಕೈಮುಗಿದ ಬಳಿಕೆ, ‘ಕಾರಣವನ್‌ಮಾರ್’ (ಹಿರಿಯ) ರ ಕಾಲು ಹಿಡಿದು ಆರ್ಶಿವಾದ ಪಡೆಯುವುದರೊಂದಿಗೆ ವಿವಾಹ ಚಡಂಗಗಳು ಮುಗಿಯುತ್ತವೆ.

ಇನ್ನೂ ವಧುವರರೊಗಿನ ಚಡಂಗಗಳು ಇವುಗಳಲ್ಲಿ ಬಲು ಮುಖ್ಯವಾದುದು ಭತ್ತದ ಗೋಣಿಯನ್ನು ಎಸೆದು ಆಡುವುದು, ವರನೂ ನವವಿವಹಿತೆಯೂ ಭತ್ತ ತುಂಬಿದ ಎರಡು ಗೋಣಿಚೀಲಗಳ ಮೇಲೆ ನಿಲ್ಲುವರು. ವಧು ಹತ್ತಿ ನಿಲ್ಲುವ ಚೀಲ ಕಿರಿದಾಗಿರುತ್ತದೆ, ವರನ ತಂದೆಯೋ ಮಾವನೋ ವಧುವಿಗೆ ಮಾಲೆಯನ್ನು ಬಳೆಯನ್ನೂ ಕೊಡುತ್ತಾರೆ ಆ ಬಳಿಕ ಇಬ್ಬರೂ ಚೀಲಗಳ ಮೇಲಿಂದ ಇಳಿಯುತ್ತಾರೆ. ಅನಂತರ ವಧು ತನು ಏರಿನಿಂದ ಚೀಲವನ್ನು ವರನ ಕಡೆಗೆ ಎಸೆಯುತ್ತಾಳೆ.

ಅದನ್ನು ಕೈಗಳಿಗೆ ಪಡೆದುಕೊಂಡ ವರ ಅದನ್ನು ವಧುವಿನೆಡೆಗೆ ಎಸೆಯುತ್ತಾನೆ. ಅವಳದುನು ಹಿಡಿದುಕೊಳ್ಳಬೇಕು ಈ ಆಟದಲ್ಲಿ ಚೀಲ ನೆಲಕ್ಕ ಬಿದ್ದರೆ ಅಶುಭ ಲಕ್ಷಣವೆಂದು ನಂಬಿಕೆ

ಕುಂಭ ಮಾಸದ ಮೂರರಂದು 'ಉಚ್ಚಾಲು' ದಿವಸ ವಿವಾಹಿತ ಪಣಿಯನ್ ತನ್ನ ಪತ್ನಿಯ ತಂದೆಗೆ ಒಂದು ನಿಶ್ಚಿತ ಅಳತೆಯ ಅಕ್ಕಿ ಕೊಡಲು ಇದೆ ಹೆಣ್ಣು ಐದು ಹೆರುವವರೆಗೂ ಈ ಚಡಂಗ ಮುಂದುವರಿಯಬೇಕೆಂಬುದು ನಿಯಮ ಇದಕ್ಕೆ ತಪ್ಪಿದರೆ ಹೆಣ್ಣನ್ನು ಆಕೆಯ ತವರಿಗೆ ವಾಪಸ್ ಕರೆತರುವ ಸ್ವಾತಂತ್ರ್ಯ ಅವಳ ತಂದೆತಾಯಿಗಳಿಗೆ ಇದೆ,

ಪಣಿಯನ್ ಜನಾಂಗದಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶವಿದೆ. ವಿವಾಹ ವಿಚ್ಛೇದನದ ವೇಳೆ, ಹುಡುಗಿಯ ಮನೆಯಿಂದ ಬಂದುದೆಲ್ಲವನ್ನೂ ಆಕೆಯ ತವರಿಗೆ ಹಿಂದಿರುಗಿಬೇಕಾಗುತ್ತದೆ. ಹೆಂಡತಿ ಮಡಿದರೆ ಗಂಡ ಆಕೆಯ ತಂದೆಗೋ ಸಹೋದರನಿಗೋ ದಂಡ ಕೊಡಬೇಕು 'ಚೇತಂ'(ನಷ್ಟ) ಕೊಡುವುದು ಎಂದು ಇದಕ್ಕೆ ಹೆಸರು ಬೇರೆ ಕೆಲವು ಸಂದರ್ಭಗಳಲ್ಲೂ ಗಂಡು ದಂಡವನ್ನು ತೇರಬೇಕಾಗುತ್ತದೆ ಪತ್ನಿ ಸಹೋದರಿಯರನ್ನು ವಿವಾಹವಾಗುವುದಕ್ಕೆ ಇವರಲ್ಲಿ ನಿಷೇದವಿದೆ ಪತ್ನಿಯ ಹಿರಿಯ ಅಕ್ಕನಿಗೆ ಆಕೆಯ ತಾಯಿಯ ಸ್ಥಾನ ಆದ್ದರಿಂದ ಅವಳನ್ನು ವಿವಾಹವಾಗುವುದು ನಿಷಿದ್ದ ಹಾಗೇನಾದರೂ ವಿವಾಹವಾದಲ್ಲಿ ದೊಡ್ಡ ಮೊತ್ತದ ದಂಡ ತೇರಬೇಕಾಗುತ್ತದೆ ಆದರೆ ಇಲ್ಲಿ ದಂಡದ ಮೊತ್ತ ಕಡಿಮೆ ಈ ಪದ್ದತಿ ಬಗೆಗೆ ಅವರೊಳಗೆ ಒಂದು ಗಾದೆ ಮಾತಿದೆ.

'ಕುಡಚ್ಚೀನೆ ಕೆಟ್ಟುತ್ತಲೋ

ಕುಂಜೋಳಂಬಣ

ಮಳಾಯ್ತ್ತೀನಿನೆ ಕೆಟ್ಟುತ್ತೆಲೋ

ಮಲಯೋಳಂಬಣ

(ಕುಡಿಚ್ಚಿ– ಅಂದರೆ ಪತ್ನಿಯ ಅಕ್ಕ –ಅನ್ನು ಮದುವೆಯಾದರೆ

ಬೆಟ್ಟದಷ್ಟು ಹಣದಂಡ ತೆರಬೇಕು

ಮಾಯ್ತ್ತೀನಿ–ಪತ್ನಿಯ ತಂಗಿ –ಯನ್ನು ಮದುವೆಯಾದರೆ

ಮಲೆಯಷ್ಟು ಹಣದಂಡ ತೆರಬೇಕು)

ಇಲ್ಲಿ ಪಣಿಯನ್‌ನ ಎಣಿಕೆಯಲ್ಲಿ 'ಕುಂಜ' ಕ್ಕಿಂತ 'ಮಲೆ' ಸಣ್ಣದು

ಇದೆ ವೇಳೆ ಅಣ್ಣನ ವಿಧವೆಯನ್ನು ಮದುವೆಯಾಗುವುದಕ್ಕೆ ನಿಷೇಧವಿಲ್ಲ, ಮಾನವ ವಿಜ್ಞಾನ ರೀತಿಯಲ್ಲಿ ವಿಶದೀಕರಿಸುದಾದರೆ ಪಣಿಯನ್‌ಗಳಲ್ಲಿ ಅಣ್ಣನ ವಿಧವೆಯನ್ನು ಮದುವೆ (Levirate Marriage) ಆಗಬಹುದು ಆದರೆ ಪತ್ನಿಯ ಸಹೋದರಿಯನ್ನು ಮದುವೆ (sororate Marriage) ಆಗಕೂಡದು

ವಿವಾಹ ವಿಧಿಗಳು ಮತ್ತು ಜೀವನ ದರ್ಶನ

ಒಟ್ಟನಿಲ್ಲಿ ಹೇಳುವುದಾದರೆ ಸ್ತ್ರೀಯರಿಗೆ ಪ್ರಾಧಾನ್ಯ ನೀಡುವ ಒಂದು ಸಮೂಹ ಪಣಿಯರದು ಎಂದು ಅವರ ವಿವಾಹ ವಿಧಿಗಳಿಮದ ವ್ಯಕ್ತವಾಗುತ್ತದೆ. ಕನ್ಯಾಶುಲ್ಕ ನೀಡಿ ಒಂದು ವಸ್ತುವಿನ ಕರೀದಿಯಂತೆ ಹೆಣ್ಣನ್ನು ಗಂಡನ ಮೆನಗೆ ಕರೆತುವುದಾದರೂ ಪಣಿಯನ್ ಹೆಣ್ಣಿನ ವ್ಯಕ್ತಿತ್ವ ಸಮೂದಹಲ್ಲಿ ಅಂಗೀಕರಿಸಲ್ಪಡುತ್ತದೆ ಎಂಬುದೇ ಸತ್ಯ 'ಊಟ ದೊರೆಯುವಮತೆ ಅಲ್ಲ ಹೆಣ್ಣು ದೊರೆಯುವುದು' ಎಂಬ ಗಾದೆಯಲ್ಲಿ ಮಾತ್ರವಲ್ಲ, ಅವರ ಚಡಂಗಗಳಿಮದಳೂ ಅದು ವ್ಯಕ್ತವಾಗುವುದಷ್ಟೆ? ಸ್ತ್ರೀ ಬೆಲೆಯುಳ್ಳ ವಸ್ತು, ಅದು ಅಷ್ಟು ಸುಲಭದಲ್ಲಿ ದೊರೆಯುವಂಥದ್ದಲ್ಲ ಎಂದೂ ಇದರ ಅರ್ಥ ಸ್ತ್ರೀಯ ಅಥವಾ ಪುರುಷನ ತಪ್ಪುಗಳನ್ನು ಎರಡೂ ಮನೆಯವರಿಗೆ ಪರಸ್ಪರ ತಿಳಿಸಬೇಕೆಂಬ ಕಟ್ಟಲೆಯನ್ನು ವಿವಾಹ ವಿಧಿಯಲ್ಲಿ ಪ್ರತಿಜ್ಞಾಪೂರ್ವಕ ಹೇಳುವುದು ಸ್ತ್ರೀಯ ಪುರುಷರಿಗಿರುವ ಸಮಾನ ಸ್ಥಾನಮಾನವನ್ನು ಅಂಗಕರಿಸುತ್ತದೆ ವಿವಾಹ ವಿಚ್ಛೇದನಲ್ಲೂ ಕೆಲವು ಕಠಿನ ನಿಬಂದನೆಗಳಿವೆ ಪಣಿಯನ್ ಬರಿದೆ ಪತ್ನಿಯನ್ನು ಅವಳ ಮನೆಯಲ್ಲಿ ಬಿಟ್ಟು ಬರಲು ಸಾಧ್ಯವಾಗದು ಅವಳನ್ನು ಬಿಡಬೇಕಾಗಿದ್ದರೆ ಆಕೆಯ ಮನೆಯಿಂದ ಏನಲ್ಲಾ ಸಿಕ್ಕಿದೆಯೋ ಅದೆಲ್ಲವನ್ನೂ ಹಿಂದಿರುಗಿಸಬೆಕು ಅಲ್ಲದೆ ಪತ್ನಿ ಮಡಿದರೆ ಆಕೆಯ ತವರಿಗೆ ದಂಡ ತೆರಬೇಕು ಪತ್ನಿಯ ಸಹೋದರಿಯನ್ನು ವಿವಾಹವಾಗುವುದಿದ್ದರೆ ಅದಕ್ಕೆ ದೊಡ್ಡ ದಂಡ ತೆರಲೇಬೇಕು ಸ್ತ್ರೀಯ ಸ್ಥಾನಮಾನ ವ್ಯಕ್ತವಾಗುವ ಕೆಲ ಚಡಂಗಗಳು ಇವು

'ಅಡಯಾಳಂ ಕೆಟ್ಟ್' ನ ಬಳಿಕೆ ಪಣಿಯನ್ ತನ್ನ ಹೆಣ್ಣಿನ ಎಲ್ಲಾ ಜವಾಬ್ದಾರಿಗಳನ್ನೂ ವಹಿಸಿಕೊಳ್ಳುತ್ತಾನೆ. ವಿವಾಹಕ್ಕೆ ಮುನ್ನವೇ ಹೆಣ್ಣನ್ನು ಸಾಕುವ ದಾರಿಗಳನ್ನು ಆತ ಹುಡುಕಲೇಬೇಕು ಆತ ಆಲಸಿಯಾಗಬಾರದು ವಿವಾಹಕ್ಕೆ ಮೊದಲೇ ಹೆಂಡತಿಯನ್ನು ನೋಡಿಕೊಳ್ಳುವ ಬಗೆಯನ್ನು ಆತ ಕಲಿಯುತ್ತಾನೆ. ವಿವಾಹ ನಿಶ್ಚಯಗೊಂಡ ಗಂಡಸು ಜವಾಬ್ದಾರನಾಗಿರುವನಾದರೆ ಮಾತ್ರವೆ ಹೆಣ್ಣನ್ನು ಸಾಕಲು ಸಾಧ್ಯ ಎಂಬ ನಂಬಿಕೆಯಿಂದ ಮೂಡಿ ಬಂದುದಾರಿಬಹುದು ಈ ಆಚಾರ

ವಿವಾಹಚಡಂಗವೊಮದರಲ್ಲಿ ಪರಸ್ಪರ ತುಂಬಿದ ಚೀಲ ಎಸೆದು ಆಡುವುದರ ವ್ಯಂಗ್ಯಾರ್ಥವೆಂದರೆ ದಂಪತಿಗಳು ಜೀವನವನ್ನು ಲಘುವಾಗಿ ತೆಗೆದುಕೊಂಡು ಒಂದಾಗಿ ಜೀವಿಸಬೇಕು ಎಂಬುದಾಗಿರಬಹುದು ಮಾತ್ರವಲ್ಲ, ಪಣಿಯನ್ ಯಾವತ್ತೂ 'ಪಣಿ' (ಕೆಲಸ) ವಹಿಸಿ ಅಂದರೆ ದುಡಿದು,

ಬದುಕುವವನು, ಕೆಲಸವನ್ನು ಲಘುವಾಗಿ ಮಾಡತಕ್ಕವನು ಗಂಡ ಹೆಂಡಿರು ಕಠಿನ ದುಡಿಮೆ ಗೈದರೆ ಮಾತ್ರ ಜೀವಿಸಲು ಸಾಧ್ಯವಾಗುವ ಆ ಸಮುದಾಯದಲ್ಲಿ ಕೆಲಸವನ್ನು ಲಘುಕರಿಸಲು ಒಂದುಡಗೂಡಿಸುವುದು ಅನಿವಾರ್ಯ ನವದಂಪತಿಗಳು ಒಂದೇ ಎಲೆಯಲ್ಲಿ ಉಣ್ಣುವುದು. ಹೆಚ್ಚಿನ ಸಮುದಾಯಗಳಲ್ಲಿ ಕಮಡು ಬರುತ್ತದೆ ಗಂಡ ಹೆಂಡಿರಲ್ಲಿ ಪರಸ್ಪರ ಇರಬೇಕಾದ ಯಕ್ಯ , ಸ್ನೇಹ ಇತ್ಯಾದಿಗಳನ್ನೆ ಈ ಬಗೆ ಚಡಂಗಗಳ ಮೂಲಕ ಬಯಲುಗೊಳಿಸುವುದು.

ಫಣಿಯರ ವಿವಾಹಚಡಂಗಗಳಲ್ಲಿ ಪ್ರತ್ಯೇಕವಾಗಿ ಎತ್ತಿ ಹೇಳಬೇಕದುದು ಒಂದುಂಟು ವಧೂವರರನ್ನು ಬಿಟ್ಟರೆ ವರನ ಮಾವನೇ ವಿವಾಹ ವಿಧಿಗಳಲ್ಲಿ ಮುಖ್ಯ ಪಾತ್ರ ವಹಿಸುವವನು ವಧುವನ್ನು ಸಿಂಗರಿಸಿ ಅಣಿಗೊಳಿಸುವುದನ್ನು ಬಿಟ್ಟರೆ ಚಡಂಗಗಳಲ್ಲಿ ಸ್ತ್ರೀಯರಿಗೆ ಪಾತ್ರವಿಲ್ಲ ಮಾತ್ರವಲ್ಲ ನವವಧೂವರರನ್ನು ವರನ ಮನೆಗೆ ಸ್ವಾತಿಸುವುದು ಗಂಡಸೇ ಸಾಮಾನ್ಯವಾಗಿ ಉಳಿದ ಸಮುದಾಯಗಳಲ್ಲಿ ವರನ ಮನೆಗೆ ಸ್ವಾಗತಿಸುವುದು ವರನ ತಾಯಿಯೋ ಸಹೋದರಿಯರೋ ಆಗಿರುತ್ತಾರೆ. ಮಕ್ಕಳ ಕಟ್ಟಿನ ಪುರುಷ ನಾಯಕಕತ್ವವೆ ಇದರಲ್ಲಿ ಪ್ರತಿಬಿಂಬತವಾಗುವುದೇ ಎಂದು ಸಂಶಯಿಸಬಹುದು ಮಕ್ಕಳ ಕಟ್ಟು ಪದ್ದತಿಯಿಂದ ರೂಪುಗೊಂಡು ಪುರುಷ ನಾಯಕತ್ವದೊಂದಿಗೆ ಸ್ತ್ರೀಯ ವ್ಯಕ್ತಿತ್ವವನ್ನು ಸ್ಥಿರಗೊಳಿಸುವ ಅತ್ಯಪೂರ್ವ ಸಾಮಾಜಿಕ ವ್ಯವಸ್ಥೆಯೇ ಪರಣಿಯರದು ಎಂದು ಅನ್ವೇಷಿಸಬೇಕಾಗಿದೆ ಇದಕ್ಕೆ ಉತ್ತರ ಈ ಸಮುದಾಯದ ಅಚಾರಗಳ ಕುರಿತು ಅಧ್ಯಯನದಲ್ಲಿ ದೊರಕಬಹುದು.

ಕೆಂದ್ರೋನ್ ಪಾಟ್ಟ್

(ಮಾಂತ್ರಿಕ ಅನುಷ್ಠಾನ)

ಏ.ಕೆ. ನಂಬಿಯರ್

ಟಿಪ್ಪಣಿ

ಜಾನಪದ ವರ್ಗೀಕರಣದಲ್ಲಿ ಅನುಷ್ಠಾನವೂ ಪುರಾವೃತ್ತವೂ ವಿಭಿನ್ನ ವಿಭಾಗಗಳಿಗೆ ಸೇರುತ್ತವೆ. ಮೊದಲನೆಯದು ಕ್ರಿಯಾರೂಫ ಎರಡನೆಯದು ಭಾಷಾಪರವಾದದದ್ದು ಆದರೆ ಇವೆರಡೂ ಸ್ವಭಾವದಿಂದ ಸಮಾಂತರವಾದುದು ದೈವದೊಂದಿಗೆ ಸಂಬಂಧಪಟ್ಟದ್ದೋ ಅಲೌಕಿಕ ವಿಷಯಕ್ಕೆ ಸಂಬಂಧಿಸಿದ್ದೋ ಆಗಿರವಂಥದು ಇವು ಕೆಲವೊಮ್ಮೆ ಪುರಾವೃತ್ತ ಎಂಬ ಭಾಷ ರೂಪದ ಕ್ರಿಯಾರೂಪವೇ ಅನುಷ್ಠಾನ ಎಂದೆನಿಸಲೂ ಬಹುದು ಪುರಾವೃತ್ತದ ಅಥವಾ ನಂಬಿಕೆಯ

ಬೆಂಬಲವಿಲ್ಲದೆ ಅನುಷ್ಠಾನಕ್ಕೆ ನೆಲೆಯಾಗಲು ಸಾಧ್ಯವಿಲ್ಲ ಆದ್ದರಿಮದ ಅನುಷ್ಠಾನದ ಅಧ್ಯಯನ ಯಾವಾಗಲೂ ವಿಶ್ವಾಸಗಳ ಮತ್ತು ಪುರಾವೃತ್ತಗಳ ಅಧ್ಯಯನದೊಂದಿಗೆ ಸಂಬಂಧಿಸುತ್ತದೆ 'ಕೆಂದ್ರೋನ್ ಪಾಟ್ಟು' ಎಂಬ ಅನುಷ್ಠಾನವೂ ಗಂಧರ್ವನಲ್ಲೂ , ಅವನ ಕೃತ್ಯಗಳಲ್ಲೂ, ಪರಿಮಿತಿಗಳಲ್ಲೂ ಇರುವ ವಿಶ್ವಾಸದ ಮೇಲೆಯೆ ನಿಂತಿರುತ್ತದೆ.

ಅನುಷ್ಠಾನ ಮೂಲಭೂತವಾಗಿ ಒಂದು ಕ್ರಿಯಾಂಶ ಆದರೆ ಎಲ್ಲಾ ಕ್ರಿಯಾಂಶವೂ ಅನುಷ್ಠಾನವಾಗುವುದಿಲ್ಲ ಉದಾಹರಣೆಗೆ ನಾವು ಎಲ್ಲ ದಿನಗಳಲ್ಲೂ ಬೆಳಗ್ಗೆ ಮೀಯುತ್ತೇವೆ. ಈ ಮೀಹ 'ಅನುಷ್ಠಾನ' ಎಲ್ಲ ಇದು ನಿರ್ವಹಿಸುವುದು ಭೌತಿಕವಾದ ಧರ್ಮವನ್ನು ಆದರೆ 'ಕಾವು' ನ ವೆಳಿಚ್ಚಪ್ಪಾಡ್' ಸಡಗರದಲ್ಲಿ ಹೋಗಿ ಕೊಳದಲ್ಲಿ ಮೀಯುವುದುಂಟು ಈ ಮೀಹ ಸಾಮಾನ್ಯ ಸ್ನಾನದ ಧರ್ಮವನ್ನು ಉದ್ದೇಶಿಇರುವಂಥದಲ್ಲ ಆದ್ದರುಇಮದಲೇ ಆಗ ತಾನೆ ಮಿಂದು ಬಂಧವನಾದ ರೂ ಶ್ರದ್ದೆಯ ಆಚಾರದವಾದ ಈ ಸ್ನಾವನ್ನು ತಪ್ಪಿಸಲು ಸಾಧ್ಯವಿಲ್ಲದಿರುವುದು 'ಕಾವಿನ' ಕೊಳದಲ್ಲಿ ನೀರು ಕೆಟ್ಟಿರುವುದಾದರೂ ಆದರಲ್ಲೇ ಸ್ನಾಮಾಡಬೇಕಾಗಿರುವುದೂ ಈ ಕಾರಣದಿಂದಲೇ ಈ ಸ್ನಾವನ್ನು ನಿಯಂತ್ರಿಸುವುದು ವಿಶ್ವಾರ್ಹದ ದೊಡ್ಡದೊಂದು ಲೋಕವಾಗಿದೆ.

ಕೆಂದ್ರೋನ್ ಪಾಟು' ಶರೀರದಲ್ಲಿ ಸೇರಿಕೊಂಡ 'ಗಂಧರ್ವ' ನನ್ನು ತೊಲಗಿಸುವುದಕ್ಕಾಗಿ ನಡೆಯುವ ಒಂದು ಮಾಂತ್ರಿಕ ಅನುಷ್ಠಾನವಾಗಿದೆ ಅದು ಸಾಂಘಿಕತೆಯಲಲಿ ನೆಲಸಿರುವ ಕಾರ್ಯ ಕಾರಣ ಚಿಂತನೆಯು ಫಲಕೂಡ ಆಗಿದೆ ಮಹಿಳೆ ಹೆರದಿರಲು ಇಂಥಿಂಥ ಕಾರಣಗಳು ಉಂಟು ಎಂದು ಸಮೂಹಕ್ಕೆ ಕೆಲ ವಿಶ್ವಾಸಗಳಿವೆ ಒಬ್ಬ ಸ್ತ್ರೀ ಹೆರದಿದ್ದಾಗ ಜ್ಯೋತಿಷಿ ಅದರ ಕಾರಣವನ್ನು ನಿರ್ಣಯಿಸುತ್ತಾನೆ. ಕಾರಣವರಿತರೆ ಅದನ್ನು ನಿವಾರಿವುದಕ್ಕೆ ವ್ಯಕ್ತವಾದ ಮಾರ್ಗಗಳು ಸಾಂಘಿಕತೆಯಲ್ಲಿರುತ್ತವೆ. ಆ ಮಾರ್ಗನುಸರಣೆಗೆ ಎಲ್ಲರ ಅಂಗೀಕಾರವೂ ಇದೆ ಇದು ವ್ಯಕ್ತಿಯನ್ನೂ ಸಮೂಹವನ್ನೂ ಒಂದಾಗಿ ಮಾನಸಿಕ ಚಿಕಿತ್ಸೆಗೆ ಒಳಪಿಡಿಸುವ ಒಂದು ಪ್ರಕ್ರಿಯೆ ಕೂಡಲ ಆಗಿದೆ ಹೆರದಿರಲು ಗಂಧರ್ವ ಶರೀರದೊಳಗೆ ಇರುವುದರಿಂದ ಎಂದೇ ಸ್ವಂತ ನಂಬಿಕೆ ಮತ್ತು ಸಮೂಹದ ನಂಬಿಕೆ ಸಮೂಹವನ್ನು ಮುಂದೆ ಇರಿಸಿಕೊಂಡು ಆಗುವ ಅನುಷ್ಠಾನದ ಮೂಲಕ ಗಂಧರ್ವನನ್ನು ಶರೀರದಿಂದ ನಿದ್ರೆ ಮೂಲಕ 'ಕಳ'ಕ್ಕೆ ಬರಿಸುವುದು ಮತ್ತು ಅಲ್ಲಿಂದ 'ಕೋಲ'ದಲ್ಲಿ ತೋರಿಬಂದು ಓಡಿಮರೆಯಾಗುವುದರೊಂದಿಗೆ ಗಂಧರ್ವನ ಇರವು ಸ್ತ್ರೀ ಶರಿರದಿಮದ ತೊಲಗಿರುವುದಾಗಿ ಆ ಸ್ತ್ರೀಗೂ ಅಲ್ಲಿ ಸೇರಿದವರಿಗೂ ಮನವರಿಕೆಯಾಗುತ್ತದೆ ಸಮೂಹ ಸೃಷ್ಟಿಸುವ ಅರಿವೇ ವ್ಯಕ್ತಿಯಲ್ಲಿ ಇರುವುದು ಆ ಬಗೆಯಲ್ಲಿ ಉಂಟಾಗಿರುವ ತಿಳಿವಳಿಕೆಯನ್ನು ಅಳಿಸಲು ವ್ಯಕ್ತಿಯನ್ನು ಸಮೂಹವನ್ನೂ ಒಂದಾಗಿ ನಿಲ್ಲಿಸಿ ಹೊಸ ಅರಿವನ್ನು ನೀಡಬೇಕಾಗುತ್ತದೆ ಈ ಬಗೆಯ ಸಾಧ್ಯತೆ ಆಧುನಿಕ ಸಮಾಜದಲ್ಲಿ ಇಲ್ಲ ಎಂಬುದೇ ಇಂದಿನ ಮಾನಸಿಕ ಚಿಕಿತ್ಸಾ ಪದ್ದತಿ ಇದಿರಿಸುವ ಬಲುದೊಡ್ಡದಾದ ಒಂದು ಪ್ರಶ್ನೆ

ಸಂಪಾದಕ

ಕೇರಳದ ಮಾಂತ್ರಿಕ ಅನುಷ್ಠಾನಗಳಲ್ಲಿ ಅತ್ಯಂತ ಪ್ರಧಾನವಾದ ಒಂದು ವಿಭಾಗ 'ಫಲೀಕರನ ಂತ್ರವಾದ' ಪ್ರಕೃತಿಯ ಮತ್ತು ಮಾನವನ ಫಲ ಸಮೃದ್ಧಿಯೊಂದಿಗೆ ಸಂಬಂಧಿಸಿದ ಅನುಷ್ಠಾನಗಳು ಈ ವಿಭಾಗದಲ್ಲಿ ಇರುವಂಥವು. ಸಮೃದ್ಧವಾದ ಬೆಳೆ ಪಡೆಯಲು ಉದ್ದೇಶಸಿದ ಕೃಷಿಕ ಚಡಂಗಗಳು, ಮನುಷ್ಯನ ಐಶ್ವರ್ಯವನ್ನು ಗುರಿಮಾಡಿ ಇರುವ ಅನುಷ್ಠಾನಗಳು, ಪ್ರಕೃತಿಯ ಮತ್ತು ಮನುಷ್ಯನ ಋತುಚಕ್ರದೊಂದಗೆ ಸಂಬಂಧಪಟಡುವ ಅನುರ್ಷಠಾನಗಳು ಸಂತಾನಪಡೆಯುವುದಕ್ಕಾಗಿರುವ ಚಡಂಗಗಳು ಇತ್ಯಾದಿಯೇ ಫಳೀಕರಣ ಅನುಷ್ಠಾನಗಳು, ಇವುಗಳಲ್ಲೂ ಬಹಳ ಮುಖ್ಯವಾದ್ದು 'ಉಚ್ಚಾಟನ' ಚಡಂಗಗಳು ಪ್ರಕೃತಿಯ ಫಲವತ್ತತೆಯನ್ನೂ ಮಾನವ ಫಲವತ್ತೆಯನ್ನೂ ನಾಶಗೊಳಿಸುವ ಶಕ್ತಿಗಳ ಉಚ್ಚಾಟನೆಗೈಯುವ ಚಡಂಗಗಳೇ ಉಚ್ಚಾಟನ ಮಂತ್ರವಾದ ಸಂತಾನುವುಂಟಾಗುವುದಕ್ಕಾಗಿ ಆಚರಿಸುವ ಉಚ್ಚಾಟನ ಮಂತ್ರವಾದ ಕ್ರಿಯೆಗಳಲ್ಲಿ ಒಮದು 'ಕೆಂದ್ರೋನ್' ಪಾಟು' ಸ್ತ್ರೀ ಶರೀರದಲ್ಲಿ ಆವೇಶಗೊಳ್ಳುವ ಗಂಧರ್ವಾದಿ ದೇವತೆಗಳನ್ನು 'ಕಳ ಬರೆದು' ಪಾಟನ್ನು ಹಾಡಿ' ಕೋಲ ಕಟ್ಟಿ ಉಚ್ಚಾಟನೆ ಮಾಡಲು ಉದ್ದೇಶಗೊಳ್ಳುವ ಚಡಂಗವಿದು. ಕಣ್ಣೂರು ಕಾಸರಗೋಡು ಜಿಲ್ಲೆಗಳಲ್ಲಿ ಈ ಅನುಷ್ಠಾನ ಹೆಚ್ಚು ಪ್ರಚಾರದಲ್ಲಿತ್ತು ಪಾಟು ಹಾಡಿ ಉಚ್ಚಾಟಿಸುವ ಚಡಂಗಗಳೂ ಹಾಡಿನ ಜತೆಗೆ 'ಕೋಲ' ಕಟ್ಟೆ ಬಾಧೇ ಬಿಡುವ ಚಡಂಗಗಳು ಇವೆ ಇವುಗಳಿಗೆ ಕ್ರಮವಾಗಿ 'ಪಾಡಿಯೋಜಿಪ್ಪಿಕ್ಕಲ್' (ಹಾಡಿ ಬಿಡಿಸು) 'ಕೆಟ್ಟಿಯೊಜಿಪ್ಪಿಕ್ಕಲ್' (ಕಟ್ಟಿ ಬಿಡಿಸು) ಎಂಬ ಹೆಸರು ಕೊಡಬಹುದು 'ಕೆಟ್ಟಿಯೊಜಿಪ್ಪಿಕ್ಕಲ್' ಎಂಬ ವಿಭಾಗಕ್ಕೆ ಸೇರಿದ ಉಚ್ಚಾಟನ ಚಡಂಗ ಈ 'ಕೆಂದ್ರೋನ್ ಪಾಟು'

ಸಂತಾನವೊದಗಲು 'ಕೆಂದ್ರೋನ್ ಪಾಟು' ನಡೆಸುವುದು ಮಹಿಳೆಯ ಗಭ್ಕ್ಕೆ ಆರನೆಯ ಅಥವಾ ಏಳನೇ ತಿಂಗಳು ಆಗಿರುವಾಗ ಗಂಧರ್ವನ ಉಪದ್ರವ ನಿವಾರಿಸುವ ಚಡಂಗವಾಗಿರುವುದರಿಂದ ಇದಕ್ಕೆ 'ಗಂಧರ್ವನ ಪಾಟು' ಎಂಬ ಹೆಸರು ದೊರಕಿದೆ 'ಗಂಧರ್ವನ್' ನ ತದ್ಭವ 'ಕೆಂದ್ರೋನ್' ಈ ಮಂತ್ರವಾದ ಕರ್ಮದ ಪಾಟುಗಳಿಗೆ 'ಕನ್ನಲ್ ಪಾಟ್ಟು' ಗಳೆಂದೂ ಹೆಸರಿದೆ ಗರ್ಭಕಾಲದಲ್ಲಿ ನಡೆಸುವಂಥ ಉಚ್ಚಾಟನ ಚಡಂಗಗಳಿಗೆ ಸಾಮಾನ್ಯವಾಗಿ ಇರುವ ಹೆಸರು 'ಕನ್ನಲ್'

ಗಂಧರ್ವರು ಸ್ತ್ರೀ ಶರೀರದಲ್ಲಿ ಆವೇಶಗೊಳ್ಳುವರೆಂಬ ವಿಶ್ವಾಸ ವೇದಕಾಲದಲ್ಲಿ ನೆಲೆಸಿತ್ತು ಎಂದು 'ಅಥರ್ವವೇದ'ದಿಮದ ವ್ಯಕ್ತವಾಗುತ್ತದೆ.

'ಆಜಶೃಂಗಿ' ಎಂಬ ಔಷಧಿಗೆ ಗಂಧವರನ್ನು ತೊಲಗಿಸುವ ಶಕತಿಯುಂಟೆಂದು ವೇದಕಾಲದ ಜನರು ನಂಬುತ್ತಿದ್ದರ5ಉ ಇಷ್ಟ ಬಂದಷ್ಟು ಸಂಖ್ಯೆಯ ಅಪ್ಸರೆಯರಿರುವ ಗಂಧರ್ವರಲ್ಲಿ ಮನುಷ್ಯರೊಳಗೆ ಆವೇಶಗೊಳ್ಳದಿರುವಂತೆ ಪ್ರಾರ್ಥಿಸುವ ಕೆಲಸ ಮಂತ್ರಗಳಿವೆ'ಕಣಿಯನ್' ಜಾತಿಯವರು ಕೋಲಗಳ ಪೈಕಿ 'ಗಂಧರ್ವನ್ ಕೋಲ' ಕಟ್ಟಿ ಉಚ್ಚಾಟನ ಕರ್ಮ ಮಾಡುತ್ತಾರೆ 'ಮಲಯನ್ ಕಟ್ಟುಗೆ' 'ತಿಯ್ಯಾಟ್ಟ್' 'ವೆಲಿಕ್ಕಳ್' ಪುಲಯರ ಕೆಂದ್ರೋನ್ ಪಾಟು' ಎಂಬ ಉಚ್ಚಾಟನ ವಿಧಿಗಳಲ್ಲಿ 'ಗಂಧರ್ವನ್' ಕೋಲ ಕಟ್ಟಲೆಬೇಕು 'ಕಳಂ ಪಾಟ್' ನಲ್ಲಿ ಕೋಲವಿಲ್ಲವಾದರೂ ಗಂಧರ್ವನ ರೂಪವನ್ನು 'ಕಳದಲ್ಲಿ'

ಬರೆಯಬೇಕು ಉಚ್ಚಾಟನ ಕರ್ಮಗಳಲ್ಲಿ ಗಂಧರ್ವನಿಗೆ ಪ್ರಮುಖ ಸ್ಥಾನವಿರವುದೆಂದು ಇದರಿಂದ ವ್ಯಕ್ತವಾಗುತ್ತದೆ.

ಜ್ಯೋತಿಷಿಗಳನ್ನು ಕೇಳಿದಾಗ 'ಗಂಧರ್ವಪೀಡೆ' ತೋರಿಬಂದರೆ ಕೆಂದ್ರೋನ್ ಪಾಟು ಏರ್ಪಡಿಸುವರು ಗರ್ಭದ ರಕ್ಷಣೆಗಾಗಿಯೂ ಈ ಚಡಂಗ ನಡೆಸುವುದಿದೆ ಅಲ್ಲದೆ ನಾಡಿನ ಆಡಳಿತಗಾರರೂ ಎಡೆಯೂಳಿಕೆಯವರೂ ತಮ್ಮ ಗರ್ಭಿಣಿ ಸೊಸೆಯರ ಬಗೆಗೆ ತಮ್ಮ ವಾತ್ಸಲ್ಯಾತಿರೇಕವನ್ನು ಪ್ರಕಟಿಸಲೂ 'ಕೆಂದ್ರೋನ್ ಪಾಟು' ನಡೆಸುತ್ತಿದ್ದರು ಆದರೆ ಸಾಮಾನ್ಯವಾಗಿ ಈ ಚಡಂಗ ನಡೆಸುವುದು ಗಂಧರ್ವದೋಷ ತೊಲಗಿಸುವುದಕ್ಕಾಗಿಯೇ

ಕೆಂದ್ರೋನ್ ಪಾಟು ನಡೆಸುವವರು 'ವಣ್ಣಾನ್' ಕುದಲವರು ತೀಯರ್‌ಗಳಿಮದ ಮೇಲಕ್ಕಿರುವ ಜಾತಿಯವರಿಗೆ (ಕೋಲಕಟ್ಟುವ ಜಾತಿಯವರಾದ ವನ್ಣಾನ್‌ಗಳೇ ಈ ಚಡಂಗ ನಡೆಸಿಕೊಡುವವರು ಆದರೆ ಪುಲಯರಲ್ಲಿ ನಡೆಯುವ ಗಂಧರ್ವೋಚ್ಚಾಟನಕ್ಕೆ ಪುಲಯರೇ ಕೆಂದ್ರೋನ್ ನಡೆಸುವರು. ಇತರ ಜಾತಿಗಳಿಗೆ ಕೇಂದ್ರೋನ್ ಪಾಟು ನಡೆಸುವ ಹಕ್ಕು ಪುಲಯರಿಗೆ ಇಲ್ಲ

ಅನುಷ್ಠಾನ

ಕೆಂದ್ರೋನ್ ಪಾಟಿನ್ ಆರಂಭವಾಗುವುದು ಸಂಜೆ ವೇಳೆಗೆ ಮುಂಜಾನೆ ವೇಳೆಗೆ ಕೊನೆಗೊಳ್ಳುತ್ತದೆ. 'ಕಳಂ ಪಾಟಿ' ಗೆ ಚಪ್ಪರ ಅಲಂಕರಿಸುವ ರೀತಿಯೇ ಕೆಂದ್ರೋನ್ ಫಾಟಿ'ಗೂ ಇರುವುದು ಚಪ್ಪರದ ಕೆಳಗೆ ಸಗಣಿಸಾರಿಸಿದ ಅಂಗಳದಲ್ಲಿ 'ಕಾಮನ್' 'ಕನ್ನಿ' ಎಂಬ ದೇವೆತೆಗಳ 'ಕಳಂ' ಬರೆಯುತ್ತಾರೆ. ಕಣ್ಣೂರು ಜಿಲ್ಲೆಯ ತೆಂಕಣ ಭಾಗಗಳಲ್ಲಿ ಸಾಯಂಕಾಲವೆ ಕಳಬರೆಯತೊಡಗುತ್ತಾರೆ. ಕಣ್ಣೂರು ಜಿಲ್ಲೆಯ ಉತ್ತರ ಭಾಗದಲ್ಲೂ ಕಾಸರಗೋಡು ಜಿಲ್ಲೆಯಲ್ಲೂ ಕಳ ಬರೆಯುವುದು ರಾತ್ರಿ ವೇಳೆ ಕಳ ಬರೆಹದ ಸಾಮಾಗ್ರಿಗಳೂ , ಬರೆಹದ ರೀತಿಯೂ 'ಕಳಂ ಪಾಟಿ' ನದೇ 'ಪುಡುವ' (ಪಂಚೆಯತ ಹಳಗಾಲದ ಉಡುಗೆ) ಉಟ್ಟು, ಎದೆ ಮೇಲೆ ಉತ್ತರೀಯ ಧರಿಸಿ ಪಿಡಿತಳು ಕಳಕ್ಕೆ ಇಳಿಯುತ್ತಾಳೆ ಕಲಂ ಪಾಟಿನಲ್ಲಿರುವ 'ಚೇತುಕೆಟ್ಟಲ್' (ಸೇರಿಸಿ ಕಟ್ಟುಗೆ) ಎಂಬ ಚಡಂಗ ಕೆಂದ್ರೋನ್ ಪಾಟಿನಲ್ಲೂ ಇದೆ.

ಮೊದಲಿಗೆ ದೇವತಾ ಸ್ತುತಿಪರವಾದ ಗಾನಗಳನ್ನು ಹಾಡುತ್ತಾರೆ. ಗಣಪತಿ, ಶ್ರೀಕೃಷ್ಣ, ಶಿವ, ಸಸ್ವತಿ, ,ಮೊದಲಾದ ದೇವತೆಗಳನ್ನು ವಂದಿಸುವ ಗಾನಗಳ ಬಳಕೆಯಾಗುತ್ತದೆ ಮುಂದೆ ಕೇಮದ್ರೋನ್ ಪಾಟಿನ ಉದ್ಭವದ ಬಗೆಗೆ ವಿವರಿಸುವ 'ಶಾಪವೂ ಪಾಪವೂ' ಎಂಬ ಪಾಟನ್ನು ಹಾಡುತ್ತಾರೆ 'ಮಾರನ್ ಪಾಟ್'ನ್ನೂ ಹಾಡುವುದುಂಟು ಪಾನ್ನು ಹಾಡುವಾಗ ಬಾಧಿತಳು ತೆಂಗಿನ ಎಳಗರಿ ಮತ್ತು 'ವಾಲ್‌ಕಣ್ಣಾಡಿ' (ಹಿಡಿಕೆ ಇರುವ ಕನ್ನಡಿ) ಹಿಡಿದು ಕುಳಿತಿರುತ್ತಾಳೆ, ಆಕೆಯ ತಾಯಿ ಅಥವಾ ಅಜ್ಜಿ ಆಕೆಯ ಶರೀದ ಅವಯವನಗಳಿಗೆ ಅಕ್ಕಿಯನ್ನೂ ಭತ್ತವನ್ನೂ ಬಾಚಿ ಇರಿಸಿ ಸುಳಿದು ನಿವಾಳಿಸುತ್ತಾರೆ. ಪ್ರಧಾನ 'ಕರ್ಮಿ'

(ನಡೆಸಿಕೊಡುವವರ ಮುಖ್ಯ) ಬೇಕಾದ ನಿರ್ದೇಶನ ನಿಡುತ್ತಾನೆ. ನಿವಾವಳಿಕೆ ಮುಗಿದ ಬಳಿಕೆ ಬಾಧಿತಳಿಗೆ ತಟ್ಟಿದ ಶಾಪವೂ, ಪಾಪವೂ ದೊಷಗಳೂ ಬಿಟ್ಟು ಹೊಗಲೆಂದು 'ಕರ್ಮಿ' ಹೇಳುತ್ತಾನೆ. ಚೆಲುವು ಆಯಸ್ಸು, ಸಿರಿ ಸಂಪತ್ತಿನ ಹಾಗೆ ಪದೆರಡೇಳು ಮಕ್ಕಳ ಹಡೆದು ಫಲವುಂಟಾಗು ಇವರಿಗೆ (ಅಱ ಕುಮಾಯುಸ್ಸುಂ ಶ್ರೀಯುಂ ಸಂಪತ್ತುಂ ಪೋಲೆ ಅಂಜುಹಡೇಱುಮಕ್ಕಳಾಲ್ ಪಱ ಫಲಮುಂಡಾಯಿರಿಕ್ಕಟ್ಟೆ ಇವರ್ಕೆನ್ನಾಲ್) ಎಂಬ ಆಶಂಸೆ ಯೊಂದಿಗೆ 'ಶಾಪವೂ ಪಾಪವೂ' ತೊಲಗುವ ಚಡಂಗ ಮುಗಿಯುವುದು.

ಕೆಂದ್ರೋನ್ ಪಾಟುಗಳಲ್ಲಿ ಅತ್ಯಂತ ಮುಖ್ಯವಾದುದು 'ನಾಡಯ್ಯಾಳ' ರ ಇತಿವೃತ್ತ ಒಲಗೊಂಡ ಪಾಟಾಗಿದೆ. ಪಾಟು ಹಾಡುವಾಗ ಬಾಧಿತಳು ಕಾಮನ ಚಿತ್ರದ ಮೇಲೆಯೆ ದೃಷ್ಟಿ ನೆಟ್ಟಿರಬೇಕು,

ನಾಡಯ್ಯಾಳು ಪೂರಂ ನೋಂಪಿ (ವ್ರತಾನುಷ್ಠಾನ) ಮಾಡಿದ ಘಟ್ಟಕ್ಕೆ ತಲುಪಿದಾಗ 'ತೆಯ್ಯಂ'ಗಳು ಬರುತ್ತವೆ.' ಕಾಮ' ಮತ್ತು 'ಕನ್ನಿ' ತೆಯ್ಯಂಗಳನ್ನೆ ಇಲ್ಲಿ ಕಟ್ಟಿ ಆಡುವುದು 'ಕತಿವನ್ನೂರ್ ವೀರನ್' ಹಾಗಿರುವ 'ಪೂಕ್ಕಟ್ಟಿ' ವಿಭಾಗಕ್ಕೆ ಸೇರಿದ ಉರುಟು 'ಮುಡಿ' (ಕಿರೀಟ) ಕಾಮನದು ಮುಡಿಯ ಸುತ್ತ ಇರುವ ನವಿಲಗರಿ ಇದರಲ್ಲಿ ಇರುವುದಿಲ್ಲ ಎಂಬುದೊಂದೇ ಇವೆರಡು ಮುಡಿಗಳಲ್ಲಿ ಇರುವ ವ್ಯತ್ಯಾಸ 'ಒಱಪೂ ಕಟ್ಟಿ' ಎಂದೇ 'ಕಾಮನ' ಮತ್ತು 'ಕನ್ನಿ'ಯ ಮುಡಿಗಿರುವ ಹೆಸರು 'ಕತಿವನ್ನೂರ್ ವೀರನ್' ನದು 'ತೀರ್‌ತ್ತು ಪೂಕ್ಕಟ್ಟಿ' ಮುಡಿಯಾಗಿದೆ ಬೆಳ್ಳಿಯ 'ಹೊಳೆವು' (ಮಿನ್ನು) ಅನ್ನ ಕಾಮನ 'ಮುಡಿ' ಯಲ್ಲಿ ಕುಳ್ಳಿರಿಸಲಾಗುತ್ತದೆ 'ಕನ್ನಿ'ಯ ಮುಡಿಯಲ್ಲಿ ಇದು ಇರುವುದಿಲ್ಲ 'ಕನ್ನಿ'ತೆಯ್ಯಂ ಬರುವುದು 'ವಾಲ್ ಕಣ್ಣಾಡಿ' ಯನ್ನೂ ಒಲೆಯ ಕೊಡೆ'ಉನ್ನೂ ಹಿಡಿದುಕೊಂಡು ಕಾಮನ ಕೈಯಲ್ಲಿ ತೆಂಗಿನ ಎಳಗರಿಯ 'ಒಲಿ' ಇರುತ್ತದೆ ಸಾಮಾನ್ಯವಾಗಿ ಬಾಧೆ ಬಿಟ್ಟೆಳುವುದು ತೆಯ್ಯಂಗಳ ಬರುವಿಕೆಯೊಂದಿಗೆ ಆಗಿರುತ್ತದೆ,.

ಕೇಂದ್ರೋನ್ ಪಾಟಿನ ಭಾಗವಾಗಿ ಕೆಲ ನಾಯರ್ 'ತರವಾಡು' (ಮನೆತನ)ಗಳಲ್ಲಿ 'ಕುದಿರೇಮ್ಮ್ಲ್ ಕಾಮನ್' (ಕುದುರೆ ಮೇಲಿನ ಕಾಮ) ತೆಯ್ಯಂ ಕಟ್ಟಿ ಆಡುವುದುಂಟು ಕುದುರೆಯ ಒಂದು ರೂಪ ತಯಾರಿಸಿ ಬಟ್ಟೆಯಿಂದ ಅಲಂಕರಿಸಿ ಅದರಲ್ಲಿ ಒಬ್ಬ ಏರಿನಿಲ್ಲುತ್ತಾನೆ. ಆತನ ಹೆಗಲ ಮೇಲೆ ಕಾಮನನನ್ನು ಕುಳ್ಳಿರಿಸುತ್ತಾರೆ. ಗಂಧರ್ವ ಆಕಾಶ ಸಂಚಾರಿ ಎಂಬ ವಿಶ್ವಾಸವೆ ಕುದುರೆ ಮೇಲಿನ ಕಾಮನ ಸಂಕಲ್ಪದ ಹಿಂದೆ ಇರುವುದು ಕೆಲ ನಾಯರ್ ತಱವಾಡು ಗಳಲ್ಲಿ ಒಂದಕ್ಕಿಂತ ಹೆಚ್ಚು 'ಕುದಿರೆಮ್ಮಲ್ ಕಾಮ' ನನ್ನು ಕಟ್ಟಿ ಆಡಿಸುವುದು ಇತ್ತು ಕೆಂದ್ರೋನ್ ಪಾಟನ್ನು ಹೊಂದಿಕೊಂಡು ಕೋಲತ್ತು ನಾಡಿನ ಉತ್ತರಬಾಗದಲ್ಲಿ 'ನೀಲಿಕೇಶಿ' ಪಾಟು ಹಾಡುವುದಿದೆ 'ನೀಲಿಕೇಶಿ' ಕೋಲವನ್ನು ಅಪರೂಪದವಾಗಿ ಕಟ್ಟಿ ಆಡಿಸುವುದುಂಟು ಪರಿಮಿತವಾದ ಅಲಂಕಾರಗಳೊಂದಿಗೆ ಬಲಗೈಯಲ್ಲಿ ಕೈಗಂಟೆ (ಕೈಮಣಿ) ಹಿಡಿದುಕೊಂಡು ಈ ತೆಯ್ಯಂ ಬರುತ್ತದೆ.

ರಾತ್ರಿ ಸುಮಾರು ಹನ್ನೊಂದು ಗಮಟೆ ವೇಳೆಗೆ ಪಾಟು ಹಾಡಿಕೆಗೆ ಒಂದು ಮಧ್ಯವಿರಾಮ ಉಂಟಾಗುತ್ತದೆ. ಆ ಹೊತ್ತಿ 'ಪೋಜೂಟ್ಟು'(ಇದಕ್ಕೆ ಹೊರಗಿನ ಆಟ) ಗಳು ಬರುತ್ತವೆ. ವೆಚ್ಚಿ 9ವೇಶ್ಯೆ), ಮಾಪ್ಪಿಳ, ಮಯಿಲೋನ್, ಯೋಗಿ (ಸನ್ಯಾಸಿ) ಇತ್ಯಾದಿ ಸಹಜ ವೇಷಾಲಂಕಾರಗಳೊಂದಿಗೆ ಬರುವ ಪಾತ್ರಾಭಿನಯ ಸಂಭಾಷಣೆಗಳೊಂದಿಗೆ ಪೊಱಟ್ಟು ನಗೆಯ ಗೇಲಿಯ ಸಂದರ್ಭಗಳಾಗುತ್ತದೆ. ಪೋಜೂಟ್ಟು ವೇಷಗಳು ಹೆಚ್ಚಾಗಿ ಆತ್ಮಕಥನವನ್ನೇ ನಡೆಸುವುದು 'ಕೇಂದ್ರೋನ್' ಪಾಟುಗಳ ಪ್ರೇಕ್ಷಕರಾಗಿ ಬರುವವರಿಗೊಂದು ಮನೊರಂಜನೆ ಒದಗಿಸುವುದು ಎಂಬುದೇ ಪೊಱಟ್ಟುಗಳ ಧರ್ಮ

ಪ್ರಭಾತ ವೇಳೆಯಲ್ಲಿ 'ಪೊಲಿಪ್ಪಾಟು' (ವೃದ್ದಿಯ ಹಾಡು) ಹಾಡುತ್ತಾರೆ. ಪೀಡಿತಳಿಗೂ, ಕುಟುಂಬಕ್ಕೂ ಪ್ರೇಕ್ಷಕರಾಗಿದ್ದ ಸದಸ್ಯರಿಗೂ ಐಶ್ವರ್ಯವನ್ನೂ ಒಳಿತನ್ನೂ ಬಯಸುವುದು ಪೊಲಿಪ್ಪಾಟಿನ್ ಉದ್ದೇಶ, ಭಾದಿತಳ ಸಮೀಪದ ಬಂಧುಗಳು, ಸ್ನೇಹಿತರು , ಅನುಪಾಸಿನವರು ಉಚ್ಚಾಟಕರಿತೆ ಶಕ್ತ್ಯನುಸಾರ ವಸ್ತ್ರ ಬತ್ತ, ಅಕಕಿ , ಹಣ ಇತ್ಯಾದಿಗಳನ್ನು ನೀಡುತ್ತಾರೆ.

'ಪೋಲಿಪ್ಪಾಟಿ'ನ ಬಳಿಕ 'ಶಕುನಂ ನೊಕ್ಕಲ್' (ಶಕುನ ನೋಡುವುದು) ಎಂಬ ಚಡಂಗವಿದೆ ಚಪಪ್ರದಡಿಯಲ್ಲಿ 'ಕಲಶಕ್ಕಾರನ್' (ಕಲಶವಿಟ್ಟವನ್ನು) ಭಾರತೀಯ ಜನಾಂಗದ ಮುಖ್ಯ ನಾಟಿದ ತೆಂಗಿನ ಹೂವಿನ ಕದಿರನ್ನು ಬಾದೀತಳು ಎರಡು ಬಾರಿ ಬಾಚಿ, ಮೂರನೇ ಬಾರಿ ಬಾಚಿದ್ದನ್ನು ನೆಲಕ್ಕೆ ಹಾಕುತ್ತಾಳೆ, ನೆಲಕ್ಕೆ ಬಿದ್ದ ಹೀಚುಗಳ ಸಂಖ್ಯೆ ಬೆಸವಾದರೆ ಗಂಡೂ, ಸಮವಾದರೆ ಹೆಣ್ಣು ಹುಟ್ಟುತ್ತದೆ ಎಂಬುದು ಈ ವಿಧಿಯಿಂದ ತೋರಿ ಬರುವ ಲಕ್ಷಣ ಇದರೊಂದಿಗೆ ಕೆಂದ್ರೋನ್ ಪಾಟೀನ್ ಚಡಂಗ ಸಮಾಪ್ತ ಕೆಂದ್ರೋನ್ ಪಾಟು ನಡೆಸಿಕೊಟ್ಟದಕ್ಕೆ ಮೂವತ್ತೆರಡು ಪಣ (ಒಮದು ಪಣಂ ಹಲೆಯ ಮುರು ಕಾಲು ಆಣೆ ಅಗ ರೂಪಾಯಿಗೆ ಹದಿನಾರು ಆಣೆ ಗಳು ಪ್ರತಿಫಲ ಕೋಡುತ್ತಿದ್ದರು.

ಗ್ರಾಮೀಣ ಮದ್ದಳೆ, ಚಕ್ರತಾಳ ಇವು ಕೆಂದ್ರೋನ್ ಪಾಟಿನ ವಾದ್ಯಗಳು ತೆಯ್ಯಂ ಬರುವಾಗ ಚೆಂಡೆಯ ಬಳಕೆ ಇರುತ್ತದೆ.

ಪುಲರ್ ಕೆಂದ್ರೋನ್ ಪಾಟು

ಪುಲಯರ ಕೆಂದ್ರೋನ್ ಪಾಟು ಕುಡ ಸಂತಾನಕ್ಕಾಗಿ ಸ್ತ್ರೀಯರಿಗಿರುವ ಬಾದೆ ಕಳೆಯುವಂಥ ಉಚ್ಚಾಟನ ಆಚರಣೆಯೆ ಆದರೆ ಚಡಂಗಗಳ ವಿವರದಲ್ಲೂ, ಪುರಾವೃತ್ತಗಳಲ್ಲೂ, ಪಾಟುಗಳಲ್ಲೂ ವಣ್ಣಾರ ಕೆಂದ್ರೋನ್, ಪಾಟಿಗಿಂತ ಇದು ಭಿನ್ನ ಮುಖ್ಯವಾದ ಸಾಮ್ಯವೆಂದರೆ ಎರಡಲ್ಲೂ 'ತೆಯ್ಯಂ' ಬರಲು ಇದೆ ಎಂಬುದು ಬಾಧಿತಳ ಜತೆಯಲ್ಲಿ ಆಕೆಯ ಗಂಡನೂ ಈ ವಿಧಿಯಲ್ಲಿ ಕುಳ್ಳಿರ ಬೇಕೆಂಬುದು ಇಲ್ಲಿನ ಪ್ರತ್ಯೇಕತೆ ಮಾತ್ರವಲ್ಲ ಬೇರೆ ಯಾವ ಉಚ್ಚಾಟನನ ವಿಧಿಯಲ್ಲೂ ಸತಿ ಪತಿಯರು ಕಳದಲ್ಲಿ ಜತೆಗೆ ಕುಳ್ಳಿರುವುದಿಲ್ಲ, ಮನೆಯ ಅಂಗಳದಲ್ಲಿ ನಡೆಯುವ ಚಡಂಗ ಇದಾದರೂ ಇದಕ್ಕಾಗಿ ಪ್ರತ್ಯಕೇ ಚಪ್ಪರದ ಹಾಕವು ಕ್ರಮವಿಲ್ಲ ಮಾತ್ರವಲ್ಲ ವಿಧಿಯ ಸಮಾಪ್ತಿ ಹೊಳೆ ಬದಿಯಲ್ಲಿ ಆಗಬೇಕೆಂಬ ಕಟ್ಟಲೆಯೂ ಇದೆ

ಅಂಗಳದಲ್ಲಿ ಬಾಳೆ ಹಂಬೆ, ತೆಂಗಿನ ಎಳಗರಿಗಳಿಂದ ಮಾಡಿದ 'ಬಲಿತ್ತಟ್ಟು' (ಬಲಿತಟ್ಟು) ಇಡುತ್ತಾರೆ. ಬಾಧೀತಳ ಕೈಯಲ್ಲಿ 'ಕೈವೆಲಿ' (ಕೈಬಲಿ) ಆಕೆಯ ಗಮಡನ ಕೈಯಲ್ಲಿ ಎಳಗರಿಯೂ ಇರುತ್ತವೆ. ಸುಖಪ್ರಸವಕ್ಕಾಗಿ ರಕ್ಷಣ ನೆಲೆಯಲ್ಲೂ ಪುಲಯರು 'ಕೆಂದ್ರೋಸ್ ಪಾಟು' ಮಾಡಿಸುವುದುಂಟು'

'ತಱ' (ವೇದೀ ಅಂದರೆ ಒಂದು ಪ್ರದೇಶದ ಕುಲ ಮುಖ್ಯ) ಸದಸ್ಯರ ಕುಟ) ದ ಕುರಿಕ್ಕಳ್ (ಗುರುಗಳು) ಮತ್ತು ನಾಲ್ವರು ಶಿಷ್ಯರು ಸೆರಿ ಈ ಪಾಟನ್ನು ನಡೆಸಿಕೊಡುತ್ತರೆ. ಮುಖ್ಯ ಕರ್ಮಿಯಾದ 'ಕುರಿಕ್ಕಳ್' ಆ ಪ್ರದೇಶದ 'ಪುಲಯ ಕಾರಣವರ್' (ಪುಲಯ ಜನಾಂಗ ಮುಖ್ಯ) ಅನುಷ್ಠಾನ ಸಂಬಂಧವಾದ ಪದವಿ ಉಳ್ಳವರು ಆಗಿರುತ್ತಾರೆ ಪ್ರಧಾನ ತೆಯ್ಯಂ 'ಕೆಂದ್ರೋನ್' ಕಟ್ಟುವುದು ಕುರಿಕ್ಕಳ್ ಆಗಿರಬೇಕೆಂಬ ನಿಯಮವಿದೆ.

ಉಚ್ಚಾಟಕರು ಮಧ್ಯಾಹ್ನದ ಬಳಿಕೆ ಸ್ಥಳಕ್ಕೆ ತಲುಪುವರು ಸಂಜೆಗೆ ಮೊದಲು 'ಕಳ' ಬರೆದು ಮುಗಿಯುತ್ತದೆ. 'ಪಂಚವರ್ಣ ಪುಡಿ' ಗಳಿಂದ ಬರೆಯುವ ಈ 'ವಿಷಣಾರ್ ಕಳಂ' ಸರ್ವ ಮುರ್ತಿಗಳ ಸನ್ನಿಧಾನ ಇರುವಂಥದ್ದೆಂದು ಸಂಕಲ್ಪ ಕೆಲವು ಸುದರ್ಶನ ಚಕ್ರವನ್ನೂ ಬರೆಯುವುದಂಟು ಎರಡನೆಯದೂ ಪ್ರಧಾನವೂ ಆದ 'ಕಳ' ಬರೆಹ ಮುಂಜಾನೆ ನಾಲ್ಕು ಗಂಟೆ ವೇಲೆಗೆ ಪೂರ್ತಿಗೊಳ್ಳುವುದು ಮತ್ತು 'ತೆಯ್ಯಂ' ಬರುವುದು ಏಕಾಕಾಲದಲ್ಲಾಗುತ್ತದೆ.

ಈ 'ಕಳ'ದ ಎಲಣೆ ಸುತ್ತಿನಲ್ಲ ಇನ್ನೈವೇದ್ಯಕ್ಕಿಡುವ ಸಾಮಾಗ್ರಿಗಳಿರುತ್ತವೆ. ಸುತ್ತಲೂ ಕಳೆ ಬರೆಯುವ ಪುಡಿ ಹರವಿ ತೆಂಗಿನ ಹೂವಿನ 'ಅಲ್ಲಿ' (ಹೀಚು) ಗಳನ್ನು ಹಾಕುತ್ತಾರೆ. ಮಧ್ಯದಲ್ಲಿ ಕಳೆದ' ಹಾಲೆ' ಮರದ ಗೆಲ್ಲನ್ನು ನಾಟುತ್ತಾರೆ. ಕೆಂದ್ರೋನ್‌ನ ಉದ್ಭವ ಸ್ಥಾ ಹಾಲೆ ಮರ ಎಂದು ಇದರ 'ಪುರಾವೃತ್ತ'ದಿಮದ ವ್ಯಕ್ತವಾಗುತ್ತದೆ. ಇದಾಕ್ಕಾಗಿಯೇ 'ಪಾಲಕೊಂಬುನಾಟುವುದೆನ್ನತ್ತಾರೆ.' ಪಾಲೇಂದ್ರನ್', 'ತಿರುಪಾಲಕ್ಕಿಡಾವು' ಎಂಬ ಹೆಸರುಗಳೂ 'ಕೆಂದ್ರೋನ್' ಗೆ ಇವೆ (ತಿರು – ಶ್ರೀ, ಪಾಲ–ಹಾಲೆ, ಕಿಡಾವು–ಮಗು) ಪಾಲಕ್ಕೋಂಬಿನಲ್ಲಿ' ಒಂದು ಕೋಳಿಯನ್ನು ಕಟ್ಟುತ್ತಾರೆ.

ಮುಖ್ಯ ಕರ್ಮಿಯೆ ಕಳಂಪೂಜೆ ನಿರ್ವಹಿಸುವುದು. ಬೆಳ್ತಿಗೆ ಅಕ್ಕಿ, ಕುಚ್ಚಿಗೆ ಅಕ್ಕಿ, ತೆಂಗಿನಕಾಯಿ,ಎಳನೀರು, ಕೋಳಿ, ಕೆಂಪು, ಮತ್ತು ಕಪ್ಪು, ಕುರುನೀರು ಹೊಸಮಡಕೆ, ಹೊಸಬಟ್ಟೆ, ಹಾಲು ಇವುಗಳನ್ನು ನೈವೇದ್ಯವಾಗಿ ಇರಿಸುತ್ತಾರೆ. ಹಾಲಿನ ಬಳಿ ವೀಳ್ಯದೆಲೆ, ಅಡಕೆಗಳನ್ನು ಇಡುತ್ತಾರೆ. ಅದರ ಹತ್ತಿರ ತಾಂಬೂಲ ಸಾಮಾಗ್ರಿಯಿರುವ 'ಪಾಚ್ಚಾಕ್ಕುರಿಯ' ಮುಂಡುಗದ ಒಣಗಿದ ಎಲೆ ಹೆಣೆದು ತಯಾರಿಸಿದ ಬುಟ್ಟಿ) ಇರುತ್ತದೆ ಜೊಡಿ ತೆಂಗಿನಕಾಯಿ ಇರತ್ತೇಜ) ಮತ್ತು ಹೊಸಬಟ್ಟೆ ಇವುಗಳನ್ನು ಪಾಲಕ್ಕೊಂಬಿನಲ್ಲಿ ಇರಿಸುತ್ತಾರೆ.

'ಕಳಂಪೂಜೆ'ಬಳಿಕ ದೀಪತಳಿಗೆ ಹಿಡಿದ ಸ್ತ್ರೀಯರು, ಗಂಡ ಇವರೊಮದಿಗೆ ಬಾಧೀತಳು (ಪಿಣಿಯಾಳು) 'ಕಳ'ಕ್ಕೆ ಮೂರು ಬಾರಿ ' ಬಲ' (ಪ್ರದಕ್ಷಿಣೆ) ಬಂದು ಉಚ್ಚಾಟಕರಿಗೆ ಅಭಿಮುಖವಾಗಿ ಕುಳಿತು 'ವಿಷಣಾರು ಕಳಂ' ನೋಡುತ್ತಿರಬೇಕು ಗಂಡ ಅಕೆಯ ಬಲಭಾಗದಲ್ಲಿ ಕುಳ್ಳಿರುತ್ತಾನೆ. ಈ ವೇಳೆ ದೇವತೆಗಳನು ಸ್ತುತಿಗೈಯುವ ಒಂದು ಕೀರ್ತನೆ ಹಾಡುತ್ತಾರೆ ಪ್ರಾಥಮಿಕ ವಿಧಿ ಮುಗಿದರೆ ಗಂಡ ಎದ್ದು ಹೋಗುತ್ತಾನೆ. ಅನಂತರ 'ಪಿಣಿಯಾಳು' ನಿಲ್ಲಬೇಕು ಮಿಂದು ತಲೆಯಿಂದ ನೀರುವಸೆ ಹೋಗಿಸಿ, ತಲೆಬಿಚ್ಚಿ, ಎದೆ ಮರೆ ಮಾಡದೆ ಆಕೆ ಕಳದ ಮುಂದೆ ನಿಲ್ಲುವುದು ಕ್ರಮ

ಮೊದಲ ಚಡಂಗ 'ಕುಱತೊಡಲ್' ನಾಮ ಹಾಕುವುದು) ಪಿಣಿಯಳು ಮತ್ತು ಗಂಡ ನಾಮ ಹಾಕಿಕೊಳ್ಳಬೇಕು ಹಣಗೆ ಮೂರು ಎದೆಗೆ ಮೂರು, ತೊಳುಗಳಲ್ಲಿ ತಲಾ ಎರಡು ಹೀಗೆ ನಾಮ ಹಾಕುವುದು. ಅನಂತರ 'ಕೊಟ್ಟಿತ್ತುಡ್‌ಜ್ಜಲ್' (ಬಾರಿಸಿ ತೊಡಗುವುದು) ಎಂಬ ವಿದಿ. ದುಡಿ ಮತ್ತು 'ಚೇಱಜಲ' (ಚೇಜ್ಜಲ–ಜಾಗಟೆ) ಉಪಯೋಗಿಸಿ ಬಾರಿಸುವ ವಾದ್ಯ ಮೇಳವಿದು ಅದರೊಮಗೆ ಶಿವಸ್ತುತಿ ಮುಖ್ಯವಾಗಿರುವ 'ಹರಿಶಾಸ್ತ್ರಂ' ಹಳುವರು ಆ ಹೊತ್ತು ಭತ್ತ, ಅಕ್ಕಿ, 'ನಿಱನಾಱಿ' (ತುಂಬಿದ ಬಳ್ಳ), ಎಳನೀರು, ಕಳ್ಳು, ಇತ್ಯಾದಿಯನ್ನು ಕಳದಲ್ಲಿ ಇರಿಸುತ್ತಾರೆ.

ಅನಂತರ 'ತೆಯ್ತ್ಯಂ' ಕೋಲಗಳು ಬರುತ್ತವೆ. ಅವು ಕ್ರಮವಾಗಿ 'ವೈರೋನ್' 'ತಱ' 'ಮೂರ್ತಿ', 'ಐಂಗೋಲಂಜ್', 'ಚುಡಲ', 'ಕರಿವಾಳ್', ಉದಿರಕ್ಕಾಳಿ, ಕೇಂದ್ರೋನ್ ಆಗಿರುತ್ತವೆ. ಮೊದಲ ಮೂರನ್ನೂ ಮೂರ್ತಿ ತೆಯ್ಯಂ' ಗಳೆಂದು ಕರೆಯುತ್ತಾರೆ ಒಂದು ತೆಯ್ಯವೇ ಯದು ಸಂಕಲ್ಪಗಳಲ್ಲಿ ಐದು ಬಾರಿ ಕಾಣಿಸಿಕೊಳ್ಳುವುದರಿಮದ 'ಐಂಗೋಲಂಜ್' (ಐದು ಕಓಲ ಐದು) ಎಂದು ಹೆಸರು 'ಮಾಯಿಲೋನ್ ಕಣ್ಣನ್', 'ಚೋತಿಯನ್', ಚೋತ್ತಿಯತ್ತಿ', 'ಕೊಲ್ಲನ್' (ಕಮ್ಮಾರ), 'ಮಾಪ್ಪಿಳ', ಎಂಬವರು ಸತ್ತು ತೆಯ್ಯಂ ಗಳಾದರೆಂಬ ಸಂಕಲ್ಪ 'ಐಂಗೋಲಂಜ್'ನ ಹಿಂದುಗಡೆ ಇದೆ ಕೆಲ ಕಡೆಗಲಲ್ಲಿ 'ಕೆಂದ್ರೋನ್' ಗೆ ಮುನ್ನ 'ತೇವುತ ತೆಯ್ಯಂ' (ದೇವತಾ ತೆಯ್ಯಂ) ಗಳನ್ನು ತರುವ ಕ್ರಮವೂ ಇದೆ ಈ ತೆಯ್ಯಂಗಳು ಏಳು ಬಗೆ –ತೇವುತ, ಮೇಲಿಲೋಕಂ, ತೇವುತ, ಮೆಕ್ಕಣ್ಣಿನ್ ತೇವು, ಕರುಕ್ಕಲಕ್ಕಿತ್ತೇವುತ, ಉರುಟ್ಟುಕ್ಕಣ್ಣರ್ ತೇವುತ, ಮೆಕ್ಕಣ್ಣಿನ್ ತೇವುತ, ಕರುಕ್ಕಲಕ್ಕಿತ್ತೇವುತ, ಉರುಟ್ಟುಕ್ಕಣ್ಣರ್ ತೇವುತ, ವರಟ್ಟುಕ್ಕಣ್ಣನ್ ತೇವು, ಕರುಕ್ಕಲಕ್ಕಿತ್ತೇವುತ, ಉರುಟ್ಟುಕ್ಕಣ್ಣರ್ ತೇವುತ, ವರಟ್ಟುಕ್ಕಣ್ಣನ್ ತೇವುತ, ಈ ದೇವತೆಗಳು ಗರ್ಭವನ್ನು ತೊಳಸಿಯೂ, ರಕ್ತ ಹೀರಿಯೂ ಸ್ತ್ರೀಯರೂ ಹೆರದಂತೆ ಮಾಡುವವುಗಳೆಂದು ನಂಬಲಾಗುತ್ತದೆ.

ಒಂದೊಂದು ದೇವತೆಯ ಉದ್ಭವ ಚರಿತ್ರೆ ಒಳಗೊಂಡು 'ತೋಱಂ ಪಾಟನ್ನು 'ಕಳ'ದ ಮುಂದೆ ಬಂದು ಆ ಅ ತೆಯ್ಯವೂ ಸಹಕಾರಿಗಳು ಸೇರಿ ಹಾಡುವಳು ಒಂದು ಘಟ್ಟದಲ್ಲಿ ತೆಯ್ಯಂ ಆವೇಶಗೋಳ್ಳುವುದು ಈ ವೇಳೆಯ ಬಾದೆ ಅಲುಗುವುದು ಈ ಯಾವ ತೆಯತ್ಯಂ ವೇಳೆಯೂ ಬಾದೆ

ಅಲುಗದಿದ್ದರೆ ಕೆಂದ್ರೋನ್ ತೆಯ್ಯಂ ಬರುವಾಗ ಮಣಿಯಾಳು ಅಲುಗಿ ಹಾರುವಳೆಂದು ಬಾವಿಸಲಾಗುತ್ತದೆ. ಆಗಲೂ ಆಕೆಗೆ ಆವೇಶ ಬಾರದಿದ್ದರೆ.

'ಬಾಧಪ್ಪಾಟು' ಹಾಡುವುದಿದೆ.

'ಮೂರ್ತಿ ತೆಯ್ಯಂಗಳ ಹೊರಡುವಿಕೆ ಮುಗಿದರೆ 'ಚಿಮ್ಮಾನಕ್ಕಳಿ' ಶುರು 'ಮಯಿಲೋನ್ ಕಣ್ಣನ 'ಮತ್ತು ಚೋತಿ'ಗಳ ಪುರಾವೃತ್ತವನ್ನು ಅಭಿನಯಸುವುದೇ 'ಚುಮ್ಮಾನಕ್ಕಳಿ; ಇದಕ್ಕೆ ಹಾಡುವುದು 'ಚೋತಿಯುಂ ಪಿಡಯುಂ' ಎಂಬ ಹಾಡು

'ಕೆಂದ್ರೋನ್' ಹೊರಡುವಾಗ ತೆಲಯ ಮೇಲೆ 'ಮೇಲಾಪ್ಪ್' (ಮೇಲ್‌ಕಾಪು) ಹಿಡಿದಿರುತ್ತಾರೆ. ತೆಯ್ಯಂ ಪಿಣಿಯಾಳಿನ ಕೈ ಹಿಡಿಯುತ್ತದೆ. ಕೆಂದ್ರೋನ್ 'ಪಾಲ' ಕ್ಕೆ ಸುತ್ತ ನೃತ್ತವಾಡುವಾಗ ಪಿಣಿಯಾಳು ಕೈಯಲ್ಲಿ ಮಡಕೆಯನ್ನು ಹಿಡಿದಿರುತ್ತಾಳೆ, ಕೆಂದ್ರೋಸ್ ಹೊರಟರೆ ಪಿಣಿಯಾಳೀನ ಗಂಡನಿಗೆ ಆ ಪರಿಸರದಲ್ಲಿ ಇರಲು ಅವಕಾಶವಿಲ್ಲ. ಕೋಲಕಟ್ಟುವವನ ಹೆಂಡತಿಯೂ ಅನುಷ್ಠಾನ ಸ್ಥಳಕ್ಕೆ ಬರುವ ಹಾಗಿಲ್ಲ,ಪಿಣಿಯಾಳೀನ ಅಡಗಿದ ಪುರುಷನೆ ಈ ಕೆಂದ್ರೋನ್ ಎಂಬ ಸಂಕಲ್ಪವೆ ಇದರ ಹಿಂದೆ ಇರುವುದು. ಅರ್ಧರಾತ್ರಿ ಕಳೆದರೆ ಕೆಂದ್ರೋನ್, ಪಣಿಯಾಳು ಮತ್ತಿತರರು ಹೊಳೆದಂಡೆಗೆ ಹೊರಡುವರು ಅಲ್ಲಿ ಉಚ್ಚಾಟಕರ ಬಳಗ ಮೊದಲೇ ತಲುಪಿ ಪೂಜಾವಿಧಿಗಳನ್ನು ತೀರಿಸಿರುತ್ತಾರೆ. 'ಕೊಟ್ಟಿಪ್ಪಾಡಿ' (ವಾದ್ಯ ಹಾಡುಗಳೊಂದಿಗೆ) ಹೊಳೆದಡಕ್ಕೆ ಪಯಣ ಅಲ್ಲಿ ದೇವತೆಗಳನ್ನು ನೀರಲ್ಲಿ ಹರಿಸುವ ಸಂಕಲ್ಪದೊಂದಿಗೆ ಕ್ರಿಯೆಗಳು ನಡೆಯುತ್ತವೆ.

'ಗುರಿಕ್ಕಳ್'ಗೆ ಹತ್ತು ಪಣಂ ತೆಯ್ಯಕಾರನಿಗೆ ಮೂರು ಪಣಂ ಸಹಕಾರಿಗಳಿಗೆ ತಲಾ ಎರಡು ಪಣಂ ಸಂಭಾವನೆ ಸಲ್ಲುತ್ತದೆ.

ಮತ ಮತ್ತು ಮಂತ್ರವಾದ

ಜೀವನದ ಸಂಕಷ್ಟಗಳನ್ನು ಉತ್ತರಿಸಲು ಮನುಷ್ಯ ಮೊದಲು ಆಶ್ರಯಿಸಿದುದು ಮಂತ್ರವಾದವನ್ನು ಎಂದು ಮಾನವಶಾಸ್ತ್ರಜ್ಞರು ಹೇಳುತ್ತಾರೆ. ಪ್ರಕೃತಿಯ ಗತಿವಿಧಿಯನ್ನು ಕಂಡು ದಿಕ್ಕುತೋರದಾದ ಪ್ರಾಚೀಣ ಮಾನವ ಮಂತ್ರವಾದದ ಮೂಲಕ ಆ ತೊಡಕುಗಳನ್ನು ಮೀರಿ ಸಾಬಹುದೆಂದು ನಂಬಿದ, ರೋಗ, ಮರಣ, ಬರ , ನೆರೆ ಮೊದಲಾದ, ಪ್ರತಿಕೂಲತೆಗಳನ್ನು ಇಲ್ಲವಾಗಿಸಲು ಮಮತ್ರವಾದಕ್ಕೆ ಸಾಧ್ಯವೆಂಬ

ಆತ್ಮವಿಶ್ವಾಸ ಅವನಿಗೆ ಬಂತು ಮಳೆಗಾಗಿ ಬುಡಕಟ್ಟಿನ ಮುಖ್ಯಸ್ಥನ ನೇತೃತ್ವದಲ್ಲಿ 'ವರ್ಷನೃತ್ತ' ಕುಣಿದುದು ಬೇಟೆಯಲ್ಲಿ ವಿಜಯಗಳಿಸಲು ಅನುಕರಣಾಭೀನಯ ರೂಪದಲ್ಲಿ ' ಬೇಟೆನಾಟ1ಕ' ಆಡಿದುದು ಈ ಗಿರಿಯನ್ನು ಎದುರಿಗಿರಿಸಿಯಾಗಿತ್ತು ಫಲಿಕರಣ ಸಂಬಂಧಿಸಿ ಗುರಿ ಸಾಧನೆಗಾಗಿ ಅನೇಕಾನೇಕ ಮಂತ್ರವಾದ ಚಡಂಗಗಳನ್ನು ಅನುಷ್ಠಿಸಲು ಆರಂಭಿಸಿದ ಆದರೆ ಪ್ರಕೃತಿ ಕ್ಷೋಬೆಗಳೂ ರೋಗವೂ ಮರಣವೂ ಮತ್ತೆ ಮತ್ತೆ ಅವನಿಗೆ ಬೆದರಿಕೆ ಯಾಗಿಯೇ ನಿಮತವು ಪ್ರಕೃತಿ ಶಕ್ತಿಗಳನ್ನು ನಿಯಂತ್ರಿಸಲು ತನಗಾದೆಂದು ಅನುಭವದೊಂದಿಗೆ ಕ್ರಮೇಣ ಅರ್ಥವಾಯಿತು ಈ ಬಗೆಯ ನಿಸ್ಸಹಾಯಕ ಸ್ಥಿತಿಯಲ್ಲೇ ಮನುಷ್ಯ ಪ್ರಕೃತಿ ಶಕ್ತಿಗಳಿಗೆ ವಿಧೆಯನಾಗಿ ಜೀವಿಸತೊಡಗಿದುದು ಮಾನವಾತಿತ ಶಕ್ತಿಗಳಲ್ಲಿರುವ ವಿಶ್ವಾಸ ಅವನನ್ನೂ ದೇವತೆಗೂ, ಆರಾಧನೆಗೂ ನಡೆಸಿತು ಈ ಹಿನ್ನೆಲಯಲ್ಲಿ ಮತ ಉದ್ಭವಿಸಿತು ಅಲೌಕಿಕ ಶಕ್ತಿಗಳಲ್ಲಿರುವ ವಿಶ್ವಾಸದಿಂದ ಮೂರ್ತಶಕ್ತಿಗಳನ್ನಾರಾದಿಸುವ ಕಡೆಗೆ ಸಾಗುವುದಾಯಿತು ಮಮತ್ರವಾದ, ಮತ ಎಂಬವುಗಳಲ್ಲಿರುವ ವಿಶ್ವಾಸದಿಂದಲೇ ಲೆಕ್ಕ ವಿಲ್ಲದಷ್ಟು ಅನುಷ್ಠಾನಗಳು ಹುಟ್ಟಿಕೊಂಡುದು.

ನಂಬಿಕೆಗೆ ಎರಡು ಘಟಕಗಳಿವೆ. ವ್ಯಕ್ತಿಯ ಹಿತಾಸಕ್ತಿಗೂ ಸಮೂಹದ ಸಾರ್ವಜನಿಕ ಹಿತಕ್ಕೂ ಕೆಲ ಕೆಲಸಗಳನ್ನು ಮಾಡಬೇಕೆಂದು ಮತ್ತು ಇನ್ನು ಕೆಲ ಕೆಲಸಗಳಿಂದ ದೂರವುಳಿಯಬೇಕೆಂದೂ ಸಮೂಹದ ಅನುಶಾಸನವಿದೆ ಕೆಲವನ್ನು ಆಚರಿಸಿದರೆ ಉದ್ದೇಶಿತ ಫಲ ದೊರೆಯುತ್ತದೆ. ಕೆಲವನ್ನು ದೂರವಿಡದಿದ್ದರೆ ಫಲ ಪ್ರತಿಕೂಲವಾಗಿರುತ್ತದೆ. ಮೊದಲನೆಯಾದನ್ನು 'ಅನುಷ್ಠಾನಂ' (ಡಿಣಣಚಿಟ) ಎಂದೂ, ಎರಡನೆಯದನ್ನೂ ನಿಷಿದ್ದ (ಣಚಿಭಠಠ) ಎಂದೂ ಹೇಳುತ್ತಾರೆ. ವಿಧಿಯೂ ನಿಷೇಧವೂ ಹೀಗೆ ನಂಬಿಕೆಯ ಎರಡು ಮಗ್ಗುಳಗಳಾಗುತ್ತವೆ. ಗಿಚಿಟಿ ರಿಚಿಟಿಟಿಜಠಿ ಎಂಬುವರು ಅನುಷ್ಠಾನ ಮತ್ತು ನಿಷೇಧ ಇವನ್ನು ಪ್ರತ್ಯೇಕಿಸಿ ನೋಡಲಾರರು ಅವುಗಳೆರಡನ್ನೂ ಅನುಷ್ಠಾನಗಳೆಂದೇ ಪರಿಗಣಿಸಿ ಅವುಗಳಿಗೆ positive rites negative rites ಎಂದು ಹೆಸರು ಕೊಡುತ್ತಾರೆ.

ಅನುಷ್ಠಾನಗಳನ್ನು ಮಾಂತ್ರಿಕ ಅನುಷ್ಠಾನ ಮತ್ತು ಮತಾನುಷ್ಠಾನ ಎಂದು ಮತ್ತೆ ಎರಡಾಗಿ ವಿಭಜಿಸಬಹುದು ಆದರೆ ಇವೆರಡು ಪರಸ್ಪರ ಹೆಣೆದುಕೊಂಡು ಇರುವವುಗಳಾಗದ್ದರಿಂದ ಇವನ್ನು ವ್ಯಕ್ತವಾಗಿ ವಿಂಗಡಿಸುವ ಗಡಿ ರೇಖೆ ಹಾಕುವುದು (ಪ್ರಿಯಾಸಕರ ಮಂತ್ರವಾದದಲ್ಲಿ ಮತಸಂಬಂಧಿಸಯಾದ ಅಂಶಗಳೂ, ಮತೀಯ ಚಡಂಗಗಳಲ್ಲಿ ಮಾಂತ್ರಿಕ ಘಟಕಗಳೂ ವಿಲಯನಗೊಂಡಿರುವುದಾಗಿ ಕಾಣಬಹುದು ಹಾಗಾಗಿ ಶುದ್ದವಾದ ಮಂತ್ರವಾದ ಚಡಂಗಗಳೂ, ಮಂತ್ರವಾದ ನಿರಪೇಕ್ಷವಾದ ಮತೀಯ ಚಡಂಗಗಳೂ ಇಲ್ಲವೆಂದೇ ಹೇಳಬಹುದು.

ಮಂತ್ರವಾದಿಗಳು ಉಪಸಾನಾ ಮೂರ್ತಿಗಳನ್ನು ಆರಾಧಿಸುತ್ತಾ ಅವುಗಳನ್ನು ಪ್ರಕೀರ್ತಿಸುತ್ತ ಮಂತ್ರಗಳನ್ನೂ, ಕೀರ್ತನೆಗಳನ್ನೂ ಊರು ಹಾಕುತ್ತಲೆ ಇರುತ್ತಾರೆ. 'ಪೊಟ್ಟನ್' ಕುಟ್ಟಿಶ್ಯಾಸ್ತನ್' 'ಭೈರವನ್' ಕಣ್ಣಾಕರ್ಣನ್' ಮೊದಲಾದ ದೇವತೆಗಳು ಈ ಬಗೆಯ ಉಪಾಸನಾ ಮುರ್ತಿಗಳು ಉಚ್ಚಾಟನ ಮಂತ್ರವಾದ ಕರ್ಮಗಳಲ್ಲಿ ಅನೇಕಾನೇಕ ದೇವತೆಗಳ ಕೋಲಕಟ್ಟಿ ಆರಾಧಿಸುವ ಪದ್ದತಿಯಿದೆ

'ಕೆಂದ್ರೋನ್ ಪಾಟು' 'ಮಲಯನ್ ಕೆಟ್ಟು' ಕುಱಂದಿನಿ ಪಾಟು' ವೆಲಿಕ್ಕಳ್' 'ಕೋಲಂ ತುಳ್ಳಲ್' ಮೊದಲಾದ ಫಲೀಕರಣ ಮಂತ್ರವಾದ ಚಡಂಗಗಳಲ್ಲಿ ಹೀಗೆ ಮತವಿಶ್ವಾಸದಲ್ಲಿ ಅಧೀಷ್ಠಿತವಾದ ಕೋಲಗಳು ಪ್ರತ್ಯಕ್ಷವಾಗುತ್ತವೆ. ಇವುಗಳಲ್ಲಿ ಹಲವಿನ ಪುರಾವೃತ್ತಗಳು ಇತಿಹಾಸಗಳು, ಪುರಾಣಗಳು ಮೊದಲಾದವುಗಳಿಂದ, ವಿಕಾಸಗೊಂಡು ಎದ್ದವುಗಳಾಗಿವೆ. ಶೈವಾರಾದನೆಯೂ ಶಾಕ್ತಾರಾಧನಾ ಕರ್ಮಗಳೂ ಮಂತ್ರವಾದವೂ ಅಚಿಟಿ ಕೊಂಡೇ ಇದೆ ಉದಾಹಣೆಗೆ 'ತೆಯ್ಯಟ್ಟಂ' ನಲ್ಲ ಅನೇಕ ದೇವತೆಗಳು ಮಂತ್ರಮೂರ್ತಿಗಳು ಕುಱತ್ತಿ, ಪೊಟ್ಟನ್ ದೈವಂ, ಭೈರವನ್, ಕಣ್ಣಾಕರ್ಣನ್, ಕುಟ್ಟಿ ಶ್ಯಾಸ್ತನ್, ಗುಳಿಕನ್ ಮೊದಲಾದ ತೆಯ್ಯಂ ಕೋಲಗಳು8 'ಮಂತ್ರಮೂರ್ತಿ'ಗಳಾಗಿವೆ ಇವುಗಳ ಅವಿಷ್ಕರಣದಲ್ಲಿ ಮತಾಚಾರಗಳೂ ಮಾಂತ್ರಿಕ ಚಡಂಗಗಳೂ ಪರಸ್ಪರ ಹೆಣೆದು ಹಿಡಿದುಕೊಂಡಿವೆ. ಮಂತ್ರತಂತ್ರಗಳು ತೆಯ್ಯಾಟದ ಅವಿಭಾಜ್ಯ ಘಟಕಗಳಾಗರುತ್ತವೆ. ಮಂತ್ರವಾದವನ್ನು ಮತದಿಂದಲೂ, ಮತವನ್ನು ಮಂತ್ರವಾದದಿಂದಲೂ ಭೇರ್ಪಡಿಸಲು ಆಗದೆಂದೂ ಮಂತ್ರವಾದ ಮತದಿಂದಲೂ ಮತ ಮಂತ್ರವಾದದಿಂದಲೂ ತುಂಬಿಕೊಂಡಿವೆ ಎಂದು ಪ್ರಖ್ಯಾತ ಸಮಾಜ ಶಾಸ್ತ್ರಜ್ಞ ದರ್ಖೀಂ ಪೆಟ್ಟು ಮಾಡುವುದು ಈ ಹಿನ್ನೆಲೆಯಲ್ಲೇ

ದೇವತೆಗಳ ಕುರಿತಾದ ಕೀರ್ತನೆಗಳೂ ಕಥಾಗಾನಗಳೂ ಉಚ್ಚಾಟನ ಕರ್ಮದ ವೇದಿಯಲ್ಲಿ ಆಲಾಪನೆಗೊಂಡು ಪೀಣಿಯಾಳು (ಬಾಧಿತಳು) ಬಂಧು ಜನರು ಮೊದಲಾದವರನ್ನು ಭೂಕಾಲಕ್ಕೆ ಒಯ್ಯುವವು, ಅಭೋಧಮನಸ್ಸುಗಳಲ್ಲಿ ಮಲಗಿ ನಿದ್ರಿಸುವ ಬಾದೆ ಉಪದ್ರವಗಳು ಅವುಗಳ ಉಚ್ಚಾಟನೆ, ಫಲಪ್ರಾಪ್ತಿ ಮದೊಲಾದ ವಸ್ತುತೆಗಳು ಪಾಟುಗಳಲ್ಲಿ ಅವಿಷ್ಕೃತವಾದ ಇತಿವೃತ್ತದೊಂದಿಗೆ ಸೇರಿ ಹೆಣೆದುಕೊಳ್ಳುತ್ತವೆ. 'ಕಳ'ದಲ್ಲಿ ಬರೆಯುವ ಕೋಲಗಳ ತಾಂತ್ರಿಕ ರೂಪಗಳ ಚಿತ್ರಗಳು ಈ ದೇವತೆಗಳು ಯಥಾರ್ಥ ಎಂಬ ಮೀಥ್ಯಾ ಭ್ರಮೆಗೆ ಪೀಣಿಯಾಳನನ್ನೂ ಮತ್ತು ಇತತರನ್ನೂ ನಡೆಸುತ್ತವೆ. ಕಳದಲ್ಲಿ ಇಟ್ಟಿರುವ ಅನುಷ್ಠಾನ ಸಾಮಾಗ್ರಿಗಳೂ, ಅಲಂಕೃತವಾದ ಚಪ್ಪರವೂ ಇದಕ್ಕೆ ಸಹಾಯಕವಾಗಿ ವರ್ತಿಸುವ ಘಟಕಗಳಾಗಿವೆ. ಉಚ್ಚಾಟಕರ ಬಿರುಸಾದ ತಾಳಗತಿಯ ಹಾಡು ಅದಕ್ಕೆ ತಕ್ಕ ತಾಳಬದ್ದ ಸಂಗೀತ ಎಲ್ಲವೂ ಸೇರಿ ಬಾಧಿತಳ ಮನಸ್ಸನು ಅಲೌಕಿಕ ತಲಕ್ಕೆ ತಲಪಿಸಲಾಗುತ್ತದೆ. ರಾತ್ರಿಯ ಕೊನೆ ಭಾಗದಲ್ಲಿ ಪ್ರತ್ಯಕ್ಷಗೊಳ್ಳವು 'ಕಾಮನ್' 'ಕನ್ನಿ' ಮೊದಲಾದ ತೆಯ್ಯಂ ಕೋಲಗಳೂ ಬಾಧಾವೇಶಕ್ಕೆ ಪೀಣಿಯಾಳನ್ನು ತಲುಪಿಸಲು ಸಹಾಯ ಮಾಡುತ್ತವೆ. (ಪಲುಯರ 'ಕೆಂದ್ರೋನ್ ಪಾಟಿ'ನಲ್ಲಿ 'ಕೆಂದ್ರೋನ್'ಕರುವಾಳ್' ತೇವುತ್' ಚಡಲಮೂರ್ತಿ' ವರಕಳ್' ಐಂಗೋಲಂಜ್' ಮೊದಲಾದ ದೇವತೆಗಳು ಪ್ರತ್ಯಕ್ಷವಾಗುತ್ತವೆ.) ಸ್ವಂತ ಶರೀರದಲ್ಲಿ ದುರ್ದೇವತೆಗಳು ಕುಳಿತು ಬಾಧಿಸುತ್ತಿವೆ ಎಂದೂ ಬಾಧಾವೇಶದಲ್ಲಿ ನಡುಗೆ ಕುಣಿದರೆ ಮಾತ್ರವೇ ಅದು ವಾಸಿಯಾಗುವುದೆಂದೂ, ಮುಂದೆ ಸಂತಾನಳಾಭ ಒದಗಿತೆಂದು ಇರುವ ನಂಬಿಕೆ ಪೀಣಿಯಾಳಿನ ಮನಸ್ಸಿನಲ್ಲಿ ಬೇರುಬಿಟ್ಟು ನಿಂತಿದೆ ಎಂಬುದರಿಂದ ಬಾಧೆತೊಲಗುವ ಪ್ರಕ್ರಿಯೆ ಸುಲಭವಾಗುತ್ತದೆ. ಅಲುಗಿ ನಲಿಯದಿದ್ದರೆ ಅನುಷ್ಠಾನ ಕರ್ಮ ವಿಜಯಕರವಾಗದು ಎಂಬ ನಂಬಿಕೆಯೂ ಇದಕ್ಕೆ ಸಹಾಯ ಮಾಡುತ್ತದೆ. ಇದಲ್ಲದೆ ಸಂತಾನಸಲಾಭವನ್ನು ನಾಶಗೊಳಿಸುವ ದೇವತೆಗಳು

ಪಿಣಿಯಾಳಿನ ಶರೀರವನ್ನು ಬಾಧಿಸಿದೆ ಎಂಬುದಕ್ಕೆ ಜ್ಯೋತಿಷಿ ತನ್ನ ಚೀಟಿಯಲ್ಲಿ ಬರೆದುಕೊಟ್ಟಿರುತ್ತಾನೆ. ದೇವತೆಗಳು ಎಲ್ಲಿಮದ ಬಾಧಿಸಿದವು ಎಂಬ ವಿಶಧೀಕರಣವನ್ನೂ ಜ್ಯೋತಿ ಷಯನಿಧಿಯಲ್ಲಿ ಕಂಡುಕೊಳ್ಳಲಾಗುತ್ತದೆ (ಪುರಂ ಹಬ್ಬಕ್ಕೆ ಹೂ ಹಾಕಲು ಹೋಗುವಾಗಲೋ, ಹೊಳೆಯಿಂದಲೋ, ಕೊಳದಿಂದಲೋ, ಮೀಯುವಾಗಲೋ, ಮಧ್ಯಾಹ್ನದ ವೇಳೆ ಕೆಲ ದೇವಸ್ಥಾನಗಳ ಸಮೀಪದಿಮದ ಹೋಗುವಾಗಲೋ ಎಲ್ಲಾ ಬಾದೆಸೋಂಕು ಆಗಿಬಹುದುದೆಂದು ಜ್ಯೋತಿಷಿ ಹೇಳುತ್ತಾನೆ. (ಅಭೋಧ ಮನಸ್ಸಿನಲ್ಲಿ ಕುಳ್ಳಿರುವ ಬಾದೆಗಳ ಕುರಿತು ನಂಬಿಕೆಯೂ ಜ್ಯೋತಿಷ ನಂಬಿಕೆಯೂ ಹೀಗೆ ಬಾಧಾವೇಶಕ್ಕೆ ಭಾಧಿತಳನು ನಡೆಸುತ್ತವೆ. ಕಳದಲ್ಲಿರುವ ಕಟುಗಂಧ, ಕಡುಬಣ್ಣಗಳೂ ಮೂರು ಆಯಾಮಗಳಿರುವ ಚಿತ್ರಗಳೂ ಅನುಷ್ಠಾನ ಸನ್ನಿವೇಶಕ್ಕೆ ದಿವ್ಯವಾದ ತಲವನ್ನು ಒದಗಿಸುತ್ತವೆ. ಈ ಬಗೆ ಚಿತ್ರಗಳ ಮೂಲಕವೇ ದೇವತೆಗಳು ಮೂರ್ತಿ ಭವಿಸುವುದು ಹಾಗೆಯೇ ಅವುಗಳದೇ ಇನ್ನೊಂದು ಅವಿಷ್ಕರಣ ಎಂದು ವಿಶೇಷಸಬಹುದಾದ ತೆಯ್ಯಂ ಕೋಲಗಳು ರಂಗಕ್ಕೆ ಬರುವುದು. ನಂಬಿಕೆ ದೇವತಾ ಸಂಕೀರ್ತನೆಗಳು ,ಪಾಟುಗಳು, ಕಳದಲ್ಲಿ ಬರೆದ ದೇವತೆಗಳು, ಕೊನೆಯದಾಗಿ ತೆಯ್ಯ ಕೋಳಗಳು, ದೇವತೆಗಳ ಪ್ರತಿಬಿಂಬದಂತೆ ಅಲುಗಿ ಆಡುವುದು ಇತ್ಯಾದಿ ಮೆಟ್ಟಲು ಮೆಟ್ಟಲಾಗಿ ಅವಿಷ್ಕೃತ ವಾಗುವುದರ ಮೂಲಕ ದೇವತೆಗಳ ಸಾನಿಧ್ಯ ಮನವರಿಕೆ ಮಾಡಿಕೊಡಲೂ, ನಂಬಿಕೆಯನ್ನು ಅರಗು ಹಾಕಿ ಬಲಪಡಿಸಳು ಎಡೆಕೊಡುತ್ತದೆ. ಸಾಮಾಜಿಕವೂ ಮನಃ ಶಾಸ್ತ್ರೀಯವೂ ಆದ ಘಟಕಗಳು ಹೀಗೆ ಉಚ್ಚಾಟನಾ ಪರವಾದ ಮಾಂತ್ರಿಕ ಕರ್ಮಗಳಲ್ಲಿ ಮಾಂತ್ರಿಕ ಕರ್ಮಗಳಲ್ಲಿ ಅಲುಗಿ ಆಡಲು ಮಣಿಯಾಳಿಗೆ ಸಹಾಯ ಮಾಡುತ್ತವೆ.

ಪುರಾವೃತ್ತಗಳ ದರ್ಮಗಳಲ್ಲಿ ಮುಖ್ಯವಾದುದು ಮೌಲ್ಯಗಳ ಪ್ರತಿಷ್ಠಾಪನೆ ಸಂತಾನಲಾಭಕ್ಕಾಗಿ ಆಚರಿಸುವ ಚಡಂಗಗಳು ಇವುಗಳಲ್ಲಿ ಒಂದಾಗಿ ಗಣಿಸಬಹುದು ಹಳೆಯ ಕಾಲವನ್ನು ಮತ್ತು ಹೊಸ ಕಾಲವನ್ನು ಕುಡಿಸಿ ಹೆಣೆಯುವ ಕೊಂಡಿಯಾಗಿ ಕೆಂದ್ರೋನ್ ಪಾಟಿನಂಥ ಅನುಷ್ಠಾನಗಳನ್ನು ತೆಗೆದುಕೊಳ್ಳಬಹುದು

'ಆದಿಯುಲಗಿಲ್ ಆದಿ ಬ್ರಹ್ಮರುಡೆ ಪೊನ್ನಕ್ಕಳ್ಕ್ಕ್

(ಆದಿಲೋಕದು ಆದಿ ಬ್ರಹ್ಮರ ಹೊನ್ನಮಕ್ಕಳಿಗೆ

ಶಾಪತ್ತಾಲುಂ ಪಾಪತ್ತಾಲುಂ ಬುದ್ದಿಮುಟ್ಟೇನೀ'

(ಶಾಪದಿಂದಲು ಪಾಪದಿಂದಲೂ ತೊಂದರೆಯಾಗಿದೆ) ಎಂದು ತೊಡಗುವ 'ಶಾಪವುಂ ಪಾಪವುಂ' ಎಂಬ ಕೆಂದ್ರೋನ್ ಪಾಟಿನ್ ಮೊದಲ ಖಂಡದಲ್ಲಿ ದೇವಲೋಕದಲ್ಲಿ ಈ ಬಗೆಯಲ್ಲಿರುವ ಅನುಷ್ಠಾನಗಳು ನಡೆದ ಕುರಿತಾದ ವಿವರ ಸೂಚಿಸುತ್ತದೆ. ಆ ರಿತಿಯ ಅನುಷ್ಠಾನ ಆಧುನಿಕ ಕಾಲಘಟ್ಟದಲ್ಲಿ ಭೂಮಿಯಲ್ಲಿರುವ ಮನುಷ್ಯರೂ ಮುಂದುವರಿಸಬೇಕಾದ ಅವಶ್ಯಕತೆಗೆ ಒತ್ತು ಕೊಡುತ್ತಲೆ

ಪಾಟು ಕೊನೆಗೊಳ್ಳುತ್ತದೆ. ಅನುಷ್ಠಾನಗಳ ನಿರಂತರತೆಯನ್ನು ಕಾಯ್ದು ರಕ್ಷಿಸಬೇಕು ಎಂಬುದನ್ನೆ ಇದು ವ್ಯಕ್ತಪಡಿಸುವುದು.

ವಿಶುದ್ದ ಕರ್ಮಗಳು ಒಳಗೊಳ್ಳುವ ಫಲವಂತಿಕೆಯ ಚಡಂಗಗಳ ಆಚರನೆಯಲ್ಲಿ ನೆಟ್ಟುಕೊಳ್ಳುವುದೇ 'ಕೆಂದ್ರೋನ್ ಪಾಟ'ನ ಪುರಾವೃತ್ತದ ಧರ್ಮ ಸಂತತಿಗಾಗಿ ನೊಂತಿರುವುದು, ಕಲಾಶಾಟ್ಸ್, ಗೋಪೂಜೆ, ಅನ್ನದಾನ ಪೂರಡ ಎಸೆದು ತುಂಡರಿಸು, ಹೂಹಾಕುವುದು, ಕಾಮಪೂಜೆ, ಶುದ್ದಿಕರಣ ಪ್ರಕ್ರಿಯೆ ಇತ್ಯಾದಿಯೆಲ್ಲ ಫಲವಂತಿಕೆಯೊಂದಿಗೆ ಸಂಬಂಧಿಸಿದ ಅನುಷ್ಠಾನಗಳಾಗಿವೆ. ಸಂತಾನ ಲಾಭಕ್ಕೆ ಪರಮಪ್ರಾಧಾನ್ಯ ಕಲ್ಪಿಸುವ ಒಂದು ಸಮೂಹದ ಸಂಕಲ್ಪಗಳ ಮತ್ತು ಅವುಗಳ ಸಾಕ್ಷತ್ಕಾರಕ್ಕಾಗಿ ಅನುಷ್ಠಾನಬೇಕಾದ ಫಲವಂತಿಕೆಯ ಆಚರಣೆಗಳ ಸಾಂಗತ್ಯಕ್ಕೆ ಕೆಂದ್ರೋನ್ ಪಾಟು ಎಂಬ ಅನುಷ್ಠಾನವೂ ಅದರ ಪುರಾವೃತ್ತವೂ ಬೆರಳು ಮಾಡುತ್ತದೆ.

ಅಡುಗೆ ಮನೆ ಉಪಕರಣಗಳು

(ಗ್ರಾಮೀಣ ಅಡುಗೆ ವಿದ್ಯೆ)

ಪ್ರಿಯದರ್ಶನ್ ಲಾಲ್

ಟಿಪ್ಪಣಿ

ಸಂಸ್ಕೃತಿಯ ಬಲು ಮುಖ್ಯವಾದ ಒಂದು ಘಟಕ ಊಟ, ಮನುಷ್ಯನಿಗೂ ಮೃಗಕ್ಕೂ ಇರವು ಒಂದು ಮುಖ್ಯ ವ್ಯತ್ಯಾಸ – ಮೃಗ ಹಸಿಯಾಗಿಯೇ ತಿನ್ನುತ್ತದೆ. ಮಾನವ ಪಾಕಮಾಡಿ ತಿನ್ನುತಾನೆ. ಎಂಬುದು ಹಸಿಯನು ಪಾಕಗೊಳಿಸುವ ತಂತ್ರ ಅಡುಗೆ ಅದಕ್ಕಿರುವ ದಾರಿ ಬೇಯಿಸುವುದು ಅಥವಾ ಬಿಸುವು ಕೊಡುವುದು ಬಿಸುಪು ಕೊಡುವುದು ನೇರ ಉರಿಗಿರಿಸಿಯೂ ಆಗಬಹುದು ಅಲ್ಲವಾದರೆ ಯಾವುದಾದರೂ ಮಾಧ್ಯಮದ ನೆರವಿನಿಂದಲು ಆದೀತು ಆಗ ಪಾಕಗೊಳಿಸಲು ಪಾತ್ರ ಮತ್ತು ಯಾವುದಾದರೂ ಒಂದು ಮಾಧ್ಯಮ ಹೀಗೆ ಎರಡರ ಸಹಾಯ ಬೇಕು ಪಾಕಗೊಳಿಸುವ ಸ್ವಭಾವವನ್ನು ಅನುಸರಿಸಿ ಬೇಯಿಸುವುದು (cooking) ನೀರಾರಿಸುವುದು (roasting) ಹುರಿಯುವುದು (frying) ಎಂದು ಹೀಗೆ ಪ್ರತ್ಯೇಕಿಸಬಹುದು ಮೊದಲನೆಯದು ನೀರು ಸೇರಿಸುವ ರೀತಿ, ಎರಡನೇಯದು ಮತ್ತು ಮೂರನೆಯದು ಜಲಾಂಶವನ್ನು ಕಳೆಯುವ ರೀತಿ ಬೇಯಿಉವುದು, ಎರಡು ಬಗೆ ಒಂದು ನೀರು ಸುರಿದು ಕುದಿಸುವುಉದ, ಇನ್ನೊಂದು ಬಿಸಿಯೂ ನೀರು ಒಂದಾಗಿರುವ ಆವಿಯಲ್ಲಿಟ್ಟು ಬಿಸುಪೇರಿಸುವುದು, ಯಾವುದಾದರೂ ಪಾತ್ರದಲ್ಲಿ ಹಾಕಿ ನೀರಪಸೆಯನ್ನು ಕಳೆಯುವುದು ನೀರಾರಿಸುವಿಕೆ ಎಣ್ಣೆ ಎಂಬ ಮಾಧ್ಯಮ ಬಲಸಿ ಜಲಾಂಶವನ್ನು ಕಳೆಯುವುದೆ ಹುರಿಯುವಿಕೆ ಹೀಗೆ ಪಾಕಗೊಳಿಸುವ

ವಸ್ತುವಿನೊಂದಿಗೆ ರುಚಿ ಭೇದಕ್ಕೆ ಬೇಕಾಗಿ ಹಲವನ್ನು ಸೇರಿಸುತ್ತಾರೆ. ಹಾಗೆ ಹಲವು ಬಗೆಯ ಆಹಾರಗಳು ಉಂಟಾಗುತ್ತವೆ.

ಯಾವ ಆಹಾರವನ್ನಾಗಲಿ ನೋಡಿದೊಡನೆ, ಸಿಕ್ಕಿದೊಡನೆ ತಿನ್ನುವವನಲ್ಲ ಮನುಷ್ಯ ಅತ್ಯಂತ ಹಸಿದಿರುವ ಹೊತ್ತಿನಲ್ಲೂ ತಿನ್ನುವುದಕ್ಕೆ ಕೆಲವು ವ್ಯವಸ್ಥೆಗಳಿರುತ್ತವೆ ಬಡಿಸುವುದಕ್ಕೂ ವ್ಯವಸ್ಥೆಯಿದೆ. ಇತರೆಲ್ಲ ವಿಷಯದ ಹಾಗೆ ಬರುವ ಕಾಲಕ್ಕೆ ಕಾಯ್ದಿರಿಸುವ ಪದ್ದತಿ ಆಹಾರದ ವಿಷಯದಲ್ಲೂ ಇದೆ.

ಅಡುಗೆಗೆ ಅವಶ್ಯಕವಾದ ವಸ್ತು ಬಗೆಗಳು ಕಾಯ್ದಿರಿಸಲು ಪಾತ್ರೆಗಳು ಬೇಕು ಬೇಯಿಸುವುದಕ್ಕೂ ಸೇರಿಕೆ ಆಣಿಗೊಳಿಸುವುದಕ್ಕೂ, ಉಪಕರಣಗಳುಬೇಕು ವಿಭಿನ್ನ ರೀತಿಯ ಅಡುಗೆಗೆ ವಿಭಿನ್ನ ರೀತಿಯ ಪಾತ್ರಗಳು ಬೇಕು ತಿನ್ನುವುದಕ್ಕೂ ಇದೇ ಮಾತು ಅನ್ವಯ ಅದ್ದರಿಂದ ಅಡುಗೆ ಮನೆ ಉಪಕರಣಗಳ ಕುರಿತು ಅಧ್ಯಯನ ಮಾಡುವ ಮೂಲಕ ಪಾಕ ಸಂಪ್ರದಾದ ಕುರಿತಾಗಿಯೂ ಸಾಂಘಿಕತೆಯ ರುಚಿ ಭೇದಗಳ ಕುರಿತಾಗಿ ತಿಳಿದು ಬರುತ್ತದೆ. ಅಷ್ಟೆಲ್ಲ ಸಾಧ್ಯತೆ ಅಡುಗೆಮನೆ ಉಪಕರಣಗಳ ಕುರಿತು ಅಧ್ಯಯನಕ್ಕಿದೆ.

ನಮ್ಮ ಸಂಸ್ಕೃತಿಯಲ್ಲಿ ಅಡುಗೆಮನೆ ವಿಶಿಷ್ಠ ಪ್ರಾಮುಖ್ಯವುಳ್ಳದ್ದಾಗಿದೆ ಮಲಗುವ ಕೋಣೆಗೆ ಅನ್ಯರನ್ನು ಕರೆದೊಯ್ಯುವುದಕ್ಕೆ ನಮ್ಮಲ್ಲಿ ವಿರೋಧವಿಲ್ಲ ಅದರೆ ಅಡುಗೆ ಕೋಣೆಯೊಳಕ್ಕೆ ಬೇರೆಯವರನ್ನು ಬರಗೊಡುವ ಪದ್ದತಿ ಇಲ್ಲ ಅಡುಗೆ ಕೋಣೆಗೆ ಸುರಕ್ಷಿತತೆ ಖಾತರಿಗೊಳ್ಳುವುದಕ್ಕಾಗಿ ಹಳೆಯ ಮನೆಗಳಲ್ಲಿ, ಬಡಗು ಮನೆಗೂ ತೆಂಕಮನೆಗೂ ನಡುವೆ ಒಮದು 'ಅಂದ್ರಾಳಂ' (ಅಂತರಾಳ– ಒಂದು ಸಣ್ಣಕೋಣೆ) ಇರುತ್ತದೆ ಅಡುಗೆ ಮನೆ ಇಡಿಯಾ ಮನೆಯ ಸಂರಕ್ಷಿತ ಕೇಂದ್ರಸ್ಥಾನ ಎಂಬುದನ್ನೆ ಇವೆಲ್ಲ ತೋರಿಕೊಡುವುದು. ಅದರೊಳಗಿನ ವಸ್ತುಗಳಿಗೂ, ಅಲ್ಲಿ ನಡೆಯುವ ಪ್ರಕ್ರಿಯೆಗೂ, ಅಡುಗೆ ಮನೆಯಲ್ಲಿ ಕೆಲಸ ಮಾಡುವವರಿಗೂ ವಿಶಿಷ್ಠ ಪ್ರಾಮುಖ್ಯವಿದೆ. ಆದ್ದರಿಂದ ಅಡುಗೆ ಕುರಿತಾಗಿಯೂ ಉಪಕರಣಗಳ ಕುರಿತಾಗಿಐಊ ಅಲ್ಲಿನ ನಿರ್ವಹಣೆ ಕುರಿತಾಗಿಯೂ, ಅಲ್ಲಿನ ನಿರ್ವಹಣೆ ಕುರಿತಾಗಿಯೂ ಹಲವಾರು ನಂಬಿಕೆಗಳೂ, ನಿಷೇಧಗಳು ಇವೆ ಅವೆಲ್ಲ ಅಧ್ಯಯನಕ್ಕೆ ಒಳಪಡಬೇಕಾಗಿದೆ.

ನಾವು ದುಡಿಯುವುದು ಒಂದು ಗೇಣು ಹೊಟ್ಟೆಗಾಗಿ ಎಂದು ಪ್ರಮಾಣಿಕವಾಗಿಯೂ ಹೇಳುವುದುಂಟು ಇಷ್ಟೊಂದು ಪರಿಮಿತವಾದ ಅವಶ್ಯಕತೆಗಾಗಿ ಇಷ್ಟೆಲ್ಲ ಕಷ್ಟಪಡುವುದೇ ಎಂದು ತಿರುಗಿ ಕೇಳಿನೋಡಬಹುದು ಆಹಾರವಿಲ್ಲವಾದರೆ ಜೀವನವಿಲ್ಲೆಂಬ ಸತ್ಯವನ್ನು ಅಂಗೀಕರಿಸಿಕೊಂಡೇ ನಮಗೆ ಹೇಳಬೇಕಾಗಿ ಬಂದೀತು – ಕೇವಲ ಜೀವಧಾರಣೆಗಾಗಿ ಮಾತ್ರ ಇರುವ ಆಹಾರದಿಮದ ನಾವು ತೃಪ್ತರಲ್ಲ –ಅಂತ ಖಾದ್ಯ ಪದಾರ್ಥಗಳ ಸಂಗ್ರಹ, ಕಾಪಿಡುವುದು, ಸಿದ್ದಪಡಿಸುವುದ, ಬೇಯಿಸುವುದ, ಬಡಿಸುವುದ, ಉಣ್ಣುವುದು ಮೊದಲಾದ ವ್ಯಾಪಾರಗಳಿಗೆ ಶಾಸ್ತ್ರೀಯತೆಯನ್ನೂ, ಒಂದು ಪರಧಿವರೆಗೆ ಅನುಷ್ಠಾನ ಪರತೆಯನ್ನೂ ನೀಡಲು ಮನುಷ್ಯ ಶ್ರಮಿಸಿದ್ದಾನೆ. ಇದು ಅರ್ಥವಾಗಲು ಅಡುಗೆಮನೆ ಸಂಬಂಧಿಸಿದ

ಉಪಕರಣಗಳ ವೈವಿಧ್ಯಗಳನ್ನು ಪರಿಶೀಲಿಸಿದರೆ ಸಕು ಅಂಥ ಒಂದು ಯತ್ನವನ್ನೆ ಇಲ್ಲಿ ಮಾಡುತ್ತಿರುವುದು.

ಒಂದೊಂದು ಸಾಂಘೀಕತೆಗೂ ಅವರವರ ಅಡುಗೆ ಉಪಕರಣಗಳೂ ಅಡುಗೆ ವಿಧಿಗಳೂ ಇವೆ. ಆಹಾರದ ರುಚಿಭೇದಗಳನ್ನೂ ಆಹಾರ ಸೇವನೆಯ ಸಂಪ್ರದಾಯಗಳನ್ನೂ ರೂಪಗೊಳಿಸುವುದು ಸಾಂಘೀಕತೆಯಾಗಿದೆ ಆದರೂ ಅಡುಗೆಮನೆಯಲಲಿ ಬಳಸುವ ಉಪಕರಣಗಳನ್ನು ಸಾಮಾನ್ಯವಾಗಿ ನಾಲ್ಕಾಗಿ ವಿಂಗಡಿಸಬಹುದು –1 ಬೇಯಿಸುವುದಕ್ಕಾಗಿ ಇರುವ ಉಪಕರಣಗಳು 2 ಸಾಮಾಗ್ರಿಗಳನ್ನು ಕೆಡದಮತೆ ರಕ್ಷಿಸಿ ಇರುವ ಅರೆಯಲು ಪುಡಿಗುಟ್ಟಲು ಬಳಕೆಯಾವಂಥ ಮತ್ತು ಅಡುಗೆಮನೆಯನ್ನು ನಿರ್ಮಲವಾಗಿ ಇರಿಸುವ ಬೇಯಿಸುವುದಕ್ಕಲ್ಲದ ಉಪಕರಣಗಳು 3 ಆಹಾರ ಬಡಿಸುವ ಉಪಕರಣಗಳೂ (4) ಆಹಾರ ಸೇವನೆಗಿರುವ ಉಪಕರಣಗಳು ಇತ್ಯಾದಿ

ಪಾಕ ಮಾಡುವ ಪಾತ್ರೆಗಳು

ಕೇರಳೀಯರುಇಗೆ ಸಂಬಂಧಪಟ್ಟ ಹಾಗೆ ಮುಖ್ಯ ಆಹಾರಸ್ತು ಅಕ್ಕಿ ಹಾಗಾಗಿ ಬೇಯಿಸುವ ಪಾತ್ರಗಳಲ್ಲೆಲ್ಲ ಅಕ್ಕಿ ಬೇಯಿಸಿ ಅನ್ನ ಮಾಡುವ ಪಾತ್ರಕ್ಕೆ ಪ್ರಥಮ ಸ್ಥಾನ ನಮ್ಮ ಪಾತ್ರಗಳಲ್ಲೆಲ್ಲ ಅತ್ಯಂತ ಹಳೆಯದೆನ್ನುವ 'ಕಲಂ' (ಮಡಕೆ) ಅಕ್ಕಿ ಬೇಯಿಸುವುದಕ್ಕೆ ಇರುವಂಥದು, 'ಕಲಂ' ಎರಡು ಬಗೆಗಳಲ್ಲಿವೆ,. ಮಣ್ಣಿನ ಕಲಂ ಮತ್ತು ಚೆಂಬು ಕಲಂ' (ತಾಮ್ರದ ಮಡಕೆ) 'ಮಣ್‌ಕಲಂ' ನ ಇನ್ನೊಮದು ಬಗೆಯಾದ 'ಪಾಂಡಿಕ್ಕಲಂ'ಗೆ ಕುಡ ಈಗ ಪ್ರಚಾರ ಹೆಚ್ಚುತ್ತಿದೆ. ಬ್ರಹ್ಮಣರೂ ಇತರರ ಜಾತಿಗಳ ಸಿರಿವಂತರೂ 'ತಾಮ್ರದ ಮಡಕೆ'ಯನ್ನೇ ಅಕ್ಕಿ ಬೇಯಿಸುವುದಕ್ಕೆ ಬಳಸುತ್ತಿದ್ದುದು, ಉಳಿದವರು 'ಮಣ್ಕಲ'ದಲ್ಲೇ ಅನ್ನ ಮಾಡುವುದು , ಬ್ರಾಹ್ಮಣ ಜಾತಿಗೆ ಸೇರಿದವರು ಹಾಲು ಕಾಯಿಸಲು ಮತ್ತು ಕಷಾಯ ಕಾಸಲು ಮಾತ್ರ 'ಮಣ್ಕಲಂ' ಬಳಸುತ್ತಿದ್ದರು. ಅನ್ನಬೆಂದಿತಾದರೆ ತಿಳಿಬಿಸಿಯಲು ಪ್ರತ್ಯೇಕ ಆಕೃತಿಯಲ್ಲಿರುವ 'ಕಞ್ಞಿಕ್ಕಲಂ) ಗಂಜಿ ಮಡಕೆ ಇರುತ್ತದೆ. ಅನ್ನಬೇಯಿಸಿದ ಮಡಕೆಯನ್ನು 'ಕಞ್ಞಿಕ್ಕಲದ ಮೇಲಿರಿಸಿ ಅದನ್ನು ಮುಚ್ಚಳದೊಂದಿಗೆ ಬಾಗಿಸಿ ಇಟ್ಟು ತಿಳೋಇಯನ್ನು ಬಿಸಿಯುವದು ಕ್ರಮ 'ಕಲಂ'ಅನ್ನು ಸಂಬಂಧಿಸಿ ಹಲವು ವಾ ಗ್ರೂಢಿಗಳಿವೆ. 'ನಾಯ ತೊಟ್ಟ ಕಲಂ ಪೋಲೆ' (ನಾಯಿ ಮುಟ್ಟಿದ ಮಡಕೆಯಂತೆ) 'ಮಿಂಡಾ ಪುಚ್ಚ ಕಲಮುಡಕ್ಕು'(ಬಾಯಿ ಬಿಚ್ಚದ ಬೆಕಕು ಮಡಕೆಯನ್ನು ಒಡೆಯುತ್ತದೆ.) ಇತ್ಯಾದಿ ಸಾಂಘಕತೆಯ ಪ್ರಜ್ಞೆಯಲ್ಲಿ ಕಲಂಗೆ ಇರುವ ಪ್ರಾಧಾನ್ಯವನ್ನು ಇವ್ರ ತೋರಿಕೊಡುತ್ತವೆ.

ಪದಾರ್ಥಗಳನ್ನು ಬೇಯಿಸುವುದಕ್ಕೆ ಬಳಸಲು 'ಚಟ್ಟಿ' ಎಂಬ ವಿಶಿಷ್ಟ ಆಕೃತಿಯ ಪಾತ್ರೆಗಳಿವೆ. ಹೆಚ್ಚಾಗಿ ಪದಾರ್ಥ ಬೇಯಿಸಲು ಬಳಸುವುದು ಕಲ್ಲಿನ 'ಚಟ್ಟಿ' (ಕಲ್ಚಟ್ಟಿ) ಗಳನ್ನೇ, ಇದಕ್ಕೆ 'ಕಚ್ಚಟ್ಟಿ', 'ಕಲ್‌ಚಟ್ಟಿ', 'ಕಲ್ಲುಮೂರಿ' ಎಂದು ಪ್ರತ್ಯೇಕ ಹೆಸರುಗಳಿವೆ ಬಾಯಿ ಉಂಟಾಗಿದ್ದು ಅಳಕಡಿಮೆಯಾದ 'ಮಣ್‌ಚಟ್ಟಿ' (ಮಣ್ಣಿನ ಚಟ್ಟಿ)ಗಳೂ 'ಕಜಿ' (ಪದಾರ್ಥ) ಮಾಡಲು ಉಪಯೋಗಿಸುತ್ತಾರೆ. ಮೀನಿನ

ಪದಾರ್ಥಗಳನ್ನು ಸಾಮಾನ್ಯವಗಿ 'ಮಣ್‌ಚಟ್ಟಿ'ಗಳಲ್ಲಷ್ಟೆ ಮಾಡುತ್ತಾರೆ. ಚಟ್ಟಿಗಳನ್ನು ಮುಚ್ಚಲು 'ಅಡಪ್ಪನ್', 'ಅಡಪ್ಪ್', 'ಮೂಡಿ', 'ತಟ್ಟ್', ಎಂದೆಲ್ಲ ಕರೆಯುವ ಮಣ್ಣಿನ ಮುಚ್ಚಳಗಳಿವೆ ಕೆಲವು ಮುಚ್ಚಳ ಸಹಿತ 'ಅಡಪ್ಪುಚಟ್ಟಿ' ಕೂಡ ಇವೆ ಕಂಚಿನ ಎರಕದಲ್ಲಿ ತಯಾರಾಗುವ 'ಉರುಳಿ'ಗೆ ಅಡುಗೆ ಮನೆಯಲ್ಲಿ ಪ್ರಾಧಾನ್ಯವಿದೆ. ಅದರ ಬಾಯಿಯ ಅಂಚು ಒಖಕ್ಕೆ ಉರುಟಾಗಿ ಬಾಗಿರುವುದರಿಂದ ಅದಕ್ಕೆ ಹೆಸರು 'ಉರುಳಿ' (ಉರುಂಡದು ಉರುಳಿ ಊರುಟಾದುದು ಉರುಳಿ) ಎಂದಾಗಿದೆ . ಉರುಳಿಯನ್ನು ಹಿಡಿಯಲು 'ಕಿವಿ' (ಕಾತ್) ಇರುವುದಿಲ್ಲ ಪಾಯಸ ಮಾಡಲೂ , ಹಲಸು ಆರಿಸಲೂ ಬೆಲ್ಲದ ಪಾಕ್ ಮಾಡಲೂ ಉರುಳಿಯ ಉಪಯೋಗಿವಿದೆ. ಒಗ್ಗರಣೆ ಹಾಕಲೂ, ಮಕ್ಕಳ ಆಹಾರ 'ಇಂಗ್' (ಅಂಬ್ಲಿ) ಕಾಯಿಸಲೂ ಬಾಲೆ ಇರುವ 'ಉರುಳಿ' ಯನ್ನು ಬಳಸುತ್ತಾರೆ. 'ಕಂಚು ಒಡೆಯಬಾರದು' ಎಂಬ ಒಂದು ನಂಬಿಕೆಯ ಇದೆ 'ವೆಳ್ಳೋಡ್' ಪೊಟ್ಟಿಯಾಲ್ ಉಳ್ಳೋಡ್ ಪೊಟ್ಟುಂ (ಹಾಲುಗಂಚು ಒಡೆದರೆ,ಒಳಜಾಡು ಒಡೆಯುತ್ತದೆ) ಎಂಬುದು ಗಾದೆ. ಆದರೆ ಇದಕ್ಕೆ ಪ್ರಾಯಶ್ಚಿತ್ತವಿದೆ. –ಒಡೆದ ಹಾಲುಗಂಚಿನ ಪಾತ್ರವನ್ನು ತೊಂಬತ್ತು ತಾಸುಗಳ ಒಳಗೆ ಪುನಃ ಹಳೆಯ ರೂಪ ದಲ್ಲೇ ಎರಕ ಹೊಯ್ಸಿ ಪಡೆದರೆ ದೊಷ ಬಾಧಿಸಲಾರದು ಒಡೆದ ಉರುಳಿ ಉಪಯೋಗ ಶೂನ್ಯ ಆದ್ದರಿಂದಲೇ ಗಾದೆ ಮಾತು ' ಒಡೆದ ಉರುಳಿಯನ್ನು ಒತ್ತೆ ಇರಿಸಿದಂತೆ' ಒಡೆದ ಉರುಳಿ ಒತ್ತೆ ಇರಿಸಿ ಹಣಕೊಂಡವ ಮತ್ತೆ ಆ ಬೀದಿಗೆ ಹೋಗಲಾರ ಒತ್ತೆ ಇರಿಸಿಕೊಂಡವನಿಗೆ ಅದು ಉಪಯೋಗವಿಲ್ಲದ್ದು ಎಂಬುದು ಗಾದೆಯ ಧ್ವನಿ ಉರುಳಿ ಅಲುಗಡೆ ಸ್ಥಿರವಾಗಿ ನಿಲ್ಲಲು ಅಡಿಯಲ್ಲಿ ಮೂರು ಅಥವಾ ನಾಲ್ಕು ಅಣಿಗಳನ್ನು ಎರಕದಲ್ಲಿ ಸೇರಿಸುವುದುಂಟು

ಹಪ್ಪಳ ಕಾಯಿಸಲು ಉಪ್ಪೇರಿ ಹುರಿಯಲು 'ಚೀನಚಟ್ಟಿ' ಯ ಬಳಕೆ ಸಾಮಾನ್ಯವಾಗಿ ಕಬ್ಬಿಣದ ತಯಾರಿಸಯ ತೆರೆದ ಬಾಯಿಯ ಪಾತ್ರೆ ಇದು ಎರಡು ಕಿವಿಗಳಿರುತ್ತವೆ, ಆದರೆ ಆಢ್ಯರು ಕಂಚಿನ 'ಚೀನಚಟ್ಟಿ'ಯನ್ನು ಬಳಸುತ್ತಿದ್ದರು. ಸಣ್ಣ ಹಪ್ಪಳ ಕರಿಯಲು ಅಥವಾ ಸಾಸಿವೆ ಒಗ್ಗರಣೆ ಕಾಯಿಸಲು 'ಕಱತವಿ' ಅಥವಾ 'ವಾಲ್ ಕರಂಡಿ ಯನ್ನು ಬಳಸುವುದು. ಇವತ್ತು ಸ್ಪೂನ್ ಬಳಕೆ ಆಗುವಲೆಲ್ಲ ಹಿಂದೆ ಹಲಸಿನ ಎಲೆಯನ್ನು ಮಡಚಿ ತೆಂಗಿನಗರಿ ಕಡ್ಡಿ ಮುರಿದು ಸುರಿದು ತಯಾರಿಸುತ್ತಿದ್ದರು ಆದರೆ ಅದೇ ಆಕೃತಿ ಯಲ್ಲಿ ಹಲಸಿನ ಬೇರನ್ನು ಕೆತ್ತು ತಯಾರಿಸಿ 'ಮರಪ್ಲಾವಿಲ' (ಮರದ ಹಲಸು ಎಲೆ) ತಯಾರಿಸುತ್ತಿದ್ದರು. ಮರದಿಂದ ಕಿರು ಸೌಟುಗಳು, ತಯಾರಾಗುತ್ತಿದ್ದವು 'ಕಲ್ಚಟ್ಟಿ'ಯಲ್ಲಿ ಬೇಯುವುದುನ್ನು ತಿರುಗಿಸಲು ಮರದ ಸೌಟುಗಳ ಬಳಕೆಯಾಗುತ್ತದೆ ಪದಾರ್ಥದ (ಕಱಿಯ) ತುಂಡುಗಳನ್ನು ಉದ್ದಲು 'ಮಂತ್' ಎಂಹಬ ಉಪಕರಣವನ್ನು ಮರದಿಂದ ಕಡೆದು ತಯಾರಿಸುತ್ತಿದ್ದರು ಅನ್ನ, ಉಪ್ಪೇರಿ, ಇತ್ಯಾದಿಯನನು ಒಲೆಯ ಮೆಲೆ ತಿರುಗಿಸಲೂ 'ಚಟ್ಟುವಂ' (ಸಟ್ಟುಗ) ಬಳಕೆಯಾಗುತ್ತದೆ. ಕಬ್ಬಿಣದ ಸಟ್ಟುಗವೂ ಹಾಲುಗಂಚಿನ ಸಟ್ಟುಗವೂ ಸಿಗುತ್ತಿದ್ದವು ಕರಿಯುವ ವಸ್ತುವನ್ನು ತಿರುಗಿಸಲು ಬಳಸುವುದುಕಬ್ಬಿಣದ ಸಟ್ಟುಗಳ ಬೇರೆಯದಕ್ಕೆ ಕಂಚಿನ ಸಟ್ಟುಗಬಳಕೆಯಾಗುತ್ತದೆ. ಒಂದೊಂದ ಕೆಲಸಕ್ಕೆ

ತಕ್ಕವಾಗಿ ಒಬ್ಬೊಬ್ಬರಿರುತ್ತಾರೆ. ಎಂಬ ಅರ್ಥ ಬರಲು 'ಕರಿಯುನ್ನ ದಿಳಕ್ಕಾನ್ ಇರುಂಬು ಚಟ್ಟುಕಮೇ ಪಜೂ' (ಕರಿಯುವದನ್ನು ಮಗಚಲು ಕಬ್ಬಿಣ ಸಟ್ಟುಗವೇ ಬೇಕು) ಎಂಬ ಗಾದೆಯಿದೆ. ಬ್ರಹ್ಮಣ ಗೃಹಗಳಲ್ಲಿ ನಿತ್ಯೋಪಯೋಗಕ್ಕೆ ಗೆರಟೆಯ ಸೌಟು ಬಳಕೆಯಾಗುತ್ತಿರಲಿಲ್ಲ ವಿಶೇಷ ದಿವಸಗಳ ಬಳಕೆಗಾಗಿ ಹೇಳಿ ಮಾಡಿಸಿದ ಗಿರಟೆಯ ಸೌಟು ಅವರಲ್ಲಿ ಬಳಕೆ ಆ ದಿವಸದ ಉಪಯೋಗವಾದರೆ ಅದನ್ನು ಬಿಸಾಡುವರು ಬಡಗಿ ಕೆಲಸ ಕಲಿಯತೊಡಗಿದ ಮಕ್ಕಳೋ ಹರೆಯವೆರಿದ ಬಡಗಿಗಳೂ ಗಿರಟೆ ಸೌಟು (ಚಿಕಟ್ಟಕ್ಕಯಿಲ್) ತಯಾರಿಸುತ್ತಾರೆ. 'ಆಶಾರಿ ತುಡಙ್ಙತುಂ ಅವಸಾನಿಪಿಪಕ್ಕುನ್ನತುಂ ಚಿರಟ್ಟಕ್ಕಯಿಲಿಲಾಣ್' (ಬಡಗಿ ತೊಡುಗುವುದೂ ಕೊನೆಗೊಳಿಸುವುದೂ ಗಿರಟೆ ಸವುಟಿನಲ್ಲಿ(ಎಂಬುದು ಗಾದೆ ಮಾತು 'ಕಯಿಲು ಕುತ್ತುಕ' ಎಂಬ ವಾಗ್ರೂಢಿ ಮಲಯಾಳದಲ್ಲಿ ಹಲವೆಡೆ ಬಳಕೆಯಲ್ಲಿದೆ ಬೇರೆ ಏನು ಕೆಲಸ ಇಲ್ಲದಾದಾಗಲೆ ಸೌಟು (ಕಯಿಲ್) ಚುಚ್ಚಿ ತಯಾರಿಸುವುದು ಕೆಲಸವಿದಲ್ಲದೆ ಹೊತ್ತು ಹೋಗುವುದಕ್ಕಾಗಿ ಮಾಡುವ ಕೆಲಸ ಇದೆಂದು ತಾತ್ಪರ್ಯ "ಕಾಯಲರಿಕತ್ತ್"ಸಿನೆಮಾ ಪದ್ಯದಲ್ಲಿ (ಮಾಪ್ಪಿಳಪಾಟು) ಈ ವಾಗ್ರೂಢಿಯ ಬಳಕೆಯಾಗಿದೆ ತಿನ್ನಲೂ ಕುಡಿಯಲೂ ಏನನ್ನೂ ಕೊಡಬಾರದು ಎನ್ನಲು 'ಕಞ್ಞಿ ಕಾಯಿಲುಂ ಕಾಣಿಕ್ಕರುತ್' (ಕಾದ ಸೌಟನ್ನೂ ತೋರಿಸಬಾರದು) ಎನ್ನುವುದುಮಟು 'ಕಣಪೋಯಕಯಿಲ್ ಪೋಲೆ' (ಹಿಡಿಕೆ ಹೋದ ಗಂಟೆಸೌಟಿನಂತೆ), ಕಾಯಿಲ್‌ಕಣ ಕೊಂಡೋರು) ವೀಕ್ ತರುಂ' (ಕಯಿಲಿನ ಹಿಡಿಕೆಯಿಂದ ಒಂದು ಬಿಗಿತ ವಿಕ್ಕಿಯೇನು) ಎಂಬಂಥ ಪ್ರಯೋಗಗಳು ಕೇರಳದ ಸಾಂಸ್ಕೃತಿಕ ಜೀವನದಲ್ಲಿ ಅಡುಗೆ ಮನೆಯ ಉಪಕರಣಗಳ ಪ್ರಾಧಾನ್ಯವನ್ನು ಹೇಳುತ್ತವೆ.

ತಿಂಡಿಗಳನ್ನು ತಯಾರಿಸಲು ಪ್ರತ್ಯೇಕ ರೀತಿಯ ಪಾತ್ರೆಗಳಿವೆ. 'ದೋಸೆ' ತಯಾರಿಸಲು 'ದೊಶಚ್ಚಟ್ಟಿ' 'ಇಡ್ಡಲಿ' ತಯಾರಿಸಲು 'ಇಡ್ಡಲಿ ತಟ್ಟು' ಈಗ ತುಂಬ ಪ್ರಚಾರದಲ್ಲಿರುವ ಉಪಕರಣಗಳು ಪಿಟ್ಟು (ಪುಟ್ಟು ಕೇರಳದ ಸ್ವಂತ ತಿಮಡಿಯಾದರೂ ಬ್ರಾಹ್ಮಣರು ಇದನ್ನು ತಮ್ಮ ಅಡುಗೆ ಮನೆಯೊಳಕ್ಕೆ ಸೇರಿಸಿಕೊಂಡಿರಲಿಲ್ಲ ಬಿದಿರ ಓಟೆಯಿಂದ 'ಪುಟ್ಟುಕುಜೆ(ಕುಜೆ=ಕುತ್ತಿ) ಉಪಕರಣ ತಯಾರಾಗುತ್ತಿತ್ತು ಈಗ ಲೋಹದಿಂದಲೂ 'ಉಟ್ಟು ಕುಜೆ' ತಯಾರಾಗುತ್ತಿದೆ. 'ಪುಟ್ಟಿನ' ಸಂಬಂಧವಾಗಿ ಒಗಟೊಂದು ಹೀಗಿದೆ – ಅರಿಪ್ಪುಳ್ಳಿ ನಾಯರುಂ ತೇಙ್ಙಾಪ್ಪುಳ್ಳಿ ನಾಯರುಂ ಮುಳಪ್ಪುಳ್ಳಿ ನಾಯರುಡೆ ವೀಟ್ಟಿಲ್ ವಿರುನ್ನು ಪೋಯಿ ಕೋಲ್‌ಪುಳ್ಳಿ ನಾಯರ್ ಕುತ್ತಿ ಪುಜತ್ತಾಕ್ಕಿ' (ಅಕಕಿಯ ನಾಯರೂ, ತೆಂಗಿನ ನಾಯರೂ, ಓಟೆನಾಯರ ಮನೆಗೆ ನೆಂಟರಾಗಿ ಹೋದರೂ ಕೋಲು ನಾಯರು ಗುದ್ದಿ ಹೊರಹಾಕಿದರು) ಇದು ಪುಟ್ಟು ಕಾಯಿಸಿ ತಯಾರಿಸುವ ವಿಧಾನವನು ವಿವರಸುವಂಥದ್ದು (ಹುರಿದು ಕಲಸಿ ತುಂಬಿಸಿದ ಅಕ್ಕಿ ಹಿಟ್ಟಿನ ಹಂತಿ, ಒಂದಿಷ್ಟು ತೆಂಗಿನ ತುರಿ ಪುನಃ ಹಿಟ್ಟಿನ ಹಂತಿ ತೆಂಗಿನ ತುರಿ ಹೀಗೆ ಮೂರೋ, ನಾಲ್ಕೋ ಹಂತಿಗಳನ್ನು ಬಿದಿರ ಓಟೆಯಲ್ಲಿ ತುಂಬಿಸಿ ಅದನ್ನು ಅವಿಯಲ್ಲಿ ಬೇಯಿಸಲು ಪ್ರತ್ಯೇಕ ನೀರು ಕುದಿಯುವ ಪಾತ್ರೆ ಮೇಲೆ ನಾಟುತ್ತಾರೆ. ಅವಿ ಅಡಿಯಿಂದ ಮೇಲುಗಡೆಗೆ ದಾಟತೊಡಗಿದರೆ ಅದು ಬೆಂದಿತೆಂದು ಅರ್ಥ ಒಡನೆಯೆ ಓಟೆಯನು ತೆಗೆದು ಒಂದು ಬದಿಯಿಂದ ಕೋಲಿನಿಂದ ತಿವಿದರೆ ಪುಟ್ಟಿನ ಹಂತಿಗಳು

ಹೊರಬೀಳುತತವೆ. 'ಉಣ್ಣಿಯಪ್ಪಂ' ತಯಾರಿಸಲು 'ನೆಯ್ಯಪ್ಪಂ'ತಯಾರಿಸಲು ಪ್ರತ್ಯೇಕ 'ಕಾರ' (ಅಪ್ಪನ ಕಲ್ಲು) ಅಂತಿರುವ ಕಂಚಿನ ಗುಳಿ ಪಾತ್ರೆ) ಮುಸ್ಲಿಮರ ಮನೆಗಳಲ್ಲಿ ಪತ್ತಿರಿ ಎಂಬ ದೋಸೆಯಾಕೃತಿಯ ತಿಂಡಿ ಮಾಡುವ ಪತ್ತಿರಿ ಚಟ್ಟಿ ಇದೆ ಸೇವಗ (ಸೇಮಿಗೆ) ಹಿಟ್ಟಿಳಿಸಿ ಹಲವು ಬಗೆ ತಿಂಡಿ ತಯಾರಿಸುವ ರೀತಿ ಈಗ ವ್ಯಾಪಕವಾಗಿದೆ ಪಾತ್ರಕ್ಕೆ ಅಡಿಯಿಂದ ಒಲೆಯುರಿಸಿ ಬಿಸಿ ಕೊಡುವ ಬದಲು ಪಾತ್ರವನ್ನು ಮೇಲಿನಿಂದ ಕಾಯಿಸಿ ತಯಾರಿಸುವ ಮಲಬಾರಿನ ವಿಶೇಷವಾದ ತಿಂಡಿ 'ಕಲತ್ತಪಪಂ'(ಮಡಿಕೆಯ ಅಪ್ಪ) ಇದಕ್ಕೆ ಅವುಗಳಿಗೆ ಬಳಸುವ ಪಾತ್ರೆಗಳೂ ಇನ್ನೂ ಹಲವಿದವೆ. ಒಂದೊಂದು ಸಾಂಘೀಕತೆಯನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಕಂಡುಕೊಳ್ಳಬರುತ್ತದೆ.

ಪಾಕೇತರ ಉಪಕರಣಗಳು

ಅಡುಗೆ ಮನೆಯ ಶುಚೀಕರಣ, ಅಡುಗೆ ಕೆಲಸಕ್ಕೆ ನೆರವಾಗುವ ಇತರ ಕೆಲಸಗಳು ಸಾಮಾಗ್ರಿಗಳನ್ನು ಸುರಕ್ಷಿತವಾಗಿ ಕಾಪಿಡುವ ಉಪಾಯಗಳು ಇತ್ಯಾದಿಗಳಾಗಿ ಬಳಸುವ ಉಪಕರಣಗಳೂ 'ಪಾಕೇತರ ಉಪಕರಣಗಳು' ಅಡುಗೆ ಮನೆ ಮತ್ತು ಅಲ್ಲಿ ಕೆಲಸ ಮಾಡುವವರು ಶುದ್ದಿ ಇರುವವರಾಗಬೇಕೆಂಬುದು ಎಲ್ಲ ಸಾಂಘೀಕತೆಗಳಲ್ಲೂ ಕಡ್ಡಾಯವಾಗಿದೆ. ಅಡುಗೆ ಮನೆ ಮತ್ತು ಪರಿಸರ ನಿರ್ಮಲವಾಗುವುದಕ್ಕೆ 'ಚೂಲ್' (ಕಸಬರಿಕೆ) ಬಳಕೆ ತೆಂಗು ಧಾರಾಳ ವಾದಕಾರಣ ಸೋಗೆಯ ಕಡ್ಡಿಗಳಿಂದಲೇ 'ಹಿಡಿಸೂಡಿ' ಯತಯಾರಿ ದೊರಗು ನೆಲಗುಡಿಸಲು ಇದು ಸಾಕು ಹೆಚ್ಚು ನಯವಾದ ನೆಲದಿಂದ ಧೂಳು ಝೂಢಿಸಲು ಕಂಗಿನ 'ಪಟ್ಟ'ದಿಮದ 'ಚೂಲ್' ತಯಾರಾಗುತ್ತದೆ. 'ಪಟ್ಟಚ್ಚೂಲ್' ನಿಂದ ಮನೆಯೊಳಗೆ ಗುಡಿಸಬಾರದೆಂಬ ನಂಬಿಕೆಯೂ ಮನೆಯ ಶುಚೀಕರಣ ಸಾಮಾನ್ಯವಾಗಿ ಸ್ತ್ರೀಯರದೆ ಕಸಲ ಮನೆಯಲ್ಲಿ ಹರೆಯದ ಮಹಿಳಯರಿದ್ದರೆ ಅವರು ಗುಡಿಸಲು ಕೆಲಸವನನು ತಾವೆ ಕೈಗೆತ್ತಿಕೊಳ್ಳುವರು

'ಅಜ್ಜೇಲೆ ಮುತ್ತಿಯುಂ ಇಜ್ಜೆಲೆ ಮುತ್ತಿಯುಂ ಮುಕ್ಕಿಲಿರಿಕ್ಕುಂ'

(ಆಚೆಯ ಮುತ್ತಜ್ಜಿ ಈಚೆಯ ಮುತ್ತಜ್ಜಿ ಮೂಲೆಯಲ್ಲಿ ಇರುತ್ತಾರೆ.)

ಓರಮ್ಮ ನೇರಂ ವೇಳುತ್ತಲ್ ವಿಟ್ಟಿನು ಚುಟಿಂ ಚುಟಿಂ ನಡಕ್ಕುಂ (ಒಬ್ಬ ತಾಯಿ ಹೊತ್ತಾರೆ ಮನೆಯ

ಸುತ್ತಾನಡೆಯುತ್ತಾಳೆ)

ಪಿನ್ನೆ ಚೆನ್ನೂರು ಮುಕ್ಕಿಲಿರಿಕ್ಕುಂ

(ಮತ್ತೆ ಹೋಗಿ ಒಂದು ಮೂಲೆಯಲ್ಲಿ ಕೂತಿರ್ತಾಳೆ) – ಇಚಿಥ ಒಗಟುಗಳು ಮನೆಯ ಸುತ್ತ ಬಗ್ಗೆ ನಡೆದು ಗುಡಿಸುವ ಅಜ್ಜಿಯ ಚಿತ್ರವಣವನ್ನೆ ನೀಡುವುದು ಚುಳಿಯ ಉಪಯೋಗ ಮಾತ್ರಲವಲ ಅದರ ಸ್ಥಾನವೆಲ್ಲಿ ಎಂಬುದನ್ನೂ ಸಾಂಘೀಕತೆ ನಿಶ್ಚಿಯಿಸಿದೆ. ಅನೇಕ ಕಡ್ಡಿಗಳನ್ನು ಒಂದು ಗಂಟಿನಿಂದ ಕಸಬರಿಕೆ ತಯಾರಿಸುವ ವಿದ್ಯೆ ಮಕ್ಕಳಲ್ಲಿ ಕೌತುಕ ಹುಟ್ಟಿಸುವಂತಿದೆ ಈ ಒಗಟುಗಳು ನೋಡಿ

'ಆಯಿರಂ ಪೋಲಿಸುಕಾರಕ್ಕು ಒರು ಬೆಲ್ಟ್'

(ಸಾವಿರ ಪೋಲಿಸರಿಗೆ ಒಂದೇ ಬೆಲ್ಟ್)

ಆಯಿರಂ ಉಣ್ಣಿಕಳ್ಕ್ಕೂ ಒರರಞ್ಞಾಣ್'

(ಸಾವಿರ ಮಕ್ಕಳಿಗೆ ಒಂದೇ ಉಡಿದಾರ)ಚೂಲ್ ಕುರಿತಾದ ಒಗಟುಗಳಿವು

ಚೂಲ್ ಕುರಿತಾದ ಒಗಟುಗಳಿವು ಸ್ತ್ರೀಯರ ಆಯುಧವಗಿ 'ಚೂಲೇ' ಎಂದು ಉಗಿಯುವ ಪದ್ದತಿ ಮಲಯಾಳಿಗಿದೆ ಕ್ಷುಲ್ಲಕವೆಂದು ತೋರುವ ಈ ಅಡುಗೆ ಮನೆಯ ಉಪಕರಣ ಕೇರಳಿಯ ಸಂಘಿಕತೆಯ ಪ್ರಜ್ಞೆಯಲಲಿ ಸಜೀವವಾಗಿ ಅಡಗಿಕುಳಿತಿದೆ ಎಂಬುದಕ್ಕೆ ಇದೆಲ್ಲ ಪುರಾವೆಗಳು

ಒಲೆಯಿಂದ ಬೂದಿ ಎತ್ತು ಚೊಕ್ಕು ಮಾಡಿದ ಬಳಿಕವೆ ಅಡುಗೆಯ ಇತರ ಕೆಲಸಗಳ ಆರಂಭ ಹಿಂದಿನ ದಿನ ಬೂದಿ ಬಾಚದೆ ಅಡುಗೆ ಮನೆಯ ಇತರ ಕೆಲಸ ಮಾಡುವುದು ಅಶುಭವೆಂದು ಕ್ರೈಸ್ತರೂ ನಂಬುತ್ತಾರೆ ದಿನಾವೂ ಸಗಣಿ ತಳಿದು ಒಲೆ ಶುದ್ದ ಮಾಡುವ ಪದ್ದತಿ ಹಿಂದೂಗಳಲ್ಲಿ ಮಾತ್ರವಿದೆ ಮುಸ್ಲಿಮರು ಸೆಗಣಿಯನ್ನು ಅಶುದ್ದವೆಂದು ತಿಳಿಯುತ್ತಾರೆ ಹಿಂದೂ ಮತ್ತು ಕೈಸ್ತರಲ್ಲಿ ಒಲೆಗಳ ಸಂಖ್ಯೆ ಬೆಸವಾಗಿರಬೇಕು ಮುಸ್ಲಿಮರಿಗೆ ಸಮಸಂಖ್ಯೆಯಲ್ಲಿ ಇರಬೇಕು ಅಡುಗೆ ಮನೆಯ ಮೂಡಣ ಭಾಗದಲ್ಲೋ ಬಡಗಣ ಭಾಗದಲ್ಲೋ ಒಲೆ ಮಾಡುತ್ತಾರೆ 'ಮನೆಯ ಒಲೆಯ ಕಲ್ಲಿನ ಮೇಲೆ ಕುಳಿತರೆ ಸಾಲ ಹೆಚ್ಚುತ್ತದೆ' ಎಂದು ನಂಬುತ್ತಾರೆ. ಒಲೆ ಪಾಕ ಮಾಡುವುದು ಮಾತ್ರಲ್ವಲ ಅದರ ಸುತ್ತ ಮೇಲೆ ಹೇಳಿದಂಥ ಹಲವಾರು ನಂಬಿಕೆಗಳು, ಹಲವಾರು ಗ್ರಾಮೀಣ ವಾಙ್ಮಯಗಳು ನೆಲಸಿವೆ. ಉದಾಹರಣೆಗೆ

'ಒರಮ್ಮ ಎನ್ನುಂ ವೆಂದುಂ ನೀಱಯುಂ'

(ಒಬ್ಬಳು ಅಬ್ಬೆ ಎಂದೂ ಬೆಂದೂ ಉರುಹುತ್ತಾಳೆ)

'ಒರಮ್ಮಕ್ಕ್ ಮೂನ್ನುಮುಲ'

(ಒಬ್ಬಳು ತಾಯಿಗೆ ಮೂರು ಮೊಲೆ)

ಓರು ಮುತ್ತಿ ಮುಡಿ ಮೂನ್ನೂರು ಕೆಟ್ಟಿಯಿರಿಕ್ಕುನ್ನು'

(ಒಬಳು ಅಜ್ಜಿ ತಲೆಮುಡಿಯನ್ನು ಮುರಾಗಿ ಕಟ್ಟಿದ್ದಾಳೆ)

ಒಬ್ಬನನ್ನು ಆಧರಿಸಲು ಮೂರುಮಂದಿ) ಈ ಎಲ್ಲ ಒಗಟುಗಳ ಉತ್ತರ ಒಂದೇ ಒಲೆ ಒಲೆಯನ್ನು ಹೂಡುವುದು ಮೂರು ಕಲ್ಲುಗಳನ್ನು ಇರಿಸುವ ಮೂಲಕ ಎಂದು ಸಾಂಘಿಕತೆಗೆ ನೆನಪು ಮಾಡಿಕೊಡುವ ಒಂದು ಜಾನಪದ ರೂಪ ಇದು

ಒಲೆಯ ಬೂದಿ ವಿಶುದ್ದಿಯಿರುವ ವಸ್ತುವೆಂದೇ ಕೇರಳೀಯರು ಸಾಮಾನ್ಯವಾಗಿ ತೆಗೆದುಕೊಳ್ಳುವುದು ಪಾತ್ರಗಳನ್ನು ತೊಳೆಯಲು ಬೂದಿ 9ಚಾರಂ) ಯನ್ನು ಬಳಸುತ್ತಾರೆ. ಹಿಂದೆ ಬಟ್ಟೆ ಮಡಿಮಾಡುವುದಕ್ಕೆ 'ಕಾರ' ಬಳಸುವ ಬದಲು 'ಕಾರ' ದ ಗುಣವಿರು ಬೂದಿಯನ್ನು ಬಳಸುತ್ತಿದ್ದುದುಂಟು ಪಾತ್ರ ತೊಳೆಯಲು ಉಮಿಯನ್ನೂ ಬಳಸುತ್ತಿದ್ದರು ಬಾವಿಯೊಂದಿಗೆ ಸೇರಿಸಿ ಕಟ್ಟಿದ 'ಕೊಟ್ಟತ್ತಳಂ' ನಲ್ಲೇ ಪಾತ್ರೆಗಳನ್ನು ತೊಳೆಯುವುದು ಕ್ರೈಸ್ತಮನೆಗಳಲ್ಲಿ 'ಕೊಟ್ಟತ್ತಳಂ' ಇರುವುದಿಲ್ಲ ಚೆಂಬೆಟ್ಟಿ ಎಂಬ ದೊಡ್ಡ ಪಾತ್ರದಲ್ಲೇ ಸಣ್ಣ ಪಾತ್ರಗಳನ್ನು ತೊಳೆಯುತ್ತಿದ್ದದು ಅಡುಗೆಗೆ ಹೊರತಾದ ಇತರೆಲ್ಲ ಬಳಕೆಗಳಿಗಾಗಿ ನೀರು ಸಂಗ್ರಹಿಸಿಡುವುದು ಚೆಂಬೆಟ್ಟಿ ಯಲ್ಲೆ ಈ ಅಶ್ಯಕತೆಗೆ 'ಕುಟ್ಟಕಂ' ಎಂಬ ಹೆಸರಿನ ದೊಡ್ಡ (ಆಳದ) ಚೆಂಬಿನ ಹಂಡೆಯ ಎಲ್ಲೆಡೆ ಬಳಕೆ ಅಪರೂಪಕ್ಕೆ ಕಲ್ಲಿನ ತೊಟ್ಟಿ ಕೂಡ ಕಾಣಸಿಗುತ್ತದೆ ಅಡುಗೆಗಾಗಿ ಬಳಸುವ ನೀರು ಚೆಂಬಿನ ಕೊಡದಲ್ಲಿ ಇರಬೇಕು.

ತಯಾರಾದ ಅಡುಗೆ ವ್ಯಂಜನಾದಿಗಳನ್ನು ಸುರಕ್ಷಿತವಾಗಿ ಇರಿಸುವುದಕ್ಕಿರುವ ಪಾತ್ರಗಳು ಅಡುಗೆ ಮನೆಯ ಪಾಕೇತರ ಉಪಕರಣಗಳು ಕಿರಿದಾದ ಮಣ್ಣ ಕುಡಿಕೆಗಳೋ, ಭರಣಿಗಳೋ ಈ ಉಪಯೋಗದ ಮುಖ್ಯ ವಸ್ತುಗಳು ಅಹಾರ ಪದಾರ್ಥ ಕೆಡದೆ ಉಳಿಸುವುದಕ್ಕಾಗಿಯೇ ಭರಣಿಗಳ ಬಳಕೆ ಉಪ್ಪಿನಲ್ಲಿ ಹಾಕಿಟ್ಟ ವಸ್ತುಗಳು, ಎಣ್ಣೆ ಸಕ್ಕರೆ, ಬೆಲ್ಲ, ಮೊದಲಾದ ಅಹಾರ ವಸ್ತುಳು ಇರುವುದು ಭರಣಿಗಳಲ್ಲಿ ಕೋಣ ಕೋಡಿನಲ್ಲಿ ಎಣ್ಣೆಯನ್ನು ರಕ್ಷಿಸುವ ರೀತಿ ಕೆಲ ಸಮುದಾಯಗಳಲ್ಲಿದೆ ಆಹಾರ ವಸ್ತು ಸಂಗ್ರಹಿಸಿಡಲು ಬಟ್ಟೆ, ಬುಟ್ಟಿ ಬೇಕಾಗುತ್ತವೆ.ಟನ್ ಡಬ್ಬಾಗಳು ಬಾಟಲಿಗಳು, ಮರದ ಮರಿಗೆ, ಮಡಕೆ ಇವೆಲ್ಲ ಈ ವರ್ಗದವುಗಳೇ ತೆಂಗಿನ ಚಿಪ್ಪಿನ ಕುಡಿಕೆ, ಸೋರೆ ಬುರುಡೆಯ ಕುಡಿಕೆ, ಬಿದಿರ ಹಮಡೆಯ ಕುತ್ತಿ ಮೊಲಾದವು ವಸ್ತುಗಳನ್ನು ತೂಗಿಸಿ ಇರಿಲಸು ಬಳಕೆಯಾಗುತ್ತವೆ. ಹಾಳೆಯನ್ನು ಹೊಲಿದು ಅಂಡೆ ಚೀಲ ಮಾಡಿ ಗೆರಟೆಯಿಮದ ಮುಚ್ಚಿಡುವ ರಿತಿಯೂ ಇದೆ ಇದೇ 'ಕುತ್ತುಪಾಳ' ತೂಗಿ ಇರಿಸುವ 'ಕುತ್ತುಪಾಳ' ದಲ್ಲೆ ಮೊಸರು ಕೆಡದೆ ಇರುವುದು ಪತ್ತಾಯಂ (ಪಣತ) ಕೈಪೆಟ್ಟಿ (ಕೈಪೆಟ್ಟಿಗೆ) , ಮಂಜ(ಮಂಚ) ಮೊದಲಾದವುಗಳಲ್ಲೆ ಧಾನ್ಯದ ಶೇಖರಣೆ, ಕ್ರೈಸ್ತ ಸಮುದಾಯಗಳಲ್ಲಿ ಅಕಿ ಪೆಟ್ಟಿಗೆಗೆ ಹೆಚ್ಚಿನ ಪ್ರಾಧಾನ್ಯವಿದೆ ಹೆರಿಗೆಯಾಗಿ ತವರಿನಿಂದ ಹೋಗುವಾಗ ಆಕೆಯ ಅಕ್ಕಿ ಪೆಟ್ಟಿಗೆ ನೀಡಲು ಕ್ರಮ ಕೇರಳಿಯ ಕ್ರೈಸ್ತರಲ್ಲಿದೆ ಸಾಮಾಗ್ರಿಗಳನ್ನು ಭದ್ರವಾಗಿ ತೂಗಿ ಇರಿಸಲು ಉಱ (ಸಿಕ್ಕ) ಗಳಿರುತ್ತವೆ 'ಒರಱೇಲ್ ಅರೂಲ್ ಉಱೇಲ್ ಉರುಳೀಲ್ ಉರಿನೆಯ್ (ಒಂದು ಕೋಣೆಯಲ್ಲಿ ಬದಿಯಲ್ಲಿ ಉಱೆಯಲ್ಲಿ ಉರುಳಿಯಲ್ಲಿ ಉರಿ ಅಂದರೆ ಅರ್ಧಪಾವು –ತುಪ್ಪ) ಬಲು ಭದ್ರವಾಗಿ ಇರಿಸುವುದಾಗಿ ನೀಡುವ ಹೇಳಿಕೆಯದು 'ಉಳ್ಳತು ಪಱಙ್ಞಾಲ್

ಉಱಿಯುಂ ಚಿರಿಕ್ಕುಂ (ಇರುವುದನ್ನು ಹೇಳಿದರೆ ಉಱಿಯೂ ನಕ್ಕೀತು) ಎಂಬ ಮಾತು ತುಂಬ ಪ್ರಚಲಿತ ವಾ ಗ್ರೂಢಿ ಒಂದು ಕೆಲಸ ಮಾಡದೆ ಸುಮ್ಮಗಿರುವವರಿಗೆ ಉಪಮೆಯಾಗಿ 'ಮಞ್ಞಳ್ ಉಱಿಯಿ ಲಿಟ್ಟಪೋಲೆ 9ಅರಸಿನವನ್ನು ಸಿಕ್ಕದಲ್ಲಿ ಹಾಕಿಟ್ಟ ಹಾಗೆ) ಎನ್ನುವುದುಮಟು ಸುಮ್ಮಗೆ ಉಜಿ ತೊನೆದಾಡಿದರೆ ಅದನ್ನು ಹಿಡಿದು ನೇತಾಡಿದರೆ ದನ ಸತ್ತು ಹೋಗುತ್ತದೆ. ಎಂದು ಹಳಬರು ನಂಬುತ್ತಿದ್ದರು.

ಅರೆಯುವುದು, ಪುಡಿಗುಟ್ಟುವುದು, ಕೇರುವುದು (ಗೇರುವುದು) ಹರೆಯುವುದು (ಕರೆಯುವುದು) ಹೀಗೆ ಅಡುಗೆಗೆ ನೇರಸಹಾಯ ಆಗಬೇಕಾದ ಕೆಲಸಗಳಿವೆ ಇವಕ್ಕೆಲ್ಲ ಹೆರೆಯಲು 'ಚಿರವ' (ಹೆರೆಮಣೆ) ಇರುತ್ತದೆ ಇದರಲ್ಲಿ 'ಕೈಚಿರವ' ಎಂಬ ಪ್ರಭೇದವೂ ಇದೆ ಹೆರೆಯಲು ಬಳಸುವ ಹಲ್ಲುಗಳಿರುವ ಲೋಹದ ಹೊರಚಾಚಿಗೆ 'ನಾಕ್ಕ್ (ನಾಲಗೆ ಎಂದು ಹೆಸರು ಐದೋ ಆರೋ ನಾಕ್ಕ್‌ಗಳಿರುವ ತಿರುಗುವ ಹೆರೆಯಂತ್ರ (ಕಱಕ್ಕನ್ ಚಿರವ) ಈಚೆಗೆ ರೂಢಿಗೆ ಬಮದಿರುವಂಥದು 'ಎಲೆಯಿಲ್ಲದ ಮರದಿಂದ ಹೂ ಸುರಿಯುತ್ತದೆ 'ಎಂಬುದು ಹೆರೆಮಣೆಗೆ ಕಟ್ಟಿ ಬಾಲಭಾವನೆಯ ಒಗಟು 'ಅಪ್ಪಾಟ್ಟೆ ಪಟ್ಟಿಕ್ಕ್ ಮುಂಬೊಟ್ಟ್ ವಾಲ್' (ಆ ಕಡೆಯ ನಾಯಿಗೆ ಮುಂದುಗಡೆ ಬಾಲ) ಎಂಬುದು ಹೆಣೆಮಣಿಗಿರುವ ಇನ್ನೊಂದು ಒಗಟು ಹೆರೆಮಣೆಯನ್ನು ಕೆಳಮುಖವಾಗಿ ತೂಗಿಸಿ ಇರಿಸಿದರೆ ದೈವ ಕೋಪ ಉಂಟಾಗುತ್ತದೆಂದು ನಂಬಿಕೆಯಿದೆ.

ತೆಂಗಿನಕಾಯಿ, ಅರಿಸಿನ, ಮೆಣಸು, ಅಕ್ಕಿ ಇತ್ಯಾದಿಯನ್ನು ಅರೆಯುವುದು 'ಅಮ್ಮಿ (ಕಡೆಯುವ ಕಲ್ಲು) ಯಲ್ಲಿ 'ಅಮ್ಮಿ'ಗಳಲ್ಲಿ ಎರಡು ಬಗೆ – 'ಅಟ್ಟುಕಲ್ಲ್' ಮತ್ತು 'ತಿರಿಕ್ಕಲ್ಲ್' ಕಲ್ಲು ಹಲಗೆ ಮೇಲೆ ಉದ್ದನೆ ಕಲ್ಲಿನಿಂದ ಅರೆಯುವಂಥದ್ದು 'ಆಟ್ಟಿಕಲ್ಲ್' ಕುಣಿಯಲ್ಲಿ ಉರುಳಿಸಿ ಕಡೆಯುವ ಕಲ್ಲು 'ತಿರಿಕ್ಕಲ್ಲ್' ತಿರಿಕ್ಕಲ್ಲಿ ನಲ್ಲಿ ಕುಟ್ಟಿಪುಡಿ ಮಾಡುವ ಕೆಸಲವೂ ನಡೆಯುತ್ತದೆ 'ಅಮ್ಮಿ'ಯನ್ನು ಮೆಟ್ಟಬಾರದು ಅಮ್ಮಿಯಲ್ಲಿ ಕುಳ್ಳಿರಬಾರದು ಎಂಬ ನಿಯಮವಿದೆ ಆದರೆ ವಿವಾಹದ ಚಡಂಗವಾಗಿ ವಧುವಿನಿಂದ 'ಅಮ್ಮಿಕ್ಕುಟ್ಟಿ' (ಉರುಳಗಲ್ಲು) ಯನ್ನು ಮೆಟಿಸುವುದು ಕೇರಳದ ಬ್ರಾಹ್ಮಣರಲ್ಲಿದೆ ವಧುವನ್ನು ಗಂಡನ ಮನೆಯಲ್ಲಿ ನೆಲೆನಿಲ್ಲಿಸುವ ಸಂದರ್ಭದಲ್ಲಿ 'ಅಮ್ಮಿಕ್ಕುಟ್ಟಿ'ಯನ್ನು ಅಲಂಕರಿಸಿ ಇರಿಸುವ ಪದ್ದತಿಯೂ ಈ ಸಮೂಹದಲ್ಲಿದೆ ನಂಬೂ ತೀರಿಗಳಲ್ಲಿ ಪ್ರಚಾರದಲ್ಲಿರುವ 'ತಂಡಾಱಿಕ್ಕಿಡುಗ'ಎಂಬ ಚಡಂಗದ ಬಗೆಗೆ ವಿ.ಟಿ.ಭಟ್ಟರಿ ತಿರಿಪ್ಪಾಡ್ ಸೂಚಿಸುತ್ತಾರೆ. ಮುಟ್ಟಾಗಿನಿಂದ ನಾಲ್ಕನೇ ದಿವಸ ಅಂತರ್ಜನಗಳೆಲ್ಲ 'ಅಮ್ಮಿಕ್ಕುಟ್ಟಿ' ಕಲ್ಲಿಗೆ ಅಭಿಷೇಕ ಮಾಡಿ ನಾಮ ಹಾಕಿ, ಚಂದನ ಪೂಸಿ ಪೂಜಿಸುವ ಚಡಂಗವಿದು 'ಅಮ್ಮ ಕಿಡಕ್ಕುಂ ಮೋಳೋಡುಂ (ಅಮ್ಮ ಮಲಗಿರುತ್ತಾಳೆ ಮಗಳು ಓಡುತ್ತಾಳೆ ಇದು 'ಅಮ್ಮಿ–ಕುಟ್ಟಿ' ಕಲ್ಲಿಗಿರುವ ಒಗಟು ನಾಲು ಮೂಲಪ್ಪೆಟ್ಟಿ ನಡುಮಞ್ಞಪ್ಪೆಟಿ ಕೊಂಡೋಡುಂ ಕುದಿರಕ್ಕುಟ್ಟಿ' (ನಾಲ್ಕು ಮೂಲೆ ಪೆಟ್ಟಿಗೆಯೊಂದಿಗೆ ನಡು ಅರಸಿನ ಪೆಟ್ಟಿಗೆ ಕೊಂಡೋಡುವ ಕುದುರೆ ಮರಿ) ಎಂಬುದು ಸಮತಟ್ಟಿನ 'ಅಮ್ಮಿ' ಮೇಲೆ ಅರಸಿನ ಅರೆಯುವುದಕ್ಕಿರುವ ಒಗಟು

ಧಾನ್ಯಗಳನ್ನು ಕುಟ್ಟಿ ಪುಡಿ ಮಾಡುವುದ ಒರಳಿನಲ್ಲಿ ಇದೇ 'ಉರಲ್' ಒರಳನ್ನು ಕಲ್ಲಿನಿಂದಲೋ ಮರದಿಂದಲೋ ತಯಾರಿಸುತ್ತಾರೆ ನೆಲದ ಒರಳೂ ಕಣಿಒರಳೂ ಇರುತ್ತವೆ ವಯನಾಡಿನಲ್ಲಿ ಅಪೂರ್ವವಾದ ಮಣ್ಣಿನ ಒರಳು (ಮಣ್ಣುರಲ್) ಕಾಣಿಸುತ್ತದೆ ಕರಿಹನೆ ಹಲಗೆಯಿಮದಲೋ, ತೆಂಗಿನ ತುಂಡಿನಿಂದಲೋ ಎರಡು ಬದಿ ಉರುಟು ಮಾಡಿದ 'ಉಲಕ್ಕ' (ಒನಕೆ) ದಿಂದಲೆ ಒರಳಿನಲ್ಲಿರುವ ಧಾನ್ಯ ವನ್ನು ಕುಟ್ಟುವುದು ಬೀಟಿ ಮರದಿಂದ ಮಾಡಿದ ಒನಕೆಯೂ ಪ್ರಚಾರದಲ್ಲಿದೆ ಅದು ಹೆಚ್ಚು ಗಟ್ಟಿಯಾದ ಒನಕೆ 'ವೀಟ್ಟಿತ್ತಡಿ ಕೊಂಡುಲಕ್ಕಯುಂ ವೀಟ್ಟಿಲೆಕ್ಕೋರುತ್ತಿಯುಂ' ಎಂಬ ಪಳಮೆಯ ನುಡಿ ಬೀಟಿ ಮರದಿಂದ ಮಾಡಿದ ಒನಕೆಯಷ್ಟು ಗಟ್ಟಿಯಿರಬೇಕು ಮನೆಯೊಡತಿ ಎಂಬ ಆಶಯವನ್ನು ಹೊರಪಡಿಸಿ ಅವೆರಡನ್ನು ಸಮೀಕರಿಸುತ್ತದೆ.

'ನಿನ್ನವನೆ ಮಯಜಿಲ್ (ನಿಂದವನ ಹೊಟ್ಟೆ ಮೇಲೆ0

ವನ್ನವನೆ ಕೂತ್ತಾಟ್ಟಂ (ಬಂದವನ ಕೂತಾಟ) – ಇದು ಒರಳಿನ ಮೇಲೆ ಒನಕೆ ಕುಣಿಯುವುದನ್ನು ಹೇಳುವ ಒಗಟು ನಾಲ್ವರು ಒನಕೆಯಿಂದ ಒಂದೇ ಒರಳಿನ ಭತ್ತ ಕುಟ್ಟುವುದನ್ನು ಬಣ್ಣಿಸುವ ಒಗಟು 'ಕುಂಡನ್ನ್ ನಾಲ್ ಪಾಂಬಾಡುನ್ನ್' (ಹೊಂಡದಿಂದ ನಾಲ್ಕು ಹಾವಾಡುತ್ತಿವೆ) 'ಒರುಮಯುಂಡೆಂಗಿಲ್ ಉಲಕ್ಕಮೇಲುಂ ಕಿಡಕ್ಕಾಂ' (ಒಮ್ಮತವಿದ್ದರೆ ಒನಕೆ ಮೇಲೂ ಮಲಗಬಹುದು) ಎಂಬ ಗಾದೆ ಐಕಮತ್ಯವಿದ್ದರೆ ಯಾವ ಕಷ್ಟದ ಕೆಲಸವನ್ನೂ ಮಾಡಬಹುದೆಂದು ಉಪದೇಶಸುತ್ತದೆ.

ಕೇರುವುದಕ್ಕೆ ಮತ್ತು ತೂರುವುದಕ್ಕೆ ಬಳಸುವ ಉಪಕರಣ 'ಮಜಿಂ' (ಮೊರ ಅಥವಾ ಗೆರಸೆ) ಬಿದಿರ ಸೀಳು ಹೆಣೆದು ಮೊರದ ತಯಾರಿ, ಇದರಲ್ಲಿ ಎರಡು ಬಗೆ – 'ಒಂದು ಕೊಂಬುಮುಜಿಂ ' (ಉರುಟು ಮೊರ) ಇವು ಹಲವು ಆಕೃತಿಗಳಲ್ಲಿ ಇವೆ ಉತ್ತ ಮಲಬಾರಿನಲ್ಲಿ ಪ್ರಸಿದ್ಧವಾದ ತೆಯ್ಯಂ 'ಮುಚ್ಚಿಲೋಟ್ಟ್ ಭಗವತಿ' ಯ ಕೈಯಲ್ಲಿ ಕಿರಿದಾದ ಮೊರವಿರುತ್ತದೆ. ಈ ಪ್ರದೇಶದ ಮನೆಗಳಲ್ಲಿ ಬಳಕೆಯಾಗುವ 'ಮುಜೆ' ಎಂಬ ಹೆಸರಿನ ಮೊರ ಇದು ಮಡಕೆಯನ್ನು ಇರಿಸಲು ನೆಲದಲ್ಲಿ ಮೆತ್ತೆಯಾಗಿ ಬಳಸುವ 'ತೆರಿಕ ಅಥವಾ ತೆರಿಯ' (ಸಿಂಬಿ) ಅಡುಗೆ ಮನೆಯ ಇನ್ನೊಂದು ಪಾಕೇತರ ಸಲಕರಣೆ 'ತೆರಿಕದ ಮೇಲೆ ಇರಿಸಿದ ಮಡಕೆ ಉರುಳದೆ ಮಗುಚದೆ ಇರುತ್ತದೆ ಇದನ್ನು 'ತಿರುವ'ಎಂದೂ ಹೇಳುತ್ತಾರೆ. ಒಣಗಿದ ಬಾಳೆ ಹಂಬೆ, ತೆಂಗಿನಗರಿ, ಹಗ್ಗ, ಬಟ್ಟೆ ಹನೆಯ ನಾರು ಇತ್ಯಾದಿಗಳನ್ನು ಸುರುಳಿಯಾಗಿ ತಿರುವಿ ಅಂಚುಉಬ್ಬಿದಂತೆ ಹೆಣೆದು ತಯಾರಿಸುವಂಥದು ತೆರಿಕ

ವಸ್ತುಗಳನ್ನು ಅಳೆದು ತೆಗೆಯಲು ಬಳಸುವ ಪಾತ್ರಳ ಪರಾಮರ್ಶೆ ಕುಡ ಇಲ್ಲಾಗಬೇಕು ಧನ್ಯಗಳನ್ನು ಅಳೆಯಲು ನಾಜಿ, ಕುಜಿ, ಇಡಜ್ಜಜಿ ಇತ್ಯಾದಿ ಸಾಮಾನ್ಯ ಅಳತೆ ಪಾತ್ರಗಳು ವಯನಾಡಿನ 'ಕೊಳಕಂ' (ಕೋಳಗ) ಬಳಕೆಯಲ್ಲಿದೆ ದ್ರವ ಅಳತೆಗೆ ಗುಳಿಯಿರುವ 'ತೊಡಂ', 'ಕುಜತವಿ', 'ಕುಜುತಲ್' ಇತ್ಯಾದಿ ಇರುತ್ತವೆ.

ಬೆಂದ ಅನ್ನದಿಂದ ತಿಳಿಯನ್ನು ಬಿಸಿಯಲು 'ಅಡಚ್ಚೂಟೆ (ಮುಚ್ಚಿಬಿಸಿ) ಎಂಬ ಪರಿಕರವಿದೆ ಇದಕ್ಕೆ 'ಅಡಪಲಕ'(ಮುಚ್ಚು ಹಲಗೆ) ಎಂದೂ ಹೆಸರಿದೆ ಒಂದು ಕಾಲದಲ್ಲಿ ಇದು ಬಹಲ ಪ್ರಚಾರದಲ್ಲಿತ್ತು ಕ್ರೈಸ್ತರು ಇದನ್ನು 'ಅಡಚ್ಚುವಾರ' ಎನ್ನುತ್ತಾರೆ. ಮುಸ್ಲಿಮರು ಸಾಮಾನ್ಯವಾಗಿ ಬಸಿದು ಅನ್ನಮಾಡುವ ಪದ್ದತಿ ಇಲ್ಲ ಅವರು 'ಕೊಟ್ಟಕ್ಕಯಿಲ್' (ತೂತಿರುವ ಸಟ್ಟುಗ) ದಿಂದ ಅನ್ನ ಎತ್ತುತ್ತಾರೆ. 'ಇಲ್ಲತ್ತಮ್ಮ ಕುಳಿಚ್ಚು ವರುಂಬೋಳ್ ವೆಳ್ಳಿಕ್ಕೀಣಂ ತುಳ್ಳಿ ತುಳ್ಳಿ (ಇಲ್ಲಂನ ಒಡತಿ'ಯನ್ನು ಉಪಮಿಸುವುದು ಮುಚ್ಚು ಹಲಗೆಗೆ ಹಲಸಿನ ಹಲಗೆಯಿಂದ ತಯಾರಾಗುವ ಕಾರಣ ಅದರ ಬಣ್ಣದ ಹೋಲಿಕೆಗಾಗಿ ಮುಚ್ಚು ಹಲಗೆಗೆ 'ಇಲ್ಲತ್ತಮ್ಮ' ಉಪಮಾನ ನೀಡಿರಬಹುದು.

ಮೊಸರು ಕಡೆಯಲು ಉಪಯೋಗಿಸುವ 'ಕಡಕೋಲು' ಇನ್ನೊಂದು ಪಾಕೇತರ ಉಪಕರಣ ಮಣ್ಣಿನ ಮಡಕೆಯಲ್ಲಿ ಮೊಸರು ಕಡೆಯುವುದುನ್ನು ಪರಾಮರ್ಶಿಸಿಯೆ ಒಗಟಿನಲ್ಲಿ ಸಾಂಘಿಕತೆ 'ಕೋಶವನ್ನೆ ವಯಱಿಲ್ ಆಶಾರಿಚ್ಚೆಕ್ಕನ್ ನಡತ್ತುನ್ನ ವೆಳಿಚ್ಚಪ್ಪಾಡ್' ಎಂಬ ಸೂಚಕವನ್ನು ಬಳಸಿದುದು ಅದರ ಅಥ 'ಕುಂಬಾರನ ಹೊಟ್ಟೆಯೊಳಗೆ ಅಶಾರಿ ಹುಡುಗನು ನಡೆಸುವ ವೆಳಿಚ್ಚಪ್ಪಾಡ್' ಇದರಲ್ಲಿ ಶ್ಲೇಷೆ ಇದೆ ವೆಳಿಚ್ಚ ಎಂದರೆ ಬೆಳಗು ಅಥವಾ ಬಿಳಿದು, ಪಾಡ್ ಎಂದರೆ ಸ್ಥಾನ ಮತ್ತು ಹಾಡು ಮೊಸರು ಕಡೆಯುವುದು ಕುಂಬಾಱು ಮಾಡಿಕೊಟ್ಟ ಮಡಕೆ – ಹೊಟ್ಟೆಯಲ್ಲಿ ಅದರಲ್ಲಿ ಮೊಸರು ಕಡೆಯುವಾಗ ಆವೇಶ ಬಂದಂತೆ ಒಲೆದು ಕಲುಕುವುದು ಬಡಗಿಯ ಉತ್ಪನ್ನವಾದ ಕಡೆಗೋಲು ಮಂತ್ ಎಮದರೂ ಅದೇ ಮೇಲು ಜಾತಿಯವರ ಮನೆಯಲ್ಲಿ ಪ್ರಾಯವೇರಿದ ಮಹಿಳೆಯರು ಶುದಿಯೊಂದಿಗೆ ನಡೆಉವುದು ಮೊಸರು ಕಡೆಯುವ ಕೆಲಸ ಮೊಸರು ಕಡೆಯುವಾಗ ದೇವರ ನಾಮ ಜಪಿಸುವ ರಿವಾಜು ಇವರಲ್ಲಿ ಇದೆ ಮುಸ್ಲಿಂ ಮನೆಯಲ್ಲಿ ಮಜ್ಜಿಗೆ ಮಾಡುವ ಕ್ರಮವೆ ಇಲ್ಲ ಆದರೆ ಕ್ರೈಸ್ತರಿಗೆ ಮಜ್ಜಿಗೆ ಪರಿಚಿತ ವಸ್ತು.

ಪಾಕೇತರ ಉಪಕರಣಗಳಲ್ಲಿ ಇನ್ನೊಂದು ಕತ್ತಿ. ಪಿಚ್ಚಾತ್ತಿ (ಪಿಶಾತ್ತಿ), ವೆಟ್ಟುಕತ್ತಿ (ಕತ್ತಿವಾಳ್), ಕಜಿಕ್ಕತ್ತಿ, (ಹಲಗೆ ಕತ್ತಿ), ಅರಿವಾಳ್,(ಕುಡುಗೋಲು), ಇವು ಸಾಮಾನ್ಯ ಬಳಕೆಯುವು ತೆಲಗಿನ ಸಿಪ್ಪೆ ಸುಲಿಯಲು 'ವೆಟ್ಟುಕತ್ತಿ' ಬೇಕು ತರಕಾರಿ ಹೆಚ್ಚಲು 'ಕಜಿಕ್ಕತ್ತಿ' ಹೆರೆಮಣೆ ಹೋಲಿಕೆಯದು 'ಪಲಕಕತ್ತಿ' ಬೇಕು ತರಕಾರಿ ಹೆಚ್ಚಲು 'ಕಜಿಕ್ಕತ್ತಿ' ಹೆರೆಮಣೆ ಹೋಲಿಕೆಯದು 'ಪಲಕಕತ್ತಿ' ಇದೂ ತರಕಾರಿ ಕೆಯ್ಯುವ ಧರ್ಮ ಹೊಂದಿದೆ ಮೀನು ಶುದ್ದಮಾಡಿ ಕೋಯುವುದಕ್ಕೆ ಬಳಸುವ ಕತ್ತಿ 'ಅರಿವಾಳ್'

ಬಡಿಸುವುದು, ಉಣ್ಣುವುದಕ್ಕೆ ಉಪಕರಣ

ಆಹಾರ ಪಾಕ ಕೆಲಸ ಆದರೆ ಅದನ್ನು ಅಚ್ಚುಕಟ್ಟಾಗಿ ಬಡಿಸಲು ಮತ್ತು ಸೇವಿಸಲು ಒಂದೊಂದು ಸಾಂಘೀಕತೆಗೂ ಒಂದೊಂದು ರೀತಿಯಿದೆ. ಅದಕ್ಕೆ ಬೇಕಾಗಿ ಪ್ರತ್ಯೇಕ ಅಡುಗೆ ಮನೆ ಉಪಕರಣಗಳೂ ಇವೆ, ಬೇಯಿಸುವಾಗ, ಬೇಯುವ ವಸ್ತು ಪಾತ್ರದ ತಳಕ್ಕೆ ಹಿಡಿದುಕೊಳ್ಳದಿರಲು ಮತ್ತು ಚೆನ್ನಾಗಿ ಬೆರೆಯುವುದನ್ನು ಖಾತರಿಪಡಿಸಲು ಬಳಕೆಯಾಗುವ ಸೌಟಿನಂಥ ಉಪಕರಣಗಳನ್ನೇ ಅಹಾರ

ಬಡಿಸುವುದಕ್ಕೂ ಬಲಸುವುದು. ಕಂಚಿನ ಸಟ್ಟುಗವನ್ನೂ ಕಬ್ಬೀನದ ಸಟ್ಟುಗವನ್ನೂ ಅನ್ನ ಬಡಿಸುವುದು. ಕಂಚಿನ ಸಟ್ಟುಗವನ್ನೂ ಕಬ್ಬಿಣದ ಸಟ್ಟಗವನ್ನೂ ಅನ್ನ ಬಡಿಸಲು ಬಳಸುತ್ತಾರೆ. ಹಲವು ಬಗೆ ಕರಂಡಿಗಳು ಪಧಾರ್ಥ (ಕಜೆ)ಗಳನ್ನು ಬಡಿಸಲು ಇರುತ್ತವೆ. ಒಲೆಯಿಂದ ಪದಾರ್ಥದ ಮಡಕೆಯನ್ನು ಇಳಿಸುವ ಮೊದಲು ಅದನ್ನು ಸಣ್ಣ 'ಪಾತ್ತಿ' 'ಮರಿಗೆ'ಗಳಿಗೆ ವರ್ಗಾಯಿಸುವುದಿದೆ. 'ರಸಂ'(ಸಾರು) ಮಜ್ಜಿಗೆ ಇವನ್ನೆಲ್ಲ ಬಡಿಸುವುದು ಹಿತ್ತಾಳೆಯ 'ಗೋಮುಖಿ'ಯಲ್ಲಿ ಕುಡಿಯುವ ನೀರು ಕೊಡುವುದು 'ಕಿಂಡಿ'(ಗಿಂಡಿ)ಯಲ್ಲಿ ಬಾಲವಿಲ್ಲದ ಗಿಂಡಿಯೂ ಬಳಕೆಯಲ್ಲಿತ್ತು 'ಹೊಟ್ಟೆಯಲ್ಲಿ ಕೋಡು ಇರುವಂಥ ಗೂಳಿಯೆಂದು ಒಗಟಿನಲ್ಲಿ 'ಬಾಲದ ಗಿಂಡಿ'ಯನ್ನು ತರುವುದುಂಟು ಗಿಂಡಿಯ ಬಾಲ ತೆಂಕು ಕಡೆಗೆ ಆಗಕೂಡದೆನ್ನುವ ನಂಬಿಕೆಯೂ ಇದೆ. ಹಾಗೇನಾದರೂ ಆದರೆ ಸಾವಿನಲ್ಲಿ ಭಾಗವಹಿಸಬೇಕಾಗದೀತು ಎಂಬುದು ಇಂಗಿತ

ಆಹಾರ ಸೇವನೆಗೆ ಒಂದೊಂದು ಸಾಂಘೀಕತೆಗೂ ಪ್ರತ್ಯೇಕ ವಿಧಾನಗಳು ರೂಪುಗೊಂಡಿವೆ. ಮೇಲುಜಾತಿಯ ಸಂಪನ್ನರು ಆಹಾರ ತೆಗೆದುಕೊಳ್ಳುತ್ತಿದ್ದುದ್ದು ಹಾಸಿದ ಬಾಳೆ ಎಲೆಯಿಮದಾಗಿತ್ತು , ಕೆಲಜಾತಿಯವರಿಗೆ ಅಂಗಳದಲ್ಲಿ ತೋಡಿದ ಕುಣಿಯಲ್ಲಿರಿಸಿದ ಬಾಳೆಯೆಲೆಗೆ ಗಂಜಿ ಸುರಿದು ಕೊಡುತ್ತಿದ್ದರು ಬಾಳೆ ಹಂಬೆಯನ್ನು ಸುತ್ತಿ ಕುಂಡಲ ಮಾಡಿ ಅದರಲ್ಲಿ ಬಾಳೆಲೆ ಇರಿಸಿ ಗಂಜಿ ಸುರಿದು ಕುಡಿಯುವ ಪದ್ದತಿ ಇತ್ತು. ಇತರ ಜಾತಿಗಳವರು ಗಂಜಿ ಕುಡಿಯುತ್ತಿದ್ದುದು ಮಣ್ಣಿನ ಚಟ್ಟಿಯಲ್ಲೋ, 'ಕಿಣ್ಣಂ' (ಬಟ್ಟಲು) ನಲ್ಲೋ ಆಗಿತ್ತು 'ಕವಿಡಿ ಪಿಞ್ಞಣಂ (ಕಬ್ಬಿಣ ತಟ್ಟೆಗೆ ಪಿಂಗಾಣಿ ಆವೆ ಹಚ್ಚಿ ತಯಾರಿಸಿದ್ದು) ಗಂಜಿ ಕುಡಿಯಲು ಎಲ್ಲೆಡೆ ಹಲಸಿನೆಲೆಯ ತುದಿ ಮಡಚಿ ಕಡ್ಡಿ ಚುಚ್ಚಿ ಸ್ಪೂನ್ ತಯಾರಿಸಿ ಬಳಸುತ್ತಿದ್ದು 'ಒರು ಪಾವಿಲ ಕಞ್ಞಿಕುಡಿಚ್ಚು' (ಒಂದು ಹಲಸಿ ನೆಲೆ ಗಂಜಿ ಕುಡಿದೆ) ಎಂದರೆ ಒಂದು ಹಲಸಿನೆಲೆ ಬಾಗಿ ಉಪಯೋಗ ಶೂನ್ಯವಾಗುವವರೆಗೆ ಗಂಜಿ ಕುಡಿದೆ ಎಂದು ವಾಗ್ರೂಢಿಯ ಅರ್ಥ ದೊಡ್ಡ ವಿಷಯವನ್ನು ಸಣ್ಣದಾಗಿ ಹೇಳಲು ಈ 'ಶೈಲಿ'ಉಣ್ಣಲು 'ಕಿಣ್ಣಂ' (ಬಟ್ಟಲು) ಕಂಚಿನಲ್ಲಿ ತಯಾರಾಗುವಂಥದು ಅದ ವ್ಯಾಸ ಮತ್ತು ಆಳವನ್ನು ಅನುಸರಿಸಿ 'ಕುಞ್ಞಿಕ್ಕಿಣ್ಣಂ' (ಸಣ್ಣಬಟ್ಟಲು) 'ನಡುವತ್ತೆಕಿಣ್ಣಂ' (ನಡುತೆರನ ಬಟ್ಟಲು), 'ವಲಿಯಕಿಣ್ಣಂ' (ದೊಡ್ಡಬಟ್ಟಲು), ಎಂದು ಕರೆಯುತ್ತಾರೆ. ಇದರಲ್ಲಿ ಆಳ ಹೆಚ್ಚಿರುವಂಥದು 'ಕುಡವನ್ ಕಿಣ್ಣಂ' ನಲ್ಲಿ 'ಕನ್ನಿಟ್ಟ ಪಳ್ಳೇಲ್ ಕುನ್ನಿಟ್ಟು ನಿಗತ್ತಣಂ' (ಕಂದು ಹಾಕಿದ ಹಳ್ಳವ ಬೆಟ್ಟವಿರಿಸಿ ಸಮತಟ್ಟು ಮಾಡಬೇಕು) ಎಂಬುದು ವಾಗ್ರೂಢಿ ಹೆತ್ತವಳು ಉಣ್ಣುವುದನ್ನು ಇನ್ನಾರೂ ನೋಡಬಾರದು ಯಾರಾದರೂ ನೋಡಿದರೂ ಪರಿಂಆಣ ತಿಳಿಯಬಾರದು ಎಂಬುದು ಆಕೆಗೆ ಆಹಾರ ಪ್ರಮಾಣ ಹೆಚ್ಚು ಅಗತ್ಯ ಎಂಬುದೂ ಈ ಶೈಲಿಯ ತಿರುಳು

ಕೆಲವು ತಜವಾಡುಗಳಲ್ಲಿ ವ್ಯಕ್ತಿಗೊಂದು 'ಕಿಣ್ಣಂ' ಇರುತ್ತದೆ. ಕಂಚಿನ 'ಕಿಣ್ಣಂ' ಅಡವು (ಒತ್ತೆ) ಇಡುವ ಪದ್ದತಿಯೂ ಇತ್ತು 'ನನ್ನನ್ನು ನೋಡಿದರೆ 'ಕಿಣ್ಣಂ ಕದ್ದವನಂತೆ ಕಾಣುತ್ತದಾ ? ಎಂಬ ವಾಗ್ರೂಢಿ ಪ್ರಚಾದಲ್ಲಿತ್ತು ಕೆಲವು ಗ್ರಾಮೀಣ ಕಲೆಗಳಲ್ಲಾದರೂ 'ಕಿಣ್ಣಂ' ಹೊಡೆದು ಹಾಡುವ ಕ್ರಮವಿದೆ

‘ಓಣಪ್ಪಾಟ್ಟುಕಾರಿ’ ಕವಿತೆಯಲ್ಲಿ ನಮ್ಮಯ ಹಾಡಿಗೆ ಕೂಡ ಕೊಡ ದುಡಿ ‘ಕಿಣ್ಣಂ’ ತಂಬೂರಿ ಬಿದಿರಕೊಳಲು ಎಂದು ಕವಿ ವೈಲೋಪ್ಪಿಳ್ಳಿ ಹೇಳಿದ್ದಿದೆ.

ಕೀರಿಕೀರಿ ಕಿಣ್ಣಂ ತಾ	ಮುಂಗುಸಿ ಮುಂಗುಸಿ ‘ಕಿಣ್ಣ’ವ ತಾ
ಕಿಣ್ಣತ್ತಿಲಿಟ್ಟ್ ಕಿಲುಕ್ಕಿತ್ತಾ	‘ಕಿಣ್ಣ’ಕೆ ಹಾಕಿ ಕಿಲಕಿಲನೆ ತಾ
ಕಲ್ಲುಂ ಮುಳ್ಳುಂ ಪೋಕ್ಕುತ್ತಾ	ಕಲ್ಲನು ಮುಳ್ಳನು ಕಳೆದೇ ತಾ
ಕಲ್ಲಾಯಿ ಪಾಲಂ ಕಡತ್ತಿತ್ತಾ	ಕಲ್ಲಾಯಿ ಸೇತುವೆ ದಾಟಿಸಿ ತಾ

ಎಂಬ ಗ್ರಾಮೀಣ ಪಾಟನ್ನು ತಾಯಂದಿರು ಮಕ್ಕಳಿಗೆ ಹಾಡಿಕೊಡುವುದುಂಟು ಚೈನಾಕ್ಲೇಯಿಂದ ಮಡಿದ ಪಾತ್ರಗಳು ಹೆಚ್ಚಾಗಿ ಮುಸ್ಲಿಮರ ಆಹಾರ ಸೇವನೆಗೆ ಬಳೆಯಾಗುತ್ತದೆ. ಇತರರಂತೆ ಸಾಮಾನ್ಯವಾಗಿ ಮಣೆಮೇಲೆ ಕುಳಿತೇ ಮುಸ್ಲಿಮರ ಆಹಾರ ಸೇವನೆ ಅತಿಥಿಗಳು ಬಂದರೆ ಚಾಪೆಯನ್ನೋ ‘ಸುಪ್ರ’ಅನ್ನೋ

ಹಾಸಿ ಕುಳ್ಳಿರಿಸಿ ಉಣ ಬಡಿಸುವರು ‘ಸುಪ್ರ’ದ ಮೇಲೆ ‘ಅರಸನಂ’ ಇಡುತ್ತಾರೆ. ದೊಡ್ಡ ಪಿಂಗಾಣಿಯೆ ‘ಅರಸನಂ’ ಅದರಲ್ಲಿ ಅನ್ನ ಸುರಿದು ಅದರಿಮದಲೇ ಎಲ್ಲರೂ ಮುಷ್ಟಿ ತೆಗೆದು ಉಣ್ಣುವುದ ಕ್ರಮ ಊಟ ಮುಗಿದ ‘ಸುಪ್ರ’ವನ್ನು ಬೀಸಿದರಾಯಿತು ನೆಲ ಶುದ್ದವಿರುತ್ತದೆ ಈ ಪದ್ದತಿ ಈಗ ಹೆಚ್ಚು ಕಡಿಎಮ ಇಲ್ಲವಾಗಿಬಿಟ್ಟಿದೆ.

ಬ್ರಹ್ಮಣ ಗೃಹಗಳಲ್ಲಿ ‘ಆವಣಪ್ಪಲಕ’ ಎಂಬ ಹೆಸರಿನ ಹಲಗೆ (ಮಣೆ) ಮೇಲೆ ಕುಳಿತು ನೆಲದಲ್ಲಿ ಹಾಸಿದ ಬಾಳೆಲೆಯಲ್ಲಿ ಬಡಿಸಿ ಉಣ್ಣುತ್ತಾರೆ. ‘ಎಲೆ ನೀಗಿದರೆ ಮುಂದಿನ ಊಟ ಇನ್ನೊಂದೆಡೆ ಎಂಬ ಮಾತು ಅವರಲ್ಲಿದೆ ನೀರು ಕಡುಇಯಲು ಕಂಚಿನ ಮತ್ತು ಹಿತ್ತಳೆಯ ಲೊಟೆಗಳ ಬಳಕೆಯಿತ್ತು ಇವತ್ತಿನ ಸಾರ್ವತ್ರಿಕ ಊಟದ ಪದ್ದತಿ ಬರುವ ವರೆಗೆ,ುಜಜ ಠಿಟಚಿಣಜ ಬಳಕೆಯ ಪದ್ದತಿ ಇರಲಿಲ್ಲ ಎಲ್ಲ ಭಕ್ಷ್ಯ ವನ್ನೂ ಒಂದೇ ಲೆಲಯಲ್ಲಿ ಅಥವ ಬಟ್ಟಲಿನಲ್ಲಿ ಹಾಕಿ ಉಣ್ಣುವುದು ಇತುತ ಎಲೆಯ ಊಟದಲ್ಲಿ ಒಂದೊಂದು ಭಕ್ಷ್ಯವನ್ನು ಹಾಕುವುದಕ್ಕೂ ಒಂದೊಂದು ಶಿಸ್ತು ಇದೆ. ಬದಲಾವಣೆಯ ನೆರಳು

ಪ್ರದೇಶಕ್ಕೂ ಸಮುದಾಯಕ್ಕೂ ಅನುಸಾರ ಆಹಾರ ತಯಾರಿಸುವ ರೀತಿಯಲ್ಲಿ ಉಣ್ಣುವ ರೀತಿಯಲ್ಲೂ ಸ್ವಾಭಾವಿಕವಾಗಿ ವ್ಯತ್ಯಾಸಗಳು ಉಂಟಾಗುತ್ತವೆ. ಒಂದೊಂದನ್ನೂ ಸೂಚಿಸುವುದು ಸುಲಭವಲ್ಲ ಸೌಕರ್ಯ, ಲಭ್ಯತೆ, ಬೆಲೆ, ಅಂದ, ಸುಧಾರಿತವಾಗಿರುವಿಕೆ. ಮೊದಲಾದ ಘಟಕಗಳು ಉಪಕರಣಗಳ ಪ್ರಚಾರಕ್ಕೆ ಕಾರಣವಾಗುತ್ತವೆ. ಇವತ್ತು ಅಡುಗೆ ಮನೆ ಉಪಕರಣಗಳ ಉತ್ಪಾದನೆ ದೊಡ್ಡ

ಉದ್ದಿಮೆಯೆ ಆಗಿಬಿಟ್ಟಿದೆ. ಸಾಮಾಗ್ರಿಗಳ ಕಾಪು ದಾಸ್ತಾನಿಗೆ ಫ್ರಿಜ್ಜಿನಂಥ ಉಪಕರಣಗಳು ಸೇರಿಕೊಮಡಿವೆ ಹೊಸ ಬಗೆ ಇಂಧನಗಳೂ ಅವುಗಳಿಗೆ ತಕ್ಕ ಒಲೆಗಳೂ ಸುಲಭವಾಗಿ ಸಿಗುತ್ತವೆ. ಪಾತ್ರಗಳ ತಯಾರಿಯಲ್ಲಿ ಹಲೆಯ ತಾಮ್ರ, ಹಿತ್ತಾಳೆ, ಕಂಚುಗಳೊಂದಿಗೆ ಈಗ ಸ್ಟೀಲು, ಅಲ್ಯುಮಿನಿಯಂ, ಪ್ಲಾಸ್ಟಿಕ್ ಮುಖ್ಯವಾಗಿ ಬಳಕೆಯಾಗುತ್ತವೆ. ಇದರೊಂದಿಗೆ ಹಲೆಯ ಪಾತ್ರಗಳು ಸಂಗ್ರಹಾಲಯದ ಪ್ರೇಕ್ಷಣ ವಸ್ತುಗಳಾಗಿ ಬದಲಿವೆ. ಕಾಲಕ್ಕೆ ತಕ್ಕವಾಗಿ ಭೌತಿಕ ಲೋಕದಲ್ಲಿ ಉಂಟಾಗುವ ಈ ಬಗೆ ಬದಲಾವಣೆಗಳು ಅವರ ಆಚಾರ, ನಂಬಿಕೆಗಳಲ್ಲೂ ಬಾಯ್ದೆರೆ ಮಾತಿನ ಪರಂಪರೆಯಲ್ಲಿ ಪ್ರತಿಫಲಿಸುತ್ತವೆ. ಒಂದು ಜನತೆಯ ಸಾಂಘೀಕತೆ ಬಗೆಗೆ ಅದರಲ್ಲಿ ಉಂಟಾಗುವ ಪರಿವರ್ತನೆಯ ಬಗೆಗೆ ನಡೆಯುವ ಅಧ್ಯಾಯನದಲ್ಲಿ ಅಡುಗೆಮನೆ ಉಪಕರಣ ಅಧ್ಯಾಯನಕ್ಕೂ ಪ್ರಸಕ್ತಿ ಇದೆ ಎಂದು ತಾತ್ಪರ್ಯ

ನಾಲುಕೆಟ್ಟ್ (ಚತುಶ್ಶಾಲಾ ನಿವಾಸ)

(ಪ್ರಾಚೀನ ವಾಸ್ತು ರಚನೆ)

ಕೆ.ಎಂ. ಭರತನ್, ವಿ.ಕೆ. ಬಾಬುರಾಜ್

ಟಿಪ್ಪಣಿ

ಸೃಷ್ಟಿಸುವ ಯೋಗ್ಯತೆಯಿರುವುದು ಮನುಷ್ಯನಿಗೆ ಮಾತ್ರ ಅವನು ವ್ಯವಸ್ಥೆಗಳನ್ನು ಸೃಷ್ಟಿಸುವನು ವ್ಯವಸ್ಥೆಗನು ಸಾರವಾದ ಭೌತಿಕ ಸಂಸ್ಕಾರಗಳನ್ನೂ ಸೃಷ್ಟಿಸುತ್ತಾನೆ. ಹೀಗೆ ಮೂರ್ತವೂ, ಅಮೂರ್ತವೂ ಅದ ಸೃಷ್ಟಿಗಳ ಸಮೂಹಾರವೇ ಜೀವನ ಸಂಸ್ಕೃತಿಯ ಭಾಗವಾಗಿರುವ ಒಂದು ವಸ್ತು ಭೌತಿಕ ಬೆಲೆಯುಳ್ಳದ್ದಾಗಿರುತ್ತಲೆ ಜೀವನ್ನು ರೂಪಿಸುವ ಒಂದು ಘಟಕವೂ ಆಗಿದೆ ಅದು ಭೌತಿಕವಾದ ಜೀವನ ಧರ್ಮಗಳನ್ನು ಬೆಲೆಗೊಳಿಸುವುದರೊಂದಿಗೆ ಸಂಕೇತವಾಗಿ ಪ್ರತಿಫಲಿಸುತ್ತಲೂ ಇರುತ್ತದೆ. ಉದಾಹರಣೆಗೆ ಆಹಾರ, ಒಂದೊಂದು ಸಾಂಘೀಕತೆಗೂ ಆಹಾರವೂ, ಸೇವನಾ ರೀತಿಯೂ ವಿಭಿನ್ನ ಒಂದೇ ಸಾಂಘೀಕತೆಯಲ್ಲೂ ವಿಭಿನ್ನ ಸಂದರ್ಭಗಳಲ್ಲಿ ರೂಪದಿಮದಲೂ, ಅವಸ್ಥೆಯಿಂದಲೂ, ರುಚಿಯಿಂದಲೂ ವಿಭಿನ್ನ ಆಹಾರವನ್ನೆ ತೆಗೆದುಕೊಳ್ಳುವುದು, ಹಾಗೆ ಆಗಬೇಕಾಗುವುದು ಅಹಾರಕ್ಕೆ ಆಹಾರ ಎಂಬುದಕ್ಕೆ ಮೇಲಾಗಿ ಅದಕ್ಕೆ ಪ್ರತೀಕಾತ್ಮಕವಾದ ಬೆಲೆ ಉಂಟು ಎಂಬುದರಿಂದಾಗಿಯೇ

ಮನುಷ್ಯ ಸೃಷ್ಟಿಸುವ ಬಲುದೊಡ್ಡ ಸಂಸ್ಕಾರ ರೂಪ ಕಟ್ಟಡಗಳು ಅವುಗಳಲ್ಲಿ ಅತ್ಯಂತ ಮುಖ್ಯವಾದುದು ವಾಸಸ್ಥಳ ಮಳೆ, ಬಿಸಿಲು, ತಾಗಹಬಾರದೆಂಬುದಷ್ಟ ಮನೆ ಉದ್ದೇಶವಾದರೆ ಅದಕ್ಕೆ ಒಚಿಟಿ ಮೇಲುಸೂರು ಸಾಗಕಾಗುತ್ತದೆ ಆದರೆ ಮೆನ ಎಂಬುದು ಹಲವು ಕೋಣೆಗಳಿರುಂಥದೂ ವಿಶಿಷ್ಟ

ರಚನೆಯೊಂದಿಗಿರುವುದೂ ಆಗಿದೆ ಒಂದೊಂದು ಕೋಣೆಗೂ ವಿಶಿಷ್ಟ ಧರ್ಮವಿದೆ ಕುಟುಂಬದಲ್ಲಿರುವ ವ್ಯಕ್ತಿಗಳ ನಡುವಣ ವಿಶಿಷ್ಟ ಸಂಬಂಧಗಳು, ಒಬ್ಬೊಬ್ಬನೂ ಕುಟುಂಬಕ್ಕೆ ಬೇಕಾಗಿ ನಿರ್ವಹಿಸುವ ಧರ್ಮಗಳು ಇವೇ ಮೇಲೆ ಹೇಳಿದ ರಚನೆಯನ್ನು ನಿರ್ಣಯಿಸುವಂಥವುಗಳು ಒಂಟಿ'ಪಡಿಞ್ಞಾಱ ಪುರ' (ಒಚಿಟಿ ಕೊಣೆಯ ಗುಡಿಸಲು) ಮತ್ತು ಒಂದು 'ನಾಲುಕೆಟ್ಟ್' ಮನೆ ಭಿನ್ನವಾಗಿರುವುದು ಈ ಕಾರಣಕ್ಕಾಗಿ ಕೂಡ ಆಗಿದೆ. ಆದ್ದರಿಂದ ಒಂದು ಭೌತಿಕ ಸಂಸ್ಕಾರ ರೂಪವಾದ ಮನೆ ಕುರಿತಾದ ಅಧ್ಯಯನದ ಮೂಲಕ ಆ ಸಾಂಘಿಕತೆಯ ಕುಟುಂಬ ಬಾಂಧವ್ಯಗಳನ್ನೂ ಮನೆಯ ಪ್ರತೀಕಾತ್ಮಕತೆಯನ್ನೂ ಅದು ನಿರ್ವಹಿಸುವ ಭೌತಿಕವಾದ ಧರ್ಮಗಳನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಿದೆ.

ಒಂದು ಮನೆಯ ಎಲ್ಲ ಕೋಣೆಗಳೂ ಗಾತ್ರದಿಂದಲೂ ಪ್ರಾಧಾನ್ಯದಿಂದಲೂ ಒಂದೇ ರೀತಿಯಲ್ಲ ಒಂದು ಕೋಣೆಯಲ್ಲೆ ಎಲ್ಲಾ ಭಾಗಗಳಿಗೂ ಸಮಾನವಾದ ಪರಿಗನೆಯೂ ಇಲ್ಲ ಜೀವನದ ಭೌತಿಕವೂ ಅನುಷ್ಠನ ಪರವೂ ಆದ ಒಂದೊಂದು ಕ್ರಿಯೆಯೂ ಇಮಥ ಕೋಣೆಯಲ್ಲಿ, ಇಂಥ ಭಾಗದಲ್ಲೆ ನಡೆಯಬೇಕೆಂಬ ನಿಯಮವಿದೆ. ಹಳೆಯ ಮನೆಯ ಇಂಥ ಕೋಣೆಯಲ್ಲೇ ಹೆರಿಗೆ ಆಗಬೇಕೆಂದಿದೆ. ಕಾಲು ದೀಪ ಇಂಥ ಕಡೆ ಇರಬೇಕೆಂದಿದೆ. ಹೀಗೆ ಮನೆಯಲ್ಲಿರುವ ವಸ್ತುಗಳಿಗೆಲ್ಲ ಒಂದು ವಿನ್ಯಾಸ ಕ್ರಮವಿದೆ. ಈ ವಿನ್ಯಾಸ ಕ್ರಮ ಹಲವು ಕಾರಣಗಳನ್ನು ಆಶ್ರಯಿಸಿರುತ್ತದೆ. ಆವಾಸ ಸ್ಥಾನದ ಬಗೆಗೆ ಅಭ್ಯಸಿಸುವಾಗ ಈ ಬಗೆ ವಿಷಯಗಳು ಪರಿಗಣನೆಗೆ ಬರುತ್ತವೆ.

ಒಟ್ಟಿನಲ್ಲಿ ಮನೆ ಎಂಬ ಭೌತಿಕ ವಸ್ತು ಸಾಂಘೀಕತೆಯ ಮನಸ್ಸಿನಲ್ಲಿ ರುವ ಅಮೂರ್ತವಾದ ಹಲವು ಆಶಯಗಳು ಬಾಹ್ಯ ಪ್ರಕಟನೆಯಾಗಿದೆ ಭೌತಿಕವಾದ ಅವಶ್ಯಕತೆಯನ್ನು ನೆರವೇರಿಸುವುದರ ಜತೆಗೆ ಅದು ಜೀವನದ ಹಲವು ಕಟ್ಟು ಪಾಡುಗಳನ್ನೂ ಪ್ರತಿನಿಧಿಕರಿಸುತ್ತದೆ. ಆದ್ದರಿಂದ ಒಂದು ಅವಾಸಸ್ಥಾನದ ಬಗೆಗಿನ ಅಧ್ಯಯನ ಸಾಂಘೀಕತೆಯ ನಾನಾ ವಿಧವಾದ ವೈಶಿಷ್ಟಗಳೆಡೆಗೆ ಬೆರಳು ತೋರುವಂಥದಾಗಿಬಿಡುತ್ತದೆ.

ಕೇರಳದ ನಿವಾಸ ಮಾದರಿಗಳು

ಕೇರಳದ ಅತ್ಯಂತ ಪ್ರಚಾರವಿರುವು ನಿವಾಸ ಮಾದರಿ ಏಕಶಾಲಾ ಅಥವಾ ಒಱಪ್ಪುರ (ಒಂಟಿಸೂರು). 'ಒಱಪ್ಪುರ' ಆಗಿ ಮನೆ ಕಟ್ಟುವಾಗ 'ತೆಕ್ಕಿನಿ' (ತೆಂಕಮನೆ), ಪಡಿಞ್ಞಾಱ (ಪಡುಮನೆ), ವಡಕ್ಕಿನಿ (ಬಡಗುಮನೆ), ಕಿಱಕ್ಕಿನಿ (ಮೂಡಣಮನೆ) ಎಂದು ಹೀಗೆ ಅದ್ಯತೆಗಳ ಕ್ರಮ ಪಾಲಿಸಬೇಕೆಂದು 'ಮನಷ್ಯಾಲಯ ಚಂದ್ರಿಕ' ಮತ್ತು 'ವಾಸ್ತು ವಿದ್ಯ' ಗ್ರಂಥಗಳು ವಿಧಿಸುತ್ತವೆ. 'ಕಿಱಕ್ಕಿಸಿ' ಬ್ರಾಹ್ಮರಿಗೂ, 'ತೆಕ್ಕಿನಿ' ಕ್ಷತ್ರಿಯರಿಗೂ, ' ವಡಕ್ಕಿನಿ ' ವೈಶ್ಯರಿಗೂ ಪಡಿಞ್ಞಾಱ ಶೂದ್ರರಿಗೂ ವಾಸದ ಕೋಣೆಗಳೆಂದು ಪುರಾಣ ಗ್ರಂಥಗಳಲ್ಲಿ ಹೇಳಿದೆ ಆದರೆ ಕೇರಳದಲ್ಲಿ ಅತ್ಯಂತ ಹೆಚ್ಚು ಪ್ರಚಾರದಲ್ಲಿರುವ 'ಒಱಪ್ಪುರ' ಮನೆ

ಪಡಿಞ್ಞಱಯೇ' ಆಗಿದೆ ಈ ವಿನ್ಯಾಸವನ್ನು ವರ್ಣವ್ಯತ್ಯಾಸ ವಿಲ್ಲದೆ ಎಲ್ಲರೂ ಬಲಸುತ್ತಾರೆ ಇದಕ್ಕೆ ಕಾರಣ ಕೇರಳದ ವಿಶಿಷ್ಟ ಹವೆ ಮತ್ತು ಭೌಗೋಳಿಕ ಸ್ಥಿತಿ ಎಂದು ವಾಸ್ತು ತಜ್ಞರು ಹೇಳುತ್ತಾರೆ. ಕೇರಳದಲ್ಲಿ ಭೂಮಿಯ ಇಳಿಜಾತಿನ ಮುಖ ಪಡುದಿಕ್ಕಿಗಿದೆ. 'ಪಡಿಞ್ಞಱ್ ತಾಣಿಡಂ ಪಡಿಞ್ಞಱೆಕ್ಕು' (ಪಡುವಣಕೆ ತಗ್ಗಿರಲ ಪಡಿಞ್ಞಱೆಗೆ ಯೋಗ್ಯ) ಎಂಬ 'ಬೃಹತ್ ಸಂಹಿತ ' ದ ಸಾಮಾನ್ಯ ನಿಯಮ ಕೇರಳದ 'ಒಱಪ್ಪುರ'ಗಳ ಸಮಾನ್ಯ ವೈಶಿಷ್ಟ್ಯವನ್ನು ಸಮರ್ಥಿಸುತ್ತದೆ.

ಕೇರಳದಲ್ಲಿ ವ್ಯಾಪಕವಾಗಿ ಕಂಡು ಬರುವ ನಿವಾಸ ಮಾದರಿಯು 'ಒಱಪ್ಪುರ' ಹೌದಾದರೂ ರೀತಿಗಳು ಬೇರೆಯೂ ಇವೆ. ಎರಡು 'ದಿಕ್‌ಶಾಲೆ'ಗಳು ಸೇರಿದ 'ದ್ವಿಶಾಲಾ' ಮುರು ದಿಕ್ ಶಾಲೆಗಳು ಸೇರಿದ 'ತ್ರಿಶಾಲಾ' ನಾಲ್ಕುದಿಕ್ ಶಾಲೆಗಳು ಸೇರಿದ 'ಚತುಶ್ಶಾಲಾ' ಅಥವ 'ನಾಲುಕೆಟ್ಟ್' ದಿಕ್‌ಶಾಲೆಗಳೂ ಕೋನಶಾಲೆಗಳೂ ಸೇರಿ ಬರುವ 'ಎಟ್ಟ್‌ಕೆಟ್ಟ್' (ಎಂಟು ಕಟ್ಟುಗೆ) 'ಪದಿನಾರು ಕೆಟ್ಟ್' (ಹದಿನಾರು ಕಟ್ಟುಗೆ) ಮೊದಲಾದ ನಿವಾಸ ಮಾದರಿಗಳು ಕೇರಳದಲ್ಲಿ ನೆಲೆಸಿವೆ ಒಂದು ಕಾಲಘಟ್ಟದಲ್ಲಿ ಕೇಳರದಲ್ಲಿದ್ದ ಸಾಂಸ್ಕೃತಿಕ ಜೀವನದೊಮದಿಗೆ ಅದರ ಭೌತಿಕವೂ ಮಾನಸಿಕವೂ ಆದ ಅವಶ್ಯಕತೆಯೊಂದಿಗೂ (ಪ್ರತ್ಯಕ್ಷ ಸಂಬಂಧ ಬೆಳೆಸಿಕೊಂಡಿದ್ದ 'ನಾಲುಕೆಟ್ಟ್' (ಚತುಶ್ಶಾಲಾ ಗೃಹ) ಇವತ್ತು ಒಂದು ನಾಶಗೊಳ್ಳು ಸ್ಥಿತಿಯಲ್ಲಿರುವ ಜಾನಪದವಾಗಿದೆ.

ಕೇರಳದ ಕುಟುಂಬ ಪದ್ದತಿ, ಹವಾಮಾನ, ಪರಂಪರೆ ಮೊದಲಾದ ವೈಶಿಷ್ಯಗಳು ಇಲ್ಲಿನ 'ನಾಲುಕೆಟ್ಟ'ನ್ನು ಭಾರತದ ಸಮಾನ ರಚನೆಗಳಿಂದ ಭಿನ್ನವನ್ನಾಗಿಸುತ್ತವೆ. ತಮಿಳುನಾಡಿನ ಅಗ್ರಾರದ ಮನೆಗಿಂತ ಭಿನ್ನ ಕೇರಳದ ನಂಬೂತಿಂಗಳ 'ನಾಲುಕೆಟ್ಟ್' ಕೇರಳದಲ್ಲೂ ಪ್ರಾದೇಶಿಕವೂ ಜಾತಿ ಸಂಬಂಧವಾದುದು ಆದ ಶೈಲೀ ವಿಶೇಷತೆಗಳೂ ನೆಲೆಸಿವೆ. ನಂಬೂತಿರಿ ನಾಯರ್ ಮೊದಲಾದ ಸಮುದಾಯಗಳಲ್ಲೇ ಈ ಮಾದರಿ ಹೆಚ್ಚಾಗಿ ಪ್ರಚಾರದಲ್ಲಿ ಇದ್ದುದು. ದೇವಸ್ಥಾನದ ಪರಿವೃತವಾದ ಸಮುದಾಯಗಳು (ಅಂಬಲವಾಸಿಳ) ವರ್ಮ ನಾಯನಾರ್ (ನಾಯರ್ ಪ್ರಭೇದ) ತರಕನ್, ಕಱೆಚ್ಚ್ಯಾರ್, ಮುಸ್ಲಿಂ ಕ್ರೈಸ್ತ ಮೊದಲಾದ ವಿಭಾಗಗಳವರಲ್ಲೂ ನಾಲುಕೆಟ್ಟ್' ಪದ್ದತಿಯ ಮನೆಗಳಿವೆ ಎಂದು ಕೇಳುತ್ತೇವೆ.

ನಾಲುಕೆಟ್ಟಿನ ರಚನೆ

ಒಂದು ನಡು ಅಂಗನ ಅದರ ನಾಲ್ಕು ದಿಕ್ಕುಗಳಲ್ಲಿ 'ದಿಕ್ ಶಾಲೆ' ಗಳು '(ಪುರ' ಗಳು ಅಂದರೆ ಮನೆಗಳು) ಸೇರಿರುವಂಥದು 'ನಾಲು ಕೆಟ್ಟ್' ಕಿಱೆಕ್ಕೇ ಕೆಟ್ಟ್' (ಮೂಡಣ್ಣ ಕಟ್ಟುಗೆ), 'ವಡಕ್ಕೇಕೆಟ್ಟ್' (ಬಡಗಣ ಕಟ್ಟುಗೆ) ಪಡಿಞ್ಞೂ ಱೀ ಕೆಟ್ಟ್' (ಪಡುವಣ ಕಟ್ಟುಗೆ) 'ತೆಕ್ಕೇಕೆಟ್ಟ್' (ತೆಂಕಣಕಟ್ಟುಗೆ) ಇವು ಈ ನಾಲ್ಕು ಪುರ (ಮನೆ)ಗಳು ಪೂರ್ವಶಾಲಾ, ಉತ್ತರಶಾಲಾ, ಪಶ್ಚಿಮಶಲಾ, ದಕ್ಷಿಣಶಾಲಾ, ಎಂದೂ

ಇವುಗಳಿಗೆ ಹೆಸರಿವೆ. ಸ್ಥಳೀಐ ಹೆಸರುಗಳೆಂದರೆ 'ಕಿಙಕ್ಕಿನಿ' 'ವಡಕ್ಕಿನಿ' ಪಡಿಇಙ್ಞಿ' ಮತ್ತು ತೆಕ್ಕಿನಿ ನಡುಮುಙಂ (ನಡುವಣ ಅಂಗಳವನ್ನು ಅಪೇಕ್ಷಿಸಿಯೆ ಈ ಒಂದೊಂದು 'ಪುರ'ಕ್ಕೂ ಮೆಲಿನ ಹೆಸರುಗಳು ನಡು ಅಂಗಳದ ಮೂಡುಬದಿಯಲ್ಲಿ ಪಡುವಿಗೆ ಮುಖ ಮಾಡಿರುವಂಥದು 'ಕಿಙಕ್ಕೆಟ್ಟು' (ಕಿಙಕ್ಕಿನಿ0 ಇದಕ್ಕೆ ಅಭಿಮುಖವಾಗಿ ಸೇರಿಕೊಂಡು ನಡುವಂಗಳದ ಬಡಗು ಭಾಗದಲ್ಲಿ 'ವಡಕ್ಕೇಕ್ಕೇಟ್ಟ್' (ವಡಕ್ಕಿನಿ) ಇದರ ಮುಖ ತೆಂಕಣ ಕಡೆಗೆ ಹೀಗೆಯೇ ನಡುವಂಗಳದ ತೆಂಕು ಭಾಗದಲ್ಲಿ ಬಡಗಿಗೆ ಮುಖ ಮಾಡಿಕೊಂಡು 'ತೆಕ್ಕೇಕ್ಕೆಟ್ಟ್' (ತೆಕ್ಕಿನಿ) ನಡುವಂಗಳದ ನಾಲ್ಕು ಕಡೆಗಿರುವ ಈ ಕಟ್ಟುಗೆಗಳನ್ನು 'ದಿಕ್‌ಶಾಲೆ'ಗಳೆಂದು ಕರೆಯುತ್ತಾರೆ. ಈ ನಾಲ್ಕು ಕಟ್ಟುಗೆಗಳು ಮುಂದುವರಿದು ಕೋನಗಳಲ್ಲಿ ಸಂಧಿಸಿ ಪರಸ್ಪರ ಅಭಿಮುಖವಾದ ಕೋನ ಕಟ್ಟುಗೆಗಳು (ಶಾಲೆಗಳು) ಸೇರಿದರೆ ಅದು 'ಎಟ್ಟ್‌ಕೆಟ್ಟ್' (ಎಂದು ಕಟ್ಟುಗೆ) ಆಯಿತು. ಇವುಗಳನ್ನು 'ಕೋಣ್‌ಶಾಲ' (ಕೋನಶಾಲೆ) ಗಳೆಂದೂ ಕರೆಯುವರು ಈಶಾನ ಶಾಲಾ, ಅಗ್ನೇಯ ಶಾಲಾ, ನಿರೃತಿ ಶಾಲಾ, ವಾಯವ್ಯಶಾಲಾ ಎಂದು ಕೋನಶಾಲೆಗಳಿಗೆ ಹೆಸರು

ನಾಲುಕೆಟ್ಟ್ –ಚಿನ್ನರೂಪಗಳು

'ನಾಲುಕೆಟ್ಟ್' ಎಂಬ ನಿಲಯ ವ್ಯವಸ್ಥೇಯಲ್ಲಿ 'ನಡುಮುಙ'(ನಡುವಂಗಳ, ದಿಕ್ ಶಾಲೆಗಳು, ಕೋನಶಾಲೆಗಳು ಇವನ್ನು ಸಂಯೋಜಿಸಿರುವ ಕ್ರಮವನ್ನು ಅನುಸರಿಸಿ 'ನಾಲುಕೆಟ್ಟು'ಗಳನ್ನು ಎರಡು ಗುಂಪುಗಳಲ್ಲಿ ವರ್ಗೀಕರಿಸಬಹುದು ಒಂದು – ಭಿನ್ನಶಾಲಾ – ಎರಡು ಸಂಶ್ಲಿಷ್ಟ ಶಾಲಾ ನಡುವಂಗಳದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮನೆಗಳು 9ದಿಕ್ ಶಾಲೆಗಳೂ) ಕೋನಶಾಲೆಗಳಿಲ್ಲದೆ ಬಿಡಿಯಾಗಿರುವುದಾದರೆ ಆ ವಿನ್ಯಾಸ 'ಭಿನ್ನಶಾಲೆ ಈ ನಾಲ್ಕು ಶಾಲೆಗಳು ಎರಡೆರಡು ಜೋಡಿಕೊಂಡು ನಡುವೆ ಎಡೆ ಬಿಟ್ಟರೆ ಅದು 'ಶ್ಲಿಷ್ಟ ಭಿನ್ನಶಲಾ' ಅಂದರೆ ಬಡಗುಮನೆ ಮತ್ತು ಮೂಡಣ ಮನೆ ಈಶಾನ್ಯ ಕೋನಮುಖದಲ್ಲಿ ಜೋಡಿಕೊಂಡು, ತೆಂಕಮನೆಯೂ ಪಡುವನೆಯೂ ನಿರೃತಿ ಕೋನಮುಖದಲ್ಲಿ ಜೋಡಿಕೊಂಡು ಅವು ಇರತ್ತವೆ. ನಾಲ್ಕು ದಿಕ್ ಶಾಲೆಗಳೂ ನಾಲ್ಕು ಕೋನ ಶಾಲೆಗಳೂ ಒಗ್ಗೂಡಿ ಇರುವ ವಿನ್ಯಾಸ 'ಸಂಶ್ಲೀಷ್ಟ ಶಾಲ' ಕೇರಳದ 'ನಾಲುಕೆಟ್ಟು'ಗಳು ಸಾಮಾನ್ಯವಾಗಿ ಈ ವಿಭಾಗಕ್ಕೆ ಸೇರಿದವುಗಳಾಗಿವೆ.

'ಸಂಶ್ಲಿಷ್ಟಶಾಲೆ' ಕೂಡ ಎರಡು ಬಗೆ –1 ಮಿಶ್ರಕ ಶಾಲ 2 ಏಕಕಶಾಲ ಒಂದೊಂದು ಶಾಲೆಯೂ ಅದರದೇ ಆದ ಅಳತೆಯನ್ನು ನೆಲೆ ನಿಲ್ಲಿಸಿ ನಿರ್ಮಿತವಾಗುವಂಥದು 'ಮಿಶ್ರಕಶಾಲ' ಇದರ ನಡುವಂಗಳ ಆಯತಾಕೃತಿಯಲ್ಲಿರುತ್ತದೆ.

ನಾಲ್ಕು ಶಾಲೆಗಳೂ ಸಮಾನ ಅಳತೆಯಿದ್ದು ಸಮಾನ ಪ್ರಾಮುಖ್ಯವುಳ್ಳದ್ದಾಗಿ ರಚನೆಗೊಳ್ಳುವುದು 'ಏಕಕಶಾಲ' ಇದರ ನಡುವಣ ಅಂಗಳ ಚೌಕಾಕೃತಿಯಲ್ಲಿ ಇರುತ್ತದೆ.

ವಾಸ್ತು ವಿದ್ಯೆಯ ಪ್ರಕಾರ 'ಏಕಕಶಾಲೆ'ಯೇ ಉತ್ಕೃಷ್ಟವಾದ 'ವಾಸಗೃಹ' ರಚನೆ

ನಾಲ್ಕುಕೆಟ್ಟ್ –ರಚನೆಯ ಮತ್ತು ಧರ್ಮ

ಈಗ ನಾಲ್ಕುಕಟ್ಟುಗೆಗಳಾವುವು ಎಂಬ ವಿವರ –'ಕಿಙಕ್ಕಿಸಿ' ಮತ್ತು ಬಡಗಣ 'ಅಙ'(ಕೋಣೆ) ಸೇರಿ 'ಮೂಡಣ ಕಟ್ಟುಗೆ' (ಕಿಙಕ್ಕೇಕೆಟ್ಟ್) 'ತೆಕ್ಕಿನಿ'ಯೂ ತೆಂಕಣ 'ಅಙ'ಯೂ ಸೇರಿ ತೆಂಕಣ ಕಟ್ಟುಗೆ' (ತೆಕ್ಕೇಕೆಟ್ಟ್) ತೆಂಕಣ ಕಟ್ಟುಗೆಯ ಹೊರಗಡೆ ಸಮಾಂತರವಾಗಿ ಸಾಮಾನ್ಯವಾಗಿ 'ಪತ್ತಾಯಪ್ಪುರ' (ಪಣತದ ಮನೆ) ಇರುತ್ತದೆ ಮನೆಯ ಗಂಡಸರು, ಗಂಡು ಕೂಲಿಯಾಳುಗಳು ಇಲ್ಲಿ ವಾಸ ಮಾಡುತ್ತಾರೆ. 'ಪಡಿಞ್ಞಙ' 'ಬಡಗಣ ಕೋಣೆ (ವಡಕ್ಕೆ ಮುಙಿ) ವಡಕ್ಕರ (ಬಡಗಣ ಅಙ) ಇವು 'ಪಡುವಣ ಕಟ್ಟುಗೆ' (ಪಡಿಞ್ಞಙೆ ಕೆಟ್ಟ್) ನ ಭಾಗ ಕೆಲವು ಮನೆಗಳಲ್ಲಿ 'ಪಡಿಞ್ಞಙ' ಕೋಣೆಗೆ ಇನ್ನೊಂದು ಅಂತಸ್ತು ಜೋಡಿಸಿರುತ್ತಾರೆ. 'ಬಡಗಣ ಕಟ್ಟುಗೆ' (ವಡಕ್ಕೇ ಕೆಟ್ಟ್) ಯ ಭಾಗಗಳಾಗಿರುವವುಗಳು –ಡುಗೆ ಕೋಣೆ, ಹೆರಿಗೆ ಮನೆ 'ಕೊಟ್ಟತ್ತಳಂ (ಪಾತ್ರೆತಿಕ್ಕುವ ಕೋಣೆ – ಇದಕ್ಕೆ ತಾಗಿ ಬಾವಿ ಇರುತ್ತದೆ) ಇದಕ್ಕೆ ಸೇರಿಕೊಂಡು ಹೊರಗಡೆ ಸಮಾಂತರವಾಗಿ ಇನ್ನೊಂದು ಕಟ್ಟಡವಿರುತ್ತದೆ. ಇದಕ್ಕೆ 'ವಡಕ್ಕೇ ಕೆಟ್ಟ್' (ಬಡಗಣ ಕಟ್ಟುಗೆ) ಅಥವಾ 'ಅಂಜಾಂಪುರ' (ಪದನೆ ಮನೆ) ಎಂದು ಎರಡು ಹೆಸರುಗಳಿವೆ ಅಡುಗೆ ಮನೆಗೆ ಸಂಬಂಧಿಸಿದ ಕೆಲಸಗಳೆಲ್ಲವೂ ಇಲ್ಲೆ ನಡೆಯುವುದು. ನಂಬೂತಿರಿಗಳ 'ಎಟ್ಟುವೀಡು'ಗಳಲ್ಲಿ ಇಲ್ಲಿವರೆಗೆ ಮಾತ್ರವೇ ಕೆಳಜಾತಿಯವರಿಗೆ ಪ್ರವೇಶ

'ನಾಲುಕೆಟ್ಟ್'ನ ಒಳಕ್ಕೆ ಪ್ರವೇಶಿಸುವಾಗ ಸಾಮಾನ್ಯವಾಗಿ ಹೋಗುವುದು. 'ತೆಕ್ಕಿನಿ'ಗೆ ಮಾಳಿಗೆ ಇರುವ ಮನೆಗಳಲ್ಲಿ ತೆಕ್ಕಿಸಿಯನ್ನು ಕೋನೆಗಳಾಗಿ ಪ್ರತ್ಯೇಕಿಸಲಾರರು ಇದನ್ನು 'ತೆಕ್ಕಿನಿತ್ತಙ' ಎಂದೋ 'ತೆಕ್ಕಿನಿತ್ತಳೆ'ಎಂದೋ ಕರೆಯುತ್ತಾರೆ. 'ಪಾಟು ಉತ್ಸವ ಕಾಲ ಬಂದರೆ ಈ ಕೊಣೆಯೆ ಅದಕ್ಕೆ ಬಳಕೆಯಾಗುವುದು ಸ್ವಜಾತಿಯ ಅತಿಥಿಗಳೀಗೆ ಸತ್ಕಾರ ಈ ವಿಭಾಗದಲ್ಲೇ ತೆಂಕಣ ಕಟ್ಟಿಗೆ (ತೆಕ್ಕೇ ಕೆಟ್ಟ್) ಯಲ್ಲಿ 'ತೆಕ್ಕಿನಿ'ಯ ಮುಂದರಿಕೆಯೆ 'ತೆಕ್ಕೇ ಅಙ' (ತೆಂಕಣ ಅಙ) ತೆಕ್ಕಿನಿಯಲ್ಲಿ ಕೋಣೆ ತಿರುಗಿಸದೆ ಜಗಲಿಯಿಂದ ಏರಿಸಿಕಟ್ಟಿರುತ್ತಾರೆ. ಇದನ್ನು ವೇದಿಕ (ವೇದಿಕೆ) ಎಂದೂ ಕರೆಯುತ್ತಾರೆ. ನಂಬೂತಿತಿ 'ನಾಲುಕಟ್ಟು'ಗಳಲ್ಲಿ ವೇದಕರ್ಮ ಗಳಿಗೆ ಸ್ಥಾನ ಇದುವೇ. 'ಪಡಿಞ್ಞಙೆ'(ಪಡುಮನೆ)ಗೂ 'ತೆಕ್ಕೇ ಅಙ' (ತೆಂಕಣ ಅಙ) ಕ್ಕೂ ಎಡೆ ದಾರಿಯ ಮೂಲಕವೆ ಇಲ್ಲಿಗೆ ಪ್ರವೇಶ ಮನೆಯ ಮುತ್ತಜ್ಜಿಗಳು, ವಿಧವೆಯು ಮೊದಲಾದವರು ಇರುವುದು 'ತೆಕ್ಕೆ ಅಙ'(ಕೋಣೆ)ದಲ್ಲೇ ವಸ್ತುಗಳನ್ನು ಕಾಪಿಡುವುದಕ್ಕೂ ಈ ಕೋಣೆ ಬಳಕೆಯಾಗುತ್ತದೆ. 'ತೆಕ್ಕಿನಿ'ಯಿಂದ ತೆರೆದು ಮೂಡಣ ಕಟ್ಟುಗೆ (ಕಿಙಕ್ಕೇ ಕೆಟ್ಟ್'ನ) ಭಾಗ 'ಕಿಙಕ್ಕಿನಿ' ನಂಬೂತಿರಿ ಮನೆಗಳಲ್ಲಿ ಹೋಮ ಮೊದಲಾದ ಕರ್ಮಗಳನ್ನು ಇಲ್ಲಿ ನಡೆಸುತ್ತಾರೆ. ಒಂದು ಪರಿಧಿವರೆಗೆ ಇತರ ಸಮುದಾಯಗಳವರಿಗೆ ಇಲ್ಲಿ ಪ್ರವೇಶವಿದೆ. 'ಕಿಙಕ್ಕಿನಿ'ಯ ಎದುರುಗಡೆ 'ತೆಕ್ಕೇ ಅಙ ಕ್ಕೆ (ತೆಂಕಣ ಕೋಣೆಗೆ) ಎಡೆದಾರಿ ಹೊಂದಿರುವಂಥದ್ದು 'ಪಡಿಞ್ಞಙೆ (ಪಡುಮನೆ) ಈ ಕೋಣೆಯ ಬಳಕೆ ದೇವಕಾರ್ಯಗಳಿಗೆ ಮೀಸಲು ನಂಬೂತಿರಿಗಳ 'ನಾಲುಕೆಟ್ಟ್'ಗಳಲ್ಲಿ 'ಶಾಲಗ್ರಾಮ' ಶಿವಲಿಂಗ 'ಮೊದಲಾದ ದೇವತಾ ಪ್ರತೀಕಗಳಿದ್ದು ಅವು ಈ ಕೋಣೆಯಲ್ಲಿರುತ್ತದೆ. ಮಲಗುವ ಕೋಣೆಗೆ ಮಟ್ಟಿ

ಮಡಿ ಮೈಲಿಗೆ ಆಚರಣೆ ಕಟ್ಟುನಿಟ್ಟಿನಿಂದಾಗುತ್ತದೆ. ಮಲಗುವ ಕೋಣೆಗೆ ಹೋದವರು, ನಿದ್ರಿ ಸದಿದ್ದರೂ ಪಡಿಞ್ಞಟಿ ಪ್ರವೇಶಿಸಬೇಕಾದರೆ ಮತ್ತೆ ಮಿಮದು ಮಡಿಯಾಗಲೇಬೇಕು, ಜನನ ಮರಣಗಳಿಗೆ ಸಂಬಂಧಿಸಿ ಬರುವ ಆಮೆ ಸೂತಕ ಇರುವವರಿಗೂ ಈ ಕೋಣೆಗೆ ಪ್ರವೇಶವಿಲ್ಲ ರಜಸ್ವಲೆಯಾದ ಸ್ತ್ರೀಯಾರು ಈ ಕೋಣೆಗೆ ಹೋಗುವಂತಿಲ್ಲ ಹತ್ತಿರ ದೇವಸ್ಥಾನದಗಳಿಲ್ಲದ 'ಇಲ್ಲಂ' (ಬ್ರಾಹ್ಮಣಗೃಹ) ಗಳಲ್ಲಿ 'ಪಡಿಞ್ಞಟಿ' ಯಲ್ಲೇ 'ತೇವಾರಂ (ದೇವತಾರ್ಚನೆ) ಅತಿಥಿಗಳಾಗಿ ಬಮದ ನಂಬೂತಿರಿಗಳು ಇಲ್ಲಿ ದೇವಾರಾಧನೆ ನಡೆಸುವವರು ಕೆಲವು ನಾಲುಕೆಟ್ಟು'ಗಳಲ್ಲಿ 'ಪಡಿಜ್ಞಾಟಿ' ಯಲ್ಲೇ 'ತೇವಾರಂ' (ದೇವತಾರ್ಚನೆ) ಅತಿಥಿಗಳಾಗಿ ಬಂದ ನಂಬೂತಿರಿಗಳೂ ಇಲ್ಲಿ ದೇವಾರಾಧನೆ ನಡೆಸುವರು ಕೆಲವು 'ನಾಲುಕೆಟ್ಟು'ಗಳಲ್ಲಿ ಪಡಿಜ್ಞಾಟಿ' ಮೇಲಂತಸ್ತು ಹೊಂದಿರುತ್ತದೆ. ಈ ಅಂತಸ್ತಿನಲ್ಲಿ ಬೆಲೆಬಾಳುವ ವಸ್ತುಗಳನ್ನು ಇರಿಸುತ್ತಾರೆ.

'ಪಡಿಞ್ಞಟಿ'ಯ ಜಗಲಿ –ಅಂತರಾಳ (ಕೆಳನೆಲ) ದಲ್ಲಿ ಕುಳಿತು ಗಂಡಸರು ಉಣ್ಣುತ್ತಾರೆ. ಆದರೆ ಕಲ ನಾಯರ್, ತರಕನ್ ಕುಟುಬಗಳ ನಾಲುಕೆಟ್ಟ್'ನಲ್ಲಿ 'ಬಡಗಣ ಕಟ್ಟುಗೆ ಮತ್ತು 'ಅಂಜಾಂಪುರ' ಇವುಗಳ ನಡುವೆ ಇರುವ ಕೆಳ ನೆಲವೆ ಪುರುಷರ ಊಟದ ಸ್ಥಳ

ಸ್ತ್ರೀಯರು ಊಟ ಮಾಡುವುದು. 'ವಡಕ್ಕೇ ಕೆಟ್ಟ್' ನ ಜಗಲಿಯಲ್ಲಿ ಅಥವಾ ಅಡುಗೆಮನೆಯಲ್ಲಿ ಆಗಿರುತ್ತೆ. ಪಡಿಞ್ಞಟಿಯ ಅಂತರಾಳ ದಾಟಿ ಬಡಗಣ ಕಟ್ಟಿನೊಂದಿಗೆ ಸೇರಿಯೇ ಸ್ತ್ರೀಯರು ಬಳಕೆಗಾಗಿ ಇರುವ 'ವಡಕ್ಕೇ ಮುಟಿ (ಬಡಗಣ ಕೋಣೆ) 'ವಡಕ್ಕೇ ಅಟ' (ಬಡಗಣ ಕೊಠಡಿ) , ಹೆರಿಗೆಕೋಣೆ ಇತ್ಯಾದಿಯೂ, ಅಡುಗೆ ಮನೆಯೂ ಇರುತ್ತವೆ. ವಡಕ್ಕೇ ಕೆಟ್ಟ್' ಅಥವಾ ವಡಕ್ಕೀನಿ'ಯೆ ಹೆಚ್ಚಾಗಿ ಸ್ತ್ರೀಯರು ಓಡಾಡುವ ಭಾಗ ವಡಕ್ಕಿನಿ ಉಯರ್ನಾಲ್ ತೆಕ್ಕಿನಿ ತಾಟೆಂ (ವಡಕ್ಕಿನಿ ಏರಿದರೆ ತೆಕ್ಕಿನಿ ತಗ್ಗುತ್ತದೆ) ಎಂಬ ಮಾತು 'ವಾಸ್ತು'ವಿಗೆ ಸಂಬಂಧಿಸಿದ್ದಲ್ಲ, ಬದಲಾಗಿ ಮನೆಯ ಒಳಗೂ, ಕುಟುಂಬದಲ್ಲೂ ಸಾಂಘಿಕತೆ ಸ್ತ್ರೀ–ಪುರುಷರಿಗೆ ಕಲ್ಪಿಸಿಕೊಟ್ಟಿರುವ ಸ್ಥಾನ, ಸ್ವಾತಂತ್ರ್ಯ ಅಧಿಕಾರ ಮೊದಲಾದವನ್ನು ಸಂಬಂಧಿಸಿ ಇರುವ ಉಕ್ತಿ ಅಡುಗೆ ಮನೆಯಿಂದ ಕೊಟ್ಟತ್ತಳಂ (ಪಡುವಣ ತಳ)ಗೆ ಪ್ರವೇಶ ಇದು ಬಾವಿಗೆ ತಾಗಿರುವ ತಾವು

'ಎಟ್ಟುಕೆಟ್ಟ್' (ಎಂಟು ಕಟ್ಟುಗೆ) ಮನೆಗಳಲ್ಲಿ ಅಡುಗೆ ಕೋಣೆಗೂ ;'ವಡಕ್ಕಿಸಿ (ಬಡಗು ಮನೆ) ಗೂ ನಡುವೆ ಒಂದು ಸಣ್ಣ ನಡು ಅಂಗಳ ಇರುತ್ತದೆ. ಸೂರ್ಯಪ್ರಕಾಸ ನೇರ ತಾಗಬಾರದ ವಿಧಿ (ಚಿಕಿತ್ಸೆ, ಅನುಷ್ಠಾನ ಇತ್ಯಾದಿ)ಗಳನ್ನು ಇಲ್ಲಿ ನಿರ್ವಹಿಸುತ್ತಾರೆ.

ವಡಕ್ಕಿನಿ, ಕಿಟಕ್ಕಿನಿ,ತೆಕ್ಕಿನಿ, ಪಡಿಞ್ಞಟಿ ಮೊದಲಾದವು ಹತ್ತಿರವಾಗಿಯೋ ವಿಪರೀತ ದಿಕ್ಕುಗಳಲ್ಲೋ ಇರುವಾದರೆ ಅವು ಒಂದಕ್ಕೊಂದು ಸಂಬಂಧ ಪಡದೆ ಪ್ರತ್ಯೇಕವಾಗಿರುವ ಸ್ಥಿತಿಯನ್ನು ಕಾಯ್ದುಕೊಳ್ಳುತ್ತದೆ ಆದರೆ ಇವುಗಳೆಲ್ಲವನ್ನೂ ಸಂಬಂಧಿಸುವ ಉದ್ದವಾದ ಜಗಳಿ (ಪರಾಂಧ) ಇರುತ್ತದೆ. ಈ ವರಾಥಂಧ'ದಿಂದಲೇ ಒಮದೊಂದು ಕೊಠಡಿಗೂ ಪ್ರವೇಶ ಈ ಜಗಲಿ ನಡು ಅಂಗಳದಿಮದ ಎತ್ತರಿಸಿದ

ನಾಲ್ಕೂ ಅಂಚುಗಳಾಗಿದ್ದು, ಚೌಕಾಕೃತಿಯಲ್ಲಿ ಇರುತ್ತದೆ. ನಾಲು ಕೆಟ್ಟಿನ ನಡುವಣ ಅಂಗಳದಲ್ಲೇ 'ಓಣತ್ತಪ್ಪ'ನನ್ನು ಪೂಜಿಸುವುದು ಮೊದಲಾದ ಹಬ್ಬದ ಆಚರಣೆ 'ನಾಲುಕೆಟ್ಟ್' ಕಟ್ಟಡದ ಹೊರಸುತ್ತಿನಲ್ಲೂ ತೆರೆದ ಜಗಲಿಗಳು ಇರುವುದುಂಟು.

'ಕಿಜಕ್ಕಿನಿ'ಯ ಹೊರಗೆ ಅದಕ್ಕೆ ಸೇರಿಸಿಕೊಂಡು ಸಆಮಾನ್ಯವಾಗಿ 'ಪೂಮುಖಂ' (ಹೂಮುಖ ಅಂದರೆ ಮುಖಮಂಟಪ) ಕಾಣಬರುವುದು. ಈ ಪ್ರಮುಖದಿಂದ 'ಮೂಡಣ ಕಟ್ಟುಗೆ' (ಕಿಜಕ್ಕೇ ಕೆಟ್) ಯಿಂದಲೆ ನಾಲ್‌ಕೆಟ್ಟ್ ಮನೆಯೊಳಕ್ಕೆ ಪ್ರವೇಶ ಕಜಕ್ಕೇಕೆಟ್ಟಿಗೆ ಯಾವುದಾದರೂ ಕಾರಣಕ್ಕೆ ಸೇರಿಕೆ ರಚನೆ ಪೂರ್ತಿಯಾಗಬೇಕಾದರೆ ಅಡುಗೆ ಮನೆಯ ಮುಂದರಿಕೆಯಾಗಿ ಅಂತರಾಳದ ಅಷ್ಟೂ ಉದ್ದಕ್ಕೆ ಒಮದು ಅಡುಗೆ ಕೋಣೆ ಇರಬೇಕು ಅಡುಗೆ ಮನೆಯಿಂದ ಒಳ ಜಗಲಿಗೆ ಬಾಗಿಲು ಇರುವುದಲ್ಲದೇ ಅಂತರಾಳದ ಪಡುಭಾಗಕ್ಕೆ ತೆರೆಯುವ ಒಂದು ಬಾಗಿಲೂ ಇರುತ್ತದೆ. ಅಂತರಾಳದ ಪಡು ಬದಿಗೆ ತೆರೆಯುವ ಬಾಗಿಲು, ಬಡಗಣ ಅಜೆಯಲ್ಲಿ (ಕೋಣೆಯಲ್ಲಿ) ಹೆತ್ತು ಮಲಗಿದ ಸ್ತ್ರೀಯರಿಗೆ ಇತರರ ದೃಷ್ಟಿ ಬೀಳದೆ ಹೊರಗೆ ಹೋಗಿ ಬರಲು ಸಹಾಯ ಮಾಡುತ್ತದೆ. ಕೂಡಕುಟುಂಬವಾಗಿ ಬಾಳಿಬಂದ ಈ ಬಗೆ ಮನೆಗಳನ್ನೂ ಹಿಂದೆ ಮುಚ್ಚುವ ಅವಶ್ಯಕತೆ ಇಲ್ಲದುದರಿಂದ ಈ ಭಾಗಿಲುಗಳೀಗೆಲ್ಲ ಹೊರಗಿನಿಂದ ಬೀಗ ಹಾಕುವ ಸೌಕರ್ಯವಿಲ್ಲವಾಗಿತ್ತು.

ಕುಜಚ್ಯರ ನಾಲುಕೆಟ್ಟ್

ಅವಿಭಕ್ತ (ಕೂಡು) ಕುಟುಂಬ ವ್ಯವಸ್ಥೆಯನ್ನು ಇವತ್ತೂ ಊರ್ಜಿತದಲ್ಲಿರಿಸಿರುವ ಕೇರಳದ ವಯನಾಡಿನ 'ಕುಜಚ್ಯರ್' ಜನಾಂಗದ 'ನಾಲುಕೆಟ್ಟ್ ಮನೆಯ ಬಳಕೆಯಿದೆ ಅವರು ಮನೆಗೆ 'ಮುಜಿಂ' ಎನ್ನುತ್ತಾರೆ. ಮಣ್ಣು ಕಲಸಿ ಕಟ್ಟಿದ ನಾಲ್ಕು ಗೋಡೆಗಳ ಮೇಲೆ ಕಾಡು ಬಿದಿರಿನಿಂದ ಪಕ್ಕಾಸು,ರೀಪುಗಳನ್ನು ತಾಗಿಸಿ ಹುಲ್ಲು ಹಾಸಿದ ನಾಲ್ಕು ಮನೆಗಳ ನಡುವೆ ಸುಮಾರು ನಾಲ್ಕು ಸೆಂಟ್ಸ್‌ನಷ್ಟು ವಿಸ್ತೀರ್ಣದ ನಡು ಅಂಗಳವಿರುತ್ತದೆ. ವಾಸ್ತು ಶಾಸ್ತ್ರ ಪ್ರಕಾರ 'ಭಿನ್ನಶಾಲಾ' ವಿಭಾಗಕ್ಕೆ ಸೇರಿದುದು ಈ 'ನಾಲುಕೆಟ್ಟ್' ಪರಸ್ಪರ ಅಭಿಮುಖವಾಗಿ ನಾಲ್ಕು ಪ್ರತ್ಯೇಕ ಮನೆಗಳಾಗಿ ನಡುವೆ ಅಂಗಳವಿರುವ ವಾಸ್ತುವಿದು

ತೆಂಕಣ ಭಾಗದ ಮನೆಯಲ್ಲಿ ಐದು ಕೋಣೆಗಳು, ಮೂಡಣ ಮನೆಯಲ್ಲಿ ಮೂರು ಕೋನೆಗಳು, ಬಡಗುಮನೆಯಲ್ಲಿ ನಾಲ್ಕು ಕೊಣೆಳು ಪಡುವಣ ಮನೆಯಲ್ಲಿ ಮೂರು ಕೋಣೆಗಳು ಇರುತ್ತವೆ ತೆಂಕು ಪಡು ಮತ್ತು ಬಡಗು ಭಾಗದ ಮನೆಗಳಿಗೆ ಹಿಂಭಾಗದಲ್ಲಿ ಬಾಗಿಲುಗಳಿಲ್ಲ ಮೂಡಣ ಕಡೆಯ ಮನೆಗೆ ಮಾತ್ರ ಮೂಡುಭಗಕ್ಕೂ ಪಡಭಾಗಕ್ಕೂ ಬಾಗಿಲುಗಳೀವೆ ಬಾಗಿಲು ಕಿರಿದಾದವುಗಳು ಒಳ ಹೋಗಲು ಬಾಗಬೇಕು ಯಾವ ಮನೆಗೂ ಕಿಟಕಿಗಳಿಲ್ಲ ಮೂಡಣ ಮನೆಯ ಮೂಡುಭಾಗದಲ್ಲಿ ಒಂದು ಸಣ್ಣ ದಿನ್ನೆಯದೆ ಅದರ ಮುಂದೆ ವಿಶಾಲವಾದ ಅಂಗಣ

ಮನೆಗಳಲ್ಲಿ ಒಂದು ಕೋಣೆಯಿಂದ ಇನ್ನೊಂದಕ್ಕೆ ಬಾಗಿಲುಗಳಾಗಲಿ ಕಿಟಕಿಗಳಾಗಲಿ ಇಲ್ಲ ಒಂದೊಂದು ಕೋನೆಯಲ್ಲೂ ಒಂದೊಂದು ಕುಟುಂಬದ ವಾಸ್ತವ್ಯ ಒಂದು ಕುಜಿ ಚ್ಯರ್ ತಱವಾಡಿನಲ್ಲಿ ಕನಿಷ್ಠ ಹದಿನೈದು ಕುಟುಂಬಗಳು ಜೀವಿಸುತ್ತವೆ. ಅಪೂರ್ವವಾಗಿ ಕೆಲವೆಡೆ ಕುಟುಂಬ ಸಂಖ್ಯೆ ಕಡಿಮೆ ಇರಬಹುದು ಇಪ್ಪತ್ತಕ್ಕೂ ಹೆಚ್ಚು ಕುಟುಂಬಗಳು ಒಟ್ಟಿಗೆ ಜೀವಿಸುವ ಕೆಲ ತಱವಾಡುಗಳಿವೆ ಚಳೀಗಾಲದಲ್ಲಿ ಚಳಿಯಿಂದ ಪಾರಾಗಲು ಒಂದೊಂದು ಕೋಣೆಯ ನಡುವೆಯೂ ಅವರು ಸಣ್ಣ ಬೆಂಕಿ ಹಾಕುತ್ತಾರೆ ದಪ್ಪದ ಕೊಠಡಿಗೆ ಬೆಂಕಿ ತಗುಲಿಸಿ ಅದರ ಸುತ್ತಲೂ ಮಲಗಿ ನಿದ್ರಿಸುತ್ತಾರೆ.

ಕುಜಿಚ್ಯರ ನಾಲುಕೆಟ್ಟಿಗೆ ಬಡಗುಭಾಗದಲ್ಲಿ 'ತೀಂಡಪುರ' (ಮುಟ್ಟಾದವರ ಮನೆ) ಇರುತ್ತದೆ. ಋತುಮತಿಯರಾದ ಕನ್ಯೆಯರು, 'ತಿರಂಡು ಕಲ್ಯಾಣಂ' (ಮೈನೆರೆ ಹಬ್ಬ) ಆಗುವ ವರೆಗೆ ಈ 'ಪುರ' ಗಳಲ್ಲಿ ಇರಬೇಕು ವಡುಮನೆಯ ಬಡಗು ದಿಕ್ಕಿನಲ್ಲಿ ಕುಟ್ಟಣದ ಮನೆಯಿರುತ್ತದೆ.

ಆಗ ಹೇಳಿದ ಹದಿನೈದು ಕೋಣೆಗಳಲ್ಲಿ ಒಂದು ಪೂಜಾ ಗೃಹ ಒಂದು ಕಾಪು ದಾಸ್ತಾನು ಕೊಠಡಿ ಮತ್ತು ಒಂದು ಅಡುಗೆ ಮನೆ ಆಗಿರುತ್ತವೆ. ಇವರ ಆಹಾರ ಕ್ರಮವೂ ಅಡುಗೆ ಮನೆಯ ರೀತಿ ರಿವಾಜಿಗಳೂ ಪ್ರತ್ಯೇಕತೆ ಉಳ್ಳವುಗಳು ಎಲ್ಲಾ ಕುಟುಂಬಗಳಿಗೂ ಅನ್ವಯಿಸಿ ಒಂದೇ ಅಡುಗೆಯಾಗುತ್ತದೆ. ಅಡುಗೆ ಕೋನೆಯಲ್ಲೇ ಅವರು ಎಲ್ಲರಿಗೂ ಬಡಿಸುತ್ತಾರೆ. ಆದರೆ ಅಲ್ಲರೂ ಒಟ್ಟಗಿ ಕುಳಿತು ಉಣ್ಣಲಾರದು ಆಹಾರ ತುಂಬಿದ ಪಾತ್ರಗಳು ಒಮದೊಂದು ಕುಟುಂಬ ವಾಸಿಸುವ ಕೋಣೆಗೂ ತಲುಪುತ್ತದೆ. ಇದನ್ನೆಲ್ಲ ಮಾಡುವವರು ಸ್ತ್ರೀಯರೇ ಉಂಡು ಮುಗಿದರೆ ಪಾತ್ರಗಳನ್ನು ಅವರವರೇ ತೊಳೆಯಬೇಕು ಅತಿಥಿಗಳಿಗೂ ಇದು ಅನ್ವಯ ಆದರೆ ವೃದ್ದರಿಗೆ ಮಾತ್ರ ಇದರಿಂದ ವಿನಾಯಿತಿಯಿದೆ.

ನಾಲುಕೆಟ್ಟ್ – ಅನುಬಂಧ ರಚನೆಗಳು

'ಕಿಱಕ್ಕಿನಿ'ಯ ಮಧ್ಯಭಾಗದಲ್ಲಿ ಪೂರ್ವಭಿಮುಖವಾಗಿ 'ಮುಖ ಮಂಟಪ(ಪೂಮುಖಂ) ಇರುತ್ತದೆ 'ಪೂ ಮುಖ'ಕ್ಕೆ ನೇರ ಮೂಡುಭಾಗದಲ್ಲಿ ಮನೆಯ ಸಂಕೀರ್ಣಕೆಕ ಪ್ರವೇಶಿಸುವ 'ಪಡಿಪ್ಪುರ' (ಪಡಿಪಿರೆ) ಇರುತ್ತದೆ. 'ಪಡಿಪ್ಪುರು' ದಿಂದ 'ಪೂಮುಖಂ' ಉದ್ದನೆಯ 'ನಡೆ ಹಾದಿ (ನಡವಜಿ) ಇರುತ್ತದೆ. ಸಸ್ಯಹಾಯಕರ ವಿಶ್ರಮಸ್ಥಾನ ಅನೇಕ ವೇಳೆ 'ಪಡಿಪ್ಪುರ' ಯೇ ಆಗಿರುತ್ತದೆ. ಒಂದು ಕಾಲದಲ್ಲಿ 'ಪಡಿಪ್ಪುರೆ' ಗೆ ಸೇರಿಕೊಂಡು 'ತಣ್ಣೀರಚಪ್ಪರ ಇದ್ದಿತು

ಪೂರ್ವಭಾಗದಲ್ಲಿ ಕಿಱಕ್ಕಿನಿ' ಗೆ ಅಭಿಮುಖವಾಗಿ ಕುಟುಂಬ ದೇವತೆಯ ಅಥವಾ ಕಾರಣವನ್ನಾದರ (ಕುಲಪಿತೃಗಳ) ಸಂಕಲ್ಪವಿರುವ ಒಂಟಿ ಕೋಣೆ ಗುಡಿ, ತುಳಿಸಿಕಟ್ಟೆ (ತುಳಸಿತ್ತಱ)

ದನದಕೊಟ್ಟಿಗೆ ಇತ್ಯಾದಿ ಇರುತ್ತವೆ. ಮನೆಯ ಈಶಾನ್ಯ ದಿಕ್ಕಿನಲ್ಲಿ ಕುಟುಂಬದ ಮೀಯುವ ಕೊಳ ಇರುತ್ತದೆ. ಮನೆ ಸ್ಥಳದ ಗಡಿಗೆತಾಗಿ ನೈಋತ್ಯ ಮೂಲೆಯಲ್ಲಿ 'ಕಾವು' ಇರುತ್ತದೆ. 'ಅಂಜಾಂಪುರೆ'

ಯ ಬಡಗುಭಾಗದಲ್ಲಿ ಕೆಲವೊಮ್ಮೆ ಒಂದು 'ನೆಡುಂಪುರ' (ಎತ್ತರದ ನೂರು ಅಥವಾ ಚಪ್ಪರ ಇರುವುದುಂಟು.

ನಾಲುಕೆಟ್ಟ್ _ವಾಸಪದ್ದತಿ ಕುಟುಂಬರಚನೆ

ಮನುಷ್ಯನಿಗೆ ಸಂಬಂಧಿಸಿದ ಹಾಗೆ ಭೌತಿಕ ತಲದಲ್ಲಿ ಮಾತ್ರ ನೆಲೆಸುವ ವಿಶ್ರಮ ಸಂಕೇತ ಮಾತ್ರವಲ್ಲ ಮನೆ ಮಾತ್ರವಲ್ಲ ಮನೆ ಕುಟುಂಬ ರಚನೆ ಸಂಬಂಧಗಳು, ಕುಟುಂಬದೊಳಗಿನ ಅಧಿಕಾರ ಸ್ಥಾನ, ಭೌತಿಕ ಹೊಕ್ಕುಬಳಕೆ, ಸಂಘಿಕತೆ ಪಾಲಿಸುವ ಸ್ಥಳೀಯ ಸಂಕಲ್ಪಗಳುಮ ಭೌತಿಕವೂ ಭೌತಿಕೇತರವೂ ಆದ ಇತರ ನಂಬಿಕೆಗಳು ಮೊದಲಾದ ಘಟಕಗಳೇ ಮನೆಯ ರಚನಾಸ್ವರೂಪವನ್ನು ನಿರ್ಣಯಿಸುವುದು, ಹಾಗಾಗಿ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಮನೆಯ ರಚನೆಯೆಂಬುದು ಮೇಲ್ಕಾಣಿಸಿದ ಘಟಕಗಳೆಲದರ ಪರೋಕ್ಷವಾದ ಪ್ರಕಟಿತ ರೂಪವಾಗಿರುತ್ತದೆ. ಮನೆಯ ಕುರಿತಾದ ವಿಶಾದೀಕರಣವೆಂದರೆ ಮೇಲಿನ ಘಟಕಗಳ ಕುರಿತು ವಿಶಾಧೀಕರಣವೂ ಆಗಿರುತ್ತದೆ.

ಹತ್ತೊ ಇಪ್ಪತ್ತೋ ಕುಟುಂಬಗಳ ಹತ್ತೊ ನೂರೋ ಜನರು ಒಂದಾಗಿ ವಾಸ ಮಾಡುವ 'ಕೂಡುಕುಟುಂಬ' (ಅಪ್ರಾಕ್ತ ಕುಟುಂಬ) ರಚನೆಯಲ್ಲಿ 'ನಾಲುಕೆಟ್ಟು' ಮನೆ ಒಂದು ಅವಶ್ಯಕತೆಯಾಗಿದೆ ಇವತ್ತು ಆ ಬಗೆ ಕುಟುಂಬಗಳು ಪ್ರಚಲಿತವಾಗಿ ಲ್ಲದಿರುವುದರಿಂದ ಹೊಸ 'ನಾಲುಕೆಟ್ಟ್' ಗಳು ನಿರ್ಮಾಣಗೊಳ್ಳುತ್ತಿಲ್ಲ, ಕುಟುಂಬ ಸಂಬಂಧದಿಂದಗಲೂ, ಜೀವನ ರೀತಿಯಿಂದಲೂ ಪರಸ್ಪರಾವಲಂಬಿಗಳಾದ ಒಂದಕ್ಕಿಂತ ಹೆಚ್ಚು ಕುಟುಂಬಗಳು ಪರಸ್ಪರ ಅಂಟಿಕೊಂಡಿರುವಾಗಲೂ ಸ್ವಸ್ತೀಯ ಹಿತಾಸಕ್ತಿಯನ್ನು ಕಾಯ್ದುಕೊಂಡು ಜೀವಿಸುವ ಕುಟುಂಬದ ರಚನೆಯಾಗಿದೆ 'ಕೂಡು ಕುಟುಂಬ'ದ್ದು ಈ ಕುಟುಂಬಗಳನ್ನೆಲ್ಲ ಸಮನ್ವಯಿಸಿ ನಡೆಸುವವರು ಕುಲ ಮುಖ್ಯ ಅಥವಾ'ಕಾರಣವರು' ಕಾರಣವರಿಗೆ ಉಪಕುಟುಂಬಗಳೊಂದಿಗೂ, ಉಪಕುಟುಂಬಗಳಿಗೆ ಕಾರಣರೊಮದಿಗೂ ಕೆಲ ವಿಶಷ್ಠ ಸಂಬಂಧಗಳೂ, ಹಕ್ಕು– ಅಧಿಕಾರಗಳೂ ಇರುತ್ತವೆ. 'ನಾಲುಕೆಟ್ಟಿ'ನೊಳಗಿನ ಎಲ್ಲಾ ಕೋಣೆಗಳೂ ಒಂದು ಇನ್ನೊಂದರಿಂದ ಬೇರ್ಪಟ್ಟು ಇರುವಂಥಾವುಗಳೂ, ಖಾಸಗಿ ತನವುಳ್ಳವುಗಳೂ ಆಗಿವೆ ಆದರೆ ಅವೆಲ್ಲಾ ನಡುವಂಗಳದ ನಾಲ್ಕೂ ಬದಿಗೂ ಚಾಚಿರುವ 'ವರಾಂದ' (ಜಗಲಿ)ಕ್ಕೆ ಬಾಗಿಲು ತೆರೆದುಕೊಳ್ಳುವವುಗಳಾಗಿವೆ. ವರಂಡ ಎಲ್ಲಾ ಕೋಣೆಗಳನ್ನೂ ಪರಸ್ಪರ ಬಂಧಿಸುತ್ತವೆ. ನಾಲುಕೆಟ್ಟಿನ

ವಿಷಯವಾಗಿ ಕುಟುಂಬ ರಚನೆಯೂ ನಿವಾಸ ರಚನೆಯೂ ಹೊಂದಿರುವ ಪರಸ್ಪರ ಸಮಾಂತರತ್ವ (ಶಿಚಿಡಿಚಿಟಟಜಟಚಿಟ)ವೇ ಇಲ್ಲಿ ಕಾಣುವುದು.

ನಾಲುಕೆಟ್ಟೂ, ಕೂಟು ಕುಟುಂಬವೂ ತಮ್ಮೊಳಗೆ ಬೆಸೆದುಕೊಂಡಂಥ ಒಂದು ದೃಢ ಬಾಂಧವ್ಯವನ್ನೇ ಕೂಡು ಕುಟುಂಬವೂ 'ಮರುಮಕ್ಕಾತ್ತಾಯಂ' ಕುಟುಂಬಪದ್ದತಿಯೂ ತಮ್ಮೊಳಗೆ ಬೆಳೆಸಿಕೊಂಡಿರುವುದು. ನಾಲುಕೆಟ್ಟಿನೊಳಗಿನ 'ಪತ್ತಾಯಪ್ಪುರ' ಕಾರಣವರ ಸ್ಥಾನ ಮೊದಲಾದವುಗಳೆಲ್ಲ 'ಮರುಮಕ್ಕತ್ತಾಯಂ' ವಾರಿಸು ಪದ್ದತಿಯೊಂದಿಗೆ ನೇರ ಸಂಬಂಧ ಇರುವವುಗಳಾಗಿವೆ. ಫ್ಯೂಡಲ್ ಆಸಯ ಧಾರೆಗಳೂ ಕೂಡು ಕುಟುಂಬ ವ್ಯವಸ್ಥೆಯೂ 'ಮರುಮಕ್ಕಾತ್ತಾಯಂ' (ಹಿರಿಯ ಮಾವನಿಂದ ಹಿರಿಯ ಅಳಿಯನಿಗೆ ಅಧಿಕಾರ ಹಸ್ಥಾಂತರವಾಗುವ) ದಾಯ ಕ್ರಮವೂ ಪ್ರಾಬಲ್ಯದಲಿದ್ದ ಒಂದು ಕಾಲಘಟ್ಟದ ಸಂಸ್ಕೃತಿಯ ಉಪಉತ್ಪನ್ನವೇ 'ನಾಲುಕೆಟ್ಟ್' ಆ ಕಾಲಘಟ್ಟದ ಸಾಲಬಾಕಿ ಪತ್ರ ಎನ್ನುವಂತೆ ಹಲವು ವಿಷಯಗಳು ಇವತ್ತು ನೆಲೆ ನಿಂತಿವೆ.

ಜಾತೀಯವಾದುದೋ ಇನ್ನಾವುದಾದರೂ ರೀತಿಯದೋ ಆದ ಅಸ್ಪೃಶ್ಯತೆಯನ್ನು ಕಾಯ್ದುಕೊಂಡಿರುವ ಸಾಂಘಿಕತೆ ಕುಟುಂಬ ಘಟನೆಯೊಳಕ್ಕೆ ಅನ್ಯಾಯ ಪ್ರವೇಶಿವುದನ್ನು ನಿಯಂತ್ರಿಸುತ್ತದೆ. ಒಬ್ಬೊಬ್ಬರನ್ನೂ ಎಲ್ಲೆಲ್ಲ ನಿಲ್ಲಿಸಿ ಯಾವೆಲ್ಲಾ ರಿತಿಯಲ್ಲಿ ಸ್ವಾಗತಿಸುವುದು ಎಂಬುದನ್ನು ಗೃಹ ನಿರ್ಮಾಣ ಪ್ರತಿ ಫಲಿಸುವುದನ್ನು ಕಾಣುತ್ತೇವೆ. ವಾಸ ಸಂರಚನೆಯ ಈ ವೈಶಿಷ್ಟ್ಯಗಳು ಸಾಂಘಿಕತೆಯ ಕುಟುಂಬವೂ ಸಮೂಹವೂ ಪರಸ್ಪರ ಯಾವೆಲ್ಲಾ ರೀತಿಗಳಲ್ಲಿ ಸಂಬಂಧಿಸುತ್ತವೆ. ಎಂದರಿಯಲು ಸಹಾಯಕವಾಗಿವೆ. ಸ್ಥಳದ ಕುರಿತಾಗಿಯೂ ದಿಕ್ಕುಗಳು ಕುರಿತಾಗಿಯೂ ಕೋನಗಳ ಕುರಿತಾಗಿಯೂ ಎಲ್ಲಾ ಸಾಂಘಿಕತೆಗಳಲ್ಲೂ ವಿಶ್ವಾಸ ಒಂದೇ ಅಲ್ಲ ನಂಬೂತಿಯ ಜೀವನ ರೀತಿಯಲ್ಲಿ ನಾಯನ್ಮಾರರದು ಅದರಿಂದಾಗಿಯೇ ನಾಲುಕೆಟ್ಟ್‌ಗಳ ಕೋಣೆಗಳ ಧರ್ಮವೂ ಒಂದೊಂದು ಕೋಣೆಯಲ್ಲಿ ಪಾಲಿಸಬೇಕಾದ ನಿಷ್ಠೆಗಳೂ ಹಲವು ಸಾಂಘಿಕತೆಗಳಲ್ಲಿ ಪ್ರತ್ಯೇಕವೇ ಆಗಿವೆ ಒಂದೇ ಸಾಂಘೀಕತೆಯಲ್ಲಿ ಹಲವು ಸ್ಥಳಗಳಲ್ಲೂ ಒಂದೇ ಸ್ಥಳದಲ್ಲಿ ಹಲವು ಸಾಂಘಿಕತೆಗಳಲ್ಲೂ ಈ ವಿಭಿನ್ನತೆಯನ್ನು ಗುರುತಿಸಬಹುದು ಆದ್ದರಿಂದ ನಾಲುಕೆಟ್ಟಿನ ಸಂರಚನೆ ಕುರಿತಾದ ಅಧ್ಯಯನದ ಹಾಗೆಯೇ ಅದರ ಪಾಠಭೇದದ ಕುರಿತಾದ ಅಧ್ಯಯನವೂ ಸಾಂಘಿಕತೆಯ ರೂಪೀಕರಣದಲ್ಲಿ ಜಾತೀಯವೋ ಸ್ಥಳಾತ್ಮಕವೋ ಆದ ಘಟಕಗಳು ವಹಿಸುವ ನಿಯಂತ್ರಣವನ್ನು ಬಯಲು ಪಡಿಸುವವು ಗಳಾಗುತ್ತವೆ.

ಕೇರಳಿಯ ಗ್ರಾಮಗಳಲ್ಲಿರುವ ನಂಬೂತಿರಿಗಳ ಮತ್ತಿತರರ ನಾಲುಕೆಟ್ಟಿಗಿಂತ ಕುಜಿಚ್ಯರ ನಾಲುಕೆಟ್ಟ್ ಹಲವು ವಿಷಯಗಳಲ್ಲೂ ವಿಭಿನ್ನ ಎಂಬುದು ಅವುಗಳ ಕುರಿತು ವಿವರಣೆಯಿಂದ ಅರ್ಥವಾಗುತ್ತದೆ. ಹವೆ ಮತ್ತು ಭೂಪ್ರಕೃತಿ ಮಾತ್ರವಲ್ಲ ಈ ವ್ಯತ್ಯಾಸಕ್ಕೆ ಕಾರಣ ಸಾಮಾಜಿಕ ಸಂಬಂಧಗಳು ಭೌತಿಕೇತರ ನಂಬಿಕೆಗಳು ಕೂಡಿಯೇ, ಮನೆಯ ರಚನೆಯನ್ನು ನಿಯಂತ್ರಿಸುವುದು ಕುಜೆಚ್ಯರಲ್ಲೂ ಅಧಿಕಾರ ಪೂರ್ತಿ

ಹಿರಿಯ ಮಾವನಲ್ಲಿ ಕೇಂದ್ರಿತ ಗಂಡು ಮಕ್ಕಳು ಪ್ರಾಯಕ್ಕೆ ಬರುವವರೆಗೂ ಹೆಮ್ಮಕ್ಕಳು ಮೈನೆರೆಯುವರೆಗೂ ಮಾತ್ರ "ಅಪ್ಪನ ಮನೆ'ಯಲ್ಲಿ ಇರಬಹುದು ಮೈ ನೆರೆ ಹಬ್ಬ (ತಿರಂಡು ಕಲ್ಯಾಣಂ) ಮುಗಿದ ಹೆಣ್ಣು ಮಗಳು ತಾಯಿಯ ತಜಿವಾಡಿಗೆ (ಮನೆತನಕ್ಕೆ) ಮರಳ ಬೇಕೆನ್ನುವುದು ಖಚಿತ ಈ ಸಾಮಾಜಿಕ ಬಾಂಧವ್ಯವನ್ನು ಪ್ರತಿ ಫಲಿಸುವಂಥದ್ದೆ ಅವರ ಮನೆ ಕೂಡ ಔತಿಕವಾದ ಸುಖ ಸೌಕರ್ಯಗಳ ಹಾಗೆಯೇ ಅಥವಾ ಅದಕ್ಕೂ ಹೆಚ್ಚಾಗಿಯೇ ಸಮೂಹದ ಇಗಿಕಟ್ಟಿಗೆ ಆದ್ಯತೆಯನ್ನು ನೀಡುವಂಥವು ಎಲ್ಲ ಪರಂಪರಾಗತ ಸಮೂಹಗಳೂ ಆಗಿವೆ ಎಂಬುದು ಈ ವಿವರಣೆಗಳಲ್ಲೆಲ್ಲ ಸುವ್ಯಕ್ತ ಜಾನಪದವು ಭೌತಿಕ ಸಂಸ್ಕಾರವೂ ಅದರ ಭಾಗವಾದ ಮನೆಯೂ ಅಧ್ಯಯನಕ್ಕೆ ಅರ್ಹವಾಗುವುದು ಈ ಕಾರಣಗಳಿಗಾಗಿಯೇ

ಭೌತಿಕ ಸಂಸ್ಕಾರವೂ ವಾಸ್ತು ವಿದ್ಯೆಯೂ

ಒಂದು ಪರಂಪರೆಯುಳ್ಳ ಸಮೂಹ ಪರಂಪರಾಗತವಾಗಿ ಅರ್ಜಿಸಿರುವಂಥದ್ದು ಮತ್ತು ಬಳಸುವಂಥದು ವಾಸ್ತು ವಿದ್ಯೆ ಆದರೆ ಇದರಲ್ಲಿ ವೈಯಕ್ತಿಕವಾಗಿ ಬದಲಾವಣೆ ತರಬಹುದಾದ ಸಾಧ್ಯತೆ ತುಂಬ ಪರಿಮಿತ ನಿರ್ಮಾಣ ವಸ್ತುಗಳು ಉಪಕರಣಗಳು ನಿರ್ಮಾಣ ವಿದ್ಯೆ ಇವೆಲ್ಲಾ ಪರಂಪರಾಗತವೇ

ಮನೆ ನಿರ್ಮಾಣ ಮಾತ್ರವಲ್ಲದೆ ದೇಗುಲಗಳು, ಕಲಾಪ್ರದರ್ಶನಗಳಂಥ ಕಾರ್ಯಕ್ರಮ ನಡೆಸುವ ಸಭಾಗೃಹ, ಶಾಲಾಕಟ್ಟಡಗಳು, ಸೇತುವೆಗಳು, ಬಾವಿ ಕೊಳ ಇತ್ಯಾದಿಗಳ ನಿರ್ಮಾಣ ಇತ್ಯಾದಿಯೂ ಗ್ರಾಮೀಣ ವಾಸ್ತುವಿದ್ಯೆಯಲ್ಲಿ ಒಳಗೊಂಡಿವೆ ಇವುಗಳಲ್ಲಿ ಒಂದೊಂದರದೂ ರಚನಾವಿಧಾನ ಪ್ರತ್ಯೇಕ' ಕ್ಷೇತ್ರ (ದೊಡ್ಡ ದೇವಸ್ಥಾನ)ಗಳ ರಚನೆಯಲ್ಲಿ 'ಕಾವುಗಳದು ಈ ಭಿನ್ನತೆ ದೇವತಾ ಸಂಕಲ್ಪಗಳ ಭಿನ್ನತೆ ಕಾರಣ ಗರ್ಭ ಗುಡಿ (ಶ್ರೀ ಕೋವಿಲ್) ಮುಖ ಮಂಟಪಂ ಅಡುಗೆ ಕೋಣೆ (ತಿಡಪ್ಪಳ್ಳಿ) 'ಮುಳಯಲಿ"ಬಾಗಿಮಾಡ' ಸುತ್ತ ಅಂಬಲ' ಇವೆಲ್ಲ ಸೇರಿರುವ ರಚನೆ ಕ್ಷೇತ್ರ (ದೇವಸ್ಥಾನ) ಈ ಘಟಕಗಳಿಗೆಲ್ಲಾ ಸ್ವಂತ ಧರ್ಮಗಳನ್ನು ಪಾಲಿಸಲು ಇದೆ ಗರ್ಭಗುಡಿ ದೇವರ ವಾಸಸ್ಥಾನ ಅರ್ಚಕನಿಗೆ (ಶಾಂತಿ ಕಾರನಿಗೆ) ಮಾತ್ರವೆ ಇದರ ಒಳ ಪ್ರವೇಶ ದೇವಸ್ಥಾನದ ಅಯಂತ ಶುದ್ದ ಸ್ಥಳವಿದು ಗರ್ಭ ಗುಡಿಯ ಮುಂದಿನ ರಚನೆ 'ಮುಖಮಂಡಪ'ಮುಖ ಮಂಟಪದಲ್ಲಿ ಕುಳಿತು ನಂಬೂತಿರಿಗಳು ಎಂಬ್ರಾಂತಿರಿಗಳು ಭಜಿಸುವರು ಇತರೆ ಜಾತಿಯವರಿಗೆ ಅಲ್ಲಿ ಪ್ರವೇಶವಿಲ್ಲ 'ತಿಡಪ್ಪಳಿ' ನೈವೇದ್ಯ ಅಡುವ ಕೋಣೆ ಇಲ್ಲಿ ಅರ್ಚಕ (ಶಾಂತಿಕಾರ) ರಿಗೆ ಮಾತ್ರ ಪ್ರವೇಶ ದೇವಸ್ಥಾನದ ಅಂಗಳಕ್ಕೆ ಪ್ರವೇಶ

ಸುವ ದ್ವಾರೇ "ವಾದಿಲ್ ಮಾಡಂ (ಬಾಗಿಲ ಮೂಡ) ಪ್ರತ್ಯೇಕ 'ಕೊತ್ತಂಬರಲಂ' (ನಾಟ್ಯಗೃಹ) ಇಲ್ಲದ ಕ್ಷೇತ್ರಗಳಲ್ಲಿ ಅಂಗಳದಲ್ಲಿ ನಡೆಯುವ ಚಡಂಗಗಳು ಕಲಾ ಪ್ರದರ್ಶನಗಳು ನಡೆಯುವುದು ಬಾಗಿಲ ಮಾಡದಲ್ಲಾಗಿರುತ್ತದೆ. ಸವರ್ಣರೆಂದು ಕರೆಸಿಕೊಳ್ಳುವವರೆಲ್ಲ ಇಲ್ಲಿ ಪ್ರವೇಶ ಪಡೆಯುವರು 'ವಾದಿಲ್

ಮೂಡ' ಕ್ಕೆ ಸೇರಿ ಕೊಂಡು 'ಚುಱಂಬಲಂ' (ಸುತ್ತುಪೌಳಿ) ಇರುತ್ತದೆ ಚಾತುರ್ವರ್ಣ್ಯ ನೆಲೆಸಿದ್ದ ಒಂದು ಸಮೂಹದ ಮವಲ್ಯಗಳನ್ನು ಸಂರಕ್ಷಿಸಲು ಒದಗುವ ರಚನಾ ವಿಧಾನವೆ ದೇವಾಲಯಗಳ ವಾಸ್ತುವಿದ್ಯೆಯಲ್ಲಿ ಕಾಣಸಿಗುವುದು ಆದರೆ ಜಾತಿ ಪದ್ದತಿಯ ಪ್ರಾಬಲ್ಯ ನಷ್ಟವಾದುದರೊಂದಿಗೆ ಪ್ರಸ್ತುತ ವಾಸ್ತು ವಿದ್ಯೆಯಲ್ಲಿ ಗಣ್ಯವಾದ ಮಾರ್ಪಟು ಬಂದಿದೆ ಸಾಮೂಹಿಕ ಜೀವನದೊಂದಿಗೆ ವಾಸ್ತು ಸಂಬಂಧ ಪಡೆದಿದೆ ಎಂದರ್ಥ.

'ಕಾವು'ಗಳಲ್ಲಿ 'ಕಲ್ತಱ' (ಕಲ್ಲುಕಟ್ಟೆ) ಗಳೋ 'ಪೀಠ' ಗಳೋ ಮಾತ್ರ ಇರುತ್ತವೆ. ಶೂಲ, ಖಡ್ಗ, ನಾಟುಗಲ್ಲು ಇವುಗಳನ್ನು ಪೂಜಿಸುವ ಪದ್ದತಿ 'ಕಾವು' ನಲ್ಲಿದೆ 'ನಾಗ ಕಾವು'ಗಳಲ್ಲಿ ನಾಗ ಪ್ರತಿಷ್ಠೆಗೆ ಬೇಕಾದ ಕಲ್ಲಿನ ರಚನೆಯಾದ 'ಚಿತ್ರಕೂಟ' ಮತ್ತು ನಾಗ ಶಿಲ್ಪಗಳ ಪ್ರತಿಷ್ಠೆಗೆ ಪ್ರಾಧಾನ್ಯ ಅಪೂರ್ವವಾಗಿ 'ಕಾವು' ಗಳಲ್ಲಿ ದೇಗುಲದಂಥ ಕಟ್ಟಡ ಇರುವುದಾದರೂ ಇದಕ್ಕೆ ವಾಸ್ತು ವಿದ್ಯೆಯ ಸಂಬಂಧವಿಲ್ಲ

ಒಂದು ಜನತೆಯನ್ನು ಇನ್ನೊಂದರಿಂದ ಬೇರ್ಪಟ್ಟು ಗುರುತಿಸಲು ಸಹಾಯ ಮಾಡುವಲ್ಲಿ ಮುಖ್ಯ ಪಾತ್ರ ವಹಿಸುವಂಥದು ಅವರ ವಾಸ್ತು ವಿದ್ಯೆಗಳಲ್ಲಿರುವ ವ್ಯತ್ಯಾಸವಾಗಿದೆ ಕೇರಳೀಯರು ಮಾಡುವ ಮನೆಯಂತಲ್ಲ ತಮಿಳರ ಮನೆ ತಮಿಳುನಾಡಿನ 'ಅಗರಹಾರ'ಗಳಿಗಿಂತ ರಚನೆ ಧರ್ಮಗಳಿಂದ ತೀರಭಿನ್ನ ಕೇರಳದ 'ಇಲ್ಲಂ'ಗಳು ಕೇರಳದಲ್ಲಿ ಭಿನ್ನ ಜಾತಿಗಳವರ ಮನೆಗಳ ರಚನಾ ವಿಧಾನ ಪ್ರತ್ಯೇಕ ಸಾಮಾಜಿಕ ಸಂಪತ್ತಿಕ ಸ್ಥಾನಮಾನಗಳು, ಸಾಮಾಜಿಕ ಸಂಬಂಧ ಸಮೂಹದ ಒಬ್ಬೊಬ್ಬರೂ ಅನುಷ್ಠಿಸಿದ ಧರ್ಮ ಇತ್ಯಾದಿಯನ್ನು ಅನುಸರಿಸಿಯೇ ಕೇರಳದ ವಿಭಿನ್ನ ಜಾತಿಗಳವರು ತಮ್ಮದಾದ ಮನೆಗಳನ್ನು ನಿರ್ಮಿಸಿರುವುದು.

ಹವಾಗುಣ ಭೂ ಪ್ರಕೃತಿ ಪ್ರಕೃತಿಯಿಂದ ಲಭ್ಯ ವಸ್ತುಗಳು ಇವೆನ್ನೆಲ್ಲ ಆಶ್ರಯಿಸಿಯೆ ಮನೆ ಕಟ್ಟೋಣದ ಪ್ರಕ್ರಿಯೆ ನೆಲೆಸಿದುದು ಕೇರಳದ ಕಡಲ ತೀರದಲ್ಲಿ 'ಮುಕ್ಕುವರು' (ಮೀನುಗಾರರು) ಕಟ್ಟುವ 'ಒಯರ' (ಗುಡಿಸಲು) ಮತ್ತು ವಯ ನಾಡಿನ ಆದಿವಾಸಿಗಳು ಬಿದಿರಿನಿಂದ ಕಟ್ಟುವ 'ಪುರ' ವಿಭಿನ್ನವಾಗುವುದು ಈ ಪ್ರಾಕೃತಿಕ ಭಿನ್ನತೆಯಿಂದಾಗಿಯೇ ಸೋಗೆ ಹುಲ್ಲು (ಕರಡ) ಕರಿಹನೆ ಪಟ್ಟೆ ಇತ್ಯಾದಿಗಳಿಂದ ನೂರು ಮಾಡಿದ ಮನೆಗಳನ್ನು ನೋಡುವುದು ಒಂದು ಕಾಲದಲ್ಲಿ ಸುಲಭವಾಗಿತ್ತು ಮುರಕಲ್ಲು (ಚೆಂಗಲ್ಲು) ಅಂಟದ ಮಣ್ಣಿನಿಂದ ಗೋಡೆ ಕಟ್ಟುತ್ತಿದ್ದರು ಕೇರಳದ ಪರಿಸರದಲ್ಲಿ ಧಾರಾಳ ಬೆಳೆಯುವ ಮರಗಳಾದ ಈಟ್ಟಿ, ಇರುಳ್, ಮರುತ್, ಹಲಸು ತೆಂಗು ಮೊದಲಾದವು ಮನೆಯ ಮರದ ಕೆಲಸಕ್ಕೆ ಬರುತ್ತಿದ್ದವು 'ವಯನಿ' 'ಚಿಱಂ' (ಚಂದಂ) ದ್ರವ್ಯಗಳನ್ನು ಪೂಸಿ ಮರಕ್ಕೆ ಹಾನಿಯೊದಗದಂತೆ ನೋಡುವ ಪದ್ದತಿಯೂ ಕೇರಳೀಯ ವಾಸ್ತುವಿದ್ಯೆಯ ಭಾಗವಗಿತ್ತು ಸಾಮಾಜಿಕ ಧರ್ಮದಂತೆ ಪ್ರಕೃತಿಯ ಸ್ವಭಾವ ಉಪಕರಣ ವಿದ್ಯೆಯಲ್ಲಿರುವ ಸಮೂಹದ ವಿಕಾಸ ಇತ್ಯಾದಿಯೂ ವಾಸ್ತು ವಿದ್ಯೆಯನ್ನು ನಿರ್ಣಯಿಸುತ್ತದೆ.

ನಾಗರಿಕ ಜೀವನವೂ, ಔದ್ಯಮೀಕರಣವೂ ನಮ್ಮ ಪ್ರಕೃತಿಯನ್ನೂ ಪ್ರಕೃತಿಯೊಂದಿಗಿನ ಮನೋಭಾವವನ್ನೂ ಬದಲಿಸಿದೆ ಇದನ್ನು ಅನುಸಿಸಿ ಮನೆ ನಿಮಾಣ ಪ್ರಕ್ರಿಯೆಗೆ ದೊಡ್ಡ ಪ್ರಮಾಣದ ಬದಲಾವಣೆ ಉಂಟಾಗಿದೆ ಸೋಗೆ ಹೊದಿಸಿದ ನೂರುಗಳ ಮನೆಗಳು ಇಂದು ಕಡಿಮೆಯಾಗಿವೆ ಬದಲು ಹಂಚು ಮತ್ತು ತಾರಸಿ ಮನೆಗಳೇ ಎಲ್ಲೆಡೆಯೂ

ಮನೆ ಒಂದು ಭೌತಿಕ ವಾಸ್ತವ ಮಾತ್ರವಲ್ಲ ಅದು ಒಂದು ಪರಂಪರೆಯ ಸಮೂಹದ ಮಾನಸಿಕ ಯಥಾರ್ಥತೆಯನ್ನೂ ಪ್ರತಿ ಫಲಿಸುತ್ತದೆ ಪ್ರತಿಕೂಲ ಹವೆಯಿಂದ ರಕ್ಷಣೆ ಪಡೆಯಲೂ, ಸುರಕ್ಷಿತವಾಗಿ ವಾಸಿಸಲೂ ಇರುವ ಸಂಕೇತವೆ ಮನೆ ಎಂದರೆ ಅದು ಮೇಲಿಂದ ಮೇಲೆ ಕಾಣಿಸುವ ವಾಸ್ತವವೆಸೀತು. ಭೂಮಿಯ ಗಡಿಯೊಳಗಿನ ಒಂದು ಪ್ರತ್ಯೇಕ ಸ್ಥಾನವನ್ನೆ ಮನೆ ಕಟ್ಟಲು ಆಯ್ದುಕೊಳ್ಳುವುದು ಮನೆಯ ಮುಖ ಎತ್ತ ಇರಬೇಕೆಂಬುದಕ್ಕೂ ನಂಬಿಕೆಗಳ ಕಟ್ಟು ಪಾಡು ಇದೆ ಬಾವಿ ಮನೆಯ ಯಾವ ಭಾಗದಲ್ಲಿರಬೇಕು ದನದ ಕೊಟ್ಟಿಗೆ ಯಾವ ಕಡೆಯಿರಬೇಕು ಮನೆಯ ಎತ್ತರ ಎಷ್ಟರವರೆಗೆ ಹೋಗಬಹುದು ಇತ್ಯಾದಿ ವಿಷಯಗಳಲ್ಲೂ ಪರಂಪರಾಗತ ಸಮೂಹಗಳಲ್ಲಿ ನಿರ್ಣಯಗಳಿವೆ ಸ್ಥಳ ವಿನ್ಯಾಸದ ಕುರಿತಾದ ಸಮೂಹದ 'ಲೋಕವಿಕ್ಷಣ' (ತಿಠಡಿಟಜ ಚಿಡಿಜಚಿ)ಯನ್ನೇ ಇವೆಲ್ಲ ಸಆೂಚಿಸುವುದು ಮನೆಯೆಂಬ ಒಂದು ಭೌತಿಕ ವಸ್ತುವಿನ ರೂಪ ರಚನೆ ಇವೆಲ್ಲ ಅವುಗಳನ್ನು ಬಳಸುವ ಸಮೂಹದ ಜೀವನದ ಎಲ್ಲಾ ರಚನೆ ಇವೆಲ್ಲ ಅವುಗಳನ್ನುಬಳಸುವ ಸಮೂಹದ ಜೀವನದ ಎಲ್ಲಾ ತಲಗಳೊಂದಿಗೆ ಸಂಬಂಧಿಸಿವೆ. ಎಂದು8 ಇದು ತೋರಿಕೊಡುತ್ತದೆ.

'ಪುಳ್ಳುವ' ರ ವಾದ್ಯಗಳು

(ಗ್ರಾಮೀಣ ವಾದ್ಯ)

ಎಲ್.ಎಸ್.ರಾಜಗೋಪಾಲನ್

ಟಿಪ್ಪಣಿ

ವಾದ್ಯಗಳ ಕುರಿತ ಅಧ್ಯಯನ ಭೌತಿಕ ಸಂಸ್ಕಾರ ಅಧ್ಯಯನದ ವಿಭಾಗಕ್ಕೆ ಸೇರುತ್ತದೆ ಕಾರಣ ಯಾವುದೇ ವಾದ್ಯೋಪಕರಣವೂ ಒಂದು ವಸ್ತುವಾಗಿದೆ ಗ್ರಾಮಿಣ ಸಂಗೀತದ ಧಾಟಿಯೊಂದಿಗೋ,ತಾಳದೊಂದಿಗೋ, ಎರಡರೊಂದಿಗೋ, ವಾದ್ಯ ಸೇರಿಕೊಳ್ಳುವುದು ಅದು ಪ್ರಯೋಗಗೊಳ್ಳುವಾಗ ಮಾತ್ರ. ಬೇರೆ ಹೊತ್ತಿನಲ್ಲಿ ಅದು, ಉದ್ದ, ಅಗಲ, ಎತ್ತರ ಇರುವ ವಿಶಿಷ್ಟ ವಸ್ತುಗಳಿಂದ ತಯಾರಾದ ಒಂದು ಉಪಕರಣ ಮಾತ್ರ ಆ ವಸ್ತು ಒಂದು ಜಾನಪದ ವಸ್ತುವಾಗಿ ಮಾರ್ಪಡುವುದು ಅದು ಸಆಂಘಿಕತೆಯ ಜೀವನದ ಪರಿಸರದಲ್ಲಿ ಬಳಕೆಯಾಗ ತೊಡಗಿದಾಗ ಅದು

ಪ್ರಸ್ತುತ ಸಾಂಘಿಕತೆಯಲ್ಲಿ ಯಾವ ಸನ್ನಿವೇಶದಲ್ಲಿ ಕಾಣಿಸಿಕೊಳ್ಳುತ್ತದೆಂದೂ* ಅದರ ಧರ್ಮ ಏನೆಂದೂ ಪೂರ್ಣವಾಗಿ ಅರ್ಥವಾಗಬೇಕಾಗಿದೆ. ಭೌತಿಕವಾದ ಸನ್ನಿವೇಶವನ್ನೂ ಮಾತ್ರ ತಿಳಿಸಿದರೆ ಆಲದು ನಂಬಿಕೆಯ ತಲದಲ್ಲಿ ಅದರ ಅವಸ್ಥೆಯನ್ನೂ ಗಣನೆಗೆ ತೆಗೆದುಕೊಳ್ಳಬೇಕಾದೀತು ಒಂದೊಂದು ಗ್ರಾಮೀಣ ವಾದ್ಯಕ್ಕೂ ಸ್ವಂತವಾದ ಉದ್ಭವ ಪುರಾಣವಿರುತ್ತದೆ ಈ ಪುರಾವೃತ್ತ ಸಾಂಘಿಕತೆಗೂ , ವಾದ್ಯಕ್ಕೂ ನಡುವಣ ಸಂಬಂಧವನ್ನು ವಿಶದ ಪಡಿಸುತ್ತದೆ. ಹೀಗೆ ಹಲವು ತಲಗಳನ್ನು ಸಂಬಂಧಿಪಡಿಸಿ ಮಾತ್ರ ವಾದ್ಯದ ಬಗೆಗೆ ಕಲಿಯಲು ಸಾಧ್ಯ

ಗ್ರಾಮೀಣ ವಾದ್ಯಗಳ ವಿಷಯದಲ್ಲಿ ಕೇರಳ ಸಂಪನ್ನ ನಾದ ವಾದ್ಯಗಳಿಗಿಂತ ತಾಳವಾದ್ಗಳಿಗೇ ಇಲ್ಲಿ ಪ್ರಾಧಾನ್ಯ ಇದು ವಾದ್ಯದ ಪ್ರಶ್ನೆ ಮಾತ್ರ ಅಲ್ಲ ಗ್ರಾಮೀಣ ಹಾಡುಗಳಲ್ಲೂ ವಾದಕ್ಕಿಂತ ತಾಳಕ್ಕೆ ಪ್ರಾಮುಖ್ಯ ಈ ಎಲ್ಲಾ ವಿಷಯಗಳ ಕುರಿತಾಗಿ ಆಳವಾದ ಅಧ್ಯಯನ ಮಲಯಾಳಿಗಳ ಮಲಯಾಳತ್ವವನ್ನು ಬಯಲು ಪಡಿಸಲು ಬರುವಂಥದಾಗಿರುತ್ತದೆ.

ಕೇರಳದಲ್ಲಿ ದಿವ್ಯ ಸರ್ಪಗಳ ಆರಾಧನೆ ಒಂದು ಕುವೃತ್ತಿಯನ್ನಾಗಿ ನಡೆಸುತ್ತ ಬಂದವರು ಪುಳ್ಳುವರು ' ಪುಳ್ಳು' (ಅಥವಾ ಪಕ್ಷಿ) ಪೀಡೆಗಳನ್ನು ನೀಗಿಸಲು ಕೆಲವೊಂದು ರ್ಕಮಗಳನ್ನು ಕೈಗೊಳ್ಳುವವರಾದ್ದರಿಂದ ಇವರಿಗೆ 'ಪುಳ್ಳುವರ್' ಎಂಬ ಹೆಸರು ಇವರೊಳಗೆ ಕೆಲ ಜಾತಿ ವಿಭಾಗಗಳಿವೆ ಅವುಗಳಲ್ಲೊಂದು 'ಪಾಣಪ್ಪುಳ್ಳುವರ್' ಪ್ರದೇಶ ಭೀನ್ನತೆ ಇತ್ಯಾದಿಗಳನ್ನುನುಸರಿಸಿ ಇವರು ಹಾಡುವ 'ಪಾಟು'ಗಳಲ್ಲೂ ರೀತಿಗಳಲ್ಲೂ, ವಾದ್ಯಗಳ ಆಕೃತಿಗಳಲ್ಲೂ ಅಷ್ಟಷ್ಟು ಮಾರ್ಪಟುಗಳು ಇವೆ.

ಪುಳ್ಳುವನ್ ವೀಣ (ವೀಣೆ)

'ಪುಳ್ಳುವನ್' ಜನರು ಹಾಡುವುದಕ್ಕೆ ಜತೆಗೂಡಲು ಬಳಕೆಯಾಗುವ ಒಂದು ತಂತಿವಾದ್ಯ 'ಪುಳ್ಳುವನ್ ವೀಣ' ಕೆಲವು ಕಡೆ ಇದನ್ನು 'ವೀಣಕ್ಕುಞ್ಞ್' ಎಂದೂ ಕರೆಯುವರು ಆಧುನಿಕ ವಯಲಿನ್ ಅಥವಾ ಫಿಡ್ಲ್‌ನೊಂದಿಗೆ ಕೆಲ ಹೋಲಿಕೆ ಇರುವ ವಾದ್ಯವಿದು 'ಕುಮಿಜ್' (ಕುಂಬುರು) ಹಲಸು ಮೊದಲಾದ ಮರಗಳ ಕೋರಡುಗಳಿಂದ ಈ ವಾದ್ಯದ ತಯಾರಿ ಎಂಟು ಇಂಚು ವ್ಯಾಸ, ಮೂರುವರೆ ಇಂದು ಕುಣಿಯೂ ಇರುವ ಒಂದು ಮರದ ಬಟ್ಟಲು (ಕಣ್ಣಂ) ಅದಕ್ಕೆ ಜೋಡಿಸಿಕೊಂಡು ಹನ್ನೆರಡು ಇಂಚು ಉದ್ದದ ಒಂದು ಮರದ ದಂಡ ಅದರ ತುದಿಯಲ್ಲಿ ತಂತು ಬಿಗಿಯಲು ಇರುವ 'ಪಿರಡ' (ಶಂಕುಪಿರಿ) ಇಷ್ಟ ಅದರ ಮುಖ್ಯ ಮರದ ಅವಯವ ಉಡದ ಚರ್ಮವನ್ನು ಬಟ್ಟಲಿಗೆ ಬಿಗಿದು ಮುಚ್ಚುತ್ತಾರೆ ಅದರ ಮೇಲ್ಭಾಗದಿಂದ 'ನಾಗಚಿಱಮೃತ' ಬಳಿಯಿಂದ ಪಾಕಗ್ಯೆದು ತೆಗೆದ ಒಂದು ದಾರವನ್ನು ದಂಡದ ಬಿರಡೆಗೆ ಕಟ್ಟಿ ತಿರುಗುಇಸಿ ಬಿಗಿಯುತ್ತಾರೆ. ಒಂದು 'ಮರಚ್ಚೀಳ್' (ಮರದ ಸೀಳು– ಛಡಿುಜರಜ) ತಂತು (ದಾರವನ್ನು ಚರ್ಮದ ಮುಚ್ಚಿಗೆಗೆ ತಾಗದಂತೆ ನೋಡಿಕೊಳ್ಳುತ್ತದೆ ಈ ದಾರದ

ಬಿಗಿತದಲ್ಲಿ ಬದಲಾವಣೆ ತಂದು ಹಾಡುವವರ ಕೊರಳಿಗೆ ತಕ್ಕ ನಾದವನ್ನು ಹೊಂದಿಸುತ್ತಾರೆ ಅಡಿಕೆ ಸೀಳಿನಿಂದ ತಯಾರಿಸಿದ ಒಂದು ಬಿಲ್ಲಿನ ಹೆದೆಯಿಂದ ಈ ದಾರವನ್ನು ಮೀಟಿ ನಾದ ಹೊಮ್ಮಿಸುತ್ತಾರೆ. ಬಿಲ್ಲಿನ ಹೆದೆಯ ತಯಾರಿ 'ನಾಗಚಿಜೂ ಮೃತ' ಬಳ್ಳಿಯ ನಾರಿನಿಂದಲೆ ಆಧುನಿಕ ಮಯಲಿಸ್‌ನಲ್ಲಿ ಬಿಲ್ಲಿನ ಹೆದೆಯಾಗಿ ಕುದುರೆ ಬಾಲದ ರೋಮಗಳನ್ನು ಬಳಸುತ್ತಾರೆ ಈ ಬಿಲ್ಲಿನ ತುದಿಯಲ್ಲಿ ಕಂಚಿನ ಎರಡು ಪುಟಾಣಿಗಗ್ಗರಗಳಿರುತ್ತವೆ. ಎಡಗೈಯಿಂದ ದಾರದ ಸ್ಥಾನಗಳನ್ನು ಹಿಡಿದು ವಿಭಿನ್ನ ಸ್ವರಗಳನ್ನುಹೊರಡಿಸುತ್ತಾರೆ ಇದರಲ್ಲಿ ನಾಲ್ಕು ಅಥವಾ ಐದು ಸ್ವರಗಳನ್ನಷ್ಟೇ ಹೊರಡಿಸಲು ಸಾಧ್ಯ ಇದರಿಂದ ಹಾಡುವಾಗ ಒಂದು ಪರಿಮಿತ ನಾದವಲಯದ ವರೆಗೆ ಮಾತ್ರ ಈ ವಾದ್ಯ ದನಿಗೂಡಿಸಲು ಒದಗೀತು ಹಾಡುಗಾರ ಆಲಪಿಸುವ ಗ್ರಾಮೀಣ ಧಾಟಿಯ ಹಾಡುಗಳಿಗೆ ಇದು ಸಕಾಗುತ್ತದೆ ಹಾಡಿಗೆ ತಾಳ ಹಿಡಿಯಲು ಬಿಲ್ಲಿನ ತುದಿಯ ಕಿಕಿಲ ಸದ್ದು ಮಾಡುವ ಗಗಗ್ಗರ ಸಹಾಯ ಮಾಡುತ್ತದೆ. ಈ ವ್ಯವಸ್ಥೆ ಪುಳ್ಳವನ್ ವೀಣೆಗೆ ಆಧುನಿಕ ವಾಯಲಿನ್‌ಗಿಂತ ಬಣ್ಣ ಹೆಚ್ಚಿಸುತ್ತದೆ. ಬಿಲ್ಲನ್ನು ಒರಸುವಾಗ ಏಳುವ ನಾದ ದೊಡ್ಡದಾಗಲು ಹಿಂದೆ ಕಳ್ಳಿ ಹಾಲಿನ ಅಂಟನ್ನು ಉಪಯೋಗಿಸಿದ್ದರು ಈ ಹೆಚ್ಚಾಗಿ **'ಕಂಡಿವೆಣ್ಣ'** (ಡಿಥುಟಿ) ಅನ್ನು ಇದಕ್ಕೆ ಬಳಸುತ್ತಾರೆ.

ಹೀಗೆ ಶೃತಿಗೂ, ತಳಕ್ಕೂ ಪಕ್ಕವಾದ್ಯಕ್ಕೂ ಈ ಉಪಕರಣ ಒದಗುತ್ತದೆ ಉಡದ ಚರ್ಮದ ಮೇಲೆ ಬರೆದ ಗೆರೆಗಳು ಹೆಡೆಯಿತ್ತಿದ ಹಾವಿನ ಚಿತ್ರದ ದೇಖಿ ಕೊಡುತ್ತವೆ.

ಬಡಗಣ ಮಲಬಾರಿನಲ್ಲಿ ಬಳಕೆಯಾಗುವ ಈ ಉಪಕರಣ ಗಾತ್ರದಲ್ಲಿ ಇನ್ನೂ ಕಿರಿದು ಅದರಲ್ಲಿ ಕಬ್ಬಿಣದ ಸರಿಗೆ ಬಿಗಿದುದು ಕಾಣುತ್ತದೆ ಬಹುಶಃ ಸವಕರ್ಯಕ್ಕಾಗಿ ಮಾಡಿದ ಬದಲಾವಣೆ ಇದಾಗಿರಬಹುದು.

ಪುಳ್ಳುವನ್ ಕುಡಂ (ಕೊಡ)

ಪುಳ್ಳುವರು ಬಳಸುವ ಬೇರೆ ಒಂದು ವಾದ್ಯ 'ಪುಳ್ಳುವನ್ ಕುಡುಂ' ಸಾಮಾನ್ಯವಾಗಿ ಮನೆಯಲ್ಲಿ ಬಳಸುವಂಥದೇ ಮಣ್ಣೀನಕೊಡದಂತೆಯೆ ಇರುತ್ತದೆ ಆದರೆ ಇದು ಹೆಚ್ಚು ಭಾರವೂ ಗಟ್ಟಿಯೂ ಅಗಿರುತ್ತದೆ. ಮನೆ ಮನೆಗೆ ಹೋಗಿ ಹಾಡುವುದಕ್ಕೆ ಸಣ್ಣ 'ಕುಡಂ' ಬೇರೆಇರುತ್ತದೆ 'ಪಾಂಬಿನ್ ಕಳಂ' (ಸರ್ಪಕ್ಕಳಂ) ಎಂಬ ಅನುಷ್ಠಾನದಲ್ಲಿ ಹಾಡಲು ದೊಡ್ಡ ಕೊಡವನ್ನು ಬಳಸುತ್ತಾರೆ ಕೊಡದ ತಳದಲ್ಲಿ ನಾಲ್ಕು ಇಂಚು ವ್ಯಾಸದ ಒಂದು ದ್ವಾರ ಕೊರೆಯುತ್ತಾರೆ ಅದನ್ನು ಒಂದು ಚರ್ಮದಿಂದ ಬಿಗಿದು ಮುಚ್ಚುತ್ತಾರೆ ಕೊಡದ ಅರ್ಧಭಾಗದ ವೆರೆಗೂ ಚರ್ಮಮುಚ್ಚಿಗೆ ಆವರಿಸಿರುತ್ತದೆ ಮುಚ್ಚಿಗೆಯ ನಡುವೆ ಒಂದು ರಂಧ್ರ ತೆಗೆದು ಅದರಿಂದ ತೆಳು ಚರ್ಮದ ಒಣಗಿಸಿದ ಸಪುರದಾರಗಳನ್ನು ಹೆಣೆದು ಮುಚ್ಚಿಗೆಯ ರಂಧ್ರಕ್ಕೆ ಹೋಗಿಸಿ ಅಡಿಯಲ್ಲಿ ಗಂಟು ಹಾಕುತ್ತಾರೆ ಆಗ ದಾರ ಕಳಚಿಬಾರದು ಆ ದಾರದ ಇನ್ನೊಂದು

ಕೊನೆಯನ್ನು ಒಂದು ಬಿದಿರ ಕೊಳಲಿಗೆ ಹೋಗಿಸಿ ಅದಕ್ಕೆ ಜೋಡಿಸಲಾಗುತ್ತದೆ. ಈ ಬಿದಿರ ಕೊಳಲನ್ನು ಸುಮಾರು 27 ಇಂಚು ಉದ್ದದ ದಪ್ಪ ಕಡಿಮೆಯಾದ ಮರದ ಪಟ್ಟಿಯ ತುದಿಗೆ ತುರುಕಿ ಕೂರಿಸುತ್ತಾರೆ ಈ ಪಟ್ಟಿಯನ್ನು ವಾದ್ಯ ನುಡಿಸುವ ವ್ಯಕ್ತಿಯ ಮುಂದುಗಡೆ ಇರಿಸುತ್ತಾರೆ ಈ ಪಟ್ಟಿಗೆ 'ಮುಂಬಿಲೆ ಪಡಿ' ಎಂದು ಹೆಸರು ವಾದ್ಯ ನುಡಿಸುವತ ಮುಂದಕ್ಕೆ ಚಾಚಿದ ಎಡಗಾಲಿನಿಂದ ಪಟ್ಟಿಯನ್ನು ಬಲವಾಗಿ ತಳ್ಳಿ ಇರಿಸಿ ದಾರಕ್ಕೆ ಬೇಕಾದ ಸೆಳೆತವನ್ನು ಕಾಯ್ದುಕೊಳ್ಳುತ್ತಾನೆ ಎಡಗೈಯಿಂದ ಕೊಡವನ್ನು ತಳ್ಳಿ ಹಿಡಿದು ದಾರಕ್ಕೆ ಬೇಕಾದ ಸೆಳೆತ ಖಾತರಿಪಡಿಸುತ್ತಾನೆ ಬಲಗೈಯಿಂದ ಒಂದು ಮರದ ತುಂಡು ಅಥವಾ ಅಂಥ ಯಾವುದಾದರೊಂದರಿಂದ ದಾರವನ್ನು ಮೀಟಿ 'ಬ್ರುಂ, ಬ್ರುಂ' ನಾದ ಹೊರಡಿಸುತ್ತಾನೆ ಈ 'ಬ್ರುಂ, ಬ್ರುಂ' ನಾದಕ್ಕೆ ಸೇರಿಸಿಕೊಂಡೇ ಹಾಡುಗಾರ 'ಪಾಟು' ಹಾಡುವುದು ಕೊಡದ ತಳ್ಳುಗೆಯಲ್ಲಿ ವ್ಯತ್ಯಾಸ ತಂದು ನಾದದಲ್ಲಿ ಬೇಕಾದ ವ್ಯ್ಯಯವನ್ನು ತರುತ್ತಾರೆ ಒಂದು ಬೆರಳಿನಿಂದ ದಾರವನ್ನು ಮುಟ್ಟಿದರೆ ನಾದ ನಿಲುಗಡೆ ಹೀಗೆ 'ಬ್ರುಂ ಬ್ರಹುಂ' ಶಬ್ದಕ್ಕೆ ಏರು, ಇಳಿಯನ್ನು ದೀರ್ಘ ವ್ಯತ್ಯಾಸವನ್ನು ತಂತು ತಾಳ ಬದ್ದವಾಗಿ ಮೀಟಿ ಹಾಡುತ್ತಾರೆ.

ಬಡಗಣ ಮಲಬಾರಿನಲ್ಲಿ ಪುಳ್ಳುವನ್ 'ಕೊಡ'ದ ಗಾತ್ರ ಚಿಕ್ಕದು ಚರ್ಮದ ದಾರದ ಬದಲು ಕಬ್ಬಿಣದ ತಂತಿ ಬಳಸುತ್ತಾರೆ.

ಇತರ ವಾದ್ಯಗಳು

ಈ ಎರಡು ವಾದ್ಯಗಳಲ್ಲದೆ ಪುಳ್ಳುವರು 'ಇಲತ್ತಳಂ' (ಚಕ್ರತಾಳ) ಅನ್ನೂ ಕೆಲ ವೇಳೆ ಬಳಸುತ್ತಾರೆ ಕೆಲವೊಮ್ಮೆ 'ಓಲಕ್ಕಿಣ್ಣಿ'ದ (ಲೋಲವಾದ ಕಂಚಿನ ಬಟ್ಟಲಿನ) ಮೇಲೆ 'ಪೇನಕ್ಕತ್ತಿಯ ಅಲಗಿಲ್ಲದ ಭಾಗದಿಂದ ಬಡಿದು ತಾಳ ಹಿಡಿಯುತ್ತಾರೆ. ಇದನ್ನು 'ಕಿಣ್ಣಂ' ಕೊಟ್ಟ ಪಾಡೇಕ' (ಬಟ್ಟಲು ಬಡಿದು ಹಾಡುವುದು) ಎಂದೂ ಕರೆಯುವುದುಂಟು 'ಬ್ರಾಹ್ಮಣಿಪಾಟು' ಸಾಮಾನ್ಯವಾಗಿ 'ಕಿಣ್ಣ' ಬಡಿದು ಹಾಡುವಂಥದು.

ಕೇರಳದ ವಾದ್ಯಗಳು

ವೈಚಿತ್ರವೂ ವೈವಿದ್ಯವೂ ಇರುವ ಧಾರಾಳ ವಾದ್ಯೋಪಕರಣಗಳು ಕೇರಳದಲ್ಲಿವೆ ಇವುಗಳಲ್ಲಿ ಹಲವು ಉಪಕರಣಗಳ ಬಗೆಗೆ ಸಂಘಂಕೃತಿಗಳಲ್ಲಿ ಪರಾಮರ್ಶಿಯಿದೆ ಅಂದರೆ ಅವುಗಳಿಗೆಲ್ಲ ದೀರ್ಘವಾದ ಚರಿತ್ರೆ ಇದೆ ಎಂದು ಅರ್ಥ

ನಾಟ್ಯಶಾಸ್ತ್ರದಲ್ಲಿ ವಾದ್ಯಗಳನ್ನು ನಾಲ್ಕಾಗಿ ವಿಭಾಗಿಸಲಾಗಿದೆ.

‘ತತಂ ಚೈವಾವನದ್ದಂ ಚ

ಘನಂ ಸುಷಾರಮೇವ ಚ’ – ಅಚಿದರೆ ‘ತತಂ’ (ತಂತಿ ಬಿಗಿದು ತಯಾರಿಸಿದವು), ‘ಅವನದ್ದ’ (ಚರ್ಮಬಿಗಿದು ತಯಾರಾದವು), ‘ಘನಂ’ (ಕಂಚು ಮೊದಲಾದ ಲೋಹಗಳಿಂದ ಮಾಡಿದವುಗಳು), ‘ಸುಷಿರಂ’ (ತೂತು ಇರುವ ಕೊಳಲು ಮೊದಲಾದವುಗಳು

ಆಧುನಿಕ ಇಲೆಕ್ಟ್ರಾನಿಕ್ ವಾದ್ಯೋಪಕರಣಗಳನ್ನು ಬಿಟ್ಟರೆ ವೈಜ್ಞಾನಿಕವಾಗಿಯೂ, ವಿಶ್ವದ ಯಾವೆಡೆಯ ಉಪಕರಣಗಳಿಗೆ ಅನ್ವಯವಾಗುವಂಥದಾಗಿಯೂ ಇರುವ ವಿಭಾಗ ಕ್ರಮವಿದು.

ಇನ್ನೊಂದು ರೀತಿಯಲ್ಲಿ ವರ್ಗೀಕರಿಸುವುದಾದರೆ ವಾದ್ಯಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸಬಹುದು. ಒಂದು – ಹಾಡುವುದಕ್ಕೆ ಅನುಕೂಲಿಸುವವು ಎರಡು – ತಾಳ ಹಿಡಿಯುವುದಕ್ಕೆ ಇರುವವವುಗಳು ಇವುಗಳಲ್ಲಿ ಹಾಡಲು ಅನುಕೂಲವಾದ ಉಪಕರಣಗಳು ಬಹಳ ಕಡಿಮೆಯೂ ತಾಳ ಹಿಡಿಯಲು ಅನುಕೂಲವಾದ ಉಪಕರಣಗಳು ದೊಡ್ಡ ಸಂಖ್ಯೆಯಲ್ಲೂ ಕೇರಳದಲ್ಲಿ ಕಾಣಸಿಗುತ್ತವೆ.

ಮತ್ತೊಂದು ರೀತಿಯಲ್ಲಿ ವಿಭಜಿಸುವುದಾದರೆ ಶಾಸ್ತ್ರೀಯ ತಲದಲ್ಲಿ ನುಡಿಸಬರುವಂಥವು ಮತ್ತು ಗ್ರಾಮಿಣ ಕಲಾ ಪ್ರದರ್ಶನ ತಲದಲ್ಲಿ ಬಳಕೆಯಾಗುವಂಥವು ಎಂದು ಗುರುತಿಸಬಹುದು ಕೇರಳದಲ್ಲಿ ಶಾಸ್ತ್ರೀಯ ತಲದಲ್ಲಿ ಬಳಕೆಯಾಗುವ ಉಪಕರಣಗಳು ತೀರ ಕಡಿಮೆ ಗ್ರಾಮೀಣ ವಾದ್ಯಗಳ ಸಂಖ್ಯೆಯೇ ದೊಡ್ಡದು.

ಒಂದು ವಿಷಯ ಇಲ್ಲಿ ಗಮನಾರ್ಹ, ಶಾಸ್ತ್ರೀಯ ಮತ್ತು ಗ್ರಾಮೀಣ ಎಂಬಂಥ ವಿಭಜನ ರೇಖೆ ಹಾಕುವುದು ಇಲ್ಲಿ ಸ್ವಲ್ಪ ಪ್ರಯಾಸಕರವೇ ಉಪಕರಣಗಳನ್ನು ಬಳಸಿಕೊಳ್ಳುವ ರೀತಿಯನ್ನು ಅನುಸರಿಸಿ ಈ ವರ್ಗೀಕರಣ ಮಾಡಬಹುದು.

ಒಂದು ವಿಷಯ ಇಲ್ಲಿ ಗಮನಾರ್ಹ ಶಾಸ್ತ್ರೀಯ ಮತ್ತು ಗ್ರಾಮೀಣ ಎಂಬಂಥ ವಿಭಜನ ರೇಖೆ ಹಾಕುವುದು ಇಲ್ಲಿ ಸ್ವ ಲ್ಪ ಪ್ರಯಾಸಕರವೇ ಉಪಕರಣಗಳನ್ನು ಬಳಸಿಕೊಳ್ಳುವ ರೀತಿಯನ್ನು ಅನುಸರಿಸಿ ಈ ವಗೀಕರಣ ಮಾಡಬಹುದು

ಒಂದೊಂದು ವರ್ಗಕ್ಕೆ ಸೇರಿದ ಮುಖ್ಯವಾದ್ಯಗಳು ಯಾವುದೆಲ್ಲ ಎಂದು ಪರಿಶೀಲಿಸಬಹುದು

ತತಂ

‘ಪುಳ್ಳುವನ್ ವೀಣ’ ‘ಪುಳ್ಳುವನ್ ಕುಡಂ’ ‘ನಂದುಣಿವಿಲ್ಲ್’ (ಬಿಲ್ಲು) ಮೊದಲಾದವು ಈ ಆಚರಣೆಯಲ್ಲಿ ಬಳಕೆಯಾಗುವ ‘ತತಂ’ ಪ್ರಕಾರದ

ವಾದ್ಯಗಳು

ಪುಳ್ಳುವನ್ ವೀಣ : ಪುಳ್ಳುವನ್ ವೀಣೆಯಲ್ಲಿ ಒಂದು ಬಳ್ಳಿ ತಂತು ಮಾತ್ರ ಬಾರಿಸಲಿಕ್ಕಾಗಿ ಇರುವುದು ನಾಲ್ಕೈದು ಸ್ವರಗಳಿಗಿಂತ ಹೆಚ್ಚಿನ ಸ್ವರಗಳು ಅದರಲ್ಲಿ ಹುಟ್ಟವು ಗ್ರಾಮೀಣ ತಲದಲ್ಲಿರುವ ಪುಳ್ಳುವನ್ ಪಾಟು, ಬಡಗಣ ಮಲಬಾರಿನ ಕಐಪ್ಪಾಟು ಮೊದಲಾದ ಹಾಡುಗಳಿಗೆ ಪಕ್ಕವಾದ್ಯವಾಗಿ ಇದರ ಬಳಕೆಶಾಸ್ತ್ರೀಐ ಸಂಗೀತ ನುಡಿಸಲು ಇದು ಸಾಕಾಗದು

ಪುಳ್ಳುವನ್ ಕುಡಂ : 'ಪುಳ್ಳವನ್ ಕುಡ'ದಲ್ಲಿ ನಾದ ಕೊಡಲು ಒಂದು ದಾರ ಮಾತ್ರವಿದೆ ಒಂದು ತಾಳವಾದ್ಯವಾಗಿ ಮಾತ್ರ ಅದರ ಬಳಕೆ ಸಾದ್ಯ 'ಕೊಡದ ಅಡಿಭಾಗದಲ್ಲಿ ಚರ್ಮ ಮುಚ್ಚುಗೆ ಇರುವ ಕಾರಣ ನಾದ ಹೊಮ್ಮುಗೆ ಅದರಿಂದ ಆಗುವುದರಿಂದ, ಅವನದ್ದವಾದ್ಯವಾಗಿಯೂ ಇದನ್ನು ಪರಿಗಣಿಸಬಹುದು.

ನಂದುಣಿ: ಈ ವಾದ್ಯದಲ್ಲಿ ಎರಡು ಹನೆಯ ನಾರು ದಾರಗಳಿವೆ. ಉಪಕರಣಗಳಲ್ಲಿ ಐದು 'ಮೆಟ್ಟು ಕಣ' (ಜಿಡಿಜಣ)ಗಳಿವೆ ಅವುಗಳಿಂದ ಐದೋ ಆರೋ ಸ್ವರಗಳು ಹುಟ್ಟಲು ಸಾಧ್ಯ ಆದರೂ ಇದನ್ನು ಶೃತಿವಾದ್ಯವೆಂದೂ ತಾಳ ವಾದ್ಯವೆಂದೂ ಮಾತ್ರ ಪರಿಗಣಿಸಲು ಸಾದ್ಯ

ಅವನದ್ದಂ

ಚರ್ಮ ಮುಚ್ಚಿ, ಬಾರಿಸಿ ಲಯ ವಿನ್ಯಾಸವನ್ನು ತರುವ ವಾದ್ಯಗಳು ಈ ವಿಭಾಗಕ್ಕೆ ಸೇರುವಂಥವು ಉಪಯೋಗಿಸುವ ವೇಳೆ ವಾದ್ಯಗಳನ್ನು ಇರಿಸಿಕೊಳ್ಳುವ ರೀತಿ ಅನುಸಿರಿಸಿ ಊರ್ಧ್ವಕ' ' ಅಂಕ್ಯಂ' ಮತ್ತು 'ಆಲಿಂಗ್ಯಂ" ಎಂದು ವರ್ಗೀಕರಿಸಿದೆ ಆಕೃತಿ ಅನುಸಾರ ಒಂದು ಬದಿಯಲ್ಲಿ ಮಾತ್ರ ಬಾರಿಸುವಂಥದು ಎರಡು ಮುಖಗಳನ್ನು ಬಾರಿಸಿ ನುಡಿಸುವಂಥದು ಕೈಯಿಂದಲೋ ಕೋಲುಗಳಿಂದಲೋ ಬಾರಿಸುವಂಥದು ಎಂಬುದಾಗಿ ಹಲವು ರೀತಿಗಳಲ್ಲೂ ವರ್ಗೀಕರಿಸಬಹುದು ಮುಖ್ಯವಾಗಿ ಕಂಡು ಬರುವ ಅವನದ್ದ ವಾದ್ಯಗಳನ್ನು ಈ ಕೆಳಗೆ ಗುರುತಿಸಿದೆ.

1. ಚೆಂಡ, ಪಐ, ತವಿಲ್,ವೀರಾಂ, ಈ ಐಐ, ಮದ್ದಳಂ, ಪಾಣಿಮರಂ
2. ಇಡಕ್ಕ, ತುಡಿ, ತಿಮಲ, ಉಡುಕ್ಕ್,
3. ಇಡುಪಿಡಿ (ಕಿಡಪಿಡಿ), ಡಮಾಣಂ, ನಗಾರ, ಮಿಜೂವ್
4. ಗಂಜಿರ (ಖಂಜಿರ), ತಪ್ಪ್ (ಡಪ್ಪು)

ಘನವಾದ್ಯಗಳು

ಚೇಙ್ಙಲ (ಜಾಗಟೆ), ತಾಳಂ (ಇಲತ್ತಾಳಂ, ಕುಜಿತ್ತಾಳಂ), ಪೊಂದಿ, ಚಿಲಂಬ್ (ಗಗ್ಗರ) ಕೊಕ್ಕರ, ಕೋಲ್, ಕಿಣ್ಣಂ (ಕಂಚಿನ ಬಟ್ಟಲು) ಮೊದಲಾದವು ಈ ವರ್ಗಕ್ಕೆ ಸೇರುತ್ತವೆ.

ಸುಷಿರಂ

ಕೊಂಬು, ಕೊಳಲು, ಶಂಖ ಇತ್ಯಾದಿ ಸುಷಿರ ವಾದ್ಯಗಳು (ಬುಡಕಟ್ಟು ಜನರು ಆದಿವಾಸಿಗಳು ಉಪಯೋಗಿಸುವ ಹಲವು ಬಗೆ ವಾದ್ಯಗಳು ಇವೆ ಅವುಗಳ ಬಗೆಗೆ ಇಲ್ಲಿ ಪ್ರತಿಪಾದಿಸುವುದಿಲ್ಲ)

ಕೆಲ ವೈಶಿಷ್ಟಗಳು

ಮೇಲೆ ಹೇಳಿದ ಕೇರಳೀಯ ವಾದ್ಯಗಳಲ್ಲಿ ಕೊಳಲು (ಅಥವಾ ಕಿರುಗೊಳಲು – ಕುಜಿಂಗುಜಲ್) ಮಾತ್ರವೆ ಶಾಸ್ತ್ರೀಯ ರೀತಿಯಲ್ಲಿ ಹಾಡನ್ನು ನುಡಿಸಲು ಬರುವಂಥದು ಇದರಿಂದಲೆ ಸಾಮಾನ್ಯವಾಗಿ ಶಾಸ್ತ್ರೀಐ ಗಾನಾಲಾಪನೆಯಲ್ಲಿ ಕೇರಳ ಹಿಂದಿನ ಹಂತಿಯಲ್ಲಿರುವಂಥದ್ದೆಂದು ತಿಳಿಯುತ್ತದೆ. ಕೊಳಲಿನ ಹೊರತು ಮಿಕ್ಕೆಲ್ಲ ವಾದ್ಯಗಳೂ ಲಯ ವಿನ್ಯಾಸಕ್ಕಾಗಿ ನುಡಿಯುವಂಥವು 'ಪುಳ್ಳುವನ್ ವೀಣ' ಗ್ರಮೀಣ ಹಾಡುಗಾರಿಕೆಗೆ ಪಕ್ಕ ವಾದ್ಯವಾಗಿ ಇರುವುದಾದರೂ ಅದರ ಬಿಲ್ಲಿನಲ್ಲಿ ಜೋಡಿಸಿದ ಕಿರು ಗಗ್ಗರಗಳು ಬಾರಿಸುವದರ ಬೀಸಿಗೆ ಸರಿಯಾಗಿ ಸವರಗಳು ತೆಗೆ ಕಂಚಿನ ತಾಳ ನಿಯಂತ್ರಿಸಲು ಬಳಕೆಯಾಗುತ್ತದೆ ಸಾಂದಭಿಕವಾಗಿ ಒಂದನ್ನು ಹೇಳಬೇಕು ಈ ವಾದ್ಯದ ತಾಳವನ್ನು ನೀಡುವ ರಚನೆಯನ್ನು ನೋಡಿ ಖ್ಯಾತ ವಾಯಲಿನ್ ವಿದ್ವಾಂಸ ಲಾಲ್ ಗುಡಿ ಜಯರಾಮನ್ ಅದನ್ನು ಬಹುವಾಗಿ ಪ್ರಶಂಸಿದ್ದರು.

'ನಂದುಣಿ'ಯ ಮೇಲುಭಾಗದಲ್ಲಿರುವ ದಂಡ ಒರೆಯಾಗಿ ಒಂದು ಕೋನದಲ್ಲಿ (ಚಿಟಿರಂಟಜ) ಜೋಡಣೆಗೊಳ್ಳುತ್ತದೆ. ಇದು ಯಾಜ್ (�ነಚಿಡಿಠಿ)ವಾದ್ಯದ ಹೋಲಿಕೆ ಹೊಂದುತ್ತದೆ 'ಯಾಜ್' ವಾದ್ಯವೇ 'ವೀಣೆ' ಎಂಬ ವಾದ್ಯವಾಗಿ ಪರಿವರ್ತನೆಗೊಂಡಿತು ಎನ್ನುತ್ತಾರೆ. ಅದರಿಂದ 'ಯಾಜ್' ವರ್ಗಕ್ಕೆ ಸೇರಿದ ವಾದ್ಯದಿಂದ ವೀಣೆ ತಯಾರಾದ ಪರಿವರ್ತನ ಘಟ್ಟಗಳ ನಡುವೆ ಉಂಟಾದ ವಾದ್ಯ 'ನಂದುಣಿ' ಎಂದು ತೋರಿತು.

ಬಿದಿರಓಟೆ, ಕವಂಗು, ಹನೆ ಇತ್ಯಾದಿಗಳನ್ನು ಬಳಸಿ ಬಹಳ ಪ್ರಯತ್ನವನ್ನೇನೂ ಮಾಡದೆ ತಯಾರಿಸಬಹುದಾದ ಒಂದುವಾದ್ಯ 'ಓಣವಿಲ್ಲ್' (ಬಿಲ್ಲು) 'ಕುಮ್ಮಾಟ್ಟಿಕ್ಕಿಳಿ' ಮೊದಲಾದ ಜಾನಪದ

ಕಲಾರೂಪಗಳಲ್ಲಿ ಬಳಸುವ ಈ ವಾದ್ಯದಲ್ಲಿ 'ತಾಯಂಬಕ' ಬಾರಿಸಲು ಸಾಧ್ಯವಾಗುತ್ತದೆ. ಬಳಸುವವರ ಪರಿಣತಿ ಒಂದು ಗ್ರಾಮೀಣ ವಾದ್ಯವನ್ನು ಶಾಸ್ತ್ರೀಯ ಮಟ್ಟಕ್ಕೆ ಏರಿಸುತ್ತದೆ. 'ಪುಳ್ಳುವನ್ ಕುಡ' (ಕೊಡ)ದಲ್ಲೂ ಕೆಲ ಪುಳ್ಳುವ ವಾದನಪಟುಗಳು 'ತಾಯಂ ಬಕಂ' (ತಾಳ ವೈವಿದ್ಯವಿನ್ಯಾಸ) ಬಾರಿಸುವುದುಂಟು ಎಂಬುದು ಗಮನಾರ್ಹ

ಅವನದ್ದ ವಾದ್ಯಗಳಲ್ಲಿ ಕೇರಳದಲ್ಲಿ ಚೆಂಡೆಗೆ ಪ್ರಾಮುಖ್ಯ 'ಹದಿನೆಂಟು ವಾದ್ಯಗಳೂ ಚೆಂಡೆಗಿಂತ ಕೆಳಗೆ' ಎಂಬ ಮಾತು ಇದನ್ನು ಸೂಚಿಸುತ್ತದೆ. ಆದರೆ ಹದಿನೆಂಟು ವಾದ್ಯಗಳು ಯಾವುವು ಎಂಬುದರಲ್ಲಿ ಅಭಿಪ್ರಾಯ ಭಿನ್ನವಾಗಿದೆ ಹರಿಜನಗಳಲ್ಲಿ ಪಱಯನ್, ಪಾಣನ್ ಮೊದಲಾದವರಿಂದ ತೊಡಗಿ ಸವರ್ಣರಲ್ಲಿ ನಂಬೂತಿರಿ ವರೆಗೆ ಚೆಂಡವಾದ್ಯವನ್ನು ಬಾರಿಸುತ್ತಾರೆ. ಕೇರಳದ ಅತ್ಯಂತ ಶಾಸ್ತ್ರೀಯವಾದ ಒಂದು ಲಯ ವಿನ್ಯಾಸ ಪ್ರದರ್ಶನ ಚೆಂಡೆಯ 'ತಾಯಂಬಕಂ'

ಸುಮಾರಾಗಿ 'ಮೃದಂಗದ' ಹಾಗೇ ಇರುವುದಾದರೂ 'ಮದ್ದಳಂ' ವಾದ್ಯದಲ್ಲಿ ಮೃದಂಗದ ಲಾಲಿತ್ಯ ಇಲ್ಲ

'ತಿಮಿಲ' ಹಿಂದೆ ಮುಖ್ಯವಾಗಿ 'ಪಾಣಿಕೊಟ್ಟ್' (ಹಸ್ತದಿಂದ ಬಾರಿಸುವಿಕೆ) 'ಇಡಕ್ಕ ಪ್ರದಕ್ಷಿಣಂ' ಇಂಥ ದೇವಾಲಯದ ಸುತ್ತು ಬಲಿ ಚಡಂಗಗಳಲ್ಲಿ ಮಾತ್ರ ಬಳಕೆಯಾಗುತ್ತಿತ್ತು ಆದರೆ ಈಗ ಕೇರಳದ ಪ್ರಸಿದ್ಧ ಪಂಚ ವಾದ್ಯಗಳಲ್ಲಿ ತಿಮಿಲ ಒಂದೆನಿಸಿದೆ.

'ಇಡಕ್ಕ' ಬಹಳ ಕೋಮಲವಾದ (ಜಜಟುಛಿಚಿಣಜ) ಒಂದು ವಾದ್ಯ ಇದರಿಂದ ಹೊರಡುವ ನಾದಗಳಿಗೆ ಸುಮಾರಾಗಿ ಎರಡು ಸ್ಥಾಯಿಗಳ (ಣತಿಠ ಠಛಿಣಚಿತಿಜ) ವ್ಯಾಪ್ತಿ ಇದೆ ಆದ್ದರಿಂದ ಇದರಲಿ ಹಾಡುಗಳನ್ನು ನುಡಿಸಬಹುದು. ಚೆನ್ನಾಗಿ ಪಳಗಬೇಕು ಅಷ್ಟೇ ಆಫ್ರೀಕದಲ್ಲಿ ' ಮಾತನಾಡುವ ಚೆಂಡೆಗಳು ಎಂದು ಹೆಸರಾದ ವಾದ್ಯದಲ್ಲಿ ಬಾರಿಸಿ ಸಂದೇಶ ರವಾನಿಸುವುದುಂಟಷ್ಟೇ? ನಮ್ಮ 'ಇಡಕ್ಕದಲ್ಲಾದರೆ ಹಾಡನ್ನೂ ಬಾರಿಸಬಹುದು.

'ಕೂತ್ತ್'(ಕೂಡಿಯಾಟ್ಟಂ) ಇವುಗಳಿಗೆ ಮಾತ್ರ ಬಳಕೆಯಾಗುವ ವಾದ್ಯ 'ಮಿಜೂವ್' ಇದು 'ಕೊತ್ತಂಬಲಂ'ಗಳಲ್ಲಿ ತಂತ್ರಿಗಳು ಯಥಾವಿಧಿ ಪೂಜಾ ಕ್ರಿಯೆಗಳನ್ನು ನಡೆಸಿ ಪರಮಶಿವನ ತಾಳವಾದ್ಯಕಾರನಾದ ನಂದಿಕೇಶನನ್ನು ಈ ವಾದ್ಯದಲ್ಲಿ ಪ್ರತಿಷ್ಠಿಸುತ್ತಾರೆ ಹಾಗಾಗಿ ಇದನ್ನು ಬಾರಿಸಲು ಶುದ್ದಚಾರವನ್ನು ವಿಶೇಷವಾಗಿ ಪಾಲಿಸಬೇಕಾಗುತ್ತದೆ. ಈ ವಾದ್ಯದ ಹಿಮ್ಮೆಳವಿಲ್ಲದೆ ಚಾಕ್ಯಾರರಿಗೆ ಅಭಿನಯಿಸಲು ಸಾಧ್ಯವಾಗದು ಎನ್ನೋಣ.

ಜಾಗಟೆ (ಚೇಙ್ಙಲ) ಯು ತಾಳವನ್ನು ಹಿಡಿದು ತೋರಿಸಲು ಉಪಯೋಗಿಸುವಂಥದು ಒಂದು ಪ್ರತ್ಯೇಕ ರೀತಿಯ ಲೋಹಾನುಪಾತದ ಕಂಚು 'ಓಡ್' (ಚಿಟಟಠಥಿ) ಎರಕ ಹೋಯ್ದು, ಅನಂತರ ಬೆಂಕಿಯಲ್ಲಿ ಕಾಯಿಸಿ ಬಡಿದು (ಂಣ ಜಿಠಡಿಯಟಿರ) ಚೇಙ್ಙಲ, ಇಲತ್ತಾಳಂ (ಚಕ್ರತಾಳ)ಮೊದಲಾದ

ಘನ ವಾದ್ಯಗಳನ್ನು ತಯಾರಿಸುತ್ತಾರೆ. ಇದರಲ್ಲಿ ಕೇರಳದ ' ಮೂರಾರಿ' (ಕಂಚುಗಾರ)ಗಳ ಪರಿಣತಿ ಬಯಲುಗೊಳ್ಳುತ್ತದೆ.

'ಪೊಂದಿ' ಎಂಬುದು ಒಂದು ಕಿಲುಕಿಲಿಸುವ ವಾದ್ಯ 'ಐವರ್‌ಕಳಿ' ಮೊದಲಾದವುಗಳಲ್ಲಿ ತಾಳ ಹಿಡಿಯಲು ಇದರ ಉಪಯೋಗವಿದೆ. ಇದರ ಕೊನೆಯಲ್ಲಿ 'ಈಟಿ' ಯಂಥ ಒಂದು ಮೊನೆ ಇದೆ ಇದನ್ನು ಹಿಂದೆ 'ಅಚಿಜಲೊಟ್ಟಕ್ಕಾರ್' (ಅಂಚೆ ಓಟದವರು–ಔಥಣಚಿಟ ಟಿಣಾಟಭಜಢ) ಓಟದವರಿಗೆ ದಾರಿ ಬಿಡಿರೆಂಬ ಸೂಚನೆ ನೀಡಲೂ, ಬೇಕಾದರೆ ಪ್ರಾಣರಕ್ಷಣೆಗಾಗಿ ದಾಳಿಯ ಆಯುಧವಾಗಿಯೂ ಬಳಸುತ್ತಿದ್ದರು.

'ಕೊಂಬು' ಕಂಚಿನಿಂದ ತಯಾರಾಗುವಂಥದು ಸ–ಪ–ಸ ಎಂಬ ಮೂರು ಸ್ವರಗಳು ಮಾತ್ರ ಇದರಿಂದ ಹೊರಡುತ್ತವೆ. ಅದನು ಬಳಸಿಲಯ ವಿನ್ಯಾಸ ಏರ್ಪಡಿಸುವುದಕ್ಕೆ 'ಕೊಂಬು ಪಱ್' ಎನ್ನುವುದು ಹಿಂದೆ ಪಡೆಯ ನುಗ್ಗಲಿಗೆ ಕೊಂಬಿನ ಬಳಕೆಯಿತ್ತು ದೇಶಿಯ ಸೈನ್ಯದಲ್ಲಿ 'ಬ್ಯುಗಿಲ್' ವಾದ್ಯಕ್ಕೆ ಬದಲು ಉಪಕರಣವಾಗಿ ಬಳಸಲು ಯೋಗ್ಯವಾದ ವಾದ್ಯ ಇದು

ಸಂಗೀತ ರತಾಕರ' ಎಂಬ ಸಂಗೀತ ಶಾಸ್ತ್ರ ಗ್ರಂಥದಲ್ಲಿ ಮಧುಕರಿ' ಎಂಬ ಹೆಸರಿನಲ್ಲಿ ವಿಸ್ತಾರವಾಗಿ ಕಾಣಿಸಿರುವ ವಾದ್ಯವೇ 'ಕುಱಂಗುವಿಲ್' ಇದರ ನಾದ ತುಂಬ ಏರಿನಲ್ಲಿ (ತಾರಸ್ಥಾಯಿಯಲ್ಲಿ) ಇರುವುದರಿಂದ ತುಂಬದೂರಕ್ಕೂ ಆಲಿಸಲು ಸಾಧ್ಯವಾಗುತ್ತದೆ ತೆರೆದ ಸ್ಥಳಗಳಲ್ಲಿ ಬಾರಿಸಬೇಕಾದ ವಾದ್ಯವಿದು ಇದರಲ್ಲಿ ಕರ್ನಾಟಕ ಸಂಗೀತವನ್ನು ಒಳ್ಳೆಯ ನೆಲೆಬೆಲೆಯೊಂದಿಗೆಬಾರಿಸಬಹುದು ಆದರೆ ಕಲಾಕರ ಚೆನ್ನಾಗಿ ಪಳಗಿದವನಿರಬೇಕು.

'ಪಾಣಿಮರಂ' ಎಂಬುದು ದೇವಾಲಯಗಳ ಪ್ರತಿಷ್ಠಾಪನೆ ಮೊದಲಾದ ತಾಂತ್ರಿಕ ಚಡಂಗಗಳಿಗೆ ಬೇಕಾಗಿ ಮಾತ್ರ ಬಳಕೆಯಲ್ಲಿರುವ ಒಂದು ವಾದ್ಯ ತಂತ್ರ ಪ್ರಯೋಗಗಳಲ್ಲಿ ಬಾರಿಸುವುದಕ್ಕೆ ಲೆಕ್ಕಾಚಾರ ತಪ್ಪದೆ ನುಡಿಸುದರಲ್ಲಿ ಒಳ್ಳೆಯ ತರಬೇತಿ ಹೊಂದಿರಬೇಕು8 ಬಾರಿಸುವುದರಲ್ಲಿ ತಪ್ಪು ಉಂಟದರೆ ಬಾರಿಸುವವರನಿಗೆ ಕೇಡು ಇದೆ ಎಂಬ ವಿಶ್ವಾಸವೂ ಉಂಟು, 'ಪಾಣಿ ಪಿಱಚ್ಚಾಲ್' ಕೋಣಿಯಿಲ್' (ಹಸ್ತ ತಪ್ಪಿದರೆ ಶವಮಂಚದಲ್ಲಿ) ಎಂಬಮಾತು ಬಂದಿರುವುದು ಅದರ ಗಾಂಭೀರ್ಯವನ್ನು ಹೇಳುತ್ತದೆ.

ಈ ರಂಗದಲ್ಲಿ ಗಂಭೀರವಾದ ಅಧ್ಯಯನವೇನೂ ಆಗಿಲ್ಲ ಎಂಬುದರಿಂದ ಕೇರಳದ ಸಂಗೀತೊಪಕರಣಗಳು ಎಂಬ ವಿವಿಧ ಪ್ರೋತ್ಸಾಹಕ್ಕೆ ಅರ್ಹವಾಗಿದೆ.

ಕುಮ್ಮಾಟ್ಟಿಯ ಮುಖವಾಡಗಳು

(ಗ್ರಾಮೀಣ ವೇಷವಿಧಾನ)

ಸಿ.ಆರ್. ರಾಜಗೋಪಾಲನ್

ಟಿಪ್ಪಣಿ

ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲು ಬರುವ ಒಂದು ವಸ್ತು ಎಂಬ ನೆಲೆಯಲ್ಲಿ ಮುಖವಾಡ ಭೌತಿಕ ಸಂಸ್ಕಾರದ ಭೌತಿಕ ಸಂಸ್ಕಾರದ ಭಾಗವಗಿದೆ ಆದರೆ ಒಂದು ಜಾನಪದ ರೂಪವನ್ನು ಅದೊಂದರಿಂದಲೇ ಅಭ್ಯಸಿಸಲು ಸಾಧ್ಯವಾಗುವುದಿಲ್ಲ 'ಕುಮ್ಮಾಟ್ಟಿ' ಯನ್ನು ತಿಳಿಯದೆ, ಕುಮ್ಮಾಟ್ಟಿ ಇವತ್ತೂ ಜೀವಂತವಾಗಿ ನೆಲೆಸಿರುವ ಸಾಂಗೀಕತೆಯನ್ನು ತಿಳಿಯದೆ. ಕುಮ್ಮಾಟ್ಟಿಯಲ್ಲಿರುವ ಮುಖವಾಡಗಳ ಕುರಿತು ಒಬ್ಬ ಜಾನಪದಭ್ಯಾಸಿಗೆ ಕಲಿಯಬರುವುದಿಲ್ಲ. ನಿಯತವಾದ ಜೀವನಸಾಹಚರ್ಯದಲ್ಲಿ ವ್ಯತ್ಯಸ್ತ ಪಾಠಗಳಾಗಿ ಪ್ರತ್ಯಕ್ಷ ಪಡುವಂಥದು ಈ ಮುಖವಡಗಳೆಲ್ಲವೂ ಒಂದೊಂದು ಪಾಠವೂ ಜೀವಸಮೃದ್ದ ಒಂದೊಂದು ಪಾಠವನ್ನೂ ಅದರ ಸಾಧ್ಯವಾದ ಎಲ್ಲ ಸನ್ನಿವೇಶಗಳನ್ನೋ ದಾಖಲಿಸಿಕೊಂಡೇ ಸಂಗ್ರಹಿಸಬೇಕು ಆಗ ಮಾತ್ರವೆ ಅದು ಜಾನಪದ ವಸ್ತುತೆಯಾದೀತು7. ಸಂಗ್ರಹಾಲಯದಲ್ಲಿ ಕಾಪಿಡಲಾಗಿರುವ ಒಂದು ಮುಖವಾಡ ಜಾನಪದ ವಸ್ತು ಸಂಗ್ರಹಾಲಯಕ್ಕೆ ಬರುವಾಗ ಅದಕ್ಕೆ ಸಂಬಂಧಿಸಿದ ಭೌತಿಕವೂ ಮಾನಸಿಕವೂ ಅದ ಎಲ್ಲ ಸುತ್ತಮುತ್ತಲುಗಳೂ ದಾಖಲೆ ಕಡತಗಳಾಗಿ ರೇಖಿಸಲ್ಪಟ್ಟು ಶಬ್ದಗಳೂ ರೂಪಗಳೂ ಆಗಿ ಅದರೊಂದಿಗೆ ಸಂಗ್ರಹಾಲಯದಲ್ಲಿ ಇರಬೇಕಾಗುತ್ತದೆ ಹೀಗೆ ಸಜ್ಜೀಕೃತವಾಗುವ ಒಂದು ಜಾನಪದ ವಸ್ತು ಸಂಗ್ರಹಾಲಯಕ್ಕೆ ಮಾತ್ರ ಜಾನಪದ ಅಧ್ಯಯನದಲ್ಲಿ ಪ್ರಸಕ್ತಿ ಇರುತ್ತದೆ.

ಪ್ರಾಕೃತಿಕ ಸಮೂಹದಿಂದ ತೊಡಗಿ ನಾಗರಿಕ ಸಮೂಹದವರೆಗೆ ಎಲ್ಲ ವಿಶಿಷ್ಠ ಸಂಸ್ಕೃತಿಕಗಳಲ್ಲೂ ಮುಖವಾಡ ಪ್ರಚಾರದಲ್ಲಿದೆ. ತನ್ನತನವನ್ನು ಮರೆಸಿ ರೂಪಾಂತರಗೊಳ್ಳುವುದಕ್ಕೆ ಮನುಷ್ಯನಿಗೆ ನೆರವಾಗುವ ಒಂದುಉಪಾದಿ ಇದು ಮುಖವಾಡದ ಒಂದು ವಿಕಾಸವಾಗಿಯೇ ಮುಖ ವರ್ಣಿಕೆಯನ್ನು ಗಣಿಸಬೇಕಾಗುತ್ತದೆ.

ಮುಖವಾಡ ನಿರ್ಣಯದ ಒಂದು ಆಸಯವನ್ನು ಒಳಗೊಂಡ ನಿಶ್ಚಲ ಪ್ರತೀಕವಾಗಿ ವರ್ತಿಸುತ್ತದೆ. ಆದರೆ ಮುಖವರ್ಣಿಕೆಯೋ ಮನುಷ್ಯನ ಮುಖದ ಮೂಲಕ ಪ್ರಕಟವಾಗುವ ಎಲ್ಲ ಭಾವಸ್ಪುರಣೆಗಳಿಗೂ ಸಮರ್ಥವಾಗಿದೆ. ಸ್ಥಾಯಿಯಾದ ಒಂದು ಪ್ರತೀಕಾತ್ಮಕತೆ ಇರುವಾಗಲೂ ಮುಖವರ್ಣಿಕೆಗೆ ಭಾವಸ್ಪುರಣದ ಮೂಲಕ ಹಲವು ಆಶಯಗಳ ಸಂವಹನ ಮಾಡಲೂ ಸಾಧ್ಯವಿದೆ. ಈ ಸಾಧ್ಯತೆಗಳ ಪಾರಮ್ಯವನ್ನೇ ನಾವು ಕಥಕಳೀ ವೇಷಗಳಲ್ಲಿ ಕಾಣುವುದು ಕೇರಳದ ಹೆಚ್ಚಿನ ಕಲಾರೂಪಗಳಲ್ಲೂ ಮುಖವರ್ಣಿಕೆಯೂ ಮುಖವಾಡವೂ ಉಪಯೋಗವಾಗುತ್ತವೆ. ತೆಯ್ಯಂನಲ್ಲಿ ಧಾರಾಳವಾಗಿ ಮುಖವಾಡಗಳೂ (ಮರ, ಕಂಚು, ಬೆಳ್ಳೀ, ಹಾಳೆ, ಮೊದಲಾದವುಗಳಿಂದ ಮಾಡಿರುವುದು) ಅದಕ್ಕಿಂತ ಹೆಚ್ಚು ಮುಖವರ್ಣಿಕೆಗಳೂ ಉಪಯೋಗದಲ್ಲಿವೆ. ಒಂದು ಜಾನಪದ ವಸ್ತು ಎಂಬ ನೆಲೆಯಲ್ಲಿ ಮುಖವಾಡವನ್ನು ಅದ್ಯಯನಕ್ಕೆ ಒಳಪಡಿಸುವ ಮೂಲಕ ವಿಶಿಷ್ಟವೂ ಸಾಮಾನ್ಯವೂ ಆದ ಸಾಮೂಹಿಕ ಸ್ಥಿತಿಗಳನ್ನು ಅನಾವರಣಗೈಯಲು ಸಾಧ್ಯವಾಗುತ್ತದೆ.

ಕುಮ್ಮಾಟ್ಟಿ

ತೃಶೂರ್ ಜಿಲ್ಲೆಯಲ್ಲಿ ಪರಿಸರದಲ್ಲೂ ಓಣಂ ಹಬ್ಬದ ವೇಳೆ ಕೂಗು ಹಾಕುತ್ತ ಮನೆ ಮನೆ ಹತ್ತಿಯಿಳಿದು ಮಕ್ಕಳು ಯುವರಕು ಪ್ರದರ್ಶನ ಕೊಡುವ ಗ್ರಾಮೀಣ ಕಲೆ 'ದೇಶ ಕುಮ್ಮಾಟ್ಟಿ' ಅನುಷ್ಠಾನಾಂಶ ಕಡಿಮೆಯಿರುವ ಪ್ರಾಧೇಶಿಕ ಕಲಾರೂಪವಾದ ಕುಮ್ಮಾಟ್ಟಿ ಆರಂಭ ಕಾಲದಲ್ಲಿ 'ಮನ'ಗಳಲ್ಲೂ 'ತಱವಾಡು' (ಮನೆತನ)ಗಳಲ್ಲೂ ನಾಯರ್‌ಗಳು ಪ್ರದಶಿಸುತ್ತಿದ್ದ ಕಲಾ ರೂಪವಿದು ಇವತ್ತು ಎಲ್ಲ ಜಾತಿಯವರೂ ಇದರಲ್ಲಿ ಪಾಲುಗೊಳ್ಳುವರು ಸಾಂಘಿಕತೆಯುಳ್ಳ ರಾಜ್ಯ ಉತ್ಸವವಾಗಿ ಇದು ಬದಲಿಕೊಂಡಿದೆ ಕಿಱಕ್ಕುಂ ಪಾಟ್ಟುಕರ, ಕುಱುಮುಕ್ಕ್, ಮರುತೂರ್, ಎವನೂರ್, ಅಯ್ಯಂ ತೋಳ್, ವಿಯ್ಯರ್, ಊರಕಂ ಎಂಬ ಊರುಗಳಲ್ಲೆ ಇಂದು 'ಕುಮ್ಮಾಟ್ಟಿಕ್ಕಳಿ' (ಕುಮ್ಮಾಟಿ ಆಟ) ಹೆಚ್ಚಾಗಿ ಕಾಣಸಿಗುವುದು ಗ್ರಾಮಿಣ ಬೀದಿಗಳು, ಮನೆ ಅಂಗಳಗಳೂ ರಂಗ ವೇದಿಯಾಗಿ ಬಳಕೆ ಮಾಡುವ ಪ್ರದರ್ಶನ ರಚನೆ ಈ ಕಲಾರೂಪದ್ದುಕೃಷಿ ಸಮೃದ್ದಿ, ಗ್ರಾಮೀಣ ಸಾಂಸ್ಕೃತಿಕ ತನ್ನತನ ಇವೇ ಈ ವಿನೋದಪರ ಕಲಾ ಪ್ರದರ್ಶನದ ಆಚಾರ ಸಂಕಲ್ಪದ ಮೂಲ ಪ್ರೇರಣೆ

ಒಂದೊಂದು ದೇಶಕ್ಕುಮ್ಮಾಟ್ಟಿಯೂ ಆಶಾನ್ (ಗುರು) ಗಳ ನೇತೃತ್ವದಲ್ಲಿ ಮುಖವಾಡಗಳನ್ನು ಸಜ್ಜುಗೊಳಿಸುವುದು. ಅವುಗಳಿಗೆ ಬಣ್ಣ ಕಱಡುವುದು ಕುಮ್ಮಾಟ್ಟಿ ಹುಲ್ಲು ಸಂಗ್ರಹಿಸುವುದು ವೇಷ ಕಟ್ಟುವವರು ಯಾರೆಂದು ತೀರ್ಮಾನಿಸುವುದು ಇತ್ಯಾದಿ ನೇಪಥ್ಯ ಸಿದ್ದತೆಗಳು ಮೊದಲಾಗಿ ಆಗುತ್ತವೆ. ತಾನು ಇಂಥ ವೇಷ ಕಟ್ಟುವುದೆಂದು ಒಬ್ಬೊಬ್ಬರು ತಮ್ಮ ನಿರ್ಣಯ ಹೊಂದುತ್ತಾರೆ ತಳ್ಳ (ತಾಯಿ)ಪನ್ನಿ (ಹಂದಿ) ಎಂಬ ವೇಷಗಳನ್ನು ಕೆಲವು ಖಾಯಂ ಆಗಿ ವರ್ಷವೂ ಕಟ್ಟಿಕೊಳ್ಳುತ್ತಾರೆ ಶರೀರವನ್ನು ಮರೆ

ಮಾಡಲು ಇರುವ ಔಷಧೀಯ ಗುಣಗಳಿರುವ ಪಾರ್ಪಟಕಪ್ಪುಲ್ಲ್(ಠಟಜಜಟಟಿಟಚಿಟಿಜುಚಿ ಛಿಂಡಿಧಿಟಛಿಂಚಿ) ಹುಲ್ಲು ಸಸ್ಯವನ್ನು ಹಿಂದಿನ ದಿನವೇ ಎಳೆಯರು ತಂಡಗಳಾಗಿಸುತ್ತಾಡಿ ಸಂಗ್ರಹಿಸಿ ಪ್ರತ್ಯೇಕ ರೂಪದಲ್ಲಿ ಹೆಣೆದು ಇರಿಸಿಕೊಳ್ಳುತ್ತಾರೆ ಹುಲ್ಲಿನ ಬುಡ ನಡವಿಗೆ ಬರುವಂತೆ ತಲೆ ಎರಡು ಅಂಚುಗಳಲ್ಲಿರುವಂಥೇ ಒತ್ತಿ 'ಕಾಞ್ಞಿರವಳ್ಳಿ'ಯಿಂದ ಹೆಣೆಯುತ್ತಾರೆ ಈ ಕೆಲಸ ಸಾಗುವಾಗಲೆಲ್ಲ 'ಓಣಪ್ಪಾಟು'ಗಳನ್ನು ಹಾಡಲಾಗುತ್ತದೆ ಮರುದಿವಸ ಬೆಳಗ್ಗೆ ಹೆಚ್ಚಾಗಿ ರಹಸ್ಯವಾದ ಒಂದೆಡೆಯಲ್ಲಿ 'ಕುಮ್ಮಾಟಿ' ವೇಷಗಳನ್ನು ಕಟ್ಟಿಕೊಳ್ಳುತ್ತಾರೆ ವೇಷದವರ ವ್ಯಕ್ತಿ ಗುರುತು, ಒಂದೊಂದು ಸಂಘದವರ ಮುಖಪರಿಚಯ ಬಯಲಯಗೊಳ್ಳಬಾರದೆಂಬುದಕ್ಕೆ ಈ ರಹಸ್ಯ ಕಟ್ಟುಗೆ ಮಾರುಗಟ್ಟಲೆ ಹೆಣೆದ ಹುಲ್ಲನ್ನು ಕಾಲಿನಿಂದ ಮೇಲಕ್ಕೆ ಕಟ್ಟಿಕೊಳ್ಳುತ್ತಾರೆ. ಕಾಲಿನಲ್ಲೂ ಕೈಗಳಲ್ಲೂ ಮೂರು ಕಟ್ಟುಗೆ, ಎದೆಯಲ್ಲೂ, ಹೆಗಲಿನಲ್ಲೂ ಸೊಂಟದಲ್ಲೂ ಒಂದೊಂದು ಕಟ್ಟುಗೆ ಎಂದು ಲೆಕ್ಕ ವ್ಯಕ್ತಿ ಗುರುತು ತಿಳಿಯದಂತಾಗಲು ತಲೆಯಲ್ಲಿ ಪಂಚೆ ಕಟ್ಟಿಕೊಂಡು ಅನುಷ್ಠಾನ ಪರವಾಗಿ ಮುಖವಾಡವನ್ನು ಇಡುತ್ತಾರೆ ದೈವಪ್ರೀತಿಗಾಗಿ ಮೊದಲಿಗೆ ಮುಖಕ್ಕೆ ಇರುವ ಮುಖವಾಡ ಹನುಮಂತನದೋ ಕೃಷ್ಣನದೋ ಆಗಿರಹಬೇಕು ಹಂದಿಯ ವೇಷಕ್ಕೆ ಬಾಳೆಲೆ ಬೇಕು.

'ಕುಮ್ಮಾಟಿ' ವೇಷಧಾರಣೆ ಪೂರ್ತಿಯಾದರೆ ಎಲ್ಲರೂ ಕೂಗು (ಆರ್ಪು) ಕೊಡುತ್ತ ಸನಿಹದ ದೇವಾಲಯಕ್ಕೆ ಹೋಗಿ ತೆಂಗಿನಕಾಯಿ ಒಡೆಯುತ್ತಾರೆ. ಕಿಜುಕುಂ ಪಾಟ್ಟುಕರ ಕುಮ್ಮಾಟ್ಟಿ ಸಂಘವು ಪನಕ್ಕುಂಪಳ್ಳೀ ಶಿವದೇವಸ್ಥಾನದಲ್ಲೂ ಊರಕಂ ಕುಮ್ಮಾಟ್ಟಿ ಸಂಘವು ಅಮ್ಮ ತಿರುವಡಿ ದೇಗುಲದಲ್ಲೂ ವಂದಿಸಿ 'ಕಳಿ' (ಆಟ) ಆರಂಭಿಸುತ್ತವೆ.

ಒಂದೊಂದು ಸಂಘದಲ್ಲೂ ಐದೋ ಆರೋ ಕುಮ್ಮಾಟ್ಟಿಗಳೂ, ಸಂಘ ಮುಖ್ಯ ಆಗಿ ' ತಳ್ಳ' ಇರುತ್ತಾರೆ. ನಾಲ್ಕೈದು ಹಾಡುಗಾರರಿರುತ್ತಾರೆ. ಇಬ್ಬರೋ ಮೂವರೋ ಬಿಲ್ಲು ಹೊಡೆದು ತಾಳ ಹಿಡಿಯುತ್ತಾರೆ. ಹಾಡುಗಳು ಏಕತಾಳದಲ್ಲಿ ನಡೆಯುತ್ತವೆ. ದೇಶಕ್ಕುಮ್ಮಾಟ್ಟಿ' ತಂಡಕ್ಕೆ ಔಪಚರಿಕ ತರಬೇತಿ ಎಂಬುದಿಲ್ಲ ಎಳೆಯರು ನೋಡಿ ಮಾಡಿಕೊಂಡು ಇದರ ಪ್ರತ್ಯೇಕವಾದ ಹೆಜ್ಜೆಗಾರಿಕೆಯನ್ನು ಕಲಿಯುತ್ತಾರೆ ಒಂದೊಂದು ಕಥಾ ಪಾತ್ರಕ್ಕೂ ಬೇಕಾದ ಭಾವ ಪ್ರಕಟನಗಳೂ ಬೀಸುಗಳು ಆಶಾನ್‌ಗಳು ಕಲಿಸಿಕೊಟ್ಟದ್ದೆ ಆಗಿರುತ್ತವೆ. 'ತಿತ್ತೋ ತಿಮ್ಮತೋ ತಿಯ್ಯತ್ತೋ' ಎಂಬ ಕುಮ್ಮಾಟಿ ಬಾಯಿತಾಳ ಹೇಳಿ ಕಐ ತಟ್ಟಿ ಹಾಡುವವರೊಂದಿಗೆ ಆಡುವುದು ಕುಮ್ಮಾಟ್ಟಿಗಳ ರೀತಿ, ಕಥಾ ಸಂಧರ್ಭಗಳಿಗೆ ಸರಿಯಾಗಿ ಆಂಗಿಕಗಳನ್ನು ತೋರುವುದಕ್ಕೂ ಬದಲಿಸಿ ಆಡುವುದಕ್ಕೂ ಹಂದಿಯ ಬೇಟೆ ಆಡಿಸುವ ' ಪನ್ನಿಮಜಿಚ್ಚಿಲ್ ಎಂಬ ಅಭ್ಯಾಸ ಸಂಧರ್ಭಗಳನ್ನು ಅಭಿನಯಸುವುದಕ್ಕೂ ತರಬೇತಿ ಅವಶ್ಯವಾಗಿದೆ.

ಪಾಟುಗಳು

ರಾಮಾಯಣಂ ಪಾಟ್ಟ್, ದಾರಿಗವಧಂ ಪಾಟ್ಟ್, ತಳ್ಳಪ್ಪಾಟ್ಟ್, ಶಿವಸುತ್ತಿ ಮಹಾಬಲಿ ಪಾಟ್ಟ್ ಮಞ್ಞನ್ ನಾಯರೆ ಪಾಟ್ಟ್ ಮತ್ತಿತರ ಗ್ರಾಮೀಣ ಕುಮ್ಮಾಟ್ಟಿ ಪಾಟುಗಳು ಪ್ರದರ್ಶನದಲ್ಲಿ ಬಳಕೆಯಾಗುತ್ತವೆ. ಇನಿಷ್ಟು ಕುಮ್ಮಾಟ್ಟಿ ಬಾಯ್ದರೆ ಸಾಹಿತ್ಯಹಿಂದಿನ ಕಾಲದಲ್ಲಿ ಪ್ರದರ್ಶನಕ್ಕೆ ಒಂದು ತಾಸಾದರೂ ತಗಲುತ್ತಿತ್ತು ಹಾದಿ ನಡೆಯುವಾಗ–

ಮಡತ್ತಿ ಕೈಮಳ್–	ಮಠದ ಕೈಮಲ್
ಪೆಟ್ಟಿಲೆಂದುಂಡೋ–	ಪೆಟ್ಟಿಗೆಲೇ ನುಂಟು
ಅಡಕ್ಕೇಂ ವೆಟೀಲೀಂ	ಅಡಕ್ಕೆಯೂ ವೀಳ್ಯದೆಲೆ
ಪೊಕೇಲೇಂ ಚುಣ್ಣಾಂ	ಹೊಗೆಸೊಪ್ಪು ಸುಣ್ಣವು

ಈ ರೀತಿಯ ತಾಳಾತ್ಮಕ ಪಾಟುಹಾಡುವುದಿತ್ತು 'ವಾಲಿ– ಸುಗ್ರೀವ ಯುದ್ದ' ದಂಥ ರಾಮಾಯಣದ ಜನಪ್ರಿಯ ಭಾಗಗಳನ್ನು ಜಾನಪದೀಯ ಸಾಲುಗಳಲ್ಲಿ ಹಾಡಿ ಅಭಿನಯಿಸುವುದು ಪದ್ದತಿ ಇತಿಹಾಸ ಪುರಾವೃತ್ತಗಳನ್ನು ಪ್ರಾದೇಶಿಕವಾದ ಆಟಕಳದಲ್ಲಿ ಪುನಃ ಸೃಷ್ಟಿ ಮಾಡುವ ಸ್ವಭಾವ ಗ್ರಾಮೀಣ ಸಂಸ್ಕೃತಿಯ ಅಂತರ್ಧಾರೆ.

ಆನಪ್ರಿಯ ಸಂಸ್ಕೃತಿ ಈ ಬಗೆ ಕಥೆಗಳನ್ನು ತನ್ನದನ್ನಾಗಿ ಮಆಡಿಕೊಂಡು ಸ್ಥಳೀಯ ಪಾಠವಾಗಿ ರಚಿಸಿ ಪ್ರದರ್ಶನಕ್ಕೀಡುತ್ತದೆ. ದಾರಿಗವಧೇ ಹಾಡಿನಲ್ಲಿ 'ಕುಮ್ಮಾಟ್ಟಿ' ಯಲ್ಲಿರುವ ಕಾಳಿ ಆರಾಧನೆಯ ಪ್ರಾಧಾನ್ಯದ ಸೂಚನೆಯಿದೆ ಶ್ರೀ ಪರಮಶಿವನ ಕಿರಾತ ಲೀಲೆಗಳನ್ನು ಪ್ರತಿಪಾದಿಸುವ ಪಾಟುಗಳೂ ಇವೆ ಶಿವನ ಅಪೇಕ್ಷೆ ಪ್ರಕಾರ ಭೃಂಗ, ಕುಂಭ, ನಿಕುಂಭ ಮೊದಲಾದ ಭೂತಗಳು ನಡೆಸಿದ ವೃತ್ತವನ್ನು ಅನುಸ್ಮರಿಸುವುದೇ 'ಕುಮ್ಮಾಟ್ಟಿ;' ಎಂದು ಒಂದು ಪಾಟು ವ್ಯಕ್ತ ಪಡಿಸುತ್ತದೆ. ' ಭರಣಿ ಕಾವು' ತಂಬುರಾನ್ (ಒಡೆಯ) ನ ಬಳಿಗೆ ಬಿತ್ತಿಗಾಗಿ ಹೋದ 'ತಳ್ಳ' ಯನ್ನು ಬೈದು ಕಳುಹಿಸಿದಾಗ ಕೇದಗೆ, ದನ (ಪಶು), ಬಾಳೆಗಳು ಆಕೆಗೆ ನೇರವಾದುದನ್ನು ' ತಳ್ಳಪಾಟಿ' ನಲ್ಲಿ ಕಾಣಬಹುದು 'ಕುಮ್ಮಾಟ್ಟಿ'ಯ ಸಾಹಸಕೃತ್ಯಗಳನ್ನು ಬಣ್ಣಿಸುವ ಸಾಲುಗಳು ಬೇರೆಯೂ ಇವೆ.

ರಂಗ

ರಾಮಾಯಣ ಪಾಟಿನ ಕಥಾ ಸಂದರ್ಭಗಳಿಗೆ ವೀರರಸ ಸೇರಿದ ರಂಗ ಪ್ರದರ್ಶನ ಇರುವುದಾದರೂ ಹಾಸ್ಯತ್ಮಕವಾದ ಮನೋಧಮಾಭಿನಯ ಇರುವ ಭಾಗಗಳೂ ಕುಮ್ಮಾಟ್ಟಿಯಲ್ಲಿವೆ

ಕುಮ್ಮಾಟ್ಟಿಯ ನಾಟಕೀಯ ಅಭಿನಯ ಪಾಟವ 'ವಾಲಿವಧೇ' ಯಲ್ಲಿ ಕಾಣಸಿಗುತ್ತದೆ ವಾಲಿ– ಸುಗ್ರೀವರ ಯುದ್ದ, ಅಟ್ಟಹಾಸ, ವಾಲಿಯ ಸಾವಿನ ದೃಶ್ಯ ತನ್ಮಯತೆಯಿಂದ ಪ್ರದರ್ಶನಗೊಳ್ಳುತ್ತವೆ. ಅದು ಮುಗಿದು 'ದಾರಿಗವಧೆ'ಯನ್ನು ಹಾಡುವಾಗ ಮುಖವಾಡಗಳಿರುವ ಕಥಾ ಪಾತ್ರಗಳುಆಡಬೇಕು ಮುಂದೆ ' ತಳ್ಳುಪ್ಪಾಟ್ಟ್' ಆ ಕಥಾ ಪಾತ್ರ ಭಾವವನ್ನು ಗ್ರಹಿಸಿ ಮನೋಧರ್ಮಾಭಿನಯವನ್ನು ತರುತ್ತಾರೆ ಕಟ್ಟಿ ಎತ್ತರಿಸಿಸಿದ ರಂಗ ಮಂಚವಾಗಲಿ ಅಟ್ಟ ಪ್ರಕಾರ (ಕ್ರಮ ನಿಧಿಯು) ಆಗಲಿ ಇಲ್ಲದ ಒಂದು ಸಾಂಘಿಕತೆಯ ಹುಡಿಹಾರಿಸುವಿಕೆ ಗ್ರಾಮೀಣ ನಾಟಕ ರೂಪವನ್ನು ಪಡೆದುದೇ 'ಕುಮ್ಮಾಟ್ಟಿ' ಮನೆಯ ಅಂಗಳವನ್ನು ವೃತ್ತಾಕಾರದ ರಂಗವನ್ನಾಗಿ ಮಾಡಿ, ವರ್ತುಲಾ ಕೃತಿಯಲ್ಲೂ ಬೆರಕೆಯಾಗಿಯೂ ಆಡುವ ರೀತಿ ಕುಮ್ಮಾಟ್ಟಿಯದು 'ತಳ್ಳ ರಂಗವನ್ನು ಅದ್ದೂರಿಗೊಳಿಸುತ್ತದೆ ಮುಖಾವರಣದ ನೇತ್ರದ್ವಾರಗಳಿಂದ ಒಂದೊಂದು ರಂಗ ಮಂಡಲವನ್ನು ಕಿರಿದು ಅಥವಾ ಹಿರಿದುಗೊಳಿಸಲಾಗುತ್ತದೆ. ಮುಖಾವರಣ ಕಟ್ಟಿತಾದರೆ ಅಭಿನಯಕ್ಕೆ ಹೆಚ್ಚು ಸ್ವಾತಂತ್ರ್ಯ ದೊರೆಯುತ್ತದೆ. ಇದನ್ನು ಗ್ರಮೀಣರು ಉಪಯೋಗಕ್ಕೆ ತರುವಾಗಲೆ ಕುಮ್ಮಾಟಿಯ ತನಿಮೆ (ತನ್ನತನ) ತುಂಬಿದ ದೃಶ್ಯಗಳು ಉಂಟಗುವುದು ಹೀಗಿರು ಒಂದೊಂದು ರಂಗ ಪ್ರದರ್ಶನವೂ ಸಜೀವನವಾಗುವುದು ಮಕ್ಕಳ ಮತ್ತು ಯುವಕರ ಸಹಭಾಗದಿಂದ 'ಕಟ್ಟಾಳ(ಬೇಡ) ನೂ

ವಾಲಿಯೂ ಮಕ್ಕಳನ್ನೂ ಹೆದರಿಸಲು ಓಡುವಾಗ ಪ್ರೇಕ್ಷರನ್ನೂ ರಂಗದ ಭಾಗವನವನಾಗಿ ಮಾಡುತ್ತರೆ ವಿನೋದ ಪ್ರಧಾನವಾದ ಗ್ರಾಮೀಣ ಆಟ ಇದಾದರೂ ಕಥಾ ಪಾತ್ರದ ಪ್ರಕೃತಿಯನ್ನು ಅನುಸರಿಸಿದ ನೃತ್ತ ವಿನ್ಯಾಸ ' ಕುಮ್ಮಾಟ್ಟಿ' ಯಲ್ಲಿದೆ ವಾಲಿ, ಸುಗ್ರೀವ, ಹನುಮಂತ ಮೊದಲಾದವರಿಗೆ ವಾನರರ ಓಟಗಳಿಂದ ಕೂಡಿದ ಅಭಿನಯವಿರುತ್ತದೆ. ಸ್ಥಿರವಾದ ರೂಪಗಳಾದರೂ ಕಲಾಕಾರರ ನೃತ್ಯವೇಗದೊಂದಿಗೆ ಚಲನಾತ್ಮಕವಾಗುವುದೆ ಮುಖಾವರಣ ವೈಶಿಷ್ಠ ಶಿರವನ್ನು ಪ್ರತ್ಯೇಕರೀತಿಯಿಂದ ಚಲನಗೊಳಿಸಬೇಕು 'ಪುಲಿಮುಖ' ಕಟ್ಟಿದವನು ಹುಲಿವೇಷದ (ಪುಲಿಕ್ಕಳಿ) ಆಂಗೀಕಗಳನ್ನು ತೋರುತ್ತಾನೆ, ಮುಖಾವರಣವನ್ನು ಕಟ್ಟಿಕೊಂಡವನಿಗೆ ಅಭಿನಯದಲ್ಲಿ ಹೆಚ್ಚು ಸ್ವಾತಂತ್ರ್ಯ ಇರುವುದಾದರೂ ಅದು ಹುಸಿಮುಖದ ಪ್ರಕೃತಿಯನ್ನು ಅನುಸರಿಸಿ ನಿಯಂತ್ರಿತವಾಗಿದೆ ಕೂಡ ಒಂದೊಂದು ಸೂಕ್ಷ್ಮವಾದ ಚಲನದ ಮೂಲಕವೂ ಅತಿಶಯೋಕ್ತಿಯೊಂದಿಗೆ ಭಾವಾವಿಷಾಕರ ನಡೆಸುವ ಶಕ್ತಿ ಅದಕ್ಕೆ ಇದೆ 'ವಾಲಿವಧೆ' ಕುಮ್ಮಾಟ್ಟಿಯ ಅಭಿನಯದ ವಿಶೇಷ ಸಂದರ್ಭ ವಾಲಿಯ ಮುಖಮಂಡಲದಲ್ಲಿ ಬರೆದಿರುವುದು ವೀರರಸದ ಭಾವವಾದರೂ ಅದನ್ನು ತಲೆಕೆಳಗಾಗಿ ಮಾಡಿದಾಗ ಕರಣ ಭಾವ ಪ್ರಕಟವಾಗುವುದು ಒಂದು ವೈಚಿತ್ರ್ಯ

ಮುಖವಾಡಗಳು

ಬಿಂಬಗಳ ತಯಾರಿಗೆ ಅಧಿಕಾರವಿರುವ ಬಡಗಿಗಳೇ ಮುಖವಾಡಗಳ ತಯಾರಕರು 'ಕುಮ್ಮಾಟ್ಟಿ' ಸಂಘದಲ್ಲಿ ಬಲ್ಲವರೂ ಗ್ರಾಮಿಣ ಶೈಲಿಯಲ್ಲಿ ಅಮೂರ್ತವಾದ ಮುಖವಾಡಗಳನ್ನು ಕೆತ್ತುವುದುಂಟು ಅವುಗಳ ಶಿಲ್ಪಕ್ಕೆ ಪ್ರತ್ಯೇಕ ಅಳತೆಗಳೂ ಬಣ್ಣದ ಕೆಲಸವೂ ಇವೆ. ಇದನ್ನು ನೋಡಿಯೂ ಮಾಡಿಯೂ ಕಲಿಯತ್ತಾರೆ ಕಲಾ ಸಂಬಂಧವಾದ ನೈಪುಣ್ಯ ಜನ್ಮಸಿದ್ಧವೆಂದೂ ಪೂರ್ವಿಕರ ಪುನರವತಾರವೇ ಒಬ್ಬೊಬ್ಬ ವ್ಯಕ್ತಿಯಲ್ಲೂ ಕಾಣುವಂಥದ್ದೆಂದೂ ಗ್ರಾಮಿಣ ಕುಶಲಕರ್ಮಿಗಳು ನಂಬುತ್ತಾರೆ ಸರಳವಾದ ತಾಂತ್ರಿಕತೆಗಳಿಂದಲೇ ಈ ಕಲಾಕಾರರು ಮುಖವಾಡಗಳನ್ನು ತಯಾರಿಸುವುದು 'ಕುಮಿಜ್' (ರಟಜಟಟಿಚಿ ಣಟಿಭಿಡಿಜಚಿ) ಎಂಬ ಔಷಧಿಖ ಹಗುರ ತಿರುಳಿನ ಮರ ಬಕ್ಕೆ ಹಲಸು (ಚಿಡಿಣಂಛಿಚಿಡಿಠಿಣ ಑ಟಿಣಜರಡಿಡುಜಿಂಟುಚಿ) ಹಾಲೆ (ಚಿಟಥಿಣಂಟುಚಿ ಛಿಥಿಂಟಚಿಡು) ಅಂಮಟೆ ಮುರುಕ್ಕ್ (ಹೊಂಗಾರಕ ಜಡಿಥಿಣುಡುಟಿಚಿ ಑ಟಿಜುಛಿಚಿ) ಮೊದಲಾದ ಮರದ ಕೊರಡುಗಳು ಕಾಂಗಿನ ಹಾಳೆ ಕಾಗದ ಪಲ್ಪ್ ಮೊದಲಾದವುಗಳಿಂದ ಮುಖವಾಡ ತಯಾರಿಸುತ್ತಾರೆ. ಕಠಿನತೆ ಕಡಿಮೆಯಿರುವ ಒಣಗಿದಾಗ ಭಾರ ಕಡಿಮೆಯಾಗುವ ಕೆತ್ತನೆ ಕೆಲಸಕ್ಕೆ ಒದಗುವ ಗುಣವುಳ್ಳವುಗಳು ಈ ಮರಗಳು ಮುಖವಾಡ ಭಾರವದರೆ ಸ್ವಂತತ್ರವಾದ ನೃತ್ತ ಚಲನೆಗಳಿಗೆ ಅದು ತಡೆಯಾಗುತ್ತದೆ. ಸೂಕ್ಷಮ ಶೀಲ್ಪ ಕೆತ್ತನೆಗಳಿಗೆ ಕುಮಿಜ್ (ಕುಂಬುರು)ಮರ ಉಪಯುಕ್ತ ಮರದ ಕೊರಡು ಸೂಕ್ತಪದಕ್ಕೆ ಬಂದಾಗ ಮೊದಲು ಒಳತೊಡುವ ಕೆಲಸ ಶುರು ಮೂರು ಆಯಾಮಗಳಲ್ಲಿ ಮುಖದ ಅವಯವಗಳನ್ನು ಕೆತ್ತಿದ ಹೊರಭಾಗ ಪೀಣತಲವುಳ್ಳದ್ದು (ಛಿಂಟಿತಜಥ ತಂಟಣಟಿಚಿ) ಅರ್ಧಶಿಲ್ಪಗಳ ರೀತಿ ಇವುಗಳದು ಕಣ್ಣು, ಮೂಗು, ಬಾಯಿ ಕಿವಿ ಇವೆಲ್ಲ ಗ್ರಾಮಿಣರ ರೀತಿಯಲ್ಲಿ ಶೈಲಿಕೃತವಾಗಿ ವಿಶದವಾಗಿ ಕೆತ್ತನೆಯಲ್ಲಿ ಮೂಡುತ್ತವೆ. ಮುಖ ತ್ರಮಾನ (ಮೂರು ಆಯಾಮ) ಹೊಂದಲು ಕಣ್ಣು ಉಬ್ಬುವುದು, ಗಲ್ಲ ಉಬ್ಬುವುದು, ಬಯಿ ತೆರೆದುಕೊಂಡಿರುವುದು ಮೊದಲಾದ ಶಿಲ್ಪ ವಿದ್ಯೆಯನ್ನು ಸ್ವೀಕರಿಸಲಾಗುತ್ತದೆ. ಚಿತ್ರದಲ್ಲಿ ಕಾಣುವಂತೆ ಕಿರೀಟದ ರಚನೆ 'ಕುಮ್ಮಾಟ್ಟಿ;ಯದೆ ಸ್ವಂತ ಶೈಲಿ ಕಟ್ಟುವವರ ಮುಖ ಅಂಶಿತ ಮುಖವಾಡದೊಳಗೆ ಹುದುಗಿರುತ್ತದೆ. ಮುಖದಿಂದ ಒಂದಿಷ್ಟು ಮುಂದಕ್ಕೆ ಚಾಚಿಕೊಂಡಿರುತ್ತದೆ. ಮುನುಷ್ಯನ ಮಲುಖಗಳ ಹೊಲಿಕೆಯವು ಈ ಮುಖವಾಡಗಳು ಉಸಿರು ತೆಗೆಯಲು ಅಮಾನುಷಿಕತೆಯನ್ನು ಬಿಂಬಿಸಲು ಇವು ಅನುವು ನೀಡುತ್ತವೆ. ದೇವಾಲಯಗಳಲ್ಲಿ ಧ್ಯಾನಶ್ಲೋಕಗಳನ್ನು ಆಧರಿಸಿ ಕೆತ್ತಿರುವ ಶಿಲ್ಪಗಳ ಪರಂಪರೆಯ ಪ್ರಭಾವ ಇದರಲ್ಲಿ ಅಲ್ಲಲ್ಲಿ ಕಾಣಬಹುದು ಹಣೆ ಕಿರೀಟ ಒಂದು ಭಾಗ ಕಣ್ಣು ಮೂಗು ಒಂದುಭಾಗ ತುಟಿ, ಗದ್ದ ಒಂದು ಭಾಗ ಹೀಗೆ ವಿಭಾಗಿಸಿ ಅಳತೆ ಒಪ್ಪಿಸುವ ರೀತಿ ಭಿತ್ತಿ ಚಿತ್ರಗಳಲ್ಲೂ ಕಾಣಬಹುದು ಮುಖದ ಉದ್ದದಷ್ಟೆ ಕಿರೀಟದ ಉದ್ದವಿರುತ್ತದೆ. ಕೃಷ್ಣ ರಾಮ ಮೊದಲಾದವರಿಗೆ ಉರುಟು ಮುಖಗಳು, ಉಳಿದವರಿಗೆ ಎತ್ತರದ ಮೂಗು, ಉರುಟು ಕಣ್ಣುಗಳು, ವ್ಯಕ್ತವಾದ ಹುಬ್ಬು, ಮೀಸೆ ಕೆತ್ತನೆಗೊಳ್ಳುತ್ತವೆ. ಮೂಗಿನ ತುದಿವರೆಗೆ ಎಂಬುದು ಕರ್ಣದ ಲೆಕ್ಕ ಕಾಟ್ಟಾಳನ್ (ಕಾಡಬೇಡ) ಕಿರಾತನ್ (ಕಿರಾತಶಿವ) ಮೊದಲಾದವರಿಗೆ ರೌದ್ರಭಾವವಿರುವ ದುರುಗುಟ್ಟು

ರುಟು ಕಣ್ಣುಗಳಿರುತ್ತವೆ. ' ತಳ್ಳ' (ತಾಯಿ) 'ತಂದ' (ತಂದೆ) ಮುಖಗಳಿಗೆ ಕಣ್ಣುಗಳು ಒಂದಿಷ್ಟು ಬಾಗಿರುತ್ತವೆ. ಮೂಗು ಒಂದಿಷ್ಟು ಹೆಚ್ಚು ಉದ್ದವಿರುತ್ತದೆ. ಗಲ್ಲದಲ್ಲಿ ರೇಖೆಗಳಿರುತ್ತವೆ. ಈ ಮುಖಗಳನ್ನು ಒಂದಿಷ್ಟು ತಗ್ಗಿಸಿ ಕಟ್ಟಿಕೊಳ್ಳುತ್ತಾರೆ ಕೈಯಿಂದ ಗದ್ದ ಹಿಡಿದು ಕೋಲು ಊರಿ ನಡೆಯುವಾಗ ನಾಟಕೀಯತೆ ಏರುತ್ತದೆ ನರಸಿಂಹದ ಭಾವ ಗಂಭೀರ 'ಬಾಲಿ' (ವಾಲಿ) ಗೆ ವೀರರಸ ಪ್ರಧಾನವಾದ ಆಟ ಇರುವುದರಿಂದ ಬಾಯಿ ತೆರೆದೇ ಇರುತ್ತದೆ ಸುಗ್ರೀವನಿಗೆ ಸಿಟ್ಟಿನ ಭಾವ ವ್ಯಕ್ತವಾಗಲು ತುಟಿ ಒಂದುಭಾಗದಲ್ಲಿ ಮೇಲಕ್ಕೆ ಏರಿರುತ್ತದೆ. ಕಿರಾತನ ಗಾಂಭೀರ್ಯವಿರುವುದು ಕೀರೀಟದಲ್ಲಿ ಅದರಲ್ಲಿ ಸರ್ಪಗಳ ಹಂತಿಯಿದೆ. ಅಮೂರ್ತವೂ ವಿಚಿತ್ರವೂ ಆದ ಮುಖವಾಡಗಳ ಕಣ್ಣೂ ಬಾಯಿಯೂ ಮಾಯಿಕವೂ ಜ್ಯಾಮಿತೀಯವೂ ಆದ ಆಕೃತಿಯಲ್ಲಿ ಇರುವಂಥವುಗಳು ಮುಖವಾಡ ಮುಖದಿಂದ ಜಾರಿ ಬೀಳದಿರುವುದಕ್ಕೂ ಬಲಗೊಳ್ಳುವುದಕ್ಕೆ ಬಾಯಿಂದ ಕಚ್ಚಿ ಹಿಡಿಯಲೂ ಸಾದ್ಯವಾಗುವ ಹಾಗೆ ಕೋಲೋಂದು ಇರುತ್ತದೆ.

ಹಂದಿ, ಸಿಂಹ (ನರಸಿಂಹ) ಹುಲಿ, ಆನೆ(ಗಣಪತಿ) ಇತ್ಯಾದಿ ಮುಖ ವಾಡಗಳೂ, 'ತಳ್ಳ' (ತಂದೆ) ಮೊದಲಾದ ಮಾನವಕಥಾಪಾತ್ರಗಳ ಮುಖಗಳೂ, ಶಿವ ಶ್ರೀಕೃಷ್ಣ, ಶ್ರೀ ರಾಮ ಮೊದಲಾದ ಪುರಾಣ ಕಥಾ ಪಾತ್ರಗಳ ಮುಖವಾಡಗಳೂ ಕುಮ್ಮಾಟ್ಟಿಯಲ್ಲಿವೆ. ಹನುಮಂತ, ಸುಗ್ರೀವ, ತಾರೆ ಇತ್ಯಾದಿ ವಾನರ ಮುಖಗಳು ಕಿರಾತನೂ, ಕಾಟ್ಟಾಳನೂ ಅಸುರಮೂರ್ತಿಗಳು, ಹೆಚ್ಚಿನವು ಕಿರೀಟ ಕೆತ್ತಿದ ಮುಖಗಳೇ, ಕೃಷ್ಣನಿಗೆ ನವಿಲಗರಿ ಮುಡಿಕಟ್ಟಳನಿಗೆ ಬಾಗಿದ ಕೊಂಬುಗಳ ಮುಡಿ, ಸಿವನಿಗೆ ನಾಗಗಳ ಹಂತಿ ಇವೆ ಮುಖವಾಡವದೊಳಗೆ ಬೊಬ್ಬೆ ಹಾಕುವಾಗ ಸದ್ದು ಹೆಚ್ಚು ಮೊಳಗಿ ಕೇಳಿಸುತ್ತದೆ.

ಮುಖವಾಡದ ಮೇಲೂ, ಕಾಂಗಿನ ಹಾಳೆಯ ಮೇಲೂ ಬರೆಹಕ್ಕೆ ಎಣ್ಣೆ ಮಸಿ, ಕಾವಿ, ಸುಣ್ಣ, ನೀಲಿ, ಅರಸಿನ ಇಂಥ ಗ್ರಮೀಣ ಬಣ್ಣಗಳನ್ನೆ ಬಲಸುವುದು, ಚಿತ್ತಾರದ ಕಂಬಗಳಿಗೂ, ಕುಸುರಿಕೆಲಸದ ಪೆಟ್ಟಿಗೆಗಳಿಗೂ ಇರುವಂಥೆ ಮರದ ಮೇಲೆ ಬಣ್ಣ ಬರೆಯುವ ಹಳೆಯ ವರ್ಣವಿದ್ಯೆ ಕುಮ್ಮಾಟ್ಟಿಯಲ್ಲೂ ಕಾಣಬಹುದು 'ಚಾಯಿಲ್ಯಂ'(ಣಟಙಚಣಜ ಠಜಿ ಟಜಡಿಛಿಣಡಿಥಿ) ಕೆಲವು ಮನಯೋಲ (ನೀಲ) ಎಣ್ಣೆ ಮಸಿ (ಕಪ್ಪು), ಅತಿತಾರಂ (ಹಳದಿ) ಸುಣ್ಣ (ಬಿಳಿ) ಅತಿತಾರಂ + ನೀಲ (ಹಸುರು) ಅರಗು ಇವು ವರ್ಣದ್ರವ್ಯಗಳು, ಬಣ್ಣ ಬರೆದು ನೆಳಲಿನಲ್ಲಿ ಒಣಗಿಸುವುದು ಆ ಬಳಿಕ ಕವಡೆಯಿಂದ ಒರೆಹಾಕಿ ನಯ ಮಾಡುವುದು ಆ ಬಳಿಕ ಊರವಾರ್ನಿಷು ಹಚ್ಚುವುದು. ಕೃಷ್ಣಿಗೆ ನೀಲ, ಕಾಟ್ಟಾಳನಿಗೆ ಕಪ್ಪು,ವಾಲಿಗೆ ಕಪ್ಪು, ಸುಗ್ರೀವನಿಗೆ ಹಳದಿ, 'ತಳ್ಳ' ಗೆ ಕಾಫಿ ಹೀಗೆ ವಿವಿಧ ಪಾತ್ರಗಳ ಮುಖಗಳ ಪ್ರಧಾನ ಬಣ್ಣಗಳು

ಮುಖವಾಡ ಧರಿಸುವ ನಟನಿಗೆ, ತಾನು ಓಡಾಡಬೇಕಾದ ವಲಯವನ್ನು ನಿರ್ಣಯಿಸಿಕೊಡುವ ಹಾಗೆ ದೃಷ್ಠಿ ಶಿಲ್ಪವನ್ನು ಕೆತ್ತಲಾಗಿರುತ್ತದೆ. ಇದರ ಕಣ್ಣು ಕೊರೆಯುವುದರಲ್ಲಿ ಹಲವು ಆಕೃತಿಗಳನ್ನು ಅಳವಡಿಸಲಾಗುತ್ತದೆ. ಇದೊಂದು ವಿಶಿಷ್ಟ ಶೈಲಿಯ ಕೊರೆತ ಜ್ಯಾಮೀತಿಯವಾದ ಈ ಆಕೃತಿಗಳು ಮುಖವಾಡಕ್ಕೆ ಮಾಯಿಕ ಭಾವನೆಯನ್ನು ಮುಖವಾಡಕ್ಕೆ ನೀಡುತ್ತದೆ. ಈ ದ್ವಾರದ ಮೂಲಕ

ಶ್ರದ್ಧಾಪೂರ್ವಕ ನೋಡುವ ಮೂಲಕ ತನ್ನ ರಂಗದ ವಿನ್ಯಾಸವನ್ನು ಗುರುತಿಸುವ ನಟನ ' ನೋಟ' ಅದನ್ನು ಅಮಾನುಷಿಕ ಭೂತಚ್ಛಾಯೆಯಿರುವುದನ್ನಾಗಿ ಪರಿವರ್ತಿಸುತ್ತದೆ. ಜಪಾನಿನ ' ನೋ' (ಟಿಖ) ನಾಟಕದಲ್ಲೂ ಮುಖವಾಡ ಧರಿಸಿದ ನಟ ರಂಗಕ್ಕೆ ಬಂದರೆ ಬಲಭಾಗದಲ್ಲಿರುವ ದೃಷ್ಟಿ ನೆಡಲಿರುವ ಕಂಬ'ದ ಸ್ಥನ ನೋಡಿಕೊಂಡೇ ತನ್ನ ಏಕಾಗ್ರವಾದ ಚಲನ ವಲಯವನ್ನು ನಿರ್ಣಯಿಸುವುದು.

ಕಣ್ಣಿನ ಪ್ರೂಪದ ಕೆಳಗೆ ದ್ವಾರ ಕೊರೆಯುವ ಇನ್ನೊಂದು ಶಿಲ್ಪ ಶೈಲಿಯುಂಟು ಅರ್ಧ ಚಂದ್ರಾಕೃತಿಯಲ್ಲೂ ಚೌಕಾಕೃತಿಯಲ್ಲೂ ಇರುವ ಈ ದ್ವಾರಗಳು ಭಾವಾವಿಷ್ಕಾರಕ್ಕೆ ಪ್ರಾಧಾನ್ಯವಿರು ಮುಖವಾಡದ ಪ್ರಧಾನ ಪ್ರರೂಪವಾದಕಣ್ಣಿನ ತೀಕ್ಷಣವೆನಿಸುವ ಕಾಣ್ಕೆಯನ್ನು ನೆಲೆನಿಲ್ಲಿಸಲುಸಹಾಯಕವಾಗಿವೆ.

ಅಚಾರಾನುಷ್ಠಾನ ಸಂದರ್ಭದಲ್ಲಿ ಇದ್ದ ಕಾಲನ್ನು ಕಿತ್ತು ಘೋಷಯತ್ರೆಯ ಮತ್ತು ಜನಪ್ರಿಯ ಸಂಸ್ಕೃತಿಯ ಇತರ ರೂಪಗಳಿಗೆ ಪರಿವರ್ತನೆಗೊಳ್ಳುವ ಒಂದು ರೀತಿ ಇಂದಿನ 'ಕುಮ್ಮಾಟ್ಟಿ' ಗಳಲ್ಲಿ ಗೋಚರಿಸುತ್ತಿದೆ. ಹೊಸ ಮುಖವಡಗಳಲ್ಲಿ ಈ ಸ್ಥಳೀಕತಾಕರಣದ ಪ್ರವೃತ್ತಿ ಇದೆ.

ಮುಖವಾಡ: ಕೇರಳೀಐ ಕಲೆಗಳಲ್ಲಿ

ಕೇರಳದ ಗ್ರಾಮೀಣವೂ ಶಾಸ್ತ್ರೀಯವೂ ಆದ ಹೆಚ್ಚಿನ ದೃಶ್ಯಗಳಲ್ಲಿ ಮುಖವಾಡವೋ, ಸಮಾನದವಾದ ಮುಖವರ್ಣಿಕೆಯೋ ಪ್ರಚಲಿತವಾಗಿವೆ. ವಯನಾಡಿನ 'ವಳ್ಳಿಯೂರ್ ಕಾವು' ಎಂಬಲ್ಲೂ ಇನ್ನಿತರ ಬುಡಕಟ್ಟು ಜನರು ಅನುಷ್ಠಾನಗಳಲ್ಲೂ ಅನೇಕ ಮೃಗಾನುಕರಣ ನೃತ್ತಗಳಿವೆ 'ಅಡಿಯಚಿ ವರವು" (ವರವು ಆಗಮನ)ದಲ್ಲಿ ಹಲವು ಮುಖವಾಡ ವೇಷಗಳೂ ರಂಗಕ್ಕೆ ಬರುತ್ತವೆ. ಉತ್ತರ ಕೇರಳದ ಮಲಯರು ಕನ್ಯಾಮಾದ ಕೊಯ್ಲಿನ ಬಳಿಕ ಪ್ರದರ್ಶಿಸುವ 'ಕೋದಾಮ್ಮೂರಿ' ಫಲವಂತಿಕೆಯ ಪ್ರತೀಕವಾದ ಗೋದಾವರಿ ಪಶುವನ್ನು ಪ್ರತಿ ನಿಧೀಕರಿಸುವ ಕೋಲವೂ, 'ಗುರುಕ್ಕಳ್' ಪನಿಯನ್‌ಮಾರ್' ಇತ್ಯಾದಿ ಮುಖವಾಡ ವೇಷಗಳೂ ಇವೆ, ಕುಟ್ಟಿ ಚ್ಚಾತ್ತನ್, ಕರಿಂಚಾಮುಂಡಿ, ಗುಳಿಕನ್, ಪೊಟ್ಟನ್ ಮೊದಲಾದಿಪ್ಪತ್ತರಷ್ಟು ತೆಯ್ಯಂ ಕೋಲಗಳು ಮುಖವಾಡ ಧರಿಸುವವುಗಳಾಗಿವೆ. 'ತಿಜ' ದಲ್ಲಿರುವ ಪ್ರಾಚೀನ ಶೈಲಿಯ 'ಪೂತಂ' ಮುಖವಾಡಗಳು ಗ್ರಮೀಣ ಮೂರ್ತಿಗಳನ್ನು ಅವಿಷ್ಕರಿಸುತ್ತವೆ. ' ವಳ್ಳುವನಾಡಿ' ನಲ್ಲಿ ಮತ್ತು ಪರಿಸರಗಳಲ್ಲಿರುವ 'ವೇಲ'ಗಳಲ್ಲಿ ಆಟದ ರಂಗ ನಿರ್ಮಿಸುವವುಗಳು ;' ಪೂತನ್' ಮತ್ತು 'ದಾರಿಗ'ನ ಮುಖವಾಡ ವೇಷಗಳು 'ತಿರುವಾದಿರ' ಹಬ್ಬದಲ್ಲಿ ಆಡುವ 'ಮುತ್ತಿ'ಯೂ 'ಚೋಜಿ'ಯೂ ಮನೋಧರ್ಮಾಭಿನಯವುಳ್ಳ ಗ್ರಾಮೀಣ ಮುಖವಾಡದ ಆಟವಾಗಿದೆ. ಇದರಲ್ಲಿ ಕಾಲನ್, ಮುತ್ತಿ, ಚೋಜಿ ಇವರಿಗೆ ಹಾಳೆಯಿಂದ ಮಾಡಿದ ಮುಖವಾಡಗಳಿರುತ್ತವೆ. ತೆಂಕಣ ತಿರುವಿದಾಂಕೋಡಿನ 'ಆಚಿಡಿ ಪಂಡಾರಂ' ಗಳು ಊರು ಸುತ್ತಿ ಪ್ರದಶಿಸುವ ಮುಖವಾಡದ ಆಟವೆ ' ಹನುಮಾನ್ ಪಂಡಾರಂ ಪಡಯಣಿಯಲ್ಲೂ ಕಾಲನ್ ಕೋಲಂ, ಭೈರವಿ ಕೋಲಂ ಮೊದಲಾದ

ಹಾಳೆಯಲ್ಲಿ ಬರೆದ ಮುಖವಾಡ ವೇಗಳ ಮರೆತವಿದೆ ಪಕ್ಷಿಯ ವೇಷಧರಿಸಿ ಮಾಡುವ ನೃತ್ತವೆ ಗರುಡನ್ ಕೂತ್ತಿನಲ್ಲಿ ಇರುವುದು ನಂಬೂತಿರಿಗಳು ಉಪನಯನವನ್ನು ಸಂಬಂಧಿಸಿ ನಡೆಸುತ್ತಿದ್ದ ಸ' ಸಂಘಕ್ಕಳಿ' ಯಲ್ಲಿ ಇಟ್ಟಿಕ್ಕಂಡಪ್ಪ ಕೈಮಳ್ ಮತ್ತು ಮೂರ್ತಿ ಎಂಬ ಪಾತ್ರಗಳೂ ಮುಖವಾಡ ಧರಿಸಲು ಹಾಸ್ಯವನ್ನು ಅಭಿನಯಿಸುತ್ತವೆ. ಕೃಷ್ಣಗೀತಿಯ ರಂಗಾವಿಷ್ಕಾರವಾದ 'ಕೃಷ್ಣನಾಟ್ಟಂ' ನಲ್ಲೂ ಶಿಲ್ಪ ಸೌಂದರ್ಯಯುಕ್ತ ಮುಖವಾಡಗಳನ್ನು ಅಭಿನಯದಲ್ಲಿ ಬಳಸುತ್ತಾರೆ ' ರಾಮನಾಟ್ಟಂ' ಕಾಲದಲ್ಲಿ (ಇದೇ ಈಗಿನ ಕಥ ಕಳಿಯ ಮೂಲ ರಂಗ ಪ್ರಕಾರ) ಹಾಳೆಯಿಂದ ಮೂಡಿದ ಮುಖವಾಡದ ಬಳಕೆಯುತ್ತೆಂದು ನಂಬಲಾಗುತ್ತಿದೆ. ಕಥಕಳಿಯಲ್ಲಿ ಇವತ್ತೂ, ಗೂಳಿ, ಆಡು, ಅಂಗದ, ಭೀರು ಮೊದಲಾದ ಕಥಾ ಪಾತ್ರಗಳು ಮುಖವಾಡವನ್ನು ಬಳಸುತ್ತವೆ. ಕಥಕಳಿಯ ಶಿಲ್ಪ ಸೌಂದರ್ಯದ ಮುಖವಣಿಕೆಗಳನ್ನು "ಜೀವನಂತ ಮುಖವಾಡ" ಗಳೆಂದು ವಿಶ್ಲೇಷಿಸುವುದುಂಟು.

ಈ ಅನುಷ್ಠಾನ ದೃಶ್ಯಕಲೆಗಳಿಗೆ ರಂಗ ಸಂಬಂಧವಾದ ಹಲವು ದರ್ಮಗಳಿವೆ ಅಭ್ಯಾಸಕ್ರಮ, ರಂಗ, ಆರಾಧಕರ, ಸಹಭಾಗ, ನೃತ್ತ ಸಂವಿಧಾನ, ವಾಚಿಕಾಭಿನಯ, ರಸ–ಭಾವ, ಅಭಿವ್ಯಕ್ತಿ ಇವುಗಳನ್ನು ಸಂಬಂಧಿಸಿದ ರಂಗಕಲಾ ತತ್ವಳು ಮುಖವಾಡ ರಂಗದಲ್ಲಿದೆ. ಅನುಷ್ಠಾನ ಸಂದರ್ಭಗಳಲ್ಲಿ ಮುಖವಾಡ ಉಪಯೋಗಿಸುವುದಕ್ಕೆ ಭಾವೋತ್ತೇಜಕವಾಗಿ ಅಭಿನಯಸುವದಕ್ಕಿರುವ ತರಬೇಕಿ ಹೆಚ್ಚಿನ ದೃಶ್ಯಕಲೆಗಳಲ್ಲಿವೆ. ತಲೆ ಮತ್ತು ಶರೀರಾವಯವಗಳು ಅಭಿನಯದಲ್ಲಿ ಮೇಳಯಿಸಲು ಕಥಾ ಪಾತ್ರದ – ದೇವತೆಯ ಸ್ವರೂಪ ಅವಿಷ್ಕರಸುವುದು ಹೇಗೆ ಎಂದು ರಂಗ ಪ್ರವೇಶದ ಕಾಲದಲ್ಲೇ ಗಮನವಿಟ್ಟು ನೋಡಿ, ಕೇಳಿ ಕಲಿಯಬೇಕಾಗಿದೆ ' ಕೃಷ್ಣಾನಾಟ್ಟಂ' ನಲ್ಲಿರುವ ದೊಡ್ಡ ಮುಖವಾಡಗಳನ್ನು ಸಮತೋಲನದಲ್ಲಿ ನಿಯಂತ್ರಿಸಿ ಆಡುವುದಕ್ಕೆ ಕೆಲವು ಅಭ್ಯಾಸಗಳಿವೆ. ಆಟದ ಅಂಗಣವನ್ನು ಪುರಾವೃತ್ತ ಕೇಂದ್ರವಗಿ ರೂಪಾಂತರಗೊಳಿಸುವ ಮತ್ತು ಆಶಯವಿನಿಯಮಯ ಉಆಧಿಯನ್ನಾಗಿ ಮಾಡುವ ಪರಿಸರಾಭಿನಯ ತತ್ವ ಮುಖವಾಡ ರಂಗ ಪ್ರದರ್ಶನದಲ್ಲಿ ಅಂತರ್ಭಾವ ಹೊಂದಿದೆ 'ಕಾವು' ಅನ್ನು ಬೀದಿಯನ್ನು ಮನೆಯಂಗಳವನ್ನು ಅನುಷ್ಠಾನದ ಅತೀಂದ್ರಿಯವಾದ ಅರ್ಥ ಒಳಗೊಳ್ಳುವ ರಂಗವನ್ನಾಗಿ ಪರಿವರ್ತಿಸುವುದು ಇದು. ಕೇರಳೀಯ ಗ್ರಾಮೀಣ ರಂಗದ ತನ್ನತನವನ್ನೊಳಗೊಂಡ ಈ ರೂಪ ಶಿಲ್ಪ ಪಡಯಣಿ, ತೆಯ್ಯಂ, ಪೂತನ್ ಕಳಿ ಇತ್ಯಾದಿಗಳಲ್ಲೆಲ್ಲ ಕಾಣಸಿಗುತ್ತದೆ 'ಪೂತನೂ"ತಿಜ' ಯೂ ಹೆಜ್ಜೆಗಾರಿಕೆಯ ಮೂಲಕ ರಂಗವನ್ನು ದೊಡ್ಡದೂ ಮಾಡುತ್ತಾರೆ ಸಣ್ಣದೂ ಮಾಡುತ್ತಾರೆ. 'ವೇಲ' ಎಂಬ ಮನುಷ್ಯವಂಶೋತ್ಸವದ ಈ ಉದ್ಭವಾದ ಆಟಗಳಿಗೆ ಹೆಚ್ಚಿನ ಶೋಭೆ ಕೂಡಿಸುವಂಥದು ಮುಖವಾಡಗಳು ನೃತ್ತ ಪ್ರಧಾನವಾದ 'ಕೃಷ್ಣನಾಟ್ಟಂ'ನ ತೆರೆದ ರಂಗದಲ್ಲಿ ತುಂಬುವಂಥವು ಮುಖವಾಡಗಳ ವೇಷಗಳ ದೃಶ್ಯ ಆಟದ ಅಂಗಳವನ್ನು ಜೀವಂತಗೊಳಿಸುವ ಪ್ರೇಕ್ಷಕ ಸಹಭಾಗ ಮುಖವಾಡ ರಂಗಕಲೆಗಳ ಆತ್ಮಸ್ವರೂಪವಾಗಿದೆ. ತೆಯ್ಯಂನಲ್ಲಿ ಪನಿಯನ್ ಅನ್ನು ಬರೆಹಕ್ಕೆ ಕುಳ್ಳೀರಿಸುವುದು, ಕೃಷ್ಣನಾಟ್ಟಂನ ಲೋದರ್ಮಿಯಾದ ಅಭಿನಯ ದೃಶ್ಯಗಳೂ ಈ ಬಗೆಯವುಗಳು

ಅಂಗೀಕಾಭಿನಯದ ಮೂಲಕವೆ ಮುಖವಾಡಕ್ಕೆ ಭಾವ ಚೈತನ್ಯ ಸಿಗುವುದು ಆನೆನಟನೆ, ನವಿಲು, ನಟನೆ ಎಂಬ ನೃತ್ತಗಳು ತೆಯ್ಯಂನಲ್ಲು, ಚಿಲಂಬಾಟ್ಟಂ (ಗಗ್ಗರದಾಟ), ನವಿಲ ಆಟ ಎಂಬ ಹೆಜ್ಜೆಗಾರಿಕೆಗಳು ಪೂತನ್ 'ಕಳಿಯಲ್ಲೂ ಇವೆ. ಶಬ್ದವಿಷ್ಕರಣದ ಶಿಲ್ಪ ವಿದ್ಯಯೂ ಮುಖವಾಡದಲ್ಲಿ ಇದೆ ಮುಖವಾಡದಲ್ಲಿ ಪ್ರಾಧಾನ್ಯ ರಸಾಭಿನಯಕ್ಕಲ್ಲ, ಭಾವಾಭಿನಯಕ್ಕೆ ಭಾವ ಪ್ರಧಾನವಾದವುಗಳಿಗೆ ಮುಖವಾಡವು, ಅಭಿನಯ ಪ್ರಧಾನವಾದವುಗಳಿಗೆ ಮುಖವಣಿಕತೆಯೂ ಬಳಕೆ ಎಂಬುದು 'ಕೃಷ್ಣನಾಟ್ಟಂ' ನ ತತ್ವವಾಗಿದೆ.

ಇಂದು ಪ್ರಚಾರದಲ್ಲಿರುವ ಮುಖವಾಡಗಳನ್ನು ಹಲವು ಬಗೆಗಳಲ್ಲಿ ವರ್ಗೀಕರಿಸಬಹುದು. ಕಥಾ ಪಾತ್ರಗಳನ್ನು ಆದರಿಸಿ ವಿಭಜಿಸಿದರೆ– 'ಕರಡಿಕ್ಕಳಿ' (ಕರಡಿಯಾಟ), ಕೋದಾಮ್ಮೂರಿ', 'ಅಪ್ಪಕ್ಕಾಳಿ', 'ನರಿಕ್ಕಳಿ' (ಹುಲಿ ಆಟ) ತೆಯ್ಯಂನ 'ಪನ್ನಿ ಮುಖಂ' (ವಲಾಹ ಮುಖವಾಡ), ಕಥಕಳಿಯ 'ಕಾಳ' (ಗೂಳಿ) 'ಆಡು' ಇವು ಜಂತು ಮುಖವಾಡಗಳು, ನವಿಲಿನಾಟ, 'ಗರುಡನ್ ತೂಕ್ಕಂ' 'ಪಡಯಣಿ'ಯ 'ಪಕ್ಷಿಕೋಲಂ', ಕೃಷ್ಣನಾಟ್ಟಂ'ನ ಬಕಾಸುರ ಇವೆಲ್ಲ ಪಕ್ಷಿರೂಪಗಳು ತೆಯ್ಯಂನ 'ಪರ್ನಿಯನ್' 'ಗುಳಿಕನ್', 'ಪೋಟ್ಟನ್', 'ಕುಜಿತ್ತಿ' ಇವು ಗ್ರಾಮಿಣ ದೇವತೆಗಳೂ, ರಕ್ತ ಚಾಮುಂಡಿ' ಅಸುರ ದೇವತೆಯೂ 'ಕರಿಂಚಾಮುಂಡಿ' ಕಾಡು ಮೂರ್ತಿಯೂ ಅಗಿವೆ. 'ಕುಜಿತ್ತಿ' ಬಯಲು ದೇವತೆಯೂ, ವಿಷ್ಣುಮೂರ್ತಿ (ನರಸಿಂಹ ಸಂಕಲ್ಪ) ವೈಷ್ಣವ ದೇವತೆಯೂ ಆಗಿದೆ. ಗ್ರಾಮೀಣ ಪುರಾವೃತ್ತಗಳಲ್ಲಿ ಪುಜ್ನಿಸುವಂಥವುಗಳು 'ಮಣ್ಣಾನ್ ಪೂತವೂ 'ಪಜೆಯನ್ ಕಳಿ' ಯ ದಾರಿಗದೂ, ಪಡೆಯಣೆ ಕೋಲಗಳೂ 'ಕೃಷ್ಣನಾಟ್ಟಂ' ನ ಮತ್ತು 'ಕುಮ್ಮಾಟ್ಟಿ;ಯ ಹಲವು ಪಾತ್ರಗಳು ಇತಿಹಾಸ ಕಥಾ ಪಾತ್ರಗಳಾಗಿವೆ ಮುಖವಾಡದ ಹಾಸ್ಯ ಕಥಾ ಪಾತ್ರಗಳು ಚೋಜಿ, ಸಂಘಕ್ಕಳಿ ತೆಯ್ಯಂ ಎಂಬವುಗಳಲ್ಲಿವೆ. 'ಕುಮ್ಮಾಟ್ಟಿ'ಯ 'ತಂದೆ'ಯೂ 'ತಳ್ಳೆ'ಯೂ, 'ಚೋಜಿ'ಯ 'ಮೂರ್ತಿ'ಯೂ ಮನುಷ್ಯ ಕಥಾಪಾತ್ರಗಳಾಗಿವೆ.

ಪ್ರದರ್ಶನದಲ್ಲಿ ಮುಖವಾಡ ಬಲಸುವುದನ್ನು ಆಧರಿಸಿಯೂ ವರ್ಗೀಕರಿಸಬಹುದು– ಅನುಷ್ಠಾನ ಪ್ರಕ್ರಿಯೆಯ ವಿಶಿಷ್ಟ ಮೂಹೂರ್ತದಲ್ಲಿ ನಾಟಕೀಯವಗಿ ಮುಖವಾಡವನ್ನು 'ವಿಷ್ಣುಮೂರ್ತಿ' ತೆಯ್ಯಂ ಮತ್ತು ಕುಂಡೋರ್ ಚಾಮುಂಡಿ'ತೆಯ್ಯಂ ಕೃಷ್ಣನಾಟ್ಟಂ' ನಲ್ಲಿ (ಅವತಾರಿ ಕಥೆಯಲ್ಲಿ ಪೂತನೆ ಸುಂದರ ರೂಪಿನಲ್ಲಿ ಬರುವಾಗ ಮುಖವಾಡ ಇಲ್ಲ

ರೂಪ ಸಿಲ್ಪವನ್ನು ಆದರಿಸಿ ಇವುಗಳನ್ನು ಶಿರೋಕವಚಮುಖಗಳು, ಪೂರ್ಣಮುಖವಾಡಗಳು ತಲೆಯ ಮೆಲುಗಡೆ ಧರಿಸುವಂಥವು, ಉದ್ದನೆಯ ಮುಡಿ ಉಳ್ಳದ್ದು, ಬಹುಸಂಖ್ಯೆ ಮುಖವುಳ್ಳವುಗಳು, ಅರೆ ಮುಖವಾಡಗಳು ಎಂದು ವರ್ಗೀಕರಿಸಬಹುದು' ಕೃಷ್ಣನಾಟ್ಟಂ' ನ ಬ್ರಹ್ಮ, ಮುರಾಸುರ ಶಿರ ಪೂರ್ತಿ ಮುಚ್ಚುವ ಶಿಲ್ಪ ಮುಖವಾಡಗಳಾಗಿವೆ. ಇದರಲ್ಲಿ ಬ್ರಹ್ಮನಿಗೆ ನಾಲ್ಕು ಮುಖವಾಡಗಳು ತೆಯ್ಯಂ,ಕುಮ್ಮಟ್ಟಿ, ಕೃಷ್ಣನಾಟ್ಟಂಗಳಲ್ಲಿ ಇವೆ ಕೃಷ್ಣನಾಟ್ಟಂನ 'ಬಕಪಕ್ಷಿ' (ಬಕಾಸುರ) ಮುಖದ ಮೇಲೆ ಕುಳ್ಳಿರಿಸುವ ಮುಖವಾಡ 'ಪೂತ'ದ ಮುಖವಾಡವನ್ನು ಹಿಂದೆ ನಿಲ್ಲುವವರು ಹಿಡಿದು ಆದರಿಸುವಂಥದು ಹಲವು ಮುಖಗಳನ್ನು ಒಂದರಲ್ಲಿ ಹೆಣೆದು ಕೂರಿಸಿ ಮಾಡುವ ಮುಖವಾಡ 'ಪಡಯಣಿ' ಯ

ಪ್ರತ್ಯೇಕತೆ, ಕೆಲವು 'ಗುಳಿಕನ್'ಗೆ ತೆಂಗಿನ ಎಳಗರಿಯಿಂದ ಮಾಡಿದ ಎತ್ತರದ ಮುಡಿಯೂ ಇರುತ್ತದೆ. ಕೃಷ್ಣನಾಟ್ಟಂನ ಗರುಡನ ಕೊಕ್ಕುಗಳನ್ನು ಚಲನಗೊಳಿಸ ಬರುತ್ತದೆ. 'ಕೂಡಿಯಾಟ್ಟಂ'ನ ಜಟಾಯು ಕೊಕ್ಕನ್ನು ಅಲುಗಿಸಿ ಶ್ಲೋಕ ಹೇಳುತ್ತದೆ ಸಂಕೀರ್ಣವೂ ಶೈಲೀಕೃತವೂ ಆದ ಮುಖವರ್ಣಿಕೆಯುಳ್ಳದ್ದು ಪೊಟ್ಟನ್, ಗುಳಿಕನ್, ಮೊದಲಾದವುಗಳ ಹಾಳೆ ಮುಖವಾಡಗಳು

ಮುಖವಾಡಗಳಿಗೆ ಜ್ಯಾಮಿತೀಯವಾದ ಹಲವು ಆಕೃತಿಗಳೂ ಕಾಣಸಿಗುತ್ತವೆ. 'ಕುಮ್ಮಾಟ್ಟಿ'ಯ ಹಾಳಯೆ ಮುಖವಾಡಗಳು ಅಂಡಾಕೃತಿಯಲ್ಲಿ ಇರುವವುಗಳು ಕುಮ್ಮಾಟ್ಟಿ, ಕೃಷ್ಣನಾಟ್ಟಂ ಇವುಗಳಲ್ಲಿರುವ ಮರದ ಮುಖವಾಗಳದೂ ಆಕೃತಿ ಇದೇ ಪೊಟ್ಟನ್, ಪನಿಯನ್ ಗುಳಿಕನ್ ತೆಯ್ಯಂನ 'ಮುಖಪ್ಪಾಳ (ಹಾಳೆಯ ಮುಖವಾಡ) ಅಗಲವಾದ ದೀರ್ಘವೃತ್ತದೊಂದಿಗೆ ಇರುವಂಥದು ಕುಮ್ಮಾಟ್ಟಿಯ ತಂದೆ, ತಳ್ಳ, ಕೆಲವು ಕಾಟ್ಟಳ ಮುಖಗಳು ಇವುಗಳಿಗೆ ಮಾನವ ಹೃದಯದ ಆಕೃತಿ ಇದೆ ಆಫ್ರೀಕದ ಮುಖವಾಡಗಳ ಬಗೆಗೆ

ಅಧ್ಯಯನ ನಡೆಸಿದ ರಾಜ್ ತಾದೇ ಅವರೆನ್ನುವಂತೆ ಸಾಮಾನ್ಯವಾಗಿ ಮುಖವಾಡಗಳ ಸ್ವರೂಪ ಆಮೆಯ ಚಿಪ್ಪಿನಂತೆ ಹೊರಕ್ಕೆ ಉಬ್ಬಿಕೊಂಡಿರುವುಗಳು ಸ್ಥಳೀಯ ಅವಿಷ್ಕಾರ ಶೈಲಿಗಳೂ ಈ ಬಗೆ ಸಿಲ್ಪ ರೂಗಳಲ್ಲಿ ಕಾಣಸಿಗುತ್ತವೆ. ಪ್ರಕೃತಿಯ ಅನುಕರಣ ಶೈಲಿಯಲ್ಲಿ ಇರುವಂಥವು ತಳ್ಳ, ತಂದೆ ಮುಖಗಳು, ಕೃಷ್ಣನಾಟ್ಟಂನ ಬ್ರಹ್ಮ ಅಮಾನುಷಿಕ ಪಾತ್ರವದರೂ ಮುಖಗಳ ರಚನಾಶೈಲಿ ಸುಂದರ ಮಾನವ ಮುಖಗಳ ಯಥಾ ಪ್ರತಿಗಳೇ ಆಗಿದೆ. ತೆಯ್ಯಂನ ಹಂದಿ ಮುಖವಾಡವೂ ಕೆಲಕುಮ್ಮಾಟ್ಟಿ ಮುಖವಾಡಗಳೂ ಅಮೂರ್ತವೂ ಶೈಲೀಕೃತವೂ ಆಗಿವೆ. ಶಿಲ್ಪ ರಚನೆಯನ್ನು ಆಧರಿಸಿ ಮುಖವಾಡಗಳನ್ನು ಎರಡು ಅಯಾಮ, ಮೂರು ಆಯಾಮ, ಶಿಲ್ಪಪರ ಎಂದು ವರ್ಗೀಕರಿಸಬರುತ್ತದೆ. ಪಟ್ಟನ್, ಪನಿಯ್, ಗುಳಿಕನ್, ಇತ್ಯಾದಿ ತೆಯ್ಯಂ ಮುಖಗಳು, ಕುಮ್ಮಾಟ್ಟಿಯ ಮತ್ತು ಪಡೆಯಣಿಯ ಹಾಳೆಯ ಮುಖವಾಡಗಳು ಚಿತ್ರದ ಸ್ವಭಾವವುಳ್ಳ ಎರಡು ಆಯಮಾಗಳ ರಚನೆಗಳು ಎತ್ತಿ ಹಿಡಿದ ಶೈಲಿಯ ದ್ವಿಮಾನ ಮುಖವದ ಎಕ್ಷಿಕೋಳ, ಕಾಲನ್ ಕೋಲ ಇತ್ಯಾದಿ ಆದರೆ ಕೇರಳದಲ್ಲಿ ಹೆಚ್ಚಾಗಿರುವುದು. ತ್ರೀಮಾನವಾಗಿ ಕೊರೆದು ತಯಾರಿಸಿದ ಮುಖವಾಡಗಳೇ ಕೃಷ್ಣಪಟ್ಟಂ ಮುಖವಾಡಗಳು, ಕುಮ್ಮಟ್ಟಿಯ ಕಿರಾತ ಮುಖಗಳಿಗೆ ವಿಶದನಾದ ಶಿಲ್ಪದ ಕೆತ್ತನೆ ಕೆಲಸಗಳಿವೆ.

ಮುಖವಾಡ ಶಿಲ್ಪಕ್ಕೆ ಶಿಲ್ಪಿಗಳೂ, ಗ್ರಾಮೀಣ ಕೂಕಾತರೂ, ಹಲವುಕಚ್ಚಾಮಾಲುಗಳೂ ಒಂದು ಸೇರುವುದುಮುಖ್ಯ ಹಾಳೆಕಂಚು, ಬೆಳ್ಳಿಮರ ಇವುಗಳಿಂದ ತೆಯ್ಯಂತನ ಮುಖವಾಡಗಳಾಗುತ್ತವೆ. ಹೊಂಗಾರಕ ಹಾಲೆ, ಅಂಬಟೆ, ಕುಂಬುರು, ಬಕ್ಕೆ ಹಲಸು ಇವೇ ಸಾಮಾನ್ಯವಾಗಿ ಮುಖವಾಡ ರಚನೆಗೊಳ್ಳಲು ಆಯುವ ಮರಗಳು ಕೃಷ್ಣನಟ್ಟಂ' ಮುಖವಾಡಗಳು ತಯಾರಾಗುವುದು ಕುಂಬುರು ಮರದಲ್ಲೇ ಕಂಚಿನ ಎರಕದಿಂದ ತಯಾರಾಗುವುದು ಭಾರವಾದ ಮುಖವಾಡಗಳು 'ತೆಯ್ಯಂ'ನ ಪ್ರತ್ಯೇಕತೆ

‘ಸಂಘಕ್ಕಳಿ’ಯ ಎರಡು ಮುಖವಾಡಗಳೂಬಟ್ಟೆಯನ್ನು ಹೊಲಿದು ತಯಾರಿಸುವಂಥದು ಇದರಲ್ಲಿ ಅನೇಕ ಅಲಂಕಾರ ವಸ್ತುಗಳನ್ನು ಆಟಿಕೆವಸ್ತು ತಯಾರಕರ ಹಸ್ತ ಕೌಸಲ್ಯವನ್ನು ಬಳಸಿಪಡೆಯಲಾಗುತ್ತದೆ.

ಮುಖವಾಡಗಳು ವಿವಿಧ ಸಂಸ್ಕೃತಿಗಳಲ್ಲಿ

ಆದಿಮನುಷ್ಯನ ಅತ್ಯಂತ ಸಫಲ ದೃಶ್ಯಸಾಕ್ಷಾತ್ಕಾರದ ಇಲ್ಲವೆ ಮುಖವಾಡ ಅದು ವಿಶ್ವದ ಎಲ್ಲ ಪ್ರಾಚೀಣ ಸಂಸ್ಕೃತಿಗಳಲ್ಲೂ ಕಾಣಸಿಗುತ್ತದೆ.

ಮುಖವಾಡಗಳ ಬಣ್ಣಗಳು ಚಿಹ್ನೆಗಳು ಮಾಂತ್ರಿಕಾನುಷ್ಠಾನಗಳನ್ನೂ ಪುರಾವೃತ್ತಗಳನ್ನೂ ಪ್ರತಿನಿಧಿಸಕರಿಸುತ್ತವೆ. ತನ್ನನ್ನು ಮರೆ ಮಾಡಿಕೊಂಡು ರೂಪಾಂತರೀಕರಣ ಚಡಂಗಗಳಲ್ಲಿ ಆವೇಶದಿಂದ ಒಲೆದು ಆಡುವಲ್ಲಿ ಕೋಲಕಟ್ಟುವವನ ಸಹಾಯಕ್ಕೆ ಬರುವ ಮಾಂತ್ರಿಕೋಪಕರಣವಾಗಿತ್ತು ಅದು

ಪ್ರಾಚೀನ ಗ್ರೀಕ್, ರೋಮನ್ ನಾಟಕಗಳು, ಚೀನಾದ ಪೀಕಿಂಗ್ ಒಪೇರಾ, ಜಪಾನಿನ ನೋ, ಕಬೂಕಿ, ಜಾವಾದ ವಯಾಜ್ ಟೋವೆಂಜ್ ನೈಜೀರಿಯಾದ ಎನ್‌ಗುನ್ ಗುನ್, ಇಟಲಿಯ ಕೊಮೆಡಿಯ ದೆಲ್ ಅರ್ಟೆ, ಟಿಬೇಟಿನ ಬೌದ್ದಮತ ಅನುಷ್ಠಾನಗಳರ ಇತ್ಯಾದಿ ವಿಶ್ವದ ಪ್ರಧಾನವಾದ ಮುಖವಾಡ ಬಳಕೆಯ ರಂಗಪ್ರದರ್ಶನ ಸಂದರ್ಭಗಳು

ಪ್ರಾಕೃತ ಅನುಷ್ಠಾನಗಳ ಭಾಗವಾದ ಮುಖವಾಡಗಳ ಪದ್ದತಿ ತಿಹಾಸ ಪೂರ್ವ ಕಾಲದಷ್ಟು ಪ್ರಾಚೀನಕ್ಕೆ ಹೋಗುತ್ತದೆ. ಮೃಗವೇಷ ಧರಿಸಿ ನೃತ್ಯವಾಡುವ ರೂಪಗಳನ್ನು ಶಿಲಾಯುಗ ಕಾಲದ ಗುಹಾಚಿತ್ರಗಳಲ್ಲಿ ಬರೆಯಲಾಗಿದೆ ಆಫ್ರಿಕದ ತಪ್ಪಲ್ಲಿಯಲ್ಲಿ ಫಾನ್ಸಿನ ಟ್ರಾಯಿನ್ ಫ್ರೇರಸ್ಸಿನಲ್ಲೂ ಮುಖವಾಡ ಹೊತ್ತ ವರ್ತಕರ ಚಿತ್ರಗಳಿವೆ. ಇವು ಬೇಟೆ ಸಂಬಂಧವಾದ ಮಂತ್ರವದದ ಭಾಗವಾಗಿತ್ತೆಂದೂ ತಮ್ಮ ಬೇಟೆಯನ್ನು ಅನುಕರಿಸುವ ಮೂಲಕ ಮೃಗಗಳನ್ನು ಹತೋಟಿಗೆ ತಂದಿದ್ದವೆಂದೂ ಕಲಾಚರಿತ್ರಕಾರ ಅರ್ನಲ್ಡ್ ಹೂಸರ್ ಹೇಳುತ್ತಾರೆ ಕೇರಳದ ವಯನಾಡಿನ ಅಂಬುರುತ್ತಿ ಬೆಟ್ಟದಲ್ಲಿ ಮುಖವಾಡ ಧರಿಸಿದ ಇಪ್ಪತ್ತರಷ್ಟು ನರ್ತಕರ ಚಿತ್ರಗಳನ್ನು ಕೆತ್ತಲಾಗಿದೆ. ಶವ ಶಂಸ್ಕಾರ ವಿಧಿಗಳಲ್ಲಿ ಅನೆಮಣ್ಣಿನ ಮುಖವಾಡಗಳು ಚೀನಾದಲ್ಲೂ ಆಫ್ರೀಕದಲ್ಲೂ ಬಳಕೆಯಲ್ಲಿ ಇದ್ದವು ಈಚೆಗೆ ಗ್ರೀಸಿನ ಲಿಪರಿಯಲ್ಲಿ ಗ್ರೀಕ್ ನಾಟಕಗಳ ಅನೆ ಮಣ್ಣಿನ ಮುಖವಾಡಗಳು ಉತ್ಕನನದಲ್ಲಿ ಮೇಲೆದ್ದಿವೆ. ಪ್ರಾಚೀನ ಫಲವಂತಿಕೆ ಅನುಷ್ಠಾನಗಳು, ಗತಿಸಿದವರ ಆತ್ಮನ ವಿಧಿಗಳು, ರಂಗ ಪ್ರವೇಶ ಚಡಂಗಗಳು ಇತ್ಯಾದಿಗಳಲ್ಲಿ ಅವಶ್ಯಕ ಘಟಕವಾಗಿದ್ದವು ಮುಖವಾಡಗಳು ಪ್ರಾಚೀಣ ಗ್ರೀಸಿನ ಡಯೋನಿಷ್ಯ ಉತ್ಸವ, ಬೋರ್ನಿಯೋದ ದಯಕ್ ಜನಾಂಗದ ನೃತ್ತ, ಆಫ್ರೀಕದ ಬಾಂಬರ ಕೃಷಿಕರ ಜಿಂಕೆ ಆಟ ಇವೆಲ್ಲ ಮುಖವಾಡ ಕಟ್ಟಿಕೊಂಡು ನಡೆಸುತ್ತಿದ್ದ ಫಲವಂತಿಕೆ ಆಚರಣೆಯಾಗಿದ್ದವು, ಕ್ಷೇತ್ರಚ್ಛಾಯೆಯಿರುವ ಛಾಯಾ ಮುಖವಾಡಗಳನ್ನು ಕಿಡ್ ಇಂಡಿಯನ್ಸ್ ನಾಡ ಮುಖ್ಯಸ್ಥರೂ, ಎಸ್ಕಿಮೋ ನರ್ತಕರೂ ಉಪಯೋಗಿಸುತ್ತಾರೆ. ಪೂರ್ವಿಕರು ಮುಖವಾಡದ ಮೂಲಕವೆ ಬುಡಕಟ್ಟಿನ ಸದಸ್ಯರಿಗೆ ಆಜ್ಞೆಗಳನ್ನು ಮಾಡುತ್ತಿದ್ದುದು.

ಒಂದು ಬುಡಕಟ್ಟಿನ ಮಕ್ಕಳು ಬಾಲ್ಯದಿಂದ ಕೌರ್ಯಕ್ಕೆ ಪ್ರವೇಶಿಸುವಾಗ ನಡೆಯುವ ರಂಗ ಪ್ರವೇಶಗಳಲ್ಲಿ ನಿಷೇಧಗಳಿದ್ದ ಮುಖವಾಡಗಳಿದ್ದವು ಅಚೇತನಗಳಿಗೂ ಆತ್ಮವಿದೆ. ಎಂಬ ನಂಬಿಕೆ (ಚಿಟಿಟಝಟ) ಮನುಷ್ಯರೂಪವನ್ನು ಆಧಾರವಾಗಿಸಿದ ಬಿಂಬ ರಚನೆ (ಚಿಟಣಧಡಿಠಿಠಟಾಡಿ ಛಿಝಟ) ಕುಲಚಿಹ್ನಾರಾಧನೆ (ಣಠಣಜಟಝಟ) ಮೊದಲಾದ ಪ್ರಾಚೀಣ ನಂಬಿಕೆಗಳ ಸೃಷ್ಟಿಯೇ ಈ ಶಿಲ್ಪ ದುರ್ಮಂತ್ರವಾದಿಗಳು ಮಾಯಕ ಸಂಕಲ್ಪಗಳನ್ನು ಆರೋಪಿಸಿ ಸಮೂಹವನ್ನು ನಿಯಂತ್ರಿಸಲು ಇರುವ ರಕ್ಷಾ ಕವಚವಾಗಿ ಅದನ್ನು ಉಪಯೋಗಿಸಿದರು, ಕ್ರೂಲಂಕೆಯಲ್ಲಿ ಊರ ಮಂತ್ರವಾದಿಗಳು ರೋಗವನ್ನು ವಾಸಿಮಾಡುವುದಾಗಿ 'ಮಹಾಕೋಲ ಸನ್ನಿಯಕ' ದ ಹಲವು ಬಗೆಯ ಮುಖವಾಡಗಳನ್ನು ಕಟ್ಟಿಕೊಳ್ಳುವುದಿದೆ. ಕಾಡುಕೋಣದ ಮಾಂಸತಿಂದು ಜೀವಿಸುತ್ತಿದ್ದ ಉತ್ತರ ಅಮೇರಿಕದ ರೆಡ್ ಇಂಡಿಯನ್‌ಗಳು ಬೇಟೆ ವಿಫಲವಾದಾಗ ಕಾಡ್ಕೋಣದ ಮುಖವಾಡ ಕಟ್ಟಿಕೊಂಡು ದ್ರುತಗತಿಯ ನೃತ್ತವಾಡುವುದಿತ್ತು ನ್ಯಾಯ ನಿರ್ವಹಣೆಯಲ್ಲಿ ನಿಷ್ಪಕ್ಷತೆ ಅವಶ್ಯವಾದುದರಿಂದ ಆಫ್ರೀಕದ ಪೋರೋ ಬುಡಕಟ್ಟಿನ ಆದಿವಾಸಿಗಳು ನ್ಯಾಯದ ಮುಖವಾಡವನ್ನು ಧರಿಸಿ ದೋಷರೋಪ ವಿಚಾಣೆ ನಡೆಸುತ್ತಿದ್ದರು ಇದರಿಂದ ಮುಖವಾಡದ ಮಾನವ ಶಾಸ್ತ್ರ ಪರವಾದ ಮತ್ತು ಸಮೂಹ ಶಾಸ್ತ್ರಪರವಾದ ಮಹತ್ವ ಅರ್ಥವಾಗುತ್ತದೆ.

ಅಧ್ಯಾಯ ಐದು

ಪೊಲಿವ್ (ವೃದ್ಧಿ)

ಮರುಮಕ್ಕತ್ತಾಯಂ

(ನಾಡ ಆಚಾರ)

ಕೆ.ಕೆ.ಎನ್. ಕುರುಪ್ಪ್

ಟಿಪ್ಪಣಿ

ಸಮೂಹ ಜೀವನದ ಆಧಾರಭೂತವಾದ ಒಂದು ವ್ಯವಸ್ಥೆ ಕುಟುಂಬ ಕುಟುಂಬದ ಅಧಿಕಾರವಕಾಶಗಳೂ, ಹಸ್ತಾಂತರಗೊಳ್ಳಬೇಕೆಂಬುದನ್ನು ಒಂದೊಂದು ಸಾಂಗೀಕತೆಯೂ ತೀರ್ಮಾನಿಸಿ ಬಂದಿದೆ ಅದರ ಅನುಸಾರವೆ ಕುಟುಂಬದ ಸದಸ್ಯರಾದ ವ್ಯಕ್ತಿಗಳು ತಮ್ಮೊಳಗಿರುವ ಸಂಬಂಧಗಳನ್ನೂ

ನಿಷೇಧಗಳನ್ನೂ ಸ್ವೀಕಾರ್ಯ್ವಾದ ವೈವಾಹಿಕ ಸಂಬಂಧಗಳನ್ನೂತೀರ್ಮಾನಿಸುವುದು ಕೇರಳದಲ್ಲಿ ಮಾವಿನ ಮಗಳು ಹಕ್ಕಿನ ವದುವಾಗುವುದು ಇಲ್ಲಿನ ಕುಟುಂಬ ವ್ಯವಸ್ಥೆಯ ಭಾಗವಾಗಿರುವುದರಿಂದ, ಕುಟುಂಬ ವ್ಯವಸ್ಥೆ ಜೀವನದ ಎಲ್ಲ ತಲಗಳನ್ನು ಬಾಧಿಸುತ್ತದೆ ಮಣ್ಣು, ಕೃಷಿ ವ್ಯಕ್ತಿಗಳು ಮೊದಲಾದ ಎಲ್ಲವುಗಳೊಂದಿಗೂ ಇರುವ ಸಂಬಂಧವನ್ನು ತೀರ್ಮಾನಿಸುವುದರಲ್ಲಿ ಕುಟುಂಬ ವ್ಯವಸ್ಥೇ ಮುಖ್ಯವಾದ ಪಾತ್ರವಹಿಸುತ್ತದೆ. ಒಟ್ಟಿನಲ್ಲಿ ಒಂದು ಸಾಂಘಿಕತೆಯನ್ನು ಅದೇ ಆಗಿ ನೆಲೆಗೊಳಿಸುವಂಥದು ಈ ಬಗೆ ವ್ಯವಸ್ಥೆಗಳು ಕೂಡ

ಬ್ರಿಟಿಷರ ಆಡಳಿತ, ಶಾಸನಗಳ ಮೂಲಕ 'ಮರುಮಕ್ಕತ್ತಾಯಂ' (ಅಳಿಯ ಕಟ್ಟು) ಅನ್ನು ನಿಷೇಧಿಸಲಾಯಿತು ವಿಶಾಲವಾದ ಹೊಲ ಬಯಲುಗಳಲ್ಲಿ ಕೃಷಿ ಸಾಧ್ಯವಾದುದು ಕೊಡುಕುಟುಂಬ ವ್ಯವಸ್ಥೆಯಿಂದಾಗಿ ಆಗಿತ್ತು 'ಕಾರಣವರ' (ಕುಲಮುಖ್ಯನ) ಅಧೀಶತ್ವದಲ್ಲಿ ಕುಟುಂಬದ ಮಾನವ ಸಂಪನ್ಮೂಲ ಸಂಪೂರ್ಣವಾಗಿಯೂ ಭೂಮಿಯಲ್ಲಿ ವಿನಿಯೋಗವಾಗುವುದು ಸಾಧ್ಯವಾಯಿತು ಕೃಷಿಯನ್ನೂ ಅದನ್ನು ಆಧರಿಸಿ ನಿಲ್ಲಿಸಿದ ಕೊಡು ಕುಟುಂಬ ವ್ಯವಸ್ಥೆಯನ್ನು ಮುರಿಯದೆ ಬ್ರಿಟಿಷ್ ಆಡಳಿತಕ್ಕೆ ಔದ್ಯಮೀಕರಣ ಸಾಧ್ಯವಿರಲಿಲ್ಲ ಅದ್ದರಿಂದ 'ಮರು ಮಕ್ಕತ್ತಾಯಂ'ನಲ್ಲಿ ಆಧಿಷ್ಠಿತವಾದ ಕೂಡು ಕುಟುಂಬ ವ್ಯವಸ್ಥೆಯನ್ನು ಕಾನೂನಿನ ಮೂಲಕ ಧ್ವಂಸಗೊಳಿಸಲಾಯಿತು ಅದರಿಂದಾಗಿ ಅಣುಕುಟುಂಬಕ್ಕೆ ಬದಲಲು ಆರಂಭಿಸಿದ ಕೇರಳೀಯ ಕುಟುಂಬಗಳಿಗೆ ಹಳಗಾಲದಂತೆ ಧಾರಾಳ ಮಾನವ ಬಲ ಅವಶ್ಯವಾದ ಬಯಲುಗಳ ಕೃಷಿ ಸಾಧ್ಯವಲ್ಲವಾಯಿತು. ಕೃಷಿಕ ಜೀವನದ ಬೇರುಗಳು ಮೆಲ್ಲಮೆಲ್ಲಗೆ ಸೋರಗಿ ನಾಶವಾದುವಲ್ಲದೆ ಔದ್ಯಮೀಕರಣಕ್ಕೆ ಬಲ ಸೇರಿಕೊಳ್ಳಲೂ ತೊಡಗಿತ್ತು ಸಾಂಘಿಕತೆಯ ಒಂದು ವ್ಯವಸ್ಥೆಗಳೋಂದಿಗೆ ಹೇಗೆ ಸಂಬಂಧ ಹೊಂದಿತ್ತು ಎಂದೂ ಸಾಂಘೀಕತೆಯನ್ನು ಆದರ್ಶ ಸಮೂಹಕ್ಕೆ ತಲಪಿಸುವುದಕ್ಕೆ ಸಾಂಘಿಕತೆಯ ಕುರಿತಾದ ಪರಿಜ್ಞಾನ ಹೇಗೆ ನೆರವಾಗುತ್ತದೆ ಎಂದೂ ಇದು ಉದಾಹರಿಸುತ್ತದೆ ಸಾಂಸ್ಕೃತಿಕವಾದ ಆಯೋಜನದಲ್ಲಿ ಜಾನಪದ ಅಧ್ಯಯನಕ್ಕೆ ಇರುವ ಪ್ರಾಧಾನ್ಯವನ್ನೂ ಇದು ಸೂಚಿಸುತ್ತದೆ.

ಕಾರ್ವಲೋ ನೆಟ್ಟೋ ಅವರು ಜಾನಪದದಲ್ಲಿ ವಿನಾಸೋನ್ಮುಖ ಜಾನಪದ ಎಂದು ಒಂದು ವಿಭಾಗವನ್ನು ಕಲ್ಪಿಸುತ್ತಾರೆ. ಯಾವುದಾದರೂ ಒಂದು ಜಾನಪದಕ್ಕೆ ಆದರ ಚಲಾವಣೆ ಹಳೆಯ ಕಾಲದ ಹಾಗೆ ಇಲ್ಲದಾಗುವುದು. ಮತ್ತು ಜೀವನದ ಕೆಲ ತಿಂಗಳಲ್ಲಿ ಮಾತ್ರ ಅದು ಪ್ರತ್ಯಕ್ಷ ಪಡುಸುವುದು ಆಗುವಾಗ ಅದನ್ನು ವಿನಾಶೋನ್ಮುಖ ಜಾನಪದ ಎಂದು ಕರೆಯುವರು ಭೌತಿಕವಾದ ಜೀವನದ ಸನ್ನಿವೇಶಗಳಲ್ಲಿ ಮರುಮಕ್ಕತ್ತಾಯಂ ಅನ್ನು ಕಾಯಿದೆ ಮೂಲಕ ನಿಷೇಧಿಸಿದರೂ ಅನುಷ್ಠಾನದ ಮತ್ತು ಆಚಾರದ ತಲದಲ್ಲಿ ಅದು ಇಂದು ನೆಲೆಯಲ್ಲಿ ಇದೆ 'ಕಾವು' ಆರಾಧನೆಯಲ್ಲಿ ವೆಳಿಚ್ಚಪ್ಪಾಡ ಆಗುವ ಅಧಿಕಾರವೂ ಇತರ ಕಿರು ಆಸ್ತಿ ಹಕ್ಕುಗಳೂ ಇವತ್ತು ಕೂಡ 'ಮರುಮಕ್ಕತ್ತಯಂ ಕ್ರಮದಲ್ಲೆ

ನಡೆಯುತ್ತಿರುವುದು. ಅದರೂ ಇದು ಹಿಂದಿನಂತೆ ಪ್ರಬಲವಲ್ಲ ಅದರಿಂದ ಇದು ದಿನಾಶೋನ್ಮುಖ ಜಾನಪದವಾಗಿದೆ.

ಒಂದೊಂದು ಸಮಾಜವೂ ಅದರ ಆಚಾರಗಳನ್ನೂ ಅನುಷ್ಠಾನಗಳನ್ನೂ ತಾನೇ ಕ್ರಮೀಕರಿಸುತ್ತದೆ. ವ್ಯಕ್ತಿಗಳೂ, ಕುಟುಂಬಗಳೂ, ಸಮೂಹವೂ ತಮ್ಮೊಳಗಿರುವ ಸಂಬಂಧಗಳನ್ನು ಈ ರೀತಿ ಕ್ರಮೀಕರಿಸುವಾಗ ಅವು ನಿಯಮಗಳಾಗಿ ಬದಲುತ್ತವೆ. ಕೇರಳೀಯ ಸಮೂಹದ ಈ ಬಗೆ ಒಂದು ಕುಟುಂಬ ವ್ಯವಸ್ಥೇಯನ್ನೂ ಆಸ್ತಿ ಹಕ್ಕನ್ನೂ 'ಮರುಮಕ್ಕತ್ತಾಯಂ' ಎಂದು ಕರೆಯುತ್ತಾರೆ.

ಮಾತೃಪದ್ದತಿಯೂ ಪಿತೃಪದ್ದತಿಯೂ ಕುಟುಂಬ ರಚನೆಯ ಎರಡು ವ್ಯತ್ಯಾಸ್ತ ಸ್ವಭಾವಗಳು, ಒಂದು ತಾಯಿಯನ್ನೂ ಇನ್ನೊಂದು ತಂದೆಯನ್ನೂ ಆಧರಿಸಿರುವ ವ್'ಯವಸ್ಥೆಗಳಾಗಿವೆ. ಪ್ರಾಚೀಣ ಕಾಲದಿಂದಲೂ ಈ ಎರಡೂ ವ್ಯವಸ್ಥೆಗಳು ಮಾನವ ಸಮೂಹದಲ್ಲಿ ನೆಲೆನಿಂತಿದ್ದವು ಒಂದು ಇನ್ನೊಂದಕ್ಕೆ ದಾರಿಬಿಟ್ಟುಕೊಟ್ಟುದನ್ನು ಕಾಣುತ್ತೇವೆ. ಮಾತೃವ್ಯವಸ್ಥೆಯಿಂದ ಪಿತೃ ವ್ಯವಸ್ಥೆಗೆ ಬದಲಾವಣೆ ಒಂದು ಸಮೂಹದ ಉತ್ಪಾದನೆ ಸಂಬಂಧ, ಭೂಮಿ ಒಡೆತನ ಹಕ್ಕುಗಳು ಇವುಗಳೊಂದಿಗೆ ಸಂಬಂಧಿಸಿಕೊಂಡಿವೆ. ಅಸ್ಸಾಮಿನ ಗಿರಿವರ್ಗಗಳು, ಆಫ್ರಿಕನ್ ಸಮೂಹಗಳು ಕೆಲವು ನೈರತ್ಯ ಏಷ್ಯದ ಸಮೂಹಗಳಲ್ಲಿ ತೀರ ಈಚಿನವರೆಗೂ ಮಾತ್ರ ಕುಟುಂಬ ಪದ್ದತಿ ಊರ್ಜಿತದಲ್ಲಿತ್ತು ಮಾತೃ ಪದ್ದತಿಯದೇ ರಚನಾ ಸ್ವರೂಪವನ್ನು ಒಳಗೊಂಡಿರುವ 'ಮರುಮಕ್ಕತ್ತಾಯಂ' (ಅಳಿಯ ಕಟ್ಟು), ಎಲ್ಲ ಜಾತಕಗಳನ್ನು ಆವರಿಸಿದ, ಕೇರಳೀಯ ಸಮೂಹದ ಒಂದು ಪ್ರತ್ಯೇಕತೆಆಗಿತ್ತು ಇವತ್ತು ಅದರ ಅವಶೇಷಗಳೆಂಬ ಸ್ವಭಾವಗಳು ಪರಂಪರಾಗತ ಆಚಾರವೆಂಬ ಮುಂಬರಿದು ಬರುತ್ತದೆ.

'ಮರುಮಗದೊಂದಿಗೆ ಅಂದರೆ ಸೋದರಳೆಯ ಅಥವಾ ಸಹೋದರೀ ಸಂತತಿಗಳೊಂದಿಗೆ ಮುಂದುವರಿಯುವ ಕಾರ್ಯಕ್ರಮ ಅಥವಾ ಅದಿಕಾರ ಹಸ್ತಾಂತರ ಕ್ರಮವೆ 'ಮರುಮಕ್ಕತ್ತಯಂ' ಗಂಡು ಮಗನ ಮೂಲಕ ತಂದೆಯ ಸ್ವತ್ತಿನ ಒಡೆತನ ಮುಂದುವರಿಯುವ ಕಾರ್ಯಕ್ರಮ 'ಮಕ್ಕಾತ್ತಾಯಂ' ಒಂದು ಸ್ತ್ರೀಯ ಪ್ರಾಧಾನವನ್ನು ಸೂಚಿಸಿದರೆ ಇನ್ನೊಂದು ಪುರುಷನ ಪ್ರಾಧಾನ್ಯವನ್ನು ವ್ಯಕ್ತ ಪಡಿಸುತ್ತದೆ. ಕೆಲವು ಸಮೂಹಗಳಲ್ಲಿ ಈ ಎರಡು ಕಾಯಕ್ರಮಗಳೂ ಮುಂದುವರಿದು ಬರುವುದನ್ನು ಕಾಣಬಹುದು ಉಭಯದಾಯ ಕ್ರಮ ಎಂದು ಕರೆಯಬಹುದಾದ ಈ ಪದ್ದತಿ ಎರಡು ವ್ಯವಸ್ಥೆಗಳನ್ನು ಸಮರಸಗೊಳಿಸುವಂಥದು.

ಹಲವು ಆದಿವಾಸಿ ಕುಟುಂಬಗಳಲ್ಲೂ, ನಾಯರ್, ಈ ವಿವರ್ ತೀಯ್ಯರ್, ಮತ್ತಿತರ ವೃತ್ತಿ ಜಾತಿಗಳವರಲ್ಲೂ ಕೇರಳದಲ್ಲಿ 'ಮರುಮಕ್ಕತ್ಥಯಂ' ನೆಲೆ ನಿಂತಿತು ರಾಜಕುಟುಂಬಗಳ ಉತ್ತರಾಧಿಕಾರವೂ, ಅರಸೊತ್ತಿಗೆಯೂ ಈ ಕಾರ್ಯಕ್ರಮವನ್ನು ಅನುಸರಿಸುತ್ತ ಕಣ್ಣೂರಿನ ಅಱಿಯ್ಕಲ್

(ಮುಸ್ಲಿಂ) ರಾಜವಂಶ ಶರಿಯತ್ತಿಗೆ ವಿರುದ್ಧವಾದರೂ ಈ ಕುಟುಂಬ ಪದ್ಧತಿಯನ್ನು ಮುಂದುವರಿಸಿತು ಒಂದು ಪ್ರತ್ಯೇಕ ನಿರ್ದೇಶದ ಮೂಲಕ ಖಲೀಫರು ಇದನ್ನು ಅಂಗೀಕರಿಸಿಯೂ ಇದ್ದರು ತಲಶ್ಚೇರಿಯ ಪ್ರಸಿದ್ಧ ಭೂ ಮಾಲಕ ಮುಸ್ಲಿಂ ಕುಟುಂಬದ ಕೇಯಮಾರರು ಇದೇ ಕಾರ್ಯಕ್ರಮವನ್ನು ಸ್ವೀಕರಿಸಿದ್ದರು ನಂಬೂದಿರಿ ಬ್ರಾಹ್ಮಣರೂ, ಒಂದು ರೀತಿಯಲ್ಲಿ ಇದಕ್ಕೆ ಅಂಗೀಕಾರ ನೀಡಿದರು.

ಮರುಮಕ್ಕತ್ತಾಯಂ ಎಂಬ ವ್ಯವಸ್ಥೆ

ಒಂದು ಗ್ರಾಮದ ಅತ್ಯಂತ ಸಣ್ಣ ಪ್ರಾದೇಶಿಕ ಘಟಕಕ್ಕೆ 'ತಱ' ಎಂಬ ಹೆಸರಾಗಿತ್ತು ಅದರ ಆಡಳಿತ ಅಧಿಕಾರವಿದ್ದ ಕುಟುಂಬಕ್ಕೆ ಹೆಸರು 'ತಱವಾಡ್' 'ತಱವಾಡ್' ಎಂಬ ಸಂಸ್ಥೆಗೆ 'ದೇಶ', 'ದೇಶಾಧಿಪತ್ಯ' 'ಅಂಬಲಂ' (ದೇಗುಲ) 'ಅಂಬಲಪ್ಪಡಿ' (ದೇಗುಲದ ಆಡಳಿತ) ಎಂಬ ನಾಲ್ಕು ಅಧಿಕಾರಗಳಿದ್ದವು ಈ ನಾಲ್ಕರಲ್ಲಿ ಒಂದೋ ಎರಡೋ ಅಧಿಕಾರಗಳು ಮಾತ್ರ ಇರುವುದಾದರೆ ಆ ಕುಟುಂಬದ ಪ್ರಮುಖ್ಯ ತಗ್ಗುತ್ತದೆ.

'ಮರುಮಕ್ಕತ್ತಾಯಂ' ಸ್ತ್ರೀ ಮೂಲಕ ಮುಂಬರಿದು ಹೋಗುವಂಥದಾದರೂ ಒಂದು ತಱವಾಡಿನ ಆಡಳಿತಾಧಿಕಾರಿ ಆಗುವುದು ಹಿರಿಯ ಪುರುಷನಾದ ' ಕಾರಣವರ್' ಕುಟುಂಬ ಸದಸ್ಯರೆಲ್ಲರ ಎಲ್ಲ ಉಸ್ತುವಾರಿಯೂ ಈತನಲ್ಲಿ ನಿಕ್ಷಿಪ್ತ ನಾಡುವಾಜಿ (ನಾಡಿನಾಳ್ತನ', 'ದೇಶವಾರ' (ದೇಶ ಎಂಬುದು ಒಂದು ಭೂಭಾಗ ಅವರ ಒಡೆತನ) ಮೊದಲಾದ ಆಡಳಿತಾದಿಕಾರಗಳೂ ಇತರ ಕುಟುಂಬಗಳೊಂದಿಗಿರುವ ಎಲ್ಲ ಸಂಬಂಧಗಳೂ 'ಕಾರಣವರ್'ರ ಮೆಲ್ವನಿಖೆಗೆ ಸೇರಿದುದು.

ದೇಗಲ ದೈವಗಳಿಗೆ ಸಂಬಂಧಿಸಿದ ಅನುಷ್ಠಾನ ಕರ್ಮಗಳಲ್ಲಿ ಮುಖ್ಯಸ್ಥಾನ ಆತನಿಗೆ ದೊರೆಯಿತು ಸೋದರ ಅಳಿಯಂದಿರನ್ನು 'ಅನಂತರುವನ್ಮಾರ್' ಅಥವಾ 'ಶೇಷಕ್ಕಾರ್' ಎಂದು ಕರೆಯಲಾಗುತ್ತಿತ್ತು ಅವರ ಮುಖ್ಯ ಜವಾಬ್ದರಿ ಕಾರಣವರ್' ಅನ್ನು ನಿಷ್ಠೆಯಿಂದ ಅನುಸರಿಸುವುದು ಆಗಿತ್ತು.

ಒಂದು ಕುಟುಂಬದ 'ವಿಷು' (ಯುಗಾದಿ) ಓಣಂ' (ದೀಪದ ಹಬ್ಬ) ಮೊದಲಾದ ಹಬ್ಬಗಳೂ ಕಆರಣವರನ್ನು ಕೇಂದ್ರಕರಿಸಿದ್ದವು ಕುಟುಂಬದಲ್ಲಾಗುವ ಜನನ, ಮರಣ, ವಿವಾಹ, ತಿರಂಡುಕುಳಿ, (ಮೈನೆರೆ ಲೋಹದ ಹಬ್ಬ) ಮೊದಲಾದ ಆಚಾರಗಳನ್ನು ಆತ ಕ್ರಮೀಕರಿಸಿದ ಬ್ರಿಟಿಷ್ ಆಡಳಿತದ ವೇಳೆ ತಱವಾಡಿನ ವಿರುದ್ಧವಾದ ಸಿವಿಲ್ ದಾವೆಯಲ್ಲಿ ತಱವಾಡನ್ನು ಪ್ರತಿನಿಧಿಸುತ್ತಿದ್ದುದು.

ಕಾರಣವರಾಗಿದ್ದರು ಕಾರಣವರ ಪರವಾಗಿಯೇ ವಿರುದ್ಧವಾಗಿಯೋ ಕೋರ್ಟಿನಲ್ಲಾಗುವ ತೀರ್ಪು ಆ ಇಡಿ ತರವಾಡಿನ ಸದಸ್ಯರೆಲ್ಲರಿಗೆ ಅನ್ವಯವಾಗುತ್ತಿತ್ತು ಈ ತಱವಾಡಿನ ಜಾತಿಶುದ್ಧಿ,

ಅಭಿಜಾತ್ಯ, ಕುಲೀನತೆ, ಆರ್ಥಿಕ ಭದ್ರತೆ ಇತ್ಯಾದಿಯನ್ನು ಕಾಯ್ದುಕೊಳ್ಳುವುದು 'ಕಾರಣವರ್' ಮತ್ತು 'ಅನಂತರವನ್' ಗಳ ಜವಾಬ್ದಾರಿಯಾಗಿತ್ತು 'ತಱವಾಡಿತ್ತಂ' ಎಂಬ ಪದ 'ಕುಲೀನತೆ'ಯ ಪರ್ಯಾಯ ಪದವಾಗಿದ್ದುದು ಈ ಹಿನ್ನೆಲೆಯಲ್ಲಾಗಿತ್ತು.

ಹಳೆಯ 'ತಱವಾಡು'ಗಳಲ್ಲಿ ಭತ್ತ ಸಂಗ್ರಹಿಸಿ ಇಡುವ ಸ್ಥಳವನ್ನು 'ಪತ್ತಾಯಪ್ಪುರ' (ಪಣತದ ಮನೆ) ಎಂದು ಕರೆಯುತ್ತಿದ್ದರು, 'ಪತ್ತಾಯಪ್ಪುರ'ದ ಮುಂದಿರುವ ಅಂಗಳದಲ್ಲಿ 'ಮಡಯಲ್ ಚಾಮುಂಡಿ', 'ಕುಂಡೋರ್ ಚಾಮುಂಡಿ' ಮೊದಲಾದ 'ತೆಯ್ಯಂ' ಗಳನ್ನು ಕೆಲವೆಡೆ ವರ್ಷವೂ ಕಟ್ಟಿಯಾಡುವುದುಂಟು ಇದರ ಒಂದು ಉದ್ದೇಶ ಕ್ಷೇತ್ರ (ದೇಗುಲ) ಸಂಸ್ಕಾರದಿಂದ ಹೊರಗೆ ನಿಲ್ಲುವ ಗಿರಿವರ್ಗದವರಾದ ಕೃಷಿ ಶ್ರಮಿಕರ ನಡುವೆ ಅಧೀಶವರ್ಗಗಳ ತತ್ತ್ವಶಾಸ್ತ್ರ ಹಬ್ಬಿಸುತ್ತ ಅವರ ಶ್ರಮದಲಾಭವನ್ನು ಹಿಂಡಿ ತೆಗೆಯುವುದಾಗಿತ್ತು ತಾವು ಬಡವರಾಗಿದ್ದರೂ ಭೂಮಾಲಕರಿಗಾಗಿ ಹಗಲು ರಾತ್ರಿ ದುಡಿಯದಿದ್ದರೆ ಈ ದೇವತೆಗಳು ತಮ್ಮ ವಂಶನಾಶ ಮಾಡುತ್ತವೆ. ಎಂಬುದೇ ಆ ತತ್ತ್ವಶಾಸ್ತ್ರ

ಉದ್ಭವದ ಕುರಿತ ಸಿದ್ಧಾಂತಗಳು

ಭೂಸ್ವತ್ತಿನ ಉತ್ತರಾಧಿಕಾರವೂ, ಉಸ್ತುವಾರಿಯೂ, ಕೂಡು ಕುಟುಂಬವೂ 'ಮರುಮಕ್ಕತ್ತಾಯಂ'ನ ಆಸ್ತಿವಾರವೆಂದು ಹಲವರು ಹೇಳಿರುವುದನ್ನು ಕಾಣಬಹುದು ಆದರೆ ಯಾವೊಂದು ಭೂಮಿಯೊಡೆತನವೂ ಇಲ್ಲದಿದ್ದ ಅನೇಕ ಆದಿವಾಸಿ ಸಮೂಹಗಳೂ, ಹಿಂದೂ ವಿಭಾಗದ ಅನೇಕ ಜಾತಿ ವಿಭಾಗಗಳೂ, ಮಾಪ್ಪಿಳಮಾರ್‌ಗಳ (ಮುಸ್ಲಿಮರ) ಕೆಲ ವಿಭಾಗಗಳವರೂ ಶತಮಾನಗಳಿಂದ 'ಮರುಮಕ್ಕತ್ತಾಯಂ' ಅನ್ನು ಆಚರಿಸಿಕೊಂಡು ಬಂದಿದ್ದಾರೆ. ಮರುಮಕ್ಕತ್ತಾಯಂ ನಲ್ಲಿ ಸ್ತ್ರೀ ಗೆ ಸರ್ವ ಸ್ವಾತಂತ್ರ್ಯವೂ ದೊರಕಿತ್ತೆಂದು ಭಾವುಕವಾಗಿ ವ್ಯಾಖ್ಯಾನಿಸುವವರನ್ನೂ ಕಾಣಬಹುದು ಆದ್ದರಿಂದ ಈ ದಾಯಕ್ರಮದ ಉದ್ಭವ ಭೂಸ್ವತ್ತುಗಳನ್ನೊ, ಕೊಡುಕುಟುಂಬ (ಅವಿಭಕ್ತ ಕುಟುಂಬ) ಪದ್ದತಿಯನ್ನೊ ಮಾತ್ರ ಆಧಾರವನ್ನಾಗಿಸಿ ನಿರ್ವಹಿಸಲು ಸಾಧ್ಯವಾಗುವಂಥದ್ದಲ್ಲ. ಬ್ರಾಹ್ಮಣೀಯ ಸಿದ್ಧಾಂತ

'ಮರುಮಕ್ಕಾತ್ತಾಯಂ'ನ ಉದ್ಭವ ಸಂಬಂಧವಾಗಿರುವ ಪರಂಪರಾಗತ ಸಿದ್ಧಾಂತವನ್ನು 'ಬ್ರಾಹ್ಮಣೀಯ ಸಿದ್ಧಾಂತ' ಎಂದು ಕರೆಯಬಹುದು. ಇದರ ಪ್ರಕಾರ ಇದರ ಉದ್ಭವ ಪರಶುರಾಮನ ಆಜ್ಞೆಯ ತಳಹದಿಯಲ್ಲಾಗಿದೆ. ಎನ್ನುತ್ತಾರೆ. ಶೂದ್ರಜಾತಿಗಳವರು ಬ್ರಾಹ್ಮಣರ ಅಪೇಪಕ್ಷೆಗಳನ್ನು ಪೂರ್ತಿಕರಿಸಲು ಬಾಧ್ಯಸ್ಥರೆಂದು ಆತನ ಅನುಶಾಸನವಾಗಿತ್ತು. ಅಲ್ಲದೆ ಶೂದ್ರಸ್ತ್ರೀಗಳು ತಮ್ಮ ಎದೆಯನ್ನು ಮರೆಮಾಡುವ ವಸ್ತ್ರವನ್ನೂ, ಪಾತಿವ್ರತ್ಯವನ್ನೂ ಕಳಚಿತೊಲಗಿಸಲು ವಿಧಿಸಿದ ನಂಬೂತಿರಿಗಳು ಅಥವಾ ಬ್ರಾಹ್ಮಣರು ತಮ್ಮ ಹಿತಾಸಕ್ತಿಯನ್ನು ಸಂರಕ್ಷಿಸಲುಕತೆ ಕಟ್ಟಿದ ಸಿದ್ಧಾಂತವಿದೆಂದು ಹೇಳಬಹುದು ಕೇಳರಳೀ ನಾಯರ್ ಸಮೂಹದ ಒಂದು ಪ್ರತ್ಯೇಕತೆ ನಂಬೂತಿರಿ ಪುರುಷರೊಂದಿಗಿನ ನಾಯರ್ ಸ್ತ್ರೀಯರ

'ಸಂಬಂಧಂ' ಎಂಬ ಹೆಸರಿನ ವಿವಾಹ ರೀತಿಯಾಗಿತ್ತು ಇದಾದರೂ ಮನುಸ್ಮೃತಿ ಮೊದಲಾದ ಸ್ಮೃತಿ ಸಿದ್ಧಾಂತಗಳಿಗೆ ವಿರುದ್ಧವಾದುದು ನಂಬೂತಿರಿಗಳ ಕುಟುಂಬಗಳಲ್ಲಿ ಹಿರಿಯ ಮಗ ಮಾತ್ರ ಸ್ವಜಾತಿಯಲ್ಲಿ 'ವೇಳಿ'(ವಿವಾಹ) ಆಗುತ್ತಾನೆ. ಆತನ ತಮ್ಮಂದಿರು ಅಥವ 'ಅಪ್ಪನ್‌ಮಾರ್' ಎಂದುಕರೆಸಿಕೊಳ್ಳುವ ವಿವಾಹರಹಿತರು, ನಾಯರ್ ಸ್ತ್ರೀಗಳನ್ನು 'ಮರುಮಕ್ಕತ್ತಾಯಂ'ನ ಪರಿಧಿಯೊಳಗೆ 'ಸಂಬಂಧಂ' ವಿಧಾನದಲ್ಲಿ ವರಿಸಬೇಕು (ಹಾಗೆ ನೋಡಿದರೆ ಮರುಮಕ್ಕತ್ತಾಯಂ ಪ್ರಕಾರ ನಡೆಯುವ ನಾಯರ್ ಮದುವೆಗೂ ಹೆಸರು 'ಸಂಬಂಧಂ' ಎಂದೇಈ ವ್ಯವಸ್ಥೆಯಲ್ಲಿ ನಾಯರ್ ಮತ್ತು ಬ್ರಾಹ್ಮಣ 'ಸಂಬಂಧಂ'ಗಳಲ್ಲಿ ಭೇದವಿಲ್ಲ) ಬ್ರಾಹ್ಮಣರು ಕೇರಳದಲ್ಲಿ ಜಾರಿಗೆ ತಂದ ಈ ಪದ್ಧತಿಯ ಹಿಂದಿರುವುದು 'ಇಲ್ಲಂ'ನ (ಬ್ರಾಹ್ಮಣ ಮನೆಯ) ಆಸ್ತಿ ಪಾಲಾಗದೆ ಸಮಷ್ಟಿಯಾಗಿ ಉಳಿಸಿಕೊಳ್ಳುವ ತಂತ್ರವಾಗಿತ್ತು ನಾಯರ್‌ಗಳಲ್ಲಿ ಅವರಿಂದ ಆಗುವ ಸಂತತಿಗೆ ಕಾನೂನಿನ ಪ್ರಕಾರ ಅಪ್ಪನ ಆಸ್ತಿಯಿಂದ ಪಾಲುಸಿಗಲು ಇರುವುದಿಲ್ಲ ಪಯ್ಯನ್ನೂರು ಗ್ರಮದ ಬ್ರಾಹ್ಮಣರಾದ 'ತಿರುಮುಂಬುಕಾಸ್ ಮರುಮಕ್ಕತ್ತಯ ನಡೆಸಿಕೊಂಡು ಬಂದವರು ಕ್ರಿಸ್ತೀ ಹತ್ತೊಂಬತ್ತನೆ ಶತಮಾನದ ಕೊನೆಯವರೆಗೂ ಈ ಪರಂಪರೆಯನ್ನು ಯಾರು ಪ್ರಶ್ನಿಸಲಿಲ್ಲ ಹಲವು ನಾಯರ್ ಕುಟುಂಬಗಳೂ ಬ್ರಹ್ಮಣ ಸಂಬಂಧವನ್ನು ಕುಲೀನತೆಯ ಪಯಾಯವಾಗಿ ಪರಿಗಣಿಸಿದರು.

ಭೂಮಿ ಒಡೆತನ ಸಿದ್ಧಾಂತ : 'ಮರುಮಕ್ಕತ್ತಾಯಂ ಉದ್ಭವದ ಇನ್ನೊಂದು ಸಿದ್ಧಾಂತ 'ಭೂಸ್ವತ್ತಿನ ಸಿದ್ಧಾಂತ ನಾಯರ್ ತರವಾಡುಗಳ ಭೂಮಿ ಒಡೆತನದ ಹಕ್ಕು ಶೀತಿಲಗೊಳ್ಳದೆ ಕೂಡು ಅಧಿಕಾರವಾಗಿ ನಿಲ್ಲಿಸಲು ಮಾಡಿದ ಪರಿಶ್ರಮವೆಂದು ಈ ಕುಟುಂಬ ಪದ್ಧತಿಯನ್ನು ವ್ಯಾಖ್ಯಾನಿಸುತ್ತರೆ 'ಮಕ್ಕತ್ತಾಯಂ' (ಮಕ್ಕಳ ಕಟ್ಟು) ಕಾರ್ಯಕ್ರಮದಲ್ಲಿ ಆಸ್ತಿಗಳು ಪಾಲಾಗಿ ಹೋಗುವಾಗ ಮನೆತನ ನಾಶವಾಗುತ್ತದೆ. ಆದಿಲ್ಲದಾಗಲು ಆಸ್ತಿಯನ್ನು ವಿಭಜಿಸದೆ ಕೂಡ ಕುಟುಂಹಬದ ಸ್ವತ್ತಾಗಿ ಈ ಪದ್ಧತಿಯಲ್ಲಿ ನೆಲೆ ನಿಲ್ಲಿಸಲಾಯಿತು ಗಂಡು ಮಕ್ಕಳ ಮಕ್ಕಳಿಗೆ ತಂದೆಯ ಆಸ್ತಿಯಿಂದ ಜೀವನಾಂಶವಾಗಲಿ, ಸ್ವತ್ತಿನ ಪಾಲಿನ ಅಧಿಕಾರವಾಗಲಿ ಸಂರಕ್ಷಿತವಾಗಿರಲಿಲ್ಲ ಅವರು ತಮ್ಮ ಮಾತೃಕುಟುಂಬದ ಭಾಗವಾದವರು.

ಸೈನಿಕ ಸಿದ್ಧಾಂತ : ಚೋಳರೂ ಚೇರರೂ ಒಂದು ಶತಮಾನದ ವರೆಗೆ ಪರಸ್ಪರ ಕಾದಾಟದಲ್ಲಿ ನಿರತರಾಗಿದ್ದರು ಆಗ ಯೋದರಿಗೆ ತಮ್ಮ ಹೆಂಡತಿ ಮಕ್ಕಳ ಬಗೆಗೆ ನ್ಯಾಯ ಮಾಡಲು ಸಾಧ್ಯವಾಗಲಿಲ್ಲ ಹಾಗಾಗಿ ಕುಟುಂಬದ ರಕ್ಷಣೆಯನ್ನು 'ಕಾರಣವರ' ಕೈಗೆ ಬಿಟ್ಟು ಕಒಡಬೇಕಾದ ಪರಿಸ್ಥಿತಿ ಬಂತು ಕೌಟುಂಬಿಕವಾದ ಜವಾಬ್ದಾರಿಯಿಂದ ಯೋಧರಿಗೆ ಬಿಡುಗಡೆ ದೊರೆಯಿತು.

ಆದರೆ 1900 ರಲ್ಲಿ ಟಿ.ಕೆ. ಗೋಪಾಪ್ಪಣಿಕ್ಕರ್ ತನ್ನ 'ಮಲಬಾರ್ ಆ್ಯಂಡ್ ಇಟ್ಸ್ ಫ್ಲೋಕ್ ಎಂಬ ಗ್ರಂಥದಲ್ಲಿ ಒಂದು 'ಬಹುಭರ್ತೃತ್ವ ಸಿದ್ಧಾಂತ'ವನ್ನು ಎತ್ತಿದರು ಅದೆಂದರೆ ನಾಯರ್ ಸ್ತ್ರೀಯರಿಗೆ

ಬಹುಭರ್ತೃತ್ವ ಪದ್ದತಿ ಇತೆಂದೂ, ತನಗಾದ ಸಂತತಿ ಯಾರಿಂದ ಎಂದು ಹೇಳಲು ಆಗದಿದ್ದುದರಿಂದ ತಾಯಿಯ ಮೂಲವಾದ ಕುಟುಂಬ ಪದ್ದತಿ ಮುಂದವರಿಯಿತು ಎಂದು ಸಾರ ಫ್ರೇಡಿಕ್ ಎಂಗಲ್ಸ್ ಹಾಗೂ ಇತರರು ಎತ್ತಿದ ಬುಡಕಟ್ಟು ವರ್ಗಗಳ ಸ್ವಭಾವವಾದ ಲಿಂಗ ವಿವೇಚನಾ ರಹಿತ (ಜಥ ಡಿಡಿಂಟಖುಭಿಣುಣಥಿ) ವದವನ್ನು ಪಣಿಕ್ಕರ್ ತನ್ನ ಈ ಸಿದ್ದಾಂತ ಪ್ರತಿಪಾದನೆಗೆ ಬಳಸಿಕೊಂಡರು ಆದರೆ ಕೆಳ ಜಾತಿಗಳಲ್ಲೂ ವಿಶ್ವ ಕರ್ಮರಲ್ಲೂ ಸಹೋದರ ಬಹಭರ್ತೃತ್ವ 1560 ರ ವರೆಗೂ ಕೇರಳದಲ್ಲಿ ಪ್ರಚಲಿತವಿತ್ತು ಎಂದು ಕೆಲ ಅಧ್ಯಯನಗಳಲ್ಲಿ ದಾಖಲೆಗಲೊಂಡಿವೆ.

ಈ ಎಲ್ಲ ಸಿದ್ದಾಂತಗಳು ಪ್ರಾಚೀನ ಕಾಲದಿಂದಲೆ 'ಮರುಮಕ್ಕತ್ತಾಯಂ; ಆಚರಣೆಯಲ್ಲಿತ್ತು ಎಂಬ ಅನುಮಾನವನ್ನು ಆಶ್ರಯಿಸಿ ರೂಪಿತವಾದವುಗಳು ತಮಿಳು ಸಂಘಕಾಲದ ಚೇರರಾಜರಲ್ಲಿ ಮಕ್ಕತ್ತಾಯಂ (ಮಕ್ಕಳಕಟ್ಟು) ನೆಲೆಸಿತ್ತು ಹದಿಮೂರನೆ ಶತಮಾನಕ್ಕೆ ಹಿಂದೆ ಕೇರಳದಲ್ಲಿ 'ಮರುಮಕ್ಕತ್ತಾಯಂ' (ಅಳಿಯ ಕಟ್ಟು) ನೆಲೆಗೊಂಡಿರಲಿಲ್ಲ ಎಂದು ಕಎ.ಪಿ. ಪದ್ಮನಾಭ ಮೇನನ್ ಹೇಳುತ್ತಾರೆ. ಇದನ್ನು ಆರಂಬಿಸಿದ್ದು ಹತ್ತನೆ ಶತಮಾನದ ಅನಂತರ ಎಂದು ಪಿ.ಟಿ. ಶ್ರೀನಿವಾಸ ಅಯ್ಯಂಗಾರ್ ಅವರು ಅಭಿಪ್ರಾಯಪಡುತ್ತಾರೆ. ಇಳಂ ಕುಳಂ ಕುಞ್ಞನ್ ಪಿಳ್ಳ ಅವರು ಸೈನಿಕ ಸಿದ್ದಾಂತವನ್ನು ಆಧಾರವಾಗಿ ತೆಗೆದುಕೊಂಡು ಅಯ್ಯಂಗಾರರ ಅಭಿಪ್ರಯವನ್ನು ಬೆಂಬಲಿಸುತ್ತಾರೆ ದಕ್ಷಿಣ ಕನ್ನಡ (ಅವಿಭಕ್ತದಲ್ಲಿ) 'ಮರುಮಕ್ಕತ್ತಾಯಂ' ಪದ್ದತಿಗೆ 'ಅಳಿಯ ಸಂತಾನ ಕಟ್ಟು' ಎಂದು ಹೆಸರಾಗಿದೆ ಇದು ಹದಿಮೂರನೆ ಶತಮಾನದ ಕಟನೆಯಲ್ಲಿ ಅಸ್ತಿತ್ವಕ್ಕೆ ಬಂದುದೆಂದು ಬಿ.ಎ. ಸಾಲೆತ್ತೂರು ತಮ್ಮ ಚಿಟಿಭಿಜಟಿಣ ಏಚಿಡಿಟಿಚಿಣಚಿಞಚಿ ಎಂಬ ಗ್ರಂಥದಲ್ಲಿ ಸಿದ್ದಾಂತಿಸಿದ್ದಾರೆ. ಇದು ಪದ್ಮ ನಾಭ ಮೇನೋನ್ ಅಭಿಪ್ರಾಯದೊಂದಿಗೆ ಸೇರಿಕೊಳ್ಳುತ್ತದೆ ಹದಿಮೂರನೆ ಶತಮಾನದ ಹಿಂದಿದ್ದ ವಿಧೇಶಿ ಪ್ರವಾಸಿಗಳ ವರದಿಗಳಲ್ಲಿ ಈ ಪದ್ದತಿ ಬಗೆಗೆ ವಿವರಿಸಿರುವುದನ್ನು ಕಾಣಲಾರೆವು ಮೊದಲ ಬಾರಿಗೆ ಈ ಕುರಿತು ವಿವರ ಬರುವುದು ಸೆವರಿಕ್‌ನ ಪ್ರವಸಿ ಫ್ರೀಯರ್ ಜೋರ್ಡಾನನ್ ನೀಡಿದ ಟಿಪ್ಪಣಿಗಳಲ್ಲಿ

ವ್ಯವಸ್ಥೆಗೆ ತಕ್ಕ ನಿವಾಸ ಮಾದರಿ

ಕೇರಳೀಯವೆನ್ನುವ ಒಂದು ವಾಸ್ತು ಶಿಲ್ಪ ಕಲೆಯನ್ನು ಬೆಳೆಸಲು ಮರುಮಕ್ಕತ್ತಯವೂ ತಱವಾಡುಗಳೂ ಪ್ರತ್ಯೇಕವಾಗಿ ಕಾರಣವಾದವು ಒಂದೇ ಮನೆಯೊಳಗೆ ಹೆಚ್ಚು ಜನರನ್ನು ಉಳಿಸಿಕೊಳ್ಳಬೇಕಾಗಿ ಬರುವಾಗಲೂ ಪ್ರತ್ಯೇಕ ಅನುಷ್ಠಾನ ನಿರ್ವಹಿಸಬೇಕಾಗಿ ಬಂದಾಗಲೂ ಹೊಸ ರೀತಿಯಿಲ್ಲಿರುವ ಗೃಹ ನಿರ್ಮಾಣ ಒಂದು ಅವಶ್ಯಕತೆ ಎನಿಸಿತು ಅಲ್ಲದೆ ಗ್ರಾಮಗಳಲ್ಲಿ ಅಧಿಕಾರವೂ ಅಧಿಪತ್ಯವೂ ಪ್ರತ್ಯಕ್ಷವಾಗಿ ಪ್ರಕಟಿಸಲು ವಿಶಾಲವೂ ಗಂಭೀರವೂ ಆದ ವಾಸ್ತು ಶಿಲ್ಪಗಳು ಒಂದು ಅವಶ್ಯಕತೆಯಾಯಿತು ನಾಲುಕೆಟ್ಟ್, ಎಟ್ಟ್‌ಕೆಟ್ಟ್, ಪದಿನಾಯಿಕೆಟ್ಟ್, ಎಂಬಂತಿರುವ ಗೃಹನಿರ್ಮಾಣ ರೀತಿ

ಮರುಮಕ್ಕತ್ತಾಯಂ ಕುಟುಂಬಗಳಿಗಾಗಿ ಇಲ್ಲಿ ಸ್ವತೃತವಾದವು ಈ ಬಗೆ ವಾಸ್ತು ಶಿಲ್ಪ ರೀತಿಯನ್ನು ಕೇರಳದಲ್ಲಿ ಬೆಳೆಸಿದವರು ತಚ್ಚನ್‌ಗಳು ಅಥವಾ ಮರಾಶಾಲಿ (ಬಡಗಿ) ಗಳಾಗಿದ್ದರು ಅದರಿಂದ ಇವರ ಭವನ ನಿಮಾಣ ಶಾಸ್ತ್ರಕ್ಕೆ 'ತಚ್ಚನ್ ಶಾಸ್ತ್ರಂ' ಎಂದು ಹೆಸರಾಯಿತು ಪ್ರತ್ಯೇಕವಾಗಿ ಮೇಲು ತಟ್ಟಿನ ಸ್ಥಳಗಳಲ್ಲಿ ಭೂಮಿಯನ್ನು ಸಮತಟ್ಟು ಮಾಡಿ ಕೇಂದ್ರಸ್ಥಾನದಲ್ಲಿ ನಡು ಅಂಗಳದೊಂದಿಗೆ ಕೂಡಿದ ಆಲುಕೆಟ್ಟ್‌ನ್ನು ಕಲ್ಲು, ಸುಣ್ಣ, ಮರಗಳನ್ನು ಬಳಸಿ ನಿರ್ಮಿಸಿದರು ಒಂದು ನಾಲುಕೆಟ್ಟಿ ಪ್ರಧಾನ ಭಾಗಗಳೆಂದರೆ ಪಡಿಞ್ಞಾಱ ತೆಕ್ಕಿನಿ, ವಡಕ್ಕಿನಿ, ಕಿಱಕ್ಕಿನಿ ಎಂಬವುಗಳು ಇವಲ್ಲದೆ ಅಡುಕ್ಕಳ್ (ಅಡು8ಗೆ ಮನೆ) ಬಾವಿ, ಱನಾಡಿನ ಕೊಳ, ಪಡಿಪ್ಪುರ (ಪಡಿಪಿರೆ) ಪತ್ತಾಯಪ್ಪುರ ಗೋಶಾಲೆ ಇವು ನಾಲುಕೆಟ್ಟಿನ ಅಥವಾ ಎಟ್ಟ್ ಕೆಚ್ಚಿನ ಭಾಗಗಳಾಗಿ ನಿರ್ಮಾಗೊಂಡವು ಹಾಲಿರುವ ಮರಗಳಿಂದ ಕೂಡಿದ 'ಪಾಂಬಿನ್‌ಕಾವು' (ಹಾವಿನ ಕಾವು) ಅನ್ನು ಮನೆ ಇರುವ ಆವರಣದೊಳಗೆ ನೆಲೆಗೊಳಿಸಿತು ನಡು ಅಂಗಳ ದಲ್ಲಿ ತುಳಸಿತ್ತಱ (ತುಳಸಿಕಟ್ಟೆ) ತೆಕ್ಕಿ ನಿಯಲ್ಲಿ ಕುಲಭರದೇವತಾ ಸಂಕಲ್ಪವೂ ಕುಲಕೂಟ ಸ್ಥಾನವೂ ಇದ್ದವು ತಱವಾಡಿಗೆ ಸಂಬಂಧಿಸಿದ ಪ್ರಧಾನ ಆಚಾರ ಅನುಷ್ಠಾನಗಳನ್ನು ಪಡಿಞ್ಞಱ ಕೇಂದ್ರವಾಗಿದ್ದು ನಡೆಸಿದರು ಪ್ರದಾನ ತಱವಾಡು ಸ್ಥಿರ ಬ್ರಹ್ಮಣ ಸಂಬಂಧ ಹೊಂದಿದರಿಂದ ಬ್ರಾಹ್ಮಣ ವರನಿಗಾಗಿ ಪ್ರತ್ಯೇಕ 'ಮಠ' ರಚನೆಗೊಂಡಿತು ಕೆಲ ತಱವಾಡುಗಳಲ್ಲಿ 'ಆನಪ್ಪಂದಿ' (ಆನೆಗಾಗಿ ಇರುವ ಚಪ್ಪರದಂಥ ನೂರು) ಯನ್ನೂ ಕಾಣಬಹುದು.

'ನಾಲುಕೆಟ್ಟ್'ಗಳಲ್ಲಿ ಕುಸುರಿಕೆತ್ತನೆಯ ಕಂಬ (ಚಿತ್ರತ್ತೂಣ್)ಗಳು ಬಾಗಿಲಿನಲ್ಲಿ ಗಜಲಕ್ಷ್ಮೀಯ ಕೆತ್ತನೆಗಳೊ ಇದ್ದವು ಕೆಲ ನಾಲುಕೆಟ್ಟ್‌ಗಳನ್ನು ಮಾಳಿಗೆ ಮನೆಗಳಾಗಿಯೂ ಎತ್ತರಿಸಲಾಯಿತು ಆರಂಭಕಾಲದಲ್ಲಿ ಸೋಗೆ ಕಂಡ ಹೊದಿಸಿದ ನೂರು ಇತ್ತು ಅನಂತರ 'ಮಾಡೋಡು' (ಮಣ್ಣಿನ ಓಡು) ಹೊದಿಸಲಾಯಿತು ಆದರೆ 1860 ರಲ್ಲಿ ಹೊಸ ಅಚ್ಚಿನಲ್ಲಿ ಮಂಗಳೂರಿನಿಂದಲೂ ಫರೋಕ್‌ನಿಂದಲೂ ಬಾಸಲ್ ಮೀಷನ್ ಹಂಚು ಬರತೊಡಗಿದಾದ ಸಿರಿವಂತ ತಱವಾಡುಗಳು ಮನೆಗೆ ಹಂಚು ಹೊದಿಸಿದವು ಮರು ಕ್ಕತ್ತಾಯ ತಱ ವಾಡುಗಳು ತಲೆ ಲೆಕ್ಕದಲ್ಲಿ ಆಸ್ತಿ ಹಂಚೋಣ ಮಆಡಿಕೊಂಡ ಬಳಿಕ 'ನಾಲುಕೆಟ್ಟ್'ಗಳಲ್ಲಿ ಬಹು ಸಂಖ್ಯೆಯವುಗಳೂ ಒಡೆದು ಹಂಚಿಹೋದವು

ಕುಸಿಯುವ ವ್ಯವಸ್ಥೆ

'ಮರುಮಕ್ಕತ್ತಾಯಂ' ವ್ಯವಸ್ಥೆಯ ಕುಟುಂಬದಲ್ಲಿ ಒಂದು ಆರ್ಥಿಕ ಕ್ರಮೀಕರಣ ನೆಲಸಿತ್ತು ಮರಣ , ಜನನ, ವಿವಾಹ ಮೊದಲಾದ ಹಲವಾರು ಚಡಂಗಗಳ ಇಡಿಯ ಖರ್ಚುನ್ನು ತಱವಾಡು ನೆರೌಅಗಿ ವಹಿಸಿಕೊಳ್ಳಬೇಕು ಎಂಬುದಾಗಿತ್ತು ಶಿಸ್ತು ನಿತ್ಯನಿಧಾನ ಖರ್ಚು, ಜೀವಾನಾಂಶವೂ ಒಬ್ಬೊಬ್ಬ ಸದಸ್ಯರನಿಗೂ ಒಪ್ಪಲಾಗಿತ್ತು ಕಾಲ ಕ್ರಮದಲ್ಲಿ ಒಂದು ತಱವಾಡು ನಾಲ್ಕೋ ಇದೋ 'ತಾವಟಿ'(ತಾಯ್

ವಜೆ–ಕವಲು) ಗಳಾಗಿ ಭಾಗಿಸಲ್ಪಟ್ಟಿತು ಒಂದೊಂದು ಕವಲಿಗೂ ಭೂ ಸ್ವತ್ತುಗಳ ಬಗೆಗೆ ವ್ಯವಹರಿಸಲು ತಱವಾಡಿನ ಕಾರಣವರ್ ಕಾರಾರಿನ ಆಧಾರದಲ್ಲಿ ಅಧಿಕಾರಬಿಟ್ಟುಕೊಟ್ಟರು 'ತಾವಜಿ'ಯ ಸದಸ್ಯ ಸಂಖ್ಯ ಎಹೆಚ್ಚುತ್ತ ಬಂದುದರೊಂದಿಗೆ ಹೆಚ್ಚಿನ ಜೀವನಾಂಶವನ್ನು ಬೇಡಿ ತಾಱವಾಡು ಕಾರಣವರ್ ವಿರುದ್ದ ತಾವಜೆ' ಕಾರಣವರ್‌ಗಳು ಕೋರ್ಟಿನಲ್ಲಿ ಖಟ್ಲೆ ಹೂಡಿದರು.

ಕಾರವರ್‌ಗಳ ಎಲ್ಲ ಬಗೆ ಸಂಪಾದನೆಯೂ ನ್ಯಾಯ ಪ್ರಕಾರ 'ತಱವಾಡಿ'ನ ಮತ್ತು 'ತಾವಜೆ'ಯದು ಆಗಿತ್ತು ಅದರಿಂದಾಗಿ ತಮ್ಮ 'ಭಾರ್ಯ' (ಹೆಂಡತಿ)ಗಳಿಗೆ ಅವಶ್ಯವಾದ ಸ್ವತ್ತು ನೀಡಲು ತಱನಾಡಿನ ಆಸ್ತಿಯನ್ನು ಅಡಮಾನ ಹಾಕುವುದು ಗೈಮೆ ಹಕ್ಕು ಮಾರಾಟ (ಕಾಂ) ಮಾಡುವುದು ಇತ್ಯಾದಿವನ್ನು ಮಾಡುವುದು ಕಾರಣವರ್‌ಗೆ ಅನಿವಾರ್ಯವಾಯಿತು ಇದು 'ಅನಂದಿರವನ್'ಗಳ (ಅಳೀಯಂದಿರ ಕಠಿನ ದ್ವೇಷಕ್ಕೆ ಕಾರಣವಾಯಿತು ಕೆಲವು ತಱವಾಡುಗಳಲ್ಲಿ ಕಾರಣವರ ಸ್ವಂತ ಖರ್ಚಿನಲ್ಲಿ ಪ್ರತ್ಯೇಕ ಸ್ಥಾನಸ್ವತ್ತನ್ನು ವಿಂಗಡಿಸಲಾಗಿತ್ತು ಇದು ಸ್ಥನಮಾನಗಳಿದ್ದ ತಱವಾಡುಗಳಲ್ಲಿ ಮಾತ್ರ ಇತ್ತು ಉಳಿದೆಡೆ ಕಾರಣವರ (ಮಾವನ) ಮೇಲಿನ ಹಗೆ 'ಅಮ್ಮಾಯಿ' (ಅತ್ತೆ) ಮೇಲೆ ಪ್ರತಿಫಲಿಸುತ್ತಿತ್ತು ಅದಕ್ಕೆ ಸಾಕ್ಷ್ಯವಾಗಿ ಈ ದ್ವಿಪದಿ ರಚನೆಯಾಗಿದೆ.

'ಅಮ್ಮಾಯಿಯಮ್ಮಯೇ ಕಲ್ಲಿನ ಮೇಲ್ ವೆಚ್ಚಿಟ್ಟ್'

(ಅತ್ತೆಯಮ್ಮನ ಕಲ್ಲಮೇಲಿರಿಸುತ್ತ)

ನಲ್ಲೋರು ಕಲ್ಲೊಂಡ್ ನಾರಾಯಣಾ!

(ಒಂದು ಚಲೋ ಕಲ್ಲಿಂದ ನಾರಾಯಣ!)

ಮರುಮಕ್ಕತ್ತಾಯ ಕುಟುಂಬದ ಆರ್ಥಿಕ ಭದ್ರತೆ ಶಿಥಿಲಗೊಳ್ಳುವುದರೊಂದಿಗೆ ಒಂದು ದಾಯಕ್ರಮವೆಂಬ ನೆಲೆಯಲ್ಲಿ ಇದನ್ನು ಕೊನೆಗೊಳಿಸಲು ಭೂಮಿ ಆಸ್ತಿಯನ್ನು ತಲೆವಾರು ಭಾಗಿಸಲೂ ಆಗ್ರಹಿಸಿ ರಾಜ್ಯದಲ್ಲಿ ಚಳವಳಿಗೆ ಮೊದಲಿಟ್ಟಿತು ಕೊಲೋನಿಯಲ್ ಕಂದಾಯ ವ್ಯವಸ್ಥೆಯೂ ಖರ್ಚು ಏರತೊಡಗಿದ ಕೋರ್ಟು ವ್ಯಾವಹರವೂ, ಇರುವ ದಂಪತ್ತಿನ ಮೌಲ್ಯ ಕೊರೆದು ಹೋಗ ತೊಡಗಿದ್ದು ಏರಿದ ಜೀವನ ವೆಚ್ಚವೂ ಈ ಶಿಥೀಲೀಕರಣ ಪ್ರಕ್ರಿಯೆಯನ್ನು ತ್ವರಿತಗೊಳಿಸಿತು ವಿಲಿಯಂ ಲೋಗನ್‌ನ ಒಕ್ಕಲುತನ ಕಮಿಷನ್ ವರದಿ (1881) ಯಲ್ಲಿ ಮರುಮಕ್ಕತ್ತಾಯಂ ಕಱನೆಗೊಳ್ಳ ಬೇಕಾದುದೆಂದೂ ವ್ಯಕ್ತಿತ್ವವಾದ (ಿಟಿಜುತುಜಣಚಿಟುಟ)ವನ್ನು ಬೆಳೆಸಬೇಕೆಂದು ಶೀಫಾರಸು ಮಾಡಲಾಗಿತ್ತು ಪರಂಪರಾಗತ ಸಮೂಹದಲ್ಲಿ ಖೃಷಿ ವಿಕಸನವೂ ಆರ್ತಿಕ ಪ್ರಕ್ರಿಯೆಯೂ ಪ್ರೋತ್ಸಾಹಗಳಿಸುತ್ತಿಲ್ಲ ಎಂಬುದಾಗಿತ್ತು ಈ ಶಿಪಾರಸಿಗೆ ಕಾರಣ

ಮರುಮಕ್ಕತ್ತಾಯದ ಆಸ್ತಿಗಳನ್ನು ಪಾಲು ಮಾಡಿಕೊಳ್ಳಲು ಕೋರಿ ಕೊಙಿಕ್ಕೋಡಿನ ವೆಸ್ಟರ್ನ್ ಡಿವಿಜನ್ ಪ್ರಾವಿಸ್ಶಯಲ್ ಕೋರ್ಟಿನ ಮುಂದೆ 1813 ರಲ್ಲೆ ಒಂದು ಕೇಸು ಉದ್ಭವಗೊಂಡಿತು ಆದರೆ ಇದಕ್ಕೆ ಮರುಮಕ್ಕತ್ತಯಂ ನಿಯಮದಲ್ಲಿ ಅವಕಾಶವಿಲ್ಲವೆಂದು ಕೋರ್ಟು ತೀರ್ಪು ನೀಡಿತು ಇದರ ಅಫೀಲು ಅರ್ಜಿಯಲ್ಲಿ (ಚಿ5: 28/1814) ಸಾದರ್ ಕೋರ್ಟು ಈ ತೀರ್ಪನ್ನು ಎತ್ತಿ ಹಿಡಿಯಿತು ಅಂದರೆ ಕೊಲೋನಿಯಲ್ ಆಡಳಿತದ ಆರಂಭದ ಘಟ್ಟದಲ್ಲಿ ಊರ ಪದ್ಧತಿಗಳಲ್ಲಿ ಮಧ್ಯ ಪ್ರವೇಶಿಸಲು ಆಡಳಿತಾಧಿಕಾರಿಗಳು ಇಷ್ಟಪಡಲಿಲ್ಲ ಎಂದು ಭಾವಿಸಬೇಕಾಯಿತು ಆ ಹತ್ತೊಂಬತ್ತನೆ ಶತಮಾನದ ಕೊನೆ ಭಾಗದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸ ಪಡೆದು ನಾಯರ್‌ಗಳು ಬ್ರಾಹ್ಮಣ 'ಸಂಬಂಧ'ಕ್ಕೆ ವಿರುದ್ದವಾದ ಪ್ರತಿಕ್ರಿಯೆ ಎತ್ತ ತೊಡಗಿದರಲ್ಲದೆ ಮಲಬಾರಿಗೆ ಒಂದು ವಿವಾಹ ಕಾಯಿದೆ ಅವಶ್ಯವೆಂದು

ಹಲವು ವೇದಿಕೆಗಳಲ್ಲಿ ಒತ್ತಯಿಸತೊಡಗಿದರು ಓ ಚಂದು ಮೇನೋನ್ ಬರೆದ ಕಾದಂಬರಿ 'ಇಂದು ಲೇಖ' ಈ ಬಗೆ ಪರಿಸ್ಥಿತಿಯಲ್ಲಿ ಉಂಟಾದ ಪರಿವರ್ತನ ಸ್ವಭಾವವನ್ನು ವ್ಯಕ್ತಪಡಿಸುತ್ತದೆ. ಅದೇನೆಂದರೆ ಒಬ್ಬಳು ಸ್ತ್ರೀಯನ್ನು, ಅಕೆಯ ಗಂಡ ಇರುತ್ತಾಳೆ, ಇನ್ನೊಬ್ಬನಿಗೆ ವಿವಾಹ ಮಾಡಿಕೊಡುವ ಪದ್ದತಿ ಆರ್ಥಿಕ ಹಿತಾಸಕ್ತಿಗಾಗಿ ನೆಲೆ ನಿಂತಿತ್ತು ಇದಲ್ಲದೆ ಸಂತಾನಗಳಿಗೆ ಆಸ್ತಿ ಹಕ್ಕು ಸಿಗಲು ಬೇಕಾದ ಕಾಯಿದೆಯೂ ಉಂಟಾಗಿರಲಿಲ್ಲ ಇದರಿಂದಾಗಿ ವಿವಾಹವನ್ನು ಸಾಧುಕರಿಸಲು 1896 ರಲ್ಲಿ 'ಮಲಬಾರ್ ವಿವಾಹ ಕಾಯಿದೆ'ಯನ್ನು ಜಾರಿಗೆ ತಂದರು ಇಪ್ಪತ್ತನೆ ಶತಮಾನದಲ್ಲಿ ರಾಷ್ಟ್ರೀಐ ಪ್ರಸ್ಥಾನದ ಭಾಗವಾಗಿ 'ಮರುಮಕ್ಕತ್ತಾಯಂ'ದಾಯ ಕ್ರಮವನ್ನು ಅಳಿಸುವ ಕಾನೂನನ್ನು ತರಬೇಕೆಂದುಸಮಾಜ ಸುಧಾರಣಾ ವಾದಿಗಳು ಮುಂದೆ ಬಂದರು 'ಪಿಂಡತ್ತಿ ನ್ನಾಂಡವನ್ ಕಂಡತ್ತೇಯುಂ' (ಪಿಂಡಪ್ರಧಾನದ ಹಕ್ಕುದಾರ ಗದ್ದೆಯ ಹಕ್ಕನ್ನು) ಪಡೆಯಬೇಕೆಂದು ಅವು ಇಚ್ಚಿಸಿದರು (ಮರುಮಕ್ಕತ್ತಯಂನಲ್ಲಿ ತಂದೆಯ ಆಸ್ತಿಯಲ್ಲಿ ಮಗನಿಗೆ ದಾಯಭಾಗ ಇಲ್ಲದಾಗಲೂ ತಂದೆಯ ಉತ್ತರ ಕ್ರಿಯೆಯಲ್ಲಿ ಪ್ರಧಾನ ಕರ್ಮಿಗಳಲ್ಲಿ ಆತ ಇರುತ್ತನೆ. ಹಾಗಾಗಿಯೇ ಮಾತು ಬಂದುದು 'ಕಂಡಂ' ಮರುಮಕನುಂ ಪಿಂಡಂ ಮಕನುಂ' ಗದ್ದೆ ಹಕ್ಕು ಅಳಿಯನಿಗೂ ಪಿಂಡದ ಹಕ್ಕು ಮಗನಿಗೂ ಅನು ಇದಲ್ಲದೆ ಮರುಮಕ್ಕತ್ತಾಯ ತಙವಾಡುಗಳಲ್ಲಿ ಹಲವು ಬಗೆ ಬಿರುಕುಗಳು ಹಲವು ಕಾರಣಗಳಿಗಾಗಿ ನೆಲೆನಿಂತವಲ್ಲದೆ ಅದೊಮದು ಕೃತಕವಾದ ಗತಕಾಲದ ಸಂಸ್ಥೆಯಾಗಿ ಮಟ್ಟದ ಕುಸಿತ ವನ್ನು ಕಂಡಿತು ಅದು ಒಳಗೊಂಡ ಪರಂಪರಾಗತ ನಿಯಮದ ಸಿಕ್ಕಿನ ದಾರಗಳಲ್ಲಿ ಸಂಪನ್ನನೂದರಿದ್ರನೂ ಒಂದೇ ರೀತಿ ಸಿಕ್ಕಿ ಬಿದ್ದರು ಇದನ್ನು ಕಾನೂನಿನ ಮೂಲಕ ಕೊನೆಗೊಳಿಸುವ ನಿಟ್ಟಿನ ಮೊದಲ ಶ್ರಮ ತಿರುವಿದಾಂ ಕೂರಿನಲ್ಲಿ ನಡೆಯಿತು ನಾಯರ್ ಸರ್ವಿಸ್ ಸಂಘಟನೆಯ ಇದಕ್ಕೆ ನೇತೃತ್ವ ನೀಡಿತು ಹಾಗೆ 1912 ರ ನಾಯರ್ ರೆಗ್ಯಲೇಶನ್ ಕಾಯಿದೆ ಜಾರಿಗೆ ಬಂತು ಇದು ತಲಾ ಆಸ್ತಿ ವಿಭಜನೆಗೆ ಒಪ್ಪಿಗೆ ನೀಡಲಿಲ್ಲ ಬದಲಾಗಿ ಸ್ವಾಜಿತ ಸ್ವತ್ತಿನ ಆರ್ಧಾಂಶ ಮಕ್ಕಳಿಗೂ ಆರ್ಧಾಂಶ ಸೋದರೀ ಪುತ್ರರಿಗೂ ಪಾಲು ಮಾಡಿಕೊಡುವ ಕ್ರಮ ಬಂತು ಆದರೆ 1925 ರಲ್ಲಿ ಜಾರಿಗೆ ಬಂದ ನಾಯರ್ ಆ್ಯಕ್ಟ್ ಆಸ್ತಿಯನ್ನು ತಲಾ ಆಗಿ ವಿಭಾಗಿಸಲೂ ಕಾರಣವರ್‌ಗಳ ಆಸ್ತಿಯಲ್ಲಿ ಅನಂತರವನ್‌ಗಳಿಗೆ ಪಾಲು ನಿಷೇಧಿಸಲೂ ಅವಕಾಶ ನೀಡಿತು ಆ ಬಳಿಕ 'ಈ ವಿವ ಆ್ಯಕ್ಟ್ ಮತ್ತು

'ನಾಂಜಿನಾಡು ವೆಳ್ಳಾಳ್ ಆ್ಯಕ್ಟ್ ಇದೇ ಕ್ರಮವನ್ನು ಜಾರಿಗೆ ತಂದಿತು ಕೊಚ್ಚಿನ್ ನಾಯರ್ ರೆಗ್ಯುಲೇಶನ್ ಆ್ಯಕ್ಟ್ (1919–20) ಬಹುಭರ್ತೃತ್ವವನ್ನು ನಿಷೇಧಿಸಿತು ಮಾತ್ರವಲ್ಲ ಹೆಂಡತಿಗೂ, ಸಂತತಿಗಳಿಗೂ ಖರ್ಚಿಗೆ ಕೊಡುವ ಬದ್ದತೆಗೆ ನಾಯರ್‌ಗಳಲ್ಲದ ಗಂಡಂದಿರನ್ನೂ ಒಳಪಡಿಸಿತು ಪತ್ನಿಯನ್ನೂ ಮಕ್ಕಳನ್ನೂ ಸಲಹುವುದಕ್ಕೆ ಗಂಡಂದಿರನ್ನು ಅಥವಾ ತಂದೆಯಂದಿರನ್ನು ಜವಾಬ್ದಾರಗೊಳಿಸಲಾಯಿತು ಅನಂತರ 1937–38 ರ ಕೊಚ್ಚಿನ್ ನಾಯರ್ ಆ್ಯಕ್ಟ್ ಮರುಮಕ್ಕತ್ತಾಯಂ ದಾಯಕ್ರಮವನ್ನು ಕೊನೆಗೊಳಿಸತಲ್ಲದೆ ಆಸ್ತಿಯ ತಲಾ ವಿಭಜನೆಯನ್ನು ಜಾರಿಗೆ ತಂದಿತು.

ಇದರ ನಡುವೆ ಈ ಬಗೆಯ ಕಾನೂನು ಬರಬೇಕೆಂದು ಮಲಬಾರಿನಲ್ಲೂ ಚಳವಳ ಕಾಣಿಸಿತು ಮದ್ರಾಸ್ ಮರುಮಕ್ಕತ್ತಾಯ ಕಾಯಿದೆ 1933 ರಲ್ಲಿ ಜಾರಿಗೆ ಬಂತು ಕಾರಣವರ ಅನುಮತಿ ಇಲ್ಲದಿದ್ದರೂ ಬಹುಸಂಖ್ಯೆಯ ಕುಟುಂಬ ಸದಸ್ಯರು ಒಪ್ಪಿದರೆ ತಲೆ ಲೆಕ್ಕದಲ್ಲಿ ತಱವಾಡಿನ ಆಸ್ತಿ ಪಾಲು ಮಾಡಲು ಅನುವು ನೀಡಿತು ಇದು ಪಯ್ಯನ್ನೂರು ಗ್ರಮದ ಮರುಮಕ್ಕತ್ತತ್ತಯಿಗಳಾದ ನಂಬೂತಿರಿಗಳಿಗೂ ಎಲ್ಲ ಮರುಮಕ್ಕತ್ತಯ ಕುಟುಂಬಗಳಿಗೂ ಅನ್ವಯಗೊಂಡಿತು ಮುಂದಾವರಿದು 1933 ರಲ್ಲೆ ಮಾಪ್ಪಿಳ ಮರುಮಕ್ಕತ್ಥಾಯ ನಿಯಮ ಜಾರಿಗೆ ಬಂತು ಈ ನಿಯಮ ಪರಿಷ್ಕರಣಗಳೊಂದಿಗೆ ಮದ್ರಾಸು ನಂಬೂತೀರಿ ನಿಯಮ ಜಾರಿಗೆ ಬಂತಲ್ಲದೆ ಸ್ವತ್ತು ವಿಭಜನೆ ಸ್ತ್ರೀ ಪುರುಷರಲ್ಲಿ ಸಮಪಾಲಿನಲ್ಲಿ ನಡೆಯಲು ಅನುವು ನೀಡಿತು.

ಈ ನಿಯಮಗಳು ಕಾರಣವರ ಸ್ಥಾನಸ್ವತ್ತುಗಳಿಗೆ ಬಾಧಕವಲ್ಲ ಎಂಬ ಲಂಡನಿನ ಪ್ರಿವಿಕೌನ್ಸಿಲಿನ ತೀರ್ಪನ್ನು ಅನೂರ್ಜಿತಗೊಳಿಸಲು 196 ರಲ್ಲಿ ಹಿಂದೂ ವಾರಿಸುದಕ್ಕೂ ಕಾಯಿದೆಯಲ್ಲಿ ಒಂದು ಪ್ರತ್ಯೇಕ ಖಂಡಿಕೆಯನ್ನು ಸೇರಿಸಲಾಯಿತು. ಈ ರೀತಿಯಲ್ಲಿ ಶತಮಾನಗಳಿಂದ ನೆಲೆನಿಂತಿದ್ದ 'ಮರುಮಕ್ಕತ್ತಾಯಂ' ಎಂಬ ಸಂಸ್ಥೆ ಒಂದು ಚಾರಿತ್ರಿಕ ಸ್ಮೃತಿ ಮಾತ್ರವಾಗಿ ಉಳಿಯಿತು.

'ಮರುಮಕ್ಕತ್ತಾಯಂ'ನ ಅಂತ್ಯವನ್ನು ಸಂಬಂಧಿಸಿ ಭಾವನಾತ್ಮಕವಾದ ಅವಗಾಹನವನ್ನು ಪ್ರಸಿದ್ದ ರಾಷ್ಟ್ರೀಯ ವಾದಿಯೂ ನೇತರರೂ ಅದ ಎ.ಸಿ. ಕಣ್ಣನ್ ನಾಯರ್ 1937 ರ ಆಗಸ್ಟ್ 8 ರಂದು ಡೈರಿಯಲ್ಲಿ ದಾಖಲಿಸಿದ್ದಾರೆ. ಅದು ಇಲ್ಲಿ ಉದ್ದರಿಸಲು ಅರ್ಹವಾಗಿದೆ. ಅವರು ಬರೆದರು.

'ತ್ರವಾಡು ಹೋಗಿ ತಾವಱಿಯಾಯಿತು, ತಾವಱೆಯಿಂದ ಒಂಟಿ ಪಾಲು ಮಾಡಿತು ಪುರುಷರಿಗೆ, ದೊಡ್ಡ ಕಾರಣವರಿಗೆ, ನಮಗೆ ಸಹೋದರರು ಮೂವರಿಗೆ ಒಂದು ಒಂಟಿ ಪಾಲು ಕೊಟ್ಟು ಕಳುಹಿಸಲು ನಮ್ಮ ಏಕೋದರ ಸಹೋದರಿಗಳೇ ಒತ್ತಡ ತಂದಿರುವುದು ವಾಸ್ತವದಲ್ಲಿ ನಮ್ಮಲ್ಲಿ ಯಾರಿಗೂ ಇಷ್ಟವಿಲ್ಲದಿದ್ದ ವಿಷಯವಿದು ಅವರು ಹೇಳುವ ವ್ಯಕ್ತಿಗೆ 'ಮುಕ್ತ್ಯಾರ್' (ಠಿಂತಿಜಡಿ ಂಜಿ ಚಿಣಣಂಡಿಟಿಜಥಿ) ನೀಡಲೂ ನಾವು ತಯಾರಿದ್ದೇವು ಹಾಗೆ ತಲಾ ಹಿಸ್ಸೆಯೂ ಒಟ್ಟಾರೆ ಬಾಂಧವ್ಯವೂ ಕೊನೆಗೊಂಡಿತು ನಾಳೆಯಿಂದ ಒಂದು ಹೊಸ ಅದ್ಯಾಯವನ್ನು ಆರಂಭಿಸಲು ಹೋಗುತ್ತಿದ್ದೇನೆ.

ಇದೇ ಡೈರಿಯ ಕೊನೆಯ ಪುಟದಲ್ಲಿ ಒಂದೆಡೆ ಅವರು ದಾಖಲಿಸುತ್ತಾರೆ.

'ಒಂದು ದೊಡ್ಡ ಕಂದಾಯವುಳ್ಳ ತಱವಾಡು ಹೋಯಿತು ಇನ್ನು ಅಹಂಕಾರ ಪಡಲು ಇಲ್ಲ ಹಾಗೆ ತಾ ಹಿಸ್ಸೆ ಪಡೆದು ಅಕ್ಕಂದಿರ ಅಥವಾ ಅವರ ಮಕ್ಕಳ ವಾರಿಸಿದ ಹಕ್ಕಿಲ್ಲದೆ ನಾವು ಒಂಟಿಗಳಾಗಿ ಹೊರಬಮದೆವು ಇನ್ನು 'ಶೇಷಕ್ಕಾರ್' ಎಂದು ಹೇಳುವ ಸೋದರಳಿಯಂದಿರ ಬಯ್ಗಳವನ್ನೊದೂರುಗಳನ್ನೋ ಕೇಳುವುದಕ್ಕಿಲ್ಲ. . .

ಅಹೋ ಸ್ವಾರ್ಥ, ದ್ರವ್ಯ ಸಹೋದರ ಸ್ನೇಹವನ್ನು ಇಲ್ಲವಾಗಿಸುತ್ತದೆ. ಅಕ್ಕಂದಿರಿಗೆ ನಮ್ಮಲ್ಲಿ ವಿಶ್ವಾಸವಿಲ್ಲ ಅವರ ಮಕ್ಕಳ ಪತಿಗಳು! ಅನ್ಯ ತಱವಾಡಿನಲ್ಲಿ ಹುಟ್ಟಿದ ಅವರಲ್ಲೇ ವಿಶ್ವಾಸ. . . ನಾನು ಒಂದು ಹೊಸ ವೇಷದಲ್ಲಿ ಅಕ್ಕಂದಿರನ್ನೂ ಅವರ ಮಕ್ಕಳನ್ನೂ ನನ್ನ ಸ್ವತ್ತಿನ ಹಕ್ಕುದಾರರಲ್ಲದ ನೆಲೆಯಲ್ಲಿ ನಾನು ನನ್ನ ಪತ್ನಿ ಮಕ್ಕಳೊಂದಿಗೆ ಸೇರಿ ರಂಗ ಪ್ರವೇಶ ಮಾಡುತ್ತೇನೆ.

ಮರುಮಕ್ಕತ್ತಾಯವೂ ಜಾನಪದವೂ.

ಮರುಮಕ್ಕತ್ತಱವಾಡುಗಳಲ್ಲಿ ನೆಲೆನಿಂತಿದ್ದ ಹಲವು ಅನುಷ್ಠಾನಗಳು ಇಂದು ಅಣು ಕುಟುಂಬದಲ್ಲಿ ನೆಲೆನಿಂತಿಲ್ಲ ಈ ಸ್ಥಿತಿ ಸಮೂಹದ ಜಾನಪದ ಶಾಖೆಯನ್ನು ಸೊರಗಿಸುತ್ತಿದೆ. ಎಂಬುದು ಒಂದು ವಾಸ್ತವ ಮರುಮಕ್ಕತ್ತಾಯ ತಱವಾಡುಗಳ ಪ್ರತ್ಯೇಕವಾದ ಆಚಾರ ಅನುಷ್ಠಾನಗಳು ಈ ಶಾಖೆಯ ಬೆಳವಣಿಗೆಗೆ ದೊಡ್ಡ ಕೊಡುಗೆ ನೀಡಿದ್ದವು ಸ್ತ್ರೀ ಸಂತಾನಕ್ಕೆ ಈದಾಯ ಕ್ರಮದಲ್ಲಿ ಇದ್ದ ಪ್ರದಾನ್ಯದ ಕಾರಣ ಅಭೀಷ್ಟ ಸಿದ್ದಿಗಾಗಿ ಮಾಕ್ಕಂ ಭಗವತಿಯನ್ನು ತೆಯ್ಯಂ ಆಗಿಯೂ ತಿಱಾಗಿಯೂ ಕಟ್ಟಿ ಆಡಿಸಿ ಬಂದರು ಇಲ್ಲಂ ನಿಱ, ಪುತ್ತರಿ (ಹೊಸತು) ಓಣಪ್ಪೊಟ್ಟನ್, ಕೊತಾಮ್ಮೂರಿ, ಉಚ್ಚಾಲ್ ವರಯಲ್ ಮೊದಲಾದ ಹಲವು ಬಗೆ ಅನುಷ್ಟನಗಳು ಮರು ಮಕ್ಕತ್ತಱವಾಡುಗಳಲ್ಲಿ ನೆಲೆಯಾಗಿದ್ದವು ಕುಡಿನೀರನ್ ಮೊದಲಾದ ತೆಯ್ಯಂಗಳು ಕಾರಣವ ಪೂಜೆಯನ್ನು ಪ್ರತಿ ಬಿಂಬಿಸುತ್ತದೆ. ಒಂದೊಂದು ತಱವಾಡಿನ ಕಾವುಗಳಲ್ಲಿ ಪ್ರತ್ಯೇಕವಾದ ಹಬ್ಬಗಳೂ ತೆಯ್ಯಂಗಳು ಆಚರಣೆಗೊಳ್ಳುತ್ತಿದ್ದವು ಭೂ ಸುಧಾರಣೆಯನ್ನು ಜಾರಿಗೊಳಿಸುದರೊಂದಿಗೆ ಅಣುಕುಟುಂಬ ರೂಪದಲ್ಲಿ ಉಳಿದುಕೊಂಡು ತಱವಾಡುಗಳಿಗೂ ಈ ಬಗೆ ಅನುಷ್ಠಾನಗಳಲ್ಲಿ ಹಲವನ್ನು ಕೈ ಬಿಡಬೇಕಾಗಿ ಬಂತು

ಆದರೆ, ಸಾಂಸ್ಕೃತಿಕ ಪಳೆಯುಳಿಕೆ ಎಂಬ ನೆಲೆಯಲ್ಲಿ ಹಲವು ಸಾಮಾಜಿಕವಾದ ಅನುಷ್ಠಾನಗಳು ಇವತ್ತೂ ಕಾಣಸಿಗುತ್ತವೆ. ಹಲವು ಕಾವುಗಳ ಸ್ಥಾನ ಹಿರಿತನ ಮರುಮಕ್ಕತ್ತಾಯ ತಱವಾಡುಗಳ ಕಾರಣವರಲ್ಲೆ ನಿಕ್ಷಿಪ್ತವಾಗಿದೆ. ನಾಮಮಾತ್ರ ರೂಪದಲ್ಲಾದರೂ ಇವತ್ತೂ ಅವರು ಅದನ್ನು ಅನುಷ್ಠಿಸಿ ಬರುತ್ತಿದ್ದಾರೆ ಅಂದಿತ್ತಿರಿಯನ್, ವೆಳಿಚ್ಚಪ್ಪಾಡನ್ ಮೊದಲಾದ ಪರಿಕರ್ಮಿಗಳು ಇವತ್ತೂ ಈ ದಾಯಕ್ರಮದಲ್ಲಿಕೆಲವೆಡೆ ನೇಮಕಗೊಳ್ಳುತ್ತಾರೆ ತೆಯ್ಯಂ ಕಲಾಕಾರರಿಗೂ 'ಪೆರುಮಲಯನ್',

'ಪೆರುವಣ್ಣಾನ್' ಮೊದಲಾದ ಸ್ಥಾನಮಾನಗಳನ್ನು ಅಂಕಿತಗೊಳಿಸುವುದು ಇವತ್ತೂ ಪ್ರಭುಗಳ ಮತ್ತು ರಾಜ್ಯ ಆಳರಸರ ವಾರಿಸುದಾರರೇ ಆಗಿದ್ದಾರೆ ಮೊದಲಾಗಿ ಸ್ಥನ ಕರೆಹ ಇತ್ಯಾದಿಗಳಲ್ಲಿ ಹಳೆಯ ತರವಾಡುಗಳ ಸ್ಥನಗಳ ಹೆಸರುಗಳೇ ಬರುತ್ತಿವೆ. ಹಲವು ಕಾವುಗಳಲ್ಲಿ ಕೆಲವು ಪ್ರತ್ಯೇಕ ಕುಟುಂಬಗಳವರ ಅನುಷ್ಠಾನವರವಾದ ಹಕ್ಕುಗಳು ಇವತ್ತೂ ಮುಂದುವದಿವೆ. ಆ ಸ್ಥನ ಮರುಮಕ್ಕತ್ತಾಯ ಕಟ್ಟಲೆ ಪ್ರಕಾರದ ಕಾರಣವರ ಪಾಲಿಗೇ ಇದೆ.

ಈ ರೀತಿ ವಿಶ್ಲೇಷಿಸುವಾಗ ಒಂದು ಮರುಮಕ್ಕತಾತ್ತಾಯ ಸಾಮಾಜಿಕ ವ್ಯವಸ್ಥೆ ಸೃಷ್ಟಿಸಿದ ಸಾಂಸ್ಕೃತಿಕವಾದ ಕೆಲವು ಅಂಶಗಳು ಜಾನಪದ ರಂಗದಲ್ಲಿ ಇವತ್ತೂ ಮುಂವರಿದು ಬಂದಿದೆ. ವಿಶೇಷತಃ ;ಕೋಲತ್ತುನಾಡಿ'ನ ಜಾತಿ ಸಂಕೇತಗಳೂ ಈ ವ್ಯವಸ್ಥೆಗಳ ಸೃಷ್ಟಿಗಳಾಗಿವೆ. ಈ ಜಾತಿ ಸಂಕೇತಗಳೂ ಅವುಗಳೊಂದಿಗೆ ಸಂಬಂಧಿಸುವ ತೆಯ್ಯಂ ಮೊದಲಾದ ಅನುಷ್ಠಾನ ಕಲಾ ರೂಪಗಳೂ ಅವುಗಳು ಹಲವಾರು ಚಡಂಗಗಳೂ ಅವುಗಳ ಸಾಂಸ್ಕೃತಿಕವಾದ ಹಲವು ವೈಶಿಷ್ಟ್ರಯಗಳೂ ನೆಲೆನಿಂತು ಬಂದಿವೆ ಒಂದು ಸಂಸ್ಕೃತಿಯನ್ನು ಥಟ್ಟನೆ ಇನ್ನೊಂದು ಸಂಸ್ಕೃತಿಯನ್ನಾಗಿ ರೂಪಿಸಲು ಸಾಧ್ಯವಾಗುವುದಿಲ್ಲ ಹಳತರ ಮುಂದರಿಕೆ ಅಲ್ಪ ವಾಯಿಗಯಾದರೂ ಹೊಸರಂಗದಲ್ಲಿ ಕಾಣಸಿಗಬಹುದು ಅದೇ ಸಂಸ್ಕೃತಿಯ ಒಂದು ಪ್ರತ್ಯೇಕತೆ

ಕ್ನಾನಾಯ ಕ್ರೈಸ್ತರ ಮದುವೆ.

(ಊರ ಆಚಾರ)

ಮಿನಿ ಸೆಬಾಸ್ಟ್ಯನ್

ಟಿಪ್ಪಣಿ

ಸಾಂಘಿಕತೆ (ಜಿಂಟಇ) ಎಂಬ ತಂತ್ರಿಕ ಪದ ಒಳಗೊಳ್ಳುವ ಆಶಯವು ಬಹಳ ತುಲನಾತ್ಮಕವಾದ ಒಂದಾಗಿದೆ ಯಾವೊಂದು ಸಮೂಹವನ್ನು ಉದ್ದೇಶಿಸಿ ಪರಾಮರ್ಶೇ ಉಂಟಾಗುತ್ತದೆ ಆ ಸಮೂಹವೇ ಸಾಂಘೀಕತೆ ಕೇರಳದ ಜನರನ್ನು ಕುರಿತಾಗಿ ಅಧ್ಯಯನವಾದರೆ ಅಲ್ಲಿ ಕೇರಳದ ಎಲ್ಲ ಸಮೂಹಗಳೂ ಸೇರಿದ ಒಂದು ಸಾಕಲ್ಯವೇ ಸಾಂಘಿಕತೆ ಇನ್ನು ಈ ಸಮೂಹದ್ದೆ ಒಂದೇ ಭಾಗವಾದ ಕ್ನಾನಾಯ ಕ್ರೈಸ್ತರ ಬಗೆಗೆ ಮಾತ್ರವೇ ಪರಾಮಶಿಸುವುದಾದರೆ ಅಲ್ಲಿ ಕ್ನಾನಾಯ ಕ್ರೈಸ್ತರೇ ಸಾಂಘೀಕತೆ ಆದ್ದರಿಂದ ಸಾಂಘಿಕತೆ ಅಂದರೆ ಯಾರು ಎಂಬ ಪ್ರಶ್ನೆಗೆ ಅಲನ್ ಡಂಡನ್ ನೀಡುವ ಸ್ವಾರಸ್ಯಕರ ಉತ್ತರವೊಂದಿದೆ. "ನಾವೇ ಸಾಂಘಿಕತೆ' ಇಲ್ಲಿ ನಾವು ಎಂಬ ಉತ್ತಮ ಪುರುಷ ಸರ್ವನಾಮ ಬಹುವಚನವನ್ನು

ಬಳಸಿರುವುದು ಸಮನಾಗಿ ಪಾಲುಗೊಳ್ಳುವನೆಲ್ಲ ಸಂಗತಿಗಳ ಬೆಳಕಿನಲ್ಲಿ ಒಂದು ಗುಂಪು ಜನರಿಗೆ ತಾವೆಲ್ಲ ಒಂದೆಂದು ತೋರುವುದರಿಂದಾಗಿದೆ ಆದ್ದರಿಂದ 'ನಾವು' ಎಂಬ ಸಾಹಚರ್ಯವನ್ನು ಅನುಸರಿಸಿ ಎಷ್ಟರ ಮಟ್ಟಿಗೆ ಕುಗಲ್ಲವುದೂ ಸಾದ್ಯ ಎಷ್ಟ ಮಟ್ಟಿಗೂ ಹಿಗ್ಗುವುದು ಕೂಡ ಸಾಧ್ಯ ತಾತ್ವಿ್ಕವಾಗಿ ರಾಷ್ಟ್ರದ ವರೆಗೆ ವಿಕಸಿತವಾಗಲು ಮತ್ತು ಕುಟುಂಬದ ಪರಿಧಿವರೆಗೆ ಸಂಕೋಚಗೊಳ್ಳಲು ಸಾಧ್ಯವಿರುವ ಅಪೇಕ್ಷಿಕತೆ ಇರುವ ಒಂದು ಸಂಕಲ್ಪವಾಗಿದೆ. 'ಸಾಂಘಿಕತೆ'

ಕೇರಳದ ಜನರೆಲ್ಲ ಕೆಲ ವಿಷಯಗಳಲ್ಲಿ ಸಮಾನವಾಗಿ ಪಾಲುಗೊಳ್ಳುವುದರಿಂದ 'ನಾವು ಕೇರಳೀಯ ಸಾಂಘಿಕತೆಯ ಭಾಗವಾಗಿದ್ದೇವೆ' ಎಂದು ಅವರು ಭಾವಿಸುತ್ತಾರೆ. ಅದರೊಂದಿಗೆ, ಈ ಸ್ವತ್ವ ಪ್ರಜ್ಞೆ ನೆಲೆಯಲ್ಲಿ ಇರುವಾಗಲೆ ಈ ಸಾಂಘಿಕತೆಯ ಒಳಗಡೆ ಅನೇಕಾನೇಕ ಸ್ವತ್ವಭೇದಗಳು ನೆಲೆಯುಳಿಸಿಕೊಂಡಿವೆ. ಅವುಗಳಲ್ಲಿ ಒಂದು 'ಕ್ನಾನಾಯ ಕ್ರೈಸ್ತ' ಎಂಬ ಸಾಂಘಿಕತೆ ಈ ಸಾಂಘಿಕತೆ ಇತರ ಕ್ರೈಸ್ತ ಸಮುದಾಯಗಳಿಗಿಂತಲೂ ಇತರ ಸಮುದಾಯಗಳಿಗಿಂತಲೂ ಹಲ ವಿಷಯಗಳಲ್ಲಿ ಭಿನ್ನತೆಯನ್ನು ಪಾಲಿಸುತ್ತಿವೆ. ಈ ವ್ಯತಿರಿಕ್ತತೆಯೇ ಅವರ ಸ್ವತ್ವ ಜಾನಪದ ಅಧ್ಯಯನದ ಮೂಲಕ ಈ ಸ್ವತ್ವತ್ತೆ ಕಂಡು ಕೊಳ್ಳಲು ಸಾದ್ಯ

ಕುಟುಂಬದ ಬಾಂಧವ್ಯಗಳು, ಕುಟುಂಬದ ಅಧಿಕಾರ ರಚನೆ, ಸ್ತ್ರೀ ಪುರುಷ ಸಂಬಂಧಗಳು, ಪರಿಸರಗಳೊಮದಿಗಿನ ಸಂಬಂಧಗಳು ಯಹೂದ್ಯ ಪರಂಪರೆಯ ಕೇರಳೀಯ ಮುಖ, ಕೇರಳೀಯ ಸಂಸ್ಕೃತಿಯ ಪ್ರಭಾವ ಎಂಬ ಈ ಬಗೆ ಹಲವು ವಿಷಯಗಳಲ್ಲಿ ಕ್ನಾನಾಯ ಕ್ರೈಸ್ತ ಸಮೂಹ ವ್ಯತಿರಿಕ್ತ ಸ್ವಭಾವವನ್ನು ನೆಲೆಗೊಳಿಸಿವೆ.

ಇವೆಲ್ಲವೂ ಅವರ ವಿವಾಹಚಾರದಲ್ಲೂ ನೆಳಲುಗೊಂಡಿವೆ. ಅವುಗಳನ್ನು ಅರ್ಥಮಾಡಿಕೊಳ್ಳುವುದು, ಅವುಗಳನ್ನು ಇತರ ಸಾಂಘಿಕತೆಗಳ ವಿವಾಹಾಚಾರಗಳೊಂದಿಗೆ ಮತ್ತು ಜೀವನ ಸಂದರ್ಭಗಳೊಂದಿಗೆ ಹೋಲಿಸಿ ನೋಡುವುದು ಇತ್ಯಾದಿಗಳಿಂದ ಆ ಸಾಂಘಿಕತೆಯನ್ನು ತಿಳಿದುಕೊಳ್ಳಬಹುದು.

ವಿವಾಹವೆಂಬುದು ಇಬ್ಬರು ವ್ಯಕ್ತಿಗಳ ಮಾತ್ರ ಪ್ರಶ್ನೆಯಲ್ಲ, ಸಾಂಘಿಕತೆ ವಿಧಿಸುವ ಕೆಲವು ಕರಾರುಗಳ ತಳಹದಿಯಲ್ಲಿ ಆ ಸಾಂಘಿಕತೆಯನ್ನು ನೆಲೆಗೊಳಿಸುವ ನಿರವಧಿ ಕುಟುಂಬಗಳು ಸೇರಿಕೊಂಡಿರುವ ರಚನೆಯಲ್ಲಿ ಇನ್ನೂ ಒಂದು ಕುಟುಂಬವನ್ನು ಸೃಷ್ಟಿಸಲು ಇರುವ ಪ್ರಾರಂಭಿಕ ಚಡಂಗವೂ ಆಗಿದೆ ಹೀಗೆ ಸೃಷ್ಟಿಸುವ ಹೊಸ ಏಕಕ ಸಾಂಘಿಕತೆಯ ಶಕ್ತವಾದ ಒಂದು ಕೊಂಡಿಯಾಗಿ ವರ್ತಿಸುವುದಕ್ಕೆ ಪರ್ಯಾಪ್ತವಾಗುವ ಚಡಂಗಗಳೇ ಈ ವಿವಾಹಾಚಾರದಲ್ಲಿ ಇರುವುದು ಅದರೊಂದಿಗೆ ಸಾಂಕೇತಿಕವಾದ ಇತರ ಹಲವು ಆಶಯಗಳ ಸಂವೇದನವೂ ನಡೆಯುತ್ತದೆ.

ಅನೇಕಾನೇಕ ಪರಂಪರಾಗತ ಚಡಂಗಗಳಲ್ಲಿ ಆಕರ್ಷಕವಾದುದು 'ಕ್ನಾನಾಯ ವಿವಾಹ' ಕ್ರೈಸ್ತರನ್ನು ಸಂಬಂಧಿಸಿದಂತೆ 'ಸಭೆ' ವಿಧಿಸುವ ಏಳು ಕೂದಾರ' (ಚಿಜಡಿಚಿಟಜಟಿ�a) ಅಂದರೆ 'ಪುಣ್ಯಕಾರ್ಯಗಳಲ್ಲಿ ಒಂದು ವಿವಾಹ ಒಬ್ಬ ಕ್ರೈಸ್ತ ತನ್ನ ಜೀವನದಲ್ಲಿ ಅವಶ್ಯ ಅನುಷ್ಠಾನಬೇಕಾದ ಕರ್ಮ 'ಕೂದಾಶ' ಇದರಿಂದಲೇ 'ಕ್ರೈಸ್ತ ಸಭೆ' ಯಲ್ಲಿ ವಿವಾಹಕ್ಕಿರುವ ಪ್ರಾಧಾನ್ಯ ವ್ಯಕ್ತವಾಗುತ್ತದಷ್ಟೆ ವ್ಯಕ್ತಿಗೂ ಸಮೂಹಕ್ಕೂ ಪ್ರಧಾನ್ಯವಿರುವ ಧಾರಾಳ ಚಡಂಗಗಳು ವಿವಾಹದೊಂದಿಗೆ ಅನುಬಂಧಿಸಿದೆ.

ವಧುವನ್ನು ಗುರುತಿಸುವುದು ವಿವಾಹದ ಮೊದಲ ಮೆಟ್ಟಲು, ಕ್ನಾನಾಯರು ಒಂದು ಸಣ್ಣ ವಿಭಾಗದವರಾದುದರಿಂದ ಪೂರ್ವ ಪರಿಚಯದ ಮೂಲಕವೆ ಹೆಚ್ಚಿನ ವಿವಾಹ ಸಂಬಂಧಗಳಾಗುವುದು ಇನ್ನಾವುದೇ ಕ್ರೈಸ್ತ ವಿಭಾಗಕ್ಕಿಂತಲೂ ತಾನು ಒಳಗೊಂಡು ಸಮೂಹದೊಂದಿಗೆ ಪ್ರತಿಬದ್ಧತೆಯಿರುವ ಜನತೆಯಿದು ಆದ್ದರಿಂದ ವಿವಾಹವು ಒಬ್ಬ ವ್ಯಕ್ತಿಯ ಅಥವಾ ಕುಟುಂಬದ ಖಾಸಗಿ ತನವಲ್ಲ ಬದಲು ಸಮೂಹವೂ ಸಕ್ರಿಯವಾಗಿ ಪ್ರಾತಿನಿಧ್ಯ ವಹಿಸುವ ಚಡಂಗವಿದು.

ಈಗಿನ ಕಾಲದಲ್ಲಿ ವಿವಾಹಹಾರ್ಥಿಯಾದ ಪುರುಷನೂ ಆತನ ಹತ್ತಿರದ ಬಂಧುವೂ ಸೇರಿ ಹುಡುಗಿಯನ್ನು ನೋಡುವ ಚಡಂಗ ನಡೆಸುವುದು ಹಿಂದಿನ ಕಾಲದಲ್ಲಿ ಹುಡುಗನ ಮಾವನು ಅಪ್ಪನೂ ಸೇರಿಯೇ 'ಹುಡುಗಿಯನ್ನು ನೋಡ ಹೋಗುತ್ತಿದ್ದುದು ಅವರಿಗಿಷ್ಟವಾದಲ್ಲಿ ಹುಡಗನನನ್ನು ನೋಡಲು ಹುಡುಗಿಯ ತಂದೆಯೂ ಮಾವನೂ ವರನ ಮನೆಗೆ ಬರುತ್ತಾರೆ ಎರಡೂ ಕಡೆಗೆ ಒಪ್ಪಿಗೆಯಾದಲ್ಲಿ ಅನುಕೂಲವಾದ ಹತ್ತಿರದ ದಿವಸವೊಂದರಲ್ಲಿ ಹುಡುಗನ ಮನೆಯಲ್ಲಿ 'ಉಅಪ್ಪೀರ್'(ಉಅಪ್ಪು–ಗಟ್ಟಿ, ನಿರ್ಣಯವನ್ನು ಖಾಯಂಗೊಳಿಸುವ ವಿಧಿ ಇತರರಲ್ಲಾದರೇ ನಿಶ್ಚಿತಾರ್ಥ) ನಡೆಯುತ್ತದೆ. ಈ ಚಡಂಗದಲ್ಲಿ ಗಂಡಸರು ಮಾತ್ರ ಇತರರಲ್ಲಾದರೆ ನಿಶ್ಚಿತಾರ್ಥ) ನ ನಡೆಯುತ್ತದೆ ಈ ಚಡಂಗದಲ್ಲಿ ಗಂಡಸರು ಮಾತ್ರ ಪಾಲುಗೊಳ್ಳುತ್ತಿದ್ದರು ಹುಡುಗಿಯ ಕಡೆಯಿಂದ ಮಾವನವರು, ಪಿತೃಸಹೋದರರು ಮೊದಲಾದವರೇ ಚಡಂಗದಲ್ಲಿ ಪಾಲುಗೊಳ್ಳುವವರು ಬರುವವರ ಸಂಖ್ಯೆ ಮಾತ್ರ ಬೆಸವಾಗಿಯೆ ಇರತಕ್ಕದ್ದು ಹುಡುಗನ ಮನೆಯಲ್ಲಿ ಮಧ್ಯಾಹ್ನದ ಊಟ ಮೂಗಿದ ಬಳಿಕ ವಿವಾಹಕ್ಕೆ ಸಂಬಂಧಿಸಿದ ತೀರ್ಮಾನ ಕೈಗೊಳ್ಳುವರು ಮಾಸಾಂಹಾರ, ಅನ್ನ ಇವೆ ಊಟದ ಮುಖ್ಯ ಆಹಾರ ಹೆಣ್ಣಿನ ಮತ್ತು ಹುಡುಗನ ಮಾತಾಪಿತರ ಸಹೋದರರೇ ವಿವಾಹ ಸಂಬಂಧವಾದ ತೀರ್ಮಾನ ಕೈಗೊಳ್ಳುವರು 'ಸ್ತ್ರೀಧನ (ವರದಕ್ಷಿಣೆ) ಸ್ವೀಕಾರ ಪರಂಪರಾಗತ ಪದ್ಧತಿ, ಚಿನ್ನಕ್ಕಿಂತ ನಗದನ್ನೆ ವರದಕ್ಷಿಣೆಯಾಗಿ ನೀಡುವುದು 'ಉಅಪ್ಪೀರ್' ನಲ್ಲಿ ಚರ್ಚೆಯಾಗುವ ಮುಖ್ಯ ವಿಚಾರ 'ಸ್ತ್ರೀಧನ'ದ ಮೊತ್ತ ಹಾಗೂ ವಿವಾಹದ ನಡೆಸುವಿಕೆ 'ಸ್ತ್ರೀಧನ'ಯಾವಾಗಲೂ ಬೆಸಸಂಖ್ಯೆಯಲ್ಲಿ ಇರಬೇಕು.

ವೇದಪಾಠ ಆಲಿಸುವಿಕೆ

ವಿವಾಹ ನಿಶ್ಚಯ ಮುಗಿಯುತಾದರೆ ಹುಡುಗಿಯೂ ಹುಡುಗನೂ ತಮ್ಮ ಮತಕ್ಷೇತ್ರದ ('ಇಡವಕ'ದ) ಪುರೋಹಿತನ ಬಳಿಗೆ ಹೋಗಿ 'ವೇದಪಾಠ' ಕೇಳಬೇಕಾಗಿದೆ. 'ಸಭೆ'ಯ ನಿಯಮಗಳೂ, 'ಕುದಾಶಗಳು, ಆಚಾರ ಕ್ರಮವೂ ತಿಳಿದಿದೆಯ ಎಂದು ಪರಿಶೋಧಿಸುವ ಚಡಂಗವಿದು ಸಂತತಿಗಳನ್ನು ಉತ್ತಮ ಮತವಿಶ್ವಾಸಿಗಳಾಗಿ ಬೆಳೆಸುವ ಜವಾಬ್ದರಿ ತಾಯಿ ತಂದೆಯ ವರದಲ್ಲವೆ? ಅದಕ್ಕೆ ಅವರು ಅರ್ಹರೇ ಎಂದು ಪರಿಶೋಧಿಸುವುದೇ ಈ 'ವೇದಪಾಠ ಆಲಿಸುವುದರ ಉದ್ದೇಶ

ಒತ್ತು ಕಲ್ಯಾಣಂ (ಮನಃಸಮ್ಮತಿ)

ಮದುವೆಗೆ ಹುಡುಗನ ಮತ್ತು ಹುಡುಗಿಯ ಒಪ್ಪಿಗೆ ಕೇಳುವ ಚಡಂಗವೆ 'ಒತ್ತು ಕಲ್ಯಾಣಂ' (ಒತ್ತು –ಒಪ್ಪಿದ) ಅಥವಾ ಮನಃಸಮ್ಮತಿ ವಿವಾಹದಲ್ಲಿ 'ಸಭೆ' ಪ್ರವೇಶಿಸುವುದರ ಆರಮಭ ಇದು ಹೆಣ್ಣಿನ ಮತ ಕ್ಷೇತ್ರದ (ಇಡವಕ) 'ಪಳ್ಳಿ'(ಇಗಳಿಕ) ಯಲ್ಲಿ ಇದರ ಮುಖ್ಯ ಚಡಂಗ ನಡೆಯುತ್ತದೆ. 'ಒತ್ತು ಕಲ್ಯಾಣ' ಇವರ ಬೆಳಗ್ಗೆ ವಧುವಿನ ಮತ್ತು ವರನ ಮನೆಗಳಲ್ಲಿ ಏಳು ಬತ್ತಿ ಉರಿಸಿ ಪ್ರಾರ್ಥನೆ ಮಾಡುತ್ತಾರೆ ಆ ಬಳಿಕ ಎರಡು ಕಡೆ ಮಾವಂದಿರು, ತಂದೆಯ ಅಣ್ಣ ತಮ್ಮಂದಿರು, ತಾಯಿ ತಂದೆಯರು ಇವರಿಗೆಲ್ಲ 'ಸ್ತುತಿ'ಕೊಡುತ್ತಾರೆ ಕ್ರೈಸ್ತರಿಗೆ 'ಸ್ತುತಿ' ಆಶಂಸಾ ಪ್ರಾರ್ಥನೆಯಾಗಿದೆ. 'ಈ ಸೋಮಿಶಿಹಾಯ್‌ಗೆ ಸ್ತುತಿಯಾಗಿರಲಿ' ಎಂಬ ಸ್ತುತಿ ವಚನಕ್ಕೆ ಈಗಲೂ ಯಾವಾಗಲೂ ಎಂದೆಂದಿಗೂ ಅಮ್ಮೇನ್' ಎಂದು ಸ್ತುತಿ ಸ್ವೀಕರಿಸುವುದು ಪ್ರತಿವಚನ ನೀಡುವರು ಅದರ ಬಳಿಕ ವಧುಗೃಹದಲ್ಲಿ, ವಧುವನ್ನು ಪಿತೃಸಹೋದರರು ಕೈ ಹಿಡಿದು ಕೆಳಕ್ಕಿಳಿಸುವರು ಸ್ತುತಿ ಸ್ವೀಕರಿಸುವವರ ಸಂಖ್ಯೆಯೂ ಬೆಸವಾಗಿರಬೇಕು ಬೆಸಸಂಖ್ಯೆಯ ಈ ಮಂದಿಯನ್ನು ಸಾಕ್ಷಿಯಾಗಿ ಮಾಡಿ ಪುರೋಹಿತ ಎರಡು ಪ್ರಶ್ನೆಗಳನ್ನು ಕೇಳುವನು, 'ಸಭೆಯ ಶಿಷ್ಟಾಚಾರ ಪ್ರಕಾರ ವಿವಾಹಕ್ಕೆ ಸಜ್ಜಾಗಿರುವುದೇ' ಎರಡು – ಪೂರ್ಣಹೃದಯದೊಂದಿಗೆ ಪರಸ್ಪರ ಸ್ವೀಕರಿಸುತ್ತಿದ್ದೀರಾ? ಪ್ರಶ್ನೆಗಳಿಗೆ ಅನುಕೂಲಕರ ಉತ್ತರ ದೊರೆತರೆ ಸಾಕ್ಷಿಗಳ ಸಾಕ್ಷ್ಯವನ್ನೂ ಮಾತಿನಿಂದ ಪಡೆದು ಕ್ರಿಸ್ತನ ಹೆಸರಿನಲ್ಲಿ ವಿವಾಹ ವಾಗ್ದಾನವನ್ನೂ ದೃಢಪಡಿಸುತ್ತಾರೆ. ಮುಂದೆ ತಮ್ಮ ಮತ ಕ್ಷೇತ್ರಕ್ಕೆ ಸೇರಿದ ಇಂಥ ಹುಡಿಗಿಯೊಂದಿಗೆ ಇಂಥವರು ವಿವಾಹ ನಿಶ್ಚಯ ಕೈಗೊಂಡಿರುವವರು ಎಂಬ ಸಾಕ್ಷ್ಯ ಪತ್ರವನ್ನು ಪುರೋಹಿತ ಹುಡುಗನ ಮತಕ್ಷೇತ್ರದ 'ವಿಕಾರಿ'(ತುಛಿಚಿಡಿ)ಗೆ ಹಸ್ತಾಂತರಿಸಲು ಆ ಮಂದಿಗೆ ವಹಿಸಿಕೊಡುತ್ತಾರೆ. ಇದಕ್ಕೆ 'ಕುಜ' ಎಂದು ಹೆಸರು ಲಘಲವಾದ ಈ ಚಡಂಗದ ಬಳಿಕ ಎಲ್ಲರೂ ಹೆಣ್ಣಿನ ಮನೆಗೆ ಹೋಗುವರು ಅಲ್ಲಿ ಹಾಕಿದ ಚಪ್ಪರದಲ್ಲಿ ಮೊದಲಿಗೆ ವರನ ಕಡೆಯವರನ್ನು ಕುಳ್ಳಿರಿಸಿ ಕುಡಿಯಲು ನೀರು ಕೊಡುತ್ತಾರೆ. ಆ ಬಳಿಕ ಊಟವನ್ನೂ ಅದರೊಂದಿಗೆ ಮದ್ಯವನ್ನು ಬಡಿಸುತ್ತಾರೆ ಸ್ತ್ರೀಯರೂ ಪುರುಷರೊಂದಿಗೆ ಸಭೆಯಲ್ಲಿ ಕುಳಿತು ಮಧ್ಯ ತೆಗೆದುಕೊಳ್ಳುವ ಈ ರೀತಿ ಕೇರಳದ ಇನ್ನಾನ ಕ್ರೈಸ್ತ ವಿಭಾಗದಲ್ಲೂ ಇಲ್ಲ ಊಟದ ಬಳಿಕ ಹೆಣ್ಣಿನ ಮಾವ (ಅಪ್ಪ) ಹುಡುಗನ ಪಿತೃ ಸಹೋದರನಿಗೆ 'ಸ್ತ್ರೀ ಧನ' ಮೊತ್ತ (ವರದಕ್ಷಿಣೆ) ವನ್ನು ವಹಿಸಿಕೊಡುತ್ತಾನೆ. ಅನಂತರ ಹೆಣ್ಣಿನ ಮಾವ ಹುಡುಗನ ಮಾವನಿಗೆ ವೀಳ್ಯದೆಲೆ, ಅಡಕೆ, ಹೊಗೆಸೊಪ್ಪು, ಮೊದಲಾದವು ಇರುವ ಒಂದು ಕಟ್ಟನ್ನು

ಕೊಡುತ್ತಾರೆ. ಇದಕ್ಕೆ ಹೆಸರು 'ವಜಿಪ್ಪುಕಲ'(ದಾರಿಯ ಹೊಗೆಸೊಪ್ಪು) ವಾಹನ ಸೌಕರ್ಯ ವಿಲ್ಲದಿದ್ದ ಹಿಂದಿನ ಕಾಲದಲ್ಲಿ ವಧೂ ಹೃಹಕ್ಕೆ ಕಾಲುನಡಿಗೆಯಲ್ಲೆ ಬರುವ ವರನ ಕಡೆಯವರ ಮರು ಪ್ರಯಾಣದ ವೇಳೆ ಹಾದಿಯ ನಡುವೆ ಎಲ್ಲಾದರೂ ವಿಶ್ರಮಿಸಿ ಎಲೆ ಅಡಿಕೆ ತಂಬಾಕು ಅಗಿದು ಉಲ್ಲಾಸಗೊಂಡು ಪ್ರಯಾಣ ಮುಂದುವರಿಸುವ ಉದ್ದೇಶ ಈ ಕೊಡುಗೆಯದು ಆದರೆ ಈಗ ಹೆಸರು ಮಾತ್ರ ಅದು 'ವಜಿಪ್ಪುಕಲ' ಅಗ್ನಿ ಈಗ ಕೊಡುವುದು ಒಂದಾ ಬಾಟಲಿ ಮಧ್ಯವನ್ನು ಚದರುವ ಮೊದಲು ಎಲ್ಲರಿಗೂ ಕಡ್ಡಯವಾಗಿ ಕಡುಕಾಫೀಯನ್ನು ಕುಡಿಯಲು ಕೊಡುತ್ತಾರೆ.

ತಿಳಿಚ್ಚು ಚೊಲ್ಲಲ್ (ಕರೆದು ಹೇಳು)

ಹೆಣ್ಣಿನ ಮತಕ್ಷೇತ್ರದಿಂದ ತಂದೆ 'ಕುಜಿ'ಯನ್ನು ಹುಡುಗನ ಮತಕ್ಷೇತ್ರದ ಇಗರ್ಜಿಗೆ ತಲಪಿಸುವ ಮೂಲಕ ಅಲ್ಲಿ ವಿವಾಹವು ಔಪಚಾರಿಕವಾಗಿ ತಿಳಿಸಲ್ಪಡುತ್ತದೆ 'ಒತ್ತುಕಲ್ಯಾಣಂ' ನಡೆದ ಮರು ಆದಿತ್ಯವಾರ ಹುಡುಗನ ಮತ್ತು ಹೆಣ್ಣಿನ 'ಪಳ್ಳಿ'(ಇಗಜಿಳ) ಗಳಲ್ಲಿ 'ಕುರ್ಬಾನ'ದ ಬಳೀಕ ವಿಆಹ ವಿಷಯ ಬಯಲುಗೊಳ್ಳುತ್ತದೆ ಇದೇ 'ವಿಳಿಚ್ಚು ಚೊಲ್ಲಲ್' (ಕರೆದು ಹೇಳುವುದು ಅಥವಾ ಸಾರುವುದು) ಹುಡುಗನ ಮತ್ತು ಹುಡುಗಿಯ ಹೆಸರುಗಳ, ಅವರ ಮಾತಾಪಿತೃಗಳ ಹೆಸರು , ಮನೆ ಹೆಸರು, ಮತಕ್ಷೇತ್ರ ಇತ್ಯಾದಿಗಳನ್ನೊಳಗೊಂಡ ತಿಳಿವಳಿಕೆ ಘೋಷಣೆ ಇದು ವಿವಾಹದ ವಿಷಯ ಸಾರ್ವಜನಿಕ ಅವಗಾಹನೆಗೆ ಬರುವುದು 'ವಿಳಿಚ್ಚು ಚೊಲ್ಲಲ್' ಮೂಲಕ ನಿರಂತರ ಮೂರು ಆದಿತ್ಯವಾರಗಳಲ್ಲಿ ಈ ಘೋಷಣೆಯ ಪುನರಾವರ್ತನೆಯಾಗುತ್ತದೆ, ಯಾರಿಗಾದರೂ ಎನಾದರೊಂದು ವಿರೋಧವಿರುವುದಾದರೆ ಈ ಕಾಲಮಿತಿಯ ಒಳಗೆ ಪಯಾಪ್ತವದ ಪುರಾವೆಗಳೊಂದಿಗೆ ಮತಕ್ಷೇತ್ರದ ಪುರೋಹಿತನನ್ನು ಸಮೀಪಿಸಿದರೆ ನೀಗಬಹುದಾದ ಅಡ್ಡಿಯನ್ನು ನೀಗಲೂ, ಗುರುತರವಾದ ಲೋಪದೋಗಳಿದ್ದರೆ ವಿವಾಹವನ್ನು ತಾತ್ಕಲಿಕವಾಗಿ ರದ್ದು ಮಾಡಲು ಪೂರ್ಣ ಅದಿಕಾರ ಅವರಿಗಿದೆ. ಕ್ರೈಸ್ತ ವಿವಾಹ ಬಂಧಗಳು ತೂಲನಾತ್ಮಕವಾಗಿ ಸದೃಢವಾಗಿರಲು ಒಂದು ಕಾರಣ ಈ ಸಾರ್ವಜನಿಕ ಅರಿಕೆಯಾಗಿದೆ ಸಾರ್ವಜನಿಕರಿಗೆ ವಿವಾಹ ವಿಷಯಗಲದಲ್ಲಿ ಮಧ್ಯ ಪ್ರವೇಸಿಸಲು ಸಿಗುವ ಸಂದರ್ಭವಿದು ಹುಡುಗಿಯ ಮತ್ತು ಹುಡುಗನ ಕುರಿತಾದ ಸಂಪುರ್ಣವಾದ ಮಾಹಿತಿ ಪಡೆಯಲಿರುವ ಇತರರಿಗೆ ಯಾವುದಾದರೂ ರೀತಿಯಲ್ಲಿ ಜೀವನಕ್ಕೆ ಗಮಭೀರವಾಗಿ ಬಾಧಕವಾಗಿರುವಂಥ ಪ್ರಶ್ನೆಗಳಿದ್ದಲ್ಲಿ ವಿವಾಹವನ್ನು ರದ್ದುಗೊಳಿಸಲು ನೆರವಾಗಬಹುದಾಗಿದೆ. ಸಾರಿಕೆಯ (ವಿಳಿಚ್ಚು ಚೆಲ್ಲಲ್) ಮೂರನೆ ಆದಿತ್ಯವಾರದ ಮರುದಿನ ಸೋಮವಾರವೇ ವಿವಾಹ ನಡೆಯುವುದು.

ಕಾಲು ನಾಟ್ಟಲ್ (ಚಪ್ಪರ ಮುಹೂರ್ತ)

ವಿವಾಹ ನಡೆಯುವ ಸೋಮವಾರದ ಹಿಂದಿನ ಗುರುವಾರ ಹುಡುಗನ ಮನೆಯಲ್ಲಿ ಚಪ್ಪರ ಹಾಕುವುದಕ್ಕೆ ಪ್ರಧಾನ ಕಂಬ (ಇದೇ ಕಾಲು) ನಾಟುತ್ತಾರೆ 'ಕಾಲು ನಾಟ್ಟಲ್' ಇವೇ ಹುಡುಗನ ಮಾವ ಇದನ್ನು ಮಾಡಬೇಕು ಮನೆಯ 'ಅಚಿ ವಾದಿಲ್' ನ (ಹೆಬ್ಬಾಗಿಲ) ಬಲ ಭಾಗದಲ್ಲೆ ಕಾಲು ನಾಟುವುದು 'ಕಾಲು' ಆಗಲು ಆಯ್ಕೆಯಾಗುವ ಮರ ಕಡಿದರೆ ಅದರ ಜಿನುಗು ನಿಲ್ಲುವ ಮೊದಲು ನಾಟಿದರೆ ಅದು ಅಲ್ಲಿ ತಳಿರುಗೊಳ್ಳುವಂಥದೂ ಆಗಬೇಕು ಎಂಬ ನಿಬಂಧನೆಯಿದೆ. ವಿವಾಹ ಜೀವನ ಸಜೀವವೂ ಫಲಿಸ ಮೃದ್ಧವೂ ಆಗಬೇಕು ಎಂಬುದೇ ಇದರ ಹಿಂದಿರುವ ಆಶಯ

ಕ್ನಾನಾಯರ ವಿವಾಹ ವರನ 'ಪಳ್ಳಿ'ಯಲ್ಲೆ ನಡೆಯುವುದು ಮುಂದಿನ ಔತಣ ವರನ ಮನೆಯಲ್ಲಾಗಿರುತ್ತದೆ. ವಿವಾಹದಿನದ ಹಿಂದಿನ ಆದಿತ್ಯವಾರ ವಧುವಿನ ಮತ್ತು ವರನ ಮನೆಗಳಲ್ಲಿ ಕೆಲ ಚಡಂಗಗಳು ಆಗಲಿಕ್ಕಿರುತ್ತವೆ.

ವರನ ಮನೆಯ ಚಡಂಗಗಳು

ಆದಿತ್ಯವಾರ ಮುಂಜಾನೆ ಅಕ್ಕಸಾಲಿಗ 'ತಾಳಿ' ತಯಾರಿಸಿ ಮನೆಗೆ ತರುತ್ತಾನೆ. ತಳಿಯ ತೂಕ ' ಒಂದುಕಾಲು ಹಣ' ಆಗಿರಬೇಕು ಒಂದೂಕಾಲು 'ಇಡಜ್ಞಜಿ' (ಸೇರಿಗೆ ಹತ್ತಿರದ ಅಳತೆ) ಅಕ್ಕಿ ಸುರಿದ ತಟ್ಟೆಯಲ್ಲಿ ವೀಳ್ಯದೆಲೆಯ ಮೆಲೆ ತಾಳಿಯನ್ನು ಇರಿಸಿ ಅಕ್ಕಸಾಲಿಗ (ತಟ್ಟನ್) ವರನ ಸಹೋದರಿಗೆ ಹಸ್ತಾಂತರಿಸುತ್ತಾನೆ, ಈ ಸಂದರ್ಭದಲ್ಲಿ ಅಕ್ಕಸಾಲಿಗೆ ಅಕ್ಕಿ ಪದಾರ್ಥ ಸಾಮಾಗ್ರಿ, ಹಣಗಳನ್ನು ಪ್ರತಿಫಲ ನೀಡುತ್ತಾರೆ. ಬಳಿಕ ವರ ವಧುವಿಗೆ ಕೊಡಲು ಇರಿಸಿದ 'ಮಂತ್ರಕೋಟಿ' (ಹೊಸಬಟ್ಟೆ)ಯಿಂದ ಏಳು ಮಾಲುಗಳನ್ನು ತೆಗೆದು ಮೂರಾಗಿ ಮಡಚಿ ಹೆಣೆದು ಅದರಲ್ಲಿ ತಾಳಿಯನ್ನು ಕೋದು ಇರಿಸುತ್ತಾರೆ. ಈ ಚಡಂಗ ನಡೆಸುವುದು ವರನ ಸಹೋದರಿಯ ಹಕ್ಕಾಗಿದೆ.

ಚಪ್ಪರ ಹಾಕು (ಪಂದಲಿಡಲ್)

ಗುರುವಾರ ನಾಟಿದ ಕಂಬವನ್ನು ಮುಖ್ಯವನ್ನಾಗಿ ಮಾಡಿ ಆದಿತ್ಯವಾರ ಮನೆಯ ಅಂಗಳಕ್ಕೆ ಚಪ್ಪರ ಹಾಕುತ್ತಾರೆ ಚಪ್ಪರದ ಸೋಗೆ ಮುಚ್ಚಿಗೆಗೆ ಬಿಳಿ ಬಟ್ಟೆಯ ಮೇಲ್ಕಾಪು ಕಟ್ಟುತ್ತಾರೆ. ಅಲ್ಲದೆ ಚಪ್ಪರದ ಬದಿಗಳನ್ನು ಬಿಳಿಯಿಂದ ಮುಚ್ಚುತ್ತಾರೆ. ಚಪ್ಪರದ ಬಲಭಾಗದಲ್ಲಿ ವಧೂವರರನ್ನು ಕುಳ್ಳಿರಿಸುವ ತಾವನ್ನು ಪ್ರತ್ಯೇಕ ಅಲಂಕರಿಸಲು ಇದೆ ಇದಕ್ಕೆ 'ಮಣರ್‌ಕೋಲಂ' ಎಂದು ಹೆಸರು ಎಡಭಾಗದಲ್ಲಿ ಔತಣದ ಬಗೆಗಿರುವ ಸಾಮಾಗ್ರಿಗಳನ್ನು ಕಾಪಿಡಲು 'ಕಲವಱ' ಇರುತ್ತದೆ. ಅಲ್ಲದೆ ಚಪ್ಪರದೊಂದಿಗೆ ಸೇರಿ ತಾತ್ಕಲಿಕ

ಅಡುಗೆ ಆವರಣ 'ವೆಪ್ಪುಪುರ' ಇರುತ್ತದೆ. ಆದಿತ್ಯವಾರ ರಾತ್ರಿ ಚಪ್ಪರಕ್ಕೆ ಬರುವವರಿಗೆಲ್ಲ ಊಟವಿರುತ್ತದೆ ಮೊದಲು ಬಡಿಸುವುದು ಕ್ನಾನಾಯರ ವಿಶೇಷ ಅಡುಗೆಯಾದ 'ಪಾಚ್ಚೋಱಿಂ ಚಕ್ಕರ'ವನ್ನು ಅದರ ಬೆನ್ನಲ್ಲೆ ಅನ್ನ ಮಾಂಸದಡುಗೆ ಮದ್ಯಗಳನ್ನು ಬಡಿಸುತ್ತಾರೆ (ಪಾಚ್ಚೋಱ್– ಹಾಲು ಅನ್ನ)

ಅಂದಂ ಚಾರ್ತ್ (ಚಂದಂ ಚಾರ್ತ)

ಊಟದ ಬಳಿಕ ಚಪ್ಪರದ ನುಡಭಾಗದಲ್ಲಿ ವರನ ಸಹೋದರಿ ಚಾಪೆ ಹಾಸುತ್ತಳೆ ಅದರ ಮೇಲೆ ಸಣ್ಣ ಪೀಠ (ಕೊರಂಡಿ) ವನ್ನಿರಿಸುತ್ತಾಳೆ ಅದರ ಮೇಲೆ ಕಚ್ಚ (ಹೊಸ ಬಿಳಿ ಬಟ್ಟೆ) ಹರಡುತ್ತಾಳೆ ಪೀಠದ ಎದುರು ಪ್ರಕಾಶಮಾನವಾದ ದೀಪವನ್ನು ಹಚ್ಚಿಡಲಾಗುತ್ತದೆ ಈ ವೇಳೆ 'ಅಳಿಯನ್' ಅಂದರೆ ಸಹೋದರಿಯ ಗಂಡ (ಅಳಿಯನ್ ಭಾವ) ವರನನ್ನು ಮನೆಯ ಒಳಗಿನಿಂದ ಕೈ ಹಿಡಿದು ಚಪ್ಪರಕ್ಕೆ ಇಳಿಸುತ್ತನೆ. ಹಾಗೂ ಪೀಠದಲ್ಲಿ ಕುಳ್ಳಿರಿಸುತ್ತಾನೆ. ಆಗ ಚಪ್ಪರದಲ್ಲಿರುವವರೆಲ್ಲ ಸೇರಿ 'ಪುರಾತನ ಪಾಟು' ಹಾಡುವರು. ಕ್ನಾನಾಯಿತ್ತೋಮ್ಮ ಎಂಬವನ ಆಗಮನ, ಅದರೊಂದಗೆ ಸಂಬಂಧಿಸಿದ ಘಟನೆಗಳೇ ಪಾಟಿನ ವಸ್ತು.

ಅನ್ನದಿಲ್ ನಿನ್ನು ಕಿನಾಯಿತ್ತೊಮ್ಮನ್	ಅಂದದರು ನಿಂತ ಅನಾಯಿ ತೊಮ್ಮನ್
ಎಱುಪತ್ತಿರಂಡು ಕುಡಿಯಾರುಮಾಯ	ಎಪ್ಪತ್ತೆರಡು ಒಕ್ಕಲುಗೊಳೊಂದಿಗೆ
ವನ್‌ಪನಾಂ ಚೇರಕೋನ್ ನಾಡುನೋಕ್ಕಿ	ಬಲವಂತನಾ ಚೇರರಾಜ ನಾಡನಾಳಿದ
ಓಡನ್ನು ಕಪ್ಪಲ್ ಕೊಡುಙ್ಙಲ್ಲೂರ್‌ಕ್ಕು. .	ಓಡುವುದು ಹಡಗು ಕೊಡುಙ್ಙಲ್ಲೂರಿಗೆ

(ಪುರಾತನ ಪಾಟು)

ಆ ಹೊತ್ತಿಗೆ ಕ್ಷೌರಿಕ ದೀಪವನ್ನು ಕೈಗೆ ತೆಗೆದುಕೊಂಡು ಚಪ್ಪರದಲ್ಲಿ ಕುಳಿತವರೊಡನೆ ಹೀಗೆ ಕೇಳುತ್ತನೆ. 'ಹದಿನೇಳು ಪರಿಷ್ (ಸಭೆ) ಗಳ 'ಮೇಲಚ್ಚನ್'(ಗಣ್ಯ)ಗಳಲ್ಲಿ ಕೇಳುತ್ತೇನೆ., 'ಮಣವಾಲ ಚೆಕ್ಕನಿಗೆ' (ಮದುಮಗನಿಗೆ) ಅಂದು ಚಾರ್ತುವುದನ್ನು ಮಾಡಲೇ? (ಅಂದ ಬರಿಸಲೇ?) ಇದನ್ನು ಮೂರು ಬಾರಿ ಕೇಳಿದಾಗ ಚಪ್ಪರದವರು ಒಪ್ಪಿಗೆ ನೀಡುತ್ತಾರೆ. ಅನಂತರ ದೀಪವನ್ನು ಕೆಳಗೆ ಇರಿಸಿ ಕ್ಷೌರಿಕ ವರನಿಗೆ ಕ್ಷೌರ ಕರ್ಮ ನಡೆಸುತ್ತಾನೆ. 'ಚಂದಂ ಚಾರ್ತ' ಅಥವ ಶೋಭೆ ತರುವುದು ಎಂಬುದೇ ಮತ್ತೆ 'ಅಂದಂ ಚಾರ್ತ' ಆಗಿ ಬದುರಬಹುದು ಆರಂಭಕಾಲದಲ್ಲಿ ವರ ಮೊದಲ ಬಾರಿಗೆ ಕ್ಷೌರ ಕಾಣುವುದು ಈ ಚಡಂಗದ ವೇಳೆ ಆಗಿರಬಹುದು ಈತ ಯುವಕನಾದ ಎಂಬುದನ್ನು ಹೊರಗೆಡಹುವುದು ಕೂಡ ಆಗಿರಬಹುದು ಈತ ಯುವಕನಾದ ಎಂಬುದನ್ನು ಹೊರಗೆಡುವುದು ಕೂಡ

ಈ ಚಡಂಗದ ಸಂಕೇತವಿರಬಹುದು 'ಚಂಡಂ ಚಾರ್ತ' ಆದ ಬಳಿಕ ಕ್ಷೌರಿಕ 'ಮಣವಾಳಚೆಕ್ಕನೆ ಎಣ್ಣ ತೇಪ್ಪಿಕ್ಕಟ್ಟೆ' (ಮದುಮಗನಿಗೆ ಎಣ್ಣೆ ಹಚ್ಚಲೇ) ಎಂದು ಮೂರು ಬಾರಿ ಕೇಳುತ್ತಾನೆ, ಭಾವ ವರನನ್ನು ಚಪ್ಪರದ ಹೊರಕ್ಕೆ ಕರೆದೊಯ್ಯುತ್ತಾನೆ. ಆತ ಕುಳ್ಳಿರಲು ಹಾಸಿದ್ದ ಬಿಳಿಬಟ್ಟೆ ಕ್ಷೌರಿಕನ ಹಕ್ಕಿನದು ಆತ ಅದನ್ನು ಮಡಚಿ ತೆಗೆದುಕೊಳ್ಳುವನು ವರಮಿಂದು ಹೊಸಬಟ್ಟೆ ಧರಿಸಿ ಚಪ್ಪರಕ್ಕೆ ಬರುತ್ತಾನೆ. ಈ ಬಟ್ಟೆಯಿಡುಗೆಯಲ್ಲಿ ಅಡಿವಸ್ತ (ಒಳವಸ್ತ್ರ) ಉಡುಗೆ ಅವಶ್ಯ ಚಪ್ಪರಕ್ಕೆ ಇಳಿಯುತ್ತಿದ್ದ ಹಾಗೆ ವರನೊಡನೆ ಕಾರಣವರುಗಳು, 'ಚೀಲಕಾಣಟ್ಟೆ' (ಚೀಲ–ಬಟ್ಟೆ–ಕಾಣಲಿ) ಎಂದು ಕೂಗಿ ಹೇಳುತ್ತರೆ. ಆಗ ಆವನ ಭಾವ ವರನ ಹೊರಬಟ್ಟೆಯನ್ನು ಎತ್ತಿ ಒಳಗುಟ್ಟು ಬಟ್ಟೆಯ ಅಂಚನ್ನು ತೋರಿಕೊಡುತ್ತಾನೆ. ಪ್ರಾಯಪೂರ್ತಿಯಾಗಿದ್ದನೆಂದು ಸೂಚಿಸುವುದಕ್ಕಿರುವ ಆಚಾರ ಇದಾದರೂ ಇದರ ಆಭಾಸದ ಸೊಗಡಿಗಾಗಿ ಮಧ್ಯಕಾಲದಲ್ಲಿ ಇದನ್ನು ನಿಲ್ಲಿಸಿದ್ದರು ಆದರೆ ಒಂದು ತಮಾಷೆಗೆ ಅಸ್ಪದ ಇರಲೆಂದು ಈಚೆಗೆ ಈ ಚಡಂಗವನ್ನು ಪುನಃ ಬಳಕೆಯಲ್ಲಿರಿಸಲು ಪ್ರೋತ್ಸಾಹಿಸಲಾಗುತ್ತಿದೆ. ಈ ಸಮಯದಲ್ಲಿ ವರನ ಸಹೋದರಿ ಚಪ್ಪರದ ಪೀಠದಲ್ಲಿ ಮಡಿ ' ತೋರ್ತ್ ಬಟ್ಟೆ' (ಪಾಣಿಪಂಚೆ)ಯನ್ನು ಹರಡುತ್ತಳೆ ಆ ಬಳಿಕ ಒಂದು ಬೆಳ್ಳಿ ಪಾತ್ರೆಯಲ್ಲಿ 'ಪಾಚೋಜಿ'ಅನ್ನೂ ಇನ್ನೊಂದರಲ್ಲಿ 'ಚಕ್ಕರ'ವನ್ನೂ ತಂದಿಡುವಳು ಅಲ್ಲದೆ ನೀರು ತುಂಬಿದರೆ ಒಂದು ಬಾಲದ ಗಿಂಡಿಯನ್ನು ಒಂದು 'ಕೊಳಾಂಬಿ; (ಉಗುಳುಪಾತ್ರ ಪೀಕದಾನಿ) ಯನ್ನು ಇರಿಸುವಳು. ವರನನ್ನು ಭಾವ ಪೀಠದಲ್ಲಿ ಕುಳ್ಳಿರಿಸಿವನು 'ಅಪ್ಪಾಪ್ಪನ್ (ತಂದೆಯ ಎಳೆಯ ಸಹೋದರ–ಚಿಕ್ಕಪ್ಪ) ವರನನ್ನು ಸಮೀಪಿಸಿ ಒಂದು 'ತೋರ್ತ್ ಮುಂಡ್ (ಕಿರು ಪಂಚೆಯನ್ನು) ತಲೆಯಲ್ಲಿ ಕೀರಿಟದ ಹಾಗೆ ಸುತ್ತಿ ಕಟ್ಟುತ್ತಾನೆ.

ಅನಂತರ ಆತ ಎಲ್ಲರಲ್ಲಿ 'ಇಚ್ಚಪ್ಪಾಟ್ ಕೊಡುಕ್ಕಟ್ಟೇ (ಇಚ್ಚೆಗೆ ತಕ್ಕ ಅಹಾರಕೊಡಲೇ) ಎಂದು ಮೂರು ಬಾರಿ ಕೇಳುತ್ತನೆ. ಆಬಳಿಕ 'ತೋರ್ತ' ಬಿಚ್ಚಿ ತೋಳಿನಲ್ಲಿ ಬಿಡಿಸಿಯಿಟ್ಟು, ಪಾಚ್ಚೋಜಿನ್ನು ಶರ್ಕರವನ್ನು ಕೂಡಿಸಿ ಸೆರಿಸಿ ವರನ ಬಾಯಲ್ಲಿ ಕೊಡುತ್ತನೆ. ಕೊಡುವಾತ ಕೈಗಳನ್ನು ವಿಶಿಷ್ಟ ರೀತಿಯಲ್ಲಿಇರಿಸುತ್ತಾನೆ. ಬಲಗೈ ಮೊಣಗಂಟಿಗೆ ಎಡಗೈ ತಾಗಬೇಕು ಕೆಲವೊಮ್ಮೆ ತಂದೆಯ ಕಡೆಯಿಂದ ಮೂವರು 'ಇಚ್ಚಪ್ಪಾಟ್' ನೀಡುವುದುಂಟು ತಿನ್ನಿಸಿದ ಬಳಿಕ ಗಿಂಡಿಯಲ್ಲಿರುವ ನೀರನ್ನು ಬಾಯಿಗೆರೆದು, ಮುಕ್ಕಳಿಸಿ ಕೊಳಾಂಬಿಗೆ ಉಗುಳಿಸುತ್ತಾರೆ. 'ಇಚ್ಚಪ್ಪಾಟಿ' ನ ಬಳಿಕ ಚಪ್ಪರದಲ್ಲಿ ಒಂದೇ ಎರಡೋ ತಾಸು 'ಮಾರ್ಗಂಕಳಿ' ನಡೆಸುತ್ತಾರೆ ಕ್ನಾನಾಯರ ಸ್ವಂತ ಕಲೆ ಇದು ಪುರುಷರೂ ಸ್ತ್ರೀಯರೂ ಬೇರೆ ಬೇರೆಯಾಗಿ ಆಡುವ 'ಕಳಿ' ಇದು ಮಧ್ಯದಲ್ಲಿ ದೀಪವಿಟ್ಟು ಅದಕ್ಕೆ ಸುತ್ತಲೂ ಏಳರಿಂದ ಹನ್ನೆರಡರವರೆಗೆ ಜನರು ನಿಂತು ಆಡುವ 'ಮಾರ್ಗಂಕಳಿ' ಶಾರೀರಿಕ ಶ್ರಮವೂ ನಿರಂತರ ಅಭ್ಯಾಸವೂ ಬೇಡುವ ಕಲೆ. 'ಮಾರ್ಗಂಕಳಿ'ಯೊಂದಿಗೆ ವಿವಾಹದ ಹಿಂದಿನ ದಿನದ ವಿಧಿಗಳೆಲ್ಲ ಮುಗಿಯುತ್ತದೆ.

ವಧುವಿನ ಮನೆಯ ಚಡಂಗಗಳು

ಮದುವೆಯ ಹಿಂದಿನ ದಿವಸ ವಧುವಿನ ಮನೆಯಲ್ಲೂ ಕೆಲ ಪಾರಂಪರೀಯ ಅನುಷ್ಠಾನಗಳು ಆಗಲು ಇವೆ ಹಿಂದಿನ ಕಾಲದಲ್ಲಿ ಆದಿತ್ಯವಾರ ಮುಂಜಾನೆ ಅಕ್ಕಸಾಲಿಗ 'ಕುಣುಕ್ಕ್' (ಮೇಲ್‌ಕಿವಿಯ್ ಆಭರಣ) ಮಾಡಿ ತರುತ್ತಾನೆ. ಈ ಕುಣುಕ್ಕ್ ಹುಡುಗಿಯ ಮಾವನ ಉಡುಗೊರೆ ವಿವಾಹದ ಮುಂಚಿನ ದಿನವೆ ಹೆಣ್ಣಿನ ಮೆಲ್ಲಿಸಿ ಕುತ್ತಿ 'ಕುಣುಕ್ಕು' ನುರಿದು ಇಡುವುದು. ಇದರಿಂದ ಕುಣುಕ್ಕ್ ವಿವಾಹಿತೆಯ ಲಕ್ಷಣವೂ ಆಯಿತು. ಇವತ್ತು ಕುಣುಕ್ಕ್ ಎಂಬ ಆಭರಣ ಕಾಣುವುದೆ. ಇಲ್ಲ ಹೊಸ ತಲೆಮಾರಿನ ಹೆಮ್ಮಕ್ಕಳು ಕಾಣುಕ್ಕ್ ಧರಿಸದ ಕಾರಣ ಈ ವಿವಾಹ ಚಡಂಗವೇ ನಡೆಯುತ್ತಿಲ್ಲ

ಮೈಲಾಂಜಿ (ಮದರಂಗಿ) ಇಡುವುದು

ವಧುವಿನ ಮನೆಯಲ್ಲಿ ಆದಿತ್ಯವಾರ ಅಲಂಕಾರಗಳಿಲ್ಲದ ಒಂದು ಸಾಮಾನ್ಯ ಚಪ್ಪರ ಹಾಕುತ್ತಾರೆ. ರಾತ್ರಿ ಊಟದ ಬಳಿಕ ವದುವಿನ ಅಕ್ಕನೋ ಅತ್ತೆಯೋ (ಪಿತೃಸಹೋದರಿ) ಚಪ್ಪರದಲ್ಲಿ ಚಾಪೆ ಬಿಡಿಸಿ ಅದರಲ್ಲಿ ಪೀಠ ವಿರಿಸಿ ಅದರ ಮೇಲೆ ತೋರ್ತ್ ಹರಡುತ್ತಾಳೆ, ವಧುವನ್ನು ಕರೆತಂದು ಪೀಠದಲ್ಲಿ ಕುಳ್ಳಿರಿಸುತ್ತಳೆ ಮುಂದೆ 'ಮಣವಾಟ್ಟಿಪ್ಪೆಣ್ಣಿನೆ ಮೈಲಾಂಜಿ ಇಡೀಕ್ಕಟ್ಟೇ? (ಮದುಮಗಳಿಗೆ ಮದರಂಗಿ ಇಡಿಸಲೇ) ಎಂದು ಆಕೆ ಸಭೆಯೊಡನೆ ಮೂರುಬಾರಿ ಕೇಳುತ್ತಾಳೆ ಸಭೆ ಒಪ್ಪಿಗೆ ನೀಡುತ್ತದೆ. ಅನಂತರ ಅರೆದಿಟ್ಟ ಮದರಂಗಿಯನ್ನು ವಧುವಿನ ಅಂಗೈಗಳಲ್ಲಿ ಪೂರ್ತಿ ಬರೆಯುತ್ತಾರೆ. ಆ ಬಳಿಕ ಉಗುರುಗಳಿಗೂ ಕಾಲುಗಳಿಗೂ ಹಚ್ಚುತ್ತಾರೆ. ಈ ವೇಳೆ ಸಭೆ 'ಮೈಲಾಂಜಿ ಪಾಟು' (ಮದರಂಗಿ ಹಾಡು) ಹಾಡುತ್ತದೆ. ಬೈಬಲ್‌ನಲ್ಲಿ ಬರುವ ಆದಿ ಮಾತಾಪಿತರಾದ 'ಆದಂ' 'ಹವ್ವ' ಎಂಬವರ ಪಾಪವನ್ನು, ಅದರ ಫಲವಾಗಿ ಅವರಿಗುಂಟಾದ ನಗ್ನತೆಯನ್ನು ಮರೆಸಲು ಎಲೆಗಳನ್ನು ಕಟ್ಟಿಕೊಂಡುದನ್ನೂ ಮದರಂಗಿ ಹಚ್ಚುವಿಕೆ ನೆನಪಿಸಿಕೊಡುವ ಪಾಟು ಇದು.

ಅನ್ನನ್ನು ಕನ್ಯಮಾರ್ ಮಂಗಲ್ಯಂ ವಾಜುವಾನ್

ಪಚ್ಚಿಲ ಮೈಲಾಂಜಿಕೊಂಡು ಪೋತಿಯುನ್ನು

ಕೈಯಾಲೆ ಕಾಯುಂ ಪಜೆಚ್ಚೋರು ಕಾರಣಂ

ಕೈಪ್ಪುಟ್ಟಂ ತನ್ನಿಲ್ ಪೋತಿಯುನ್ನು ಮೈಲಾಂಜಿ

ಕಾಲಾಲ್ ನಡನ್ನು ಕನಿತಿನ್ನ ಕಾರಣಂ

ಕಾಲ್‌ನಖಂ ತನ್ನಿಲ್ ಪೊತಿಯುನ್ನು ಮೈಲುಂಜಿ

(ಮಯಲಾಂಜಿ ಪಾಟ್ಟ್)

(ಅಂದಂದು ಕನ್ಯೆಯರು ಮಾಂಗಲ್ಯ ವಾಳಲು

ಹಸಿ ಎಲೆ ಮದರಂಗಿಯಿಂದ ಮುಚ್ಚುವರು

ಕೈಯಾರೆ ಕಾಯನು ಕಿತ್ತೊಂದು ಕಾರಣ

ಕೈಪುಟದೊಳಗೆ ಮುಚ್ಚುವರು ಮೈಲಾಂಜಿ

ಕಾಲಿಂದೆ ನಡೆದಂದು ಕನಿ ತಿಂದ ಕಾರಣ

ಕಾಲ್ ಉಗುರಿನೊಳಗೆ ಮುಚ್ಚುವರು ಮೈಲಾಂಜಿ)

ಒಂದು ತಾಸಿನ ವರೆಗೆ ಈ ಪಾಟುಗಳನ್ನು ಹಾಡುವರು ಮುಂದೆ ಮದರಂಗಿ ಇಡಿಸಿದವಳೇ ವಧುವಿನ ಕೈಗೆ ನೀರೆರರೆದುಕೊಟ್ಟು ಕೈ ತೊಳೆಯಿಸುವಳು ಮದರಂಗಿ ಇಡಿಸಿದ ಬಳಿಕ ತಂದೆ ಸಹೋದರಿ (ಅತ್ತೆ) ಯರಲ್ಲಿ ಒಬ್ಬಳು ತಲೆಯಲ್ಲಿ ಬಟ್ಟೆ ಕಟ್ಟಿ, 'ಮಣವಾಟ್ಟಿಪ್ಪೆಣ್ಣಿನು ಇಚ್ಚಪ್ಪಾಟ್ ಕೊಡುಕ್ಕಟ್ಟೇ? (ಮದುಮಗಳಿಗೆ ಇಚ್ಚಪ್ಪಾಟ್ ಕೊಡಲೇ?) ಎಂದು ಮೂರು ಬಾರಿ ಸಭೆಯೊಡನೆ ಕೇಳುತ್ತಾಳೆ, ಸಭೆ ಸಮ್ಮತಿಸುತ್ತದೆ. ಆಕೆ 'ಪಾಚ್ಚೋರ' ನ್ನೂ ಚಕ್ಕರೆಯನ್ನೂ ಕೂಡಿಸಿ ಇಚ್ಚಪ್ಪಾಟನ್ನು ವಧುವಿಗೆ ಉಣ್ಣಿಸುತ್ತಾಳೆ. ಬಾಯಿ ತೊಳೆಯಿಸಿ ವಧುವನ್ನು ಮನೆಯೊಳಕ್ಕೆ ಕರೆದೊಯ್ಯುವಲ್ಲಿಗೆ ಅಂದಿನ ವಿಧಿಗಳು ಪೂರ್ತಿಯಾದಂತೆ

ವಿವಾಹ 'ಪಳ್ಳಿ' ಯಲ್ಲಿ

ಮದುವೆಯ ದಿವಸ ಬೆಳಗೆ ಮಧುವೂ ವರನೂ ಬಿಳಿ ವಸ್ತ್ರಧರಿಸುವರು ಇಬ್ಬರದೂ ಮನೆಗಳಲ್ಲಿ ದೀಪ ಹಚ್ಚಿಟ್ಟು ಪ್ರಾರ್ಥನೆ ನಡೆಸುವರು ಆ ಬಳಿಕ ಮಾತೃ ಪಕ್ಷದ ಮತ್ತು ಪಿತೃಪಕ್ಷದ ಕಾರಣವನ್‌ಮಾರ್'ಗಳಿಗೆ ಸ್ತುತಿ ಸಲ್ಲಿಸುವರು ಹುಡುಗಿ ಮನೆಯಿಂದ ಇಳಿಯುವಾಗ ಮುಮದುಗಡೆ ದೀಪ ಹಿಡಿಯುವರು.

ವರನೂ ವಧುವೂ ಪಳ್ಳೀ (ಇಗರ್ಜಿ)ಯ ಅಂಗಳಕ್ಕೆ ತಲಪಿದರೆ ವರ ಪಳ್ಳಿಯೊಳಗೆ ಹೋದ ಬಳಿಕವಷ್ಟೇ ವದು ಪಳ್ಳಿಯನ್ನು ಪ್ರವೇಶಿಬೇಕೆಂಬ ನಿಯಮವಿದೆ. ಪಳ್ಳಿಯ ಆನೆ ಬಾಗಿಲಿನಲ್ಲಿ (ಪ್ರಧಾನ ಬಾಗಿಲಿನಲ್ಲಿ) ಕಾಲು ದೀಪ ಉರಿಸಿಡುತ್ತಾರೆ. ಬಲಿಪೀಠಕ್ಕೆ ಅಭಿಮುಖವಾಗಿ ನಿಂತಿರುವ ವಧೂವರರ

ಸಮೀಪ ಪುರೋಹಿತ ನಿಲ್ಲುವರು ಕ್ರೈಸ್ತರನ್ನು ಸಂಬಂಧಿಸಿದ ಹಾಗೆ ಒಡಂಬಡಿಕೆಗಳನ್ನೆಲ್ಲ ದೇವರೊಂದಿಗೆ ಮಾಡಿಕೊಳ್ಳುವುದಾಗಿದೆ ದೇವರ ಪ್ರತಿನಿಧಿ ಎಂಬ ನೆಲೆಯಲ್ಲೆ ದೇವಾಲಯದ ಚಡಂಗಗಳಲ್ಲಿ ಪುರೋಹಿತ ವರ್ತಿಸುವುದು ವಿವಾಹ ಕರ್ಮಕ್ಕೆ ವದುವಿನ ಮತ್ತು ವರನ ಕಡೆಗಳಿಂದ ಒಬ್ಬೊಬ್ಬ ಸಾಕ್ಷಿಗಳು ಇರಬೇಕಾಗುತ್ತದೆ. ಲೋಕದ ಬೆಳಕಾದ ಕ್ರೈಸ್ತನ ಸಾನಿಧ್ಯವನ್ನು ಸೂಚಿಸಲು ವಧೂವರರ ಮುಂದೆ ದೀಪವೊಂದನ್ನು ಉರಿಸಿಡುವರು ಮುಂದೆ ವಿವಾಹಕ್ಕೆ ಸಂಬಂಧಿಸಿದ ಬೈಬಲ್ ಭಾಗಗಳನ್ನು ಓದಲಾಗುತ್ತದೆ. ಆ ಬಳಿಕ ಮಂತ್ರಕೋಡಿ', ಉಂಗುರ ಇತ್ಯಾದಿಗೆ ಆಶೀರ್ವದಿಸಲಾಗುತ್ತದೆ. 'ತಳಿ' ಆಶೀರ್ವದಿಸುವ ಕ್ರಮ ಕ್ನಾನಾಯರ್‌ಗಳಿಗಿಲ್ಲ ಆದರೆ ಪುರೋಹಿತ ದಾರದಲ್ಲಿ ಕೋದಿರುವ ತಾಳಿಯನ್ನು ವರನಿಗೆ ನೀಡುತ್ತಾರೆ. ವರ ವಧುವಿನ ಕುತ್ತಿಗೆಗೆ ತಾಳಿ ಕಟ್ಟುತ್ತಾನೆ. ಪುರೋಹಿತ ತೆಗೆದು ಕೊಡುವ 'ಮಂತ್ರ ಕೋಡಿ' ವಧುವಿನ ಶಿರಸ್ಸಿನಲ್ಲಿ ಅಣಿಯುತ್ತಾನೆ. ಮುಂದುವರಿದು ವಧುವೂ ವರನೂ ಪರಸ್ಪರ ಉಂಗರು ವಿನಿಮಯ ಮಾಡಿಕೊಳ್ಳುತ್ತರೆ. ಪುರೋಹಿತ ಇಬ್ಬರ ಕೈಗಳನ್ನು ಸೇರಿಸಿ ಹಿಡಿದು ಪರಸ್ಪರ ಜವಾಬ್ದರಿ ವಹಿಸಿಕೊಡುತ್ತರೆ. ವಿವಾಹದ ಅವಿಭಾಜ್ಯತೆಯನ್ನೂ ಪರಿಶುದ್ದಿಯನ್ನು ಕಾಯ್ದುಕೊಳ್ಳಬೇಕೆಂದು ಬೈಬಲ್ ಮೇಲೆ ಕೈಯಿರಿಸಿ ವಧೂವರರು ಪ್ರತಿಜ್ಞೆ ಸ್ವೀಕರಿಸುವರು ಅಚಿತಿಮವಾಗಿ ಪುರೋಹಿತ ವಧುವಿನ ಮತ್ತು ವರನ ತಲೆ ಮೇಲೆ ಕೈಯಿಟ್ಟು ಆಶೀರ್ವದಿಸುತ್ತಾರೆ. ಇದರೊಂದಿಗೆ 'ಪಳ್ಳಿ'ಯಲ್ಲಿ ನಡೆಯುವ ವಿವಾಹ ವಿಧಿ ಸಂಪೂರ್ಣ ಪಳ್ಳಿಯಲ್ಲಿ ಕಾಪಿಡುವ ವಿವಾಹ ರಿಜಿಸ್ಟರ್‌ನಲ್ಲಿ ನವದಂಪತಿಯೂ ಎರಡೂ ಕಡೆಯ ಸಾಕ್ಷಿಗಳಾಗಿ ಇಬ್ಬರ ಪಿತೃ ಸಹೋದರರು ಸಹಿ ಹಾಕುವರು ಆ ಬಳಿಕ ವರನ ನಿವಾಸಕ್ಕೆ ಪ್ರಯಾಣ

ನಡವಿಳಿ

ಯಾತ್ರೆ ತೊಡಗುವ ಮೊದಲು ವಧೂವರರನ್ನು ನಡುವೆ ನಿಲ್ಲಿಸಿ ಎರಡೂ ಕಡೆಯ ಮಾವಂದಿರು 'ನಡವಿಳಿ' (ನಡ ಎಂಬ ಕೂಗು) ನಡೆಸುತ್ತಾರೆ 'ನಡ. . . ನಡ. . . ನಡನಡಯೋ ನಡ' ಎಂದು ಎತ್ತರಿಸಿದ ದನಿಯಲ್ಲಿ ಕೂಗುತ್ತಾರೆ. ಅದರೊಂದಿಗೆ ಉಳಿದವರು ಕೂಗು ಬೊಬ್ಬೆ ಹಾಕುತ್ತಾರೆ. ಇದು ಮೂರು ಬಾರಿ ಅವರ್ತನೆಗೊಳ್ಳುತ್ತದೆ. ಪ್ರಯಾಣ ಮನೆಯ ಆವರಣ ಮೆಟ್ಟಲೇರುವಾಗ ಎರಡನೆ ಬಾರಿ, ಚಪ್ಪರದ ಒಳಪ್ರವೇಸಿಸುವಾಗ ಮೂರನೆ ಬಾರಿ 'ನಡವಿಳಿ' ನಡೆಯುತ್ತಾರೆ. ಮನೆಯ ಪ್ರವೇಶದ್ವಾರದಿಂದ ಚಪ್ಪರದ ದ್ವಾರದವರೆಗೆ ವರನನ್ನು ವಧುವನ್ನೂ ಮಾವಂದಿರು ಎತ್ತಿ ತೆಗೆದೊಯ್ಯುತ್ತಾರೆ.

ನೆಲ್ಲನ್ನು ನೀರನ್ನೂ ಇಡುವುದು.

ಚಪ್ಪರದ ಬಾಗಿಲಲ್ಲಿ ವರನ ತಾಯಿ ಒಂದು ತಟ್ಟೆಯಲ್ಲಿ ಭತ್ತವನ್ನೂ (ನೆಲ್ಲನ್ನೂ) ನೀರನ್ನೂ ಅದರಲ್ಲಿ ತೆಂಗಿನ ಎಳೆಗರಿ ಸಹಿತ ಹಿಡಿದು ನವದಂಪತಿಗಳನ್ನು ಸ್ವಾಗತಿಸುತ್ತಾಳೆ, ಎಳೆಗರಿಯಿಂದ ಇಬ್ಬರ ಹಣೆಯಲ್ಲೂ ಶಿಲುಬೆ ಗುರುತನ್ನು ಬರೆಯುವಳು ಮುಂದುವರಿದು ವರನೂ ವಧುವೂ ಬಲಗಾಲು ಮುಂದಿಟ್ಟು ಚಪ್ಪರದ ಒಳಕ್ಕೆ ಪ್ರವೇಶಿಸುವರು ಪ್ರತ್ಯೇಕವಾಗಿ ಸಜ್ಜೀಕರಿಸಿದ 'ಮಣರ್‌ಕೋಲ' (ಆಸನ)ದಲ್ಲಿ ಅವರನ್ನು ಕುಳ್ಳಿರಿಸುವರು.

ವಾಯಿ ಪಿಡುತ್ತಂ

ಮಣರ್ ಕೋಲದಲ್ಲಿ ಕುಳಿತು ವರನ ಮತ್ತು ವಧುವಿನ ತಲೆಯಲ್ಲಿ ಶಿಲುಬೆ ಆಕೃತಿಯಲ್ಲಿ ಕೈ ಇರಿಸಿ ವಧುವಿನ ಹಿರಿಯ ಸಹೋದರಿಯೋ ತಾಯಿಯ ಸಹೋದರಿಯೋ ಆಶೀರ್ವಾದ ನೀಡುವ ಚಡಂಗವೇ 'ವಾಜಿ ಪಿಡುತ್ತಂ'

ಮಣವಾಳ್‌ಚ್ಚೇಕ್ಕನುಂ ಮಣ್ಣವಾಟ್ಟಿಪ್ಪೇಣಿನುಂ ವಾಜು ಪಿಡಿಕ್ಕಟ್ಟೆ? (ಮದುಮಗನಿಗೂ ಮದುಮಗಳಿಗೂ 'ವಾಜು' ಹಿಡಿಯಲೇ? ಎಂದು ಮೂರು ಬಾರಿ ಸಭೆಯನ್ನು ಕೇಳುತ್ತಾಳೆ ಸಭೆಯ ಸಮ್ಮತಿ ಬರುತ್ತದೆ. ಅವರು ಆ ವಿಧಿ ನಡೆಸುವಾಗ ಚಪ್ಪರದಲ್ಲಿರುವವರು 'ವಾಜುಪ್ಪಾಟ್ಟ್' ಹಾಡುತ್ತಾರೆ. ವಿವಾಹಕ್ಕೆ ಸಂಬಂಧಿಸಿ ಸ್ತ್ರೀಗೆ ಸಾರ್ವಜನಿಕವಾಗಿ ಸಿಗುವ ಏಕೈಕ ಅಧಿಕಾರ ಇದಾಗಿದೆ. 'ವಾಜು ಪಿಡಿತ'ದ ಬಳಿಕ ಬಾಳೆ ಹಣ್ಣು ಚೂರುಗಳು ಬೆರೆತ ಸಿಹಿ. ಹಾಲನ್ನು ವಧೂವಿಗೂ ವರನಿಗೂ ಕೊಡುತ್ತಾರೆ. 'ಮಧುರಂ ವೆಕ್ಕಲ್' (ಸಿಹಿ ಇಡುವುದು) ಎಂದು ಇದಕ್ಕೆ ಹೆಸರು

ಕಚ್ಚ ತಟಿಕಲ್

'ಕಚ್ಚೆ' ಎಂದರೆ ಬಟ್ಟೆ 'ತಜಿಕಲ್' ಎಂದರೆ ತಳ್ಳಿಸು ವಧುವಿನ ಹತ್ತಿರದ ಬಂಧುಗಳೀಗಾಗಿ ವರ ತಂದಿರಿಸಿದ ಹೊಸ ವಸ್ತವನ್ನೆ ಇಲ್ಲಿ 'ಕಚ್ಚಾ' ಎನ್ನುವುದು ವದುವಿನ ಮಾವ,ತಾಯಿ, ಅಜ್ಜಿ ಇವರಿಗೆ ಇಲ್ಲಿನ 'ಕಚ್ಚೆ'ಎನ್ನುವುದು ವಧುವಿನ ಮಾವ, ತಯಿ, ಅಜ್ಜಿ ಇವರಿಗೆ ಇಲ್ಲಿನ 'ಕಚ್ಚೆ'ಸ್ವೀಕಾರ ಹಕ್ಕು ಇವುಗಳಿಗೆ ಯಥಾಕ್ರಮ 'ಅಚ್ಚನ್ ಕಚ್ಚೆ', 'ಅಮ್ಮಕ್ಕಚ್ಚೆ', ಮುತ್ತಿಕ್ಕಚ್ಚೆ' ಎಂದು ಹೆಸರುಗಳು ವರನ ಮಾವ ಬಟ್ಟೆಯನ್ನು ತೆಗೆದು ವರನ ಕೈಗೆ ಕೊಡುತ್ತನೆ. ವಧುವಿನ ಮಾವ ವಧೂವರರನ್ನು ಅಪ್ಪಿ ಹಿಡಿದು ಬಟ್ಟೆ, ಸ್ವೀಕರಿಸಿ ವರನಿಗೆ ಉಂಗುರ ತೋಡಿಸುತ್ತನೆ. ಇದೇ ರೀತಿ ವಧುವಿನ ತಾಯಿಯೂ ಅಜ್ಜಿಯೂ ಬಟ್ಟೆ ಸ್ವೀಕರಿಸಿ ವರನಿಗೆ ಉಡುಗೊರೆ ಕಾಣಿಕೆ ನೀಡುವರು ತಾಯಿಗೆ ದೊರಕಿದ ಬಟ್ಟೆಯಲ್ಲಿ ತಾಯಿಯ ತಂಗಿಗೇ ಹಕ್ಕು ಇರುವುದು.

ಮದುವೆ ಔತಣ

ಕ್ರೈಸ್ತ ವಿವಾಹಗಳಲ್ಲೆಲ್ಲ ಸಸ್ಯೇತರ ಆಹಾರವೆ ಪ್ರಧಾನ ಅನ್ನಮತ್ತು ಮಾಂಸದ ಅಡುಗೆಗಳಿರುತ್ತವೆ. ಆಡುಗೆಗಳಿರುತ್ತವೆ. ಆಡು, ಮಾಡ್ (ದನ) ಕೋಳಿ ಎಂಬ ಮೂರು ಬಗೆ ಮಾಂಸ ಮುಖ್ಯ ಕಳ್ಳಿನಿಂದ ತಯಾರಿಸುವ ವಿಶೇಷ ಪಾನೀಯವಾದ 'ಪಾನಿ' ಮೊಸರು, ಬಾಳೆಹಣ್ಣು ಇವುಗಳನ್ನು ಕೊನೆಯಲ್ಲಿ ಬಡಿಸುತ್ತಾರೆ. ಮದುವೆ ಔತಣದಲ್ಲಿ ಕೈಬಿಡಲಾರದ ವಿಷಯ ಮದ್ಯ ಪ್ರಧಾನ ಊಟವಾದ ಬಳಿಕ ಒಂದಿಷ್ಟು ಹೊತ್ತಿನ ಬಳಿಕ ಕಡುಕಾಫಿ ವಿತರಣೆಯಾಗುತ್ತದೆ. ಇದರೊಂದಿಗೆ ನವದಂಪತಿಗಳೂ ವಧುವಿನ ಬಂಧುಗಳೂ ವಧೂಗೃಹಕ್ಕೆ ಯಾತ್ರೆ ಹೊರಡುವರು.

ಇಲ್ಲಪ್ಪಣಂ

ನವದಂಪತಿಗಳು ವಧೂ ಗೃಹಕ್ಕೆ ಹೋಗಲು ಹೊರಟಾಗ ವರನ ತಂದೆ ವಧುವಿಗೆ ಹಣ ಕೊಡುವ ಪದ್ದತಿ ಇದೆ ಇದಕ್ಕೆ 'ಇಲ್ಲಪ್ಪಣಂ' (ಮನೆಯ ಹಣ) ಎಂದು ಹೆಸರು ತಮ್ಮ 'ಇಲ್ಲಂ' ಗೆ (ಕುಟುಂಬಕ್ಕೆ) ಬಂದಿರುವ ಹೊಸ ಸದಸ್ಯೆ ಮಾಡಬೇಕಾದ ದಾನಧರ್ಮಗಳಿಗೆ ಬೇಕಾದ ಮೊತ್ತವನ್ನು ಒದಗಿಸುವ ಹಣವಿದು, ವಧೂಗೃಹದಲ್ಲಿ ವಧುವಿನ ತಾಯಿ ದೀಪ ಹಿಡಿದು ನವದಂಪತಿಗಳನ್ನು ಸ್ವಾಗತಿಸುವಳು ಮರುದಿವಸ ನವದಂಪತಿಗಳು ವರನ ಮನೆಗೆ ಹೊರಡುವುದರೊಂದಿಗೆ ವಿವಾಹ ವಿಧಿಗಳೆಲ್ಲ ಪೂರ್ತಿಯಾಗುತ್ತವೆ.

ಒಂದಿಷ್ಟು ಚರಿತ್ರೆ

ಕೇರಳದ ಕ್ರೈಸ್ತರಲ್ಲಿ ಆಚಾರ, ಅನುಷ್ಠಾನಗಳ ಬಾಹುಲ್ಯದಿಂದಲೂ ವೈವಿಧ್ಯದಿಂದಲೂ ಗಮನಾಹ್ ವಿಭಾಗವಾಗಿದೆ ಕ್ನಾನಾಯ ಕ್ರೈಸ್ತರು ಅಥವಾ ತೆಕ್ಕುಂಬಾಗರ್ (ತೆಂಕಣ ಭಾಗದವರು) ಎ.ಡಿ.52 ರಲ್ಲಿ ಏಸು ಕ್ರಿಸ್ತ ಮತ ಸ್ಥಾಪಿತವಾಯಿತು. ಅಂದು ಸೇಂಟ್ ಥಾಮಸ್ ಮೂಲಕ ಮತ ಪರಿವರ್ತ್ನೆಗೊಂಡವರ ಮತ್ತು ಅನಂತರ ಬಂದ ಪಾಶ್ಚತ್ಯ ಮಿಷನರಿಗಳು ಮಾಡಿದ ಮತಪರಿವರ್ತನೆಗೆ ಒಳಗಾದವರ ಸಂತತಿಗಳೇ ಇಂದಿನ ಕೇರಳದ ಕ್ರೈಸ್ತ ಸಮುದಾಯಗಳು ಈ ಪಾರಂಪರೀಯತೆಯಿಂದ

ಪೂರ್ಣ ಭಿನ್ನರು ಕ್ನಾನಾಯ ಕ್ರೈಸ್ತರು ಎ.ಡಿ. 345 ರಲ್ಲಿ ಕೊಡುಂಜಲ್ಲೂರಿಗೆ ತಲುಪಿದ ಸಿರಿಯನ್ ವ್ಯಾಪಾರಿ ಸಂಘ ಮುಖ್ಯಸ್ಥನಾದ ಕಾನಾಯಿಯವನಾದ ತೋಮಾನ ಮತ್ತು ಆತನನ್ನು ಹಿಂಬಾಲಿಸಿದ ಸಂಘದ ಪೀಳಿಗೆಯವರೇ ಈ ವಿಭಾಗದವರೆಂದು ನಣಬಲಾಗುತ್ತಿದೆ. ಚರಿತ್ರ ವಸ್ತುತೆಗಳಿಗಿಂತ ಜೀವಂತ ಪರಂಪರೆಯೆ ಈ ವಲಸೆಯನ್ನು ಸಮರ್ಥಿಸುತ್ತಿರುವುದು ಕ್ನಾನಾಯರ್ ಪರಂಪರೆಯಾಗಿ ದಾಟಿ ಬಂದಿರುವ ಪಾಟುಗಳಲ್ಲಿ ಈ ಘಟನೆಯ ವಿವರ ಹೀಗಿದೆ. – ಸೆಂಟ್ ಥಾಮಸ್ ಸ್ಥಾಪಿಸಿದ ಕೇರಳ ಕ್ರೈಸ್ತ ಸಭೆ ಮೂರು ಶತಮಾನಗಳನ್ನು ಕಂಡಾ, ನೇತೃತ್ವದ ಅಭಾವದ ಮೂಲಕವೂ ಇತರ ಕಾರಣಗಳಿಗಾಗಿಯೂ ಕ್ಷಯಿಸಿತ್ತು ಚರಿತ್ರೆಯ ಈ ಪ್ರತ್ಯೇಕ ದಶಾಸಂಧಿಯಲ್ಲಿ ಎಡೇಸ್ಸಾದಲ್ಲಿನ ಮೇತ್ರಾಪ್ಪೋಲಿತ್ತಕ್ ಭಾರತ ಸಭೆಯ ಆಧ್ಯಾತ್ಮಿಕ ಬಿಕ್ಕಟ್ಟಿನ ಬಗೆಗೂ, ನೆತೃತ್ವ ರಹಿತತೆ ಬಗೆಗೂ ಒಂದು ದರ್ಶನ ಉಂಟಾಯಿತು ಅವರು ಇತರ ಉನ್ನತ ಸ್ಥಾನಾಪನ್ನರ ಜತೆಯಲ್ಲಿ ಈ ವಿಷಯವಾಗಿ ಚರ್ಚಿಸಿದರು. ಅದರ ಫಲವಾಗಿ ಪೂರ್ವದ ರಾಜ್ಯಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದ ವ್ಯಾಪಾರ ಶ್ರೇಷ್ಠನೂ ಮತ ವಿಶ್ವಾಸಿಯೂ ಆದ ಕ್ನಾನಾಯಿ ತೋಮ್ಮಾ ಎಂಬವನ ನೆತೃತ್ವದಲ್ಲಿ ಜೋಸೆಫ್ ಮೆತ್ರಾನೂ 72 ಕುಟುಂಬಗಳ 400 ರಷ್ಟು ಸದಸ್ಯರ ಊ ಕೇರಳಕ್ಕೆ ಹೊರಟರು , ತಮ್ಮ ಸ್ವಂತಿಕೆಯನ್ನು ಕಾಯ್ದುಕೊಳ್ಳಬೇಕೆಂಬ ಉದ್ದೇಶವನ್ನು ಹೊಂದಿಯೂ ಆಗಿತ್ತು ಈ ಯಾತ್ರೆ ಇವರು ಕೇರಳದ ಜೇರರ ರಾಜಧಾನಿಯಾಗಿದ್ದ ಕೊಡುಂಗಲ್ಲೂರಿಗೆ ತಲುಪಿದರು, ಅಂದಿನ ಚೇರ ಕೋನ್ (ರಾಜ)ನಿಗೆ ಬಿನ್ನಹ ಸಲ್ಲಿಸಿದರು. ಕರರಹಿತವಾಗಿ ಭೂ ಪ್ರದೇಶಗಳು ಸೂರ್ಯ ಚಂದ್ರಿರುವಷ್ಟು ಕಾಲ 72 ಮನೆ ಹೆಸರುಗಳಿಗೆ ಮಂಜೂರಗಿರುವುದಾಗಿ ರಾಜನ ತಾಮ್ರಶಾಸನವೂ ದೊರೆಯಿತು.

ಕ್ನಾನಾಯರ ಪುರಾತನ ಪಾಟುಗಳು ವಿಷಯಗಳನ್ನು ಇದ್ದಕ್ಕಿದ್ದ ಹಾಗೆ ನಂಬಲು ಆಗದಾದರೂ ಕ್ನಾಯಿತ್ತೋಮನ ಆಗಮನವನ್ನು ಚರಿತ್ರಕಾರರು ಬೆಂಬಲಿಸುತ್ತರೆ. ಎ.ಡಿ. 345 ರಲ್ಲಿ ಕ್ನಾಯಿತೋಮನಿಗೆ ಸಿಕ್ಕಿರುವುದಾಗಿ ಹೇಳಲಾದ ತಾಮ್ರ ಶಾಸನ ಇಂದು ಕೇರಳದಲ್ಲಿ ಇಲ್ಲ ಪೋರ್ಚುಗೀಸರ ಆಡಳಿತಾದ ಕಾಲದಲ್ಲಿ ಕೊಚ್ಚಿಯಲ್ಲಿದ್ದ ಭಂಡಸಾಲೆಯಲ್ಲಿ ಕಾಯ್ದಿರಿಸಲಾಗಿದ್ದ ತಾಮ್ರಶಾನ ಪೋರ್ಚುಗೀಸರ ಅಂಧವಾದ ಮತಪರಿಷ್ಕರಣದ ಎಡೆಯಲ್ಲಿ ಅದು ಕಾಣೆಯಾಯಿತು ಕೂತ್ತೋ ಎಂಬ ಇತಿಹಾಸಕಾರ 1603 ರಲ್ಲಿ ರಚಿಸಿದಏಷ್ಯ (ಛಿಚಿ) ಎಂಬ ಚರಿತ್ರೆ ಗ್ರಂಥದಲ್ಲಿ ಕ್ನಾಯಿತ್ತೋಮಾನ ತಾಮ್ರ ಶಾಸನವನ್ನು ಹಿಂದೆ ತಾನು ನೋಡಿರುವುದಾಗಿಯೂ ಈಗ ಅದು ಕೊಚ್ಚಿಯಲ್ಲಿ ಇಲ್ಲವೆಂದೂ ದಾಖಲಿಸಿದ್ದಾನೆ. ತಾಮ್ರ ಶಾಸನದ ಒಂದು ಅಧಿಖೃತ ಪೋರ್ಚುಗೀಸ್ ಅನುವಾದ ಬ್ರಿಟಿಷ್ ಮ್ಯೂಸಿಯಂಲೈಬ್ರೆರಿಯಲ್ಲಿ ಸುರಕ್ಷಿತವಾಗಿದ್ದು ಅದರಿಂದ ಕ್ನಾಯಿತೋಮಾನಿಗೂ ಬಳಗದವರಿಗೂ ದೊರೆತ ಹಕ್ಕುಗಳು ತಿಳಿದುಬರುತ್ತವೆ. ಅಜಿಪ್ಪುರ (ಅರಮನೆ), ಅಂಬಾರಿ, ಅಂಗಣ, ಅಂತೋಳಂ, (ಮೇನೆ), ಅಮ್ಮೂಲಂ, ಅರ್ಪ್(ಅರ್ಭಟ), ಅಲವಟ್ಟಂ, ಅನೆ ಸವಾರಿ, ಉಚ್ಚಿಪ್ಪೂವ್, ಕಚ್ಚ(ಹೊಸಬಟ್ಟೆ), ಕಚ್ಚಪ್ಪುಜಿಂ (ಪಡಿಯರಞ್ಞಣ್–ಡಾಬು), ಕಂಕಣ, ಕಾಲ್ತ್ತಳ (ಕಾಲಕಡಗ), ಕಾಲ್ ಚಿಲಂಬ್ (ಕಾಲಗಗ್ಗರ), ಕುರವ (ಸಮೂಹಿಕ ಕೂಗು, ಕುದುರೆ ಸವಾರಿ, ಕೊಳಲು ಕೈಕ್ಕಾಜಿ(ಕೈಯ ಕಾಜಿ ಬಳೆ,), ಕೊಡಿ (ಧ್ವಜ), ಕೈತ್ತಳ

(ಕೈಕಡಗ), ಚೊಲ್ಲಿ (ಉಪದೇಶ, ಚೆಂಕೋಂಬು(ರಣಕಹಳೆ) ಚೆಂಡೆ, ತಂಬೇಱ್ (ನಗಾರಿಯಂಥ ದೊಡ್ಡ ಸದ್ದಿನ ವಾದ್ಯ), ತಱಿಕ್ಕುಟ (ಶ್ವೇತಚ್ಛತ್ರ), ನೇರ್‌ವಾಳ್ (ನೇರಖಡ್ಗ), ಪಟ್ಟುಚಟ್ಟ (ರೇಶ್ಮೆ ಅಂಗಿ), ಪಟ್ಟುಱಿ ಮಾಲ್ (ರೇಶ್ಮೆ ರುಮಾಲು), ಪಟ್ಟುಮುಂಡು (ರೇಶ್ಮೆ ಪಂಚೆ), ಹಗಲು ಬೆಳಕು (ಕೈದೀವಿಗೆ), ಪಡಿಪ್ಪು (ಪಡಿಪಿರೆ), ಪತಕ್ಕಂ (ಪದಕ), ಪಣಿಪ್ಪುಟವ (ಶ್ರಮವಸ್ತ್ರ), ಪರವತಾನಿ (ರತ್ನ ಗಂಬಳಿ), ಪಾವಾಡ (ಪಾವಡೆ ುಟಿ ಛಿಟಂಣು), ಪಲ್ಲಕ್ಕ್ (ಪಲ್ಲಕಿ), ಪಂಚವಾದ್ಯ, ಚಪ್ಪರ ಅಲಂಕರಣ, ಪರಿಷಮೇಲ್ (ಸಭಾಗಣ್ಯತೆ), ಕರ್ತೃತ್ವ (ಯಜಮಾನಿಕೆ), ಮದ್ದಳ, ಮಣರ್‌ಕ್ಕೋಲಂ (ಮದುಮಕ್ಕಳ ಮಂಟಪ), ಮುಡಿ (ಕಿರೀಟ) ಮುಡಿಕ್ಕಿಱಾಭರಣ (ಮುಡಿಕೆಳಗಿನ ಆಭರಣ), ಮುಮ್ಮಾಲಂ ಮೆದಿಯಡಿ (ಪಾದುಕೆ), ರಜವಾದ್ಯ, ರಾಜಸಮಕ್ಷಮ್ ಇರಿಪ್ಪ್ (ರಾಜನ ಮುಂದೆ ಕುಳ್ಳಿರುವಿಕೆ), ರಾಜಭೋಗ, ವೀಣೆ, ತೀವೆಟ್ಟಿ (ದೀವಟಿಗೆ), ತೂಕ್ಕುಮಂಚು (ಉಯ್ಯಲೆ), ತೋಜ್ಜಲ್ (ಕುಚ್ಚು), ತೋರಣಂ, ತೋಳ್‌ವಳ (ತೋಳಿನ ಬಳೆ) ತೀಂಡಲಗಱಿಲ್ (ಅಶುದ್ಧಿ ತೊಲಗಿಸು), ನಡ (ನಡೆದು ಬೀದಿ ಮೆರವಣಿಗೆ) ನಾಯಾಟು ಭೋಗಂ (ಬೇಟೆಭೋಗ), ನಾಯರ್‌ಕ್ಕುಡಿ ಪರಿಷ್, ನೆಡಿಯಕುಡ (ಎತ್ತರದ ಕೊಡೆ), ನೆಟ್ಟೂರ್‌ಪೆಟ್ಟಿ (ಹಗುರವಾದ ಬಣ್ಣ ಕೊಟ್ಟ ಪೆಟ್ಟಿಗೆ), ನೆಱಿಕ್ಕೆಟ್ಟ್(ನೆತ್ತಿಕಟ್ಟುಗೆ), ವೀರಮದ್ದಳಂ, ವೀರಶೃಂಖಲ, ವಿರಿಪಂದಲ್ (ಬಟ್ಟೆಯ ಚಪ್ಪರ) ವೆಂಚಾಮರಂ (ಬಿಳಿಚಾಮರ –ಚೌರಿ ಬೀಸಣಿಗೆ), ಶಂಖ, ಎಡಮುರಿಶಂಖ, ಬಲಮುರಿಶಂಖ, ಭೂಮಿಕರ ವಿನಾಯಿತಿ, ಬೇಟೆ, ಹಲಮರಗಳು – ಎಂಬವುಗಳು ಅವು ಈ ಹಕ್ಕುಗಳ ಪ್ರತಿಫಲವ ಕ್ನಾನಾಯ ಜನವಿಭಾಗದ ಹಬ್ಬ ಸಡಗರಗಳ ವೆಳೆ ಬಹಳ ಶೋಭಾಕರೌಆಗಿ ಕಾಣಿಸಿಕೊಳ್ಳುವೆ ಕೂಡ,

ಕ್ನಾನಾಯ ಕ್ರೈಸ್ತರಿಗೆ 'ತೆಕ್ಕುಭಾಗರ್'ಎಂದೇಕೆ ಹೆಸರು ಎಂದು ನಿಖರವಾಗಿ ಹೇಳಬರುತ್ತಿಲ್ಲ, ಕೊಡಙ್ಙಲ್ಲೂರಿಗೆ ತಲಪಿದ ಈ ಜನರು ನಗರದ ತೆಂಕು ಭಾಗದಲ್ಲಿ ವಾಸ ಮಾಡಿದುದರಿಂದ ಆ ಹೆಸರು ಬಂತೆಂದು ಒಂದುವಾದ ಬೈಬಲ್‌ನಲ್ಲಿ ಕಂಡು ಬರುವ 'ತೆಂಕಣ ರಾಜ್ಯ' ಎಂದು ವಿಶೇಷಿಸಿರುವುದು ಯೂದಯಾದಲ್ಲಿ ವಾಸಮಾಡಿದ್ದರಿಂದ ಎಂದು ಒಂದು ವಾದವಿದೆ. ಕೇರಳಕ್ಕೆ ತಲುಪಿದಯೂದ ವಂಶಜರದ ಈ ಕ್ರೈಸ್ತರು ವಿವಾಹದ ಮೂಲಕವೋ ಇನ್ನಾವುದೋ ರೀತಿಯಲ್ಲೋ ಕೇರಳದ ಕ್ರೈಸ್ತ ಅಥವಾ ಆಕ್ರೈಸ್ತರಾದ ಒಂದು ವಿಭಾಗದೊಂದಿಗೂ ಸೇರಿಕೊಳ್ಳಲು ಇಷ್ಟ ಪಡಲಾರರು ಹೊರಗಿನವರನ್ನು ಸೇರಿಸಿಕೊಳ್ಳಲೂ ಆದರೂ ಸ್ವಂತಿಕೆಯಿರುವ ಆಚಾರಗಳೊಂದಿಗೂ,ಜೀವನ ರೀತಿಗಳಿಂದಲೂ ಅವರು ಬೇರೆಯೇ ಆಗಿ ನಿಲ್ಲುವರು ಕ್ನಾನಾಯ ಸಮುದಾಯದ ಸ್ತ್ರೀಯೋ ಪುರುಷನೋ ಸ್ವಸಮುದಾಯದ ಹೊರಗೆ ವಿವಾಹ ನಡೆಸಿದಲ್ಲಿ ಒಡವೆಯ ಅವರು ಆ ಹೊತ್ತಿನಿಂದಲೆ ಕ್ನಾನಾಯರಲ್ಲವಾಗುವರು ಈ ಪದ್ಧತಿ ಕೇರಳದ ಜಾತಿ ಭ್ರಷ್ಟತೆಯನ್ನು ನೆನಪುಮಾಡಿಕೊಡುತ್ತದೆ.

ಸಾಮಾಜಿಕ ವ್ಯವಸ್ಥೆ

ಹದಿನೇಳು ಶತಮಾನಗಳ ಬೆಳವಣಿಗೆಯನ್ನು ಕಂಡಿರುವ ಈ ಸಮುದಾಯದ ಕೇರಳದ ಸಾಂಸ್ಕೃತಿಕ, ಆರ್ಥಿಕ, ಸಾಮೂಹಿಕ ರಂಗಗಳಲ್ಲಿ ಬಲಿಷ್ಠ ಸಾನ್ನಿಧ್ಯವನ್ನು ವ್ಯಕ್ತಗೊಳಿಸಿದೆ. ಕೃಷಿ, ವ್ಯಾಪಾರ ಇವರ ಮುಖ್ಯ ವೃತ್ತಿಗಳಲ್ಲೂ ಅವರಿದ್ದಾರೆ. ಕುಟುಂಬದಲ್ಲಿ ತಂದೆಯ ಸರ್ವಾಧಿ ಪತ್ಯವಿರುವ ಯಹೂದ್ಯ ಸಂಪ್ರದಾಯವನ್ನೆ ಇವರು ಸಾಮಾನ್ಯವಾಗಿ ಆಚರಿಸುತ್ತಿರುವುದು. ಕಏರಳದ ವಿಶಿಷ್ಟದಾಯಕ್ರಮಕ್ಕೆ ಭೀನ್ನವಾಗಿ ಆಸ್ತಿ ಹಕ್ಕು ತಂದೆಯಲ್ಲಿ ಕೇಂದ್ರಿಕೃತ ಜನ್ಮದ ಮೂಲಕ ಪಿತೃಸ್ವತ್ತಿಗೆ ಯಾರು ಹಕ್ಕುದಾರರಲ್ಲ ಸಮಾನ ಹಕ್ಕನ್ನು ಕೇಳುವಂತೆಯೂ ಇಲ್ಲ ತಂದೆ ತನಗೆ ಇಷ್ಟವಿರುವಂತೆ ಆಸ್ತಿಯನ್ನು ಪಾಲುಮಾಡಿ ಕೊಡಬಲ್ಲ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಹಕ್ಕಿಲ್ಲ ವಿವಹ ಸಮಯದಲ್ಲಿ ನೀಡಲಾಗುವ ಆಭರಣಗಳೂ ಹವೂ ಅವರ ಪಾಲಿನ ಹಕ್ಕು ಅಷ್ಟೇ

ತೀಕ್ಷ್ಣವಾದ ಮತಪ್ರಜ್ಞೇಯೂ ಮತಜೀವನವೂ ಇವರದಾಗಿವೆ. ಒಂದು ವಿಶ್ವಾಸಿಗಳ ಗುಂಪು, ಒಂದು ಆರಾಧನಾಲಯ (ಪಳ್ಳಿ), ಪುರೋಹಿತ ಸೇರಿರುವಂಥದ್ದೇ 'ಇಟವಕ' (ಮತಕ್ಷೇತ್ರ) ಇದೇ ಮತೀಯ ಜೀವನದ ಕೇಂದ್ರ, ಇದಕ್ಕಿಂತ ಮೇಲ್ತಟ್ಟಿನ ಕಏಂದ್ರದಲ್ಲಿ ಇಂಥ ಅನೇಕ 'ಇಡವಕ'ಗಳು ಸೇರಿ ರೂಪಿತವಾದ ಆಡಳಿತವಿರುತ್ತದೆ. ಕ್ನಾನಾಯರದ್ದಾಗಿ ವಿಶ್ವದಲ್ಲಿ ಒಂದು 'ರೂಪತೆ' (ಬಿಷಪ್ ಕಾರ್ಯಕ್ಷೇತ್ರ) ಮಾತ್ರ ಇದೆ. ಅದು 'ಕೊಟ್ಟಯಂ ರೂಪತೆ' ಯಾಗಿದೆ. ಇದರಿಂದಲೆ ಅವರ ಒಂಟಿಯಾದ ವ್ಯಕ್ತಿತ್ವ ಬಯಲು ಪಡುತ್ತದೆ. ಕ್ರೈಸ್ತರಿಗೆಲ್ಲ ವಿಶ್ವದ ಪರಮಾಧ್ಯಕ್ಷ ವಿಶ್ವಸದಲ್ಲೂ ಸನ್ಮಾರ್ಗದಲ್ಲೂ ವಿಶ್ವ ಕ್ರೈಸ್ತ ನಿಯಮಗಳನ್ನೇ ಇವರೂ ಪಾಲಿಸುವುದು.

ಎರಡು ಪರಂಪರೆಗಳ ಏಕೀಭಾವ

ವಿಶಿಷ್ಟ ಪಾರಂಪರೀಯತೆಯ ಒಡೆಯರಾದ ಕ್ನಾನಾಯ ಕ್ರೈಸ್ತರ ವಿವಾಹಾಚಾರಗಳು ಇತರ ಸಮುದಾಯಗಳಿಗಿಂತ ಬಹಳ ವ್ಯತ್ಯಾಸ್ತವಾಗಿವೆ. ಸ್ವದೇಶಿಯವೂ ವಿದೇಶಿಯವೂ ಆದ ಹಲವಾರು ಆಚಾರಗಳ ಸೊಗಸಾದ ಸಮ್ಮಿಲನವೇ ಈ ವಿವಾಹ ಕ್ರಮದಲ್ಲಿರುವುದು. ಯಹೂದ್ಯ ಪಾರಂಪರ್ಯವೂ ಕೇರಳೀಯ ಪಾರಂಪರ್ಯವೂ ಕ್ನಾಯಿತ್ತೊಮ್ಮನ ಮೂಲಕ ಕೇರಳದಲ್ಲಿ ದೊರೆತ ಪದವಿಗಳೂ ಕಾಪಿಡಲ್ಪಟ್ಟುದರ ಫಲವೇ ಈ ಚಡಂಗಗಳ ಬಹುಪಾಲು, ಮಾವಂದಿರಿಗೆ ಪ್ರಾಧಾನ್ಯವಿರುವ ಕೇರಳೀಯ ಶೈಲಿಯೂ ತಂದೆ ಕಡೆಗೆ ಪ್ರಾಧಾನ್ಯವಿರು ಯಹೂದ ಶೈಲಿಯೂ ಏಕೀಭವಿಸಿ ಎರಡು ಪದ್ದತಿಗಳಿಗೂ ಸಮಾನ ಪರಿಗಣೆ ನೀಡುವ ರೀತಿ ಕ್ನಾನಾಯರದಾಗಿದೆ. 'ಸ್ತ್ರೀಧನ' (ವರದಕ್ಷಿಣೆ) ಮತ್ತು 'ಇಲ್ಲಪ್ಪಣಂ' ನೀಡಿಕೆ ಯಹೂದ್ಯ ಪರಂಪರೆಗೆ ಅನುಸಾರವಾಗಿದೆ. ವಾಣಿಜ್ಯ ಪ್ರಧಾನವಾಗಿದ್ದ ಒಂದು ವರ್ಗದಲ್ಲಿ ಹಣಕ್ಕೆ ಪ್ರಾಧಾನ್ಯ ಬರುವುದು ಸಾಮಾನ್ಯವಷ್ಟೇ/ 'ಇಲ್ಲಪ್ಪಣಂ' ನೀಡುವುದು ಯಹೂದ್ಯ ಸಂಪ್ರದಾಯವಾದರೂ ಆ ಹೆಸರು ಕೇರಳಿಯವಾಗಿದೆ. 'ಇಲ್ಲಂ' ಎಂದು ಮನೆಯನ್ನು ಕರೆಯುವುದು ಮೇಲುಜಾತಿ

ಸೂಚಕವಾಗಿದೆ. ಕೇರಳದಲ್ಲಿ ವಿವಾಹದ ಹಿಂದಿನ ದಿನ ಆಟ, ಪಾಟುಗಳು, ನಡೆಯುವುದು ಯಹೂದ್ಯ ಪಾರಂಪರೀಯತೆಯ ಮುಂದವರಿಕೆಯಾಗಿದೆ. ಈ ಪುರಾತನ 'ಪಾಟುಗಳೂ' ಮಾರ್ಗಂ ಕಳಿ'ಯೂ ಕೇರಳದ ತಾಳಪರಂಪರೆಯನ್ನನುಸರಿಸಿ ವಿನ್ಯಾಸಗೊಂಡಿರುವಂಥವಾಗಿದೆ. ಅಲಿಂಗನದ ಮೂಲಕ ಸ್ನೇಹ ವಿಶ್ವಾಸಗಳನ್ನು ವ್ಯಕ್ತಪಡಿಸುವ ಪಾಶ್ಚತ್ಯ ರೀತಿಯ ಪರಿಷ್ಕೃತ ರೂಪವೇ 'ಸ್ತುತಿ' ಹೇಳುವಿಕೆ . 'ತಜುಕಲ್' (ತಳ್ಕಿಸು) ಇದೇ ಆಶಯದ ಇನ್ನೊಂದು ಅಭಿವ್ಯಕ್ತಿಯಾಗಿದೆ. ವಿವಾಹ ಸಂದರ್ಭದ ಆಹಾರ ಪದ್ಧತಿ ಮಾಂಸಾಹಾರಕ್ಕೆ ಪ್ರಾಧಾನ್ಯವಿದ್ದ ಯಹೂದ್ಯ ರೀತಿಯಾಗಿದೆ. ಮದ್ಯ ಒಂದು ಸಾಮಾನ್ಯ ಪಾನೀಯವಾಗಿದ್ದ ಯಹೂದ ಜನತೆಯ ಪೀಳಿಗೆಯ ವರಾಗಿರುವುದರಿಂದಲೆ ವಿಶೇಷ ಸಂದರ್ಭಗಳಲ್ಲಿ ಗಂಡು ಹೆಣ್ಣು ಭೇಧವಿಲ್ಲದೆ ಕ್ನಾನಾಯರು ಗಳು ಮಧ್ಯ ಸೇವಿಸುವುದು.

ಕ್ನಾನಾಯ ವಿವಾಹದಲ್ಲಿ ತಾಳಿ ಕಟ್ಟುವ ಕೇರಳೀಯ ರೀತಿಯನ್ನು ಅನುಸರಿಸಲಾಗುತ್ತದಾದರೂ ತಾಳಿಗೆ ಇತರರಲ್ಲಿ ಇರುವ ಪ್ರಾಧಾನ್ಯ ಇಲ್ಲಿಲ್ಲ ಯಹೂದ್ಯ ರೀತಿಯ ವಿವಾಹದ ಉಂಗುರಕ್ಕೆ ಇಲ್ಲಿ ಹೆಚ್ಚಿನ ಪ್ರಾಶಸ್ತ್ಯವಿರುವುದು ವಧುವಿಗೆ ಮದರಂಗಿ ಇಡುವುದು ಕೇರಳದ ನಾಯರ್ ಸಮುದಾಯದಲ್ಲೂ ಕಾಣಿಸುತ್ತದೆ. ವಿಶೇಷ ಸಂದರ್ಭಗಳಲ್ಲಿ ಕಾಲುದೀಪ ಉರಿಸಿಡುವುದು, ಬಲಗಾಲನ್ನಿರಿಸಿ ಗೃಹಪ್ರವೇಶ ಮಾಡುವುದು ಕೇರಳೀಯ ರೀತಿಗಳಾಗಿವೆ. ವಧೂವರರನ್ನು ಭತ್ತ, ನೀರನ್ನು ಎತ್ತಿ ಹಿಡಿದು ಸ್ವಾಗತಿಸುವುದು, ವಿವಾಹ ಚಪ್ಪರಕ್ಕೆ 'ಕಾಲುನಾಟು' (ಕಂಬ ನೆಡು) ವುದು, ಆಯ್ಕೆಯಾಗುವ ಕಂಬದ ಲಕ್ಷಣ (ಮರ ಇಂಥದ್ದೆಂಬುದು) ನಿಯಮ ಫಲಸಮೃದ್ದಿಗಾಗಿ ಕೃಷಿ ವ್ಯವಸ್ಥೆಯಿಂದ ರೂಪುಗೊಂಡಿರುವ ಚಡಂಗಗಳಾಗಿವೆ. ಪಂದಲಿಡೀಲ್ (ಚಪ್ಪರ ಹಾಕು), ಅಂದಂಚಾರ್ತಲ್, ಕ್ಷೌರಿಕನ ಪಾತ್ರ, ತಾಳಿಯೊಂದಿಗೆ ಬರುವ ಅಕ್ಕಸಾಲಿಗನ ಹಕ್ಕು, 'ನಡವಿಳಿ' ಮಾವಂದಿರ ತಲೆಕಟ್ಟು (ಮೂಂಡಸು)ಕಚ್ಚ (ಹೊಸಬಟ್ಟೆ), ಕಚ್ಚ ಹರಡಿ ಕುಳ್ಳಿರುವುದು, ಹಗಲು ದೀಪ ಇರಿಸುವ ಹಕ್ಕು ಇತ್ಯಾದಿ ಅಂಶಗಳೆಲ್ಲ ಕ್ನಾಯಿತೊಮ್ಮನ್ ತಾಮ್ರಶಾಸನದ ಪಳೆಯುಳಿಕೆಗಳಾಗಿವೆ. ಒಂದು ಕಾಲದಲ್ಲಿ ಕೇರಳದ ಉನ್ನತ ಜಾತಿಗಳವರಿಗೆ ಮಾತ್ರ ಇದ್ದ ಹಕ್ಕುಗಳು ಇವೆಲ್ಲ ಎಂದು ನಂಬಲಾಗುತ್ತಿದೆ. ಹೀಗೆ ಎರಡು ಪರಂಪರೆಗಳ ಸ್ವಾಭಾವಿಕ ಏಕೀಭಾವವೇ ಕ್ನಾನಾಯ ವಿವಾಹ ಜೀವನದ ಮತ್ತೆಲ್ಲ ಮಜಲುಗಳಲ್ಲೂ ತ್ವರಿತಗತಿಯ ಬದಲಾವಣೆಗಳು ನಡೆಯುವ ಈ ಕಾಲದಲ್ಲಿ ಪರಂಪರಾವಾದಿಗಳಾದ ಈ ವಿಭಾಗ ತಮ್ಮ ಸ್ವಂತಿಕಿಯ ರೀತಿಗಳನ್ನು ಕೈ ಬಿಡಲು ತಯಾರಾಗದುದರಿಂದಲೆ ಈ ಚಡಂಗಗಳೆಲ್ಲ ಅವುಗಳಿಗೆ ಅರ್ಹವಾದ ಪ್ರಾಧಾನ್ಯದೊಂದಿಗೆ ಇಂದಿಗೂ ನೆಲೆಗೊಂಡಿವೆ.

ಕಳರಿಪ್ಪಯಱ್

(ಯುದ್ದಕಲೆ)

ಸಿ.ಗಂಗಾಧರನ್

ಟಿಪ್ಪಣಿ

ಯಾವೊಂದು ಜಾನಪದ ರೂಪವನ್ನೂ ನೆಲೆ ನಿಲ್ಲಿಸುವುದು ಅದು ನಿರ್ವಹಿಸುವ ಧರ್ಮವಾಗಿದೆ. ಆ ಧರ್ಮ ಹೊಸ ಕಾಲಘಟ್ಟದಲ್ಲಿ ಅಪ್ರಸ್ತುತವಾಗುವಾಗ ಜಾನಪದ ಮೆಲ್ಲಮೆಲ್ಲಗೆ ಜೀವನದಿಂದ ಹಿಂದೆ ಸರಿಯುತ್ತದೆ. ಕೆಲವೊಮ್ಮೆ ಹಿಂದೆ ಸರಿಯುವ ಬದಲು ಹೊಸ ಧರ್ಮವನ್ನು ಸ್ವೀಕರಿಸಿತು ಎಂದೂ ಅನಿಸಬಹುದು ಹಾಗಗುವಾಗ ಅದು ಪರಿವರ್ತನೆಗೆ ವಿಧೇಯವಾಗಿ ನೆಲೆಗೊಳ್ಳುತ್ತದೆ. ಆ ಬಗೆಯಲ್ಲಿ ನೆಲೆಗೊಂಡಿರುವ ಒಂದು ಜಾನಪದ ರೂಪ 'ಕಳರಿಪ್ಪಯಱ' (ಗರಡಿ ವರಸೆ) 'ವಡಕ್ಕನ್ ಪಾಟು'ಗಳಿಂದಲೂ 'ತೋಱಂಪಾಟ'ಗಳಿಂದಲೂ ದೊರೆಯುವ ಕಳರಿ (ಗರಡಿ) ವಿದ್ಯೆಯ ಕುರಿತಾದ ವಸ್ತುತತೆ ಇವತ್ತು ಅಸ್ತಿತ್ವದಲ್ಲಿ ಇಲ್ಲ . ಜೀವನದ ಭಾಗವಾಗಿ 'ಕಳರಿ' ಶಿಸ್ತುಗಳು ಅಂದು ನೆಲೆಗೊಂಡಿದ್ದವು ಕಳರಿ ಅಭ್ಯಾಸಿಯ ಖಡ್ಗದ ಮೊನ್ನೆಯಲ್ಲಾದಗಿತ್ತು ಅಂದು ಹಲವು ವಿಷಯಗಳ ತೀರ್ಮಾನ ಆಗುತ್ತಿದ್ದುದು ಆ ಕಾಲ ಹೋಯಿತು ಇವತ್ತು ಕಳರಿಪಯಱನ ಅಭ್ಯಾಸ ದ್ವಂದ್ವಯುದ್ದದಲ್ಲೋ (ಅಂಕದಲ್ಲೋ), ಹೊಡೆತದಲ್ಲೋ ತೋರಲು ಇರುವಂಥದ್ದಲ್ಲ, ಆರೋಗ್ಯ ಪರಿಪಾಲನೆಗೂ ವ್ಯಾಯಾಮಕ್ಕೂ ಇರುವ ಒಂದು ಮಾರ್ಗವಾಗಿದೆ. ಒಂದುಕಾಲದಲ್ಲಿ ಶಕ್ತವಾಗಿ ಜೀವನವನ್ನು ನಿಯಂತ್ರಿಸಿದ್ದ ಕಳರಿ ವಿದ್ಯೆ ಇಂದು ಪ್ರದರ್ಶನ ಕಲೆಯಾಗಿ ರೂಪಾಂತರಗೊಳ್ಳುತ್ತಿದೆ. ನೋಡುವವರಿಗೆ ಕಾತರವೂ ಅಚ್ಚರಿಯೂ ಉಂಟಾಗುವಂತೆ ಅದು ಇಂದು ರಂಗದಲ್ಲಿ ಪ್ರತ್ಯಕ್ಷಪಡುತ್ತಿದೆ. ಅದರೊಂದಿಗೆ ಅದರ ಭಾಗವಾಗಿ ರೂಪುಗೊಂಡು ಬಂದ ಮರ್ಮ ಚಿಕಿತ್ಸೆಗೆ ಪ್ರಸಿದ್ಧಿ ಹೆಚ್ಚುತ್ತಲೂ ಇದೆ ಒಂದು ಜಾನಪದ ರೂಪ ನಿರ್ವಹಿಸುವ ಧರ್ಮಕ್ಕೂ, ಆ ಜಾನಪದದ ರೂಪಕ್ಕೂ ಉಂಟಾಗುವ ಪರಿವರ್ತನೆಯನ್ನು ವ್ಯಕ್ತಪಡಿಸುವ ಒಂದು ಉದಾಹರಣೆ 'ಕಳರಿ ಪಯಱ' ಜಾನಪದ ವರ್ಗೀಕರಣದಲ್ಲಿ ಇದನ್ನು ಯುದ್ದ ಕಲೆಯ ವಿಭಾಗಕ್ಕೆ ಸೇರಿಸಬಹುದು.

ಪ್ರಾಚೀನ ಕಾಲದಿಂದಲೂ ಕೇರಳದಲ್ಲಿ ಅಭ್ಯಾಸ ಮಾಡಿಸುತ್ತ ಬಂದ ಆಯೋಧನ ಕಲೆ 'ಕಳರಿ ಪ್ಪಯಱ' (ಗರಡಿ ವರಸೆ) ಕೇರಳದ ಭೂ ಪ್ರಕೃತಿಗೂ, ಹವಾಗುಣಕ್ಕೂ, ಸಾಮೂಹಿಕ ಪರಿಸ್ಥಿತಿಗೂ ಒಪ್ಪುವಂತೆ ರೂಪಿಸಿದ ಸೈನಿಕ – ಆರೋಗ್ಯ ಅಭ್ಯಾಸ ರೀತಿಯದು ಸ್ತ್ರೀ ಪುರುಷ ಭೇದವಿಲ್ಲದೆ. ಅಭ್ಯಾಸ ಮಾಡಿಸುತ್ತ ಬಂದ ಈ ಆಯೋಧನ ಕಲೆಯನ್ನು ಇಲ್ಲಿನ ಶಾರೀರಿಕ ಅಭ್ಯಾಸ ಪ್ರಧಾನವಾದ ಕಲಾರೂಪಗಳ ಅಸ್ತಿವಾರವೆಂದು ತಿಳಿಯಬಹುದಾಗಿದೆ. ಅನುಷ್ಠಾನ ರೂಪಗಳಾದ ತೆಯ್ಯಂ, ತಿಱ, ಪೂರಕ್ಕಳಿ ಮೊದಲಾದವುಗಳಲ್ಲೂ ಗ್ರಾಮೀಣ ವಿನೋದಗಳೆನಿಸಿದ ಕೋಲಾಟ, ಗುರಣಿಯಾಟ

ಮೊದಲಾದವುಗಳಲ್ಲೂ ಶಾಸ್ತ್ರೀಯ ನೃತ್ಯಕಲೆಗಳಾದ ಯಕ್ಷಗಾನ, ಕಥಕಳಿ, ಮೋಹಿನಿಯಾಟ್ಟಂ ಮೊದಲಾದವುಗಳಲ್ಲೂ, ಸ್ತ್ರೀಯರಿಗೆ ಮೀಸಲಾದ ಅಮ್ಮಾನಕ್ಕಳಿ, ಕುಮ್ಮಿಯಾಟ್ಟಂ ಮೊದಲಾದವುಗಳಲ್ಲೂ ವ್ಯಾಪಿಸಿಕೊಂಡು ನೆಲೆಯಾಗಿರುವಂಥದು 'ಕಳರಿಪ್ಪಯಟ'ನ ಅಭ್ಯಾಸ ಪಾರಂಪರ್ಯವೂ ಪ್ರಭಾವವೂ

ಕಳರಿಪ್ಪಯಟನ ಬಗೆಗಿರುವ ವ್ಯಕ್ತವಾದ ಪರಾಮಶೆ ಕೇರಳ ಚರಿತ್ರೆಯಲ್ಲಿ ವಿರಳವಾಗಿದೆ. 'ಸಂಘಂ' ಸಾಹಿತ್ಯದಲ್ಲಿ ಧಾರಾಳ ಯುದ್ಧಗಳನ್ನೂ ಯೋಧರನ್ನೂ ವರ್ಣಿಸಿರುವರಾದರೂ 'ಕಳರಿಪ್ಪಯಟ'ಎಂಬ ಪದವೋ, ಸದೃಶವಾದ ಅಭ್ಯಾಸಕ್ರಮವನ್ನು ಕುರಿತಾದ ಪರಾಮರ್ಶೆಗಳೋ ಇಲ್ಲ ವ್ಯಾಯಾಮ ಅಭ್ಯಾಸದ ಮೂಲಕ ಇಂದ್ರನ ವಾಹನವಾದ ಉಚ್ಚೈಶ್ರಸ್ಸೆಂಬ ಕುದುರೆಯದೆಂಬಂಥ ಅವಯವಗಳಿದ್ದ, 'ತುಲಕ್ಕನ್ ಪಡೆ'ಯ ಯೋಧರನ್ನು ಸುತ್ತಿಸುವ 'ಉಣ್ಣುನೀಲಿ ಸಂದೇಶ' ಕಾವ್ಯದಲ್ಲಿ 'ಕಳರಿಪಯಟ'ನ ಪರಾಮರ್ಶಿಯಿಲ್ಲ

ಆದರೆ ಮಲಬಾರಿನ ಮೌಖಿಕ ಧಾರೆಯಲ್ಲಿ ಇದು ಸುಪರಿಚಿತ ಕಳರಿಪ್ಪಯಟ ಅಭ್ಯಾಸಿಸಿದ್ದ ಕಥಾನಾಯಕರಾಗಿದ್ದರು 'ವಡಕ್ಕನ್ ಪಾಟು'ಗಳ ಆರೋಮಲ್ ಚೇಕವರೂ, ತಚ್ಚೋಳಿ ಒದೇ ನನೂ ಇತರರೂ. ಉತ್ತರ ಕೇರಳದ 'ತೆಯ್ಯಂ'ಗಳಾದ 'ವಯನಾಟ್ಟು ಕುಲವನ್', 'ಕತಿವನ್ನೂರ್ ವೀರನ್', 'ಕಾರಿ', 'ಊರ್ಪ್ಪವಿಶ್ಶಿ', 'ಅಂಕಕ್ಕಾರನ್,''ತೆಕ್ಕನ್ ಕಿರಿಯಾತ್ತನ್' ಮೊದಲಾದವರು ಕಳರಿ ಪಯಟ ಕಲಿತ ಪೀರ ಪರಾಕ್ರಮಿಗಳಾಗಿದ್ದರು. ಅವರಲ್ಲಿ ಹಲವರನ್ನು ಉತ್ತರ ಕೇರಳದ 'ಕಳರಿ'ಗಳಲ್ಲಿ ಗುರುಭೂತರಾಗಿ ಇವತ್ತೂ ಆದರಿಸುತ್ತಾರೆ.

ವಿಭಿನ್ನ ಕಳರಿಗಳು

'ಇಪ್ಪತ್ತೊಂದಡಿ ಕಳರಿ', 'ಮೂವತ್ತೆರಡಡಿ ಕಳರಿ', 'ನಲವತ್ತೆರಡಿ ಕಳರಿ' ಎಂಬ ಹೆಸರುಗಳಲ್ಲಿ ಅದರ ಗಾತ್ರದ ಅನುಸಾರ ಕಳರಿಯನ್ನು ಗುರುತಿಸುವುದು ಕ್ರಮ ಇವುಗಳಲ್ಲಿ ಮೊದಲ ಎರಡು ಕ್ರಮಶಃ 'ಕುಟಿಂ ಕಳರಿ' (ಕಿರುಕಳರಿ), 'ಅಭ್ಯಾಸಕ್ಕಳರಿ', ಎಂದು ಕರಿಸಿಕೊಳ್ಳುತ್ತಿದ್ದವು ಅರ್ವತ್ತನಾಲ್ಲು ಅಡಿ ಕಳರಿಗೆ ಹೆಸರು 'ಅಂಕಕ್ಕಳರಿ'(ಯುದ್ದ ಗರಡಿ) ನಲ್ವತ್ತೆರಡು ಅಡಿ ಗಾತ್ರದ 'ಅಭ್ಯಾಸಕ್ಕಳರಿ'ಯಲ್ಲೆ ಕಳರಿಪ್ಪಯಟ ಪರಂಪರಾಗತವಾಗಿ ಅಭ್ಯಾಸ ಮಾಡಿಕೊಂಡು ಬಂದಿರುವುದು ಉತ್ತಮ ಗಾತ್ರದ ಗಂಡಸಿನ ಕಾಲಿನ ಅಡಿಯ ಅಳತೆಯನ್ನೆ 42 ಅಡಿಗೆ ಮೂಲಮಾನವಾಗಿ ತೆಗೆದುಕೊಳ್ಳುವುದು ಒಂದು ಅಡಿಯನ್ನು ಹತ್ತು ಇಂಚು ಆಗಿ ತೆಗೆದುಕೊಂಡರೆಮ ಮಾದರಿ 'ನಲ್ವತ್ತೆರಡಡಿ ಕಳರಿ'ಗೆ 10 ಮೀಟರ್ ಉದ್ದ ಐದು ಮೀಟರ್ ಅಗಲ ನೂರಿಗೆ ಪಂಚಾಂಗದ ನೆಲದಿಂದ ಐದು ಮಿಟರ್ ಎತ್ತರ ಇರುತ್ತವೆ. ಆದರೆ ಪಂಚಾಂಗದ ಮಟ್ಟದಿಂದ ಐದಡಿ ಕೆಳಕ್ಕೆ ತಗ್ಗಿಸಿದ ನೆಲವಿರು 'ನಲ್ವತ್ತೆರಡಡಿ ಕಳರಿ'ಗಳೆ ಬಹುಪಾಲು ಇರುವುದು.

ಪೂರ್ವ ಪಶ್ಚಿಮವಾಗಿ ಆಯತಾಕೃತಿಯ 'ಕಳರಿ' ರಚನೆ, ಮುಖ ಪೂರ್ವಕ್ಕೆ ಪಂಚಾಂಗದ ಕೆಳಕ್ಕೆ ತೋಡಿ ನಿರ್ಮಿಸಿರುವ ನೆಲಕ್ಕೆ ಇಳಿಯಲು ಪೂರ್ವಭಾಗದಲ್ಲಿ ಮೆಟ್ಟಿಲುಗಳು ಇರುತ್ತವೆ. ಒಳಗಡೆ

ನೈಋತ್ಯ ಮೂಲೆ ಅತ್ಯಂತ ಪವಿತ್ರವಾದ ಸ್ಥಾನ ಅಲ್ಲೆ 'ಪೂತ್ತಱ' (ಹೂಕಟ್ಟೆ) ಇರುವುದು, ಪಂಚಾಂಗದ ತಲಕ್ಕಿಂತ ಮೂರು ಅಡಿಯಿಂದ ಐದು ಅಡಿ ವರೆಗೆ ಎತ್ತರವಾದ ಅರ್ದವೃತ್ತಾಕೃತಿಯ, ಮೇಲಕ್ಕೆ ಎರಿದಂತೆ ಅಗಲ ಕಡಿಮೆ ಯಾಗುತ್ತ ಕುಂಡಿಗೆ (ಪೂಂಬೆ) ಆಕೃತಿಯಲ್ಲಿ ಇರುವಂಥದು 'ಪೂತ್ತಱ' 'ಪೂತ್ತಱ' ಕ್ಕೆ ಐದರಿಂದ ಒಂಬತ್ತರ ತಟ್ಟುಗಳು ಇರುತ್ತದೆ. ಅವುಗಳಿಗೆ ಪ್ರತ್ಯೇಕ ಸಂಕಲ್ಪಗಳೂ ಇರುತ್ತವೆ. 'ಪೂತ್ತ'ಕ್ಕ್ ಒಂದಿಷ್ಟು ಎಡೆಬಿಟ್ಟು, ಬಲಭಾಗದಲ್ಲಿ ಕ್ರಮವಾಗಿ ಗಣಪತಿತ್ತಱ, ನಾಗತ್ತಱ, ಗುರುತ್ತಱ ಎಂಬ ಮೂರು ಕಿರುಕಟ್ಟೆಗಳಿರುತ್ತವೆ. ಬಲಭಾಗದಲ್ಲಿ ಮೂರು ಅಡಿ ಉದ್ದ ಒಂದಡಿ ಅಗಲದ 'ಆಯುಧತ್ತರಷ, ಇರುತ್ತದೆ. ಕಳರಿಯ ಎಂಟು ದಿಕ್ಕುಗಳಲ್ಲಿ ಅಷ್ಟದಿಕ್ಪಾಲಕರನ್ನು ಪ್ರತಿಷ್ಠಿಸಲಾಗುತ್ತದೆ. ಕಳರಿಯ ಮಧ್ಯದಲ್ಲಿ ಬ್ರಹ್ಮನ ಸ್ಥಾನ ಅಲ್ಲಿ ಬ್ರಹ್ಮನನ್ನು ಸಂಕಲ್ಪಿಸಿ ಅರಾಧಿಸುತ್ತಾರೆ.

ಕಳರಿಯ ಅನುಷ್ಠಾನಗಳು

ಕಳರಿಯನ್ನು ಆರಂಭಿಸುವಾಗಲೂ, ವಿಶೇಷ ದಿವಸಗಳಲ್ಲೂ ವಿಶಿಷ್ಟವಾದ ಅನುಸ್ಠಾನಗಳನ್ನು ಕಳರಿಗಳಲ್ಲಿ ಆಚರಿಸುತ್ತಾರೆ. ಬಲಗಾಲನ್ನು ಮುಂದಿಟ್ಟು ಕಳರಿಗೆ ಪ್ರವೇಶಿಸುವ ಗುರುಗಳು ಹೂವಿನಿಂದ ಪೂತ್ತ ಅಲಂಕರಿಸುತ್ತಾರೆ. ಪೂತ್ತಱಕ್ಕೂ ಗಣಪತಿ ತರಷಕ್ಕೂ ನಡುವಿನ ಜಾಗದಲ್ಲಿ ಒಂದಿಷ್ಟು ಮುಂದೆ ಐದು ಬತ್ತಿಗಳಿರುವ ಕಾಲು ದೀಪವನ್ನು ಉರಿಸುತ್ತಾರೆ.

ಅವಲಕ್ಕಿ , ಹೊದಲು ಒಣತೆಂಗಿನಕಾಯಿ, ಮೊದಲಾದ ನೈವೇದ್ಯ ದ್ರವ್ಯಗಳನ್ನು ಕೊಡಿ ಎಲ್ಯಲ್ಲಿ ಸುರಿದು ಇಡುವರು 'ಗುರುತ್ತಱ' 'ಆಯುಧತ್ತಱ' ಮೊದಲಾದ ತಱಗಳ ಮುಂದೆ ಕಾಲುದೀಪ ಹಚ್ಚುವರು ಕಳರಿ ಮಧ್ಯದಲ್ಲೂ ಅಷ್ಟದಿಕ್ಪತಿಗಳಿಗೀಗೂ ಪ್ರತ್ಯೇಕವಾಗಿ ಅರ್ಚನೆ ಅರ್ಪಣೆಯಾಗಲಿದೆ.

ಅನಂತರ ಬಲಗಾಲನ್ನಿಕ್ಕಿ ಕಳರಿಗೆ ಪ್ರವೇಶಿಸುವ ಶಿಷ್ಯರು ಹಿರಿತಿನದ ಅನುಸಾರ ಅನುಕ್ರಮವಾಗಿ ಗುರುವಿನ ಕಾಲುಮುಟ್ಟಿ ನಮಸ್ಕರಿಸಿ ಶಕ್ತ್ಯಾನುಸಾರ ಗುರುದಕ್ಷಿಣೆಯನ್ನು ಅರ್ಪಿಸುತ್ತಾರೆ. ಗುರು ದಕ್ಷಿಝಣೆ ಸ್ವೀಕರಿಸಿ ಶಿಷ್ಯನ ತಲೆಗೆ ಕೈಯಿರಿಸಿ ಆಶಿರ್ವದಿಸುತ್ತಾರೆ. ಅಂದಿನ ಕಳರಿ ತಾಲೀಮು ಮುಗಿಯುವುದರೊಂದಿಗೆ ಶಿಷ್ಯರೆಲ್ಲ ಹೊರಕ್ಕೆ ಹೋಗುವ ಸಂದರ್ಭದಲ್ಲಿ ಗುರು ಕಿರುಗೋಲನ್ನು 'ಪೊತ್ತಱ'ಯ ಮುಂದಿನ ಅಂಚಿಗೆ ತಗಲಿಸಿ ಪ್ರವೇಶ ದ್ವಾರದವರೆಗೆ ಬೆನ್ನ ಕಡೆಗೆ ಸರಿಯುತ್ತ ಬಂದು, ಅದನ್ನು ಪೊತ್ತಱಯ ಮುಂದುಗಡೆಗೆ ಎಸೆಯುತ್ತಾರೆ. ಇದಾದರೆ ಆ ದಿವಸ ಯಾರಿಗೂ ಕಳರಿಯೊಳಕ್ಕೆ ಪ್ರವೇಶವಿಲ್ಲ. ಎಲ್ಲ ದಿವಸಗಳಲ್ಲೂ ಕಳರಿ ಆರಂಭಿಸುವಾಗ ದೀಪ ಹಚ್ಚಬೇಕು ಅಂತೆಯೆ ದಿನದ ಕಳರಿ ಅಭ್ಯಾಸಕ್ಕೆ ಮೊದಲೂ,ಕೊನೆಯಲ್ಲೂ ಗುರುಪಾದ ವಂದನೆ ಕಡ್ಡಯ ಇವತ್ತು ಕಳರಿಯ ವ್ಯವಸ್ಥಾಪಕರ ಮತ್ತು ಗುರುವಿನ ಆಸಕ್ತಿಗಳಿಗೆ ತಕ್ಕವಾಗಿ ಚಡಂಗಗಳಲ್ಲಿ ವ್ಯತ್ಯಾಸಗಳಾಗುತ್ತಿವೆ.

ಕಳರಿಪ್ಪಯ ಸಂಪ್ರದಾಯಗಳು

ನಂಬಿಕೆ ಆಚರಣೆಗಳು, ಅಭ್ಯಾಸ ತಾಂತ್ರಿಕತೆಗಳು ಇವುಗಳ ಆಧಾರದಲ್ಲಿ ವ್ಯಕ್ತವಾಗಿ ವಿಭಜಿಸಬಹುದಾದ ಎರಡು ಸಂಪ್ರದಾಯಗಳು ಕಳರಿಪ್ಪಯ ಱನಲ್ಲಿ ಇವೆ , ಅವು ಹಳೆಗಾದಲ್ಲಿ ಎಲ್ಲಿ ನೆಲೆಗೊಂಡಿದ್ದವೋ ಆ ಸ್ಥಳಗಳನ್ನು ಉದ್ದೇಶಿಸಿ 'ವಡಕ್ಕನ್' (ಬಡಗಣ) ಸಂಪ್ರದಾಯವೆಂದೂ 'ತೆಕ್ಕನ್'(ತೆಂಕಣ) ಸಂಪ್ರದಾಯವೆಂದೂ ಕರೆಸಿಕೊಳ್ಳುತ್ತವೆ.

'ವಡಕ್ಕನ್' ಸಂಪ್ರದಾಯ

'ಕೇರಳೋತ್ಪತ್ತಿ' ಐತಿಹ್ಯವನ್ನು ಸಂಬಂಧಿಸಿದ ಶೈಲಿ 'ವಡಕ್ಕನ್' (ಬಡಗಣ ಕಳರಿ ಸಂಪ್ರದಾಯ ಕಱಕಳರಿ ಪೊತ್ತ ಮೊದಲಾದ ಸಂಕಲ್ಪಗಳು ಗುರು ಸಂಕಲ್ಪ , ಮೆಯ್‌ಪಯಱ, ಕೋಲ್‌ತ್ತಾರಿಪ್ಪಯಱ, ಅಂಕತ್ತಾರಿ, ವೆಱಂಕೈ (ನಿರಾಯು7ಧ) ಎಂಬ ಈ ಕ್ರಮಗಳಲ್ಲಿ ಅಭ್ಯಾಸ ವಿಭಜನೆ ಇವೆಲ್ಲ 'ವಡಕ್ಕನ್ ಕಳರಿ' ಯ ಪ್ರತ್ಯೇಕತೆಗಳು, ಉತ್ತರ ಕೇರಳ ಕರ್ನಾಟಕದ ತುಳುನಾಡು ಮತ್ತುಕೊಡಗು ಪ್ರದೇಶಗಳೂ 'ವಡಕ್ಕನ್' ಕಳರಿ'ಯ ಕೇಂದ್ರಗಳಾಗಿದ್ದವು, ಕೇರಳದ ಎಲ್ಲೆಲ್ಲೂ ಕಳರಿಪ್ಪಯಱ ಎಂಬ ಹೆಸರಿನಲ್ಲಿ ತರಬೇತಿ ನೀಡುತ್ತ ಬಂದ ಪದ್ಧತಿ ಇದೇ.

ವಡಕ್ಕನ್ ಒಳ ವಿಭಾಗಗಳು

ವಡಕ್ಕನ್ ಕಳರಿಗೆ ಅನೇಕ ಒಳ ವಿಭಾಗಗಳು ಇವೆ. ಪ್ರಾದೇಶಿಕವಾದ ರೀತಿ ಭೇದಗಳು, ಗುರುಗಳು ಸಂಪಾದಿಸಿದ ಜ್ಞಾನವೂ , ಇತರ ಕಲೆಗಳೊಂದಿಗಿನ ಸಂಪರ್ಕವೂ ಅವುಗಳ ವ್ಯತ್ಯಾಸಗಳಿಗೆ ಆಧಾರವಾಗಿ ಗುರುತಿಸಬಹುದು ಈ ಅವಾಂತರ (ಒಳ) ವಿಭಾಗಗಳಲ್ಲಿ 'ಅಱಪ್ಪಕ್ಕಯ್ಯ', ಪಿಳ್ಳತ್ತಾಜ್ಞ' ವಟ್ಟೇನ್‌ತಿರಿಪ್ಪ್ ಎಂಬಂಥ ಸಂಪ್ರದಾಯಗಳು ಸಜೀವ ಅಭ್ಯಾಸ ಸಂಪ್ರದಾಯಗಳಾಗಿ ಇಂದೂ ನೆಲೆನಿಂತಿರುವವುಗಳಾಗಿವೆ. ಇವುಗಳನ್ನು ಪ್ರಾಧಾನ್ಯಕ್ರಮ ಅನುಸರಿಸಿ ವಿವರಿಸಲಾಗುತ್ತಿದೆ.

ಅಱಪ್ಪಕ್ಕಯ್: ಕಳರಿಪ್ಪಯಱಂದು ಇಂದು ಹೆಸರಿಸುವಂಥದು 'ಅಱಪ್ಪಕ್ಕಯ್' ಸಂಪ್ರದಾಯವಾಗಿದೆ. ಇದರಲ್ಲಿ ಪ್ರಾಧಾನ್ಯ ಮೈ ಅಭ್ಯಾಸಕ್ಕೆ 'ಕಾಲನ್ನ ಎತ್ತಿಕೊಂಡು' ಮಾಡುವ ಮೆಯ್ಯಭ್ಯಾಸಗಳಾಗುದದರಿಂದ 'ಕಾಲುಯರ್ತಿಪ್ಪಯಱ' ಎಂಬ ಹೆಸರು ಇದಕ್ಕುಂಟು 'ಮೆಯ್‌ಪಯಱ್' (ಮೈ ವರಸೆ), 'ಪಗರ್ಚ್ಚಕ್ಕಾಲ್' (ಕಾಲು ಬದಲಿಕೆ) , 'ವೆಟ್ಟುಂ ತಂಜಪ್ಪಯಱ್' (ಕಡಿಯುವ ಆಯುಧ ವರಸೆ) ಎಂಬ ಮೂರು ಘಟಕಗಳು ಮೈಯಭ್ಯಾಸಕ್ಕೆ ಇವೆ. ವಿವಿಧ ಕಳರಿಗಳಲ್ಲಿ ಎಂಟರಿಂದ ಹದಿನಾರರ ವರೆಗಿರುವ ವರಸೆ ಶಿಸ್ತುಗಳು ಇವುಗಳಿಗೆ ಇವೆ. ಆದರೆ ತಂತ್ರಗಾರಿಕೆಯನ್ನು ಸೇರಿಸಿಯೂ ,ಕಡಿಮೆ ಮಾಡಿಯೂ ಲೆಕ್ಕವನ್ನು ಕ್ರಮೀಕರಿಸುವುದು. ಮಾತ್ರವಲ್ಲದೆ ಅಂಥ ವಾಸ್ತವಿಕ ವ್ಯತ್ಯಾಸವೆಂಬುದು ಇಲ್ಲ 'ಕೋಲ್‌ತ್ತಾರಿಪ್ಪಯಱ' (ಕೋಲು ಬಿಸಿಕೆ ವರಸೆ) ನಲ್ಲಿ 'ಪಂದೀರಾನ್ ವೀಶಲ್' ಮತ್ತು ಹನ್ನೆರಡು ಗೇಣು ಉದ್ದದ ಕೋಳು ಬೀಸಿಕೆ 'ಕೇಡುಕಾರಿ'ಯಲ್ಲಿ ಎಂಟು ಗೇಣು ಉದ್ದದ ಕೋಲಿನ ಬೀಸಿಕೆ ವರಸೆ ಒಳಗೊಂಡಿವೆ. ಚೇಱ ವಡಿ (ಮುಚ್ಚಾಣ) (ಅಂದರೆ ಮೂರು ಗೇಣಿನ 'ಕಿರುಗೋಲು)ಯಿಂದ ಬಗ್ಗಿಸಾಗುವ ಅತಿವೇಗದ

ವರಸೆಗಳು ಇವೆ. ಓಜ' (ಒಂಟಿ) ಎಂಬ ವರಸೆ ಶಿಸ್ತುಗಳಲ್ಲಿ ಅತಿವೇಗದಲ್ಲಿ ಎದ್ದು ಏರಿ ವಿವಿಧ ಹೆಜ್ಜೆಗಳಲ್ಲೂ ವಿವಿಧ ಬಾಗುಗಳಲ್ಲೂ ಇರುವ ವರಸೆ ಶಿಸ್ತುಗಳೂ ಕಂಡು ಬರುತ್ತವೆ. ಕಳರಿಪ್ಪಯ ಜನ ತಾಂತ್ರಿಕ ಪೂರ್ಣತೆಗಿರುವ ಉದಾಹರಣೆ 'ಓಜಪ್ಪಯಜ್ (ಒಂಟಿ ವರಸೆ) ಒಂಟಿ ವರಸೆಯ 'ಅಜಪ್ಪು' ಸಾಧಕದಲ್ಲಿ ಕೈಯನ್ನೂ ಬಳಸಿಕೊಂಡಿರುವ ತಾಂತ್ರಿಕತೆ ಕಾಣುವುದರಿಂದ 'ಅಜಪ್ಪುಕ್ಕಯ್ಯಾ' ಎಂಬ ಹೆಸರು ಬಂದುದೆಂದು ಬಹುಜನರ ಅಭಿಪ್ರಾಯ 'ಅಂಕತ್ತಾರಿ'ಯಲ್ಲಿರುವ ಪ್ರಧಾನ ಆಯುಧಗಳು 'ವಾಳ್' 'ಪರಿಚ' (ಖಡ್ಗ–ಗುರಾಣಿ) ಗಳಾಗಿವೆ. ಅವುಗಳನ್ನು ಬಳಸಿ ಆಗುವ ಧಾರಾಳ ವರಸೆ ಶಿಸ್ತುಗಳು ಊರ್ಜಿದಲ್ಲಿವೆ. 'ಪುಲಿಯಂಕಂ ' ಎಂಬ ಹೆಸರಿನಲ್ಲಿರುವ ಏರಿ ಓಡಿಯೂ ತಗ್ಗಿ ಬಗ್ಗಿಯೂ ನಡೆಯುವ ಯುದ್ಧ ಶಿಸ್ತುಗಳ ತರಬೇತಿ ಅಪೂರ್ವವಾಗಿ ಕೆಲ ಕಳರಿಗಳಲ್ಲಿ ಈಗಲೂ ಇದೆ ಕರಾಠಿ, ಕುಂತ (ಈಟಿ) ಮೊದಲಾದ ಆಯುಧಗಳನ್ನು ಬಳಸಿ ನಡೆಯುವ ವರಸೆಗಳನ್ನು ಕಲಿಸುವುದಿದೆ. ಕಣ್ಣೂರು ಜಿಲ್ಲೆಯಲ್ಲಿ ಈ ಸಂಪ್ರದಾಯವನ್ನು ಮಾತ್ರ ಕಲಿಸಿಕೊಡುವ ಅನೇಕ ಕಳರಿಗಳು ಈಗಲೂ ಇವೆ.

ಪಿಳ್ಳತಾಜ್ಜೆ : ವಡಕರ ತಾಲೂಕಿಗೆ ಸೇರಿದ ಹಳೆಯ 'ಕಡತ್ತನಾಡ್ ಎಂಬುದು 'ಪಿಳ್ಳತಾಜ್ಜೆ' ಸಂಪ್ರದಾಯದಲ್ಲಿರುವ ಗರಡಿಗಳ ಪ್ರಮುಖ ಕೇಂದ್ರಗಳು ಪಿಳ್ಳತಾಜ್ಜೆ ಸಂಪ್ರದಾಯದ ಮೆಯಪ್ಪಯಜಿಗೆ ಮುನ್ನ ಮಆಡುವ ವಂದನೆಗಳು (ವಣಕ್ಕಗಳು) ವಿಶಿಷ್ಟ ಪರಾಮರ್ಶಿಗೆ ಅರ್ಹವಿವೆ. ಗುರುವಣಕ್ಕಂ, ಈಶ್ವರವಣಕ್ಕಂ,ದಿಕ್ಕ್‌ವಣಕ್ಕಂ, ಸೂರ್ಯಚಂದ್ರವಣಕ್ಕಂ, ಈಶ್ವರ ವಣಕ್ಕಂ, ದಿಕ್ಕ್‌ವಣಕ್ಕಂ, ಸೂರ್ಯಚಂದ್ರ ವಣಕ್ಕಂ, ಮೊದಲಾದವು ಮುಖ್ಯವಾದ, ವಂದನೆಗಳು ಪಿಳ್ಳತಾಂಜ್ಜ ಸಂಪ್ರದಾಯದಲ್ಲಿನ ಮೆಯ್‌ಪ್ಪಯಜಿಗೆ 'ಕೈಕುತ್ತಿಪ್ಪಯಜ', 'ವಲಿಙ್ಞಾ ಪಯಜ್, ಎಂಬ ಎರಡು ಹೆಸರುಗಳಿವೆ. ದೇಹ ಮುಂದಕ್ಕೆ ಬಾಗಿ ಕೈಯನ್ನು ನೆಲಕ್ಕೆ ಊರಿ ಮಾಡುವ ಮೆಯ್‌ಪಯಜ ಅತ್ಯಂತ ಸಂಕೀರ್ಣವೂ ಅತೀವ ಶ್ರಮಕರವೂ ಆಗಿದೆ. 'ಕೋಲ್‌ತ್ತಾರಿ' 'ಅಂಕತ್ತಾರಿ', ವೆಜಂ ಕೈ ಮುಜಗಳ್ (ಬರಿಗೈ ಶಿಸ್ತುಗಳು) ಎಂಬವು ಹೆಚ್ಚು ಕಡಿಮೆ, ಅಜಪ್ಪಕ್ಕಯ್ಯ್' ಸಂಪ್ರದಾಯವನ್ನು ಅನುಸರಿಸುತ್ತದೆ. ಆದರೂ ಆಯುಧಗಳನ್ನು ಬೀಸುವುದರಲ್ಲೂ, ಬೀಸುವುದರೊಂದಿಗೆ, ಕೈ ಕಾಲುಗಳನ್ನು ಪ್ರಯೋಗಿಸುವುದರಲ್ಲೂ, ದೇಹ ಕುಗ್ಗಿ ಬಗ್ಗಿ ನಿಲ್ಲುವುದರಲ್ಲೂ ತನ್ನದೆ ಆದ ರೀತಿಗಳು 'ಪಿಳ್ಳತಾಜ್ಜೆ'ಗೆ ಇದೆ 'ಓಜಪ್ಪಜ'ನಲ್ಲಿ' 'ಪಿಳ್ಳ' ಅಥವಾ 'ಪಳ್ಳ' ಎಂಬ ಬಾಗಿದ ಭಾಗವನ್ನು ಕೈಯಿಂದ 'ತಾಜ್ಜೆ' (ಆದರಿಸಿ) ಪ್ರತಿರೋಧಿಸುವ ರೀತಿ ವರಸೆಯಲ್ಲಿ ಅನುವರ್ತಿಸುವುದೇ 'ಪಿಳ್ಳತಾರ್ಙಜೆ' (ಪಳ್ಳತಾಜ್ಜೆ) ಎಂಬ ಹೆಸರಿಗೆ ಕಾರಣವೆಂಬ ವಾದವಿದೆ. 'ಕೈಕುತ್ತಿ ಪ್ಪಯಜ'ನ (ಕೈಯೂರಿದ ವರಸೆಯ)ಲ್ಲೂ ವಿಶಿಷ್ಟ ಹೊಟ್ಟೆ (ಅಳ್ಳೆ) ಭಾಗವನ್ನು ಕೈಯಿಂದ ಆಧರಿಸಿ ನಿಲ್ಲಿಸುವುದುಂಟು 'ಪಿಳ್ಳತಾಜ್ಜೆ' ಸಂಪ್ರದಾಯದ ವಿಶೇಷ ಆಯುಧ ಎರಡಲಗು ಹರಿತವಾದ, ಸುರುಟಿ ಅಡಗಿಸಿದ (ಸೊಂಟದಲ್ಲಿ) ಇಡಬಹುದಾದ, 'ಉಜಮಿ' ವಡಕ್ಕನ್ ಪಾಟ್ಟಿನ ವೀರ ನಾಯಿಕೆಯಾದ ಉಣ್ಣಿಯಾರ್ಚೆಯ, ಆರೋಮಲ್ ಚೇಕವರ ಮತ್ತಿತ್ತರ ವೀರರ ಅತ್ಯಂತ ಬಲಶಾಲಿ ಆಯುಧವಾಗಿತ್ತು 'ಉಜಮಿ'

ವಟ್ಟೇನ್ ತಿರಿಪ್ಪ್ : ಈಸಂಪ್ರದಾಯದಲ್ಲಿ ಇರುವ ವರಸೆ ಇಂದು ಪಯ್ಯನ್ನೂರು, ತಲಶ್ಶೇರಿ, ಮೊದಲಾದ ಸ್ಥಳಗಳಲ್ಲಿ ಸಕ್ರಿಯವಾಗಿ ಊರ್ಜಿತದಲ್ಲಿವೆ. ಶರೀರ ಸಾಧಕಗಳಿಗೆ ಕೊಡುವ ಪ್ರಾಧಾನ್ಯಕ್ಕಾಗಿ 'ಮಲಕ್ಕಕ್ಕಳರಿ' (ಮಗುಳ್ಚು ಕಳರಿ) ಎಂಬ ಹೆಸರಿನಲ್ಲೂ ಈ ಸಂಪ್ರದಾಯ ಪ್ರಸಿದ್ದವಾಗಿದೆ. ಈ ಸಂಪ್ರದಾಯವನ್ನು ಅಭ್ಯಸಿಸುವ ಕಳರಿಗಳಲ್ಲಿ ಓಟ, ಮಗಳ್ಚಿ ನೆಗೆತ (ಹಿಂಗರಣೆ, ಮುಂಗರಣೆ ಎಮದರೂ ಇದೇ) ಇತ್ಯಾದಿಯನ್ನು ಕಲಿಸಲು ಗರಡಿಯ ಆಗ್ನೇಯ ಭಾಗದಲ್ಲಿ ಎಂಟು ಅಡಿ ಉದ್ದ, ಆರು ಅಡಿ ಅಗಲ, ಎರಡು ಅಡಿ ಆಳದ ಕುಣಿ ತೋಡುತ್ತಾರೆ ಕುಣಿಯಲ್ಲಿ ಸಮತಲಕ್ಕಿಂತ ಆರು ಇಂಚು ಎತ್ತರದ ವರೆಗೆ ಉಮಿ (ಭತ್ತದ ಹೊಟ್ಟು) ಅನ್ನು ತುಂಬುತ್ತಾರೆ. ಕೋಲ್‌ಕಳಿ (ಕೊಳಾಟ) , ಪೂರಕ್ಕಳಿ (ಪೂರಂ ಹಬ್ಬದ ಆಟ,) ಪರಿಚಕ್ಕಳಿ (ಗುರಾಣೀ ಯಾಟ) ಮೊದಲಾದ ಲೆಕ್ಕವಿಲ್ಲದ ಗ್ರಾಮೀಣ ವಿನೋದ ಕಲೆಗಳೊಂದಿಗೆ 'ವಟ್ಟೇನ್ ತಿರಿಪ್ಪ್' ಸಂಪ್ರದಾಯಕ್ಕೆ ಸಂಬಂಧವಿದೆ. 'ವಟ್ಟೇನ್ ತಿರಿಪ್ಪು' ಸಂಪ್ರದಾಯದ ಮೈಯಬ್ಯಾಸಗಳಿಗೆ ಎರಡು ವಿಭಾಗಗಳಿವೆ. ಅವು 'ಅರುವತ್ತೆಪ್ಪಯಱ' (ಬದಿಯ ವರಸೆ) ಎಂಬ ಹೆಸರಿನಲ್ಲಿ ಗೊಡೆಗೆ ಅಂಟಿಕೊಂಡು ಕಾಲುಗಳಿಂದಲೂ ಶರೀರದಿಂದಲೂ ಮಾಡುವ ನಾನಾ ವಿಧವಾದ ವ್ಯಾಯಮ ಸಾಧಕಗಳು 'ಅರಙ್ಙನ್ ಚವಿಟ್ಟ್' (ರಂಗಕ್ಕೆ ಮೆಟ್ಟು) ಎಂಬ ಸಾಧಕರದಲ್ಲಿ ತಾಳದಲ್ಲಿ ಹೆಜ್ಜೆ ಕುಟ್ಟಿ ಮಾಡುವ ವರಸೆ ಶಿಸ್ತುಗಳಿವೆ. 'ಅಱಪ್ಪಕ್ಕೆ' ಸಂಪ್ರದಾಯವನ್ನು ಅನುಕರಿಸಿ ಇರುವ ಆರರಿಂದ ಎಂಟರವರೆಗಿನ ವರಸೆಗಳು ಅನೇಕಾನೇಕ ಬಗೆಯ ಏರುವಿಕೆ, ಇಳಿಯುವಿಕೆಗಳು ಸೇರಿರುವ ಸಾಧಕಗಳಾಗಿವೆ ಆಯುಧ ವಿದ್ಯೆಗಳಿಗೆ ತುಲನಾತ್ಮಕವಾಗಿ ಪ್ರಮುಖ್ಯ ಕಡಿಮೆ 'ಚೆರುವಡಿ' (ಕಿರುಗೋಲಿ)ಗೂ 'ಕೆಟ್ಟುಕಾರಿ'ಗೂ ನಡುವೆ ಬರುವ ಸುಮಾರು ಎರಡುವರೆ ಅಡಿಯಷ್ಟು ಉದ್ದದ ಕೋಲಿನಿಂದ ನಡೆಸುವ ವರಸೆ 'ಕೋಲ್‌ತಾರಿ' (ಕೋಲು ಸೊಲ್ಲು) ಮೂಲಕ ನಡೆಸುವುದುಂಟು 'ವಟ್ಟೇನ್ ತಿರಿಪ್ಪು' ಸಂಪ್ರದಾಯದಲ್ಲಿ ಹರಿತರವಾದ ಆಯುಧಗಳನ್ನು ಬಳಸಿ ಮಾಡುವ ಅಭ್ಯಾಸ ಶಿಸ್ತುಗಳಲ್ಲಿ 'ವಾಳ್‌ವಲಿ' (ಖಡ್ಗ ಎಳೆತ) ಎಂಬುದು ಅತ್ಯಂತ ಮನೋಹಾರಿಯೂ, ಚಾತುರ್ಯದಿಂದ ಮಾಡಬೇಕಾದುದು ಆದ ಕಲಾರೂಪವಾಗಿದೆ. 'ಪಂದಂ ವೀಶಲ್' (ದೊಂದಿ ಬೀಸುಗೆ), 'ಅಗ್ನಿವಲಯ ಚ್ಚಾಟ್ಟಂ' (ಅಗ್ನಿವಲಯಕ್ಕೆ ಹಾರಿದಾಟು) ಮೊದಲಾದ ಕಲಾರೂಪಗಳು ಉತ್ತರ ಮಲಬಾರಿನ ದೇವಾಲಯಗಳಲ್ಲೂ, ಇತರ ಉತ್ಸವಗಳಲ್ಲೂ ಪ್ರದರ್ಶನಗೊಳ್ಳುವುದುಂಟು, ಇದೆಲ್ಲ ಮೇಲೆ ಹೇಳಿದ ಕಳರಿ ಸಂಪ್ರದಾಯಗಳ ಜನಪ್ರಿಯ ತೆಗೆ ಸಾಕ್ಷಿ

ತುಳುನಾಡಿನ 'ಕಳರಿ' (ಗರಡಿ)ಗಳು ಅತ್ಯುತ್ತರ ಕೇರಳದಲ್ಲೂ, ಒತ್ತಿನ ತುಳುನಾಡಿನಲ್ಲೂ ನೆಲೆನಿಂತಿದ್ದ ಗರಡಿ ಸಂಪ್ರದಾಯಗಳು, 'ತುಳುನಾಡನ್ ವಿದ್ಯೆ'ಗಳೆಂದು ಹೆಸರಾದ ಅಭ್ಯಾಸ ಪ್ರಯೋಗಗಳಲ್ಲದೆ. ಗಂಭೀರವದ ಸಾಧಕಗಳೇನೂ ಕಾಣಸಿಕ್ಕಿಲ್ಲ, ಮದ್ಯಕೇರಳದಲ್ಲಿ ಅಭ್ಯಾಸಿಸುತ್ತ ಬಂದ ಇನ್ನೊಂದು ಸಂಪ್ರದಾಯವಾಗಿತ್ತು 'ದ್ರೋಣಂಬಳ್ಳಿ' ಕಳರಿ ವಿದ್ಯೆ ಎಂಬ ಹೆಸರಿನಲ್ಲಿರುವ ಹಸ್ತಪ್ರತಿ ಗ್ರಂಥದಲ್ಲಿ ಈ ಸಂಪ್ರದಾಯದಲ್ಲಿರುವ ಅನೇಕಾನೇಕ 'ವಾಯ್ ತಾರಿ'ಗಳು (ಸಾಧಕ ಸೊಲ್ಲುಕಟ್ಟುಗಳು) ಲಭ್ಯವಿವೆ. ಆದರೆ ಅವು ಪ್ರಯೋಗದಲ್ಲಿಲ್ಲ, ಮಲಪ್ಪುಱಂ, ಪಾಲಕ್ಕಾಡ್, ತೃಶೂರ್ ಭಾಗಗಳಲ್ಲಿರುವ

'ಕಳರಿ'ಗಳಲ್ಲಿ ಕಲಿಸುತ್ತಿರುವ ಬರಿಗೈ ಸಾಧಕಗಳಿಗೆ ಒತ್ತಿನ ತಮಿಳುನಾಡಿನ ಅಭ್ಯಾಸಗಳೊಂದಿಗೆ ಸಾಮ್ಯವಿದೆ.

ತೆಕ್ಕನ್ ಕಳರಿ

ತಮಿಳು ಅಗಸ್ತ್ಯ ಪರಂಪರೆಯೊಂದಿಗೆ ಸಂಬಂಧಿಸಿದ ಅಭ್ಯಾಸವಿದು 'ಚರುವಂಗಂ'ಎಂಬ ಹೆಸರಿನಲ್ಲೂ ಇದು ತಿಳಿಯಲ್ಪಡುತ್ತದೆ. ತಿರುವನಂತಪುರಕ್ಕೆ ದಕ್ಷಿಣದಲ್ಲಿ ನೆಯ್ಯಾಱಿಂಕರತಾಲೂಕಿನ ಕಾಞ್ಞಿರಂಕುಳಂ, ವಿೞಿಞ್ಞಂ ಮೊದಲಾದೆಡೆಗಳಲ್ಲೂ ತಮಿಳುನಾಡಿನ ನಾಗರ ಕೋವಿಲ್‌ನಲ್ಲೂ 'ಆದಿಮುಱೆ' (ಅಡಿಮುಱಿ– ಮೂಲಶಿಸ್ತು) ಎಂಬ ಹೆಸರಿನಲ್ಲಿ ಪ್ರಚಾರದಲ್ಲಿದ್ದುದೂ, ಇಂದು ಕೇರಳದಲ್ಲೆಲ್ಲೆಡೆ ಅಭ್ಯಸಿಸುತ್ತಿರುವುದೂ ಆದ ಅಭ್ಯಾಸ ಶಿಸ್ತನ್ನೆ 'ತೆಕ್ಕನ್ ಕಳರಿ' (ತೆಂಕಣ ಗರಡಿ) ಎಂದೂ ಕರೆಯುವುದು 'ವೆಱಂ ಕೈ' (ಬರಿಗೈ) ಶಿಸ್ತುಗಳೊಂದಿಗೆ ಅನೇಕಾನೇಕ ಆಯುಧಗಳ ಪ್ರಯೋಗವನ್ನೂ ಇದರಲ್ಲಿ ಕಲಿಸುವುದುಂಟು ಇದಲ್ಲಿ ಪ್ರಾಧಾನ್ಯ ವಿರುವುಗಳೆಂದರೆ 'ಚುವಟುಮುಱಿ' (ಹೆಜ್ಜೆ ಶಿಸ್ತು,) 'ಪೊಟ್ಟುಂ ಪಿರಿವುಂ' (ಬಿಗಿವು ಬಿಡಿಸಿಕೋ), 'ಮಱಿಚ್ಚಿಲ್' (ಹೊರಳಿಕೆಗಳು), 'ಕುಱುವಡಿ ಅಡಿ' (ಕಿರುಗೋಲ ಹೊಡೆತ) 'ಚಿಱಮಂ' ಇವುಗಳಾಗಿವೆ. 'ಚುವಟುಮುಱೆ'ಯಲ್ಲಿ ವಿವಿಧ ರೀತಿಗಳಲ್ಲಿ ಹೆಜ್ಜೆಗಳನ್ನಿಟ್ಟು ಮುನ್ನೇರಿಯೂ ಹಿಂದಕೆ ಸರಿದೂ ಹಿಂದಿರುಗಿ ಆಕ್ರಮಣ ಪ್ರತಿರೋಧ ತಂತ್ರಗಳಿಗೆ ಪ್ರಾಧಾನ್ಯ, 'ಪೊಟ್ಟುಂ ಪಿರಿವು'ನಲ್ಲಿ ಶರೀರದ ನಂದು ಕಟ್ಟುಗಳೊಂದಿಗೆ ಸಂಬಂಧಿಸಿದ ಬಿಡಿತ ಮತ್ತು ಪಾರಾಗುವಿಕೆಗಳೇ ಅಭ್ಯಾಸ ವಿಷಯ ಎದುರಾಳಿಯ ಶರೀರ ಸಮತೋಲನವನ್ನು ನಾಶಗೊಳಿಸಲು ಬೆನ್ನು, ಸೊಂಟ ಅಳ್ಳೆಗಳು ಇವನ್ನು ಬಳಸಿ ಆತನನನ್ನು ಸ್ಥಾನ ಭ್ರಂಶನನ್ನಾಗಿಸಿ ಇತ್ತ ಅತ್ತ ಹೊರಳಿಸಿ ಮಾಡುವ ಅಭ್ಯಾಸಗಳೇ 'ಮಱಿಚ್ಚಿಲ್' ಸಣ್ಣ ಕೋಲಿನಿಂದ ಹೊಡೆಯುವ, ಬಡಿಯುವ, ಮರ್ಮಸಾನಗಳಿಗೆ ಚುಚ್ಚುವ ಪ್ರಯೋಗಗಳು 'ಕುಱುವಡಿ ಅಡಿ' 'ಚಿಱಮಂ' ಎಂಬುದು ತಮಿಳು ಪ್ರಭಾವ ಉಳ್ಳ ಶಿಸ್ತು, ಉದ್ದನೆ ಕೋಲಿನಿಂದ ಮಾಡುವ ಶಕ್ತವಾದ ಪ್ರಯೋಗವಿದು ಕೋಲಿನ ತುದಿಗೆ ಕೆಂಬಣ್ಣ ತಗಲಿಸಿ ಎದುರಾಳಿಗೆ ಸ್ಪರ್ಶಮಾಡುವ 'ಱೆಟ್ಟ್‌ವೀಚ್ಚ್' ಎಂಬ ಸ್ಪರ್ಧಾ ಆಟವು 'ಚಿಱಮಂ'ನ ಭಾಗವಾಗಿದೆ.

ಇಂದು 'ಕಳರಿಪ್ಪಯಱೆನ' ವಡಕ್ಕನ್ (ಬಡಗಣ), ತೆಕ್ಕನ್ (ತೆಂಕಣ) ವ್ಯತ್ಯಾಸಗಳು ಕರಗಿ ಇಲ್ಲದಾಗುತ್ತಿವೆ. ಶುದ್ದವಾದ ವಡಕ್ಕನ್, ತೆಕ್ಕನ್ ಸಂಪ್ರದಾಯಗಳು ಈಗ ಗರಡಿಗಳಲ್ಲಿ ಅಭ್ಯಾಸಗೊಳ್ಳುತ್ತಿಲ್ಲ ವಡಕ್ಕನ್‌ನ ಬೀಸುವ ರಸೆಗಳೊಂದಿಗೆ ತೆಕ್ಕನ್‌ನ ಬರಿಗೈ ಸಾಧಕಗಳನ್ನು ಸೇರಿಸಿ ತರಬೇತಿ ನೀಡಲಾಗುತ್ತಿದೆ. ಬಡಗಣ ಪದ್ದತಿಯ ಮರ್ಮಶಾಸ್ತ್ರವಾದ ಕುಲಾಭ್ಯಾಸ ಮರ್ಮದೊಂದಿಗೆ ಸಂಬಂಧಿಸಿ 'ಕಳರಿ ಚಿಕಿತ್ಸೆಯು' ಯೂ, ತೆಂಕಣ ಅಗಸ್ತ್ಯ ಮರ್ಮ ಚಿಕಿತ್ಸೆಯ ಭಾಗವಾದ ಮಾಲೀಸು ಚಿಕಿತ್ಸೆಯೂ ಕೇರಳದ ಅದ್ಯಂತವಿರುವ ಕಳರಿಗಳಲ್ಲಿ ಒಂದೇ ತೆರನಾಗಿ ನಡೆಯುತ್ತಿವೆ. ಸಂಪ್ರದಾಯ ವ್ಯತ್ಯಾಸ ಹಳೆಯ

ಸಂಕಲ್ಪಗಳಾಗಿವೆ. ಎಂದೂ ಇದರಿಂದ ತಿಳಿಯಬಹುದು ಆದರೆ ವಿಭಿನ್ನ ಸಂಪ್ರದಾಯಗಳಿಗಿರುವ ಪ್ರಾಧಾನ್ಯವನ್ನು ತಗ್ಗಿಸಿ ನೋಡಬೇಕಾಗಿಯೂ ಇಲ್ಲ

ಕಳರಿಪ್ಪಯಱ ತರಬೇತಿ

ಮಳೆಗಾಲ ತೊಡಗಿ ಭೂಮಿ ತಂಪಾದ ಹೊತ್ತಿನಲ್ಲಿ 'ಕಳರಿಪ್ಪಯಱ್' ಅಭ್ಯಾಸ ಆರಂಭವಾಗುತ್ತದೆ. ಶರೀರಕ್ಕೆ ಇಡಿಯಾಗಿ ಎಣ್ಣೆ ಸವರಿ ಉಜ್ಜಿದ ಬಳಿಕವೇ ಅಭ್ಯಾಸದ ಆರಂಭ ಶರೀರಕ್ಕೆ ಬೀಸುಪು ತಗಲಿ ಲಾಘವವನ್ನು ತಂದುಕೊಡುವ ಪ್ರಾಥಮಿಕ ವ್ಯಾಯಾಮ ಎಂಬ ನೆಲೆಯಲ್ಲಿ 'ಕಾಲು'ಗಳಿಗೆ ತರಬೇತಿ ನೀಡುವುದು ಮೊದಲ ಅಭ್ಯಾಸ ಕೈಗಳನ್ನು ನೇರಕ್ಕೆ ಎತ್ತಿ ಹಿಡಿದು, ದೇಹವನ್ನು ನೇರಕ್ಕೆ ತಂದು ಕಾಲನ್ನು ವರಮಾಧಿಗೆ ಎತ್ತಿ ಬಿಡಿಸಿದ ಹಸ್ತಕ್ಕೆ ತಗಲಿಸುವುದು, ಕೆಳಗಿಳಿಸಿ ಒಂದು ಹೆಜ್ಜೆ ಮುಂದಕ್ಕಿಡುವುದು, ಹೀಗೆ, ಪೊತ್ತಱಕ್ಕೆ ಅಭಿಮುಖವಾಗಿ ಸರಿಯುವುದ, ಗೋಡೆ ಬಳಿಗೆ ತಲುಪಿದರೆ ತಿರುಗಿ ಪುನಃ ಮುಂದಕ್ಕೆ ಸರಿದು ಹೊರಟಲ್ಲಿಗೆ ತಲಪುವುದು 'ಕಾಲು'ಗಳ ರೀತಿ 'ನೇರ್‌ಕಾಲ್' (ನೇರಕಾಲು), 'ಪುಱಂಕಾಲ್) (ಹೊರಗಾಲು), ಕೋಣಾಕಾಲ್' (ಕೋನಕಾಲು) ಅಭ್ಯಾಸಗಳಾದ ಬಳಿಕ 'ಮೇಯ್‌ಪಯಱ್' (ಮೆಯ್ ವರಸೆ) ತರಬೇತಿ ತೊಡಗುವುದು 'ಅಱಪ್ಪಕ್ಕೆ' ಸಂಪ್ರದಾಯದ ಕಳರಿಗಳ ಸಾಮನ್ಯ ರೀತಿ, ಮೇಯ್‌ಪ್ಪಯಱಗಳನ್ನೂ, ಇತರ ವರಸೆಗಳನ್ನೂ ಅಭ್ಯಾಸ ಮಾಡಿಸುವುದು ನಿಶ್ಚಿತ ಆಧೇಶಗಳನ್ನೊಳಗೊಂಡ 'ವಾಯ್‌ತ್ತಾರಿ' (ಸೊಲ್ಲುಕಟ್ಟು) ಹೇಳುತ್ತ ಆಗಿರುತ್ತದೆ. ಅಭ್ಯಾಸ ವಿದ್ಯಾರ್ಥಿ ತಾನೇ ಅಥವಾ ಹಿರಿಯ ವಿದ್ಯಾರ್ಥಿ ಅಥವಾ ಗುರುಗಳು 'ವಾಯ್‌ತ್ತಾರಿ' ಹೇಳುವವರಾಗಿರುತ್ತಾರೆ. ಮೆಯ್‌ಪ್ಪಱನ ಒಂದು 'ವಾಯ್‌ತ್ತಾರಿ' ಈ ಕೆಳಗಿದೆ.

ಕೈ ಮುಗಿದು ತಗ್ಗಿ

1. ಅಮರ್ಚಯಿಲೆಡುತ್ತುವೆಚ್ಚು/ ಅಮರ್ಕೆಯಂ ತೆಗೆದು ಇಟ್ಟು

   ವಲತ್ತುಕೊಂಡು ಚವುಟ್ಟಿ/ಬಲದಿಂದ ಮೆಟ್ಟಿ

   ವಲತ್ತೇತು ವಯ್ಯೋಟ್ಟು ಮಾಱ/ ಬಲವನ್ನು ಹಿಂದಕ್ಕೆ ಬದಲಿಸಿ

   ಎಡತ್ತೇದು ಕೂಟ್ಟಿವಾಜ್ಜಿಯಮರ್ನು/ಎಡದ್ದು ಸೇರಿಸಿ ಪಡೆದು ಅಮರ್ದು

   ಅಮರ್ಚಯಿಲೆಡುತ್ತು ವೆಚ್ಚ್ /ಅಮರ್ಕೆಯಿದೆತ್ತಿ ಇಟ್ಟು

   ವಲತುಕೊಂಡು ಚವುಟ್ಟಿ/ಬಲದಿಂದ ಮೆಟ್ಟಿ

   ವಲತ್ತೇತು ಮಾಱ / ಬಲವನ್ನು ಬದಲಿಸಿ

ಎಡತ್ತೇತು ಎಡುತ್ತು ನೊಕ್ಕಿ /ಎಡದ್ದು ತೆಗೆದು ನೋಡಿ

ವಲತ್ತೇಮ್ಮೆಲ್ ಚಾಡಿಕ್ಕೆಟ್ಟಿಚ್ಚವುಟ್ಟಿ/ ಬಂದಮೇಲೆ ಹಾರಿಕಟ್ಟಿ ಮೆಟ್ಟಿ

ಎಡುತ್ತುವೆಚ್ಚು ವಲಿಞ್ಞಮನು,ನೀರ್ನ್ನು/ ಎಡಕ್ಕೆ ಇಟ್ಟು ಎಳೆದಮರ್ದು ಎದ್ದು,

ವಲತ್ತು ನೆರೆ, ಇಡತ್ತು ನೇರೆ/ಬಲಕ್ಕೆ ನೇರ, ಎಡಕ್ಕೆ ನೇರ

ವಲತ್ತು ನೇರೆ ತಿರಿಞ್ಞ ಚರಿ ವಲಿಞ್ಞಮರ್ನ್ನು/ಬಲಕ್ಕೆ ನೇರತಿರುಗಿ ಹಾರಿ ಎಳೆದಮರಿತು.

2. ಎಡತ್ತೇತ್ ಎಡುತ್ತುನೊಕ್ಕಿ/ಎಡದ್ದು ತೆಗೆದು ನೋಡಿ
   ವಲತ್ತೋಮ್ಮೇಲ್ ಚಾಡಿಕೆಟ್ಟಿಚ್ಚವುಟ್ಟಿ/ ಬಲದ ಮೇಲೆ ಹಾರಿ ಕಟ್ಟಿ ಮೆಟ್ಟಿ

   ಎಡುತ್ತುವೆಚ್ಚ್ ವಲಿಞ್ಞಮರ್ನ್ನು,ನೀರ್ನ್ನು/ತೆಗೆದು ಇಟ್ಟು ಎಳೆದಮರ್ದು, ಎದ್ದು

   ವಲತ್ತು ನೇರೆ, ಎಡುತ್ತು ನೇರೆ/ ಬಲವುನೇ, ಎಡವು ನೇರ

   ವಲತ್ತು ನೇರೆ ತಿರಿಞ್ಞಚಾಡಿ ವಲಿಞ್ಞಮರ್ನ್ನು/ಬಲವು ನೇರ ತಿರುಗಿಹಾರಿ ಎಳೆದುಮರಿತು.

3. ಎಡತ್ತೇತು ಎಡುತ್ತುನೊಕ್ಕಿ/ಎಡದ್ದು ತೆಗೆದು ನೋಡಿ.
   ವಲತ್ತೇಮ್ಮಲ್ ಚಾಡಿಕ್ಕೆಟ್ಟಿಚ್ಚವುಟ್ಟಿ/ಬಲದ ಮೆಲೆ ಹಾರಿಕಟ್ಟಿ ಮೆಟ್ಟಿ

   ಎಡುತ್ತುವೆಚ್ಚು ತಾಙಚಯಿಲಮರ್ನ್ನೊ/ತೆಗೆದುಇಟ್ಟು ತಗ್ಗಿನಲಮದು

   ನೀಕ್ಕಿತ್ತೆಙತ್ ಚವುಟ್ಟಿ/ನೀಗಿ ಜೋಡಿಸಿ ಮೆಟ್ಟಿ

   ವಙವಾಜ್ಞಪ್ಪೊಜ್ಞ/ದಾರಿ ಪಡೆದು ಎದ್ದಿತು

4. ಎಡತ್ತೇತ್ ಎಡುತ್ತುನೊಕ್ಕಿ/ಎಡದ್ದು ತೆಗೆದುನೋಡಿ
   ವಲತ್ತೇಮ್ಮಲ್ ಚಾಡಿ ಕೆಟ್ಟಿ ಚವುಟ್ಟಿ/ ಬಲದ ಮೇಲೆ ಹಾರಿಕಟ್ಟಿ ಮೆಟ್ಟಿ

   ಎಡತ್ತುವೆಚ್ಚ್ ವಲಿಞ್ಞಮರ್ನ್ನು ನೀರ್ನ್ನು/ಎಡದಲ್ಲಿ ಇಟ್ಟು ಎಳೆದಮರ್ದು ಎದ್ದು

   ವಲತ್ತು ನೇರೆ ತಿರಿಚ್ಚು, ಎಡತ್ತು ನೇರೆ ತಿರಿಚ್ಚು/ಬಲಕೆ ನೇರ ತಿರುಗಿಸಿ, ಎಡಕೆ ನೇರತಿರುಗಿಸಿ

   ವಲತ್ತು ನೇರೆ ತಿರಿಞ್ಞ ಮುನ್ನಿಲ ಚುಟ್ಟಿ/ವಲಕೆ ನೇರತಿರುಗಿ ಮುಂದೆ ಮೆಟ್ಟಿತು

5. ವಲತ್ತೇತ್ ಮಾಟೆ/ಬಲದ್ದು ಬದಲಿಸಿ
   ಎಡತ್ತೇತ್ ಎಡುತ್ತು ನೊಕ್ಕಿ/ಎಡದ್ದು ತೆಗೆದು ನೋಡಿ

ವಲತ್ತೇಮ್ಮಲ್ ಚಾಡಿಕೆಟ್ಟಿಚ್ಚವುಟ್ಟಿ/ಬಲದ ಮೇಲೆ ಹಾರಿಕಟ್ಟಿ ಮೆಟ್ಟಿ

ಎಡುತ್ತುವೆಚ್ಚ್‌ವಲಿಞ್ಞ ಮರ್ನ್ನ್ಯ,ನೀರ್ನ್ನ್ಯ/ತೆಗೆದುಇಟ್ಟು ಎಳೆದಮರ್ದ್ಯ, ಎದ್ದು

ವಲತ್ತು ನೇರೆ ತಿರಿಚ್ಚು, ಎಡತ್ತು ನೇರೆ ತಿರಿಚ್ಚು/ ಬಲಕೆ ನೇರ ತಿರುಗಿಸಿ ಎಡಕೆ

ವಲತ್ತು ನೇರೆ ತಿರಿಞ್ಞ ಮುನ್ನಿಲ್ ಚವುಟ್ಟಿ/ ಬಲಕೆ ನೇರ ತಿರುಗಿ ಮುಂದೆ ಮೆಟ್ಟಿತು

6. ವಲತ್ತೇತ್ ಮಾಱಿ/ಬಲದ್ದು ಬದಲಿಸಿ
   ಎಡತ್ತೇತ್ ಎಡುತ್ತು ನೋಕ್ಕಿ/ಎಡದ್ದು ತೆಗೆದು ನೋಡಿ

   ಏಲತ್ತೇಮ್ಮಲ್ ಚಾಡಿಕೆಟ್ಟಿಚ್ಚವುಟ್ಟಿ/ಬಲದ್ ಮೇಲೆ ಹಾರಿಕಟ್ಟಿ ಮೆಚ್ಚಿ

   ಎಡುತ್ತು ವೆಚ್ಚ್ ತಾಱಯಿಲಮರ್ನ್ಯ /ತೆಗೆದು ಇಟ್ಟು ತಗ್ಗಿನಲ್ಲಿ ಅಮರ್ದ್ಯ

   ನೀಕ್ಕಿತ್ತೇರುತ್ತಿ ಚವುಟ್ಟಿ/ ನೀಗಿ ಜೋಡಿಸಿ ಮೆಟ್ಟಿ

   ವಱಿ ವಾಜ್ಞಪ್ಪೋಜ್ಞೋ/ದಾರಿ ಪಡೆದು ಎದ್ದಿತು.

7. ಎಡತ್ತೇತ್ ಎಡುತ್ತು ನೋಕ್ಕಿ/ಎಡದ್ದು ತೆಗೆದು ನೋಡಿ
   ವಲತ್ತೇಮ್ಮಲ್ ಚಾಡಿಕೆಟ್ಟಿಚ್ಚವುಟ್ಟಿ/ಬಲದ ಮೇಲೆ ಹಾರಿಕಟ್ಟಿ ಮೆಟ್ಟಿ

   ಎಡುತ್ತುವೆಚ್ಚ್ ವಲಿಞ್ಞಮರ್ನ್ನ್ಯ ನೀರ್ನ್ನ್ಯ/ತೆಗೆದು ಇರಿಸಿ ಎಳೆದಮರ್ದ್ಯ,ಎದ್ದು

   ವಲತ್ತು ನೇರೆ, ಎಡತ್ತು ನೇರೆ / ಬಲಕ್ಕೆ ನೇರ, ಎಡಕ್ಕೆ ನೇರ

   ವಲತ್ತು ನೇರೆ ತಿರಿಞ್ಞೊಱತ್ತಡಿಯಿಲವರ್ನ್ನ್ಯ / ಬಲಕ್ಕೆ ನೇರ ತಿರುಗಿ ಒಟ್ಟಡಿಯಲ ಮರ್ದ್ಯದು

8. ಎಡತ್ತೇತ್ ಎಡುತ್ತು ನೋಕ್ಕಿ/ಎಡದ್ದು ತೆಗೆದು ನೋಡಿ
   ವಲತ್ತೇಮ್ಮಲ್ ಚಾಡಿಕೆಟ್ಟಿಚ್ಚವುಟ್ಟಿ/ಬಲದ ಮೇಲೆ ಹಾರಿಕಟ್ಟಿ ಮೆಟ್ಟಿ

   ಎಡುತ್ತುವೆಚ್ಚ್ ವಲತ್ತಮರ್ನ್ನ್ಯ ನೀರ್ನ್ನ್ಯ/ತೆಗೆದು ಇರಿಸಿ ಬಲಕಮರ್ದ್ಯ,ಎದ್ದು

   ವಲತ್ತು ನೇರೆ, ಎಡತ್ತು ನೇರೆ / ಬಲಕ್ಕೆ ನೇರ, ಎಡಕ್ಕೆ ನೇರ

   ವಲತ್ತು ನೇರೆ ತಿರಿಞ್ಞೊಱತ್ತಡಿಯಿಲವರ್ನ್ನ್ಯ / ಬಲಕ್ಕೆ ನೇರ ತಿರುಗಿ ಒಟ್ಟಡಿಯಲ ಮರ್ದ್ಯದು

9. ಎಡತ್ತೇತ್ ಎಡುತ್ತು ನೋಕ್ಕಿ/ಎಡದ್ದು ತೆಗೆದು ನೋಡಿ
   ವಲತ್ತೇಮ್ಮಲ್ ಚಾಡಿಕೆಟ್ಟಿಚ್ಚವುಟ್ಟಿ/ಬಲದ ಮೇಲೆ ಹಾರಿಕಟ್ಟಿ ಮೆಟ್ಟಿ

ಎಡುತ್ತುವೆಚ್ಚ್ ತಾಙಿಯಿಲಮರ್ನ್ನ್/ಎಡಕೆ ಇಟ್ಟು ತಗ್ಗಿನಲಮರ್ದು

ನಿಕ್ಕಿತ್ತೆರುತ್ತು ಚವುಟ್ಟಿ/ನೀಗಿ ಜೋಡಿಸಿ ಮೆಟ್ಟಿ

ವಜಿವಾಜ್ಜಿಪ್ಪೊಜ್ಜಿ/ದಾರಿ ಪಡೆದು ಎದ್ದಿತು.

10. ಎಡತ್ತೇತ್ ಎಡುತ್ತು ನೋಕ್ಕಿ/ಎಡದ್ದು ತೆಗೆದು ನೋಡಿ

ವಲತ್ತೇಮ್ಮಲ್ ಚಾಡಿಕೆಟ್ಟಿಚ್ಚವುಟ್ಟಿ/ಬಲದ ಮೇಲೆ ಹಾರಿಕಟ್ಟಿ ಮೆಟ್ಟಿ

ಎಡತ್ತುವೆಚ್ಚ್ ತಾಙ್ಙಿಯಿಲಮರ್ನ್ನ್/ಎಡಕೆ ಇಟ್ಟು ತಗ್ಗಿ ನಲಮರ್ದು

ನಿಕ್ಕಿತ್ತೆರುತ್ತು, /ನೀಗಿ ಜೋಡಿಸಿ

ತುಳ್ಳಿಚ್ಚುವುಟ್ಟಿ/ನೆಗೆದುಮೆಟ್ಟಿ

ಎಡತ್ತೇಕ್ಕಾಲಿನೆ ವೆಳ್ಳತೊಟ್ಟ್/ ಎಡದ ಕಾಲಿನ ಬಿಳಿಯ ಮುಟ್ಟೆ

ಕೊಪ್ಪಿತ್ತೋ ಙತೋಳೂ/ ಕೈ ಜೋಡಿಸಿ ವಂದಿಸಿಕೋ

ಆರೋಹಣ ಕ್ರಮದಲ್ಲಿ ತಾಂತ್ರಿಕತೆಯಡಗಿದ ಎಂಟರಿಂದ ಹದಿನಾರುವರೆಗೆ ವರಸೆಗಳು 'ಮೆಯ್‌ಪ್ಪಯಜಿ'ನಲ್ಲಿವೆ. ಮೆಯ್‌ಪಯಙಿನ ಅಭ್ಯಾಸಗಳನ್ನು ಚೆನ್ನಾಗಿ ಮಾಡಿಕೊಳ್ಳುವುದರೊಂದಿಗೆ ಕಾಲು ಬದಲಿಕೆ, ಕಡಿಯುವಿಕೆ, ಆಯದ ವರಸೆಗಳನ್ನೂ ಕಲಿಸಿಕೊಡಲಾಗುತ್ತದೆ. ಅದರ ಅನಂತರ 'ಕೋಲ್‌ತಾರಿ' ವರಸೆ ತರಬೇತಿ ಅಳು ಎತ್ತರದ 'ಪಂದೀರಾನ್ ಕೋಲನ್ನು ಬೀಸಲು ಕಲಿಸುವುದು ಮೊದಲ ಅಭ್ಯಾಸ ಮುಖಕ್ಕೆ ಸರಿ ಎದುರು ಕೋಲಿನ ಒಂದು ತುದಿಯನ್ನು ಎರಡೂ ಕೈಗಳಿಂದ ಹಿಡಿದು ಹಸ್ತಗಳಿಗೆ ಮಾತ್ರ ಚಲನೆಯನ್ನಿತ್ತು ಅತಿವೇಗದಲ್ಲೂ ನಿಯಂತ್ರಣದೊಂದಿಗೂ ವಿವಿಧ ದಿಕ್ಕುಗಳಿಗೆ ಬೀಸುವ ವರಸೆಯನ್ನೇ 'ಪಂದೀರಾನ್'ನಲ್ಲಿ ನಡೆಸುವುದು ಮುಂದೆ ಎಂಟು ಗೇಣು ಉದ್ದದ (ಹೆಗಲ ಎತ್ತರಕ್ಕೆ ಬರುವ ಕೋಲಾದ 'ಕೆಟ್ಟು ಕಾರಿ'ಯಿಂದ ವರಸೆ ಶಿಸ್ತು ನಡೆಸುವುದು 'ಕೆಟ್ಟುಕಾರಿ' 'ಒಂಟಿ ಖಡ್ಗ –ಗುರಾಣಿ) ಈಟಿ, ಕಠಾರಿ ಮೊದಲಾದ ಆಯುಧ ಪ್ರಯೋಗಗಳನ್ನು ಕಲಿಯಲು ಜತೆಗಾರ (ಕೂಚ್ಚ್) ಬೇಕು ಒಟ್ಟಿಗೆ ಅಭ್ಯಾಸ ನಡೆಸುವವನೇ 'ಕೂಚ್ಚ್' ಹಿರಿಯ ವಿದ್ಯಾರ್ಥಿಯೋ, ಗುರುಗಳೋ ಕಳರಿಯ ಪ್ರವೇಶ ದ್ವಾರದ ಎದುರು ನಿಂತು 'ವಾಯ್ತಾರಿ' (ಸೊಲ್ಲುಕಟ್ಟು) ಹೇಳಿ ಕೊಡುತ್ತ, 'ಪೂತ್ತಙ'ಕ್ಕೆ ಅಭಿಮುಖವಾಗಿ ಇರುವ ಎಳೆಯ ಶಿಕ್ಷಾರ್ಥಿಗಳನ್ನು ಅಭ್ಯಾದಲ್ಲಿ ನಡೆಸುತ್ತಾರೆ. ಹಾಗೆ ನಡೆಸುವವರನ್ನು 'ಮುನ್‌ಕೋಲ್‌ಕ್ಕಾರನ್' ಎಂದೂ ಕರೆಯುತ್ತಾರೆ. ಒಂದೇ ಬಗೆ ತಂತ್ರಗಳು ಒಂದೇ ಗುರಿಯೆಡೆಗೆ ಪ್ರಯೋಗಿಸುವಾಗ ಶಿಕ್ಷಾರ್ಥಿಗಳು ಪರಸ್ಪರ ವಿರೋಧಿಸುವುದಾಗಿರುತ್ತದೆ. ತಲೆ, ಪಕ್ಕೆಲುಬು, ಬೆನ್ನು, ಹೊಟೆ, ಇವುಗಳು ಕಾಲುಗಂಟಿನ ಕೆಳಗೂ 'ಅಂಕತ್ತಾರಿ'ಯ ಹೊಡೆತದ ಗುರಿಗಳು. 'ಒತಿರಂ', 'ಒಳವ್', ಪುಙ', 'ವಾರಿ', 'ಒಡಲ್, ಕಟಕಂ'

ಎಂಬ ಸಂಕೇತ ಪದಗಳಲ್ಲಿ ಪ್ರಯೋಗ ರೀತಿಯೂ ಅವು ಗುರಿ ಮಾಡುವ ಸ್ಥಾನಗಳೂ ನಿರ್ದಿಷ್ಟವಾಗುತ್ತವೆ.

'ಕೆಟ್ಟುಕಾರಿ' ಅಭ್ಯಾಸದ ಬಳಿಕ ಮೂರುಗೇಣು ಉದ್ದದ (ಸುಮಾರು 22 ಇಂಚು) ಉದ್ದದ 'ಮುಚ್ಚಾಣ್' (ಚೆಱವಡಿ–ಕಿರುಗೋಲು) ನಿಂದ ವರಸೆ ಅಭ್ಯಾಸ, ತುಂಬ ತಗ್ಗಿಯೂ , ನೆಗೆದು ಏರಿಯೂ, ಅತಿವೇಗದ ವರಸೆ ಶಿಸ್ತುಗಳು 'ಮುಚ್ಚಾಣ್' ಪ್ರಯೋಗದಲ್ಲಿದೆ. ಕಣ್ಣುಗಳ ಸೂಕ್ಷ್ಮ ವೀಕ್ಷಣ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ 'ಮುಚ್ಚಾಣ್' ಅಭ್ಯಾಸ ನಿರ್ಣಾಯಕವಾಗಿದೆ. ಮುಚ್ಚಾಣ್ ವರಸೆ ಬಳಿಕ ಅಭ್ಯಾಸಗಳಲ್ಲೆಲ್ಲಬಲು ಪ್ರಧಾನವಾದ 'ಒಱಪ್ಪಯಱ' (ಒಂಟಿ ವರಸೆ) ಅಭ್ಯಾಸ, 'ಒಂಟಿ'ಯಲ್ಲಿ ಹೆಜ್ಜೆಯೊಂದಿಗೆ ದೇಹ ಭಂಗಿಗಳೂ ನಿರ್ನಾಯ ಪಾತ್ರ ವಹಿಸುತ್ತವೆ. ಬರಿಗೈ ಪ್ರಯೋಗಗಳೂ, ಆಯುಧ ಪ್ರಯೋಗಗಳೋ, ಸಂಗಮಿಸುವಂಥದು 'ಒಱ'ಯಲ್ಲಿರುವ ತಾಂತ್ರಿkಕತೆಗಳು ಮರ್ಮಜ್ಞಾನವನ್ನೂಕಟ್ಟು ಶಿಸ್ತುಗಳನ್ನೂ 'ಒಱ'ಯಲ್ಲಿ ಅತಿ ದ್ರುತವಾಗಿ ಪ್ರಯೋಗಿಸಲು ಕಲಿಸಲಾಗುವುದು. ಕೋಲ್‌ತಾರಿ ಚೆನ್ನಾಗಿ ಅಭ್ಯಾಸವಾದ ಬಳಿಕವೆ 'ಅಂಕತ್ತಾರಿ' ತರಬೇತಿ 'ವಾಳ್' (ಖಡ್ಗ) ಮತ್ತ 'ಪರಿಚ' (ಡಾಲು) ಇವೆ 'ಅಂಕತ್ತಾರಿ'ಯ ಅತ್ಯಂತ ಪ್ರಧಾನ ಆಯುಧಗಳು ತಗ್ಗಿಯೂ ನೆಗೆದೇರಿಯೂ ಡಾಲಿನ ಹಿಂದೆ ಅಡಗಿಯೂ ಇರುವ ಪ್ರಯೋಗಗಳು ಇದರಲ್ಲಿ ಒಳಗೊಂಡಿವೆ. ಬಾಳು, ಪರಿಚಯಗಳಿಂದ ಶಾಸ್ತ್ರೀಯ ಯುದ್ಧ ಶಿಸ್ತಿನ ತರಬೇತಿಯಿದು, ಕಠಾರಿ, ಗದೆ, ಕುಂತ(ಈಟಿ) ಮೊದಲಾದ ಆಯುಧಗಳನ್ನೂ 'ಅಂಕತ್ತಾರಿ'ಯಲ್ಲಿ ಪ್ರಧಾನ್ಯದಿಂದ ಕಲಿಸಲಾಗುತ್ತದೆ. 'ಅಂಕತ್ತಾರಿ;'ಯ ಬಳಿಕ ಕೊಟ್ಟ ಕೊನೆಯ ಅಭ್ಯಾಸ ಬರಿಗೈ ಹೋರಾಟದ ಶಿಸ್ತುಗಳು ಆಯುಧಗಳನ್ನು ಬಳಸಿ ಹದಕ್ಕೆ ಬಂದ ಶರೀರಾಂಗಗಳು, ಅಭ್ಯಾಸಗಳಿಮದ ಪಡೆದ ಅರಿವು ಮತ್ತು ತಾಳ್ಮೆಯ ಶಕ್ತಿ ಇರುವ ವ್ಯಕ್ತಿ ಬರಿಗೈ ಶಿಸ್ತಿನ ಅಭ್ಯಾಸಗಳಲ್ಲಿ ಶಕ್ತಿಯನ್ನೂ ಯುಕ್ತಿಯನ್ನೂ ಬಳಸಿ ವಿರೋಧಿಯನ್ನು ಗೆಲ್ಲಲು ನೋಡುವುದು ಈ ಅಭ್ಯಾಸದ ಗುರಿ ಶರೀರಾಂಗಗಳನ್ನೆಲ್ಲ ಯಥಾ ವಿಧಿ ಉಪಯೋಗಿಸಿಕೊಳ್ಳುವ ಘಟ್ಟವಿದು ಕಳರಿ ಪ್ಪಯಱ ಅಭ್ಯಾಸದ ಪೂರ್ತಿಕರಣಕ್ಕೆ ಮರ್ಮಜ್ಞಾನವೂ ಚಿಕಿತ್ಸಾವಿಧಿಗಳೂ ತಿಳಿಯಬೇಕಾಗಿದೆ. ಕಡಿಮೆ ಯೆಂದರೂ ಎಂಟು ವರ್ಷಗಳ ಕಾಲವಾದರೂ ಕಳರಿಗಳಲ್ಲಿ ತರಬೇತಿ ಗಳಿಸಿ ಗುರಿವಿನ ಪ್ರೀತಿಗೆ ಪಾತ್ರನಾಗುವ ಶಿಷ್ಯನಿಗೆ ಮಾತ್ರ ಮರ್ಮಜ್ಞಾನವನ್ನೂ ಚಿಕಿತ್ಸಾ ವಿಧಿಗಳನ್ನೂ ಹೇಳಿಕೊಡುತ್ತಾರೆ. ಇದರೊಂದಿಗೆ ಒಬ್ಬ ವಿದ್ಯಾರ್ಥಿ ಕಳರಿಯ ವಿದ್ಯಾಭ್ಯಾಸವನ್ನು ಪೂರ್ತಿಕರಿಸಿದ್ದಾಗಿ ಗುರುತಿಸಲ್ಪಡುತ್ತನೆ.

ಅಭ್ಯಾಸ ಸಂದರ್ಭಗಳು

ಸಾಮಾನ್ಯ ಗತಿಯಲ್ಲಿ ಬೀಳುಗಳು, ಗಾಯಗಳು ಉಂಟಾಗುವ ಸಂದರ್ಭಗಳಲ್ಲೇ ಅಭ್ಯಾಸಿಗಳ ಮನಸ್ಸಿನ ದೃಢತೆ ನೈಪುಣ್ಯಗಳು ಪರೀಕ್ಷೆಗೆ ಒಡ್ಡಿಕೊಳ್ಳುವುದು ವೈದ್ಯ ಚಿಕಿತ್ಸೆಗೆ ನಾಟಿ ವೈದ್ಯರನ್ನೂ ವಿಶಿಷ್ಟ ಕಳರಿಪ್ಪಯಱ ಗುರುಗಳನ್ನೂ ಆಶ್ರಯಿಸಿದ್ದ ಕಾಲಗಳಲ್ಲಿ ಪ್ರಥಮ ಶುಶ್ರೂಷೆಯನ್ನೂ ತಜ್ಞ ಚಿಕಿತ್ಸೆಯನ್ನೂ

ವಿಧಿಸುತ್ತಿದ್ದುದು ಕಳರಿ ಗುರುಗಳೇ ಆಗಿದ್ದರು. ಗುರುಗಳಿಗೆ ದೊರೆತ ಸರ್ವಾಧರಣೀಯ ಸ್ಥಾನಕ್ಕೆ ಇದು ಕಾರಣವಾಗಿತ್ತು.

ಅಪೂರ್ವ ಸಂದರ್ಭಗಳಲ್ಲಾದರೂ ಅಕ್ರಮಕ್ಕೂ ಅನೀತಿಗೂ ಎದುರು ಆತ್ಮರಕ್ಷಣೆಗಾಗಿಯೂ, ಅದಲ್ಲದೆಯೂ ಶಾರೀಕ ಹೋರಾಟಕ್ಕೆ ಎಡೆ ಉಂಟಾಗಬಹುದು, ಕಳರಿಗಳ ತಾಲೀಮಿನ ಸಂದರ್ಭದಿಂದ ಬಹಳ ವ್ಯತ್ಯಾಸ್ತವಾದ ರೀತಿಯಿರಬಹುದು ಮಾರಕಾಯುಧಗಳಿಂದ ಇದಿರಾಗುವ ವಿರೋಧಿಗಳನ್ನು ಎದುರಿಸುವುದು ಆದರೂ ಪರಮಾವಧಿಯಾಗಿ ಆತ್ಮ ಸಂಯಮವನ್ನೂ ನಿಯಂತ್ರಣವನ್ನೂ ಪಾಲಿಸಲು ಅಭ್ಯಾಸಿತಯಾರಿರುತ್ತಾನೆ. ಸಾಧ್ಯವಾದರೆ ಶತ್ರುವಿನೊಂದಿಗೆ ಸಮಾಧಾನದ ಮಾತುಗಳನ್ನಾಡಿ ಹೋರಾಟದ ಸಂದರ್ಭವನ್ನು ತಪ್ಪಿಸುವುದಾಗಿರುತ್ತದೆ. ಆತನ ಶ್ರಮ ಶತ್ರುವಿನ ಆಕ್ರಮಣವನ್ನು ನಿವಾರಿಸುವುದು, ಅದು ಸಫಲವಾಗದಿದ್ದರೆ ಎದುರಾಳಿಗೆ ಬಲವತ್ತರವಾದ ತಡೆಯನ್ನೊಡ್ಡಿ ತನ್ನ ಯೋಗ್ಯತೆಯನ್ನು ಆತನಿಗೆ ಮನವರಿಕೆ ಮಾಡಿಕೊಡುವುದು, ಅಲ್ಲೂ ಸಾಫಲ್ಯ ದೊರೆಯದಾಗ ಪ್ರತ್ಯಾಕ್ರಮಣ ನಡೆಸುವುದು ರೀತಿ, ಹಿಂಸೆಯನ್ನು ಉದ್ದೇಶಿಸಿ ಏರಿಬರುವ ಶಕ್ತವಾದ ಶತ್ರುವಿನ ಎದುರು ಮಾತ್ರವೆ ಮರ್ಮ ಪ್ರಯೋಗಗಳಿಗೆ ಅಭ್ಯಾಸಿ ಮುಂದುವರಿಯಬಹುದು ಪ್ರತಿವಿಧಿಯಿಲ್ಲದ (ಶಾಶ್ವತ ವೈಫಲ್ಯ ತರಬಹುದಾದ) ಪ್ರಯೋಗಗಳಿಗೆ ಹೋಗದೆ ಇರಲು ಆತ ಯಾವಾಗಲೂ ಬದ್ದನಿರುತ್ತಾನೆ. ಅಭ್ಯಾಸಿಯ ನಡವಳಿಕೆಯೂ, ಪ್ರಶ್ನೆಗಳೋಂದಿಗೆ ಪ್ರತಿಕರಿಸುವ ರೀತಿಯೂ ಸ್ವಾಭಾವಿಕವಾಗಿಯೂ ಯುಕ್ತಿ ಪೂರ್ವಕವೆ ಇರುತ್ತವೆ. ಎದುರಾಳಿಯ ಬಗೆಗೆ ಮೌಲ್ಯಮಾಪನ ಮಾಡುವುದಕ್ಕೆ ಆತ ಸಂಪೂರ್ಣ ಧ್ಯಾನವನ್ನು ಉಪಯೋಗಿಸಿಕೊಳ್ಳುತ್ತನೆ. ಯಾರದೇ ಆತ್ಮಾಭಿಮಾನವನ್ನು ಘಾಸಿಗೊಳಿಸದಿರಲು ಆತ ಜಾಗ್ರತೆ ವಹಿಸುತ್ತಾನೆ. ಸಂಘರ್ಷದಿಂದಲ್ಲದೆ ಸ್ನೇಹದಿಂದಲೂ ಪರಸ್ಪರ ಗೌರವದಿಂದಲೂ ಅಂಗೀಕಾರ ಪಡೆಯುವುದಕ್ಕಾಗಿರುತ್ತದೆ ಯಾವಾಗಲೂ ಉತ್ತಮ ಅಭ್ಯಾಸಿಯ ಶ್ರಮ.

ಅನುಬಂಧ

ಸಹಾಯಕ ಗ್ರಂಥ ಸೂಚಿ

ಅಚ್ಚುತ ಮೇನೋನ್ ಚೇಲನಾಟ್ಟ್ " 'ಕೇರಳಿತ್ತಿಲೆ ಕಾಳೀ ಸೇವ' ಮದ್ರಾಸು ವಿಶ್ವವಿದ್ಯಾಲಯ 1959

. . . . 'ವಡಕ್ಕನ್ ಪಾಟ್ಟುಗಳ್,' ಮದ್ರಾಸು ವಿಶ್ವವಿದ್ಯಾಲಯ ಮದ್ರಾಸು 1956

ಅಚ್ಚುತ ಮೇನೋನ್ ಚೇಲನಾಟ್ಟ್ & ಎಸ್.ಕೆ. ನಾಯರ್ 'ತಚ್ಚೋಳಿಪ್ಪಾಟ್ಟು ಕಳ್' ಮದ್ರಾಸು ವಿಶ್ವವಿದ್ಯಾಲಯ, ಮದ್ರಾಸು 1957

ಅಪ್ಪುಣಿ ನಂಬಿಯಾರ್ ಎಂ.ಸಿ.: 'ವಡಕ್ಕನ್ ಪಾಟ್ಟುಕಳ್', ದೇಶಾಭೀಮಾನಿ ಪ್ರಿಂಟಿಂಗ್ ಅಂಡ್ ಪಬ್ಲೀಷಿಂಗ್ ಕಂಪನಿ, ಕೊಝಿಕ್ಕೋಡ್ 1960

ಅಬು ಓ, 'ಅರಬಿ ಮಲಯಾಳ ಸಾಹಿತ್ಯ ಚರಿತ್ರಂ', ಎಸ್.ಪಿ.ಪಿ.ಎಸ್. ಕೊಟ್ಟಯಂ 1970

ಅಹಮ್ಮದ್ ಮೌಲವಿ ಸಿ.ಎನ್. & ಕೆ.ಎಕೆ. ಮಹಮ್ಮದ್ ಅಬ್ದುಲ್ ಕರೀಂ 'ಮಹತ್ತಯ ಮಾಪ್ಪಿಳ್ ಸಾಹಿತ್ಯ ಪರಾರಂಪರ್ಯಂ', ಕೇಜಿಕ್ಕೋಡ್ 1982

ಮಹಾಕವಿ ಮೇಯಿನ್ ಕುಟ್ಟಿ ವೈದ್ಯರ್ ಅನುಸ್ಮರಣ ಪ್ರಬಂಧಜ್ಞಳ್, ಲೇಖನಗಳ ಸಮಾಹಾರ, ಯುವಕಲಾ ಸಾಹಿತಿ, ಮಲಪ್ಪುಜಂ 1990

. . . .'ಸಮಾಗಮಂ', ಸಂಗೀತ ನಾಟಕ ಅಕಾಡಮಿ, ತೃಶೂರ್ 1981

ಕಾರಶ್ಶೇರಿ ಎಂ.ಎನ್. 'ಪುಲಿಕ್ಕೋಟ್ಟಿಲ್ ಕೃತಿಗಳ್', ಮಾಪ್ಪಿಳ್ ಕಲಾಲ ಸಾಹಿತ್ಯವೇದಿ, ವಂಡೂರ, 1989

ಕುಞ್ಞಣ್ಣಿ (ಸಂ) ಕಟಂಗಥಕಳ್, ಕೇರಳ ಸಾಹಿತ್ಯ ಆಕಾಡಮಿ ತೃಶೂರ್ 1981

ಕುಜುಪ್ಪ್ ಕೆ.ಕೆ.ಎನ್. 'ಆರ್ಯಾದ್ರಾವಿಡ ಘಟಕಜ್ಞಳ್ ಮಲಬಾರಿತಿ ನಾಡನ್ ಕಲಯಿಲ್', ಕೇರಳ ಭಾಷಾ ಇನ್‌ಸ್ಟಿಟ್ಯೂಟ್, ತಿರುವನಂತ ಪುರಂ 1980

ಕೇರಳ ಸಂಗೀತ ನಾಟಕ ಆಕಾಡಮಿ 'ದೃಶ್ಯ ಕಲಾ ಸೂಚಿಕ', ಕೇರಳ ಸಂಗೀತ ನಾಟಕ ಆಕಾಡಮಿ , ತೃಶೂರ್ 1978

. . . . (ಸಂ)' ತೆಯ್ಯಂ', ಕೇರಳ ಸಂಗೀತನಾಟಕ ಆಕಾಡಮಿ ತೃಶೂರ್ 1978

ಕೇರಳ ವರ್ಮ ಸಿ.ಆರ್: 'ಮತ್ರವುಂ ಮಂತ್ರವಾದವುಂ', ಕೇರಳ ಸಂಗೀತ ನಾಟಕ ಅಕಾಡಮಿ, ತೃಶೂರ್ 1986

ಕೇಶವನಾಚಾರಿ ಎನ್.ಪಯ್ಯನ್ನೂರ್ 'ಮನುಷ್ಯಾಲಯ ಸೋಪಾನಂ', ಆಚಾರ್ಯ ಗ್ರಂಥಾಲಯಂ, ಪಯ್ಯನ್ನೂರ್ 1956

ಗಂಗಾಧರನ್ ತಿಕ್ಕುಱಿಶ್ಶಿ: ಇರವಿಕ್ಕುಟ್ಟಿಪ್ಪಿಳ್ಳಪ್ಪೋರ್, ಒರು ಪಠನಂ ಸಾಹಿತ್ಯ ಕೈರಳಿ, ತಿರುವನಂತಪುರಂ, 1988

ಚಂಡೇರ,ಸಿ.ಎಂ.ಎನ್.: ಕಣ್ಣಕಿಯುಂ ಚಿರುಂಬಕ್ಕಾವುಂ, ಕೊಟ್ಟಯಂ 1978

. . . . 'ಕಳಿಯಾಟ್ಟಂ', ಕಣ್ಣೂರ್ 1967

ಚುಂಡಲ್ ಚುಮ್ಮಾರ್: ಕುಮ್ಮಾಟ್ಟಿ, ಎನ್.ಬಿ.ಎಸ್.ಕೊಟ್ಟಯಂ 1971,

. . . . 'ಮುಡಿಯೇಱ', ಫೋಕ್‌ಲೋರ್ ಆಕಾಡಮಿ, ತೃಶೂರ್ 1981

ಟಿ.ಎಸ್.ಪ್ರಭು ಬಾಲಗೋಪಾಲನ್ : 'ವಾಸ್ತುವಿದ್ಯಾದರ್ಶನಂ', ವಾಸ್ತುವಿದ್ಯಾ ಪ್ರತಿಷ್ಠಾನಂ, ಕೋಜಿಕ್ಕೋಡ್ 1994

ನಂಬಿಯಾರ್ ಎ.ಕೆ.: 'ಕೇರಳತ್ತಿಲೆ ನಾಡನ್ ಕಲಿಗಳ್', ಎನ್.ಬಿ.ಎಸ್. ಕೊಟ್ಟಯಂ 1989

ನರೇಂದ್ರನಾಥ್ ಪಿ: 'ಪಱಯಪೆಱ ಪಂದಿರುಕುಲಂ', ಪ್ರಭಾತ್ ಬುಕ್ ಹೌಸ್', ತಿರುವನಂತಪುರಂ 1991

ನಾಯರ್ ಎಸ್.ಕೆ. : ಕೇರಳತ್ತಿಲೆ ನಾಡೋಡಿ ನಾಟಕಙ್ಙಳ್', ಮದ್ರಾಸು ವಿಶ್ವವಿದ್ಯಾಲಯ, ಮದ್ರಾಸು 1955

ಪುರುಷೋತ್ತಮನ್ ಕಳನಾಡ್ : 'ವಯನಾಟ್ಟು ಕುಲವನ್', ತ್ರಿವೇಣಿ ಪಬ್ಲಿಕೇಷನ್ಸ್, ಕಾಸರಗೋಡು 1976

ಪ್ರೇಂನಾಥ್, ವೆಟ್ಟಿಯಾರ್ ಎಂ: 'ನಮ್ಮುಡೆ ನಾಡನ್ ಪಾಟ್ಟುಗಳುಂ ಕಲಗಳುಂ, ಪ' ಪ್ರಭಾತಂ ಎರಣಾಕುಳಂ 1956

. . . . (ಸಂ) 'ನಾಡನ್ ಪಾಟ್ಟುಗಳ್', ಕೇರಳ ಸಾಹಿತ್ಯ ಅಕಾಡಮಿ ತೃಶೂರ್ 1974

ಫಿಲಿಪ್ ಮಣಿಮಲ್: 'ಸಂಸಾರಭಾಷ ತೆಕ್ಕು ವಡಕ್ಕುಂ', ಎನ್.ಬಿ.ಎಸ್. ಕೊಟ್ಟಯಂ 1972

ಬಾಲಕೃಷ್ಣನ್ ನಾಯರ್, ಚಿಱಕ್ಕಲ್ ಟಿ(ಸಂ): 'ಕೇರಳ ಭಾಷಾಗಾನಙ್ಙಳ್! ಕೇರಳ ಸಾಹಿತ್ಯ ಅಕಾಡಮಿ, ತೃಶೂರ್ 1979

ಭಾರ್ಗವನ್ ಪಿಳ್ಳಜ್ಜಿ : 'ಕಾಕ್ಕಾರಿಶ್ಶಿ ನಾಟಕಂ', ಎಸ್.ಪಿ.ಪಿ.ಎಸ್.ಕೊಟ್ಟಯಂ, 1976

ಮಾಲಿ :'ಕೇರಳ ಸಂಗೀತಂ', ಎನ್.ಬಿ.ಎಸ್.ಕೊಟ್ಟಯಂ 1959

ಪಯ್ಯವಾಡ್ ರಾಘವನ್', ತೆಯ್ಯವುಂ ತೋಱಿಂಪಾಟ್ಟುಂ, ಎಸ್,ಪಿ.ಸಿ.ಎಸ್ ಕೊಟ್ಟಯಂ 1978

. . . . . . ಫೋಕ್‌ಲೋರ್, ಕೇರಳ ಭಾಷಾ ಇನ್‌ಸ್ಟಿಟ್ಯೂಟ್ 1986

ರಾಘವ ವಾರಿಯರ್, ಎಂ.ಆರ್.ವ 'ವಡಕ್ಕನ್ ಪಾಟ್ಟುಗಳುಡೆ ಪಣಿಯಾಲ', ವಳ್ಳತ್ತೋಳ್ ವಿದ್ಯಾಪೀಠಂ, ಶುಕಪುರಂ 1982

ವಾಸುದೇವನ್ ಪಿಳ್ಳ, ಕಡಮ್ಮನಿಟ್ಟ : ಪಡೇನಿ, ಕೇರಳ ಭಾಷಾ ಇನ್‌ಸ್ಟಿಟ್ಯೂಟ್ ತಿರುವನಂತಪುರಂ 1993

. . . .'ಪಡೇನಿಯಿಲೆ ಪಾಳಕ್ಕೋಲಙ್ಙಳ್, ಜನಜಾಗೃತಿ ಪ್ರಸಾಧಕ ಸಂಘಂ, ಪಜಿವುರ್ 1992

ವಿಶ್ವಂಭರನ್ ಕಿಳಿಮಾನೂರ್, ಕೇರಳತ್ತಿಲೆ ನಾಡನ್ ಪಾಟ್ಟುಗಳ್, ಎಸ್.ಪಿ.ಎಸ್.ಎಸ್. ಕೊಟ್ಟಯಂ 1955

ವಿತಯತ್ತಿಲ್ ಜೋಸೆಪ್ ಫಾ : 'ಕ್ರೈಸ್ತವ ವಿಜ್ಞನಿಯಂ' ಕೆ.ಸಿ.ಬಿ.ಸಿ. ಕೊಟ್ಟಯಂ 1980

ವಿಷ್ಣು ನಂಬೂತಿರಿ ಎಂ.ವಿ.: 'ಪುಳ್ಳುವಪ್ಪಾಟ್ಟುಂ ನಾಗಾರಾಧನೆಯೂ', ಎನ್.ಬಿ.ಎಸ್. ಕೊಟ್ಟಯಂ 1977

. . . . . . 'ಮಾಂತ್ರಿಕ ವಿದ್ಯೆಯುಂ ಮಂತ್ರವಾದಪ್ಪಾಟ್ಟುಗಳುಂ' ಎನ್.ಬಿ.ಎಸ್.ಕೊಟ್ಟಯಂ 1979

. . . .'ಕೇರಳತ್ತಿಲೆ ನಾಡೋಡಿ ವಿಜ್ಞಾನೀಯತ್ತಿನೋರು ಮುಖವುರ' ಎನ್.ಬಿ.ಎಸ್.ಕೊಟ್ಟಯಂ 1981

. . . . 'ಪುಲಯರುಡೆ ಪಾಟ್ಟುಗಳ್, ಎನ್.ಬಿ.ಎಸ್.ಕೊಟ್ಟಯಂ 1983

. . . . 'ಫೋಕ್‌ಲೋರ್ ನಿಘುಂಡು', ಕೇರಳಭಾವಿ ಇನ್‌ಸ್ಟಿಟ್ಯೂಟ್, ತಿರುವನಂತಪುರ, 1983

. . . .'ತೋಜಿಂ ಪಾಟ್ಟುಗಳ್ ಒರುಪಠನಂ', ಎನ್.ಬಿ.ಎಸ್.ಕೊಟ್ಟಯಂ 1990

. . . . 'ವಡಕ್ಕನ್ ಪಾಟ್ಟುಗಳ್ ಒರುಪಠನಂ', ಕರಂಟ್ ಬುಕ್ಸ್ ಕೊಟ್ಟಯಂ 1995

. . . . 'ನಾಡೋಡಿ ವಿಜ್ಞಾನಿಯಂ', ಡಿ.ಸಿ. ಬುಕ್ಸ್, ಕೊಟ್ಟಯಂ 1996

ಶಂಗುಣ್ಣಿ ಕೊಟ್ಟಾರತ್ತಿಲ್ : 'ಐತಿಹ್ಯಮಾಲ', ಮಂಗಳೋದಯಂ, ತೃಶೂರ್ 1984

ಶ್ರೀಧರನ್ ನಾಯರ್ ಚಿಱಯ್ಕಲ್ ಟಿ : 'ಕಳರಿಪ್ಪಯಱ್, ಕೇನನೂರ್ ಪ್ರೀಟಿಂಗ್, ಕಣ್ಣೂರ್ 1963

ಶ್ರೀಧರನ್ ಪೆರುಂಬಡವಂ: 'ಪಱಯ ಪೆಱ ಪಂದೀರು ಕುಲಂ', ವಿದ್ಯಾರ್ಥಿ ಮಿತ್ರಂ ಕೊಟ್ಟಯಂ 1980

ಸಿ.ಜಿ.ಎನ್ : 'ವಡಕ್ಕನ್ ಪಾಟ್ಟುಗಳ್ ಒರು ಪಠನಂ,', ವಿದ್ಯಾರ್ಥಿಮಿತ್ರಂ ಕೊಟ್ಟಯಂ 1975

. . . . . :'ತಿಱಯಾಟ್ಟವುಂ ಅಂಜಡಿಯುಂ', ಎನ್.ಬಿ.ಎಸ್.ಕೊಟ್ಟಯಂ 1990

. . . . . : ತಿಱಯಾಟ್ಟವುಂ ಅಂಜಡಿಯುಂ'ವಿದ್ಯಾರ್ಥಿಮಿತ್ರಂ ಕೊಟ್ಟಯಂ 1975

ಸುರೇಂದ್ರನಾತ ಕೆ.ಪಿ. ಶಿವಕುಮಾರ್ ವಿ.ಪಿ. & ಗೋಪಾಲಕೃಷ್ಣನ್ ಪೆರುಂಬುಱ(ಸಂ)

ಕೇರಳ ಕಲಾಗ್ರಾಮಂ (ಗ್ರಾಮೀಣ ಕಲಾ ಪಠನಂ) ಕೇರಳ ಕಲಾಗ್ರಾಮಂ ತಿರುವನಂಪುರಂ 1988

ಮಾಸಿಕ ಅಕಂ – ಫೋಕ್‌ಲೋರ್ ಸಂಚಿಕೆ, ಅಂಕಂ ಸಮಿತಿ, ಧರ್ಮಟಂ 1977

ಮಲಯಾಳ ವಿಮರ್ಶಂ (ಲಕ್ಕಂ) ಕ್ಯಾಲಿಕಟ್ ಯುನಿವರ್ಸಿಟಿ

ಮಲಯಾಳ ವಿಭಾಗಂ, 1990–91

English

Bowra, L.M : Heroie Poetry, Newyark : st Martin press 1966
. . . Primitive song : weiden Field Nicolsons 1962

Choondal Chummar : Christian Folklore, Kerala Foklare Academy, Trichur 1988
Clark Kenneth And Clarke Mary W: 'Indtrducing Folklore'

Rinchart and Winstion Newyork 1963

Clause Peter J & Korom Frank J : 'Folk loristrics and Indian folklore', RRC, MGM College, Udupi 1991

Dorson Richard M : 'Folklore and Folklife An Indroduction', University Press Chicago 1972

Dundes Alan (Ed): 'The Study of Folklove', Engle Wood Chiffs,Printice Hall, 1965

Govinda Varma Raja, E.K : 'Serpent Prince', Purameri Porlathiri Publications 1994

Handoo Jawaharlal : 'Current Trends in folk love', Institute of Kannda Studies, Mysore 1978

Islam Mazharul : ' Folk lore the Pulse of the People : in the context of Indian Folklore', concept Publishing company New Delhi 1985

Kurup K.K>N: Cult of Thyyam and Hero Worship in Kerala, Indian Publication Culcutta 1977

Pallath J.J. Theyyam : Samskrithi 1995



ಪ್ರಾದೇಶಿಕ ಗಡಿಗಳು ಜನರ ಅನುಕೂಲಕ್ಕೆ ಮಾಡಿಕೊಂಡ ಆಯ್ಕೆಗಳಾದರೆ, ನಿತ್ಯಬದುಕಿನ ರೂಢಿಗಳಿಗೆ ಯಾವುದೇ ಗಡಿಗಳಿರುವುದಿಲ್ಲ. ಅದು ಭಾಷೆಯಿರಬಹುದು, ಸಂಸ್ಕೃತಿಯಿರಬಹುದು ತನ್ನದೇ ಆಯ್ಕೆಗಳ ಕುರಿತು ಭಾಷೆ, ಗಡಿ ಮೀರಿ ಆಲೋಚಿಸುವ ಸಂದರ್ಭಗಳಲ್ಲಿ ಕೇರಳ ಹಾಗೂ ಅಲ್ಲಿನ ಜಾನಪದದ ತಿಳುವಳಿಕೆ ಮಹತ್ವದಿಂದ ಕೂಡಿದೆ. ಈ ನಿಟ್ಟಿನಲ್ಲಿ ಅಲ್ಲಿನ ಭಾಷೆ, ಸಂಸ್ಕೃತಿ ಹಾಗೂ ಆರಾಧನಾ ಪರಂಪರೆಗಳು ಕನ್ನಡದ ಕರಾವಳಿ ಪ್ರದೇಶದಲ್ಲಿ ಹೇಗೆ ಸಮೀಪವರ್ತಿಯಾಗಿವೆ ಎಂಬುದಕ್ಕೆ ಇಲ್ಲಿನ ಕನ್ನಡ, ತುಳು, ಕೊಂಕಣಿ ಪ್ರದೇಶಗಳಲ್ಲಿ ಜನರು ಬಳಕೆಯ ಶಬ್ದಗಳಲ್ಲಿ ವ್ಯತ್ಯಾಸ, ಸ್ಥಳನಾಮ, ಕುಲನಾಮ, ವಾಗ್ರೂಢಿ ಹಾಗೂ ದೇವಾಲಯ ಧಾರ್ಮಿಕ ಆಚರಣೆಗಳು ಒಂದೇ ಬಗೆಯ ದೃಷ್ಟಿಕೋನಗಳನ್ನು ಪ್ರತಿಫಲಿಸುತ್ತವೆ ಎಂಬ ವಿಚಾರದಲ್ಲಿ 'ಕೇರಳ ಜಾನಪದ' ಅನನ್ಯಗ್ರಂಥವಾಗಿದೆ..

ಕೇರಳದಲ್ಲಿನ ಜಾನಪದ ರೂಪದ ವಿವರಣಾತ್ಮಕ ಅಧ್ಯಯನದೊಡನೆ ಕೇರಳೀಯರ ಸಾಂಘಿಕ ಮಹತ್ವ, ಸಂಪ್ರದಾಯಗಳ ತಾರ್ಕಿಕ ಸ್ವರೂಪವನ್ನುಈ ಅಧ್ಯಯನದಲ್ಲಿ ಕಾಣಬಹುದಾಗಿದ್ದು, ಜಾನಪದದ ವೈಜ್ಞಾನಿಕ ವಿಶ್ಲೇಷಣೆಗಳಿಗೆ ಸ್ಫೂರ್ತಿ ಒದಗಿಸುತ್ತದೆ. ವ್ಯಕ್ತಿಯ ಮೂರ್ತ ಹಾಗೂ ಅಮೂರ್ತಗಳಿಗೆ ಸಂಪ್ರದಾಯ ಮತ್ತು ಕಲೆಗಳು ರೂಪಕಗಳಾಗಿವೆ. ಶಬ್ದಗಳ ಮೂಲಕ ಅವುಗಳನ್ನು ಪ್ರತಿಬಿಂಬಿಸುವಲ್ಲಿ ಕೃತಿ ಪ್ರಾಯೋಗಿಕ ನೆಲೆಯನ್ನು ಒದಗಿಸಿದೆ. ಜಾನಪದ ಕ್ಷೇತ್ರಕ್ಕೆ ಮಹತ್ವದ ಆಕರ ಒದಗಿಸುವ ಈ ಗ್ರಂಥವನ್ನು ಸಂಪಾದಿಸಿದ ಡಾ. ರಾಘವನ್ ಪಯ್ಯನಾಡ್ ಹಾಗೂ ಈ ಕೃತಿಯ ಅನುವಾದಕರಾದ ಡಾ.ಕೆ.ಎಂ.ರಾಘವ ನಂಬಿಯಾರ್ ಅವರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.

■ ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ISBN 978-93-83149-34-6
9 789383 149346 >

₹ : ೩೦೦/-

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ